ಲಿಂಗ ಸಮಾನತೆ ಮತ್ತು ರಾಜಕೀಯ ಸಹಭಾಗಿತ್ವ: ಸ್ಥಳೀಯ ಸಂಸ್ಥೆಗಳ ಅಧ್ಯಯನ

ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧ

ನಯನ
ಸಂಶೋಧನಾ ವಿದ್ಯಾರ್ಥಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬.

ಡಾ. ಎಂ. ಚಂದ್ರ ಪೂಜಾರಿ
ಮಾರ್ಗದರ್ಶಕರು
ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ - ೫೮೩ ೨೭೬
೨೦೧೮

ಲಿಂಗ ಸಮಾನತೆ ಮತ್ತು ರಾಜಕೀಯ ಸಹಭಾಗಿತ್ವ: ಸ್ಥಳೀಯ ಸಂಸ್ಥೆಗಳ ಅಧ್ಯಯನ

ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧ

ನಯನ
ಸಂಶೋಧನಾ ವಿದ್ಯಾರ್ಥಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ – ೫೮೩ ೨೭೬.

ಡಾ. ಎಂ. ಚಂದ್ರ ಪೂಜಾರಿ
ಮಾರ್ಗದರ್ಶಕರು
ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ – ೫೮೩ ೨೭೬

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ – ೫೮೩ ೨೭೬
೨೦೧೮

ಸಂಶೋಧಕರ ಘೋಷಣಾ ಪತ್ರ

"ಲಿಂಗ ಸಮಾನತೆ ಮತ್ತು ರಾಜಕೀಯ ಸಹಭಾಗಿತ್ವ: ಸ್ಥಳೀಯ ಸಂಸ್ಥೆಗಳ ಅಧ್ಯಯನ" ಎಂಬ ರಾಜ್ಯಶಾಸ್ತ್ರ ವಿಷಯದ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ. ಚಂದ್ರ ಪೂಜಾರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೩೮-೦೫-೨೦18

ಸ್ಥಳ : ವಿದ್ಯಾರಣ್ಯ

(ನಯನ)
ಸಂಶೋಧನಾ ವಿದ್ಯಾರ್ಥಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ – ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ನಯನ ಇವರು ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ "ಲಿಂಗ ಸಮಾನತೆ ಮತ್ತು ರಾಜಕೀಯ ಸಹಭಾಗಿತ್ವ: ಸ್ಥಳೀಯ ಸಂಸ್ಥೆಗಳ ಅಧ್ಯಯನ" ಎಂಬ ವಿಷಯದ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ಎಂ. ಚಂದ್ರ ಪೂಜಾರಿ)
ಮಾರ್ಗದರ್ಶಕರು ಹಾಗೂ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ – ೫೮೩ ೨೭೬.

ದಿನಾಂಕ: 28-04-2018
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಪ್ರಸ್ತಾವನೆ

ಪ್ರಸ್ತಾವನೆ

ಪೀಠಿಕೆ

ಸಂವಿಧಾನದ 73 ಮತ್ತು 74ನೇ ತಿದ್ದುಪಡಿ ನಂತರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಸಬಲೀಕರಣವನ್ನು ಸಾಧಿಸುವುದಕ್ಕೋಸ್ಕರ ಇಟ್ಟ ಪ್ರಮುಖ ಹೆಜ್ಜೆಗಳು, ಅವುಗಳ ಸಾಧನೆ, ವೈಫಲ್ಯ ಹಾಗೂ ಯಶಸ್ಸಿನ ಮಟ್ಟವನ್ನು ಅಧ್ಯಯನ ಮಾಡುವುದು ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿರುತ್ತದೆ. ಈ ಅಧ್ಯಯನವನ್ನು ಉಡುಪಿ ಜಿಲ್ಲೆಯಲ್ಲಿ ಕೈಗೊಳ್ಳಲಾಗಿದೆ. ಕರ್ನಾಟಕದ ಒಟ್ಟು ಮೂವತ್ತು ಜಿಲ್ಲೆಗಳಲ್ಲಿ 1997ರಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜಿಸಿ ಉಡುಪಿ ಜಿಲ್ಲೆಯನ್ನು ಸ್ಥಾಪಿಸಲಾಯಿತು[1]. ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಸಮಾಜೋ–ಆರ್ಥಿಕ ಚಟುವಟಿಕೆಗಳಲ್ಲಿ ಹಾಗೂ ಮಾನವ ಅಭಿವೃದ್ಧಿ ವರದಿಗಳ ಪ್ರಕಾರ ಉಡುಪಿ ಜಿಲ್ಲೆ ಒಂದು ಮುಂದುವರಿದ ಜಿಲ್ಲೆಯೆಂದು ಪರಿಗಣಿಸಲ್ಪಟ್ಟಿರುತ್ತದೆ[2]. ಈ ನಿಟ್ಟಿನಲ್ಲಿ ರಾಷ್ಟ್ರದ ಇತರ ಪ್ರದೇಶಗಳು ಹಾಗೂ ಕರ್ನಾಟಕದ ಜಿಲ್ಲೆಗಳನ್ನು ಹೋಲಿಸಿದಾಗ ಉಡುಪಿ ಜಿಲ್ಲೆಯ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುವುದನ್ನು ಗಮನಿಸಬಹುದು[3]. ಈ ಚೌಕಟ್ಟಿನಲ್ಲಿ ಸುಶಿಕ್ಷಿತ ಜಿಲ್ಲೆಯೆಂದು ಪರಿಗಣಿಸಲ್ಪಟ್ಟಿರುವ ಉಡುಪಿಯ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಸಶಕ್ತೀಕರಣದ ಉಪಕ್ರಮಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲ್ಪಟ್ಟಿವೆಯೇ? ರಾಜ್ಯ ತೆಗೆದುಕೊಂಡ ಕ್ರಮಗಳು ಮಹಿಳೆಯರನ್ನು ಆಕರ್ಷಿಸಲು ಸಾಕಷ್ಟು ಪರಿಣಾಮಕಾರಿಯಾಗಿವೆಯೇ? ಮಹಿಳೆಯರ ರಾಜಕೀಯ ಸಹಭಾಗಿತ್ವಕ್ಕೆ ಇರುವ ಅಡೆತಡೆಗಳು ಯಾವುವು? ಎಂದು ಪರೀಕ್ಷಿಸುವುದು ಪ್ರಸ್ತುತ ಅಧ್ಯಯನದ ಪ್ರಮುಖ ಆಶಯವಾಗಿರುತ್ತದೆ. ಮುಂದಿನ ಭಾಗದಲ್ಲಿ ಅಧ್ಯಯನದ ಪ್ರಸ್ತುತತೆ, ಸಮಸ್ಯೀಕರಣ, ಉದ್ದೇಶಗಳು, ವಿಧಾನ ಹಾಗೂ ಅಧ್ಯಯನದ ಇತಿಮಿತಿಗಳ ಬಗೆಗಿನ ವಿವರಗಳನ್ನು ನೀಡಿದ್ದೇನೆ.

ರಾಜಕೀಯ ಸಹಭಾಗಿತ್ವ

1991ರ ಜನಗಣತಿಯು 'ಉಡುಪಿ ಜಿಲ್ಲೆಯಲ್ಲಿ 4,86,409 ಪುರುಷರು ಮತ್ತು 5,51,690 ಮಹಿಳೆಯರಿದ್ದಾರೆಂದು[4]' ಸೂಚಿಸಿದರೆ, 2001ರ ಜನಗಣತಿಯಲ್ಲಿ ಪುರುಷರ ಸಂಖ್ಯೆ 5,22,231ಕ್ಕೆ ಏರಿಕೆಯಾಗಿರುವುದು ಹಾಗೂ ಮಹಿಳೆಯರ ಸಂಖ್ಯೆಯು 5,62,131ಕ್ಕೆ ಹೆಚ್ಚಳವಾಗಿರುವುದನ್ನು ತಿಳಿಸುತ್ತದೆ[5]. 2011ರ ಜನಗಣತಿಯು ಪುರುಷರ ಸಂಖ್ಯೆ 5,62,131 ಮತ್ತು ಮಹಿಳೆಯರ ಸಂಖ್ಯೆ 6,15,230ಕ್ಕೆ ಏರಿರುವುದನ್ನು ತಿಳಿಸುತ್ತದೆ[6]. ಲಿಂಗಾನುಪಾತದಲ್ಲಿ ಮಹಿಳೆಯರ ಪ್ರಮಾಣವನ್ನು ರಾಜ್ಯ ಮಟ್ಟಕ್ಕೆ ಹೋಲಿಸಿದಾಗ ಸ್ತ್ರೀ ಪುರುಷರ ಅನುಪಾತ 1000:955 ಇದ್ದರೆ, ಉಡುಪಿ ಜಿಲ್ಲಾ 2011ರ ಜನಗಣತಿ

ಪ್ರಕಾರ ಸ್ತ್ರೀ ಪುರುಷರ ಅನುಪಾತ 1000:1094 ಇರುವುದು ಮಹಿಳೆಯರ ಸಂಖ್ಯೆಯಲ್ಲಿ ಹೆಚ್ಚಾಗಿರುವುದನ್ನು ತಿಳಿಸುತ್ತದೆ[7]. ಅಧ್ಯಯನ ಸಂದರ್ಭದಲ್ಲಿ ಉಡುಪಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳ ಅಂಕಿಅಂಶಗಳನ್ನು ಗಮನಿಸಿದಾಗ ಗ್ರಾಮ ಪಂಚಾಯತ್‌ನಲ್ಲಿ ಪುರುಷ ಪ್ರತಿನಿಧಿಗಳು 1332 (55.55%) ಹಾಗೂ ಮಹಿಳಾ ಪ್ರತಿನಿಧಿಗಳು 1066 (44.45%) ಆಯ್ಕೆಯಾಗಿರುತ್ತಾರೆ. 2015ರ ಚುನಾವಣೆಯ ಅಂಕಿಅಂಶಗಳನ್ನು ಗಮನಿಸಿದಾಗ ಗ್ರಾಮ ಪಂಚಾಯತ್‌ನ ಪುರುಷ ಪ್ರತಿನಿಧಿಗಳು 1186 (47.88%) ಹಾಗೂ ಮಹಿಳಾ ಪ್ರತಿನಿಧಿಗಳು 1291 (52.12%), ತಾಲೂಕು ಪಂಚಾಯತ್‌ನ ಪುರುಷ ಪ್ರತಿನಿಧಿಗಳು 45 (46.88%) ಹಾಗೂ ಮಹಿಳಾ ಪ್ರತಿನಿಧಿಗಳು 51 (53.12%) ಹಾಗೂ ಜಿಲ್ಲಾ ಪಂಚಾಯತ್‌ನ ಪುರುಷ ಪ್ರತಿನಿಧಿಗಳು 12 (48%) ಹಾಗೂ 13 (52%) ಮಹಿಳಾ ಪ್ರತಿನಿಧಿಗಳು ಚುನಾಯಿತರಾಗಿರುತ್ತಾರೆ[8]. ರಾಜ್ಯದ ಒಟ್ಟು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಗೆ ತುಲನಾತ್ಮಕವಾಗಿ ಹೋಲಿಕೆ ಮಾಡಿದಾಗ ಉಡುಪಿ ಜಿಲ್ಲೆಯಲ್ಲಿ ಮಹಿಳೆಯರು ಜನಪ್ರತಿನಿಧಿಗಳಾಗಿ ಹೆಚ್ಚು ಚುನಾಯಿಸಲ್ಪಟ್ಟಿರುತ್ತಾರೆ ಎಂಬ ಅಂಶ ಅರಿವಿಗೆ ಬರುತ್ತದೆ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿ ಅವಕಾಶವಿದ್ದರೂ ಉಡುಪಿ ಜಿಲ್ಲೆಯಲ್ಲಿ ಇದಕ್ಕಿಂತ ಹೆಚ್ಚಾಗಿ (44.45%) ಆಯ್ಕೆಯಾಗಿರುವುದು ಕಂಡುಬರುತ್ತದೆ. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಜನರ ಪ್ರಮಾಣವು 12%ಕ್ಕಿಂತ ಕಡಿಮೆಯಿದ್ದರೂ ಗ್ರಾಮ ಪಂಚಾಯತ್‌ಗಳಲ್ಲಿ ಅವರ ಪ್ರಮಾಣವು ಮೂರು ತಾಲೂಕುಗಳಲ್ಲಿ ಪ್ರತಿಶತ 14ರಿಂದ 17ರವರೆಗಿದೆ[9]. ಅಧ್ಯಯನದಲ್ಲಿ ವಿಶೇಷವಾಗಿ ಕಂಡುಕೊಂಡ ಅಂಶವೆಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪ್ರತಿನಿಧಿಗಳಲ್ಲಿ ಮಹಿಳೆಯರ ಸಂಖ್ಯೆ ಪುರುಷರ ಸಂಖ್ಯೆಗಿಂತ ಹೆಚ್ಚಾಗಿರುತ್ತದೆ. ಪುರುಷರ ಪ್ರತಿನಿಧಿತ್ವ 2.7%ರಷ್ಟಿದ್ದರೆ, ಮಹಿಳೆಯರು ಜಿಲ್ಲೆಯಲ್ಲಿ ಒಟ್ಟಾಗಿ 12%ರಷ್ಟಿದ್ದಾರೆ. ಹಿಂದುಳಿದ ವರ್ಗ ಮತ್ತು ಜಾತಿಗೆ ಸೇರಿದ 51% ಮಹಿಳಾ ಪ್ರತಿನಿಧಿಗಳಿದ್ದಾರೆ[10]. ಇದರಿಂದಾಗಿ ಸಂವಿಧಾನಾತ್ಮಕ ಉಪಕ್ರಮಗಳಿಂದ ಮಹಿಳೆಯರ ಪ್ರತಿನಿಧಿತ್ವಕ್ಕೆ ನೀಡಿದ ಅವಕಾಶವು ಪರಿಣಾಮಕಾರಿಯಾಗಿ ಉಡುಪಿ ಜಿಲ್ಲೆಯಲ್ಲಿ ಜಾರಿಯಾಗಿರುತ್ತದೆ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯು ಸಂಖ್ಯಾತ್ಮಕವಾಗಿ ಪುರುಷ ಪ್ರತಿನಿಧಿಗಳಿಗಿಂತ ಏರಿಕೆಯಾಗಿದ್ದರೂ, ಧನಾತ್ಮಕ ಬದಲಾವಣೆಗಳಾಗಿರುವುದು ಕಂಡುಬಂದಿರುವುದಿಲ್ಲ.

ಉಡುಪಿ ಜಿಲ್ಲೆಗೆ ಸಂಬಂಧಪಟ್ಟಂತೆ 1991 ಮತ್ತು 2011ರ ಜನಗಣತಿಯ ವರದಿಯನ್ನು ಅವಲೋಕಿಸಿದಾಗ ಪುರುಷರಿಗಿಂತ ಮಹಿಳೆಯರ ಸಂಖ್ಯೆಯೇ ಹೆಚ್ಚಾಗಿರುವುದು ಹಾಗೂ ಹೆಚ್ಚಿನ ಕ್ಷೇತ್ರಗಳಲ್ಲಿ ಮಹಿಳೆಯರೇ ಉನ್ನತ ಸಾಧನೆಯನ್ನು ಮಾಡಿರುವುದು ಕಂಡುಬಂದಿರುತ್ತದೆ[11]. 1997ರಲ್ಲಿ

ಅಸ್ತಿತ್ವಕ್ಕೆ ಬಂದ ಉಡುಪಿ ಜಿಲ್ಲೆಯು ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದಾಗ ಸೀಮಿತವಾದ ಭೂಪ್ರದೇಶ ಮತ್ತು ಜನಸಂಖ್ಯೆಯನ್ನು ಒಳಗೊಂಡ ಚಿಕ್ಕ ಜಿಲ್ಲೆಯಾಗಿದ್ದು ಮಹಿಳಾ ಸಾಕ್ಷರತೆ ಇತರ ಜಿಲ್ಲೆಗಳಿಗಿಂತ ಹೆಚ್ಚಾಗಿರುತ್ತದೆ[12], ಸಾಮಾಜಿಕವಾಗಿ ಉಡುಪಿ ಜಿಲ್ಲೆಯಲ್ಲಿ ಮೊಗವೀರ, ಬಿಲ್ಲವ, ಬಂಟ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕೌಟುಂಬಿಕ ವ್ಯವಸ್ಥೆಯಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಇದ್ದು, ಹಿರಿಯ ಮಹಿಳಾ ಸದಸ್ಯೆಯೇ ಕುಟುಂಬದ ಯಜಮಾನಿಕೆಯನ್ನು ನಿರ್ವಹಿಸುತ್ತಿದ್ದಾರೆ. ಈ ರೀತಿ ಉಡುಪಿ ಜಿಲ್ಲೆಯಲ್ಲಿ ಮಹಿಳೆಯರು ಸಾಮಾಜಿಕವಾಗಿ ಉನ್ನತ ಸ್ಥಾನಮಾನವನ್ನು ಹೊಂದಿರುವುದು ಅತ್ಯಂತ ಪ್ರಮುಖ ಅಂಶವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆಗೆ ಸಂಬಂಧಪಟ್ಟಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುತ್ತಿರುವುದರಿಂದ ಈ ಅಂಶವನ್ನು ಪ್ರಧಾನವಾಗಿರಿಸಿ ಅಧ್ಯಯನದ ಉದ್ದೇಶದ ಆಶಯಗಳಿಗೆ ಅನುಗುಣವಾಗಿ ಮಹಿಳೆಯರ ರಾಜಕೀಯ ಸಹಭಾಗಿತ್ವವು ಅವರ ಸಬಲೀಕರಣಕ್ಕೆ ಕಾರಣವಾಗಿದೆಯೇ? ಎಂಬ ಜಿಜ್ಞಾಸೆಯನ್ನು ಅಧ್ಯಯನದಲ್ಲಿ ಪ್ರಮುಖವಾಗಿ ಚರ್ಚಿಸಲಾಗಿರುತ್ತದೆ.

ಲಿಂಗ ಸಮಾನತೆ ಮತ್ತು ರಾಜಕೀಯ ಸಹಭಾಗಿತ್ವ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯಗಳ ಬಗ್ಗೆ ಜಾಗತಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಅಧ್ಯಯನಗಳು ನಡೆದಿರುತ್ತದೆ[13]. ನೂತನ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂದು ಸುಮಾರು ಎರಡು ದಶಕಗಳ ಹತ್ತಿರವಾದ ಉಡುಪಿ ಜಿಲ್ಲೆ ರಾಜ್ಯದ ಮತ್ತು ರಾಷ್ಟ್ರದ ಅಭಿವೃದ್ಧಿಗೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ್ದರೂ, ಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟಂತೆ ಉಡುಪಿ ಜಿಲ್ಲೆಯಲ್ಲಿ ವ್ಯವಸ್ಥಿತ ಅಧ್ಯಯನಗಳು ನಡೆಸಲ್ಪಡದಿರುವುದರಿಂದ ಸ್ಥಳೀಯ ಸಂಸ್ಥೆಗಳಲ್ಲಿ ಲಿಂಗ ಸಮಾನತೆ, ರಾಜಕೀಯ ಸಹಭಾಗಿತ್ವ, ಮಹಿಳಾ ಸಬಲೀಕರಣ ಹಾಗೂ ಅದಕ್ಕಿರುವ ಅಡೆ–ತಡೆಗಳ ಬಗ್ಗೆ ಅಧ್ಯಯನ ಮಾಡುವುದು ಅತ್ಯಂತ ಅವಶ್ಯವಾಗಿರುತ್ತದೆ. ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದ ಮೂಲಕ ಕಂಡುಕೊಂಡ ಫಲಿತಗಳನ್ನು ಮತ್ತು ಶಿಫಾರಸ್ಸುಗಳನ್ನು ಪರಿಗಣಿಸಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಿ ಮಹಿಳಾಪರ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವುದಕ್ಕೋಸ್ಕರ ಶಿಫಾರಸ್ಸುಗಳನ್ನು ನೀಡುವುದು ಅತ್ಯಂತ ಮಹತ್ವದ್ದೆನಿಸುತ್ತದೆ. ಉಡುಪಿ ಜಿಲ್ಲೆಯಲ್ಲಿ ನಡೆದಂತಹ ಈ ಅಧ್ಯಯನವು ಮಹಿಳಾ ಸಮಾನತೆ ಮತ್ತು ಸಬಲೀಕರಣದ ಸಾಧ್ಯತೆಯ ಬಗ್ಗೆ ವಿಮರ್ಶಾತ್ಮಕವಾಗಿ ವಿಶ್ಲೇಷಿಸಿರುವುದರಿಂದ ಮುಂದೆ ಇಂತಹ ಅಧ್ಯಯನ ನಡೆಸುವ ಸಂಶೋಧಕರಿಗೆ ತಾತ್ವಿಕ ನೆಲೆಗಟ್ಟು ಹಾಗೂ ಮಾರ್ಗದರ್ಶನ ನೀಡುವಂತಹ ಆಕರ ಗ್ರಂಥವಾಗಿ ಪ್ರಸ್ತುತ ಅಧ್ಯಯನವು ಅತ್ಯಂತ ಸಹಕಾರಿಯಾಗುತ್ತದೆ.

ಪ್ರಸ್ತುತ ಅಧ್ಯಯನವು ಕ್ಷೇತ್ರಕಾರ್ಯದಿಂದ ಸಂಗ್ರಹಿಸಲ್ಪಟ್ಟ ಮಾಹಿತಿಗನುಗುಣವಾಗಿ ನಡೆಸಲ್ಪಟ್ಟಿರುತ್ತದೆ. ಅನುಷಂಗಿಕ ಮಾಹಿತಿಗಳನ್ನು, ಸರ್ಕಾರದ ನೀತಿ ನಿಯಮಗಳನ್ನು, ಪ್ರಾಜ್ಞರ ಅಭಿಪ್ರಾಯಗಳನ್ನು, ವಿಷಯಕ್ಕೆ ಸಂಬಂಧಪಟ್ಟಂತೆ ಹಿಂದೆ ನಡೆಸಲ್ಪಟ್ಟ ಸಂಶೋಧನೆಗಳನ್ನು ಪ್ರಸ್ತುತ ಅಧ್ಯಯನಕ್ಕೆ ಒಂದು ಸೈದ್ಧಾಂತಿಕ ಮತ್ತು ತಾತ್ವಿಕ ನೆಲೆಗಟ್ಟನ್ನು ರಚಿಸುವುದಕ್ಕೋಸ್ಕರ ಬಳಸಿಕೊಳ್ಳಲಾಗಿರುತ್ತದೆ. ಉಡುಪಿ ಜಿಲ್ಲೆಯ ಪಂಚಾಯತ್ ರಾಜ್ ವ್ಯವಸ್ಥೆಯ ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳ ಮಹಿಳಾ ಮತ್ತು ಪುರುಷ ಪ್ರತಿನಿಧಿಗಳನ್ನು ಅಧ್ಯಯನದ ಉದ್ದೇಶಗಳಿಗನುಗುಣವಾಗಿ ರಚಿಸಲ್ಪಟ್ಟ ಪ್ರಶ್ನಾವಳಿ, ಗುಂಪು ಚರ್ಚೆ, ಪರಿಶೀಲನೆ, ಅವಲೋಕನಾ ವಿಧಾನಗಳನ್ನು ಬಳಸುವುದರ ಮೂಲಕ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿರುತ್ತದೆ. ಈ ರೀತಿಯಲ್ಲಿ ಸಂಗ್ರಹಿಸಿದ ಮಾಹಿತಿಗಳನ್ನು ಏಕಾಂಶ, ದ್ವಿಅಂಶ ಮತ್ತು ತುಲನಾತ್ಮಕ ವಿಧಾನಗಳಿಂದ ವಿಶ್ಲೇಷಿಸಿ ಫಲಿತಗಳನ್ನು ಕಂಡುಕೊಳ್ಳುವುದಕ್ಕೆ ಪ್ರಯತ್ನಿಸಲಾಗಿರುತ್ತದೆ.

ಸಮಸ್ಯೀಕರಣ

ಪ್ರಸ್ತುತ ಕ್ಷೇತ್ರದಲ್ಲಿ ಈಗಾಗಲೇ ನಡೆದಿರುವ ಅಧ್ಯಯನಗಳು ಈಗಾಗಲೇ ಸ್ಥಾಪಿಸಲ್ಪಟ್ಟ ಜ್ಞಾನದ ಬಗ್ಗೆ ಬೆಳಕು ಚೆಲ್ಲಿ, ಆದ ಕಾರ್ಯಗಳು ಪುನರಾವರ್ತನೆಯಾಗದಂತೆ ತಡೆಯುತ್ತದೆ ಹಾಗೂ ಅಧ್ಯಯನವು ವ್ಯವಸ್ಥಿತವಾಗಿ ನಡೆಯುವುದಕ್ಕೆ ಮಾರ್ಗದರ್ಶನ ನೀಡುತ್ತದೆ. ಸ್ಥಳೀಯ ಸಂಸ್ಥೆಗಳಲ್ಲಿ ಲಿಂಗ ಸಮಾನತೆ ಮತ್ತು ರಾಜಕೀಯ ಸಹಭಾಗಿತ್ವದ ಬಗೆಗೆ ಸಂಪೂರ್ಣವಾದ ಮಾಹಿತಿಯನ್ನು ಪಡೆಯಲು ಸಾಹಿತ್ಯ ಪರಾಮರ್ಶನದ ಅಗತ್ಯವಿರುತ್ತದೆ. ಇದರಿಂದಾಗಿ ಅಧ್ಯಯನದ ಸಮಸ್ಯೆಗಳು ಮತ್ತು ಉದ್ದೇಶಗಳು ಸ್ಪಷ್ಟವಾಗಿ ರೂಪಿತವಾಗುವುದಕ್ಕೆ ಸಾಧ್ಯವಾಗುತ್ತದೆ.

ಮಹಿಳೆಯು ಪುರುಷನಿಗಿಂತ ಕೆಳಸ್ತರದಲ್ಲಿದ್ದಾಳೆ ಎಂಬುದಾಗಿ ಪ್ರಾಚೀನ ಗ್ರೀಕ್‌ನ ರಾಜಕೀಯ ಚಿಂತಕನಾದ ಪ್ಲೇಟೋ ತನ್ನ "ರಿಪಬ್ಲಿಕ್" ಗ್ರಂಥದಲ್ಲಿ 'ಆದರ್ಶ ರಾಜ್ಯ'ದ ಪರಿಕಲ್ಪನೆಯಲ್ಲಿ ಆಸ್ತಿ ಮತ್ತು ಪತ್ನಿಯರ ಸಮತಾವಾದ ಹಾಗೂ ಆಡಳಿತದ ಕುರಿತು ಚರ್ಚಿಸುತ್ತಾ, 'ಪುರುಷರಿಗಿರುವಷ್ಟೇ ಸ್ವಾತಂತ್ರ್ಯ, ಹಕ್ಕು ಮತ್ತು ಶಿಕ್ಷಣದ ಅವಕಾಶ ಮಹಿಳೆಯರಿಗೂ ಇದೆ'[14] ಎಂದಿದ್ದಾರೆ. ಆದರೆ, ಅರಿಸ್ಟಾಟಲ್ ತಮ್ಮ "ಪಾಲಿಟಿಕ್ಸ್" ಗ್ರಂಥದಲ್ಲಿ ಪೌರತ್ವದ ಸಿದ್ಧಾಂತ, ರಾಷ್ಟ್ರ ಮತ್ತು ಕುಟುಂಬದ ಕುರಿತು ವಿಮರ್ಶಿಸುತ್ತಾ 'ಮಹಿಳೆಯರಿಗೆ ಸರಿಯಾಗಿ ವಿವೇಚಿಸುವ ಶಕ್ತಿ ಇಲ್ಲದಿರುವುದರಿಂದ ಅವರು ರಾಷ್ಟ್ರದಲ್ಲಿ ಪೌರತ್ವವನ್ನೇ ಪಡೆಯಲು ಅನರ್ಹರು'[15] ಎಂದು ಅಭಿಪ್ರಾಯಪಟ್ಟಿರುತ್ತಾರೆ. ಮಹಿಳೆ ಅಬಲೆ ಎಂಬ ಅಭಿಪ್ರಾಯವನ್ನು ಹೊತ್ತ ನೀತಿ ನಿಯಮಗಳು ವೇದಗಳ ಕಾಲದಿಂದಲೂ ನಮ್ಮಲ್ಲಿ ಆಚರಣೆಯಲ್ಲಿವೆ. ಕೌಟಿಲ್ಯ ತನ್ನ

'ಅರ್ಥಶಾಸ್ತ್ರ' ಗ್ರಂಥದಲ್ಲಿ ಮಹಿಳೆಯರನ್ನು ರಾಜಕೀಯ ಉಪಕರಣಗಳನ್ನಾಗಿ ಬಳಸಿಕೊಳ್ಳುತ್ತಾರೆ[16]. ಸಮಾಜದಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ವಿವರಿಸುತ್ತಾ ಸಾಂಪ್ರದಾಯಿಕ ಚಿಂತಕರು ಮಹಿಳೆ ಯಾವತ್ತೂ ಸ್ವತಂತ್ರವಾಗಿ ಜೀವನವನ್ನು ನಡೆಸುವುದಕ್ಕೆ ಅನರ್ಹಳು. ಪುರುಷನ ಅಧೀನದಲ್ಲಿ ತನ್ನ ಜೀವನದ ಸಾರ್ಥಕತೆಯನ್ನು ಕಾಣಬೇಕೆಂಬ ವಾದವನ್ನು ಮಂಡಿಸಿರುವುದು ಅವರ ಸಮಕಾಲೀನ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ನೀಡಲಾದ ಪ್ರಾಧಾನ್ಯತೆಯನ್ನು ಸ್ಪಷ್ಟವಾಗಿ ತೋರ್ಪಡಿಸುತ್ತದೆ. ಇವರ ಚಿಂತನೆಗಳಿಂದ ಪ್ರಭಾವಿತರಾದ 16 ಮತ್ತು 17ನೇ ಶತಮಾನದ ಚಿಂತಕರು ಇದೇ ವಾದವನ್ನು ಮುಂದುವರಿಸಿಕೊಂಡು ಬಂದು ಪ್ರಭುತ್ವದ ಮೇಲೆ ಪ್ರಭಾವವನ್ನು ಬೀರಿರುವುದರಿಂದ ಮಹಿಳೆಯರ ಪರಿಸ್ಥಿತಿ 20ನೇ ಶತಮಾನದವರೆಗೆ ಯಾವುದೇ ರೀತಿಯ ಬದಲಾವಣೆಗಳಿಗೆ ಒಳಗಾಗದಿರುವುದು ಇತಿಹಾಸವನ್ನು ಅವಲೋಕಿಸಿದಾಗ ಸ್ಪಷ್ಟವಾಗಿ ಕಾಣಸಿಗುವ ಅಂಶವಾಗಿದೆ[17]. ಇದು ಸ್ತ್ರೀಯರು ಒಂದು ರೀತಿಯಲ್ಲಿ ಪರಾವಲಂಬನೆಯ ಹಾಗೂ ಪರಾಧೀನತೆಯ ಜೀವನವನ್ನು ನಡೆಸಬೇಕು ಹಾಗೂ ಅವಕಾಶಗಳನ್ನು, ಅಧಿಕಾರಗಳನ್ನು ಚಲಾಯಿಸಬಾರದು ಎನ್ನುವುದನ್ನು ಸೂಚ್ಯವಾಗಿ ತಿಳಿಸುತ್ತದೆ.

ಲಿಂಗಾಧಾರಿತ ಅಸಮಾನತೆ ಮತ್ತು ಭೇದಭಾವಗಳು ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲದಿದ್ದರೂ, ಅವುಗಳು ದೇಶದ ಅಭಿವೃದ್ದಿಯ ಮೇಲೆ ನಕಾರಾತ್ಮಕವಾದ ಪರಿಣಾಮಗಳನ್ನು ಬೀರಿರುತ್ತದೆ ಎಂದಿರುವ 'ಸ್ಟ್ರಕ್ಚರಲ್ ಫಂಕ್ಷನಲಿಸ್ಟ್' ಸಿದ್ಧಾಂತದ ಪ್ರತಿಪಾದಕರು ಸಮಾಜವೆಂಬುದು ಪರಸ್ಪರ ಸಹಕರಿಸುವ ಸಹವ್ಯವಸ್ಥೆ ಎಂದು ವಿವರಿಸಿದ್ದಾರೆ. ಉಪವ್ಯವಸ್ಥೆಗಳ ನಡುವೆ ಮತ್ತು ವ್ಯಕ್ತಿಗಳ ನಡುವಿನ ಸಂಬಂಧವನ್ನು ಉತ್ತಮ ಸಂಬಂಧಗಳನ್ನಾಗಿ ಕಲ್ಪಿಸಿಕೊಳ್ಳಲಾಗಿದೆ. ಉಪವ್ಯವಸ್ಥೆಗಳ ನಡುವೆ ಮತ್ತು ವ್ಯಕ್ತಿ ವ್ಯಕ್ತಿಗಳ ನಡುವೆ ಸಹಬಾಳ್ವೆಯ ಬದುಕಿಗೆ ಇದು ಒತ್ತು ನೀಡುತ್ತದೆ. ಹಿಂದಿನಿಂದ ಅಸ್ತಿತ್ವದಲ್ಲಿರುವ ಸಾಮಾಜಿಕ ವ್ಯವಸ್ಥೆ ವಿಶೇಷ ಏರುಪೇರಿಲ್ಲದೆ ಇಂದೂ ಮುಂದುವರಿಯುತ್ತಿದೆ. ಈ ಮಾದರಿಯಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಿನ ಅಸಮಾನತೆ ಅಸಮಾನ ಅಧಿಕಾರಕ್ಕೆ ಕಾರಣವಾಗುತ್ತದೆ. ಇದು ಲಿಂಗ ತಾರತಮ್ಯತೆಯನ್ನುಂಟು ಮಾಡುವ ಸಾಮಾಜಿಕ ಸಂಬಂಧ ಮತ್ತು ಆಚರಣೆಗಳಲ್ಲಿ, ಯಜಮಾನಿಕೆ ಮತ್ತು ಶೋಷಣೆಯ ಸಂಬಂಧಗಳಲ್ಲಿ ಪ್ರಕಟಗೊಳ್ಳುತ್ತಲೇ ಇದೆ ಎಂದಿದ್ದಾರೆ[18].

ಕಾರ್ಲ್ ಮಾರ್ಕ್ಸ್‌ನ ಪ್ರಕಾರ ಮಾನವನ ಇತಿಹಾಸದಲ್ಲಿ ಎರಡು ವರ್ಗಗಳಿವೆ. ಅವುಗಳೇ ಶ್ರೀಮಂತರು ಮತ್ತು ಬಡವರು ಅಥವಾ ಶೋಷಕ ಮತ್ತು ಶೋಷಿತ ವರ್ಗಗಳಾಗಿವೆ. ಈ ವರ್ಗಗಳು ಆರ್ಥಿಕ ಅಸಮಾನತೆಯಿಂದ ಹುಟ್ಟಿಕೊಂಡಿವೆ. ಈ ಎರಡು ವರ್ಗಗಳ ನಡುವೆ ನಿರಂತರ ವೈಷಮ್ಯವಿರುತ್ತದೆ. ಶ್ರೀಮಂತರು ಉತ್ಪಾದನಾ ಮೂಲಗಳ ಮಾಲಕರಾಗಿರುತ್ತಾರೆ. ತಮ್ಮ ಶ್ರಮಶಕ್ತಿಯನ್ನು

ಮಾರುವವರೇ ಬಡಕಾರ್ಮಿಕರು. ಈ ಮಾಲೀಕರು ರಾಜ್ಯದ ಆರ್ಥಿಕ ಜೀವನವನ್ನು ನಿಯಂತ್ರಿಸುವುದಲ್ಲದೆ ರಾಜಕೀಯ ಜೀವನವನ್ನು ನಿಯಂತ್ರಿಸುತ್ತಾರೆ. ಮಾರ್ಕ್ಸ್‌ನ ಪ್ರಕಾರ ಇವರೇ ಆಳುವ ವರ್ಗದವರು. ಯಾರು ಆರ್ಥಿಕತೆಯ ಅಧಿಕಾರವನ್ನು ಹೊಂದಿರುತ್ತಾರೋ ಅವರು ಸಮಾಜದಲ್ಲಿ ಸ್ಥಾನವನ್ನು ಪಡೆಯುತ್ತಾರೆ ಹಾಗೂ ಅವರೇ ರಾಜಕೀಯ ಅಧಿಕಾರವನ್ನು ವಶಪಡಿಸಿಕೊಳ್ಳುತ್ತಾರೆ. ಬಲಿಷ್ಠವಾದ ವರ್ಗ ತಮ್ಮ ಹಿತಾಸಕ್ತಿಯನ್ನು ಸಾಧಿಸುವುದಕ್ಕೆ ರಾಜಕೀಯವನ್ನು ದಾಳವಾಗಿ ಬಳಸುತ್ತಾರೆ ಮತ್ತು ಮಹಿಳೆಯರು ದುಡಿಯುವ ವರ್ಗವಾಗಿದ್ದು ನಿರಂತರ ಶೋಷಣೆಯನ್ನು ಅನುಭವಿಸುತ್ತಾರೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಸಮಾಜದಲ್ಲಿನ ಸಾಮಾನ್ಯ ವರ್ಗದ ಹುಟ್ಟು ಮತ್ತು ಬೆಳವಣಿಗೆಗಳು, ಬಂಡವಾಳಶಾಹಿ ವ್ಯವಸ್ಥೆ ತನ್ನ ಪ್ರಭುತ್ವವನ್ನು ಶೋಷಿತ ವರ್ಗದ ಮೇಲೆ ಹೇರುವಲ್ಲಿ ಯಾವ ರೀತಿಯಲ್ಲಿ ಯಶಸ್ವಿಯಾಗಿರುತ್ತದೆ ಎಂಬುದನ್ನು ಚಾರಿತ್ರಿಕ ದೃಷ್ಟಿಕೋನವನ್ನಿಟ್ಟುಕೊಂಡು ವೈಜ್ಞಾನಿಕವಾಗಿ ಸಮರ್ಥಿಸಿರುತ್ತಾರೆ[19].

ಎಂ. ಚಂದ್ರ ಪೂಜಾರಿಯವರ ಪ್ರಕಾರ, 'ಕೆಲವೊಂದು ಮೂಲ ಸೌಕರ್ಯಗಳನ್ನು ಪಡೆಯುವುದು ಮಾತ್ರ ಅಭಿವೃದ್ಧಿಯಲ್ಲ. ಅದು ಮನುಷ್ಯರಿಗೆ ಸಂಬಂಧಪಟ್ಟ ವಿಚಾರ. ಆದುದರಿಂದ ಇದು ಬದುಕಲು ಅನಿವಾರ್ಯವಾಗಿರುವ ಮೂಲಸೌಕರ್ಯಗಳ ಜೊತೆಗೆ ಮಾನ, ಸಮ್ಮಾನ, ಸ್ವಾತಂತ್ರ್ಯ, ಸಮಾನತೆ, ಸ್ವಾಯತ್ತತೆಯ ಪ್ರಶ್ನೆಗಳನ್ನೂ ಒಳಗೊಂಡಿದೆ. ಇವೆಲ್ಲವೂ ಸಮಾಜದ ಬಹುತೇಕ ಮಹಿಳೆಗೆ ಇಂದೂ ಗಗನಕುಸುಮಗಳು. ಯಾಕೆಂದರೆ, ನಮ್ಮಲ್ಲಿ ಜಾತಿ, ಭಾಷೆ, ಪ್ರದೇಶ, ಧರ್ಮಗಳ ಹೆಸರಲ್ಲಿ ನಡೆಯುವ ಗುರುತಿನ ರಾಜಕೀಯದ ಪಾತ್ರ ದೊಡ್ಡದಿದೆ. ಪ್ರತೀ ಜಾತಿ ಧರ್ಮದ ಗುರುತಿನಿಂದಲೂ ಆರ್ಥಿಕವಾಗಿ ಬಲಾಢ್ಯರಾಗಿರುವ ಪುರುಷ ಸದಸ್ಯರು ಗುರುತಿನ ರಾಜಕೀಯದಲ್ಲಿ ಅಧಿಕಾರ ಪಡೆದಿದ್ದಾರೆ. ಇಲ್ಲೆಲ್ಲಾ ಮಹಿಳೆಯರನ್ನು ನೋಡಲು ಸಾಧ್ಯವಾಗಿಲ್ಲ'[20] ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಶಮಿಮ್ ಅಲೀಮ್‌ರವರ ವಿಶ್ಲೇಷಣೆಯ ಪ್ರಕಾರ, ಮಹಿಳಾ ಸಶಕ್ತೀಕರಣದ ಹೋರಾಟದಿಂದ ಮಹಿಳಾ ಪರ ಚಿಂತನೆಯು ವೃದ್ಧಿಸಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳು, ಯೋಜನೆಗಳು ಅನುಷ್ಠಾನಗೊಂಡವು. ಸಂವಿಧಾನದ ಅನುಷ್ಠಾನದಿಂದ ಹಿಡಿದು ಸರಿಸುಮಾರು 1975ರವರೆಗೆ ಕೇಂದ್ರ, ರಾಜ್ಯ ಸರಕಾರಗಳು ಮಹಿಳೆಯರಿಗಾಗಿ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳ ಕೊಡುಗೆಗಳನ್ನು ನೀಡಿದವು. 1975ರ ನಂತರದಿಂದ ಸ್ತ್ರೀ ಸಂಬಂಧಿತ ವಿಷಯಗಳು ಪ್ರಸಿದ್ಧಿಗೆ ಬರತೊಡಗಿದವು. 1980ರ ಹೊತ್ತಿಗೆ ಈ ವಿಚಾರಗಳಲ್ಲಿ ಹೊಸ ತಿರುವು ಕಾಣಿಸಿಕೊಂಡಿತು. ಮುಖ್ಯವಾಗಿ, 'ಅಭಿವೃದ್ಧಿಯಲ್ಲಿ ಮಹಿಳೆ' ಎಂಬ ತಾತ್ವಿಕ ನಿಲುವಿನಿಂದ ಈ ವಿಚಾರಧಾರೆಯು ಕಲ್ಯಾಣ ಕಾರ್ಯಕ್ರಮಗಳ ಶೈಲಿಯ

ಪ್ರಾಮುಖ್ಯತೆಯಿಂದ ಭಿನ್ನವಾದ ಅಭಿವೃದ್ಧಿ ಎಂಬ ಶೈಲಿಗೆ ಪ್ರಾಶಸ್ತ್ಯ ಕೊಡಲಾರಂಭಿಸಿತು. 1990ರ ದಶಕದ ಹೊತ್ತಿಗೆ ಮಹಿಳೆ ಮತ್ತು ಮಹಿಳಾ ಪರ ಕಾರ್ಯಕ್ರಮಗಳು ಎನ್ನುವುದರ ಬದಲಿಗೆ 'ಜೆಂಡರ್' ಎಂಬ ಪದದ ಬಳಕೆ ವ್ಯಾಪಕವಾಗಿ ಗುರುತಿಸಲ್ಪಟ್ಟಿತು. ಜೊತೆಗೆ, ಸ್ತ್ರೀಯರ ಅಭಿವೃದ್ಧಿಗೆ ಕಲ್ಯಾಣ ಕಾರ್ಯಕ್ರಮಗಳು ಎಷ್ಟು ಮುಖ್ಯವೋ, ಅವರಿಗೆ ಆರ್ಥಿಕ ಸಬಲೀಕರಣದ ಜೊತೆಗೆ ರಾಜಕೀಯ ಸಬಲೀಕರಣವೂ ಸಹ ಅಷ್ಟೇ ಅಥವಾ ಅದಕ್ಕಿಂತ ಹೆಚ್ಚಾಗಿ ಮುಖ್ಯವೆಂದು ಒತ್ತಿ ಹೇಳಲಾಯಿತು[21]. ಇದಕ್ಕೆ ಪೂರಕವಾಗಿ 1993ರಲ್ಲಿ ಸಂವಿಧಾನದ 73ನೇ ತಿದ್ದುಪಡಿಯಾಗಿ, ಪಂಚಾಯತ್‌ರಾಜ್ ಸಂಸ್ಥೆಗಳ ಪ್ರಕ್ರಿಯೆಯು ಜಾರಿಗೆ ಬಂದಿತು.

ಸಮಾಜವು ತೀವ್ರವಾಗಿ ಬೆಳೆಯುತ್ತಿರುವ ಇಂದಿನ ದಿನಗಳಲ್ಲಿ ಲಿಂಗ ಸಮಾನತೆಯ ಪರಿಕಲ್ಪನೆಯು ಅತ್ಯಂತ ಅಗತ್ಯವು, ಉಪಯುಕ್ತವು ಆಗಿದೆ. ಮೆಹಬೂಬ್ ಹಕ್‌ರವರ ಪ್ರಕಾರ, 'ಸಮಾನತೆ ಮತ್ತು ಸಬಲೀಕರಣ ಪ್ರಕ್ರಿಯೆಗಳು ಮಾನವ ಸಂಪನ್ಮೂಲಗಳ ಅಭಿವೃದ್ಧಿಗೆ ಬಹುಮುಖ್ಯವಾದ ಅಂಶಗಳಾಗಿವೆ. ಆದರೆ, ಅವಕಾಶಗಳನ್ನು ಪಡೆಯಲು ಬೇಕಾದ ಸಮಾನತೆಯು ಸಾಂಪ್ರದಾಯಿಕ ಸಮಾಜದ ಪುನರ್‌ರಚನೆಯನ್ನು ಬಯಸುತ್ತದೆ. ಹಕ್ಕುಗಳಲ್ಲಿ ಸುಧಾರಣೆ, ರಾಜಕೀಯ ಚಟುವಟಿಕೆಗಳಲ್ಲಿ ಸಮಾನ ಅವಕಾಶಗಳು ಮುಂತಾದುವು ಇಲ್ಲಿ ಅಗತ್ಯ. ಇದರಿಂದ ಎಲ್ಲರೂ ತಮ್ಮ ತಮ್ಮ ಬಯಕೆಗಳಂತೆ ಆಯ್ಕೆಗಳನ್ನು ಮಾಡಿಕೊಳ್ಳಬಹುದು ಮತ್ತು ಆ ಮೂಲಕ ಅಭಿವೃದ್ಧಿಯ ಪ್ರಕ್ರಿಯೆಗೆ ಸ್ಪಂದಿಸಬಹುದು. ತಮ್ಮದೇ ಜೀವನದ ಬಗ್ಗೆ ಇತರರು ತೀರ್ಮಾನಗಳನ್ನು ತೆಗೆದುಕೊಳ್ಳದೇ ತಾವೇ ಆ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡುವ ಪ್ರಯತ್ನಗಳೇ ಲಿಂಗ ಸಮಾನತೆಯನ್ನು ಸಾಧಿಸುವುದಾಗಿದೆ'[22] ಎಂದು ಅಭಿಪ್ರಾಯಪಟ್ಟಿರುತ್ತಾರೆ.

ದೇವಕಿ ಜೈನ್ ತಮ್ಮ ಅಧ್ಯಯನದಲ್ಲಿ, 'ಲಿಂಗ ಸಮಾನತೆಯು ಸ್ತ್ರೀ, ಪುರುಷ ಇಬ್ಬರಿಗೂ ಸಮಾನ ಸ್ವಾತಂತ್ರ್ಯ, ಸ್ಥಾನಮಾನ, ಅವಕಾಶ–ಅಧಿಕಾರ ಮುಂತಾದುವುಗಳ ಹಂಚುವಿಕೆಯನ್ನು ಮೌಲ್ಯವೆಂದು ಒಪ್ಪಿಕೊಳ್ಳುತ್ತದೆ. ಇಂತಹ ಮೌಲ್ಯಗಳು ಕೇವಲ ಶಾಸನಾತ್ಮಕವಾಗಿ ಒದಗಿಸಲ್ಪಟ್ಟರಷ್ಟೇ ಸಾಲದು, ಅವು ನಮ್ಮ ಆಚಾರ ವಿಚಾರಗಳಲ್ಲಿ ಅಲ್ಲದೇ ಜೀವನಕ್ರಮದಲ್ಲಿ ಚಲಾವಣೆಗೆ ಬರಬೇಕೆನ್ನುವುದೇ ಸಮಾನತೆಯ ವಾದ. ಸಮಾನತೆ ಎಂದರೆ ಪ್ರತಿಯೊರ್ವ ಜೀವಿಗೂ ಸಮಾನ ಅವಕಾಶ ದೊರಕುವುದಾಗಿದೆ. ಆದರೆ ಪ್ರಸ್ತುತ ಸಮಾಜದಲ್ಲಿ ಇದು ಸಮಾನ ನೆಲೆಯಲ್ಲಿ ದೊರಕುವುದಿಲ್ಲ. ಹೆಣ್ಣು ಶಿಶುವನ್ನು ಹುಟ್ಟುವ ಮೊದಲೇ ಹಿಸುಕಿ ಹಾಕುವ ಮತ್ತು ಅನಂತರದ ಹಲವು ಸಂದರ್ಭಗಳಲ್ಲಿ ಶೋಷಿಸುವ ಹಲವು ಪದ್ಧತಿಗಳು ಜಾರಿಗೆ ಬಂದು ದೇಶಾದ್ಯಂತ ಲಿಂಗಾನುಪಾತದಲ್ಲಿ ಗಂಭೀರವಾದ

ಅಂತರ ನಿರ್ಮಾಣವಾಗಲು ಕಾರಣವಾಗಿದೆ. ಹಾಗೆಯೇ ಹುಟ್ಟಿದ ಬಳಿಕ ಶಿಕ್ಷಣ, ಆಹಾರ, ಆರೋಗ್ಯ, ಒಡೆತನ, ಉದ್ಯೋಗಗಳನ್ನು ಹೊಂದುವ ಆಯ್ಕೆಗಳು ಸ್ತ್ರೀ ಪುರುಷರಿಬ್ಬರಿಗೂ ಸಮಾನವಾಗಿ ದೊರೆತಾಗ ಲಿಂಗ ಸಮಾನತೆ ಸಾಧ್ಯವಾಗುತ್ತದೆ ಅಂದರೆ, ಅದು ನಾವು ರೂಪಿಸಿಕೊಳ್ಳಬೇಕಾದ ಪರಿಕಲ್ಪನೆಯಾಗಿದೆ. ಇದರಿಂದ ಲಿಂಗ ತಾರತಮ್ಯಗಳ ಕಾರಣಗಳಿಂದ ಮೂಲೆಗುಂಪಾದ ಮಹಿಳೆಯರ ಆಶೋತ್ತರಗಳು, ದುರ್ಬಲ ಮಹಿಳೆಯರ ಮತ್ತು ಅಪಮೌಲ್ಯಕ್ಕೆ ಒಳಗಾದ ಮಹಿಳೆಯರ ಪ್ರತಿಭೆಗಳು ವಿಕಾಸಗೊಳ್ಳಲು ಸಾಧ್ಯವಾಗುತ್ತದೆ. ಅಲ್ಲದೆ, ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ಸೇರಿಸುವ ಒಂದು ಪರಿಣಾಮಕಾರಿಯಾದ ಮಾರ್ಗವೆಂದರೆ ಲಿಂಗ ಸಮಾನತೆಯನ್ನು ಸಾಧಿಸುವುದಾಗಿದೆ'[23] ಎಂದು ಅಭಿಪ್ರಾಯಪಟ್ಟಿರುತ್ತಾರೆ.

ನಿವೇದಿತ ಮೆನನ್‌ರವರ ಪ್ರಕಾರ, 'ಸಮಾಜದಲ್ಲಿ ಮಹಿಳೆಯರ ಸ್ಥಿತಿಗತಿ ಅರಿಯಲು ಇರುವ ಪ್ರಮುಖ ಮಾಪಕ ಅವರುಗಳ ರಾಜಕೀಯ ಸಹಭಾಗಿತ್ವ, ರಾಜಕೀಯ ಸಹಭಾಗಿತ್ವ ಎಂದರೆ ರಾಜಕೀಯ ಕಾರ್ಯಚಟುವಟಿಕೆಗಳಲ್ಲಿ, ಪಕ್ಷಗಳಲ್ಲಿ ಹಾಗೂ ಮತದಾನವನ್ನೊಳಗೊಂಡಂತೆ ರಾಜಕೀಯ ಪ್ರಕ್ರಿಯೆಗಳಲ್ಲಿ ಕ್ರಿಯಾಶೀಲ ಭಾಗವಹಿಸುವಿಕೆ ಆಗಿರುತ್ತದೆ. ರಾಜಕೀಯ ಸಂಸ್ಥೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಎನ್ನುವುದು ಮಹಿಳೆಯರಿಗೆ ಸಮಾಜದಿಂದ ಕೊಡಲಾಗಿರುವ ಮತ್ತು ಅನುಭವಿಸುತ್ತಿರುವ ಸಮಾನತೆ ಹಾಗೂ ಸ್ವಾತಂತ್ರ್ಯದ ಪ್ರಮಾಣವನ್ನು, ಮಹಿಳೆಯರಿಗೆ ಸಮಾಜವು ಕೊಡುವ ಮೌಲ್ಯವನ್ನು ಸೂಚಿಸುತ್ತದೆ. ಹೆಚ್ಚಿನ ಸಮಾಜಗಳಲ್ಲಿ ಪುರುಷರು ರಾಜಕೀಯದ ಅವಕಾಶವನ್ನು ಏಕಸ್ವಾಮ್ಯ ಮಾಡಿಕೊಂಡಿರುತ್ತಾರೆ. ಎಲ್ಲಿಯವರೆಗೆ ಮಹಿಳೆಯು ಸೇರಿದಂತೆ ಸಮಾಜದ ನಿರ್ಲಕ್ಷಿತ ವರ್ಗಗಳು ರಾಜಕೀಯ ಅಧಿಕಾರವನ್ನು ಹೊಂದುವುದಕ್ಕೆ ಪ್ರವೇಶ ಪಡೆಯುವುದಿಲ್ಲವೋ ಅಲ್ಲಿಯವರೆಗೆ ನೈಜ ಪ್ರಜಾತಂತ್ರ ವ್ಯವಸ್ಥೆ ಅಸ್ತಿತ್ವಕ್ಕೆ ಬರುವುದಿಲ್ಲ. ರಾಜಕೀಯ ಸಹಭಾಗಿತ್ವ ಎಂದರೆ ಕೇವಲ ಮತ ಚಲಾಯಿಸುವ ಹಕ್ಕಲ್ಲ, ಆಡಳಿತದ ನೀತಿ ಹಾಗೂ ನಿರ್ಧಾರ ತೆಗೆದುಕೊಳ್ಳುವಿಕೆಯ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವನ್ನು ಅದು ಒಳಗೊಂಡಿರುತ್ತದೆ'[24] ಎಂಬುದನ್ನು ತಮ್ಮ ಅಧ್ಯಯನದಲ್ಲಿ ವಿಶ್ಲೇಷಿಸಿರುತ್ತಾರೆ.

ಸಾರ್ವಜನಿಕ ವಲಯದಲ್ಲಿ ಮೀಸಲಾತಿಗಳನ್ನು ನೀಡುವುದರ ಮೂಲಕ ಸಾರ್ವಜನಿಕ ವಲಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಅವರನ್ನು ಸಬಲೀಕರಿಸುತ್ತದೆ ಎಂಬ ಪರಿಕಲ್ಪನೆಯನ್ನು ಆಶಿಸಲಾಗಿದೆ. ಆದರೆ ಈ ಜಿಜ್ಞಾಸೆಯಿಂದ ಹುಟ್ಟಿಕೊಳ್ಳುವ ಪ್ರಶ್ನೆ ಎಂದರೆ ವ್ಯವಸ್ಥೆಯಲ್ಲಿನ ಮಹಿಳಾ ಮೀಸಲಾತಿಯು ಮಹಿಳೆಯರನ್ನು ಸಬಲೀಕರಣಗೊಳಿಸಿದೆಯೇ? ಅದು ಲಿಂಗ ಸಮಾನತೆಯನ್ನು

ತರಲು ಶಕ್ತವಾಗಿದೆಯೇ? 1995ರಲ್ಲಿ ಸುಶೀಲ್ ಕೌಶಿಕ್‌ರವರು ಮಹಿಳಾ ರಾಜಕೀಯ ಸಬಲೀಕರಣದ ಸಾಧ್ಯತೆಗಳ ಬಗೆಗಿನ ಕೆಲವು ಅಡೆತಡೆಗಳನ್ನು ವಿವರಿಸುತ್ತಾ ಅನಕ್ಷರತೆ, ಅನುಭವದ ಕೊರತೆ ಮತ್ತು ಆತ್ಮವಿಶ್ವಾಸದ ಕೊರತೆ ಪ್ರಮುಖವಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ[25]. ಅಲ್ಲದೇ, ಚಾರಿತ್ರ್ಯಹರಣ ಮತ್ತು ರಾಜಕೀಯ ಅಪರಾಧೀಕರಣದ ಭಯವು ಮಹಿಳೆಯರು ರಾಜಕೀಯ ಪ್ರವೇಶಿಸದಂತೆ ತಡೆದಿರುತ್ತವೆಯೇ? ಹೆಚ್ಚಿನ ಅಧ್ಯಯನಗಳು ಸೂಚಿಸುವ ಪ್ರಕಾರ ಜಾತಿ ಮತ್ತು ಲಿಂಗತ್ವ ಪೂರ್ವಾಗ್ರಹಗಳಿಂದ ಪ್ರಭಾವಿತವಾದ ಸಾಮಾಜಿಕ-ರಾಜಕೀಯ ಪರಿಸರಗಳಲ್ಲಿ ಮಹಿಳೆಯರನ್ನು ಅವಹೇಳನಕ್ಕೆ ಗುರಿಪಡಿಸಲಾಗುತ್ತಿದೆ. ಅವರ ಕಾಳಜಿಗಳನ್ನು ಕ್ಷುಲ್ಲಕ ಎಂದು ತಳ್ಳಿಹಾಕಲಾಗುತ್ತಿದೆ. ಆದರೆ, ಎಲ್ಲಿ ಮಹಿಳೆಯರಿಗೆ ಬಲವಾದ ಮಹಿಳಾ ಚಳುವಳಿಗಳ ಬೆಂಬಲ ದೊರಕಿದೆಯೋ ಅಂತಹ ಸ್ಥಳಗಳಲ್ಲಿ ಮಹಿಳೆಯರು ರಾಜಕೀಯದಲ್ಲಿ ಸಕ್ರಿಯರಾಗಿದ್ದಾರೆ ಎಂದು ತಮ್ಮ ಸಂಶೋಧನಾ ಗ್ರಂಥದಲ್ಲಿ ಅಭಿಪ್ರಾಯಪಟ್ಟಿರುತ್ತಾರೆ. ಈ ಚೌಕಟ್ಟಿನಲ್ಲಿ ಮಹಿಳಾ ಸಬಲೀಕರಣಕ್ಕೋಸ್ಕರ ರಾಷ್ಟ್ರ ಹಮ್ಮಿಕೊಂಡ ಕ್ರಮಗಳು ಎಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿರುತ್ತದೆ ಎಂಬ ಅಂಶಕ್ಕೆ ಪ್ರಸ್ತುತ ಅಧ್ಯಯನದಲ್ಲಿ ಪ್ರಾಮುಖ್ಯತೆಯನ್ನು ನೀಡಲಾಗಿರುತ್ತದೆ.

ಎಂ. ಚಂದ್ರ ಪೂಜಾರಿಯವರ ಪ್ರಕಾರ, 'ಸಮಾಜದ ಬಹುತೇಕರು ಸುಖ, ನೆಮ್ಮದಿಯ ಬದುಕನ್ನು ನಡೆಸಲು ಪೂರಕವಾಗುವ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಂಸ್ಥೆಗಳನ್ನು, ಸಂಬಂಧಗಳನ್ನು ಹಾಗೂ ಮೌಲ್ಯಗಳನ್ನು ರೂಪಿಸುವುದು ರಾಜಕೀಯದ ಜವಾಬ್ದಾರಿ. ವಾಸ್ತವದಲ್ಲಿ ರಾಜಕೀಯವು ಸಮಷ್ಠಿಯ ಏಳಿಗೆಯನ್ನು ಸಾಧಿಸುವ ರೂಪದಲ್ಲಿ ಇದೆಯೇ? ಇಲ್ಲವಾದರೆ ಯಾಕಿಲ್ಲ? ಸಮಾಜದ ಯಾವ ವರ್ಗದ ಹಿತಾಸಕ್ತಿಗಳನ್ನು ರಾಜಕೀಯ ಪೂರೈಸುತ್ತಿದೆ? ಸಮಾಜದ ಬಹುತೇಕರ ಆಶಯಗಳನ್ನು ಯಾಕೆ ರಾಜಕೀಯಕ್ಕೆ ಪೂರೈಸಲಾಗುತ್ತಿಲ್ಲ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸುತ್ತಾ ವರ್ತಮಾನದ ರಾಜಕೀಯ ವಿದ್ಯಮಾನಗಳು ರಾಜಕೀಯ ನಕಾರಾತ್ಮಕ ಗುಣಗಳನ್ನೇ ಹೆಚ್ಚು ಹೆಚ್ಚು ಬಿಂಬಿಸುತ್ತಿವೆ. ರಾಜಕೀಯ ಕ್ಷೇತ್ರ ಹದಗೆಟ್ಟಿದೆ. ಇದರಿಂದಾಗಿ ಕೆಟ್ಟ ಜನರು ಹೆಚ್ಚಾಗಿ ರಾಜಕೀಯ ಪ್ರವೇಶಿಸುತ್ತಿದ್ದಾರೆ. ಇಂದು ದುಡ್ಡಿದ್ದವರು ಮಾತ್ರ ರಾಜಕೀಯದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಈ ಬಗೆಯ ರಾಜಕೀಯದಿಂದ ಬಹುತೇಕರಿಗೆ ಅನುಕೂಲವಾಗುವ ಸಾಮಾಜಿಕ ಪರಿವರ್ತನೆ ಸಾಧ್ಯವಿಲ್ಲದ್ದಾಗಿದೆ. ಪ್ರತಿಯೊಬ್ಬರೂ ತಮ್ಮ ಮತ್ತು ತಾವು ಬದುಕುವ ಪರಿಸರದ ಬಗ್ಗೆ ಹೊಂದಿರುವ ದೃಷ್ಟಿಕೋನಗಳನ್ನು ಬದಲಾಯಿಸಿಕೊಳ್ಳುವುದು ವ್ಯಕ್ತಿ ಮತ್ತು ಸಾಮಾಜಿಕ ಪರಿವರ್ತನೆಗೆ ತುಂಬಾ ಅವಶ್ಯ. ಆದರೆ ಚಾಲ್ತಿಯಲ್ಲಿರುವ ರಾಜಕೀಯ ಪ್ರಕ್ರಿಯೆಯಲ್ಲಿ ಈ ಬಗೆಯ

ಸಾಮಾಜಿಕ ಪರಿವರ್ತನೆಗೆ ಮಹತ್ವ ಇಲ್ಲ. ಆದರೆ ವ್ಯವಸ್ಥೆ ಹಿಂದಿನದೇ ರೀತಿಯಲ್ಲಿ ಸಮಾಜದ ಮೇಲ್ವರ್ಗಗಳ ಆಸಕ್ತಿಗಳನ್ನು ಪೂರೈಸುತ್ತ ತಳ ಸಮುದಾಯಗಳ ಹಿತಾಸಕ್ತಿಗಳನ್ನು ಕಡೆಗಣಿಸುತ್ತಾ ಮುಂದುವರಿಯುವ ಸಾಧ್ಯತೆ ಇದೆ. ಅಲ್ಲದೆ ಕೆಳ ಮತ್ತು ಮಧ್ಯಮ ವರ್ಗದ ಆಧುನಿಕ ಜೀತ ಪದ್ಧತಿ ಎಲ್ಲಾ ಕ್ಷೇತ್ರಗಳಲ್ಲಿ ಕಾರಬಾರು ನಡೆಸುತ್ತಿರುವ ಊಳಿಗಮಾನ್ಯ ಮೌಲ್ಯಗಳು, ಹುಡುಕಿದರೂ ಸಿಗದ ಸಮಾನತೆ–ಸ್ವಾತಂತ್ರ್ಯಗಳು, ಸಾರ್ವಜನಿಕ ಬದುಕಿನಲ್ಲಿ ಎದ್ದು ಕಾಣುವ ಜವಾಬ್ದಾರಿ ಹಾಗೂ ಪಾರದರ್ಶಕತೆಯ ಕೊರತೆಗಳು ಮಧ್ಯಮ ವರ್ಗವನ್ನು ಬಡವರಷ್ಟೇ ಅಸಹಾಯಕರನ್ನಾಗಿಸಿವೆ. ಮಧ್ಯಮ ವರ್ಗ ರಾಜಕೀಯವನ್ನು ಗಂಭೀರವಾಗಿ ಪರಿಗಣಿಸಿ ಸಕ್ರಿಯವಾಗಿ ರಾಜಕೀಯದಲ್ಲಿ ಪಾಲುಗೊಂಡರೆ ರಾಜಕೀಯ ಬಡತನ ದೂರವಾಗಬಹುದು ಎಂದು ವಿಶ್ಲೇಷಿಸುತ್ತಾ ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ಜಾತಿ, ವರ್ಗ, ಅಂತಸ್ತು ಮತ್ತು ಕಟ್ಟುಪಾಡುಗಳು, ನಿರ್ಬಂಧಗಳನ್ನು ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆ ವಿಧಿಸುತ್ತದೆ'[26] ಎಂಬುದನ್ನು ತಮ್ಮ ಅಧ್ಯಯನದಲ್ಲಿ ವಿಶ್ಲೇಷಿಸಿರುತ್ತಾರೆ.

ಅಮರ್ತ್ಯಸೇನ್‌ರವರು ತಮ್ಮ "ಜೆಂಡರ್ ಆ್ಯಂಡ್ ಕೋ–ಆಪರೇಟಿವ್ ಕಾನ್‌ಫ್ಲಿಕ್ಟ್" ಎಂಬ ಲೇಖನದಲ್ಲಿ 'ಲಿಂಗ ಸಂಬಂಧಿ ಅಸಮಾನತೆಯು ಉಳಿದೆಲ್ಲ ಬಗೆಯ ಅಸಮಾನತೆಗಳಿಗಿಂತ ತುಂಬಾ ಸೂಕ್ಷ್ಮವೂ, ಸಂಕೀರ್ಣವೂ ಆದುದಾಗಿದೆ. ಏಕೆಂದರೆ, ಲಿಂಗ ಸಂಬಂಧಿ ಅಸಮಾನತೆ ನೆಲೆಗಳು ಹಾಗೂ ಲಿಂಗ ಸಂಬಂಧಿ ತಾರತಮ್ಯದ ರೂಪಗಳು ಅಮೂರ್ತವೂ, ಅಗೋಚರವೂ, ಅವ್ಯಕ್ತವೂ ಆಗಿರುತ್ತದೆ. ಲಿಂಗಸಂಬಂಧಿ ಅಸಮಾನತೆಯ ಬೇರುಗಳು ಕುಟುಂಬದೊಳಗಿನ ಸಂಬಂಧಗಳಲ್ಲೂ ಹರಡಿಕೊಂಡಿರುತ್ತವೆ'[27] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. 'ಅಭಿವೃದ್ಧಿ ಯೋಜನೆಗಳು ಲಿಂಗ ಸಂಬಂಧಿ ಸ್ವರೂಪವನ್ನು ಹೊಂದಿದೆ. ಜಿಲ್ಲಾ ಯೋಜನಾ ಸಮಿತಿಗಳು ಪ್ರತಿನಿಧಿಸುವ ಜನರ ಯೋಜನೆಗಳು ಲಿಂಗಸ್ಪಂದಿಯಾಗಿರುತ್ತದೆ. ಸಂಸತ್ ಮತ್ತು ವಿಧಾನ ಮಂಡಲಗಳ ಸ್ಥಾನಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವುದು ಇಂದಿಗೂ ಸಾಧ್ಯವಾಗಿಲ್ಲ. ಆದರೆ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಸ್ಥಾನ ಮೀಸಲಿಡಲಾಗಿರುತ್ತದೆ ಎಂಬ ವಾದವನ್ನು ಮಂಡಿಸುತ್ತಾ ಮಹಿಳೆಯ ಸಬಲೀಕರಣ ಎಂದರೇನು? ಹಾಗೂ ಮಹಿಳೆಯ ಆರ್ಥಿಕ ದುಡಿಮೆಯನ್ನು ಸಮಾಜ ಹೇಗೆ ಪರಿಗಣಿಸುತ್ತದೆ? ಪುರುಷರ ದುಡಿಮೆಯನ್ನು ಹೇಗೆ ಪರಿಗಣಿಸುತ್ತಿದೆ? ಹಾಗೂ ಸೇವಾ ವಲಯದಲ್ಲಿ ಮಹಿಳೆಯ ದುಡಿಮೆಯನ್ನು ಅವಳ ಕರ್ತವ್ಯ ಮತ್ತು ಜವಾಬ್ದಾರಿ ಎಂದು ಹೇಳಲಾಗಿದೆ. ಅಧಿಕಾರ ವಲಯದಲ್ಲಿ ಪುರುಷರ ದುಡಿಮೆಗೆ ಆದಾಯ ಸಿಗುತ್ತದೆ'[28] ಎಂದು ಟಿ. ಆರ್. ಚಂದ್ರಶೇಖರ ವಿಶ್ಲೇಷಿಸಿರುತ್ತಾರೆ.

ಬೀನಾ ಅಗರ್ವಾಲ್‌ರವರ ಪ್ರಕಾರ, 'ಭಾರತದ ರಾಜಕೀಯ ವ್ಯವಸ್ಥೆಯನ್ನು ಗಮನಿಸುವಾಗ ರಾಜಕೀಯದ ಯಾವುದೇ ವ್ಯಕ್ತಿಯಾಗಲಿ, ನಾಯಕನಾಗಲಿ, ಪಕ್ಷವಾಗಲಿ, ಮಹಿಳೆಯರನ್ನು ಕುಟುಂಬಕ್ಕೆ ಸೀಮಿತವಾಗಿ ಮಾತ್ರ ನೋಡಲು ಬಯಸುತ್ತಾರೆ ಹೊರತು ಮಹಿಳೆ ಅಧಿಕಾರವನ್ನು ಪಡೆಯುವ, ಚಲಾಯಿಸುವ, ಪ್ರಭಾವಶಾಲಿ ಮತ್ತು ಪ್ರಸಿದ್ಧಿ ಪಡೆಯುತ್ತಿರುವುದನ್ನು ನೋಡಲು ಪುರುಷ ಪ್ರಧಾನ ಮೌಲ್ಯಗಳನ್ನು ಮೈಗೂಡಿಸಿಕೊಂಡಿರುವ ಪುರುಷನಿಗೆ ಯಾವಾಗಲೂ ಕಷ್ಟವಾಗುತ್ತದೆ. ಅಲ್ಲದೆ ಚುನಾವಣೆಯ ಸಂಪೂರ್ಣ ಪ್ರಕಿಯೆಯು ಪುರುಷ ಪ್ರಧಾನ ರಾಜಕಾರಣವನ್ನು ಎತ್ತಿಹಿಡಿದಿರುತ್ತದೆ. ರಾಜಕೀಯದಲ್ಲಿ ಮಹಿಳೆಯರ ಭವಿಷ್ಯ ಮಸುಕಾಗಿದೆ. ಏಕೆಂದರೆ ಪಕ್ಷಾಂತರ, ಲಂಚ, ಹಿಂಸೆ, ಹಣದ ಚೆಲ್ಲಾಟ, ಕೊಲೆ, ಸುಲಿಗೆ, ಇತ್ಯಾದಿಗಳು ರಾಜಕಾರಣದ ಭಾಗವಾಗಿರುವ ಪ್ರಸ್ತುತ ರಾಜಕೀಯದಲ್ಲಿ ಮಹಿಳೆಯರ ಪರವಾದ ಧ್ವನಿಗಳು ಹೇಳಹೆಸರಿಲ್ಲವಾಗಿದೆ'[29] ಎಂದು ಮಹಿಳಾ ರಾಜಕೀಯ ಬದುಕಿನ ವೈರುಧ್ಯಗಳ ಬಗ್ಗೆ ವಿಶ್ಲೇಷಿಸುತ್ತಾ ರಾಜಕೀಯ ಪಾಲುಗೊಳ್ಳುವಿಕೆಯಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಎಳೆ ಎಳೆಯಾಗಿ ವಿಮರ್ಶಾತ್ಮಕವಾಗಿ ವಿವರಿಸಿರುತ್ತಾರೆ.

ಇದೇ ವಾದವನ್ನು ಮಂಡಿಸುತ್ತಾ ಪ್ರಾಗ್ಯ ರೇ, 'ಮಹಿಳೆಯರು ಚುನಾವಣೆಯಂತಹ ಪ್ರಕ್ರಿಯೆಯಲ್ಲಿ ಭಾಗವಹಿಸಿದರೂ ಆಕೆ ಕೇವಲ ಹೆಸರಿಗಷ್ಟೇ ಸೀಮಿತವಾಗಿರುತ್ತಾಳೆಯೇ ಹೊರತು ಕ್ರಿಯಾಶೀಲವಾಗಿ ಭಾಗವಹಿಸಲು ಆಕೆಗೆ ಸಾಧ್ಯವಾಗುವುದಿಲ್ಲ. ಚುನಾವಣೆಯಲ್ಲಿ ವಿಜಯಿಯಾದ ಮಹಿಳೆ, ಆಕೆಯ ಯಶಸ್ಸಿಗೆ ಕಾರಣವಾದ ಸಮಾಜ, ಗಂಡ, ಮನೆಯ ಸದಸ್ಯರು ಮಹಿಳೆಯ ಅಧಿಕಾರವನ್ನು ಯಾವ ರೀತಿಯಾಗಿ ತಾವು ಪಡೆಯಬೇಕು ಎಂಬ ಲೆಕ್ಕಾಚಾರದಲ್ಲಿ ಮುಳುಗಿರುವಾಗ ಮಹಿಳೆಯರು ಯಾವ ತೆರನಾಗಿ ಅಧಿಕಾರ ಚಲಾಯಿಸಬೇಕು ಎಂಬ ದ್ವಂದ್ವದಲ್ಲಿ ಇದ್ದು, ತನ್ನ ಅಧಿಕಾರವನ್ನು ತಾನೇ ಬಳಸದ ಪರಿಸ್ಥಿತಿಯಲ್ಲಿ ಸಿಲುಕಿಕೊಳ್ಳುತ್ತಾಳೆ. ಹಣವನ್ನು ಹೊಂದಿದ ಮಹಿಳೆಗೆ ಹಕ್ಕುಗಳ ಚಲಾವಣಾ ಕೌಶಲ್ಯವನ್ನು ಬಳಸಲು ಆಗುತ್ತಿಲ್ಲ. ಹಕ್ಕು ಹಾಗೂ ಅಧಿಕಾರ ಚಲಾವಣೆಯ ಅರಿವಿದ್ದರೂ ಹಣದ ಬೆಂಬಲವನ್ನು ಹೊಂದಿರುವುದಿಲ್ಲ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸಿಲುಕಿಕೊಂಡು ಅಧೀನವಾಗಿರಬೇಕಾಗುತ್ತದೆ. ಆದುದರಿಂದ ಮಹಿಳೆಯರಿಗೆ ಮೀಸಲಾತಿಯಿಂದ ರಾಜಕೀಯ ಅಧಿಕಾರ ದೊರೆತರೂ, ಅವರೇ ಅದನ್ನು ತಮ್ಮ ಸಾಮರ್ಥ್ಯದಿಂದ ಪಡೆದುಕೊಂಡರೂ, ಕೇಂದ್ರಿತ ವ್ಯವಸ್ಥೆಯು ಅವರನ್ನು ನಿಯಂತ್ರಿಸುತ್ತಲೇ ಇರುತ್ತದೆ ಎಂಬುದು ಲಿಂಗ ತಾರತಮ್ಯದ ಗಂಭೀರತೆಯನ್ನು ತೋರಿಸಿಕೊಡುತ್ತದೆ'[30] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಸೀಮಾ ಸಿಂಗ್‌ರವರು ಕಂಡುಕೊಳ್ಳುವಿಕೆಯಂತೆ, 'ಸಂವಿಧಾನವು ಪ್ರಜಾಪ್ರಭುತ್ವ ಮಾದರಿಯ ರಾಜಕಾರಣವನ್ನು ಒಪ್ಪಿಕೊಂಡಿದ್ದು ಸ್ತ್ರೀ ಪುರುಷರ ಸಮಾನತೆಯನ್ನು ಘೋಷಿಸಿದ್ದರೂ ವಾಸ್ತವ ಅದಕ್ಕಿಂತ ಬಹಳ ಭಿನ್ನವಾಗಿದೆ ಕೌಟುಂಬಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳಲ್ಲಿ ಸಮಾನ ಅವಕಾಶಗಳಿಗಾಗಿ, ಸಮಾನ ಹಕ್ಕುಗಳಿಗಾಗಿ ಮಹಿಳೆಯರ ಮೇಲೆ ಹೊರಿಸಲಾಗುವ ಅನರ್ಹತೆಯ ಆರೋಪಕ್ಕೆ ವಿರುದ್ಧವಾಗಿ ಪದೇ ಪದೇ ತಮ್ಮನ್ನು ಸಾಬೀತು ಪಡಿಸಬೇಕಾಗಿದೆ ಎಂದಿದ್ದರೂ, ಯಾವ ರೀತಿ ಈ ಸ್ವಾತಂತ್ರ್ಯ, ಸಮಾನತೆ ಮತ್ತು ಹಕ್ಕುಗಳನ್ನು ಪಡೆಯುವುದು ಎಂಬ ಬಗ್ಗೆ ವಿಶ್ಲೇಷಣೆ ಇರುವುದಿಲ್ಲ. ಇಂದು ರಾಜಕೀಯ ಕ್ಷೇತ್ರವು ಪುರುಷರ ಪ್ರಬಲ ಕೋಟೆಯಾಗಿ ಕಂಡುಬರುತ್ತಿದೆ. ಮಹಿಳೆ ಪುರುಷರಿಗಿಂತ ಬಲಹೀನಳು ಎಂಬ ಜೈವಿಕ ಅಂಶವನ್ನು ಆಧಾರವಾಗಿಟ್ಟುಕೊಂಡು ಮಹಿಳೆಯರನ್ನು ಅಧಿಕಾರ ರಾಜಕಾರಣದಿಂದ ದೂರವಿಡಲಾಗುತ್ತಿದೆ. ರಾಜಕೀಯ ಪಕ್ಷಗಳು ಚುನಾವಣಾ ಸ್ಥಾನಗಳಿಗಾಗಿ ಪುರುಷರಿಗೆ ಪ್ರಾಧಾನ್ಯತೆ ನೀಡುತ್ತಿವೆ. ಮಹಿಳೆಯರ ಕುರಿತು ಲಿಂಗಭೇದ, ಪೂರ್ವಗ್ರಹ ದೃಷ್ಟಿ ಇನ್ನೂ ಬದಲಾಗಿಲ್ಲ. ಸಶಕ್ತೀಕರಣ ಬರೀ ರಾಜಕೀಯ ಅವಕಾಶದಿಂದ ಮಹಿಳೆಯರಲ್ಲಿ ಬರುವಂತಹುದಲ್ಲ'[31] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ರಾಜಕೀಯದಲ್ಲಿ ಲಿಂಗ ಹೇಗೆ ಪ್ರಭಾವ ಬೀರಿದೆ ಎಂಬುದರ ಬಗ್ಗೆ ಲೇಖಕರು ತಮ್ಮ ಲೇಖನದಲ್ಲಿ ವಿಶ್ಲೇಷಣೆ ಮಾಡಿರುತ್ತಾರೆ.

'ಭಾರತದ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯನ್ನು ಅವಲೋಕಿಸಿದಾಗ ಸ್ತ್ರೀ ಪುರುಷರ ತಾರತಮ್ಯ ಶತಮಾನಗಳ ಇತಿಹಾಸವನ್ನು ಹೊಂದಿರುವುದು ಕಾಣಬರುತ್ತದೆ. ಪುರುಷ ಪ್ರಧಾನ ಸಮಾಜದ ಫಲವಾಗಿ ಮಹಿಳೆ ಅನೇಕ ಅವಕಾಶಗಳಿಂದ ವಂಚಿತಳಾಗುತ್ತಾ ದ್ವಿತೀಯ ದರ್ಜೆಯ ಪ್ರಜೆಯಂತೆ ಬದುಕುತ್ತಾ ಬಂದಿದ್ದಾಳೆ. ತನ್ನದೇ ಬದುಕಿನ ನಿರ್ಣಯಗಳನ್ನು ತೆಗೆದುಕೊಳ್ಳಲಾಗದಂಥ ಸಮಾಜದ ಕಟ್ಟುಪಾಡುಗಳಲ್ಲಿ ಬಂಧಿಯಾಗಿದ್ದಾಳೆ. ಸಾಮಾಜಿಕವಾಗಿ, ಆರ್ಥಿಕವಾಗಿ ಪುರುಷರ ಪರಾವಲಂಬಿಯೇ ಆಗುತ್ತಾ ಬಂದ ಮಹಿಳೆ, ರಾಜಕೀಯ ಚುಕ್ಕಾಣಿ ಹಿಡಿಯುವುದು ಅಪರೂಪದ ವಿಷಯವಾಯಿತು'[32] ಎಂದು ನೂಪುರ್ ತಿವಾರಿಯವರು ವಿವರಿಸಿರುತ್ತಾರೆ. 'ಮಹಿಳಾ ರಾಜಕಾರಣದ ಸ್ವರೂಪವು ಹೆಚ್ಚಾಗಿ ಸಾಮಾಜಿಕ ಆಯಾಮವನ್ನೊಳಗೊಂಡಿವೆಯೆಂದು ಚರ್ಚಿಸುತ್ತಾ ಮಹಿಳಾ ಸಮಾನತೆ ಅಥವಾ ಮೀಸಲಾತಿಗೆ ಸಂಬಂಧಿಸಿದ ಸಾಮಾಜಿಕ ಸ್ಥಿತಿ ಇಲ್ಲದಿರುವಾಗ ಇದರ ಇರವನ್ನು ಹೇಗೆ ಪಡೆಯುವುದು?'[33] ಎಂದು ವೆಂಕಟೇಶ ಎ.ರವರು ಪ್ರಶ್ನೆಗಳನ್ನೆತ್ತಿರುತ್ತಾರೆ.

ವಂದನಾ ಶಿವರವರ ಕಂಡುಕೊಳ್ಳುವಿಕೆಯಂತೆ, 'ಮಹಿಳೆಯರ ಸ್ಥಾನಮಾನ ಕುರಿತು ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳು ಅಂತಾರಾಷ್ಟ್ರೀಯ ಇಲ್ಲವೇ ವಿಶ್ವಸಂಸ್ಥೆಯ ಒತ್ತಡಕ್ಕೆ ಅನುಗುಣವಾಗಿ ರೂಪುಗೊಂಡವುಗಳು. ಮಹಿಳೆಯರ ಅಭಿವೃದ್ಧಿ ಬಗೆಗಿನ ಅಧ್ಯಯನ ದೇಶಿಯವಾಗಿ ಚಾಲನೆ ಪಡೆದಿಲ್ಲ. ಮಧ್ಯಮ ವರ್ಗದ ಸುಶಿಕ್ಷಿತ ಮತ್ತು ಕುಲೀನ ವರ್ಗದ ಮಹಿಳೆಯರು ಇಂದು ಮಹಿಳಾವರ್ಗದ ಪ್ರಶ್ನಾತೀತ ನಾಯಕರಾಗಿರುವುದು ಪುರುಷಶಾಹಿಯ ಕೊಡುಗೆಯಾಗಿದೆ. ಹೀಗೆ ಅಭಿವೃದ್ಧಿಯ ಪ್ರತಿಫಲ ಒಂದು ವರ್ಗಕ್ಕೆ ಮಾತ್ರ ದಕ್ಕುತ್ತದೆ ಹಾಗೂ ಕೆಲವು ನಿಯಮಾವಳಿಗಳು ಮತ್ತು ಮಾರ್ಪಾಡುಗಳು ಇತ್ತೀಚೆಗಂತೂ ಮಹಿಳಾ ರಾಜಕಾರಣ ಮತ್ತು ಸಶಕ್ತೀಕರಣಕ್ಕೆ ಮಾರಕವಾಗಿ ಪರಿಣಮಿಸಿದೆ. ದೇಶದಲ್ಲಿ ಪುರುಷ ಪ್ರಧಾನ ಸಮಾಜದ ಅಭಿವೃದ್ಧಿಗೆ ಹಾಕಿರುವ ತಳಪಾಯದ ಬಗ್ಗೆ ವಿವರಗಳನ್ನು ನೀಡುತ್ತಾ ಸಮಾಜದ ಪ್ರಮುಖ ಅವಿಭಾಜ್ಯ ಅಂಗವಾಗಿರುವ ಮಹಿಳೆಯನ್ನು ಸುಲಭವಾಗಿ ಪ್ರತಿರೋಧವಿಲ್ಲದೆ ಎರಡನೇ ಸ್ಥಾನಕ್ಕೆ ಇಳಿಸಿರುವುದು ಮಾತ್ರವಲ್ಲದೆ ಅವಳ ಕೊಡುಗೆಯನ್ನು ತಿರಸ್ಕಾರವಾಗಿ ಕಾಣುವ ಪ್ರವೃತ್ತಿ ಬೆಳೆಯುತ್ತಿದೆ. ಆದುದರಿಂದ ಮಹಿಳಾ ಸಮಸ್ಯೆಗಳನ್ನು ಸಾಮಾಜಿಕ ವಾಸ್ತವಿಕತೆಯ ಆಧಾರದ ಮೇಲೆ ವಿಶ್ಲೇಷಿಸಬೇಕಾಗಿದೆ'[34] ಎಂದು ಅಭಿಪ್ರಾಯಪಡುತ್ತಾರೆ.

ಶಿರಿನ್ ರೇರವರ ಪ್ರಕಾರ, 'ಜಾತಿಗಿಂತ ವರ್ಗದ ಪ್ರವೃತ್ತಿಯು ಮಹಿಳಾ ಸದಸ್ಯರ ಶಿಕ್ಷಣ ಮಟ್ಟದಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿದೆ. ಮಹಿಳಾ ಸದಸ್ಯರ ವೃತ್ತಿ ಜೀವನದಲ್ಲಿ ಶಿಕ್ಷಣ ಮಟ್ಟ ಕೂಡಾ ಪ್ರಭಾವ ಬೀರಿದೆ. 1991–1996ರ ರಾಜ್ಯ ಸಭೆಯಲ್ಲಿ 30% ಮಹಿಳಾ ಸದಸ್ಯರು ನ್ಯಾಯವಾದಿಗಳು ಹಾಗೂ ಲೋಕಸಭೆಯಲ್ಲಿ 25% ಮಹಿಳಾ ಸದಸ್ಯೆಯರು ಉಪನ್ಯಾಸಕಿಯರು ಅಥವಾ ಶಿಕ್ಷಕಿಯರಾಗಿದ್ದರು. ಈ ಉದಾಹರಣೆಗಳನ್ನು ಅವಲೋಕಿಸಿದಾಗ ರಾಜಕೀಯ ವ್ಯವಸ್ಥೆಯಲ್ಲಿ ಇವರ ಸೇರ್ಪಡೆ ಮತ್ತು ಯಶಸ್ಸಿನ ಹಿಂದೆ ವರ್ಗವು ಪ್ರಮುಖ ಪಾತ್ರವನ್ನು ನಿರ್ವಹಿಸಿರುತ್ತದೆ. ಧಾರ್ಮಿಕ ಪ್ರಭಾವದಿಂದಾಗಿ ಕೂಡಾ ವರ್ಗಗಳು ಕಾರ್ಯಾಚರಿಸುತ್ತವೆ. ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮುಸ್ಲಿಂ ಮಹಿಳೆಯರು ಬಹಳ ಕಡಿಮೆ ಪ್ರಾತಿನಿಧಿತ್ವವನ್ನು ಹೊಂದಿದ್ದರೂ ಅವರ ಕುಟುಂಬದವರು ರಾಜಕೀಯ, ರಾಷ್ಟ್ರೀಯ ಚಳುವಳಿಯ ಹಿನ್ನೆಲೆ ಹೊಂದಿದವರಾದ ಕಾರಣ ಈ ಮಹಿಳೆಯರಿಗೆ ರಾಜಕೀಯವಾಗಿ ಅವಕಾಶ ಸಿಕ್ಕಿರುತ್ತದೆ. ಉಳಿದ ಮಹಿಳೆಯರು ಭಾರತದ ಸಂಸತ್ತಿನಲ್ಲಿ ಸುಶಿಕ್ಷಿತರಾಗಿದ್ದರೂ ಸಾರ್ವಜನಿಕ ವಲಯದಲ್ಲಿ ಲಿಂಗ ತಾರತಮ್ಯತೆಯ ಸವಾಲನ್ನು ಎದುರಿಸುತ್ತಿದ್ದಾರೆ ಹಾಗೂ ಅವರ ವರ್ಗದ ಸ್ಥಾನವು ಬಡ ಮಹಿಳೆಯರಿಗಿಂತ ಹೆಚ್ಚಿನ ಆಯ್ಕೆ, ಅವಕಾಶಕ್ಕೆ ಅನುವು ಮಾಡಿಕೊಟ್ಟಿದೆ'[35] ಎಂದು ಬೆಟ್ಟು ಮಾಡಿರುತ್ತಾರೆ.

ಮೀಸಲಾತಿ ನೀತಿಯ ಉದ್ದೇಶವನ್ನು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಉಲ್ಲೇಖಿಸಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಾತಿ ನೀಡುವುದರ ಉದ್ದೇಶ ಅವರನ್ನು ಜನಜೀವನದ ಮುಖ್ಯವಾಹಿನಿಗೆ ತರುವುದಾಗಿದ್ದರೆ ಇತರ ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ ಮೀಸಲಾತಿ ನೀಡುವ ಉದ್ದೇಶ ಅವರಿಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಅಡೆತಡೆಗಳನ್ನು ನಿವಾರಿಸುವುದಾಗಿದೆ ಎಂದು ತೀರ್ಪಿತ್ತಿರುವುದನ್ನು ಉಲ್ಲೇಖಿಸಿದ ದಿನೇಶ್ ಹೆಗ್ಡೆಯವರು ಮುಂದುವರಿದು, 'ಭಾರತದಂತಹ ಸಂಕೀರ್ಣ ಹಾಗೂ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರು ರಾಜಕೀಯ ಅಧಿಕಾರ ಸ್ಥಾನಕ್ಕೇರುವ ಅಥವಾ ತಮ್ಮದೇ ಆದ ರಾಜಕೀಯ ಅಸ್ತಿತ್ವವನ್ನು ನಿರ್ಮಿಸಿಕೊಳ್ಳುವ ಪ್ರಕ್ರಿಯೆ ಯಾವತ್ತೂ ತ್ರಾಸದಾಯಕವೇ'[36] ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ವಿ.ಎಮ್. ರಾವ್‌ರವರ ಪ್ರಕಾರ, 'ಮಹಿಳಾ ಸಬಲೀಕರಣವನ್ನು ಶಿಕ್ಷಿತ, ಜ್ಞಾನವುಳ್ಳ, ಸ್ವಂತ ಆಸ್ತಿ ಮತ್ತು ಸಂಪತ್ತನ್ನು ಹೊಂದಿದ ಹಾಗೂ ಆತ್ಮಸ್ಥೈರ್ಯ ಮುಂತಾದ ಹಲವು ನಿರ್ಣಾಯಕ ಅಂಶಗಳ ಮೂಲಕ ಗುರುತಿಸಬಹುದು. ಆರ್ಥಿಕ ವಲಯದಲ್ಲಿ ಸ್ವಾತಂತ್ರ್ಯವನ್ನು ಹೊಂದಿದ ಮಹಿಳೆಯು ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ'[37] ಎಂಬ ಅಭಿಪ್ರಾಯವನ್ನು ತಳೆದಿದ್ದಾರೆ. ಆರ್ಥಿಕ ಅಭಿವೃದ್ಧಿಯಲ್ಲಿ ಲಿಂಗ ಪೂರ್ವಾಗ್ರಹಗಳು, ಲಿಂಗ ಅಸಮಾನತೆ, ಲಿಂಗ ಮತ್ತು ಆರ್ಥಿಕ ಸಹಾಯ ಇತ್ಯಾದಿಗಳನ್ನು ಮೀನಾಕ್ಷಿ ಮಲ್‌ಹೋತ್ರರವರು ವಿವರಿಸುತ್ತಾ, 'ಸಮಾಜದಲ್ಲಿ ಲಿಂಗ ಸಂಬಂಧದ ಮುಖ್ಯವಾಹಿನಿಯ ಮೂಲಕ ಸಬಲೀಕರಣವಾಗಬೇಕಾದರೆ ಆರ್ಥಿಕ ಅಂಶ ಅಗತ್ಯ ಮತ್ತು ಮಾಹಿತಿ ತಂತ್ರಜ್ಞಾನದ ಮೂಲಕ ಮಹಿಳಾ ಅಭಿವೃದ್ಧಿ ಸಾಧಿಸಬಹುದು'[38] ಎಂದು ಅಭಿಪ್ರಾಯಪಟ್ಟಿದ್ದಾರೆ.

ಪಂಚಾಯತ್ ಸದಸ್ಯತನದಿಂದ ಸಮಾಜದಲ್ಲಿ ಇಂದು ತಮ್ಮ ಸ್ಥಾನಮಾನ ಸುಧಾರಿಸಿದೆ ಎಂದು ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಅರಿತುಕೊಂಡಿದ್ದಾರೆ ಎಂಬುದು ಮೆಹ್ತಾರವರ ಅಭಿಪ್ರಾಯವಾಗಿದ್ದು, 'ಪ್ರಜಾಪ್ರಭುತ್ವವನ್ನು ನ್ಯಾಯಸಮ್ಮತವಾಗಿ ಕಾರ್ಯರೂಪಕ್ಕೆ ತಂದಾಗ ಮಹಿಳೆಯರು ರಾಜಕೀಯದ ಮುಖ್ಯ ವಾಹಿನಿಯಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡು ತಮ್ಮ ಕೊಡುಗೆಯನ್ನು ರಾಜಕೀಯಕ್ಕೆ ನೀಡುತ್ತಾರೆ. ವಿಕೇಂದ್ರಿಕರಣಕ್ಕೆ ಎರಡು ಮುಖಗಳಿವೆ. ಒಂದು, ಮೇಲ್‌ಸ್ತರದಲ್ಲಿ ರೂಪುಗೊಳ್ಳುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಳಮಟ್ಟದ ಜನರಿಗೆ ತಲುಪಿಸುವುದು. ಇನ್ನೊಂದು, ತಳಮಟ್ಟದ ಜನರನ್ನು ಸಶಕ್ತೀಕರಣಗೊಳಿಸುವುದು. ಇವು ಎಷ್ಟರ ಮಟ್ಟಿಗೆ ತಳಮಟ್ಟದಲ್ಲಿ ಕಾರ್ಯರೂಪಕ್ಕೆ ಬಂದಿದೆ ಎಂದು ವಿಶ್ಲೇಷಿಸುತ್ತಾ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು ಗ್ರಾಮ ಪಂಚಾಯತ್

ಮೂಲಕ ಗ್ರಾಮೀಣ ಮಟ್ಟದಲ್ಲಿಯೇ ಅನುಷ್ಠಾನಗೊಳ್ಳಬೇಕು. ತಳಮಟ್ಟದಲ್ಲಿ ಪಂಚಾಯತ್ ಈ ಯೋಜನೆಗಳನ್ನು ಜಾರಿಗೊಳಿಸಿದರೆ ಸ್ಥಳೀಯ ಜನರಿಗೆ ವಿಶ್ವಾಸ ಬರುತ್ತದೆ. ಹಾಗಾಗಿ ಗ್ರಾಮೀಣ ಪ್ರದೇಶದ ಕೆಳ ಜಾತಿ/ವರ್ಗ ಮತ್ತು ಬಡ ಜನತೆಯನ್ನು ಆರ್ಥಿಕವಾಗಿ ಸುಧಾರಿಸಬಹುದಾಗಿದೆ ಹಾಗೂ ಮಹಿಳಾ ಮೀಸಲಾತಿಯಿಂದ ಮಹಿಳೆಯರಿಗೆ ರಾಜಕೀಯ ಅವಕಾಶ ದೊರಕಿದೆ'[39] ಎಂದು ಅಧ್ಯಯನದಲ್ಲಿ ವಾದಿಸಿದ್ದಾರೆ.

ಶುಭ ಮತ್ತು ಭಾರ್ಗವರವರ ಅಭಿಪ್ರಾಯದಂತೆ, 'ಸುಧಾರಿತ ಆಡಳಿತ, ಉತ್ತಮ ಸೇವೆ, ಅಧಿಕಾರದ ವಿಕೇಂದ್ರೀಕರಣ ಮತ್ತು ಸಂಪನ್ಮೂಲಗಳ ನ್ಯಾಯಯುತವಾದ ವಿತರಣೆ, ಇತ್ಯಾದಿ ಬದಲಾದ ಆಡಳಿತದಲ್ಲಿ ಹೆಚ್ಚಿನ ಮಟ್ಟದ ಪಾರದರ್ಶಕತೆ ಮತ್ತು ಜವಾಬ್ದಾರಿಯನ್ನೂ ತರುವ ಪ್ರಯತ್ನಗಳಾದವು. ಇದರ ಫಲವಾಗಿ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ರಾಜಕೀಯ ಸಹಭಾಗಿತ್ವದಲ್ಲಿ ನೀಡಬೇಕೆಂಬ ಪ್ರಯತ್ನವು ನಡೆಯಿತು. ಅವರ ಸಾರ್ವಜನಿಕ ಜೀವನವು ಹೆಚ್ಚಾಗಿ ಪಿತೃಪ್ರಧಾನ ಮೌಲ್ಯಗಳಿಂದ ಪ್ರಭಾವಿತವಾಗಿದ್ದು, ಮನೆಯಲ್ಲಿನ ಕೆಲಸಕಾರ್ಯಗಳು ಮತ್ತು ಆರ್ಥಿಕವಾಗಿ ತಮಗೆ ಜೀವನಾವಕಾಶಗಳನ್ನು ಒದಗಿಸುವ ಕೆಲಸಗಳಲ್ಲಿ ಮಾತ್ರ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರೆ ಹೊರತು, ತಮ್ಮ ಗ್ರಾಮ ಅಥವಾ ಪಟ್ಟಣದ ನಾಯಕರಾಗುವ ಪ್ರಯತ್ನ ಮಾಡುತ್ತಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ವಿಕೇಂದ್ರೀಕರಣವು ಅವರಿಗೆ ಆಶಾದಾಯಕವಾಯಿತು. ವಿಕೇಂದ್ರೀಕರಣ ಪದ್ಧತಿಯು ಸಾರ್ವಜನಿಕ ವಿಷಯಗಳ ಬಗ್ಗೆ ಸ್ವಂತ ತೀರ್ಮಾನಗಳನ್ನು ತೆಗೆದುಕೊಳ್ಳುವಂತೆ ಮಾಡುತ್ತದೆ ಹಾಗೂ ಲಿಂಗಾಧಾರಿತ ನ್ಯಾಯ ಮತ್ತು ಸಮಾನತೆಯನ್ನು ಹುಟ್ಟು ಹಾಕುತ್ತದೆ'[40] ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಸ್ನೇಹಲತಾ ಪಾಂಡಾರವರು ಒಡಿಶಾದ ಹಿಂದುಳಿದ ಜಿಲ್ಲೆಯೊಂದರ ಗ್ರಾಮಗಳಲ್ಲಿ ನಡೆಸಿದ ಅಧ್ಯಯನದಲ್ಲಿ ಮಹಿಳೆಯರ ನಾಯಕತ್ವದ ಗುಣಗಳ ಬಗ್ಗೆ ವಿವರಿಸುತ್ತಾ, 'ವೈಯಕ್ತಿಕ ಸಾಧನೆಗಳ ಆಧಾರದ ಮೇಲೆ ಮಹಿಳಾ ಪ್ರತಿನಿಧಿಗಳು ಚುನಾಯಿತರಾಗಿರುತ್ತಾರೆ. ಅವರ ಮೇಲೆ ಸಾಂಪ್ರದಾಯಿಕವಾದ ಕಟ್ಟುಪಾಡುಗಳು ಅಷ್ಟೇನೂ ಪರಿಣಾಮ ಬೀರಿರಲಿಲ್ಲ. ಬದಲಾಗಿ ವಯಸ್ಸು, ಕೌಟುಂಬಿಕ ಸ್ವಾತಂತ್ರ್ಯ ಮತ್ತು ಪ್ರಭಾವಶಾಲಿ ಮಾತು ಇತ್ಯಾದಿ ಅವರು ಚುನಾವಣೆಗಳಲ್ಲಿ ಸ್ಪರ್ಧಿಸಲು ಕಾರಣವಾಗಿದ್ದವು. ಶೀಘ್ರವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವುದರ ಮೂಲಕ ಜನಪರ ಯೋಜನಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಅಲ್ಲದೆ ಯಾವ ರಾಜಕೀಯ ಪಕ್ಷದ ಬೆಂಬಲವನ್ನೂ ಪಡೆಯದೆ. ನಾಯಕತ್ವದ ಜವಾಬ್ದಾರಿಗಳನ್ನು ತೆಗೆದುಕೊಂಡು ಸ್ಥಳೀಯ ಸಂಸ್ಥೆಯಲ್ಲಿ ಸಕ್ರಿಯವಾಗಿ ಭಾಗವಹಿಸಿರುತ್ತಾರೆ'[41] ಎಂದು ತಮ್ಮ ಸಂಶೋಧನೆಯಲ್ಲಿ ವಿಶ್ಲೇಷಿಸಿರುತ್ತಾರೆ.

ಮಮತಾ ಜೈಸ್ವಾಲ್‌ರವರ ಪ್ರಕಾರ, 'ಬಡತನ, ನಿರುದ್ಯೋಗ, ಸಾಮಾಜಿಕ-ಆರ್ಥಿಕ ಅಸಮಾನತೆ ಮುಂತಾದ ವಿಷಯಗಳು ಮಹಿಳಾ ರಾಜಕೀಯ ಭಾಗವಹಿಸುವಿಕೆಯಲ್ಲಿ ಅಡ್ಡಿ ಆತಂಕಗಳನ್ನು ತಂದೊಡ್ಡುತ್ತವೆ. ಚುನಾಯಿತ ಮಹಿಳೆಯರ ಬಡತನವೇ ಅವರನ್ನು ಉತ್ಸಾಹರಹಿತರಾಗಿ, ಮನೆಯ ಒಳಗೆ ಮತ್ತು ಸಾರ್ವಜನಿಕವಾಗಿ ಚೈತನ್ಯರಹಿತರಾಗಿ ಇದ್ದುಬಿಡುವಂತೆ ಮಾಡಿವೆ'[42] ಎಂದಿದ್ದಾರೆ. ರಾಮ್ ಅಹುಜರವರು ರಾಜಸ್ಥಾನದ ಸ್ಥಳೀಯ ಸಂಸ್ಥೆಗಳ ಅಧ್ಯಯನಕ್ಕೆ ಸಂಬಂಧಪಟ್ಟಂತೆ 733 ಪುರುಷರಲ್ಲಿ, ಮಹಿಳಾ ಪಂಚಾಯತ್ ಪ್ರತಿನಿಧಿಗಳ ಬಗ್ಗೆ 75% ಪುರುಷ ಪ್ರತಿನಿಧಿಗಳ ಹೇಳಿಕೆಯ ಪ್ರಕಾರ, 'ರಾಜಕೀಯವು ತುಂಬಾ ಕೆಟ್ಟದು ಮತ್ತು ಕೊಳಕು. ಅದು ಪುರುಷರಿಗೇ ಸರಿ, ಮಹಿಳೆಯರಿಗೆ ಸರಿಯಲ್ಲ ಎಂದು ಅಭಿಪ್ರಾಯವನ್ನು ನೀಡಿರುತ್ತಾರೆ. ಅಲ್ಲದೇ 25% ಪುರುಷರ ಪ್ರಕಾರ ಅನಕ್ಷರತೆಯ ಕಾರಣದಿಂದಾಗಿ ಮಹಿಳೆಯರು ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಮತ್ತು ಭಾಗವಹಿಸುವಿಕೆಯಲ್ಲಿ ಅಸಮರ್ಥರಾಗಿರುತ್ತಾರೆ. 23% ಪುರುಷರ ಅಭಿಪ್ರಾಯದಲ್ಲಿ ಮಹಿಳೆಯರಿಗೆ ರಾಜಕೀಯದ ಬಗ್ಗೆ ಅರಿವಿಲ್ಲದ ಕಾರಣ ಉತ್ತಮವಾಗಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಹಾಗೂ ಭಾಗವಹಿಸುತ್ತಿದ್ದರೆ ಅವರು ರಾಜಕೀಯ ಪಕ್ಷಗಳ ನೆರವು ಮತ್ತು ಬೆಂಬಲದಿಂದ ಮಾತ್ರ ಸಾಧ್ಯವಾಗಿದೆ'[43] ಎಂದು ಅಭಿಪ್ರಾಯಪಟ್ಟಿದ್ದಾರೆ.

ಎಸ್. ಕೆ. ಝೂರವರು (1998) ತಮ್ಮ ಅಧ್ಯಯನದಲ್ಲಿ, 'ಮಹಿಳಾ ಪರ ಮೀಸಲಾತಿಯಿಂದ ಹೆಚ್ಚಿನ ಮಹಿಳೆಯರಿಗೆ ರಾಜಕೀಯದಲ್ಲಿ ಭಾಗವಹಿಸಲು ಸಂವಿಧಾನದತ್ತವಾಗಿ ಅವಕಾಶ ಸಿಕ್ಕಿದಂತಾಗಿದೆ. ಇದು ಒಂದು ಕ್ರಾಂತಿಕಾರಿ ಬದಲಾವಣೆಯನ್ನು ಮಾಡಿದೆ. ಆದರೆ ಬಡತನ, ಅನಕ್ಷರತೆ, ನಿರುದ್ಯೋಗ, ಮೂಲಭೂತ ಸೌಕರ್ಯಗಳ ಕೊರತೆ, ರಾಜಕೀಯದಲ್ಲಿ ಅರಿವಿಲ್ಲದಿರುವುದು ಮುಂತಾದ ನ್ಯೂನತೆಗಳು ಅಡೆತಡೆಗಳನ್ನುಂಟು ಮಾಡಿವೆ'[44] ಎಂದು ತಿಳಿಸಿರುತ್ತಾರೆ. ರಾಜಕೀಯದಲ್ಲಿ ಜಾತಿ ಮತ್ತು ರಾಜಕೀಯ ಪಕ್ಷಗಳ ಪಾತ್ರವನ್ನು ಮನು ಭಾಸ್ಕರ್‌ರವರು ವಿಶ್ಲೇಷಿಸುತ್ತಾ, 'ಕೇರಳದ ಪಂಚಾಯತ್ ಮಹಿಳಾ ಸದಸ್ಯರ ಒಂದು ಅಧ್ಯಯನದಲ್ಲಿ ಜಾತಿ ಮತ್ತು ರಾಜಕೀಯ ಪಕ್ಷಗಳ ಜೊತೆ ಇದ್ದ ಸಂಪರ್ಕವೇ ಮಹಿಳೆಯರಲ್ಲಿ ಯಾರನ್ನು ಚುನಾವಣೆಗೆ ನಿಲ್ಲಿಸಬೇಕೆಂಬ ನಿರ್ಣಯವನ್ನು ತೆಗೆದುಕೊಳ್ಳುತ್ತಿತ್ತು. ವಯಸ್ಸು, ಕೌಟುಂಬಿಕ ಆದಾಯ, ರಾಜಕೀಯ ಪ್ರಭಾವ, ರಾಜಕೀಯ ಪಕ್ಷಗಳ ನಂಟು ಇತ್ಯಾದಿ ಇಲ್ಲಿ ಗಮನಿಸಬೇಕಾದ ನಿರ್ಣಾಯಕ ಅಂಶಗಳು. ಆದರೆ, ಒಂದು ಸಣ್ಣ ಬದಲಾವಣೆಯೆಂದರೆ ರಾಜಕೀಯ ಪಕ್ಷಗಳು ಚುನಾವಣೆಯ ಸಮಯದಲ್ಲಿ ಮಾತ್ರ ಅತಿ ಪ್ರಭಾವಶಾಲಿಯಾಗಿರುವುದು ಕಂಡುಬಂದಿರುತ್ತದೆ. ರಾಜ್ಯಾಡಳಿತವನ್ನು ನಡೆಸುವಾಗ ಸಹ ಅದರ ಪ್ರಭಾವ ಸಾಕಷ್ಟು ಇರುತ್ತಿತ್ತು.

ಆದರೆ, ಮಹಿಳೆಯರನ್ನು ಚುನಾವಣೆಗೆ ನಿಲ್ಲುವಂತೆ ಪ್ರೇರೇಪಿಸುವಾಗ ಅದರ ಪಾತ್ರ ನಗಣ್ಯವಾಗಿರುತ್ತದೆ'[45] ಎಂದು ವಿಶ್ಲೇಷಿಸಿರುತ್ತಾರೆ. ಬಿದಾಯತ್ ಮೊಹಾಂತಿಯವರ ಪ್ರಕಾರ, 'ಸಂವಿಧಾನದತ್ತವಾಗಿ ಮಹಿಳೆಯರಿಗೆ ಎಷ್ಟೇ ಅವಕಾಶಗಳನ್ನು ಒದಗಿಸಿದರೂ ತಮಗಿರುವ ಗೃಹಕೃತ್ಯಗಳ ನಡುವೆ ಸಾರ್ವಜನಿಕ ಮತ್ತು ಅತ್ಯಂತ ಜವಾಬ್ದಾರಿಯುತ ಕೆಲಸಗಳನ್ನು ಮಾಡಲು ಮಹಿಳೆಯರಿಗೆ ಕಷ್ಟ ಸಾಧ್ಯ. ಪಂಚಾಯತ್‌ಗಳಲ್ಲಿ ಸ್ಥಾನ ಪಡೆಯುವುದಕ್ಕೆ ಮೀಸಲಾತಿಯ ಮೊರೆ ಹೋಗಬೇಕಾಗಿ ಬಂದಿರುವ ಶ್ರೇಣೀಕೃತ ಸಮಾಜದಲ್ಲಿ ಮಹಿಳೆಯರು ಅಧಿಕಾರ ಚಲಾಯಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಅವರಿಗೆ ಪರಿಣತಿ, ಜ್ಞಾನ, ಅವಕಾಶಗಳು, ನೆರವು ಮತ್ತು ಮನೆ ಕೆಲಸದ ನಡುವೆ ಬಿಡುವು, ಇತ್ಯಾದಿ ಅಗತ್ಯವಾಗಿರುತ್ತದೆ. ಮನೆ ಮತ್ತು ಹೊಲಗಳಲ್ಲಿನ ಕೆಲಸಗಳನ್ನು ತಾವೊಬ್ಬರೇ ನಿರ್ವಹಿಸುವ ಹಾಗೂ ಸಾಮಾಜಿಕ, ಆರ್ಥಿಕ ಮತ್ತು ಸಾಮುದಾಯಿಕ ರಂಗಗಳ ಪ್ರಮುಖ ಚಟುವಟಿಕೆಗಳನ್ನು ಸಲೀಸಾಗಿ ಮಾಡುವ ಮಹಿಳೆಯರಿಗೆ ಸಾರ್ವಜನಿಕ ಸೇವೆಯಲ್ಲಿ ಅನೇಕ ಅಡ್ಡಿ ಆತಂಕಗಳು ಎದುರಾಗುತ್ತಿದೆ'[46] ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಸಾಹಿತ್ಯ ಪರಾಮರ್ಶನಕ್ಕೊಳಪಡಿಸಿದ ಹೆಚ್ಚಿನ ಅಧ್ಯಯನಗಳು ಮಹಿಳೆಯರಿಗೆ ಸಾಕಷ್ಟು ಅವಕಾಶಗಳು ನೀಡಲ್ಪಟ್ಟಿದ್ದರೂ ಅವುಗಳನ್ನು ಸಮರ್ಥವಾಗಿ ಮಹಿಳೆಯರು ಬಳಸಿಕೊಂಡಿರುವುದಿಲ್ಲ ಎಂಬುದನ್ನು ಉಲ್ಲೇಖಿಸಿರುತ್ತವೆ. ಇದಕ್ಕೆ ಪುರುಷ ಪ್ರಧಾನ ಸಮಾಜದ ಕಟ್ಟುಪಾಡುಗಳು, ದೌರ್ಜನ್ಯ, ದಬ್ಬಾಳಿಕೆಗಳೇ ಪ್ರಮುಖ ಕಾರಣಗಳಾಗಿರುತ್ತದೆ. 1950ರಲ್ಲಿ ಜಾರಿಗೆ ಬಂದ ಸಂವಿಧಾನವು ಪುರುಷ ಮತ್ತು ಮಹಿಳೆಯರಿಗೆ ಸಮಾನ ಅವಕಾಶ ಎಂಬ ಪರಿಕಲ್ಪನೆಯಡಿಯಲ್ಲಿ ಮಹಿಳೆಯರಿಗೆ ವಿಶೇಷ ಸ್ಥಾನಮಾನವನ್ನು ಕಲ್ಪಿಸುವುದರ ಬಗ್ಗೆ ವಿವರಿಸಿರುತ್ತದೆ. 1974ರ ವಿಶ್ವಸಂಸ್ಥೆಯ 'ಸಮಾನತೆಯೆಡೆಗೆ' ಎಂಬ ವರದಿಯು ಜಾಗತಿಕ ಮಟ್ಟದಲ್ಲಿ ಮಹಿಳೆಯರ ಸ್ಥಿತಿಗತಿಗಳು ಸುಧಾರಿಸಬಹುದು ಎಂಬುದಾಗಿ ಬರವಸೆಯನ್ನು ಮೂಡಿಸಿತ್ತು. ಆದರೆ ಇದು ಗುರಿಯನ್ನು ಸಾಧಿಸುವುದರಲ್ಲಿ ವಿಫಲಗೊಂಡಿತು. 1992ರ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಕ್ರಾಂತಿಕಾರಿ ಮೈಲುಗಲ್ಲಾಗಿ, ಮಹಿಳೆಯರಿಗೆ ರಾಷ್ಟ್ರಾದ್ಯಂತ ಸ್ಥಳೀಯ ಸಂಸ್ಥೆಗಳಲ್ಲಿ 33% ಮೀಸಲಾತಿಯನ್ನು ನೀಡಬೇಕೆಂದು ತಿಳಿಸಿದ್ದರೂ ಈ ಉಪಕ್ರಮವೂ ಮಹಿಳೆಯರ ಶ್ರೇಯೋಭಿವೃದ್ಧಿಗೆ, ರಾಜಕೀಯ ಸಹಭಾಗಿತ್ವಕ್ಕೆ ಪೂರಕ ಅಂಶವಾಗಿ ಪರಿಣಮಿಸದೆ ಮಹಿಳೆಯರ ಮೇಲಿನ ದೌರ್ಜನ್ಯ ಮತ್ತಷ್ಟು ಹೆಚ್ಚಾಗಿರುವುದು ವ್ಯವಸ್ಥೆಯ ವಿಡಂಬನೆ ಎನ್ನಬಹುದು.

ಈ ಜಿಜ್ಞಾಸೆಗಳನ್ನು ಕೇಂದ್ರೀಕರಿಸಿ ಸಾಹಿತ್ಯ ಪರಾಮರ್ಶನ ಸಂದರ್ಭದಲ್ಲಿ ವಿವಿಧ ಅಧ್ಯಯನಗಳನ್ನು ಗಮನಿಸಿದಾಗ ಹೆಚ್ಚಿನ ಅಧ್ಯಯನಗಳು ಸ್ಥಳೀಯ ಸಂಸ್ಥೆಗಳಲ್ಲಿ ಲಿಂಗ ಸಮಾನತೆ

ಮತ್ತು ರಾಜಕೀಯ ಸಹಭಾಗಿತ್ವದ ಬಗ್ಗೆ ಉತ್ತಮ ಸಕಾರಾತ್ಮಕ ಫಲಿತಗಳನ್ನು ನೀಡಿರುವುದು ಎಲ್ಲಿಯೂ ಕಂಡುಬರುವುದಿಲ್ಲ. ಇದರಿಂದಾಗಿ ಪ್ರಸ್ತುತ ಅಧ್ಯಯನದಲ್ಲಿ ಆದ್ಯತೆಗಳನ್ನು ನೀಡಬೇಕಾಗಿರುವ ಕೆಲವು ಪ್ರಮುಖ ಪ್ರಶ್ನೆಗಳು ಸಾಹಿತ್ಯ ಪರಾಮರ್ಶನದ ಸಂದರ್ಭದಲ್ಲಿ ಹುಟ್ಟಿಕೊಳ್ಳುತ್ತದೆ.

- ರಾಜಕೀಯದಲ್ಲಿ ಮಹಿಳೆಯರ ಸಹಭಾಗಿತ್ವವನ್ನು ಉತ್ತೇಜಿಸಲು ಸರಕಾರ ಕೈಗೊಂಡ ಕ್ರಮಗಳು ಯಾವುವು?
- ಈ ಕ್ರಮಗಳು ಮಹಿಳೆಯರನ್ನು ಆಕರ್ಷಿಸಲು ಸಮರ್ಥವಾಗಿವೆಯೇ?
- ಮಹಿಳೆಯರ ರಾಜಕೀಯ ಸಹಭಾಗಿತ್ವಕ್ಕೆ ಸಾಮಾಜಿಕ ಮತ್ತು ಆರ್ಥಿಕ ಅಡೆತಡೆಗಳು ಯಾವುವು?
- ಮಹಿಳೆಯರ ರಾಜಕೀಯ ಸಹಭಾಗಿತ್ವಕ್ಕೆ ಎದುರಾಗುವ ಅಡೆತಡೆಗಳನ್ನು ಪರಿಹರಿಸುವದು ಹೇಗೆ?

ಕರ್ನಾಟಕ ರಾಜ್ಯದಲ್ಲಿ ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಮಾನವ ಅಭಿವೃದ್ಧಿ ವರದಿ 2008ರ ಪ್ರಕಾರ ಮುಂದುವರಿದ ಜಿಲ್ಲೆ ಎಂದು ಪರಿಗಣಿಸಲ್ಪಟ್ಟಿರುವ ಉಡುಪಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಮಹಿಳಾ ಸದಸ್ಯರನ್ನು ಸಂದರ್ಶಿಸಿ ಅಧ್ಯಯನ ಮಾಡಿ ಮೇಲಿನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ಅಧ್ಯಯನದ ಉದ್ದೇಶಗಳು

ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಮಾನವನ ಮೂಲಭೂತ ಅಗತ್ಯಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ದೃಷ್ಟಿಯಿಂದ ಪಾರ್ಲಿಮೆಂಟ್ ಸಂಸ್ಥೆಯ ತಳ ಸ್ತರಗಳಾದ ಜಿಲ್ಲಾ, ತಾಲೂಕು ಮತ್ತು ಗ್ರಾಮ ಪಂಚಾಯತ್‌ಗಳ ರಾಜಕೀಯದಲ್ಲಿ ಮಹಿಳಾ ಪ್ರತಿನಿಧಿಗಳ ಕಾರ್ಯವೈಖರಿ ಮತ್ತು ಮಹಿಳೆಯರು ಹೊಂದಿರುವ ಅಧಿಕಾರ ಹಾಗೂ ಅದಕ್ಕಿರುವ ಅಡೆತಡೆಗಳು ಮತ್ತು ರಾಜ್ಯದ ಮಹಿಳಾಪರ ಕಾರ್ಯಕ್ರಮಗಳನ್ನು ಅಧ್ಯಯನ ಮಾಡುವುದು ಈ ಅಧ್ಯಯನದ ಉದ್ದೇಶ. ಅಧ್ಯಯನದ ನಿರ್ದಿಷ್ಟ ಉದ್ದೇಶಗಳು ಈ ಕೆಳಗಿನಂತಿವೆ.

- ರಾಜಕೀಯದಲ್ಲಿ ಮಹಿಳೆಯರ ಸಹಭಾಗಿತ್ವವನ್ನು ಉತ್ತೇಜಿಸಲು ಸರಕಾರ ಕೈಗೊಂಡ ಕ್ರಮಗಳನ್ನು ವಿಶ್ಲೇಷಿಸುವುದು.
- ಸರಕಾರ ಕೈಗೊಂಡ ಕ್ರಮಗಳು ಮತ್ತು ಮಹಿಳಾ ರಾಜಕೀಯ ಪಾಲುಗೊಳ್ಳುವಿಕೆ ನಡುವಿನ ಸಂಬಂಧವನ್ನು ಅಧ್ಯಯನ ಮಾಡುವುದು.

- ರಾಜಕೀಯದಲ್ಲಿ ಮಹಿಳೆಯರ ಪರಿಣಾಮಕಾರಿ ಸಹಭಾಗಿತ್ವಕ್ಕೆ ಇರುವ ಸಾಮಾಜಿಕ ಮತ್ತು ಆರ್ಥಿಕ ಅಡೆತಡೆಗಳನ್ನು ಅರ್ಥಮಾಡಿಕೊಳ್ಳುವುದು.
- ಮೇಲಿನ ಅಧ್ಯಯನದ ಹಿನ್ನೆಲೆಯಲ್ಲಿ ಮಹಿಳೆಯರ ಸಹಭಾಗಿತ್ವವನ್ನು ಸುಧಾರಿಸುವ ಕೆಲವೊಂದು ಕ್ರಮಗಳನ್ನು, ಶಿಫಾರಸ್ಸುಗಳನ್ನು ನೀಡುವುದು.

ಅಧ್ಯಯನದ ವಿಧಾನ

ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ 2008ರ ಪ್ರಕಾರ, ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಉಡುಪಿ ಜಿಲ್ಲೆಯ ಕಾರ್ಕಳ, ಕುಂದಾಪುರ ಮತ್ತು ಉಡುಪಿ ತಾಲೂಕುಗಳ ಗ್ರಾಮ ಪಂಚಾಯತ್‌ಗಳನ್ನು ಉನ್ನತ, ಮಧ್ಯಮ ಮತ್ತು ಕೆಳ ಸ್ಥಾನದ ಗ್ರಾಮ ಪಂಚಾಯತ್‌ಗಳೆಂದು ವರ್ಗೀಕರಣ ಮಾಡಲಾಗಿದೆ. ಇದಕ್ಕನುಗುಣವಾಗಿ ಉಡುಪಿ ಜಿಲ್ಲೆಯ ಗ್ರಾಮ ಪಂಚಾಯತ್‌ಗಳನ್ನು ಕ್ಷೇತ್ರಕಾರ್ಯಕ್ಕೆ ಆಯ್ಕೆ ಮಾಡುವಾಗ ಒಟ್ಟು 146 ಗ್ರಾಮ ಪಂಚಾಯತ್‌ಗಳಲ್ಲಿ 16 ಗ್ರಾಮ ಪಂಚಾಯತ್‌ಗಳನ್ನು ಸಮುಚಿತ ನಮೂನೆ ವಿಧಾನದ ಮೂಲಕ ಆಯ್ಕೆಮಾಡಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಗ್ರಾಮ ಪಂಚಾಯತ್‌ಗಳನ್ನು ಆಯ್ದುಕೊಳ್ಳುವಾಗ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ಮಹಿಳಾ ಸದಸ್ಯರು ಹೆಚ್ಚಿರುವ ಮತ್ತು ಮಹಿಳಾ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿರುವ ಗ್ರಾಮ ಪಂಚಾಯತ್‌ಗಳಿಗೆ ವಿಶೇಷ ಗಮನವನ್ನು ನೀಡಲಾಗಿದೆ. ಅಲ್ಲದೇ, ನಕ್ಸಲೈಟ್ಸ್ ಪ್ರದೇಶದಲ್ಲಿರುವ ಮತ್ತು ತಾಲೂಕಿನ ಮುಖ್ಯ ಕಛೇರಿಯಿಂದ ತುಂಬಾ ದೂರವಿದ್ದು ತೀರಾ ಹಿಂದುಳಿದ ಪ್ರದೇಶದಲ್ಲಿರುವ ಗ್ರಾಮ ಪಂಚಾಯತ್‌ಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಉಡುಪಿ ಜಿಲ್ಲೆಯ ಕಾರ್ಕಳ, ಕುಂದಾಪುರ ಮತ್ತು ಉಡುಪಿ ತಾಲೂಕಿನ ತಾಲೂಕು ಪಂಚಾಯತ್‌ಗಳ ಎಲ್ಲಾ 51 ಚುನಾಯಿತ ಮಹಿಳಾ ಪ್ರತಿನಿಧಿಗಳನ್ನು ಮತ್ತು ಜಿಲ್ಲಾ ಪಂಚಾಯತ್‌ನ ಎಲ್ಲಾ 13 ಮಹಿಳಾ ಚುನಾಯಿತ ಪ್ರತಿನಿಧಿಗಳನ್ನು ಆರಿಸಿಕೊಳ್ಳಲಾಗಿರುತ್ತದೆ. ಹೀಗೆ ಒಟ್ಟು 206 ಮಹಿಳಾ ಜನಪ್ರತಿನಿಧಿಗಳನ್ನು ಮಾಹಿತಿ ಸಂಗ್ರಹಣೆಗಾಗಿ ಸಂದರ್ಶಿಸಲಾಗಿರುತ್ತದೆ. ನೇರ ಸಂದರ್ಶನದ ಪೂರ್ವದಲ್ಲಿ ಪ್ರಶ್ನಾವಳಿಯಲ್ಲಿ ಉಲ್ಲೇಖಿಸಿದ ಪ್ರಶ್ನೆಗಳ ಪ್ರಸ್ತುತತೆಯ ಬಗ್ಗೆ ಪ್ರಾಯೋಗಿಕವಾಗಿ ಸಂದರ್ಶನವನ್ನು ಮಾಡಲಾಗಿರುತ್ತದೆ. ಇಂತಹ ಸಂದರ್ಶನಗಳ ಮೂಲಕ ದೊರಕಿದ ಸಲಹೆಗಳನ್ನು ಆಧರಿಸಿ ಪ್ರಶ್ನಾವಳಿಯಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಲಾಗಿರುತ್ತದೆ. ಮಹಿಳಾ ಪ್ರತಿನಿಧಿಗಳಲ್ಲದೇ ಗ್ರಾಮ. ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ನಿಂದ ಒಟ್ಟು 50 ಪುರುಷ ಸದಸ್ಯರನ್ನು ಪ್ರಾತಿನಿಧಿಕವಾಗಿ ಆಯ್ಕೆ ಮಾಡಿ ಪ್ರಶ್ನಾವಳಿಯನ್ನು ಬಳಸಿ ಸಂದರ್ಶನಗಳನ್ನು ಮಾಡಲಾಗಿರುತ್ತದೆ. ಈ ಎಲ್ಲಾ ಸಂದರ್ಶನಗಳನ್ನು ಸಂಶೋಧಕರ ನೆಲೆಯಲ್ಲಿ ಸ್ವಯಂ ಆಗಿ ನಿರ್ವಹಿಸಲಾಗಿರುತ್ತದೆ.

ಈ ಅಧ್ಯಯನವು ಬಹುತೇಕ ಕ್ಷೇತ್ರಕಾರ್ಯಾಧಾರಿತ ಅಧ್ಯಯನವಾಗಿರುತ್ತದೆ. ಮಹಿಳಾ ಜನಪ್ರತಿನಿಧಿಗಳ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯನ್ನು ಅರಿತುಕೊಳ್ಳುವುದಕ್ಕೆ ಜಾತಿ, ಧರ್ಮ, ಶಿಕ್ಷಣ, ವಯಸ್ಸು, ಕೌಟುಂಬಿಕ ಹಿನ್ನೆಲೆ, ಉದ್ಯೋಗ, ಮುಂತಾದ ಮಾಪನಗಳನ್ನು ಬಳಸಲಾಗಿರುತ್ತದೆ. ಅವರ ರಾಜಕೀಯ ಜ್ಞಾನ, ರಾಜಕೀಯ ಚಟುವಟಿಕೆಗಳಲ್ಲಿನ ಆಸಕ್ತಿ, ರಾಜಕೀಯ ಪಾಲ್ಗೊಳ್ಳುವಿಕೆ, ರಾಜಕೀಯದಲ್ಲಿ ವಿಶ್ವಾಸ, ರಾಜಕೀಯ ಸಂಪರ್ಕಗಳು, ಸಾಮಾಜಿಕ ಪಿಡುಗುಗಳ ವಿರುದ್ಧ ಪ್ರತಿಭಟನೆ, ಯೋಜನೆಗಳ ಬಳಕೆ, ಸವಾಲುಗಳನ್ನು ಎದುರಿಸುವ ಸಾಮರ್ಥ್ಯ, ಮುಂತಾದ ಮಾಪನಗಳನ್ನು ಅವರುಗಳ ರಾಜಕೀಯ ಸಹಭಾಗಿತ್ವ ಮತ್ತು ಸಬಲೀಕರಣದ ಸಾಧ್ಯತೆಗಳ ಬಗ್ಗೆ ಅರಿತುಕೊಳ್ಳುವುದಕ್ಕೋಸ್ಕರ ಬಳಸಿಕೊಳ್ಳಲಾಗಿರುತ್ತದೆ. ಕ್ಷೇತ್ರಕಾರ್ಯಗಳಿಗೆ ಸಂಬಂಧಪಟ್ಟ ಅಂಶಗಳಿಗೆ ಪೂರಕವಾಗಿ ಹಾಗೂ ಅಧ್ಯಯನವು ಒಳಗೊಂಡ ಪ್ರಮುಖ ಉದ್ದೇಶಗಳನ್ನು ಆಧರಿಸಿ ಸೈದ್ಧಾಂತಿಕ ಮತ್ತು ತಾತ್ವಿಕ ನೆಲೆಗಟ್ಟನ್ನು ಅಭ್ಯಸಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯವನ್ನು ಉಡುಪಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಮಹಿಳಾ ಸದಸ್ಯರು ಕಾರ್ಯನಿರ್ವಹಿಸುವ ಗ್ರಾಮಗಳಲ್ಲಿ ಕೈಗೊಳ್ಳಲಾಗಿರುತ್ತದೆ. ಎರಡು ಪ್ರತ್ಯೇಕ ಸಂರಚಿತ ಪ್ರಶ್ನಾವಳಿಯ ಮೂಲಕ ಮಹಿಳಾ ಜನಪ್ರತಿನಿಧಿಗಳು, ಪುರುಷ ನೇತಾರರು ಹಾಗೂ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳಿಂದ ಪೂರಕ ಮಾಹಿತಿಗಳನ್ನು ಸಂಗ್ರಹಿಸಲಾಗಿರುತ್ತದೆ. ಗುಂಪು ಚರ್ಚೆ, ಪರಿಶೀಲನೆ, ಅವಲೋಕನ ಮತ್ತು ಸ್ಥಳೀಯ ಸಂಸ್ಥೆಗಳ ಕಲಾಪಗಳನ್ನು ವೀಕ್ಷಿಸುವುದರ ಮೂಲಕ, ಜೊತೆಗೆ, ಪ್ರಶ್ನಾವಳಿಯೊಂದೇ ಅಲ್ಲದೆ ಅನೌಪಚಾರಿಕವಾದ ಸಂದರ್ಶನಗಳಿಂದ ಹಾಗೂ ಸಂಶೋಧಕರು ಸಕ್ರಿಯವಾಗಿ ಅವರೊಂದಿಗೆ ಬೆರೆಯುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಯಿತು. ಮಹಿಳೆಯರು ಸ್ಥಳೀಯ ಸಂಸ್ಥೆಗಳ ಕಲಾಪಗಳಲ್ಲಿ ಹೇಗೆ ಮತ್ತು ಯಾವಾಗ ಭಾಗವಹಿಸುತ್ತಾರೆ? ಅವರು ತೆಗೆದುಕೊಳ್ಳುವ, ತೆಗೆದುಕೊಂಡ ತೀರ್ಮಾನಗಳು ಯಾವುವು? ಎಂಬುದರ ಬಗ್ಗೆ ಹಾಗೂ ಅಭಿವೃದ್ಧಿ ಕಾರ್ಯಗಳ ಬಗ್ಗೆ ಜನರೊಂದಿಗೆ ವಿಷಯ ವಿಶ್ಲೇಷಣೆ ಮಾಡಿ, ಗ್ರಾಮಗಳ ಮಹಿಳಾ ಸಂಘ ಸಂಸ್ಥೆಗಳು, ಪಂಚಾಯತ್‌ಗಳ ಮಾಜಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು, ಕುಟುಂಬದ ಪುರುಷರು ಮತ್ತು ಸ್ವಯಂಸೇವಾ ಸಂಸ್ಥೆಗಳ ಸದಸ್ಯರುಗಳೊಂದಿಗೆ ಚರ್ಚಿಸುವುದರ ಮೂಲಕ ಮತ್ತು ಗ್ರಾಮ ಸಭೆಗಳ ಕಲಾಪಗಳಲ್ಲಿ ಸಂಶೋಧಕರು ಸಕ್ರಿಯವಾಗಿ ಭಾಗವಹಿಸಿ ಮಹಿಳಾ ಪ್ರತಿನಿಧಿಗಳು ಯಾವ ರೀತಿಯಲ್ಲಿ ಭಾಗವಹಿಸುತ್ತಾರೆ ಎಂದು ಅರಿತುಕೊಳ್ಳಲು ಪ್ರಯತ್ನಿಸಲಾಗಿರುತ್ತದೆ.

ಪ್ರಸ್ತುತ ಕ್ಷೇತ್ರದಲ್ಲಿ ಈಗಾಗಲೇ ನಡೆದಿರುವ ಅಧ್ಯಯನಗಳು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಶೋಧನಾ ಗ್ರಂಥಗಳಲ್ಲಿ, ದಿನಪತ್ರಿಕೆಗಳಲ್ಲಿ ಮತ್ತು ಪಾಕ್ಷಿಕಗಳಲ್ಲಿ ಬಂದಂತಹ ಪ್ರಬುದ್ಧ ಪ್ರಬಂಧಗಳ

ವಿಷಯಗಳನ್ನು ಪಡೆಯಲಾಗಿರುತ್ತದೆ. ಚಿಂತಕರು, ಬುದ್ಧಿಜೀವಿಗಳು, ವಿದ್ವಾಂಸರು ಮತ್ತು ಆಸಕ್ತರ ಅಭಿಪ್ರಾಯಗಳನ್ನು ಎರಡನೆಯ ಮಾಹಿತಿಯನ್ನಾಗಿ ಪರಿಗಣಿಸಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಗಳನ್ನು ಕ್ಷೇತ್ರಕಾರ್ಯವನ್ನು ನಡೆಸಿ ಕಲೆ ಹಾಕಿದ ಮಾಹಿತಿಗಳೊಂದಿಗೆ ಮುಖಾಮುಖಿಯಾಗಿರಿಸಿ ಚರ್ಚಿಸಲಾಗಿದೆ. ಅನುಷಂಗಿಕ ಮಾಹಿತಿಯನ್ನು ಪಂಚಾಯತ್‌ರಾಜ್ ವ್ಯವಸ್ಥೆಯ ಮೂರು ಹಂತಗಳಾದ ಜಿಲ್ಲಾ, ತಾಲೂಕು ಮತ್ತು ಗ್ರಾಮ ಪಂಚಾಯತ್‌ಗಳ ದಾಖಲೆಗಳು, ಅಂಕಿಅಂಶಗಳು ಮತ್ತು ಇತರ ಮಾಹಿತಿಗಳು, ಜನಗಣತಿ ವರದಿಗಳು, ಸಂಶೋಧನಾ ಪ್ರಬಂಧಗಳು ಹಾಗೂ ಸರ್ಕಾರದ ಆದೇಶ, ಸುತ್ತೋಲೆಗಳು, ಲೇಖನಗಳು, ನಿಯತಕಾಲಿಕೆಗಳು ಮತ್ತು ಗ್ರಂಥಗಳನ್ನು ಅಧ್ಯಯನ ಮಾಡುವುದರಿಂದ ಪಡೆಯಲಾಗಿರುತ್ತದೆ. ಮಾತ್ರವಲ್ಲದೇ, ಈ ಸಂಸ್ಥೆಗಳ ದೈನಂದಿನ ಕಾರ್ಯಚಟುವಟಿಕೆಗಳ ದಾಖಲೆಗಳು, ಅಂಕಿಅಂಶಗಳು, ಸಭೆಗಳ ವಿವರಗಳು ಮುಂತಾದವುಗಳ ಆಧಾರದ ಮೇಲೆ ಸಂಗ್ರಹಿಸಲಾಗಿರುತ್ತದೆ. ಹಾಗೆಯೇ, ಪ್ರಸ್ತುತ ಅಧ್ಯಯನದ ಬಗೆಗೆ ಈಗಾಗಲೇ ನಡೆದಿರುವ ಸಂಶೋಧನಾ ಅಧ್ಯಯನಗಳು, ಸಂಶೋಧನೆಗಳ ವರದಿಗಳು, ಪ್ರೌಢ ಪ್ರಬಂಧಗಳು, ಸರಕಾರದ ಸುತ್ತೋಲೆಗಳು, ಮುಂತಾದವುಗಳ ಆಧಾರದ ಮೇಲೆ ಸಂಶೋಧನೆಗೆ ಬೇಕಾದ ಮಾಹಿತಿಗಳನ್ನು ಕಲೆಹಾಕಿ ಅಧ್ಯಯನವನ್ನು ನಡೆಸಲಾಗಿರುತ್ತದೆ.

ಹೀಗೆ ಸಾಹಿತ್ಯ ಪರಾಮರ್ಶನ ಮತ್ತು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಕೋಷ್ಟಕ ಮತ್ತು ರೇಖಾಚಿತ್ರಗಳ ಮೂಲಕ ವಿವರಿಸಲಾಗಿರುತ್ತದೆ. ಈ ವಿವರಣೆಗಳು ಕ್ರಮಬದ್ಧ ಮತ್ತು ವಸ್ತುನಿಷ್ಠವಾದ ಅಂಕಿ-ಅಂಶಗಳನ್ನು ಆಧರಿಸಿದ ಮಾಹಿತಿಯಾಗಿದೆ. ಸರಳವಾದ ಮೈಕ್ರೋಸಾಫ್ಟ್ ಎಕ್ಸೆಲ್ ತಂತ್ರಜ್ಞಾನದಲ್ಲಿ ಅಂಕಿ-ಅಂಶಗಳನ್ನು ದಾಖಲೀಕರಿಸಿ ಕೋಷ್ಟಕಗಳನ್ನು ರಚಿಸಿಕೊಳ್ಳಲಾಗಿದೆ. ಸಂಗ್ರಹಿತ ಮಾಹಿತಿಯನ್ನು ಏಕಾಂಶ, ದ್ವಿಅಂಶ ಮತ್ತು ತುಲನಾತ್ಮಕ ವಿಧಾನಗಳಿಂದ ವಿಶ್ಲೇಷಿಸಲಾಗಿರುತ್ತದೆ. ಹೀಗೆ ವಿಶ್ಲೇಷಿಸಿದ ಮಾಹಿತಿಗಳನ್ನು ಐದು ಅಧ್ಯಾಯಗಳಾಗಿ ವಿಭಾಗೀಕರಿಸಿ ವಿವರಿಸಲಾಗಿರುತ್ತದೆ.

ಅಧ್ಯಯನದ ಮಿತಿಗಳು

ಮಹಿಳಾ ಮೀಸಲಾತಿಯಿಂದಾಗಿ ಇಂದು ಮಹಿಳೆಯರು ರಾಜಕೀಯ ಅಧಿಕಾರದ ವಿನ್ಯಾಸ ಮತ್ತು ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಹೆಚ್ಚಿನ ಅವಕಾಶಗಳನ್ನು ಪಡೆದರೂ, ಸಾಮಾಜಿಕ-ಆರ್ಥಿಕ ನಿರ್ಬಂಧಗಳಿಂದಾಗಿ ಮಹಿಳೆಗೆ ಇಂದು ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಹಾಗೂ ಮಹಿಳಾ ಅಂತಸ್ತು ಮತ್ತು ಸ್ಥಾನಮಾನಗಳ ಮೌಲ್ಯಮಾಪನವು ವಿವಿಧ ಸೂಚಕಗಳಾದ ಶಿಕ್ಷಣ, ದಾಖಲಾತಿ, ಉದ್ಯೋಗ, ಸಹಭಾಗಿತ್ವ, ಮಹಿಳೆಯ ಅನುತ್ಪಾದಕ ದುಡಿಮೆಯ ವಿತರಣೆ, ಸಾರ್ವಜನಿಕ ವಲಯದಲ್ಲಿ ಮಹಿಳೆ, ನಿರ್ಧಾರ ತೆಗೆದುಕೊಳ್ಳುವುದು, ಮಹಿಳಾ ರಾಜಕೀಯ ಪ್ರಾತಿನಿಧ್ಯ

ಮಹಿಳಾ ಅಭಿವೃದ್ಧಿಯಲ್ಲಿ ತಾರತಮ್ಯತೆ ಇತ್ಯಾದಿಗಳಿಂದ ವ್ಯಕ್ತವಾಗುತ್ತದೆ ಎಂದು ಹೆಚ್ಚಿನ ಅಧ್ಯಯನಗಳು ಅಭಿಪ್ರಾಯ ವ್ಯಕ್ತಪಡಿಸಿದರೂ ಪ್ರಸ್ತುತ ಅಧ್ಯಯನದಲ್ಲಿ ಉಡುಪಿ ಜಿಲ್ಲೆಗೆ ಸಂಬಂಧಪಟ್ಟಂತೆ ಮಹಿಳಾ ಪ್ರತಿನಿಧಿಗಳ ರಾಜಕೀಯ ಸಹಭಾಗಿತ್ವ ಮತ್ತು ಲಿಂಗ ಸಮಾನತೆಗೆ ಈ ಅಧ್ಯಯನವು ಸೀಮಿತ ಚೌಕಟ್ಟಿನೊಳಗೆ ನಡೆಸಲು ಸಾಧ್ಯವಾಗಿರುತ್ತದೆಯೇ ಹೊರತು ಒಂದು ಸಮಗ್ರ ಅಧ್ಯಯನ ಸಾಧ್ಯವಾಗಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದ ವ್ಯಾಪ್ತಿ, ಮಿತಿಗಳ ಬಗ್ಗೆ ಟಿಪ್ಪಣಿಗಳನ್ನು ಮಾಡಲಾಗಿರುತ್ತದೆ. ಅಧ್ಯಯನವನ್ನು ಉಡುಪಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಮಹಿಳಾ ಪ್ರತಿನಿಧಿಗಳ ರಾಜಕೀಯ ಭಾಗವಹಿಸುವಿಕೆಗೆ ಮಾತ್ರ ಸೀಮಿತಗೊಳಿಸಲಾಗಿರುತ್ತದೆ. ಅಧ್ಯಯನವು ಸಂದರ್ಶಿತರು ನೀಡಿದ ಮಹಿತಿಗೆ ಅನುಗುಣವಾಗಿ ನಡೆಸಲಾಗಿರುತ್ತದೆ. ಆದರೆ, ಸಂದರ್ಶನದ ಸಂದರ್ಭದಲ್ಲಿ ಪ್ರಶ್ನಾವಳಿಯಲ್ಲಿ ಒಳಗೊಂಡ ಪ್ರಶ್ನೆಗಳಿಗೆ ನಿರ್ದಿಷ್ಟವಾದ ಉತ್ತರ ನೀಡುವುದಕ್ಕೆ ಹಿಂಜರಿಕೆ ತೋರಿಸಿರುವುದು, ನಿರ್ದಿಷ್ಟವಾದ ಉತ್ತರ ನೀಡಿದರೆ ಮುಂದೆ ಸಿಗಬಹುದಾದ ಸೌಲಭ್ಯಗಳು ದೊರಕದೇ ಇರಬಹುದು ಎಂಬ ಅಭಿಪ್ರಾಯವನ್ನು ಸಂಶೋಧಕರ ಜೊತೆಯಲ್ಲಿ ಹಂಚಿಕೊಂಡಿರುತ್ತಾರೆ. ಮಹಿಳಾ ಪ್ರತಿನಿಧಿಗಳು ತಾವು ಎದುರಿಸುತ್ತಿರುವ ಸಮಸ್ಯೆಗಳ ಬಗೆಗೆ ಹೆಚ್ಚು ಪ್ರಾಮುಖ್ಯತೆ ನೀಡಿದರೇ ಹೊರತು ಪ್ರತಿನಿಧಿಗಳಾಗಿ ಆಯ್ಕೆಯಾದ ನಂತರ ಯಾವ ರೀತಿಯಲ್ಲಿ ಅವರ ಸಬಲೀಕರಣವಾಯಿತು ಎಂಬುದನ್ನು ಸ್ಪಷ್ಟವಾಗಿ ತಿಳಿಸಲು ಹಿಂದೇಟು ಹಾಕಿರುತ್ತಾರೆ. ಮಾಹಿತಿಯನ್ನು ಪಡೆಯುವುದಕ್ಕೋಸ್ಕರ ಮಹಿಳಾ ಸದಸ್ಯರ ಸಭೆ ಮತ್ತು ಗುಂಪು ಚರ್ಚೆಗೆ ಸಮಯ ಮತ್ತು ಸ್ಥಳವನ್ನು ನಿರ್ಧರಿಸಿ ಸಾಕಷ್ಟು ಪೂರ್ವದಲ್ಲಿಯೇ ತಿಳಿಸಿದ್ದರೂ, ಇವುಗಳಲ್ಲಿ ಭಾಗವಹಿಸದೇ ಇರುವುದು ಹಾಗೂ ಇವರೊಂದಿಗೆ ಮಾಹಿತಿಯನ್ನು ಪಡೆಯುವ ಸಂದರ್ಭದಲ್ಲಿ ಇವರ ಕುಟುಂಬದ ಪುರುಷ ಸದಸ್ಯರು, ವಿಶೇಷವಾಗಿ ವಿವಾಹಿತ ಸದಸ್ಯೆಯಾಗಿದ್ದಲ್ಲಿ ಅವರ ಪತಿ ಅಥವಾ ಮಾವ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು. ಕುಟುಂಬದ ಪುರುಷರು ಇದ್ದ ಸಂದರ್ಭದಲ್ಲಿ ಪ್ರಶ್ನೆಗಳಿಗೆ ಉತ್ತರಿಸಲು ಅವರು ತೋರಿದ ಹಿಂಜರಿಕೆ ಸಂಶೋಧನೆಯ ಉದ್ದೇಶಗಳಿಗೆ ಅನುಸಾರವಾಗಿ ಸ್ಪಷ್ಟ ಮಾಹಿತಿಯನ್ನು ಪಡೆಯದಿರುವುದಕ್ಕೆ ಕಾರಣವಾಗಿರುತ್ತದೆ. ಇದರಿಂದಾಗಿ ಅಧ್ಯಯನವು ಸಂದರ್ಶಿತ ಪ್ರತಿನಿಧಿಗಳು ನೀಡಿದ ಮಾಹಿತಿಗೆ ಅನುಗುಣವಾಗಿಯೇ ನಡೆಸಲ್ಪಟ್ಟಿರುತ್ತದೆ. ಇದು ಫಲಿತಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇರುತ್ತದೆ.

ಉಡುಪಿ ಜಿಲ್ಲೆಯಲ್ಲಿ ಒಟ್ಟು 146 ಗ್ರಾಮ ಪಂಚಾಯತ್‌ಗಳು ಕಾರ್ಯನಿರ್ವಹಿಸುತ್ತವೆ. ಇವುಗಳಲ್ಲಿ ಅಧ್ಯಯನದ ವಿಧಾನದಲ್ಲಿ ವಿವರಿಸಲ್ಪಟ್ಟ ಮಾದರಿಗಳಿಗೆ ಅನುಸಾರವಾಗಿ 16 ಗ್ರಾಮ ಪಂಚಾಯತ್‌ಗಳ

142 ಮಹಿಳಾ ಪ್ರತಿನಿಧಿಗಳನ್ನು, ತಾಲೂಕು ಪಂಚಾಯತ್‌ನ 51 ಮಹಿಳಾ ಪ್ರತಿನಿಧಿಗಳನ್ನು ಹಾಗೂ ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳನ್ನು ಸಂದರ್ಶಿಸಲಾಗಿರುತ್ತದೆ. ಅಧ್ಯಯನವು ನಿರ್ದಿಷ್ಟ ಸಮಯದಲ್ಲಿ ಪೂರ್ಣಗೊಳ್ಳುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ. ಎಲ್ಲಾ ಮಹಿಳಾ ಪ್ರತಿನಿಧಿಗಳಿಂದ ಮಾಹಿತಿಗಳನ್ನು ಕಲೆ ಹಾಕುವುದಾದರೆ, ಅಧ್ಯಯನದ ಉದ್ದೇಶಗಳಿಗೆ ಸಂಬಂಧಪಟ್ಟ ಸ್ಪಷ್ಟ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಉದ್ದೇಶಗಳಿಗೆ ಅನುಗುಣವಾಗಿ ನಿಖರ ಮಾಹಿತಿಯನ್ನು ಪಡೆಯುವುದು ಮತ್ತು ವಿಶ್ಲೇಷಿಸುವುದಕ್ಕೋಸ್ಕರ ಒಟ್ಟು 206 ಮಹಿಳಾ ಪ್ರತಿನಿಧಿಗಳಿಂದ ಹಾಗೂ 50 ಪುರುಷ ಸದಸ್ಯರಿಂದ ವಿವರಣೆಯನ್ನು ಪಡೆಯಲಾಗಿರುತ್ತದೆ. ಎಲ್ಲಾ ಸದಸ್ಯರನ್ನು ಸಂದರ್ಶಿಸುವುದು ಆರ್ಥಿಕವಾಗಿ ಒಂದು ದೊಡ್ಡ ಹೊರೆಯಾಗುತ್ತದೆ ಅಲ್ಲದೇ, ಉಡುಪಿ ಜಿಲ್ಲೆಯ ಎಲ್ಲಾ ಪ್ರದೇಶಗಳಿಗೆ ಭೇಟಿ ಕೊಟ್ಟು ಮಾಹಿತಿಯನ್ನು ಪಡೆಯುವುದು ತ್ರಾಸದಾಯಕ. ಯಾಕೆಂದರೆ, ಸಂಶೋಧಕರು ಭೇಟಿ ನೀಡಿದ ಸಂದರ್ಭದಲ್ಲಿ ಅವರ ಅಲಭ್ಯತೆ, ಮತ್ತೆ ಮತ್ತೆ ಮಹಿಳಾ ಪ್ರತಿನಿಧಿಗಳನ್ನು ಭೇಟಿ ಆಗುವುದು ಹಾಗೂ ಅವರ ಗ್ರಾಮಗಳಿಗೆ ಹೋಗಿಬರುವುದು ಕಾರ್ಯಸಾಧುವಾಗುವುದಿಲ್ಲ.

ಗ್ರಾಮ ಪಂಚಾಯತ್ ಕಛೇರಿಗಳಲ್ಲಿ ಗ್ರಾಮ ಸಭೆಗಳ ಬಗೆಗಿನ ಸಂಪೂರ್ಣ ಮಾಹಿತಿ ಇಲ್ಲದಿರುವುದು, ಪ್ರತಿನಿಧಿಗಳ ಹಾಜರಾತಿ ಪುಸ್ತಕಗಳನ್ನು ಸರಿಯಾಗಿ ನಿರ್ವಹಿಸದಿರುವುದು ಹಾಗೂ ಕೆಲವು ಸಂದರ್ಭದಲ್ಲಿ ಗ್ರಾಮ ಪಂಚಾಯತ್‌ನಲ್ಲಿ ಲಭ್ಯವಿರುವ ಮಾಹಿತಿಗಳು ಸರಿಯಾಗಿಲ್ಲದಿರುವುದು, ಕಛೇರಿ ಸಿಬ್ಬಂದಿಗಳ ನಿರ್ಲಕ್ಷ್ಯತನ ಮತ್ತು ಉಡಾಫೆಯ ಮಾತುಗಳು ಸಂಶೋಧಕರಿಗೆ ಸರಿಯಾದ ಮಾಹಿತಿ ಪಡೆಯಲು ತಡೆಯಾಗಿ ಪರಿಣಮಿಸಿರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಇತರ ಎಲ್ಲಾ ಸಂಶೋಧಕರ ಹಾಗೆ ಪ್ರಸ್ತುತ ಅಧ್ಯಯನದ ಸಂಶೋಧಕರಿಗೂ ತಳಮಟ್ಟದಿಂದ ನಿಖರವಾದ ಮಾಹಿತಿಯನ್ನು ಪಡೆಯುವುದಕ್ಕೆ ಸಾಧ್ಯವಾಗಿರುವುದಿಲ್ಲ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂದರ್ಶಿತರು ನೀಡಿದ ಮಾಹಿತಿಗಳಿಗೆ ಅನುಗುಣವಾಗಿ ಅಧ್ಯಯನವನ್ನು ವಿಶ್ಲೇಷಿಸಿ ಫಲಿತ ಮತ್ತು ಸಲಹೆಗಳನ್ನು ನೀಡಲಾಗಿರುತ್ತದೆ.

ಅಧ್ಯಾಯಗಳು

ಪ್ರಸ್ತಾವನೆ : ಪ್ರಸ್ತಾವನೆಯು ಅಧ್ಯಯನಕ್ಕೆ ಬೇಕಾದ ಮೂಲಭೂತ ತಳಹದಿ ಮತ್ತು ಲಿಂಗ ಸಮಾನತೆ ಮತ್ತು ರಾಜಕೀಯ ಸಹಭಾಗಿತ್ವದ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವ ಉದ್ದೇಶವನ್ನು ಒಳಗೊಂಡಿರುತ್ತದೆ. ಅಧ್ಯಯನಕ್ಕೆ ಸಂಬಂಧಪಟ್ಟ ವಿವರಗಳು, ಉದ್ದೇಶಗಳು, ಸ್ವರೂಪ, ಮಹತ್ವ, ವ್ಯಾಪ್ತಿ, ಲಿಂಗಸಮಾನತೆಗೆ

ಸಂಬಂಧಪಟ್ಟ ಕಾಯ್ದೆಗಳ ಉದ್ದೇಶಗಳನ್ನು ವಿವರಿಸುತ್ತದೆ. ಅಧ್ಯಯನದ ವಿಧಾನ, ಮಾದರಿ ಗಾತ್ರ, ಇತಿಮಿತಿಗಳನ್ನು ಪ್ರಸ್ತಾವನೆ ಒಳಗೊಂಡಿರುತ್ತದೆ.

ಅಧ್ಯಾಯ 1: ಲಿಂಗ ಸಮಾನತೆ ಮತ್ತು ರಾಜಕೀಯ ಸಹಭಾಗಿತ್ವ : ಲಿಂಗಸಮಾನತೆ ಮತ್ತು ರಾಜಕೀಯ ಸಹಭಾಗಿತ್ವಕ್ಕೆ ಸಂಬಂಧಪಟ್ಟ ಸಿದ್ಧಾಂತಗಳು, ಲಿಂಗಸಮಾನತೆಯ ಪ್ರಸ್ತುತತೆ, ರಾಜ್ಯ ತೆಗೆದುಕೊಂಡ ಉಪಕ್ರಮಗಳು, ಅದರ ಅನುಷ್ಠಾನ ಮತ್ತು ಪರಿಣಾಮ ಇತ್ಯಾದಿ ಪ್ರಮುಖ ಅಂಶಗಳನ್ನು ಮತ್ತು ಪ್ರಸ್ತುತ ಕ್ಷೇತ್ರದಲ್ಲಿ ಹಿಂದೆ ಕೈಗೊಳ್ಳಲಾದಂತಹ ಪ್ರಮುಖ ಅಧ್ಯಯನಗಳ ಸ್ಥಾಪಿತ ವಾದಗಳನ್ನು ಅಧ್ಯಯನದ ಸಮಸ್ಯೆಗಳು ಮತ್ತು ಉದ್ದೇಶಗಳನ್ನು ಗಮನದಲ್ಲಿರಿಸಿ ತುಲನಾತ್ಮಕವಾಗಿ ಹಾಗೂ ವಿಮರ್ಶಾತ್ಮಕವಾಗಿ ಪ್ರಥಮ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ 2: ಅಧ್ಯಯನ ಕ್ಷೇತ್ರ ಪರಿಚಯ : ಈ ಅಧ್ಯಾಯವು ಅಧ್ಯಯನ ಕೈಗೊಂಡ ಉಡುಪಿ ಜಿಲ್ಲೆಯ ಸ್ಥೂಲ ಪರಿಚಯವನ್ನು ಒಳಗೊಂಡಿರುತ್ತದೆ. ಜಿಲ್ಲೆಯ ಭೂವಿಸ್ತೀರ್ಣ, ಭೌಗೋಳಿಕ ಲಕ್ಷಣಗಳು, ಜನಸಂಖ್ಯೆ, ಸಾಕ್ಷರತೆ, ಆರೋಗ್ಯ, ಕೃಷಿ, ಲಿಂಗಸಂಬಂಧಿ ವಿಶಿಷ್ಟತೆ, ಕೈಗಾರಿಕೆ, ಪ್ರವಾಸೋದ್ಯಮ, ಮೂಲಭೂತ ಸೌಕರ್ಯಗಳು ಹಾಗೂ ಆರ್ಥಿಕ ಬೆಳವಣಿಗೆಗಳ ಕುರಿತು ಚರ್ಚಿಸಲಾಗಿರುತ್ತದೆ. ಉಡುಪಿ ಜಿಲ್ಲೆಯಲ್ಲಿ ಅಧ್ಯಯನಕ್ಕೆ ಆಯ್ದುಕೊಂಡ ಗ್ರಾಮ ಪಂಚಾಯತ್‌ಗಳ ಹಿನ್ನೆಲೆಗಳನ್ನು ನೀಡಲಾಗಿರುತ್ತದೆ. ಇದರಿಂದಾಗಿ ಅಧ್ಯಯನವನ್ನು ಕೈಗೊಂಡ ಪ್ರದೇಶದ ವಿವರಣೆಗಳನ್ನು ಹಾಗೂ ವಿಶೇಷತೆಗಳನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ.

ಅಧ್ಯಾಯ 3: ಲಿಂಗ ಸಮಾನತೆ ಮತ್ತು ರಾಜ್ಯದ ಉಪಕ್ರಮಗಳು : ಈ ಅಧ್ಯಾಯವು ಲಿಂಗಸಮಾನತೆ ಮತ್ತು ರಾಜಕೀಯದಲ್ಲಿ ಮಹಿಳೆಯರ ಸಹಭಾಗಿತ್ವವನ್ನು ಉತ್ತೇಜಿಸಲು ರಾಜ್ಯ ಕೈಗೊಂಡ ಉಪಕ್ರಮಗಳು ಮತ್ತು ಅದರ ಪರಿಣಾಮಕಾರಿ ಅನುಷ್ಠಾನವನ್ನು ವಿವರಿಸುತ್ತದೆ. ಸ್ವಾತಂತ್ರಪೂರ್ವದಲ್ಲಿ ಮತ್ತು ಸ್ವಾತಂತ್ರ್ಯಾನಂತರ ಜಾರಿಗೆ ತಂದಂತಹ ಮಹಿಳಾಪರ ಕ್ರಮಗಳು, ಮಹಿಳೆಯರು ಸಮಾನತೆಗಾಗಿ ಪಡೆದುಕೊಂಡ ಹಕ್ಕುಗಳು, ಸ್ತ್ರೀ ಸಂಬಂಧಿತ ಕಾನೂನುಗಳು ಮತ್ತು ಶಾಸನಗಳು ಹಾಗೂ ರಾಷ್ಟ್ರ ಮತ್ತು ರಾಜ್ಯ ಮಹಿಳಾ ಆಯೋಗಗಳು ಕೈಗೊಂಡ ಉಪಕ್ರಮಗಳು, ಸ್ತ್ರೀಯರ ಅಭಿವೃದ್ಧಿ ದೃಷ್ಟಿಯಿಂದ ರಾಜ್ಯ ಕೈಗೊಂಡಿರುವ ಕೆಲವು ವಿಶೇಷ ಉಪಕ್ರಮಗಳು, ಅದರ ಪರಿಣಾಮ ಮತ್ತು ಪ್ರಸ್ತುತತೆಯ ಬಗ್ಗೆ ಈ ಅಧ್ಯಾಯವು ವಿವರಿಸುತ್ತದೆ.

ಅಧ್ಯಾಯ 4 : ರಾಜ್ಯದ ಉತ್ತೇಜನ ಕ್ರಮಗಳು ಮತ್ತು ಮಹಿಳಾ ಪಾಲ್ಗೊಳ್ಳುವಿಕೆ : ಈ ಅಧ್ಯಾಯದಲ್ಲಿ ಕ್ಷೇತ್ರಕಾರ್ಯದಲ್ಲಿ ಆಯ್ಕೆ ಮಾಡಿದ ಮಹಿಳಾ ಪ್ರತಿನಿಧಿಗಳ ಸಾಮಾಜಿಕ, ಆರ್ಥಿಕ, ರಾಜಕೀಯ,

ಸಾಂಸ್ಕೃತಿಕ ಬದುಕಿನ ಪರಿಚಯ ಮತ್ತು ರಾಜಕೀಯದಲ್ಲಿ ಮಹಿಳೆಯರ ಪರಿಣಾಮಕಾರಿ ಸಹಭಾಗಿತ್ವಕ್ಕೆ ರಾಷ್ಟ್ರದ ಉಪಕ್ರಮಗಳು ಎಷ್ಟು ಪರಿಣಾಮಕಾರಿಯಾಗಿದೆ ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ವಿಶ್ಲೇಷಿಸಲಾಗಿರುತ್ತದೆ.

ಅಧ್ಯಾಯ 5 : ರಾಜಕೀಯದಲ್ಲಿ ಮಹಿಳೆಯರ ಸಹಭಾಗಿತ್ವ ಮತ್ತು ಅಡೆತಡೆಗಳು : ಲಿಂಗಸಮಾನತೆ ಮತ್ತು ರಾಜಕೀಯ ಸಹಭಾಗಿತ್ವಕ್ಕೆ ರಾಜ್ಯದ ಪ್ರೋತ್ಸಾಹಕ ಕ್ರಮಗಳು ಉತ್ತೇಜನವನ್ನು ನೀಡಿದರೂ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ರಾಜಕೀಯ ಸಹಭಾಗಿತ್ವ ಯಾವ ಕಾರಣಗಳಿಗೋಸ್ಕರ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾಧ್ಯವಾಗಿಲ್ಲ ಎಂಬುದನ್ನು ವಿವರಿಸಲಾಗಿರುತ್ತದೆ. ಈ ರೀತಿ ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ಮಹಿಳೆಯರ ಪರಿಣಾಮಕಾರಿ ರಾಜಕೀಯ ಸಹಭಾಗಿತ್ವಕ್ಕೆ ಸಂಬಂಧಪಟ್ಟ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಡೆತಡೆಗಳನ್ನು ಚರ್ಚಿಸಲಾಗಿರುತ್ತದೆ.

ಸಮಾರೋಪ : ಅಧ್ಯಯನಕ್ಕೆ ಬಳಸಿಕೊಂಡ ಸೈದ್ಧಾಂತಿಕ ನೆಲೆಗಳನ್ನು ಮತ್ತು ಕ್ಷೇತ್ರಕಾರ್ಯದಿಂದ ದೊರಕಿದ ಅಂಶಗಳನ್ನು ಕ್ರೋಢೀಕರಿಸಿ ಅಧ್ಯಯನದ ಸಂದರ್ಭದಲ್ಲಿ ಕಂಡುಕೊಂಡ ಫಲಿತಗಳನ್ನು ವಿವರಿಸುತ್ತದೆ. ಕ್ಷೇತ್ರಕಾರ್ಯಕ್ಕೆ ಅನುಗುಣವಾಗಿ ಫಲಿತಗಳನ್ನು ಆಧಾರವಾಗಿಸಿಕೊಂಡು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ರಾಜಕೀಯ ಸಹಭಾಗಿತ್ವವನ್ನು ಯಾವ ರೀತಿಯಲ್ಲಿ ಪರಿಣಾಮಕಾರಿಯಾಗಿ ಸಾಧಿಸಬಹುದು ಎಂಬುದರ ಬಗೆಗಿನ ಸೀಮಿತ ಸಲಹೆ ಮತ್ತು ಸೂಚನೆಗಳನ್ನು ಒಳಗೊಂಡಿರುತ್ತದೆ.

ಕೊನೆಟಿಪ್ಪಣಿಗಳು

1. ಕರ್ನಾಟಕ ಸರಕಾರ, ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, *2008*, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, 2008. ಪುಟ 11–33.
2. ಅದೇ ಪುಟ ಸಂಖ್ಯೆ 11–33.
3. ಅದೇ ಪುಟ ಸಂಖ್ಯೆ 11–33.
4. ಗವರ್ನ್‌ಮೆಂಟ್ ಆಫ್ ಇಂಡಿಯಾ, ಸೆನ್ಸಸ್ ಆಫ್ ಇಂಡಿಯಾ–ಸೆನ್ಸಸ್ 1991, ಗವರ್ನ್‌ಮೆಂಟ್ ಪ್ರೆಸ್, 1991 ಪುಟ ಸಂಖ್ಯೆ 22–48.
5. ಗವರ್ನ್‌ಮೆಂಟ್ ಆಫ್ ಇಂಡಿಯಾ, ಸೆನ್ಸಸ್ ಆಫ್ ಇಂಡಿಯಾ–ಸೆನ್ಸಸ್ 2001, ಗವರ್ನ್‌ಮೆಂಟ್ ಪ್ರೆಸ್, 2001 ಪುಟ ಸಂಖ್ಯೆ 23–36.
6. ಗವರ್ನ್‌ಮೆಂಟ್ ಆಫ್ ಇಂಡಿಯಾ, ಸೆನ್ಸಸ್ ಆಫ್ ಇಂಡಿಯಾ–ಸೆನ್ಸಸ್ 2011, ಗವರ್ನ್‌ಮೆಂಟ್ ಪ್ರೆಸ್, 2011 ಪುಟ ಸಂಖ್ಯೆ 60–71.
7. ಅದೇ ಪುಟ ಸಂಖ್ಯೆ 22–26.
8. ಉಡುಪಿ ಜಿಲ್ಲಾ ಪಂಚಾಯತ್‌ನ ದಾಖಲೆಗಳಿಂದ ಪಡೆದ ಅಂಕಿ ಅಂಶಗಳು–2014–ವರದಿ.
9. ಅದೇ ಪುಟ ಸಂಖ್ಯೆ 46–58.
10. ಅದೇ ಪುಟ ಸಂಖ್ಯೆ 46–58.
11. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2014, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2014. ಪುಟ 66–67.
12. ಅದೇ ಪುಟ ಸಂಖ್ಯೆ 53–57.
13. ಜೈಥಿ ಘೋಷ್, "ವುಮೆನ್ ಇನ್ ಇಂಡಿಯನ್ ಪೊಲಿಟಿಕ್ಸ್", ಫ್ರಂಟ್‌ಲೈನ್, ಅಕ್ಟೋಬರ್ 8, 1999. ಪುಟ 12–16.
14. ಆರ್. ಸಿ. ಅಗರ್‌ವಾಲ್, ಪೊಲಿಟಿಕಲ್ ಥಿಯರಿ, ಪ್ರಿನ್ಸಿಪಲ್ಸ್ ಆಫ್ ಪೊಲಿಟಿಕಲ್ ಸಯನ್ಸ್ ಎಸ್. ಚಂದ್ ಆ್ಯಂಡ್ ಕಂಪೆನಿ, ನ್ಯೂಡೆಲ್ಲಿ, 2005. ಪುಟ 1–166.
15. ಅದೇ ಪುಟ ಸಂಖ್ಯೆ 1–166.
16. ಸರಿತಾ ಥಾಕೂರ್, *ವುಮೆನ್ ಎಂಪವರ್‌ಮೆಂಟ್: ಮಿಥ್ ಆ್ಯಂಡ್ ರಿಯಾಲಿಟಿ*, ಆಕಾಂಶ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2004. ಪುಟ 216–220.
17. ಅದೇ ಪುಟ ಸಂಖ್ಯೆ 216–220.
18. ಮರಿಲೆ ಕಾರ್ಲ್, ವುಮೆನ್ ಆ್ಯಂಡ್ ಎಂಪವರ್‌ಮೆಂಟ್, ಝೆಡ್ ಬುಕ್ ಲಿಮಿಟೆಡ್, ಲಂಡನ್, 2005. ಪುಟ 61–66.
19. ಲೆನಿನ್ ವ್ಲಾದಿಮಿರ್, ಲೆನಿನ್ ಸೆಲೆಕ್ಟೆಡ್ ವರ್ಕ್ಸ್, ಪ್ರೋಗ್ರೆಸ್ ಪಬ್ಲಿಷರ್ಸ್, ಮಾಸ್ಕೋ, ಯು.ಎಸ್.ಎಸ್.ಆರ್., 1970. ಪುಟ 390–425.
20. ಎಂ. ಚಂದ್ರ ಪೂಜಾರಿ, ಅಭಿವೃದ್ಧಿ ಮತ್ತು ರಾಜಕೀಯ, ಪಲ್ಲವ ಪ್ರಕಾಶನ, ಚನ್ನಪಟ್ಟಣ, 2014. ಪುಟ 87–88.
21. ಶಮೀಮ್ ಅಲೀಮ್(ಸಂ.), "ವುಮೆನ್ಸ್ ಡೆವಲಪ್‌ಮೆಂಟ್", ವುಮೆನ್ : ಪ್ರಾಬ್ಲಮ್ಸ್ ಆ್ಯಂಡ್ ಪ್ರೋಸ್ಪೆಕ್ಟ್ಸ್, ರಾವತ್ ಪಬ್ಲಿಕೇಷನ್, ನ್ಯೂಡೆಲ್ಲಿ, 2004. ಪುಟ 71.

22. ಮೆಹಬೂಬ್-ಉಲ್-ಹಕ್, *ರಿಫ್ಲೆಕ್ಷನ್ ಆನ್ ಹ್ಯೂಮನ್ ಡೆವಲಪ್‌ಮೆಂಟ್*, ಆಕ್ಸಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ, 1996. ಪುಟ 288.
23. ದೇವಕಿ ಜೈನ್, "ಟು ಬೀ ಆರ್ ನಾಟ್ ಟು ಬೀ: ಪ್ರಾಬ್ಲಂಸ್ ಇನ್ ಲೊಕೇಟಿಂಗ್ ವುಮೆನ್ ಇನ್ ಪಬ್ಲಿಕ್ ಪಾಲಿಸ್", *ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ*, ಫೆಬ್ರವರಿ-ಮಾರ್ಚ್, 2007. ಪುಟ 691–696.
24. ನಿವೇದಿತಾ ಮೆನನ್, *ಥೀಮ್ಸ್ ಇನ್ ಪೊಲಿಟಿಕ್ಸ್-ಜೆಂಡರ್ ಎಂಡ್ ಪೊಲಿಟಿಕ್ಸ್ ಇನ್ ಇಂಡಿಯಾ*, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ, 2001. ಪುಟ 165–180.
25. ಸುಶೀಲ್ ಕೌಶಿಕ್, *ಪೊಲಿಟಿಕಲ್ ಪಾರ್ಟಿಸಿಪೇಷನ್ ಎಂಡ್ ವುಮೆನ್ ರೆಪ್ರೆಸೆಂಟೇಷನ್ ಇನ್ ಇಂಡಿಯಾ*, ಅನ್ಮೋಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1998. ಪುಟ 36–90.
26. ಎಂ. ಚಂದ್ರ ಪೂಜಾರಿ, *ಇನ್‌ಸ್ಟಿಟ್ಯೂಶನ್ ಡಿಸೆಂಟ್ರಲೈಸೇಶನ್ ಆಂಡ್ ಡೆವಲಪ್‌ಮೆಂಟ್*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010. ಪುಟ 172–212.
27. ಅಮರ್ತ್ಯಸೇನ್, "ಜೆಂಡರ್ ಆ್ಯಂಡ್ ಕೋ-ಆಪರೇಟಿವ್ ಕಾನ್‌ಫ್ಲಿಕ್ಟ್ಸ್", ಐರನ್ ಟಿಂಕರ್ (ಸಂ.), *ಪರ್‌ಸಿಸ್ಟಿಂಗ್ ಇನ್‌ಇಕ್ವಾಲಿಟೀಸ್*, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಪುಟ 120–147.
28. ಟಿ.ಆರ್. ಚಂದ್ರಶೇಖರ್, *ಜನರ ಯೋಜನೆ ಕರ್ನಾಟಕದ ಅನುಭವಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ 10–12.
29. ಬೀನಾ ಅಗರ್ವಾಲ್, *ದ ಜೆಂಡರ್ ಎಂಡ್ ಎನ್‌ವಿರಾನ್‌ಮೆಂಟ್*, ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, 1994. ಪುಟ 2–6.
30. ಪ್ರಾಗ್ಯಾ ರೇ, 'ಪೊಲಿಟಿಕಲ್ ರೆಪ್ರೆಸೆಂಟೇಷನ್ ಆ್ಯಂಡ್ ಎಂಪವರ್‌ಮೆಂಟ್: ವುಮೆನ್ ಇನ್ ಲೋಕಲ್ ಗವರ್ನ್‌ಮೆಂಟ್ ಇನ್ಸ್‌ಟಿಟ್ಯೂಷನ್ಸ್ ಇನ್ ಬಿಹಾರ್-ಇಂಡಿಯಾ' ಪಿ.ಎಚ್.ಡಿ. ಥೀಸಿಸ್ ಸಬ್‌ಮಿಟ್ಟೆಡ್ ಟು ದ ಡಿಪಾರ್ಟ್‌ಮೆಂಟ್ ಆಫ್ ಪೊಲಿಟಿಕಲ್ ಸಯನ್ಸ್, ಸ್ಟಾಕ್‌ಹೋಮ್ ಯುನಿವರ್ಸಿಟಿ, ಸ್ವೀಡನ್ ಫಾರ್ ದ ಅವಾರ್ಡ್ ಆಫ್ ಪಿಎಚ್.ಡಿ ಡಿಗ್ರಿ, 2007. ಪುಟ 79–83.
31. ಸೀಮಾ ಸಿಂಗ್, *ಪಂಚಾಯತ್‌ರಾಜ್ ಆ್ಯಂಡ್ ವುಮೆನ್ ಎಂಪವರ್‌ಮೆಂಟ್*, ಓಷಿಯನ್ ಬುಕ್ಸ್ ಪ್ರೈವೇಟ್ ಲಿಮಿಟೆಡ್, ನ್ಯೂಡೆಲ್ಲಿ, 2003. ಪುಟ 28–66.
32. ನೂಪುರ್ ತಿವಾರಿ, "ವುಮೆನ್ ಆ್ಯಂಡ್ ಪಂಚಾಯತ್‌ರಾಜ್", *ಯೋಜನಾ*, ಜೂನ್ 2012. ಪುಟ 36–40.
33. ವೆಂಕಟೇಶ್ ಎ., *ಮಹಿಳಾ ಮೀಸಲಾತಿ ಮತ್ತು ರಾಜಕೀಯ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006. ಪುಟ 138–146.
34. ವಂದನಾ ಶಿವಾ, *ಕೊಲೋನಿಯಲಿಸಂ ಆ್ಯಂಡ್ ದ ಎವೊಲ್ಯೂಷನ್ ಆಫ್ ಮಸ್ಕ್ಯುಲಿನಿಷ್ಟ್*. ಝಡ್ ಬುಕ್ಸ್, ಅಟ್ಲಾಂಟಿಕ್ ಹೈವೇಸ್, ನ್ಯೂಜೆರ್ಸಿ, 1998. ಪುಟ 4–8.
35. ಶಿರಿನ್ ರೇ, *ಕ್ಲಾಸ್, ಕಾಸ್ಟ್ ಎಂಡ್ ಜೆಂಡರ್-ವುಮೆನ್ ಇನ್ ಪಾರ್ಲಿಮೆಂಟ್ ಇನ್ ಇಂಡಿಯಾ*, ಇಂಟರ್‌ನ್ಯಾಷನಲ್ ಐ.ಡಿ.ಇ.ಎ, 2002. ಪುಟ 1–4.

36. ದಿನೇಶ್ ಹೆಗ್ಡೆ ಎಂ., 'ಹಿಂದುಳಿದ ವರ್ಗಗಳಲ್ಲಿ ರಾಜಕೀಯ ಅನನ್ಯತೆಯ ಹುಡುಕಾಟ : ದಕ್ಷಿಣ ಕನ್ನಡ ಬಿಲ್ಲವರ ಒಂದು ಅಧ್ಯಯನ', ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಅಪ್ರಕಟಿತ ಸಂಶೋಧನಾ ಗ್ರಂಥ. ಪುಟ 68–112.
37. ವಿ. ಎಮ್. ರಾವ್, ಎಂಪವರಿಂಗ್ ರೂರಲ್ ವುಮೆನ್, ಅನ್ಮೋಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2004. ಪುಟ 18–24.
38. ಮೀನಾಕ್ಷಿ ಮಲ್ಹೋತ್ರಾ, *ಸ್ಟೇಟಸ್ ಆಫ್ ವುಮೆನ್ ಇನ್ ಪಂಚಾಯತ್‌ರಾಜ್*, ಕಾನ್ಸೆಪ್ಟ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2004. ಪುಟ 134–168.
39. ಜಿ. ಎಸ್. ಮೆಹ್ತಾ, *ಪಾರ್ಟಿಸಿಪೇಷನ್ ಆಫ್ ವುಮೆನ್ ಇನ್ ದ ಪಂಚಾಯತ್‌ರಾಜ್ ಸಿಸ್ಟಂ*, ಕನಿಷ್ಕ ಪಬ್ಲಿಷರ್ಸ್, ನ್ಯೂಡೆಲ್ಲಿ, 2002. ಪುಟ 12–128.
40. ಶುಭ ಕೆ. ಮತ್ತು ಭಾರ್ಗವ, "ಪಂಚಾಯತ್‌ರಾಜ್ ಸಿಸ್ಟಂ ಆ್ಯಂಡ್ ಪೊಲಿಟಿಕಲ್ ಎಂಪವರ್‌ಮೆಂಟ್ ಆಫ್ ವುಮೆನ್", ಮಧ್ಯಪ್ರದೇಶ, ಜರ್ನಲ್ ಆಫ್ ಸೋಷಿಯಲ್ ಸಯನ್ಸಸ್, ವಾಲ್ಯೂಮ್ 5, ನಂ. 2, ಜುಲೈ–ಡಿಸೆಂಬರ್, 2000. ಪುಟ 2–4.
41. ಸ್ನೇಹಲತಾ ಪಾಂಡಾ, "ಎಮರ್ಜಿಂಗ್ ಪ್ಯಾಟರ್ನ್ ಆಫ್ ಲೀಡರ್‌ಶಿಪ್ ಎಮಂಗ್ ರೂರಲ್ ವುಮೆನ್ ಇನ್ ಒಡಿಸ್ಸಾ", *ಇಂಡಿಯನ್ ಜರ್ನಲ್ ಆಫ್ ಅಡ್ಮಿನಿಸ್ಟ್ರೇಷನ್*, ವಾಲ್ಯೂಮ್ 42. ಪುಟ 3–4.
42. ಮಮತಾ ಜೈಸ್ವಾಲ್, *ವುಮೆನ್ ಇನ್ ಪಂಚಾಯತ್‌ರಾಜ್*, ಅನ್ಮೋಲ್ ಪಬ್ಲಿಕೇಷನ್ಸ್ ಪ್ರೈ. ಲಿ., ನ್ಯೂಡೆಲ್ಲಿ, 2003. ಪುಟ 9–28.
43. ರಾಮ್ ಅಹುಜಾ, *ರೈಟ್ ಆಫ್ ವುಮೆನ್: ಎ ಫೆಮಿನಿಸ್ಟ್ ಪರ್ಸ್ಪೆಕ್ಟಿವ್*, ರಾವತ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1992. ಪುಟ 243–310.
44. ಎಸ್. ಕೆ. ಝಾ, *"ಸೋಷಿಯಲ್ ಟ್ರಾನ್ಸ್‌ಫಾರ್ಮೇಷನ್ ಆ್ಯಂಡ್ ರೂರಲ್ ಡೆವಲಪ್‌ಮೆಂಟ್ ಥ್ರೂ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್" ಇನ್ "ಪ್ರೊಸೀಡಿಂಗ್ಸ್ ಆಫ್ ದ ಸೆಮಿನಾರ್ ಆನ್ ಫಿಫ್ಟಿ ಇಯರ್ಸ್ ಆಫ್ ಪಂಚಾಯತ್‌ರಾಜ್ ಆ್ಯಂಡ್ ರೂರಲ್ ಡೆವಲಪ್‌ಮೆಂಟ್"* ಜೆ.ಪಿ.ಸಿಂಗ್ (ಸಂ.), ಮಾನಕ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1998. ಪುಟ 33–37.
45. ಮನು ಭಾಸ್ಕರ್, "ವುಮೆನ್ ಪಂಚಾಯತ್ ಮೆಂಬರ್ಸ್ ಇನ್ ಕೇರಳ – ಎ ಪ್ರೊಫೈಲ್", *ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ*, 32(17). ಪುಟ 13–14.
46. ಬಿದಾಯತ್ ಮೊಹಂತಿ ಮತ್ತು ಗುಪ್ತಾ, ವುಮೆನ್ *ಆ್ಯಂಡ್ ಪೊಲಿಟಿಕಲ್ ಎಂಪವರ್‌ಮೆಂಟ್*, ಇನ್ಸ್‌ಟಿಟ್ಯೂಟ್ ಆಫ್ ಸೋಷಿಯಲ್ ಸಯನ್ಸಸ್, ನ್ಯೂಡೆಲ್ಲಿ, 1997. ಪುಟ 88–92.

ಅಧ್ಯಾಯ–1
ಲಿಂಗ ಸಮಾನತೆ ಮತ್ತು ರಾಜಕೀಯ ಸಹಭಾಗಿತ್ವ

ಅಧ್ಯಾಯ – 1

ಲಿಂಗ ಸಮಾನತೆ ಮತ್ತು ರಾಜಕೀಯ ಸಹಭಾಗಿತ್ವ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಜಾಗತಿಕ, ರಾಷ್ಟ್ರೀಯ ಮತ್ತು ಸ್ಥಳೀಯ ಪ್ರೌಢ ಸಂಶೋಧನಾ ಅಧ್ಯಯನಗಳನ್ನು ವಿಸ್ತೃತವಾಗಿ ಅಧ್ಯಾಯ ಒಂದರಲ್ಲಿ ವಿಮರ್ಶಾತ್ಮಕವಾಗಿ ವಿವರಿಸಲಾಗಿರುತ್ತದೆ. ವಿದ್ವಾಂಸರ ನಿಲುವುಗಳು ಮತ್ತು ಅವರು ಕಂಡುಕೊಂಡ ಫಲಿತಗಳನ್ನು ಪ್ರಸ್ತುತ ಅಧ್ಯಯನದ ನೆಲೆಗಟ್ಟನ್ನಾಗಿ ಪರಿಗಣಿಸಿ ಸಮಸ್ಯೀಕರಣದ ಸಂದರ್ಭದಲ್ಲಿ ಹುಟ್ಟಿಕೊಂಡ ಪ್ರಶ್ನೆಗಳಿಗೆ ಅನುಗುಣವಾಗಿ ಒಂದು ಸೈದ್ಧಾಂತಿಕ ಮತ್ತು ತಾತ್ವಿಕ ತಳಪಾಯವನ್ನು ರಚಿಸುವುದಕ್ಕೋಸ್ಕರ ಅಧ್ಯಾಯ ಒಂದರಲ್ಲಿ ಪ್ರಯತ್ನಿಸಲಾಗಿದೆ.

ಯಂಗ್ ಕೆ.ರವರ(1998) ಪ್ರಕಾರ, ಸಾಂಪ್ರದಾಯಿಕ ಪರಿಸರ ಮಹಿಳೆಗೆ ತುಂಬಾ ಸೀಮಿತ ಬದುಕನ್ನಿತ್ತಿದೆ. ಆಕೆಯ ಬದುಕಿನ ಬಹು ಭಾಗ ತನ್ನ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿ ಕೊಳ್ಳುವುದಕ್ಕೆ ವ್ಯಯವಾಗುತ್ತಿದೆ. ಆಕೆಗೆ ತನ್ನನ್ನು ನಿಕೃಷ್ಟವಾಗಿ ಇಟ್ಟಿರುವ ರಚನೆಗಳ ಬಗ್ಗೆ ಅರಿವೇ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಆ ಚೌಕಟ್ಟುಗಳ ವಿರುದ್ಧ ಪ್ರತಿಭಟಿಸುವ ಪ್ರಶ್ನೆ ಎಲ್ಲಿದೆ? ಆದರೆ ಆಕೆಯ ಬಿಡುಗಡೆ ಇರುವುದು ತನ್ನ ಅಸ್ತಿತ್ವದ ಹೋರಾಟದೊಂದಿಗೆ ತನ್ನನ್ನು ನಿಕೃಷ್ಟವಾಗಿ ಇಟ್ಟಿರುವ ಚೌಕಟ್ಟಿನಿಂದಲೂ ಬಿಡುಗಡೆ ಪಡೆದಾಗ ಮಾತ್ರ. ಆದುದರಿಂದಲೇ ಮಹಿಳಾವಾದಿಗಳು ವ್ಯವಸ್ಥೆ ಕೊಡ ಮಾಡುವ ರಚನೆಗಳನ್ನು ಮೀರಿ ಬೆಳೆಯಲು ಮಹಿಳೆಗೆ ಅವಕಾಶ ಕೊಡಬೇಕೆಂದು ಪ್ರಸ್ತುತ ಜಾಗತಿಕ ಮಟ್ಟದಲ್ಲಿ ಮಹಿಳೆಯರು ಸಮಾನ ಹಕ್ಕಿಗೋಸ್ಕರ ನಡೆಸುವ ಹೋರಾಟದ ಅನಿವಾರ್ಯತೆ ಮತ್ತು ಪ್ರಾಮುಖ್ಯತೆಯ ಬಗ್ಗೆ ಬೆಳಕು ಚೆಲ್ಲಿರುತ್ತಾರೆ[1].

ಮಹಿಳೆಯರ ರಾಜಕೀಯ ಸಹಭಾಗಿತ್ವದ ಕುರಿತ ಸಂವಿಧಾನದ ವಿಧಿಗಳ ಬಗ್ಗೆ ಆಳವಾಗಿ ಅಧ್ಯಯನ ನಡೆಸಿರುವ ರೋಚನಾ ಮಜುಮ್ದಾರ್ (2003) ತಮ್ಮ ಲೇಖನದಲ್ಲಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ 73ನೇ ತಿದ್ದುಪಡಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ 74ನೇ ತಿದ್ದುಪಡಿ ಮಹಿಳೆಯರಿಗೆ 33% ರಷ್ಟು ಮೀಸಲಾತಿಯನ್ನು ನೀಡಬೇಕೆಂಬ ಸಂವಿಧಾನಾತ್ಮಕ ಅವಕಾಶಗಳನ್ನು ದೇಶಾದ್ಯಂತ ಜಾರಿಗೆ ತರುವ ಪೂರ್ವದಲ್ಲಿಯೇ ಮಹಿಳೆಯರು ಭಾಗವಹಿಸುತ್ತಿದ್ದ ಉದಾಹರಣೆಗಳನ್ನು ಉಲ್ಲೇಖಿಸುತ್ತಾ ಈ ಅವಕಾಶಗಳು ಸಮಾಜದ ಎಲ್ಲಾ ಸ್ತರಗಳ ಮಹಿಳೆಯರಿಗೂ ದೊರೆಯುವಂಥ ಒಂದು ಪರಿಣಾಮಕಾರಿ ಸಾಂಸ್ಥಿಕ ವ್ಯವಸ್ಥೆಯಾಗಿರಲಿಲ್ಲ[2]. ಸಾಮಾನ್ಯವಾಗಿ ಮೇಲ್ಜಾತಿಗಳ, ಭೂಮಾಲೀಕರ

ಅಥವಾ ಶ್ರೀಮಂತ ಕುಟುಂಬಗಳ ಕೆಲ ಮಹಿಳೆಯರಿಗೆ ಮಾತ್ರ ಸೀಮಿತವಾಗಿದ್ದು ಸಮಾಜದ ದೀನದುರ್ಬಲರಿಗೆ ಚುನಾವಣೆಯ ಮೂಲಕ ಹೆಸರಿಗಷ್ಟೇ ಕೆಲವು ಸ್ಥಾನಗಳು ದೊರಯುತ್ತಿದ್ದವೇ ಹೊರತು, ಇದೊಂದು ಕ್ರಮಬದ್ಧವಾಗಿ ನಡೆಯುವ ಪ್ರಜಾಸತ್ತಾತ್ಮಕ ಆಯ್ಕೆಯಾಗಿರಲಿಲ್ಲ. ನಾಮಮಾತ್ರಕ್ಕೆ ಸದಸ್ಯತ್ವವನ್ನು ಹೊಂದಿದ್ದಂಥ ಬಹುತೇಕ ಮಹಿಳೆಯರಿಗೆ ಧ್ವನಿಯಾಗಲಿ, ಗೋಚರತೆಯಾಗಲಿ ಇರಲಿಲ್ಲ ಎಂಬ ಸಂಶೋಧಕರ ಅಭಿಪ್ರಾಯದಂತೆ ಹಿಂದೆ ಇದ್ದಂತಹ ಮಹಿಳಾ ಪ್ರಾತಿನಿಧ್ಯ ಯಾವುದೇ ರೀತಿಯಲ್ಲಿ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಗೆ ಮತ್ತು ಅವರ ಸಬಲೀಕರಣಕ್ಕೆ ಕೊಡುಗೆಯನ್ನು ನೀಡುತ್ತಿರಲಿಲ್ಲ ಎಂಬುದಾಗಿ ಹಿಂದಿನ ಚುನಾವಣಾ ವ್ಯವಸ್ಥೆಯ ಪ್ರಸ್ತುತತೆಯನ್ನು ತಮ್ಮ ಅಧ್ಯಯನದಲ್ಲಿ ಪ್ರಶ್ನಿಸಿರುತ್ತಾರೆ[3].

ರೋಶಿ ನಂದಲ್ಸ್ (1998) ತಮ್ಮ ಅಧ್ಯಯನದಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ಪರಿಣಾಮಕಾರಿ ನಿರ್ಧಾರವನ್ನು ಮಾಡುವಾಗ ಮಹಿಳೆಯರ ಪರಿಣಾಮಕಾರಿ ಸಹಭಾಗಿತ್ವವನ್ನು ಹೆಚ್ಚಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ[4]. ಹರ್‍ಯಾಣ ರಾಜ್ಯದ ರೋಹ್ಟಕ್ ಜಿಲ್ಲೆಯಲ್ಲಿ ನಡೆಸಿದ ಅಧ್ಯಯನದಿಂದ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರ ಸಹಭಾಗಿತ್ವದ ವಿಸ್ತಾರದ ಸಾಧ್ಯತೆಯ ಮೇಲೆ ಒಟ್ಟು ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳನ್ನು ವಿವರಿಸಿದ್ದಾರೆ.

ಬಿ. ಎಸ್. ಖನ್ನಾ (1994), "ವುಮೆನ್ ಇನ್ ರೂರಲ್ ಲೋಕಲ್ ಸೆಲ್ಫ್ ಗವರ್ನ್‌ಮೆಂಟ್", ಎಂಬ ಸಂಶೋಧನಾ ಗ್ರಂಥದಲ್ಲಿ ಮಹಿಳೆಯರು ಚುನಾವಣೆ ಮತ್ತು ಅಧಿಕಾರವನ್ನು ಚಲಾಯಿಸುವಂತಹ ಸಂದರ್ಭದಲ್ಲಿ ಸಮಾಜದ ಪ್ರಬಲ ಜಾತಿ ಮತ್ತು ವರ್ಗಕ್ಕೆ ಸೇರಿದ ಜನರಿಂದ ಗಲಭೆ ಮತ್ತು ಹಿಂಸಾತ್ಮಕ ಚಟುವಟಿಕೆಗಳು ನಡೆಯುವ ಭಯದಿಂದ ರಾಜಕೀಯ ಚಟುವಟಿಕೆಗಳಿಂದ ದೂರ ಉಳಿದಿರುತ್ತಾರೆ. ಅಲ್ಲದೆ ಮಹಿಳೆಯರು ಪ್ರತಿನಿಧಿಗಳಾಗಿ ರಾಜಕೀಯದಲ್ಲಿ ಸ್ಥಾನ ಪಡೆದುಕೊಂಡವರ ಸಂಖ್ಯೆ ಕಡಿಮೆಯಾಗಿರುತ್ತದೆ. ಇದಕ್ಕೆ ಚುನಾವಣೆಯಲ್ಲಿ ಅಭ್ಯರ್ಥಿಗಳಾಗಲು ಆರ್ಥಿಕ ದೃಢತೆ ಅಗತ್ಯವಾಗಿರುತ್ತದೆ. ಆದುದರಿಂದ ರಾಜಕೀಯ ಹಿನ್ನಲೆಯಿಂದ ಬಂದಂತಹ ಮತ್ತು ಆರ್ಥಿಕವಾಗಿ ಪ್ರಬಲರಾದ ಮಹಿಳೆಯರು ಮಾತ್ರ ರಾಜಕೀಯ ಅಧಿಕಾರ ಹಿಡಿಯುವಲ್ಲಿ ಸಫಲರಾಗಿದ್ದಾರೆ. ಜಾತಿ ಮತ್ತು ಧರ್ಮಗಳು ರಾಜಕೀಯ ಅಸ್ತಿತ್ವವನ್ನು ಪಡೆದಿವೆ ಎಂದು ವಿಶ್ಲೇಷಿಸಿರುತ್ತಾರೆ[5]. ಲೇಖಕರು ತಮ್ಮ ಅಧ್ಯಯನದ ಫಲಿತದಲ್ಲಿ ಮಹಿಳೆಯರಿಗೆ ಮೀಸಲಾತಿಗಳ ಮೂಲಕ ಸ್ಥಳೀಯ ಸಂಸ್ಥೆಗಳಲ್ಲಿ ಅವಕಾಶಗಳನ್ನು ಕಲ್ಪಿಸಿದರೂ ಅದು ಸಮಾಜದ ಮೇಲ್‌ಸ್ತರದಲಿರುವ ಪ್ರಬಲ ಜಾತಿಗಳು ಮತ್ತು ಆರ್ಥಿಕವಾಗಿ ಬಲಿಷ್ಠರಾಗಿರುವ ಮಹಿಳೆಯರಿಗೆ ಮಾತ್ರ ಸೀಮಿತವಾಗಿರುತ್ತದೆಯೇ ಹೊರತು ಸಮಾಜದ

ದುರ್ಬಲ ವರ್ಗದ ಮಹಿಳೆಯರಿಗೆ ಯಾವುದೇ ರೀತಿಯ ಪ್ರಯೋಜನವನ್ನು ತರುವುದಿಲ್ಲ ಎಂಬ ಕಂಡುಕೊಳ್ಳುವಿಕೆಯು ಪ್ರಸ್ತುತ ವ್ಯವಸ್ಥೆಯ ಲೋಪದೋಷಗಳಿಗೆ ಹಿಡಿದ ಕೈಗನ್ನಡಿಯಾಗಿರುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ ಎನ್ನಬಹುದು.

ನೀರಾ ದೇಸಾಯಿ ಮತ್ತು ವಿಭೂತಿ ಪಟೇಲ್‌ರವರು (1990) ಸಂವಿಧಾನದತ್ತ ರಾಜಕೀಯ ಹಕ್ಕೆಂಬುದು ವಾಸ್ತವದ ಸಂದರ್ಭದಲ್ಲಿ ಪುರುಷಪ್ರಧಾನ ಸಮಾಜದ ದಯೆಯನ್ನು ಅವಲಂಬಿಸಿದೆ. ಮಹಿಳೆಯ ಅವಕಾಶಗಳ ಬಗ್ಗೆ ಎಲ್ಲಾ ಮಾತುಗಳನ್ನು ಆಡುತ್ತಲೇ ಆಕೆಯನ್ನು ಉಪೇಕ್ಷಿಸಲಾಗುತ್ತಿದೆ. ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ಅಪರೂಪಕ್ಕೆ ದೊರೆಯುವ ಅವಕಾಶಗಳು ಆಕೆಯನ್ನು ಮಹಿಳಾ ರಾಜಕಾರಣದ ಪ್ರತಿನಿಧಿಯಾಗಿ ವರ್ತಿಸಲು ಬಿಡುವುದಿಲ್ಲ. ಸಮಾಜದಲ್ಲಿ ಮಹಿಳೆಯರು ವಿಶೇಷವಾಗಿ ಮುಸ್ಲಿಂ ಸಮುದಾಯದಲ್ಲಿ ಮಹಿಳೆಯರು ಸಾಮಾನ್ಯವಾಗಿ ತಮ್ಮ ಸ್ವ–ಅಸ್ತಿತ್ವವನ್ನು ಹೊಂದಿಲ್ಲದೇ ಇರುವುದು ಪುರುಷರಿಗಿಂತ ಭಿನ್ನವಾಗಿ ತಮ್ಮನ್ನು ರೂಪಿಸಿಕೊಳ್ಳುವ ಸವಾಲನ್ನು ಸ್ವೀಕರಿಸಲಾಗದವರಾಗಿದ್ದಾರೆ. ಅಲ್ಲದೇ ರಾಜಕೀಯವಾಗಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಬೇಕಾದಂತಹ ಹಾಗೂ ಪುರುಷರಿಗೆ ಸಂಪೂರ್ಣ ಅಧೀನರಾಗಿರುವುದು ಕಂಡುಬರುತ್ತದೆ. ಆದುದರಿಂದ ರಾಜಕೀಯ ನಿರ್ವಹಣೆಗೆ ಬೇಕಾದ ತರಬೇತಿ, ಶಿಕ್ಷಣ, ಸಾಮರ್ಥ್ಯ ಮಹಿಳೆಯರಿಗಿಲ್ಲ. ಅಂತಹ ಮಹಿಳೆಯರು ತಮ್ಮ ಪುರುಷರ ಕೈಗೊಂಬೆಯಾಗಿರುತ್ತಾರೆ ಎಂದು ವಿಶ್ಲೇಷಿಸಿದ್ದಾರೆ[6]. ಸಂಶೋಧಕರ ಅಭಿಪ್ರಾಯದಂತೆ ಮಹಿಳೆ ರಾಜಕೀಯ ಚಟುವಟಿಕೆಗಳಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಪುರುಷ ಪ್ರಧಾನ ಸಮಾಜದ ನಿಯಂತ್ರಣದಿಂದ ಹೊರಬಂದು ಅವರುಗಳಿಗೆ ರಾಜಕೀಯ ಶಿಕ್ಷಣ ಮತ್ತು ತರಬೇತಿಗಳನ್ನು ನೀಡಿದರೆ ಸಮರ್ಥವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಎಂ. ಉಷಾರವರ (2004) ಅಧ್ಯಯನದ ಪ್ರಕಾರ, ಶತಮಾನಗಳಿಂದ ಪಿತೃಪ್ರಧಾನ ಮೌಲ್ಯವನ್ನು ಅಳವಡಿಸಿಕೊಂಡಿರುವ ಶಿಕ್ಷಣ, ಆರೋಗ್ಯ ಇತ್ಯಾದಿ ಪ್ರಾಥಮಿಕ ಅಗತ್ಯತೆಗಳಿಂದಲೂ ವಂಚಿತರಾಗಿರುವ ಬಹುಸಂಖ್ಯಾತ ಜನರಿರುವ ಸಮಾಜದಲ್ಲಿ ಸ್ವತ: ಮಹಿಳೆಯರನ್ನೇ ಲಿಂಗ ಪೂರ್ವಾಗ್ರಹದಿಂದ ಹೊರಗೆಳೆಯುವುದು ಸಾಹಸದ ವಿಚಾರವಾಗಿರುತ್ತದೆ. ಸ್ವತ: ತಾವು ರಾಜಕಾರಣದಲ್ಲಿ ಭಾಗವಹಿಸುವುದಿರಲಿ ತಮ್ಮ ಸುತ್ತಲಿನ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸದ, ಸಹಿಸದ ಪಿತೃ ಪ್ರಧಾನ ಗುಣಾಂಶಗಳು ಸ್ತ್ರೀಯರಲ್ಲೇ ಬಲವಾಗಿ ನೆಲೆಯೂರಿವೆ. ಇಷ್ಟೆಲ್ಲ ಕೊರತೆಗಳ ನಡುವೆಯು ಪಂಚಾಯತ್ ರಾಜ್ ನಲ್ಲಿ ಮಹಿಳಾ ಮೀಸಲಾತಿಯು ಬದಲಾವಣೆಗಳನ್ನು ರಾಜಕೀಯದಲ್ಲಿ ತಂದಿದೆ ಎಂದು ವಿವರಿಸಿದ್ದಾರೆ[7].

ಎಂ. ಚಂದ್ರ ಪೂಜಾರಿಯವರು (2016) ತಮ್ಮ ಲೇಖನದಲ್ಲಿ ಒಂದು ಸಮಾಜದಲ್ಲಿ ದೊಡ್ಡ ಸಂಖ್ಯೆಯಲ್ಲಿ ಬಡವರಿದ್ದಾರೆ. ಅವರು ಆ ಸಮಾಜದ ಸಾಮಾಜಿಕ, ಆರ್ಥಿಕ, ರಾಜಕೀಯ ಪ್ರಕ್ರಿಯೆಗಳಿಂದ ಹೊರಗಿದ್ದಾರೆಂದೇ ಅರ್ಥ. ಆದ್ದರಿಂದ ಆ ಸಮಾಜದಲ್ಲಿ ಅಸಮಾನತೆ, ತಾರತಮ್ಯ ಕೂಡ ದೊಡ್ಡ ಪ್ರಮಾಣದಲ್ಲಿದೆಯೆಂದು ಅರ್ಥ. ವ್ಯಕ್ತಿಯ ಇರುವಿಕೆ ಪರಿಗಣಿಸಲು ಮತ್ತು ಗೌರವಿಸಲು ಬಳಸುವ ಮಾನದಂಡ ಮತ್ತು ಸಮಾನತೆಗಳ ನಡುವೆ ಸಂಬಂಧ ಇದೆ. ಮನುಷ್ಯ ಎನ್ನುವ ಕಾರಣಕ್ಕಾಗಿ ಪರಿಗಣನೆಗೆ ಮತ್ತು ಗೌರವಕ್ಕೆ ಒಳಗಾಗುವುದು ಸಮಾನತೆಯ ನೆಲೆಗಟ್ಟಾದರೆ ಇತರ ಸಂಗತಿಗಳ ಇರುವಿಕೆಗಳಾದ ಜಾತಿ, ಧರ್ಮ, ಲಿಂಗ, ವರ್ಗ ಇತ್ಯಾದಿಗಳು ಅಷ್ಟೊಂದು ಮುಖ್ಯವಾಗುವುದಿಲ್ಲ. ಮನುಷ್ಯ ಎನ್ನುವ ಕಾರಣಕ್ಕೆ ಗೌರವ ಸಿಕ್ಕಿದರೆ ವ್ಯಕ್ತಿಯ ಆತ್ಮ ವಿಶ್ವಾಸ ಹೆಚ್ಚುತ್ತದೆ. ತನ್ನ ಬೇಕು ಬೇಡಗಳನ್ನು ಮಂಡಿಸುವ ಶಕ್ತಿ ರೂಪುಗೊಳ್ಳುತ್ತದೆ. ಸಾಮಾಜಿಕ ವ್ಯವಹಾರಗಳಲ್ಲಿ ಸಮಾನರಾಗಿ ಭಾಗವಹಿಸಲು ಅನುಕೂಲವಾಗುತ್ತದೆ. ಎಲ್ಲಾ ವ್ಯವಹಾರಗಳಲ್ಲಿ ಭಾಗವಹಿಸುವ ಶಕ್ತಿ ವ್ಯಕ್ತಿಯ ಸಾಮಾಜಿಕ, ಆರ್ಥಿಕ, ರಾಜಕೀಯ ಸಬಲೀಕರಣಕ್ಕೆ ಎಡೆ ಮಾಡಿಕೊಡುತ್ತದೆ ಎಂದು ವಿವರಿಸುತ್ತಾ ಬಡತನ ನಿವಾರಣೆಯೇ ಅಭಿವೃದ್ಧಿಯ ಅದ್ಯತೆಯಾಗಬೇಕು[8]. ಬಡತನ ನಿವಾರಣೆಯಾದರೆ ಜನ ತಮ್ಮ ಹಕ್ಕುಗಳನ್ನು ಚಲಾಯಿಸಲು ಸಾಧ್ಯ ಮತ್ತು ಗುಣಮಟ್ಟದ ಪ್ರಜಾಪ್ರಭುತ್ವ ಕಾರ್ಯರೂಪಕ್ಕೆ ಬರಲು ಸಾಧ್ಯ ಎಂದು ವಿಶ್ಲೇಷಿಸಿದ್ದಾರೆ[9]. ಸಂಶೋಧಕರ ಅಭಿಪ್ರಾಯದಂತೆ ಸಮಾಜದಲ್ಲಿರುವ ಎಲ್ಲಾ ತಾರತಮ್ಯಗಳಿಗೂ ಬಡತನವೇ ಪ್ರಮುಖ ಕಾರಣವಾಗಿರುತ್ತದೆ. ಪ್ರಭುತ್ವವು ಜನರ ಅವಶ್ಯಕತೆಗಳನ್ನು ಪೂರೈಸಿ ಅವರುಗಳ ಸಬಲೀಕರಣಕ್ಕೆ ಪೂರಕ ವಾತಾವರಣವನ್ನು ಕಲ್ಪಿಸಿದಾಗ ಮಾತ್ರ ಒಂದು ಆರೋಗ್ಯಪೂರ್ಣ ಸಮಾಜ ನಿರ್ಮಾಣವಾಗುತ್ತದೆ ಹಾಗೂ ವ್ಯವಸ್ಥೆಯಲ್ಲಿರುವ ತಾರತಮ್ಯಗಳು ನಿವಾರಣೆಯಾಗುತ್ತದೆ. ಇದರಿಂದಾಗಿ ಎಲ್ಲಾ ವರ್ಗದ ಜನರು ರಾಜಕೀಯ ಚಟುವಟಿಕೆಗಳಲ್ಲಿ ಧನಾತ್ಮಕವಾಗಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ ಎಂಬ ಸ್ಪಷ್ಟ ನಿಲುವುಗಳನ್ನು ವ್ಯಕ್ತಪಡಿಸಿರುತ್ತಾರೆ.

ಸರ್ಕಾರದ ಪಾತ್ರವು ಒಂದೆಡೆ ಹೆಣ್ಣು ಮಕ್ಕಳು ಮತ್ತು ಮಹಿಳೆಯರಿಗೆ ಹಿಂಸೆ ನೀಡುವುದನ್ನು ತಡೆಗಟ್ಟಿ ಅವರನ್ನು ಸಂರಕ್ಷಿಸುವುದರಲ್ಲಿ, ಮತ್ತೊಂದೆಡೆ ಮಹಿಳೆಯರ ಸಬಲೀಕರಣಕ್ಕೆ, ಲಿಂಗ ಸಮಾನತೆಗೆ ಮತ್ತು ಪುರುಷರಲ್ಲಿ ಪರಿವರ್ತನೆಗೆ ಉತ್ತೇಜನ ನೀಡುವುದರಲ್ಲಿ ಅಡಗಿದೆ. ಈ ಪಾತ್ರವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಸಲುವಾಗಿ ರಾಜ್ಯವು ಸಾಮಾಜಿಕ ರೂಢಿ ಮತ್ತು ಆಚರಣೆಗಳಲ್ಲಿ ಬದಲಾವಣೆಗೆ ಬೆಂಬಲ ನೀಡಬೇಕು. ಪ್ರಮುಖ ಕಾನೂನು ಮತ್ತು ರಾಜಕೀಯ ಬದಲಾವಣೆಗಳಿಗೆ ಉತ್ತೇಜನ ನೀಡಬೇಕು. ಹಳ್ಳಿಯಿಂದ ಉನ್ನತ ಮಟ್ಟದವರೆಗೆ ಬಹು ಹಂತಗಳಲ್ಲಿ ಸದೃಢವಾದ

ಸಂಸ್ಥೆಗಳನ್ನು ರಚಿಸಬೇಕು ಮತ್ತು ಸಮರ್ಪಕ ಸಂಪನ್ಮೂಲಗಳನ್ನು ಒದಗಿಸಬೇಕು ಹಾಗೂ ದೊಡ್ಡ ಮಟ್ಟದ ಬಂಡವಾಳ ಹೂಡಿಕೆಯಾಗಬೇಕು. ಲಿಂಗ ಸಂಬಂಧಗಳ ಬಗ್ಗೆ ಸರ್ಕಾರ ಯಾವ ಬದಲಾವಣೆ ತರುತ್ತದೆ ಮತ್ತು ಆರ್ಥಿಕ ಉದಾರೀಕರಣದ ಮೂಲಕ ಮಹತ್ವದ ಸಾಮಾಜಿಕ-ಆರ್ಥಿಕ ಬದಲಾವಣೆಯನ್ನು ತಂದ ಅವಧಿಯಲ್ಲಿ ಯಾವ ಕಾರ್ಯತಂತ್ರ-ದೃಷ್ಟಿಕೋನ ಹೊಂದಲಾಗುತ್ತದೆ ಎಂಬುದು ಮುಂಬರುವ ದಶಕಗಳಲ್ಲಿ ಲಿಂಗ ಸಮಾನತೆ ನಿಟ್ಟಿನಲ್ಲಿ ನಿಜವಾದ ಆಂದೋಲನವೇನಾದರೂ ನಡೆಯುತ್ತದೆಯೋ? ಎಂಬುದಕ್ಕೆ ಓರೆಗಲ್ಲು ಒದಗಿಸುತ್ತದೆ ಎಂದು ಮೈತ್ರೇಯಿ ಕೃಷ್ಣರಾಜ್‌ರವರು (1988) ತಮ್ಮ ಅಧ್ಯಯನದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ[10].

ಮಾರ್ಥನುಸ್‌ಬಾಮ್ (2003) ತಮ್ಮ ಮಹಿಳಾ ಸಬಲೀಕರಣಕ್ಕೆ ಸಂಬಂಧಪಟ್ಟ ಸಂಶೋಧನಾ ಲೇಖನದಲ್ಲಿ ಗ್ರಾಮೀಣ ಆಡಳಿತದಲ್ಲಿ ಮಹಿಳೆಯರು ಆರ್ಥಿಕವಾಗಿ ಭಾಗವಹಿಸಲು ಮತ್ತು ಗ್ರಾಮೀಣ ಆಡಳಿತಾಧಿಕಾರಿಗಳು ಅವರ ಆಸಕ್ತಿ ಮತ್ತು ಅಗತ್ಯತೆಗಳಿಗೆ ಹೆಚ್ಚು ಸ್ಪಂದಿಸಲು ಭಾರತ ಸರ್ಕಾರ ಅನೇಕ ಅವಕಾಶಗಳನ್ನು ನೀಡಿದೆ. ರಾಷ್ಟ್ರದ ರಾಜಕೀಯ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಪ್ರತಿ ಪಂಚಾಯತ್‌ಗಳಲ್ಲಿಯೂ ಸಮರ್ಪಕ ಮೀಸಲಾತಿಯನ್ನು ನೀಡಲಾಗಿರುತ್ತದೆ. ಆದರೆ ವಿಪರ್ಯಾಸವೆಂಬಂತೆ ಮಹಿಳೆಯರು ಗ್ರಾಮ ಪಂಚಾಯತ್‌ನಲ್ಲಿ ಅನಿವಾರ್ಯ ಮುಖಂಡತ್ವವನ್ನು ವಹಿಸಿದರೂ ಪುರುಷರು ಅವರ ಮೇಲೆ ಪ್ರಭಾವವನ್ನು ಬೀರುತ್ತಾರೆ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಎನ್ನುವುದು ಓರ್ವ ಮತದಾರಳಾಗಿ, ಚುನಾವಣೆಯಲ್ಲಿ ಆಯ್ಕೆಯಾದ ಪ್ರತಿನಿಧಿಯಾಗಿ ಅಥವಾ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಂದರ್ಭದಲ್ಲಿ ನಾಮ್‌ಕಾವಾಸ್ತೆಯಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಸದಸ್ಯೆಯಾಗಿ ಕಾರ್ಯನಿರ್ವಹಿಸುತ್ತಾರೆ. ಪ್ರಜಾಸತ್ತಾತ್ಮಕ ವ್ಯವಸ್ಥೆ ಹೊಂದಿರುವ ದೇಶದಲ್ಲಿ ಪಂಚಾಯತ್‌ನ ಬೆಳವಣಿಗೆಯ ಬಗ್ಗೆ ಮಹಿಳೆಯರು ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ಚುನಾವಣೆಗಳಲ್ಲಿ ಎದುರಿಸುವ ದೊಡ್ಡ ಸಮಸ್ಯೆ ಎಂದರೆ ಜಾತಿ ಮತ್ತು ವರ್ಗದ ವಿಚಾರವಾಗಿರುತ್ತದೆ. ಮಹಿಳೆಯರು ಬದಲಾವಣೆಯ ಮತ್ತು ಗ್ರಾಮೀಣ ಅಭಿವೃದ್ಧಿಯ ಪ್ರತಿನಿಧಿಗಳೆಂದು ಅಧಿಕೃತವಾಗಿ ಗುರುತಿಸಲ್ಪಟ್ಟಿದ್ದರೂ, ಅವರಿಗೆ ಸಾಕಷ್ಟು ಜ್ಞಾನ, ತರಬೇತಿ, ಸಂಘಟನೆಯ ಕೊರತೆ ಅಥವಾ ಮಹಿಳೆಯರಿಂದಲೇ ಸಾಕಷ್ಟು ಬೆಂಬಲ ಇಲ್ಲದಿರುವುದು ಪ್ರಮುಖ ಕಾರಣವೆಂದು ವಿಶ್ಲೇಷಿಸಿರುತ್ತಾರೆ[11]. ಲೇಖಕರ ಅಭಿಪ್ರಾಯದಂತೆ ಮಹಿಳೆಯರು ಸ್ಥಳೀಯ ಸಂಸ್ಥೆಗಳಲ್ಲಿ ಪ್ರತಿನಿಧಿಗಳಾಗಿ ಮತ್ತು ಆಡಳಿತಾಧಿಕಾರಿಗಳಾಗಿ ಕಾರ್ಯನಿರ್ವಹಿಸುವ ಸಂದರ್ಭದಲ್ಲಿಯೂ ಪುರುಷ ಪ್ರಧಾನ ಸಮಾಜದಲ್ಲಿ ಜಾತಿ ಮತ್ತು ಅಂತಸ್ತು ಅವರುಗಳನ್ನು ಸ್ವತಂತ್ರವಾಗಿ ಹಾಗೂ ಸಮರ್ಥವಾಗಿ ಕಾರ್ಯನಿರ್ವಹಿಸದಂತೆ ತಡೆಯುತ್ತದೆ ಎಂಬುದನ್ನು ಬೆಟ್ಟು ಮಾಡಿರುತ್ತಾರೆ.

ಲೀನಾ ಗೋನ್‌ಸಲಾಯ್‌ರವರು (2001) ಭಾರತದ ಸಂವಿಧಾನದ ಚೌಕಟ್ಟಿನಲ್ಲಿ ಮಹಿಳೆಯರು ಮತ್ತು ಮಾನವ ಹಕ್ಕುಗಳು ಎಂಬ ಲೇಖನದಲ್ಲಿ ಸಂವಿಧಾನದ ಪರಿಚ್ಛೇದ 51ಎರಲ್ಲಿ ವಿವರಿಸಿದ ರಾಜ್ಯ ನಿರ್ದೇಶಿತ ತತ್ವಗಳ ಬಗ್ಗೆ ವಿಮರ್ಶಿಸುತ್ತಾ ಮಹಿಳೆಯರ ಅಭಿಮಾನಕ್ಕೆ ಧಕ್ಕೆಯಾಗುವ ಎಲ್ಲಾ ವ್ಯವಹಾರಗಳನ್ನು ಇಲ್ಲವಾಗಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿರುತ್ತದೆ ಎಂಬುದನ್ನು ಉಲ್ಲೇಖಿಸುತ್ತಾ ಸಾಮಾಜಿಕ ವ್ಯವಸ್ಥೆಯನ್ನು ಗಮನಿಸಿದರೆ ರಾಜಕೀಯ ವಲಯದಲ್ಲಂತೂ ಎಲ್ಲರೂ ಸಮಾನರು ಎಂದು ಪರಿಭಾವಿಸುವ ತತ್ವಗಳು ವಾಸ್ತವಿಕವಾಗಿ ಮಹಿಳೆಯರಿಗಿಂತ ಪುರುಷರೇ ಮೇಲ್ಪಂಕ್ತಿಯಲ್ಲಿರುತ್ತಾರೆ ಎಂಬುದನ್ನು ಸೂಚಿಸುತ್ತದೆ. ಇದಕ್ಕೆ ಮಹಿಳೆಯರ ವಿರುದ್ಧ ಕಾನೂನು ಹೇಗೆ ನಡೆದುಕೊಳ್ಳುತ್ತದೆ ಎನ್ನುವುದು ಒಳ್ಳೆಯ ಉದಾಹರಣೆ ಆಗಬಹುದು. ಭಾರತದ ಸಂವಿಧಾನ ಸಮಾನ ಹಕ್ಕುಗಳನ್ನು ಕೊಟ್ಟು ಏಳು ದಶಕಗಳಾಗುತ್ತಾ ಬಂದರೂ ಮಹಿಳೆಯರು ಮಾತ್ರ ಅನುಪಯುಕ್ತ ಗುಂಪುಗಳಾಗಿಯೇ ಉಳಿದಿರುತ್ತಾರೆ. ಸಮಾನತೆಯ ಹಕ್ಕು ಮತ್ತು ಸಮಾನ ರಕ್ಷಣೆ ಎನ್ನುವುದು ಕಾನೂನಿನ ಪ್ರಕಾರ ಒಂದು ಮೌಲ್ಯವಾಗಿ ಉಳಿದಿದೆಯೇ ಹೊರತು ವೈಯಕ್ತಿಕ ವಿಷಯಗಳಲ್ಲಿ ಯಾವುದೇ ಸ್ವಾತಂತ್ರ್ಯ ಇರುವುದಿಲ್ಲ ಎಂಬುದಾಗಿ ಪ್ರಸ್ತುತ ಭಾರತೀಯ ಸಮಾಜದಲ್ಲಿ ಮಹಿಳೆಯರು ಯಾವ ರೀತಿಯಲ್ಲಿ ಅವಕಾಶಗಳಿಂದ ವಂಚಿತರಾಗಿದ್ದಾರೆ ಎಂಬುದಾಗಿ ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ[12].

ಎಮ್‌ಡಿ. ಮಸ್ತಾನ್‌ವಾಲಿ (2002), "ವುಮೆನ್ ಆ್ಯಂಡ್ ಪೊಲಿಟಿಕ್ಸ್" ಎಂಬ ಲೇಖನದಲ್ಲಿ ಶಿಕ್ಷಣದ ವಿಸ್ತಾರ ಮತ್ತು ಆಧುನಿಕತೆಯ ಪ್ರಭಾವದಿಂದ ಮಹಿಳೆಯರು ತಮ್ಮ ರಾಜಕೀಯ ಹಕ್ಕುಗಳನ್ನು ಪ್ರತಿಷ್ಠಾಪಿಸುವುದಕ್ಕೆ ಅವರ ಸಾಮಾಜಿಕ ಮತ್ತು ರಾಜಕೀಯ ಜಾಗೃತಿ ಕಾರಣವಾಗಿವೆ. ಈ ಬದಲಾದ ಸಂದರ್ಭದಲ್ಲಿ ಅನೇಕ ಮಹಿಳಾ ಸಂಘಟನೆಗಳು ತಮ್ಮ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳಿಗಾಗಿ ಚಳುವಳಿಗಳನ್ನೇ ನಡೆಸುತ್ತಿವೆ. ಇದರ ಪರಿಣಾಮವಾಗಿ ಪಾಶ್ಚಿಮಾತ್ಯ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಆಡಳಿತಗಳು ರಾಜಕೀಯವಾಗಿ ಮಹಿಳಾ ಸಹಭಾಗಿತ್ವದ ಅಗತ್ಯ ಮತ್ತು ಪ್ರಾಮುಖ್ಯತೆಯನ್ನು ಅರಿತುಕೊಂಡಿವೆ. ಈ ಕಾರಣದಿಂದ ರಾಜಕೀಯ ಮತ್ತು ಆಡಳಿತಾತ್ಮಕ ಪ್ರಕ್ರಿಯೆಯಲ್ಲಿ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆಯ ಬಗ್ಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಪ್ರಸ್ತುತ ಕಾನೂನು ನೀಡಿದೆ ಎಂದು ವಿವರಿಸಿದ್ದಾರೆ[13].

ಒಡೆಯರ್ ಡಿ. ಹೆಗ್ಗಡೆ (2007). "ಭಾರತದಲ್ಲಿ ಮಹಿಳಾ ರಾಜಕೀಯ ಪ್ರಾತಿನಿಧ್ಯ" ಎಂಬ ಸಂಶೋಧನಾ ಲೇಖನದಲ್ಲಿ 1993ರ ಪಂಚಾಯತ್ ರಾಜ್ ಕಾಯ್ದೆಯು ಮಹಿಳಾ ರಾಜಕೀಯ ಮೀಸಲಾತಿಗಳ ಜಾರಿ ಮತ್ತು ಪಂಚಾಯತ್‌ಗಳಿಗೆ ಅಧಿಕಾರ ವಿಕೇಂದ್ರಿಕರಿಸಿದ್ದರಿಂದ ಗ್ರಾಮೀಣ

ಪ್ರದೇಶಗಳಲ್ಲಿ ಪಂಚಾಯತ್‌ಗಳ ಮಹಿಳಾ ಸದಸ್ಯರು ಹೆಚ್ಚು ರಾಜಕೀಯ ಪ್ರಜ್ಞೆ ಬೆಳಸಿಕೊಳ್ಳುತ್ತಿದ್ದಾರೆ. ಅನೇಕ ಅಭಿವೃದ್ಧಿ ವಿಷಯಗಳಲ್ಲಿ ಮಹಿಳಾ ಸದಸ್ಯರು ತರಬೇತಿ ಪಡೆದಿದ್ದಾರೆ. ಈ ಮಹಿಳಾ ಪ್ರತಿನಿಧಿಗಳು ನೀರು ಪೂರೈಕೆ, ವಸತಿ ನಿರ್ಮಾಣ, ಶಿಕ್ಷಣ ಮತ್ತು ಆರೋಗ್ಯ, ರಸ್ತೆ ನಿರ್ಮಾಣ ಮುಂತಾದ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡಿದ್ದಾರೆ. ಇದು ಗ್ರಾಮೀಣಾಭಿವೃದ್ಧಿ ಅಗತ್ಯಗಳಿಗೆ ಪೂರಕವಾಗಿದೆ. ಅನೇಕ ಗ್ರಾಮ ಪಂಚಾಯತುಗಳಲ್ಲಿ ಮಹಿಳಾ ಸದಸ್ಯರು, ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದಾರೆ[14]. ಇದೊಂದು ರಾಜಕೀಯ ಸಶಕ್ತೀಕರಣದ ಪ್ರಗತಿಪರ ನಿಲುವಾಗಿದೆ ಎಂದು ಲೇಖಕರು ಮಹಿಳೆಯರ ರಾಜಕೀಯ ಸಹಭಾಗಿತ್ವದ ಪರಿಣಾಮಗಳ ಬಗ್ಗೆ ಮತ್ತು ಇದರಿಂದ ಮಹಿಳೆಯರ ಸಬಲೀಕರಣದ ಸಾಧ್ಯತೆಯ ಬಗ್ಗೆ ವಿಮರ್ಶಾತ್ಮಕವಾಗಿ ವಿವರಿಸಿದ್ದಾರೆ.

ಮಹಿಳೆಯರಿಗೆ ಸಕ್ರಿಯ ರಾಜಕಾರಣದಲ್ಲಿ ಭಾಗವಹಿಸಲು ಅವಕಾಶಗಳನ್ನು ತೆರೆದಿಟ್ಟ ತಕ್ಷಣವೇ ಲಿಂಗ ಸಮಾನತೆ ಗುರಿ ಮುಟ್ಟಿದಂತೆ ಎಂದು ಎಂದಿಗೂ ಭಾವಿಸಬಾರದು. ಸ್ಥಳೀಯ ಸಂಸ್ಥೆಗಳಿಂದ ಹಿಡಿದು ರಾಜ್ಯ, ರಾಷ್ಟ್ರ ರಾಜಕಾರಣದವರೆಗೆ, ಎಲ್ಲಿ ಮಹಿಳೆಯರಿಗೆ ಅಧಿಕಾರ ನೀಡಿಬಿಟ್ಟರೆ ತನ್ನ ಸ್ವಾಮ್ಯ ತಪ್ಪಿಹೋಗುವುದೋ ಎಂಬ ಪುರುಷ ಕೇಂದ್ರಿತ ವ್ಯವಸ್ಥೆ ಭಯವೇ ಮಹಿಳೆಯರು ಅರ್ಥಪೂರ್ಣವಾಗಿ ಪ್ರಜಾಸತ್ತಾತ್ಮಕ ವಿರೋಧಿಕರಣದ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಅಡ್ಡಿಯಾಗಿರುತ್ತದೆ. ಸಾಮಾಜಿಕ ನ್ಯಾಯ ಸ್ಥಾಪನೆಗೆ ಎಲ್ಲ ರಾಜಕೀಯ ಪಕ್ಷಗಳು ಬದ್ಧವೆಂಬ ಸಂದೇಶ ಆಗಾಗ್ಗೆ ದೊರೆಯುತ್ತಿದ್ದರೂ ವಾಸ್ತವದಲ್ಲಿ ಮಹಿಳೆಯರೊಡನೆ ಅಧಿಕಾರವನ್ನು ಹಂಚಿಕೊಳ್ಳುವ ಪ್ರಶ್ನೆ ಬಂದಾಗ, ಅವೈಚಾರಿಕ ಕಾರಣಗಳನ್ನು ಮುಂದೊಡ್ಡಿ ಅವರ ಸಕ್ರಿಯ ರಾಜಕೀಯ ಭಾಗವಹಿಸುವಿಕೆಗೆ ತಡೆಯೊಡ್ಡುತ್ತಾರೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ಆರ್. ಇಂದಿರಾರವರು (2012), ಪುರುಷ ಪ್ರಧಾನ ಸಮಾಜ ತನ್ನ ಏಕಸ್ವಾಮ್ಯತೆಯನ್ನು ಮುಂದುವರಿಸುವುದಕ್ಕೋಸ್ಕರ ಮಹಿಳೆಯರನ್ನು ದ್ವಿತೀಯ ದರ್ಜೆಯ ನಾಗರಿಕರನ್ನಾಗಿ ಪರಿಗಣಿಸಿ ಅವರುಗಳನ್ನು ವ್ಯವಸ್ಥಿತವಾಗಿ ಅಧಿಕಾರ ಕೇಂದ್ರದಿಂದ ಹೊರಗಿಟ್ಟಿರುವುದೇ ಮಹಿಳೆಯರು ಸಮರ್ಥರಾಗಿದ್ದರೂ ತಮ್ಮ ಅಸ್ತಿತ್ವವನ್ನು ತೋರ್ಪಡಿಸದಿರುವುದಕ್ಕೆ ದೊಡ್ಡ ತಡೆ ಎಂಬ ವಾಸ್ತವಿಕ ಅಂಶವನ್ನು ತಮ್ಮ ಅಧ್ಯಯನದಲ್ಲಿ ಎಳೆಎಳೆಯಾಗಿ ವಿವರಿಸಿರುತ್ತಾರೆ[15].

ಗ್ರಾಮೀಣ ಭಾರತದ ಸ್ಥಳೀಯ ಸಂಸ್ಥೆಗಳ ಯಶಸ್ಸು ಮತ್ತು ವೈಫಲ್ಯಗಳ ಬಗ್ಗೆ ಅಧ್ಯಯನವನ್ನು ನಡೆಸಿದ ವಿಪುಲ್ ಪಾಂಡೆರವರು (2013), ಯಾವ ರೀತಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯ ಜನರನ್ನು ವ್ಯವಸ್ಥಿತವಾಗಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಹೊರಗಿಡಲಾಗುತ್ತದೆ ಎನ್ನುವುದನ್ನು ವಿವರಿಸಿರುತ್ತಾರೆ. ಅವರ ಪ್ರಕಾರ, ಭಾರತದ ಬಹು ಸಂಖ್ಯೆಯ ಮಹಿಳೆಯರು

ವಾಸಿಸುವುದು ಗ್ರಾಮೀಣ ಪ್ರದೇಶಗಳಲ್ಲಿ. ಈ ಪ್ರದೇಶಗಳು ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಗ್ರಾಮೀಣ ಆಡಳಿತವನ್ನು ನಿರ್ವಹಿಸುವಂಥ ಪಂಚಾಯಿತಿ ವ್ಯವಸ್ಥೆಗೆ ಭಾರತದಲ್ಲಿ ಒಂದು ಸುದೀರ್ಘ ಇತಿಹಾಸವಿದ್ದರೂ ಅದರಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಗೆ ಅವಕಾಶ ದೊರೆತದ್ದು ಕೇವಲ ಎರಡು ದಶಕಗಳ ಹಿಂದೆ. ಸಂವಿಧಾನ ದೇಶದ ರಾಜಕೀಯ ಜೀವನದಲ್ಲಿ ಪಾಲ್ಗೊಳ್ಳಲು ಸ್ತ್ರೀ-ಪುರುಷರಿಬ್ಬರಿಗೂ ಸಮಾನ ಅವಕಾಶಗಳನ್ನು ನೀಡಿದ್ದರೂ ವಾಸ್ತವದಲ್ಲಿ ಮಹಿಳೆಯರು ಈ ವ್ಯವಸ್ಥೆಯಿಂದ ಹೆಚ್ಚು ಕಡಿಮೆ ಹೊರಗಡೆಯೇ ಉಳಿದಿದ್ದಾರೆ. ಶತಮಾನಗಳ ಕಾಲ ಅವರನ್ನು ಸಮಾಜದ ಮುಖ್ಯವಾಹಿನಿಯಿಂದ ದೂರವಿಟ್ಟಿದ್ದ ಪುರುಷ ಪ್ರಧಾನ ಮೌಲ್ಯಾಚರಣೆಗಳು ಮಹಿಳೆಯರ ಪಾಲಿಗೆ ಪ್ರಜಾಸತ್ತಾತ್ಮಕ ಅಧಿಕಾರವನ್ನು ಮತ ಚಲಾವಣೆಗೆ ಮಾತ್ರ ಸೀಮಿತಗೊಳಿಸಿದ್ದವೇ ಹೊರತು, ಸಮಾಜದ ಅಭಿವೃದ್ಧಿಯ ರೂಪುರೇಷೆಗಳನ್ನು ನಿರ್ಧರಿಸುವಂತಹ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಅವಕಾಶವನ್ನು ನೀಡಲಿಲ್ಲ ಎಂದು ಗುರುತಿಸಿದ್ದಾರೆ[16].

ಎಂ. ದಿನೇಶ್ ಹೆಗ್ಡೆರವರು (2007) ತಮ್ಮ "ಅಭಿವೃದ್ಧಿ ಅಂಚಿನ ಸಮುದಾಯಗಳು: ಹಿಂದುಳಿದ ವರ್ಗಗಳ ಒಂದು ಅಧ್ಯಯನ", ಎನ್ನುವ ಸಂಶೋಧನಾ ಲೇಖನದಲ್ಲಿ ಎಲ್ಲಾ ಸಾರ್ವಜನಿಕ ಕ್ಷೇತ್ರಗಳನ್ನು 1990ರ ನಂತರ ತೀವ್ರವಾಗಿ ಆವರಿಸಿಕೊಂಡ ಜಾಗತೀಕರಣ ಉದಾರೀಕರಣ ಹಾಗೂ ಖಾಸಗೀಕರಣ ನೀತಿಯು ಹಿಂದುಳಿದ ವರ್ಗಗಳ ರಾಜಕೀಯ ಹಿನ್ನಡೆಗೆ ಕಾರಣವಾಗಿದೆ. ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಂಭವಿಸಿದ ಈ ಬದಲಾವಣೆಯಿಂದಾಗಿ 'ಆರ್ಥಿಕ ಪ್ರಗತಿ' ಮಾತ್ರವೇ ರಾಜ್ಯದ ಪ್ರಮುಖ ಉದ್ದೇಶ ಹಾಗೂ ಸಾಧನೆಯ ಮಾನದಂಡವೆಂದು ಬಿಂಬಿಸಲಾಗುತ್ತಿದ್ದು, ಇಂದು ಅದು ಸಾರ್ವಜನಿಕ ಕ್ಷೇತ್ರದಲ್ಲಿ ಕೇಂದ್ರಿಯ ಸ್ಥಾನವನ್ನು ಅಕ್ರಮಿಸಿಕೊಂಡಿದೆ. ನಂತರದ ದಿನಗಳಲ್ಲಿ ಆಳವಡಿಸಲಾದ ಮೀಸಲಾತಿ ನೀತಿಯು ಹಿಂದುಳಿದ ವರ್ಗಗಳ ರಾಜಕೀಯ ಕ್ಷೇತ್ರದಲ್ಲಿನ ಹೋರಾಟದ ತೀವ್ರತೆಯನ್ನು ಇಳಿಮುಖಗೊಳಿಸಿತು ಎಂದು ಗುರುತಿಸಿರುತ್ತಾರೆ[17]. ಸಂಶೋಧಕರು ಸಾಮಾನ್ಯ ಜನರ ಕಲ್ಯಾಣವನ್ನು ಸಾಧಿಸುವ ಉದ್ದೇಶದಿಂದ 1990ರ ದಶಕದ ನಂತರ ಅಳವಡಿಸಿಕೊಂಡ ಆಧುನೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆ ಕೂಡಾ ತೋರಿಕೆಗೆ ಮಾತ್ರ, ದೀನ ದುರ್ಬಲರ ಅಭಿವೃದ್ಧಿ ಎಂಬುದಾಗಿ ಉಲ್ಲೇಖಿಸಿದ್ದವೆಯೇ ಹೊರತು ಇದರಿಂದಾಗಿ ಗರಿಷ್ಠ ಲಾಭವನ್ನು ಪಡೆದದ್ದು ಸಮಾಜದ ಮೇಲ್‌ಸ್ತರದ ಜನಸಮುದಾಯ ಮಾತ್ರ ಎಂಬ ಕಂಡುಕೊಳ್ಳುವಿಕೆಯು ಪ್ರಸ್ತುತ ವ್ಯವಸ್ಥೆಗೆ ಹಿಡಿದ ಕೈಗನ್ನಡಿ ಎಂಬುದಾಗಿ ಹೇಳಬಹುದು.

ಸಿ.ಎನ್. ಶಂಕರ್ ರಾವ್‌ರವರು (2006), "ಮಾನವಹಕ್ಕುಗಳು ಮತ್ತು ಲಿಂಗ ಸಮಾನತೆ", ಎಂಬ ಗ್ರಂಥದಲ್ಲಿ ಲಿಂಗ ಸಂಬಂಧ ರಾಜಕೀಯವು ಸಾಮಾಜಿಕ ಮತ್ತು ಸಾಂಸ್ಕೃತಿಕ ರಚನೆಯಿಂದ ಪುರುಷ ಮತ್ತು ಮಹಿಳೆಯರ ನಡುವೆ ಬೆಳೆದು ಬಂದಿರುವ ಒಂದು ಸಾಮಾಜಿಕ-ರಾಜಕೀಯ ಸಂಬಂಧ; ಇದನ್ನು ಸಮಾಜದ ನಂಬಿಕೆ, ನಿಯಮ, ಆದರ್ಶ ಹಾಗೂ ಮೌಲ್ಯಗಳು ನಿರೂಪಿಸುತ್ತವೆ. ಈ ಸಂಬಂಧದ ಮುಖ್ಯ ಲಕ್ಷಣವೆಂದರೆ 'ಅಸಮಾನತೆ'. ಅದು ಪುರುಷರ ಆಳ್ವಿಕೆಯನ್ನು ಮಹಿಳೆಯರ ಪರಾಧೀನತೆಯನ್ನು ಎತ್ತಿ ಹಿಡಿಯುತ್ತದೆ, ಅಂದರೆ ಪುರುಷ ಮತ್ತು ಮಹಿಳೆಯರ ನಡುವೆ ಏರ್ಪಡುವ ಒಂದು ಬಗೆಯ ಅಸಮಾನ ಅಧಿಕಾರ ಸಂಬಂಧ. ಈ ಅಸಮಾನ ಅಧಿಕಾರ ಸಂಬಂಧವೇ ಇತರ ವ್ಯವಸ್ಥೆಗಳಲ್ಲಿ ಲಿಂಗ ಅಸಮಾನತೆಯು ಬೇರೂರಲು ಕಾರಣವಾಗಿದೆ ಎಂದು ವಿಶ್ಲೇಷಿಸಿದ್ದಾರೆ[18].

ರೀಚಾ ಉಪಾಧ್ಯಾಯರವರ (2010) ಪ್ರಕಾರ, ಸ್ತ್ರೀ-ಪುರುಷರ ಸಾಮಾಜಿಕ ಸಮಾನತೆಯ ನೆಲೆಗಳನ್ನು ಸಂವಿಧಾನದಲ್ಲಿ ಅಂತರ್ಗತಗೊಳಿಸುವ ಮೂಲಕ ಮಹಿಳಾ ಸದಸ್ಯೆಯರಿಗೆ ಒಂದು ಹೊಸ ಅವಕಾಶವನ್ನು ನೀಡಲಾಯಿತು. ಜೊತೆಗೆ ಸಂವಿಧಾನವು ಕೆಲವು ತೀರ್ಮಾನಗಳನ್ನು ಕೈಗೊಂಡಿತು. ಅದುವೇ ಲಿಂಗಾಧಾರಿತವಾದ ತಾರತಮ್ಯಗಳ ನಿಷೇಧ, ಮಹಿಳಾ ಸದಸ್ಯೆಯರ ಜೈವಿಕ, ಮಾನಸಿಕ ಹಾಗೂ ಸಾಮಾಜಿಕ ಪರಿಸ್ಥಿತಿಯನ್ನು ಅನುಲಕ್ಷಿಸಿ ಅವರಿಗೆ ರಾಜ್ಯವು ವಿಶೇಷ ಕಾಳಜಿಯನ್ನು ವಹಿಸುವಂತಹ ಉಪಬಂಧಗಳನ್ನು ರಚಿಸಲು ಅಧಿಕಾರ ನೀಡುವುದು ಮತ್ತು ಮಹಿಳೆಯರಿಗಾಗಿಯೇ ನಿರ್ದಿಷ್ಟ ನಿರ್ದೇಶನಗಳನ್ನು ನೀಡುವ ನಿರ್ದೇಶಕ ತತ್ವಗಳನ್ನು ಸಂರಚಿಸುವುದು. ಹೀಗೆ ಮಹಿಳಾ ಅಭಿವೃದ್ಧಿಗೆ ಪ್ರಗತಿಯ ಮಜಲುಗಳನ್ನು ನೀಡಿದೆ ಎಂದು ವಿವರಿಸಿದ್ದಾರೆ[19]. ಮಹಿಳಾ ಅಭಿವೃದ್ಧಿಗೆ ಅವಶ್ಯಕವಾಗಿರುವಂತಹ ಪೂರಕ ವಾತಾವರಣವನ್ನು ಕಲ್ಪಿಸಿರುವುದು ರಾಷ್ಟ್ರದ ಹೊಣೆಯಾಗಿರುತ್ತದೆ ಎಂಬ ವಾದವನ್ನು ತಮ್ಮ ಲೇಖನದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ.

ಅರ್ಶಿ ಪರ್ವೀನ್ (2008) ತಮ್ಮ "ಸೋಷಿಯಲ್ ಜಸ್ಟೀಸ್ ಆ್ಯಂಡ್ ಇಂಡಿಯನ್ ವುಮೆನ್" ಎಂಬ ಗ್ರಂಥದಲ್ಲಿ ಸ್ವಾತಂತ್ರ್ಯ ನಂತರ 60ರ ದಶಕದಲ್ಲಿ ಮಹಿಳೆಯರ ಸಮಸ್ಯೆಗಳ ಕುರಿತ ವಿಚಾರ, ಸಂವಾದಗಳು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗಳಾಗತೊಡಗಿದವು. ಮಹಿಳಾಪರ ಚಿಂತಕರು, ಮಹಿಳೆಯರ ರಾಜಕೀಯ ಪ್ರಜ್ಞೆಯ ಆಳ, ಹರವು ಕುರಿತು ಅಧ್ಯಯನ ಮತ್ತು ಸಂಶೋಧನೆ ಮಾಡಲು ತೊಡಗಿದರು. ಮಹಿಳೆಯರ ಹಕ್ಕು ಮತ್ತು ಸ್ವಾತಂತ್ರ್ಯದ ಲಭ್ಯತೆಯನ್ನು ಆಕೆಯ ಅಸ್ತಿತ್ವದ ನೆಲೆಗಳ ಹಿನ್ನೆಲೆಯಲ್ಲಿ ಚರ್ಚಿಸತೊಡಗಿದರು. ಇದರಿಂದಾಗಿ ಸ್ವಾತಂತ್ರ್ಯಾನಂತರ ಸಂವಿಧಾನದಲ್ಲಿ ಸಮಾನ ಅವಕಾಶಗಳನ್ನು ನೀಡಲಾಯಿತು. ಆದರೂ ಸಂವಿಧಾನಬದ್ಧವಾಗಿ ದೊರಕುವ ಹಕ್ಕುಗಳನ್ನು

ಮಹಿಳೆ ಪಡೆಯುವಲ್ಲಿ ಅನತಿ ದೂರದಲ್ಲೆ ಉಳಿದಳು. ಅದರಲ್ಲೂ ವಿಶೇಷವಾಗಿ ರಾಜಕೀಯ ವಲಯದಲ್ಲಿ ಮಹಿಳೆಯ ಭಾಗವಹಿಸುವಿಕೆ ಅತ್ಯಂತ ಕನಿಷ್ಟಮಟ್ಟದಲ್ಲಿದೆ ಎಂಬ ಸಂಗತಿಯನ್ನು ಮಹಿಳಾ ಸ್ಥಾನಮಾನ ಅಧ್ಯಯನ ಕುರಿತ ರಾಷ್ಟ್ರೀಯ ಸಮಿತಿ ಸಲ್ಲಿಸಿದ 'ಸಮಾನತೆಯೆಡೆಗೆ'[20] ವರದಿ ಸಾಬೀತುಪಡಿಸಿದೆ. ಅಲ್ಲದೆ ಮಹಿಳೆಯರು ಸ್ವತಃ ತಾವಾಗಿಯೇ ರಾಜಕೀಯ ಪ್ರವೇಶಿಸಲು ಸಾಧ್ಯವಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ನೀಡಿರುತ್ತದೆ ಎಂದು ತಿಳಿಸಿದ್ದಾರೆ.

ಸಾರ್ವಜನಿಕ ಅಥವಾ ರಾಜಕೀಯ ವಲಯದಲ್ಲಿ ಪುರುಷರಿಗೆ ಯಾವುದೇ ತಡೆಯಿಲ್ಲದೆ ದೊರೆಯುವ ಅವಕಾಶಗಳು ಮತ್ತು ಸಾರ್ವಜನಿಕ ವಲಯದಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಇರುವ ಅಡಚಣೆಗಳಿಂದಾಗಿ ಮಾನವ ಹಕ್ಕುಗಳನ್ನು ಕೇವಲ ಪುರುಷ ಕೇಂದ್ರಿತ ಅನುಭವಗಳಿಂದಷ್ಟೇ ಅರ್ಥೈಸಲಾಗುತ್ತಿದೆ. ಇದರಿಂದಾಗಿ ಮಹಿಳೆಯರು ಒಳಗಾಗುವ ಲಿಂಗ ನಿರ್ದಿಷ್ಟ ಉಲ್ಲಂಘನೆಗಳು ಮಾನವ ಹಕ್ಕುಗಳಿಂದ ದೊರೆಯುವ ರಕ್ಷಣೆಯಿಂದ ಹೊರಗೆ ಉಳಿದಿವೆ ಎಂದು ಭಾವನಾ ಝಾರ್ಖರವರು (1998) ತಮ್ಮ "ವುಮೆನ್ ಆ್ಯಂಡ್ ಪೊಲಿಟಿಕ್ಸ್ ಇನ್ ಇಂಡಿಯಾ" ಎಂಬ ಅಧ್ಯಯನದಲ್ಲಿ ಉಲ್ಲೇಖಿಸಿರುತ್ತಾರೆ[21].

"ಪಂಚಾಯತ್‌ರಾಜ್ ವ್ಯವಸ್ಥೆ"ಯನ್ನು ಏಕರೂಪದಿಂದ ಅನುಷ್ಠಾನಕ್ಕೆ ತರಲು ಹಾಗೂ ಅದಕ್ಕೊಂದು ಸಾಂವಿಧಾನಿಕ ಸ್ಥಾನಮಾನವನ್ನು ನೀಡಲು 1993ರಲ್ಲಿ ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿ ಕಾಯ್ದೆಯನ್ನು ಕೈಗೊಳ್ಳಲಾಯಿತು. ಈ ತಿದ್ದುಪಡಿ ಕಾಯ್ದೆಯ ಪ್ರಮುಖ ಉದ್ದೇಶ 'ಮಹಿಳಾ ಸಶಕ್ತೀಕರಣ'ವಾಗಿತ್ತು. ಸ್ತ್ರೀಯರಿಗೆ ರಾಜಕೀಯ ಅಧಿಕಾರ ನೀಡದೆ ಕೇವಲ ಆರ್ಥಿಕ ಹಾಗೂ ಸಾಮಾಜಿಕ ಅಂತಸ್ತಿನ ಭರವಸೆ ನೀಡುವುದು ನಿರರ್ಥಕ. ಗ್ರಾಮಗಳ ಹಾಗೂ ಪಟ್ಟಣಗಳ ಆಡಳಿತ ನಿರ್ವಹಣೆಯ ದೃಷ್ಟಿಯಿಂದ ಸ್ತ್ರೀಯರಿಗೂ ಮೀಸಲಾತಿ ನೆಲೆಯಲ್ಲಿ ಅವಕಾಶವೊಂದನ್ನು ಕಡ್ಡಾಯವಾಗಿ ಎಂಬಂತೆ ಕಲ್ಪಿಸಿಕೊಡಬೇಕು. ಆಡಳಿತಕ್ಕೆ ಸಂಬಂಧಿಸಿದ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಅವರನ್ನು ಸಹಭಾಗಿಗಳನ್ನಾಗಿ ಮಾಡಬೇಕು ಎಂಬುದಾಗಿದೆ ಎಂದು ರಾಜಕೀಯ ಸಹಭಾಗಿತ್ವದಲ್ಲಿ ಮಹಿಳೆಯರಿಗೆ ಮೀಸಲಾತಿ ಸೌಲಭ್ಯಗಳ ಬಗ್ಗೆ ಬಲವಾಗಿ ಪ್ರತಿಪಾದಿಸಿದ ಟಿ. ಎಮ್. ಜೋಸೆಫ್‌ರವರು (2007) 'ಪಂಚಾಯತ್ ರಾಜ್ ವ್ಯವಸ್ಥೆ'ಯಲ್ಲಿ ಸ್ತ್ರೀಯರಿಗೆ ಕನಿಷ್ಟ ಶೇ. 33ರಷ್ಟು ರಾಜಕೀಯ ಪ್ರಾತಿನಿಧ್ಯ ನೀಡುವ ಕ್ರಮವು ಮಹಿಳಾ ಅಭಿವೃದ್ಧಿಗೆ ಪೂರಕವಾಗಿದೆ ಎಂದು ತಮ್ಮ ಗ್ರಂಥ "ಲೋಕಲ್ ಗವರ್ನೆನ್ಸ್ ಇನ್ ಇಂಡಿಯಾ"ದಲ್ಲಿ ಪ್ರತಿಪಾದಿಸಿದ್ದಾರೆ. ಆದರೆ ಮಹಿಳಾ ಪ್ರಾತಿನಿಧ್ಯದಲ್ಲಿ ಆಗಿರುವ ಹೆಚ್ಚಳವು ಮಹಿಳೆಯರಿಗೆ ಸೂಕ್ತ ಸ್ಥಾನಮಾನ ದೊರಕಿರುವುದನ್ನು

ಬಿಂಬಿಸುವುದಿಲ್ಲ ಹಾಗೂ ಪುರುಷ ಪ್ರಧಾನ ರಾಜಕೀಯ ವ್ಯವಸ್ಥೆಯಲ್ಲಿ ಮತ್ತು ರಾಜಕೀಯ ಸ್ಪರ್ಧೆಗಳಲ್ಲಿ ಮಹಿಳೆಯರು ಪುರುಷರಿಗೆ ಸರಿಸಮಾನರಾಗಲಾರರು ಎಂದು ಗುರುತಿಸಿದ್ದಾರೆ[22].

ಎಮ್‌ಡಿ. ಮಸ್ತಾನ್‌ವಾಲಿರವರ (2002) ಪ್ರಕಾರ, ಮಹಿಳೆ ಸಂಸತ್ತಿಗೆ ಪ್ರವೇಶಿಸಬೇಕಾದರೂ ಮೀಸಲಾತಿ ಅನೇಕ ಕಾರಣಗಳಿಂದ ಅತ್ಯಗತ್ಯವಾಗುತ್ತದೆ. ಮಹಿಳೆಯರಿಗೆ ಪಕ್ಷದಿಂದ ಟಿಕೆಟ್ ಕೊಡುವುದು ಸಂವಿಧಾನಾತ್ಮಕವಾಗಿ ಕಡ್ಡಾಯವಾಗದ ಹೊರತು ಯಾವುದೇ ಪಕ್ಷವೂ ಮಹಿಳೆಯರನ್ನು ಚುನಾವಣೆಗೆ ನಿಲ್ಲಿಸುವುದಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕಾದ ಸತ್ಯವಾಗಿರುತ್ತದೆ. ಅಲ್ಲದೆ ತನ್ನ ಪತ್ನಿ ವಿಧಾನಸಭೆಯ ಸದಸ್ಯಳಾಗಿ ಚುನಾಯಿತಳಾದಾಗ, ಪತಿ ಮನೆಯಲ್ಲಿರಲು ಅಥವಾ ಅದನ್ನು ಒಪ್ಪಿಕೊಳ್ಳಲು ಮಾನಸಿಕವಾಗಿ ಸಿದ್ಧನಿರುವುದಿಲ್ಲ. ಸ್ತ್ರೀ ಪುರುಷರ ನಡುವಿನ ಶ್ರಮ ವಿಭಜನೆ ನೂರಾರು ವರ್ಷಗಳಷ್ಟು ಹಳೆಯದು. ಮಹಿಳೆ ಗೃಹಕೃತ್ಯಗಳನ್ನು ಗಮನಿಸಿಕೊಂಡರೆ, ಪುರುಷ ಹೊರಗೆ ದುಡಿಯುತ್ತಾನೆ.

ಮಾನಸಿಕವಾಗಿ ಸ್ತ್ರೀ ಪುರುಷರಿಬ್ಬರೂ ಈ ಶ್ರಮ ವಿಭಜನೆಯನ್ನು ಒಪ್ಪಿಕೊಂಡಿದ್ದಾರೆ. ಮಾನಸಿಕವಾಗಿ ಹೊಂದಿರುವ ಇಂತಹ ಸಾಂಪ್ರದಾಯಿಕ ಚೌಕಟ್ಟನ್ನು ದಾಟಿ ಇಬ್ಬರೂ ಹೊರಬರಬೇಕಾಗಿದೆ. ಬಹಳಷ್ಟು ಮಹಿಳೆಯರಿಗೆ ಮನೆಯ ನಾಲ್ಕು ಗೋಡೆಗಳಿಂದ ಹೊರಬರಲು ಅಗತ್ಯವಾದ ಆತ್ಮವಿಶ್ವಾಸವಿರುವುದಿಲ್ಲ. ಮಹಿಳೆ ಸ್ವತಂತ್ರವಾಗಿ ಯೋಚಿಸಲಾರಳು, ಅವಳ ಯಾವುದೇ ಕೆಲಸಕ್ಕೆ ಪುರುಷನ ಬೆಂಬಲ ಬೇಕು ಎಂಬ ತಲತಲಾಂತರಗಳಿಂದ ಒಪ್ಪಿಕೊಂಡು ಬಂದಂತಹ ಮೌಲ್ಯಗಳನ್ನು ಸಮಾಜವು ಪೋಷಿಸಿಕೊಂಡು ಬರುತ್ತದೆ. ಯಾವುದೇ ಕಾನೂನುಗಳು ಮಹಿಳೆಯ ಸ್ವತಂತ್ರ ಅಸ್ತಿತ್ವಕ್ಕೆ ಪೂರಕವಾಗಿರುವುದಿಲ್ಲ. ಇದರಿಂದಾಗಿ ಇಂದು ಮಹಿಳೆಗೆ ಆರ್ಥಿಕವಾಗಿ, ಸಾಮಾಜಿಕವಾಗಿ, ಮಾನಸಿಕವಾಗಿ ಹಾಗೂ ದೈಹಿಕವಾಗಿ ಪುರುಷನ ಬೆಂಬಲ ಬೇಕಾಗಿದೆ.

ಮಹಿಳೆಯರ ಸ್ಥಾನಮಾನ ಹೀಗೆ ಮುಂದುವರಿಯಬೇಕೆಂದು ಬಹಳಷ್ಟು ಪುರುಷರು ಬಯಸುತ್ತಾರೆ. ಅನೇಕ ಮಹಿಳಾ ಸಂಘಟನೆಗಳು ಮಹಿಳೆಯರು ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಹೇಳುತ್ತಿದ್ದರೂ, ಅವರುಗಳು ಚುನಾವಣೆಗಳಲ್ಲಿ ಭಾಗವಹಿಸಲು ಹಿಂಜರಿಯುತ್ತಾರೆ. ಈ ಪರಿಸ್ಥಿತಿಗೆ ಪ್ರಮುಖ ಕಾರಣಗಳೆಂದರೆ ಹಣದ ಕೊರತೆ, ರಾಜಕೀಯದಲ್ಲಿ ಅಪರಾಧೀಕರಣ ಪ್ರಕ್ರಿಯೆ, ರಾಜಕೀಯದಲ್ಲಿ ಮಹಿಳೆ ಸಕ್ರಿಯವಾಗಿ ದುಡಿಯುತ್ತಿದ್ದಾಳೆಂಬ ಕಾರಣಕ್ಕೆ ಅವಳ ಚಾರಿತ್ರ್ಯವಧೆ ಮಾಡುವ ಪರಿಸ್ಥಿತಿ ಇರುವುದು, ಜೊತೆಗೆ ಗೃಹಕೃತ್ಯದ ಹೊರೆ, ಇತ್ಯಾದಿ. ರಾಜಕೀಯದಲ್ಲಿ ಮೀಸಲಾತಿ ನೀಡುವಷ್ಟರಿಂದಲೇ ಮಹಿಳೆಯ ಸಂಕಷ್ಟಗಳು ದೂರವಾಗುವುದಿಲ್ಲ. ಆದರೆ ಸ್ತ್ರೀ ಪುರುಷ ಸಮಾನತೆ ಸಾಧನೆಯ ಹಾದಿಯಲ್ಲಿ ಇದು ಒಂದು ಮೈಲುಗಲ್ಲಾಗುತ್ತದೆ ಮತ್ತು ಮಹಿಳೆಯರ ಸಶಕ್ತೀಕರಣ

ಪ್ರಕ್ರಿಯೆಯಲ್ಲಿ ಇಟ್ಟ ಮಹತ್ವದ ಹೆಜ್ಜೆಯಾಗುತ್ತದೆ ಎಂದು ಲೇಖಕರು ಮಹಿಳಾ ಮೀಸಲಾತಿಯ ಅನಿವಾರ್ಯತೆಯ ಬಗ್ಗೆ ತಮ್ಮ ಅಧ್ಯಯನದುದ್ದಕ್ಕೂ ಪ್ರತಿಪಾದಿಸಿರುತ್ತಾರೆ[23].

ರಾಜಕೀಯದಲ್ಲಿ ಸ್ತ್ರೀಯರ ಸಹಭಾಗಿತ್ವ ಎಂದರೆ ರಾಜಕೀಯ ಕಾರ್ಯ ಚಟುವಟಿಕೆಗಳಲ್ಲಿ, ರಾಜಕೀಯ ಪಕ್ಷಗಳಲ್ಲಿ ಹಾಗೂ ಮತದಾನವನ್ನೊಳಗೊಂಡಂತೆ ರಾಜಕೀಯ ಪ್ರಕ್ರಿಯೆಗಳಲ್ಲಿ ಸ್ತ್ರೀಯರ ಕ್ರಿಯಾಶೀಲ ಭಾಗವಹಿಸುವಿಕೆ. ಆದರೆ ರಾಜಕೀಯ ಕ್ಷೇತ್ರಗಳಲ್ಲಿ ಸ್ತ್ರೀಯರ ಪಾತ್ರ ಇಂದು ತೀರಾ ನಗಣ್ಯವಾಗಿದೆ. ಸ್ತ್ರೀ-ಪುರುಷರನ್ನು ಬೇಧವಾಗಿ ನೋಡುವ ಅನೇಕ ಉಪಬಂಧಗಳು ನಮ್ಮ ಕಾನೂನುಗಳಲ್ಲಿ ಸಾಮಾಜಿಕ ಮನೋಭೂಮಿಕೆಯಲ್ಲಿ ಬೇರು ಬಿಟ್ಟಿವೆ. ಈಗಾಗಲೇ ಮಂಡಿತವಾಗಿರುವ ರಾಜ್ಯ ಶಾಸನಸಭೆ ಮತ್ತು ಲೋಕಸಭೆಯ ಶೇ.33.33ರ ಮಹಿಳಾ ಮೀಸಲಾತಿ ಮಸೂದೆ ಪುರುಷಾಧಿಕಾರದ ಹಾಗೂ ರಾಜಕೀಯ ದೊಂಬರಾಟದ ನೆರವಿಗೆ ಸಿಕ್ಕಿ ತತ್ತರಿಸುತ್ತಿದೆ. ಪುರುಷ ಪ್ರಧಾನ ಸಮಾಜ ವ್ಯವಸ್ಥೆಯನ್ನು ಪ್ರತಿಬಿಂಬಿಸುವ ಕಾನೂನುಗಳ ಆಧಾರದ ಮೇಲೆ ನಡೆಯುವ ತೀರ್ಪುಗಳೂ ಸಹ ಆ ಸಮಾಜದ ಹಾಗೂ ಪ್ರತಿ ನ್ಯಾಯಾಧೀಶರ, ಆಳುವ ಸರಕಾರಗಳ ದೃಷ್ಟಿಕೋನಗಳಿಂದ ಅಂತಿಮಗೊಳ್ಳುತ್ತಿರುತ್ತವೆ ಎಂದು ವಿಶ್ಲೇಷಿಸಿರುವ ಹೇಮಲತಾ ಎಚ್. ಎಂ.ರವರು (2004) ಸಂವಿಧಾನದತ್ತವಾಗಿ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿದರೂ ಮಹಿಳೆಯರು ಪ್ರಸ್ತುತ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ ಎಂಬ ನಗ್ನಸತ್ಯವನ್ನು ಉಲ್ಲೇಖಿಸಿ 'ಮಹಿಳಾ ಸಬಲೀಕರಣಕ್ಕೆ ಮೀಸಲಾತಿಯೊಂದೇ ಪರ್ಯಾಯ'[24] ಎಂಬ ವಾದವನ್ನು ತಮ್ಮ ಲೇಖನದಲ್ಲಿ ಬಲವಾಗಿ ಸಮರ್ಥಿಸಿಕೊಂಡಿರುತ್ತಾರೆ.

ರಾಜಕೀಯ ಎಂಬುದು ನಾಗರಿಕ ಸಮಾಜವು ರೂಪಿಸಿಕೊಂಡಿರುವ ಅತಿ ಮುಖ್ಯವೂ, ಅನಿವಾರ್ಯವೂ ಆದ ಸಾಮಾಜಿಕ ಸಂಸ್ಥೆಯಾಗಿದೆ. ಪ್ರಸ್ತುತ ವ್ಯವಸ್ಥೆಯಲ್ಲಿ ಲಿಂಗ ಭೇದವೆಣಿಸದೆ ಎಲ್ಲರೂ ರಾಜಕೀಯವಾಗಿ ಪರಿಜ್ಞಾನವುಳ್ಳವರಾಗಿದ್ದಾಗಲೇ ಅಲ್ಲಿ ಅಭಿವೃದ್ಧಿ ಸಾಧ್ಯ. ಇದರಿಂದ ಜನರು ತಮ್ಮ ಹಕ್ಕು ಭಾದ್ಯತೆಯನ್ನು ಪರಿಣಾಮಕಾರಿಯಾಗಿ ಅನುಭವಿಸಲು ಸಹಕಾರಿಯಾಗುತ್ತದೆ. ಸ್ತ್ರೀ-ಪುರುಷರಿಬ್ಬರೂ ಒಂದು ದೇಶದ ಅಭಿವೃದ್ಧಿಯ ಅಂಗಗಳಾಗಿದ್ದು ರಾಜಕಿಯ ಅಧಿಕಾರ ನೀಡುವಲ್ಲಿನ ಅಸಮತೋಲನದಿಂದಾಗಿ ಅಭಿವೃದ್ಧಿ ಸಾಧಿಸುವಲ್ಲಿ ಸಂಪೂರ್ಣವಾಗಿ ಎಡವಿದೆ ಎಂಬುದಾಗಿ ರಾಕೇಶ್ ಚಂದ್ರರವರು (2012) "ವುಮೆನ್ ಎಂಪವರ್‌ಮೆಂಟ್ ಇನ್ ಇಂಡಿಯಾ" ಎಂಬ ಅಧ್ಯಯನದಲ್ಲಿ ಪ್ರಚಲಿತ ರಾಜಕೀಯ ವ್ಯವಸ್ಥೆಯನ್ನು ವಿಮರ್ಶಿಸಿರುತ್ತಾರೆ[25].

ಮಹಿಳೆಯರು ಜಗತ್ತಿನಾದ್ಯಂತ ಸಮಾಜದ ದುರ್ಬಲ ವರ್ಗದ ಒಂದು ಭಾಗವಾಗಿದ್ದಾರೆ, ದಲಿತರಲ್ಲಿ ದಲಿತರೆನಿಸುತ್ತಾರೆ. ಸ್ತ್ರೀ-ಪುರುಷರ ನಡುವಿನ ಸಂಬಂಧವಲ್ಲಿ ಬಿಟ್ಟಿ ದಲಿತನೂ ತನ್ನ

ಹೆಂಡತಿಯನ್ನು ತನಗಿಂತ ಕೆಳಗಿನ ದರ್ಜೆಯವಳು ಎಂದು ಭಾವಿಸುತ್ತಾನೆ. ಈ ಲಿಂಗ ಭೇದ ಎಲ್ಲಾ ರೀತಿಯ ಭೇದ ಭಾವಗಳಿಗಿಂತ ಸಾರ್ವತ್ರಿಕವಾದುದು. ಮುಂದುವರಿದ ರಾಷ್ಟ್ರಗಳೆಂದು ಪರಿಗಣಿಸಲ್ಪಟ್ಟಿರುವ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿಯೂ ಲಿಂಗ ತಾರತಮ್ಯದ ಅನೇಕ ರೂಪಗಳು, ವಿಶ್ವವು 21ನೇ ಶತಮಾನಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿಯೂ ಚಾಲ್ತಿಯಲ್ಲಿವೆ ಹಾಗೂ ಮಹಿಳೆಯರು ಪುರುಷರಿಗಿಂತ ಕೆಳದರ್ಜೆಯವರು ಎಂಬ ಸಾಂಪ್ರದಾಯಿಕ ನಂಬಿಕೆ ಎಲ್ಲೆಡೆ ಇನ್ನೂ ಬಲವಾಗಿದೆ. ಲಿಂಗಭೇದ ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಾಗಿ ಆಳವಾಗಿ ಬೇರೂರಿರುತ್ತದೆ. ಎಲ್ಲಾ ವಿಧದ ಭೇದಭಾವಗಳನ್ನು ತೊಡೆದು ಹಾಕುವ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಪ್ರಯತ್ನಗಳು ಇತಿಹಾಸದುದ್ದಕ್ಕೂ ನಡೆಯುತ್ತಲೇ ಬಂದಿದೆ. ಈ ಎಲ್ಲಾ ಪ್ರಕ್ರಿಯೆಗಳು ಶತಮಾನಗಳುದ್ದಕ್ಕೂ ಸತತವಾಗಿ ನಡೆಯುತ್ತಲೇ ಬಂದಿದ್ದರೂ ಹಲವಾರು ಧೋರಣೆಗಳು, ಆಚರಣೆಗಳು, ನಂಬಿಕೆಗಳು ಬದಲಾಗದೇ ಇನ್ನೂ ಉಳಿದುಕೊಂಡಿರುವುದು ಒಂದು ದೊಡ್ಡ ಸವಾಲಾಗಿದೆ ಎಂದು ಹೇಮಲತಾ ಮಹಿಷಿರವರು (2012) ತಮ್ಮ "ಮಹಿಳೆ ಮತ್ತು ಹಕ್ಕುಗಳು" ಎಂಬ ಗ್ರಂಥದಲ್ಲಿ ವಿವರಿಸಿದ್ದಾರೆ[26].

"ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ"ಯ ಬಗ್ಗೆ ವಿವರಿಸುತ್ತಾ ಬಿ. ಎನ್. ಅಮೃತಾರವರು (2012) ಸಂವಿಧಾನದ 73ನೇ ತಿದ್ದುಪಡಿ ಗ್ರಾಮೀಣ ಸಾಮುದಾಯಿಕ ಕಾರ್ಯಗಳಲ್ಲಿನ ನಿರ್ಣಯ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದೆ.ಈ ತಿದ್ದುಪಡಿ ಮಸೂದೆಯ ಪರಿಣಾಮವಾಗಿ ಸುಮಾರು ಒಂದು ದಶಲಕ್ಷ ಮಹಿಳೆಯರಿಗೆ ಪಂಚಾಯಿತಿಗಳಲ್ಲಿ ಸ್ಥಾನ ದೊರಕುವಂತಾಗಿದೆ. ಮೀಸಲು ಸ್ಥಾನಗಳಿಗೆ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳು ತಮ್ಮ ವಿಚಾರಗಳನ್ನು, ಅಭಿಪ್ರಾಯಗಳನ್ನು ನಿಸ್ಸಂಕೋಚವಾಗಿ ಪ್ರತಿಪಾದಿಸಲು ಆರಂಭಿಸಿದಾಗ ಅದು ಇತರ ಮಹಿಳೆಯರಿಗೆ ಬಲನೀಡುತ್ತದೆ. ಅವಿದ್ಯಾವಂತರಾದ ಮಾತ್ರಕ್ಕೆ ಸುಮ್ಮನೆ ಇರಬೇಕಾಗಿಲ್ಲ. ತಮ್ಮ ಪಾಲ್ಗೊಳ್ಳುವಿಕೆಯ ಹಕ್ಕನ್ನು ಕಳೆದುಕೊಳ್ಳಬೇಕಿಲ್ಲ ಎಂಬ ಸಂದೇಶದಿಂದ ಅವರ ಆತ್ಮಶಕ್ತಿ ಜಾಗೃತವಾಗುತ್ತದೆ. ತರಬೇತಿ ಶಿಬಿರಗಳಲ್ಲಿ ಚುನಾಯಿತ ಮಹಿಳೆಯರಿಗೆ ನೀಡುವ ಕಾನೂನು, ಮಾಹಿತಿಜ್ಞಾನ ಮಾತ್ರ ಅರಿವು ಮೂಡಿಸಬಲ್ಲದು. ಪರಿಣಾಮವಾಗಿ ಗ್ರಾಮಸಭೆಗಳು ಕಾಲಕಾಲಕ್ಕೆ ಸರಿಯಾಗಿ ನಡೆಯದೇ ಇದ್ದ ಸಂದರ್ಭಗಳಲ್ಲಿ ಮಹಿಳಾ ಸದಸ್ಯರು ತಮ್ಮ ಕಾನೂನು ಮಾಹಿತಿ ಜ್ಞಾನದ ಮೂಲಕ ಆ ಬಗ್ಗೆ ಪ್ರಶ್ನಿಸಲು ಆರಂಭಿಸಿದ್ದಾರೆ. ಮಹಿಳಾ ಸಶಕ್ತತೆಯ ಮತ್ತು ಸಂಪೂರ್ಣ ಪಾಲ್ಗೊಳ್ಳುವಿಕೆಯು ಸಾಮಾಜಿಕ ಸಮಾನತೆ ಗಳಿಕೆಯ ಮೂಲಭೂತ ಅಂಶಗಳಲ್ಲಿ ಒಂದಾಗಿದೆ[27]. ಆದ್ದರಿಂದ ಎಲ್ಲಾ ಮಹಿಳೆಯರು

ವಿಚಾರ ಮಂಥನ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಿಸಿ ಒಂದಾಗಿ ಒಗ್ಗಟ್ಟಾಗಿ ಪಾಲ್ಗೊಳ್ಳಬೇಕಾಗಿದೆ ಎಂದು ಸಲಹೆಯನ್ನು ನೀಡಿದ್ದಾರೆ.

ಮಹಿಳೆಯರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಕಾನೂನಾತ್ಮಕವಾಗಿ ಹಾಗೂ ರಾಜಕೀಯವಾಗಿ ಸರಕಾರವು ಸಶಕ್ತಗೊಳಿಸಲು ಹಲವಾರು ಕಾನೂನುಗಳನ್ನೂ ಮಾಡಿರುತ್ತದೆ. ಭಾರತದ ಸಂವಿಧಾನದ ಪ್ರಸ್ತಾವನೆ, ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ರಾಜ್ಯ ನೀತಿ ನಿರ್ದೇಶಿತ ತತ್ವಗಳಲ್ಲಿ ಲಿಂಗ ಸಮಾನತೆಯು ಅಂತರ್ಗತವಾಗಿದೆ. ಸಂವಿಧಾನವು ಮಹಿಳಾ ಸಮಾನತೆಯನ್ನು ಖಚಿತಪಡಿಸುವುದು ಮಾತ್ರವಲ್ಲದೆ, ಮಹಿಳೆಯರತ್ತ ಧನಾತ್ಮಕ ತಾರತಮ್ಯವನ್ನು ತೋರುವಂತಹ ಕ್ರಮಗಳನ್ನು ಕೈಗೆತ್ತಿಕೊಳ್ಳುವ ಅಧಿಕಾರವನ್ನು ರಾಜ್ಯಗಳಿಗೆ ನೀಡಿದೆ. ಐದನೆಯ ಪಂಚವಾರ್ಷಿಕ ಯೋಜನೆಯ ಅವಧಿ(1974–78)ಯಿಂದ ಆರಂಭಗೊಂಡು ಭಾರತವು ಸಮಾಜದಲ್ಲಿ ಮಹಿಳೆಯ ಸ್ಥಾನಮಾನವನ್ನು ನಿರ್ಧರಿಸುವಲ್ಲಿ ಮಹಿಳೆಯರ ಸಬಲೀಕರಣವನ್ನು ಕೇಂದ್ರ ಬಿಂದುವಾಗಿರಿಸಿಕೊಂಡೇ ಮಹಿಳೆಯರ ವಿಚಾರ ತನ್ನ ಹಾದಿಯನ್ನು ಯೋಗಕ್ಷೇಮದಿಂದ ಅಭಿವೃದ್ಧಿಯೆಡೆಗೆ ಬದಲಿಸುತ್ತಾ ಸಾಗಿದೆ. ಮಹಿಳೆಯರ ಹಕ್ಕುಗಳ ಮತ್ತು ಕಾನೂನು ಬದ್ಧ ಅಧಿಕಾರಗಳನ್ನು ರಕ್ಷಿಸುವ ಸಲುವಾಗಿ ಸಂಸತ್ತಿನ ಅಧಿನಿಯಮದ ಮೂಲಕ 1990ನೇ ಇಸವಿಯಲ್ಲಿ ರಾಷ್ಟ್ರೀಯ ಮಹಿಳಾ ಆಯೋಗವನ್ನು ರಚಿಸಲಾಯಿತು.

1993ನೇ ಇಸವಿಯಲ್ಲಿ ಸಂವಿಧಾನದ 73ನೇ ಹಾಗೂ 74ನೇ ತಿದ್ದುಪಡಿಗಳು ಸ್ಥಳೀಯ ಸಂಸ್ಥೆಗಳಾದ ಪಂಚಾಯತುಗಳು ಹಾಗೂ ಮುನಿಸಿಪಾಲಿಟಿಗಳಲ್ಲಿ ಮಹಿಳೆಯರಿಗಾಗಿ ಮೀಸಲಾತಿ ಸ್ಥಾನಗಳನ್ನು ಕಲ್ಪಿಸಿಕೊಟ್ಟಿವೆ. ಇದರಿಂದಾಗಿ ಸ್ಥಳೀಯ ಮಟ್ಟದಲ್ಲಿ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅವರ ಭಾಗವಹಿಸುವಿಕೆಗೆ ಸುಭದ್ರ ಬುನಾದಿಯನ್ನು ಹಾಕಿದಂತಾಗಿದೆ. ಜೊತೆಗೆ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಾತರಿಪಡಿಸುವ ದೃಷ್ಟಿಯಿಂದ ಹಲವಾರು ಅಂತಾರಾಷ್ಟ್ರೀಯ ಒಡಂಬಡಿಕೆಗಳನ್ನು ಮತ್ತು ಮಾನವ ಹಕ್ಕುಗಳ ಸಾಧನಗಳನ್ನು ಅನುಮೋದಿಸಿದೆ. ಅವುಗಳಲ್ಲಿ ಪ್ರಮುಖವಾದುದೆಂದರೆ 1993ನೇ ಇಸವಿಯ 'ಮಹಿಳೆಯರ ವಿರುದ್ಧ ಎಲ್ಲಾ ವಿಧವಾದ ತಾರತಮ್ಯದ ಹೊಗಲಾಡಿಸುವಿಕೆಯ ಒಡಂಬಡಿಕೆಯು'[28] (ಸಿ.ಇ.ಡಿ.ಎ.ಡಬ್ಲ್ಯೂ) ಪ್ರಮುಖವಾಗಿದೆ.

ಸಂವಿಧಾನದ 73ನೇ ತಿದ್ದುಪಡಿಯು ದೇಶದುದ್ದಗಲಕ್ಕೂ ಮೂರನೆಯ ಒಂದು ಸ್ಥಾನದ ಮೀಸಲಾತಿಯ ಮೂಲಕ ಮಹಿಳೆಯರಿಗೆ ರಾಜಕೀಯ ಭಾಗವಹಿಸುವಿಕೆ ಹಾಗೂ ತಳ ಮಟ್ಟದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಅವಕಾಶವನ್ನು ಕಲ್ಪಿಸಿದೆ. ಈ ತಿದ್ದುಪಡಿಯು ಪಂಚಾಯತ್

ರಾಜ್ ಸಂಸ್ಥೆಗಳಲ್ಲಿ ಎರಡು ರೀತಿಯಲ್ಲಿ ಮೀಸಲಾತಿಯನ್ನು ಮಹಿಳೆಯರಿಗೆ ಒದಗಿಸಿದೆ; ಮೊದಲನೆಯದಾಗಿ ಸದಸ್ಯರಿಗೆ ಹಾಗೂ ಎರಡನೆಯದಾಗಿ ಅಧ್ಯಕ್ಷರಿಗೆ. ಸಂವಿಧಾನದ ವಿಧಿ 243(ಜಿ) ಕಲಮ್ (2) ಮತ್ತು (3)ರ ಪ್ರಕಾರ ಪಂಚಾಯತಿನ ಪ್ರತಿಯೊಂದು ಸ್ತರದಲ್ಲೂ ಸದಸ್ಯರ ನೇರ ಚುನಾವಣೆಯ ಸ್ಥಾನದ ಮೂರನೆಯ ಒಂದು ಭಾಗಕ್ಕಿಂತ ಕಡಿಮೆಯಾಗದಂತೆ ಮಹಿಳಾ ಮೀಸಲಾತಿ ಇರತಕ್ಕದ್ದು. ರಾಜಕೀಯ ಚಟುವಟಿಕೆಯ ವಿಭಿನ್ನ ಹಂತಗಳಲ್ಲಿ ಮಹಿಳೆಯರ ಅಸ್ತಿತ್ವವು ಗಣನೀಯವಾಗಿ ಹೆಚ್ಚಿದೆಯಾದರೂ ಆಡಳಿತ ಹಾಗೂ ನಿರ್ಧಾರ ತೆಗೆದುಕೊಳ್ಳುವ ಸ್ಥಾನಗಳಲ್ಲಿ ಮಹಿಳೆಯರ ಪ್ರಾತಿನಿಧಿತ್ವವು ಅಸಮರ್ಪಕವಾಗಿದೆ ಎಂದು ರಾಕೇಶ್ ಕೆ. ಸಿಂಗ್‌ರವರು (2012) ಸ್ವತಂತ್ರ ಭಾರತದಲ್ಲಿ ಸರಕಾರ ಮಹಿಳಾ ಸಶಕ್ತೀಕರಣಕ್ಕೆ ತೆಗೆದುಕೊಂಡ ಎಲ್ಲಾ ಉಪಕ್ರಮಗಳು ಹಾಗೂ ಸಂವಿಧಾನಾತ್ಮಕ ತಿದ್ದುಪಡಿಗಳನ್ನು ಉಲ್ಲೇಖಿಸಿ ಸಮ ಪ್ರಮಾಣದ ಮೀಸಲಾತಿ ದೊರಕಿದರೂ ರಾಜಕೀಯ ಚಟುವಟಿಕೆಯಲ್ಲಿ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ಹೆಚ್ಚಳವಾದರೂ ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆ ಇನ್ನೂ ನಿರ್ಲಕ್ಷಿಸಲಾಗಿರುತ್ತದೆ ಎಂಬ ಅಂಶವನ್ನು ಬೆಟ್ಟು ಮಾಡಿ ತಿಳಿಸುತ್ತಾ ಮಹಿಳೆಯರ ಹಿಂದುಳಿದಿರುವಿಕೆಗೆ ಪ್ರಮುಖ ಹಿನ್ನಡೆಯಾಗುವಂತಹ ಅಂಶ ಇದಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ[29].

ರಾಜಸ್ಥಾನದ ಸ್ಥಳೀಯ ಸಂಸ್ಥೆಗಳ ಬಗ್ಗೆ ಅಧ್ಯಯನ ನಡೆಸಿರುವ ಎಸ್. ನರಸಿಂಹನ್‌ರವರು (1997) ಅನಕ್ಷರತೆ ಹಾಗೂ ಅನುಭವಗಳ ಕೊರತೆಯ ಹೊರತಾಗಿಯೂ ಮಹಿಳೆಯರು ಸ್ಥಳೀಯ ಸಂಸ್ಥೆಗಳಲ್ಲಿ ಶ್ಲಾಘನೀಯ ಕೆಲಸಗಳನ್ನು ಮಾಡಲು ಸಾಧ್ಯವಾಗಿರುತ್ತದೆ. ಅವರು ಗ್ರಾಮ ಸಭೆಯಲ್ಲಿ ಭಾಗವಹಿಸುವುದಕ್ಕೆ ಮುಂದೆ ಬರುತಿದ್ದು, ತಮ್ಮ ಧ್ವನಿ ಎತ್ತಲೂ ಆರಂಭಿಸಿದ್ದಾರೆ. ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂದರ್ಭಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ನಿರ್ಭೀತಿಯಿಂದ ವ್ಯಕ್ತಪಡಿಸಿ ಅರ್ಥಪೂರ್ಣ, ಸಮಾನ ಹಾಗೂ ಪ್ರಜಾಪ್ರಭುತ್ವದ ಸಾಮಾಜಿಕ ಚೌಕಟ್ಟಿನ ರಚನೆಗೆ ಕಾರಣಕರ್ತರಾಗಿರುತ್ತಾರೆ. ಗ್ರಾಮ ಸಭೆಯ ಮಟ್ಟದಲ್ಲಿ ಭಾಗವಹಿಸುವ ಮಹಿಳೆಯರ ಸಂಖ್ಯೆಯು ಹೆಚ್ಚಿದೆ. ಈ ಸಂಸ್ಥೆಗಳಲ್ಲಿ ಮಹಿಳೆಯರ ಸಕ್ರಿಯ ಪಾತ್ರವು ಅವರನ್ನು ಅಧಿಕಾರ ಹಂಚಿಕೆಯಲ್ಲಿ ಪಾಲುದಾರನ್ನಾಗಿಸಿದೆಯಲ್ಲದೆ ಪರಿಣಾಮವಾಗಿ ಅವರು ಹೆಚ್ಚು ಆತ್ಮವಿಶ್ವಾಸಿಗಳಾಗಿ ರಾಷ್ಟ್ರದ ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕೆ ಆತ್ಮವಿಶ್ವಾಸವನ್ನು ಮೂಡಿಸುತ್ತದೆ[30]. ಲೇಖಕರ ಈ ಕಂಡುಕೊಳ್ಳುವಿಕೆಯು ಮಹಿಳೆಯರಿಗೆ ಅವಕಾಶ ದೊರೆತಾಗ ಸಮರ್ಥವಾಗಿ ಅಧಿಕಾರ ಚಲಾಯಿಸಲು ಸಾಧ್ಯವಾಗುತ್ತದೆ ಎಂಬುದಾಗಿ ತಿಳಿಸುತ್ತದೆ.

ಜಾತಿ, ಧರ್ಮ, ಪ್ರದೇಶ, ಭಾಷೆ ಇತ್ಯಾದಿಗಳ ಗುರುತಿನ ಪ್ರಭಾವಗಳಿಂದ ಹೊರಗುಳಿಯಲು ಸಾಧ್ಯವಾದರೆ ವರ್ಗ ಪ್ರಶ್ನೆಗಳನ್ನು ಮುಂಚೂಣಿಗೆ ತರಬಹುದು. ವರ್ಗ ಪ್ರಶ್ನೆಗಳು ಮುಂಚೂಣಿಗೆ

ಬಂದರೆ ಬಡವ ಶ್ರೀಮಂತರೆನ್ನುವ ನೆಲೆಯಲ್ಲಿ ಜನ ಸಂಘಟಿತರಾಗಬಹುದು. ಬಡವ ಶ್ರೀಮಂತರೆಂದು ಸಂಘಟಿತರಾಗಲು ಸಾಧ್ಯವಾದರೆ ಬಡವರೇ ಹೆಚ್ಚಿರುವ ಮತ್ತು ಬಡವರೇ ಹೆಚ್ಚು ಭಾಗವಹಿಸುವ ಪ್ರಜಾಪ್ರಭುತ್ವದ ಸರಕಾರಗಳ ಮೇಲೆ ಬಡವರು ಹಿಡಿತ ಸಾಧಿಸಬಹುದು. ಸರಕು ಸೇವೆಗಳ ಉತ್ಪಾದನಾ ಪ್ರಮಾಣ ಹೆಚ್ಚಿಸಲು ಮಹತ್ವ ನೀಡುವ ಅಭಿವೃದ್ಧಿ ಮಾದರಿಯ ಬದಲು ಮಾನವ ಅಭಿವೃದ್ಧಿ, ಲಿಂಗಸಮಾನತೆಗಳಿಗೆ ಮಹತ್ವ ನೀಡುವ ಅಭಿವೃದ್ಧಿ ಮಾದರಿಗಳು ಆದ್ಯತೆ ಪಡೆಯಬಹುದು. ಇಂತಹ ಅಭಿವೃದ್ಧಿ ಮಾದರಿ ಮಾನ್ಯತೆ ಪಡೆದರೆ ಬಂಡವಾಳ ಸಂಗ್ರಹಕ್ಕೆ ಮಹತ್ವ ನೀಡುವ ಇಂದಿನ ಅಭಿವೃದ್ಧಿ ಮಾದರಿ ಮೂಲೆಗುಂಪಾಗಬಹುದು. ಇಂತಹ ಬದಲಾವಣೆ ಸಾಧ್ಯವಾದರೆ ಮಾತ್ರ ಮಹಿಳೆಯರ ಮಾನ ಸಮ್ಮಾನ, ಸ್ವಾತಂತ್ರ್ಯ, ಸಮಾನತೆ, ಸ್ವಾಯತ್ತತೆಗಳಿಗೆ ಮಹತ್ವ ನೀಡುವ ಅಭಿವೃದ್ಧಿ ಮಾದರಿ ಮುಂಚೂಣಿಗೆ ಬರಬಹುದು ಎಂದು "ಅಭಿವೃದ್ಧಿ ಮತ್ತು ರಾಜಕೀಯ" ಎಂಬ ಗ್ರಂಥದಲ್ಲಿ ಎಂ. ಚಂದ್ರ ಪೂಜಾರಿಯವರು (2014) ಲಿಂಗ ಸಮಾನತೆ ಪರ ವಾದಿಸುತ್ತಾ ಅವರ ಸಶಕ್ತೀಕರಣದ ಬಗ್ಗೆ ನಿರ್ಣಾಯಕ ಸಲಹೆಗಳನ್ನು ನೀಡಿರುತ್ತಾರೆ[31].

ಮಧು ಕಿಶ್ವರ್‌ರವರು (1996), ತಮ್ಮ "ವುಮೆನ್ ಆ್ಯಂಡ್ ಪೊಲಿಟಿಕ್ಸ್ : ಬಿಯಾಂಡ್ ಕೋಟಾಸ್" ಎಂಬ ಸಂಶೋಧನಾ ಗ್ರಂಥದಲ್ಲಿ ಕಂಡುಕೊಂಡಿರುವಂತೆ, ಮಹಾರಾಷ್ಟ್ರದಲ್ಲಿ ಶೇತ್ಕಾರಿ ಸಂಘಟನೆಯ ಮಹಿಳಾ ಅಭ್ಯರ್ಥಿಗಳೊಡನೆ ಚರ್ಚೆ ನಡೆಸುವಾಗ, ಸಂಘವು ಅತ್ಯಂತ ಸಹಕಾರಿ ಪಾತ್ರ ವಹಿಸಿದಂತಹ ಆಸಕ್ತಿದಾಯಕ ಚುನಾವಣಾ ಪ್ರಚಾರವಿದ್ದಾಗಲೂ ಅವರು ಚುನಾವಣೆಯಲ್ಲಿ ಚುನಾಯಿತರಾಗಲಿಲ್ಲ. ಹಣ ಮತ್ತು ತೋಳ್ಬಲವು ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತಿನ ಚುನಾವಣೆಯಲ್ಲಿ ಫಲಿತಾಂಶವು ಬರುವಲ್ಲಿ ನಿರ್ಣಾಯಕ ಹಾಗೂ ಸಂದಿಗ್ಧ ಪಾತ್ರ ವಹಿಸಿದೆ ಎಂದು ತಿಳಿಸುತ್ತಾ ಇದಕ್ಕೆ ಅಸಮರ್ಪಕ ವ್ಯವಸ್ಥಿತ ಸಹಕಾರವು ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವಲ್ಲಿ ನೇರವಾದ ಪರಿಣಾಮ ಬೀರುತ್ತದೆ. ದೇಶದಲ್ಲಿ ಚುನಾವಣೆಗಳನ್ನು ಪಕ್ಷಗಳ ನಿಟ್ಟಿನಲ್ಲಿ ಮಾಡಲಾಗುತ್ತದೆ. ಮಹಿಳೆಯರನ್ನು ಆಧರಿಸುವಂತಹ ಉತ್ತಮ ಪ್ರಾತಿನಿಧ್ಯವಿಲ್ಲದಿದ್ದರೆ ರಾಜಕೀಯದಲ್ಲಿ ಮಹಿಳೆಯರಿಗೆ ಪಕ್ಷದ ಅಂಗವಾದ ಕಾರ್ಯಸೂಚಿಗಳನ್ನು ರಚಿಸಲು ಬೇಕಾದ ಲಿಂಗ ಸಂಬಂಧಿ ವಿಷಯಗಳು ಹಾಗೂ ಮುತುವರ್ಜಿಗೆ ಸಂಬಂಧಪಟ್ಟ ಸಂಧಾನಕ್ಕೆ ಬೇಕಾದಂತಹ ಸಾಮರ್ಥ್ಯ ನೀಡುವುದು ಅಸಾಧ್ಯವಾಗುತ್ತದೆ. ರಾಜಕೀಯ ಪಕ್ಷಗಳಲ್ಲಿ ಕೆಲವು ಮಹಿಳೆಯರು ನಿರ್ಧಾರ ತೆಗೆದುಕೊಳ್ಳುವ ಸ್ಥಾನಕ್ಕೆ ಸ್ಪರ್ಧಿಸಲು ಕಣಕ್ಕಿಳಿಯಲಿಚ್ಛಿಸುವ ಮಹಿಳೆಯರಿಗೆ ಅಡ್ಡಿಪಡಿಸುವುದು, ರಾಜಕೀಯ ಪಕ್ಷಗಳ ರೂಪುರೇಷೆಗಳನ್ನೆ ಬದಲಾಯಿಸುವಂಥಾ ಸಂದಿಗ್ಧತೆ ಮತ್ತು ಆಯ್ಕೆಗೊಳ್ಳುವ ಹಾಗೂ ಸ್ಪರ್ಧಿಸಿದ ಮಹಿಳೆಯರ ಸಂಖ್ಯೆಯ ಮೇಲೆ ಇದು ಪರಿಣಾಮ ಬೀರುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ[32].

ಎಂ. ಚಂದ್ರ ಪೂಜಾರಿಯವರು (2014), ತಮ್ಮ 'ಮಹಿಳೆ ಮತ್ತು ಸಂಸ್ಕೃತಿ', ಎಂಬ ಲೇಖನದಲ್ಲಿ ಹಕ್ಕುಗಳನ್ನು ನೀಡಿದ ಕೂಡಲೇ ಸಾಮಾಜಿಕ ಪರಿವರ್ತನೆಯಾಗುತ್ತಿದ್ದರೆ ನಮ್ಮ ಸಮಾಜ ಎಂದೋ ಎಲ್ಲರಿಗೂ ಸಮಪಾಲು ಸಮಬಾಳು ನೀಡುವ ಸಮಾಜವಾಗಬೇಕಿತ್ತು. ಆದರೆ ಆ ರೀತಿ ಆಗಿಲ್ಲ ಎಂದು ಅಭಿವೃದ್ಧಿಯನ್ನು ಟೀಕಿಸುವವರಿದ್ದಾರೆ. ಹಕ್ಕುಗಳನ್ನು ನೀಡಿದ ಕೂಡಲೇ ಸಮಾಜ ಪರಿವರ್ತನೆಯಾಗುವುದಿಲ್ಲ. ಹಕ್ಕು ಮತ್ತೊಬ್ಬರನ್ನು ನಿರ್ದಿಷ್ಟ ರೂಪದಲ್ಲಿ ವರ್ತಿಸುವಂತೆ ಒತ್ತಾಯಿಸುತ್ತದೆ. ಹಕ್ಕನ್ನು ಗೌರವಿಸುವುದು ವ್ಯಕ್ತಿಗಳ ಜವಾಬ್ದಾರಿಯಾದಷ್ಟೇ ಪ್ರಮಾಣದಲ್ಲಿ ಒಟ್ಟು ಪರಿಸರದ ಪ್ರಶ್ನೆಯೂ ಆಗಿದೆಯೆಂದು ಅಭಿವೃದ್ಧಿ ಹರಿಕಾರರು ವಾದಿಸುತ್ತಾರೆ. ಹಕ್ಕುಗಳನ್ನು ರೂಪಿಸಿದ ಕೂಡಲೇ ಸಾಮಾಜಿಕ ಬದಲಾವಣೆಯಾಗುತ್ತದೆಯೆಂದು ತಿಳಿಯುವುದು ಸರಿಯಲ್ಲ. ಈಗಾಗಲೇ ಸಾಕಷ್ಟು ಹಕ್ಕುಗಳಿವೆ. ಉದ್ಯೋಗದ ಹಕ್ಕು, ಶಿಕ್ಷಣದ ಹಕ್ಕು, ಸಂಘಟನೆಯ ಹಕ್ಕು ಹೀಗೆ ಹಲವು ಹಕ್ಕುಗಳಿವೆ. ಆದರೆ ಈ ಹಕ್ಕುಗಳು ಅವುಗಳ ಉದ್ದೇಶಿತ ರೂಪದಲ್ಲಿ ಕಾರ್ಯಗತಗೊಳ್ಳುತ್ತಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ಇವುಗಳಿಗೆ ಸಾಮಾಜಿಕ ಹಾಗೂ ರಾಜಕೀಯ ಒಪ್ಪಿಗೆ ಇಲ್ಲದಿರುವುದು. ಈ ಹಕ್ಕು ಅಥವಾ ಯಾವುದೇ ಹಕ್ಕು ಉಲ್ಲಂಘನೆಯಾದಾಗ ಸಮಾಜದ ಬಹುತೇಕರು ಡಿಸ್ಟರ್ಬ್ ಆಗಬೇಕು. ಹಕ್ಕಿನ ಉಲ್ಲಂಘನೆ ಬಹುತೇಕರಲ್ಲಿ ಅತೃಪ್ತಿ ಸೃಷ್ಟಿಸಬೇಕು.

ಹಕ್ಕಿನ ಉಲ್ಲಂಘನೆಯಾದಾಗ ಬಹುತೇಕರಲ್ಲಿ ತಳಮಳ ಉಂಟಾಗಬೇಕು. ಇವೆಲ್ಲವೂ ನಡೆಯಬೇಕಾದರೆ ಹಕ್ಕಿನ ಮಹತ್ವ ಮತ್ತು ಅವುಗಳನ್ನು ರಕ್ಷಿಸಿಕೊಳ್ಳುವ ಅನಿವಾರ್ಯತೆಯ ಅರಿವಿರಬೇಕು. ಇವೆಲ್ಲ ಸಾಧ್ಯವಾಗಬೇಕಾದರೆ ಸಮಾಜ / ಸಂಸ್ಕೃತಿಯಲ್ಲಿ ನಾವೆಲ್ಲ ಪರಸ್ಪರ ಸಂಬಂಧಿಸಿದವರು ಎನ್ನುವ ಕಲ್ಪನೆ ಜಾಗೃತವಾಗಬೇಕು. ಅಂದರೆ ಸಮಾಜ / ಸಂಸ್ಕೃತಿಯಲ್ಲಿ ಲಿಂಗಸಮಾನತೆಯ ಪ್ರಜ್ಞೆ ಬಲವಾಗಿ ಬೇರೂರಬೇಕು[33]. ಇಂತಹ ಪ್ರಜ್ಞೆಯ ಕೊರತೆ ಮಹಿಳಾ ಅಭಿವೃದ್ಧಿಯನ್ನು ಗಾಢವಾಗಿ ಕಾಡುತ್ತಿದೆ ಎಂಬ ಲೇಖಕರ ವಾದವು ಹಕ್ಕುಗಳ ಅನಿವಾರ್ಯತೆ ಮತ್ತು ಅದರ ಸಮರ್ಪಕ ಚಲಾಯಿಸುವಿಕೆಯಿಂದ ಮಾತ್ರ ಸುಸ್ಥಿರ ಸಮಾಜ ನಿರ್ಮಾಣವಾಗುತ್ತದೆ ಎಂಬ ಅಭಿಪ್ರಾಯವನ್ನು ಪುಷ್ಟೀಕರಿಸುವುದನ್ನು ಗಮನಿಸಬಹುದು.

ಸಂವಿಧಾನದಲ್ಲಿ ಅನುಕೂಲವನ್ನು ಕಲ್ಪಿಸಿಕೊಟ್ಟಿರುವ ಕಾರಣ ಮಹಿಳೆಯರು ಸ್ಥಳೀಯ ಸಂಸ್ಥೆಗಳಲ್ಲಿ ಸ್ಥಾನವನ್ನು ಪಡೆದಿದ್ದಾರೆ. ಮಹಿಳೆಯರ ಕಡೆ ಸಮಾಜದ ದೃಷ್ಟಿಕೋನವೂ ಬದಲಾಗುತ್ತಿದೆ. ಮಹಿಳೆಯರಿಗೆ ಸಂಸ್ಥೆಗಳಿಂದ ಸ್ಥಾನ ನಿರ್ಣಯ, ಸೂಕ್ಷ್ಮತೆ, ಸಾಮರ್ಥ್ಯ ವೃದ್ಧಿ, ಮಾಹಿತಿ ಹಾಗೂ ಸಲಹೆಗಳ ನಿರಂತರ ಅಗತ್ಯವಿದೆ. ಅಲ್ಲದೆ ಮಹಿಳಾ ಪ್ರತಿನಿಧಿಗಳ ಮೇಲೆ ನಡೆಯುತ್ತಿರುವ ಪ್ರಯೋಗಗಳು

ಹಾಗೂ ಅನುಭವಗಳು ಹೇಳುವುದೇನೆಂದರೆ, ಕಾಲಕಾಲಕ್ಕೆ ನಡೆಯುವ ತರಬೇತಿಗಳು, ಸ್ಥಾನ ನಿರ್ಣಯ ಹಾಗೂ ಸೂಕ್ಷ್ಮತೆ, ಇವುಗಳು ಮಹಿಳಾ ನಾಯಕರಿಗೆ ತಮಗೆ ನೀಡಲಾಗಿರುವ ಕೆಲಸಗಳನ್ನು ಇನ್ನೂ ಉತ್ತಮವಾಗಿ ನಿರ್ವಹಿಸಲು ನೆರವಾಗುತ್ತದೆ. ಅವರ ವಾದವೆಂದರೆ, ಸಾಮಾಜಿಕ ಸಂಸ್ಥೆಗಳು ಹಾಗೂ ಸಂಘಗಳು ಮಹಿಳೆಯರ ಬೆಂಬಲಕ್ಕೆ ನಿಂತಾಗ ಮಾತ್ರ ಸರಕಾರವು ಅವರ ಅಗತ್ಯಗಳಿಗೆ ಸ್ಪಂದಿಸುವುದು ಎಂದು ಸಲಹೆಯನ್ನು ತಮಿಳುನಾಡಿನ ಸ್ಥಳೀಯ ಸರಕಾರಗಳಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಬಗೆಗೆ ಅಧ್ಯಯನವನ್ನು ನಡೆಸಿರುವಂತಹ ಜಿ. ಪಲಂತುರೈರವರು (2008), ಅಭಿಪ್ರಾಯಪಟ್ಟಿರುತ್ತಾರೆ[34].

ಜಾರ್ಜ್ ಮ್ಯಾಥ್ಯೂ (2002), "ಪಂಚಾಯತ್‌ರಾಜ್ ಫ್ರಮ್ ಲೆಜಿಸ್ಲೇಷನ್ ಟು ಮೂವ್‌ಮೆಂಟ್" ಅವರ ಅಧ್ಯಯನದ ಪ್ರಕಾರ ಕರ್ನಾಟಕದಲ್ಲಿ ಇತಿಹಾಸ ಪುನರಾವರ್ತಿಸುತ್ತಿದೆ. ಹೆಂಗಸರು ಸಾಮಾಜಿಕವಾಗಿ ಅಂಗವಿಕಲರಾಗಿದ್ದು ಅವರು ಪರಿಣಾಮಕಾರಿ ಕಾರ್ಯನಿರ್ವಹಣೆಯಲ್ಲಿ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆದರೆ ಅನುಭವ ಎನ್ನುವುದು ಅವರ ಕಾರ್ಯನಿರ್ವಹಣೆಯ ಪರಿಣಾಮವನ್ನು ಅಭಿವೃದ್ಧಿಪಡಿಸುತ್ತದೆ[35]. ಈ ದೃಷ್ಟಿಯಿಂದ ಸಂವಿಧಾನದ 73ನೇ ತಿದ್ದುಪಡಿಯು ಒಂದು ಮೌನಕ್ರಾಂತಿಯ ಆರಂಭ ಎನ್ನಬಹುದು ಎಂದು ಉಲ್ಲೇಖಿಸಲಾಗಿದೆ.

ಪರಾಮರ್ಶನ ನಡೆಸಿದ ಹೆಚ್ಚಿನ ಸಂಶೋಧನಾ ಗ್ರಂಥಗಳು, ಪ್ರೌಢ ಪ್ರಬಂಧಗಳು, ವಿದ್ವಾಂಸರುಗಳ ಬರವಣಿಗೆಗಳು ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಂಡಾಗ ಮಾತ್ರ ಅವರ ಅಭಿವೃದ್ಧಿ ಮತ್ತು ಸಬಲೀಕರಣ ಸಾಧ್ಯವಾಗುತ್ತದೆ ಎಂಬುದಾಗಿ ಸ್ಪಷ್ಟವಾಗಿ ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿರುವುದನ್ನು ಗಮನಿಸಬಹುದು. ಮಹಿಳೆಯರ ಪಾಲ್ಗೊಳ್ಳುವಿಕೆಗೆ ಸಂಬಂಧಪಟ್ಟಂತೆ ಕೌಟುಂಬಿಕ ಅಡಚಣೆಗಳು, ಸಾಮಾಜಿಕ ದೃಷ್ಟಿಕೋನ, ಸಾಂಸ್ಕೃತಿಕ ನೆಲೆಗಟ್ಟುಗಳು ಹಾಗೂ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ನೀಡುತ್ತಿರುವಂತಹ ಅವಕಾಶಗಳು ಸಾಮಾಜಿಕ ನ್ಯಾಯಕ್ಕೆ ಅನುಗುಣವಾಗಿದ್ದರೂ ಪುರುಷ ಪ್ರಧಾನ ಸಮಾಜ ಶತಮಾನಗಳಿಂದ ತನ್ನ ಸ್ವಾರ್ಥ ಹಿತಾಸಕ್ತಿಗೋಸ್ಕರ ಪುನರ್‌ವ್ಯಾಖ್ಯಾನಿಸಿದ್ದನ್ನು ಗಮನಿಸಬಹುದು. ಮಹಿಳೆಯರನ್ನು ದ್ವಿತೀಯ ದರ್ಜೆಯ ನಾಗರಿಕರನ್ನಾಗಿ ಮತ್ತು ಕೇವಲ ವಸ್ತುರೂಪವಾಗಿ ಪರಿಗಣಿಸಿರುವುದು ವ್ಯವಸ್ಥೆಯ ದೊಡ್ಡ ದುರಂತವೆಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಮಹಿಳೆಯರ ಅಭಿವೃದ್ಧಿಯ ಬಗೆಗೆ ಪ್ರತಿಪಾದಿಸಿದ ಮೌಲ್ಯಗಳು ಮತ್ತು ಚಿಂತನೆಗಳು ತಮ್ಮ ಗುರಿಯನ್ನು ಸಾಧಿಸುವಲ್ಲಿ ವೈಫಲ್ಯತೆಯನ್ನು ಹೊಂದಿರುತ್ತದೆ. ವಿದ್ವಾಂಸರು ತಿಳಿಸಿದ ಅಭಿಪ್ರಾಯಗಳನ್ನು ಹಾಗೂ ಕಂಡುಕೊಂಡ ಫಲಿತಗಳನ್ನು ಅಧ್ಯಯನದ ತಾತ್ವಿಕ ಚೌಕಟ್ಟಾಗಿ ಪರಿಗಣಿಸಿ ಉದ್ದೇಶಗಳನ್ನು ರೂಪಿಸಲಾಗಿರುತ್ತದೆ.

ಸಂವಿಧಾನಾತ್ಮಕ ಸೌಲಭ್ಯಗಳು

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಂವಿಧಾನವು ಮಹಿಳೆಯರ ಸಬಲೀಕರಣಕ್ಕಾಗಿ ಹಲವಾರು ಉಪಕ್ರಮಗಳನ್ನು ವಿವರಿಸಿದ್ದು ಸಂವಿಧಾನದ ಪ್ರಸ್ತಾವನೆ, ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ರಾಜ್ಯ ನಿರ್ದೇಶಕ ತತ್ವಗಳು, ಪಂಚವಾರ್ಷಿಕ ಯೋಜನೆಗಳು, ಮಹಿಳಾ ಆಯೋಗಗಳು, ಮಾನವ ಹಕ್ಕುಗಳು, ಇತ್ಯಾದಿಗಳು ಮಹಿಳೆಯರಿಗೆ ಸಮಾನತೆ ಮತ್ತು ಅವಕಾಶಗಳನ್ನು ಖಾತರಿಪಡಿಸಿರುತ್ತದೆ. ಸ್ಥಳೀಯ ಸರಕಾರಗಳ ಸುಧಾರಣೆಯ ಬಗೆಗಿನ 1956ರ ಬಲವಂತ್ ರಾಯ್ ಮೆಹ್ತಾ ಆಯೋಗ ಮತ್ತು 1978ರ ಅಶೋಕ್ ಮೆಹ್ತಾ ಆಯೋಗವು ಮಹಿಳಾ ಮೀಸಲಾತಿಯ ಬಗೆಗೆ ಹೆಚ್ಚು ಒತ್ತನ್ನು ನೀಡಿರುವುದನ್ನು ಗಮನಿಸಬಹುದು.

1993ರ ಸಂವಿಧಾನದ 73ನೇ ಹಾಗೂ 74ನೇ ತಿದ್ದುಪಡಿ ಕಾಯ್ದೆಗಳು ಸ್ಥಳೀಯ ಸರಕಾರಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದು 33% ಮೀಸಲಾತಿಯ ಅವಕಾಶವನ್ನು ಕಲ್ಪಿಸಿರುವುದು. ಪ್ರಸ್ತುತ ಮಹಿಳೆಯರು ರಾಜಕೀಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದಕ್ಕೆ ಅನುವು ಮಾಡಿಕೊಟ್ಟಿದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೂಲ ಸಿದ್ಧಾಂತವಾದ ಸಮಾನತೆಯ ತತ್ವಕ್ಕೆ ಪೂರಕವಾಗಿ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆಗೆ ಈ ಬೆಳವಣಿಗೆಯು ಕಾರಣವಾಗಿರುತ್ತದೆ. 1970ರ ದಶಕದ ನಂತರ ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲಿ ವಿಶೇಷವಾಗಿ ರಾಜಕೀಯ ಕ್ಷೇತ್ರದಲ್ಲಿ ಸಮ ಪಾಲು ಸಿಗಬೇಕೆಂಬ ಮಹಿಳಾ ಪರ ಚಳುವಳಿಯ ಹೋರಾಟಗಳಿಗೆ ಸಿಕ್ಕ ಯಶಸ್ಸು ಇದು ಎನ್ನಬಹುದು. ಈ ಹಿನ್ನೆಲೆಯಲ್ಲಿ ಮಹಿಳೆ ಮತ್ತು ಸಂವಿಧಾನಾತ್ಮಕ ಸೌಲಭ್ಯಗಳ ಬಗೆಗಿನ ಸಾಹಿತ್ಯ ಪರಾಮರ್ಶನವನ್ನು ಈ ವಿಭಾಗದಲ್ಲಿ ನಡೆಸಲಾಗಿರುತ್ತದೆ. ಇದು ಅಧ್ಯಯನಕ್ಕೆ ಒಂದು ಸಮಗ್ರ ಚೌಕಟ್ಟು ನೀಡುವುದಕ್ಕೆ ಸಹಕಾರಿಯಾಗುತ್ತದೆ.

ಮಹಿಳೆಯರಿಗೆ ಮತದಾನದ ಹಕ್ಕಿನ ಜೊತೆಗೆ ರಾಜಕೀಯ ಸಮಾನತೆಯನ್ನು ಕಲ್ಪಿಸಿತು. ಮಹಿಳೆಯರ ವಿರುದ್ಧ ಎಲ್ಲಾ ರೀತಿಯ ತಾರತಮ್ಯ ನಿವಾರಣೆಯ ಬಗ್ಗೆ ಜರುಗಿದ ವಿಶ್ವಸಂಸ್ಥೆಯ ಸಮ್ಮೇಳನದಲ್ಲಿ ಅಂಗೀಕರಿಸಿದ ಎಲ್ಲಾ ನಿರ್ಣಯಗಳನ್ನು ನಮ್ಮ ಸಂವಿಧಾನವು ಒಳಗೊಂಡಿದೆ. ಸಂವಿಧಾನವು ಮಹಿಳೆಯರಿಗೆ ಸಮಾನವಾದ ರಾಜಕೀಯ ಸ್ಥಾನಮಾನವನ್ನು ನೀಡಿರುವುದಲ್ಲದೆ. ಮಹಿಳೆಯರ ಪರವಾಗಿ ಪೂರಕ ಅವಕಾಶಗಳನ್ನು ಕಲ್ಪಿಸಿರುತ್ತದೆ. ಸಂವಿಧಾನದ ಹಲವಾರು ಸವಲತ್ತುಗಳು ಮಹಿಳೆ ಮತ್ತು ಪುರುಷರ ಸಮಾನತೆಗೆ ಒತ್ತು ಕೊಡುತ್ತವೆ. ವಿಧಿ 39(ಎ)ಯು ಮಹಿಳೆ ಮತ್ತು ಪುರುಷರಿಗೆ ಸಮಾನವಾದ ಜೀವನಾವಕಾಶವನ್ನು ಒದಗಿಸುವಂತೆ ಮತ್ತು ಸಮಾನ ಕೆಲಸಕ್ಕೆ ಸಮಾನ

[illegible]

[illegible]

[illegible]

ವೇತನ ನೀಡುವಂತೆ, ವಿಧಿ 39(ಡಿ) ರಾಜ್ಯಗಳಿಗೆ ನಿರ್ದೇಶನವನ್ನು ನೀಡುತ್ತದೆ. ವಿಧಿ 42 ಮಹಿಳೆಯರಿಗೆ ಸಮರ್ಪಕವಾದ ಕೆಲಸದ ವಾತಾವರಣ ಮತ್ತು ಹೆರಿಗೆ ಬತ್ತೆಯನ್ನು ಮತ್ತು ವಿಧಿ 51(ಎ) ಮಹಿಳೆಯರ ಘನತೆಗೆ ಚ್ಯುತಿಯುಂಟುಮಾಡುವ ಪದ್ಧತಿಗಳನ್ನು ತ್ಯಜಿಸುವಂತೆ ತಿಳಿಸುತ್ತದೆ ಎಂಬುದಾಗಿ ಕೇಂದ್ರ ಸರಕಾರಕ್ಕೆ ಮಹಿಳಾ ಮೀಸಲಾತಿಯ ಬಗೆಗೆ ಶಿಫಾರಸ್ಸನ್ನು ನೀಡಿದ ವರದಿಯಲ್ಲಿರುವ ಅವಕಾಶಗಳ ಬಗ್ಗೆ ವಿ. ಕೆ. ಅಗ್ನಿಹೋತ್ರಿಯವರು (2008), ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿರುತ್ತಾರೆ[36].

ಸಾಧನಾ ಜಿ. ಮಥಾದ್‌ರವರ (2009) ಪ್ರಕಾರ, ರಾಜಕೀಯ ಸ್ಥಿತ್ಯಾಂತರದಿಂದ ಮಹಿಳೆಯರು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಗಳಲ್ಲಿ, ಯೋಜನೆಗಳ ರೂಪುರೇಷೆಗಳಲ್ಲಿ, ಅವುಗಳನ್ನು ಕಾರ್ಯಗತಗೊಳಿಸುವಲ್ಲಿ ಮತ್ತು ಮೌಲ್ಯಮಾಪನ ಮಾಡುವಂತಹ ರಾಜಕೀಯ ವ್ಯವಸ್ಥೆಯಿಂದ ಸಾಧ್ಯವಾಗುತ್ತದೆ. ಇದು ಮತದಾನದ ಹಕ್ಕು, ಸ್ಪರ್ಧಿಸುವ ಹಕ್ಕು, ಪ್ರಚಾರ, ಪಕ್ಷದ ಸದಸ್ಯತ್ವ ಮತ್ತು ರಾಜಕೀಯ ಸಶಕ್ತೀಕರಣವನ್ನು ಪ್ರತಿನಿಧಿಸುವಂತಹ ಅನೇಕ ಅಂಶಗಳನ್ನು ಒಳಗೊಂಡಿದೆ[37]. ಮೀಸಲಾತಿಯು ರಾಜಕೀಯ ಸ್ಥಿತ್ಯಂತರದ ಒಂದು ಮುಖ್ಯವಾದ ಸಾಧನವಾಗಿದೆ ಮತ್ತು ಪ್ರತಿನಿಧಿ ಸ್ಥಾನದ ಭರವಸೆಯನ್ನು ನೀಡುತ್ತದೆ ಎಂದು ತನ್ನ ಸಂಶೋಧನೆಯಲ್ಲಿ ಕಂಡುಕೊಂಡಿದ್ದಾರೆ.

ಮಹಿಳೆಯರ ಸುರಕ್ಷತೆಗೆ ಸಂಬಂಧಿಸಿದ ಹಕ್ಕುಗಳು ಮತ್ತು ಸವಲತ್ತುಗಳಿಗೆ ಸಂಬಂಧಿಸಿದಂತೆ ಅನೇಕ ಕಾಯಿದೆಗಳಿವೆ. ಶಕ್ತಿ ಸಂಚಯಿತ ಭಾರತೀಯ ಕಾಯಿದೆಗಳು ಮಹಿಳಾ ಸಬಲೀಕರಣದ ಗುರಿ ಹೊಂದಿವೆ. ಭಾರತೀಯ ನ್ಯಾಯಾಲಯಗಳ ಆದೇಶಗಳು ಮಹಿಳಾ ಸಂರಕ್ಷಣೆಯಲ್ಲಿನ ಅವುಗಳ ಕ್ರಿಯಾಶೀಲ ಪಾತ್ರವನ್ನು ಮತ್ತು ಮಹಿಳಾ ಶೋಷಣೆಯ ಹಂತದಲ್ಲಿ, ಕಾಯಿದೆಗಳ ಏಕರೂಪತೆಯಿಂದಾಗಿ, ಕಾಯಿದೆ ಅನುಷ್ಠಾನ ವ್ಯವಸ್ಥೆಯ ಲೋಪದಿಂದ ಮಹಿಳೆಯರನ್ನು ಸಂರಕ್ಷಿಸಿವೆ. ಈ ರೀತಿ ಸಮಾಜದಲ್ಲಿ ಮಹಿಳೆಯರಿಗೆ ಉತ್ತಮ ಸ್ಥಾನವನ್ನು ಶಾಸಕಾಂಗದ ಶಾಸನಗಳು ಮತ್ತು ನ್ಯಾಯಾಲಯಗಳ ತೀರ್ಪುಗಳು ನೀಡಿವೆ ಎಂದು ಆರ್. ಸೆಯಾನ್‌ರವರು (2013), ತಮ್ಮ ವಾದವನ್ನು ಮಂಡಿಸಿರುತ್ತಾರೆ[38].

ಎ. ಶ್ರೀಧರ್‌ರವರು (2006), "ಪಂಚಾಯತ್ ಸಂಸ್ಥೆಯ ಸಾಮಾಜಿಕ ಆಯಾಮಗಳು", ಎಂಬ ಅಧ್ಯಯನದಲ್ಲಿ 1982ರ ಸಂವಿಧಾನ ತಿದ್ದುಪಡಿ ಕಾಯ್ದೆಯು ಪಂಚಾಯತ್ ರಾಜ್ ಸಂಸ್ಥೆಗಳಲ್ಲೊಂದು ಅಪರೂಪದ ಮೈಲುಗಲ್ಲಾಗಿ ಪರಿಣಮಿಸಿತು. ಇದರಿಂದಾಗಿ ಪಂಚಾಯತ್‌ಗಳು ಸಾಂವಿಧಾನಿಕ ಮನ್ನಣೆ ಪಡೆದವು. ಈ ಹಿನ್ನಲೆಯಲ್ಲಿ ಕರ್ನಾಟಕ ಸರ್ಕಾರವು 1983ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮವನ್ನು ಜಾರಿಗೆ ತಂದಿತು. ಅಲ್ಲದೆ ಕರ್ನಾಟಕ ಸರಕಾರವು

ವಿಕೇಂದ್ರೀಕರಣಕ್ಕೆ ಒತ್ತು ನೀಡುವ ಉದ್ದೇಶದಿಂದ 'ಜನತೆಗೆ ಅಧಿಕಾರ' ಎಂಬ ಘೋಷಣೆಯೊಂದಿಗೆ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಶಾಸನಾತ್ಮಕ ಕ್ರಮಗಳನ್ನು ರೂಪಿಸಿತು. ಇದರಲ್ಲಿ ಮೊದಲ ಬಾರಿಗೆ ಮಹಿಳೆಯರಿಗೆ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ 25 ಪ್ರತಿಶತ ಮೀಸಲಾತಿಯನ್ನು ಒದಗಿಸಿತು. ಮಾತ್ರವಲ್ಲ ಪ್ರತಿ ಜಿಲ್ಲಾ ಪಂಚಾಯತ್ ಮತ್ತು ಮಂಡಲ ಪಂಚಾಯತ್‌ಗಳಲ್ಲಿ ಪರಿಶಿಷ್ಟ ಮಹಿಳೆಯರಿಗೆ ಒಂದು ಸ್ಥಾನವನ್ನು ಮೀಸಲಿಡುವ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ಗ್ರಾಮಸಭೆಯಲ್ಲಿ ಜನಸಹಭಾಗಿತ್ವಕ್ಕೆ ಅಧಿಕಾರವನ್ನು ಕಲ್ಪಿಸಿ ಪಂಚಾಯತ್ ಸಂಸ್ಥೆಗಳ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅನುವು ಮಾಡಲಾಯಿತು[39]. ಪಂಚಾಯತ್ ಚುನಾವಣೆಗಳನ್ನು ಪಕ್ಷಾಧಾರಿತ ನೆಲೆಯಲ್ಲಿ ನಡೆಸಲು ಅವಕಾಶ ನೀಡಲಾಯಿತು ಎಂದು ತನ್ನ ಅಧ್ಯಯನದಲ್ಲಿ ವಿವರಿಸಿದ್ದಾರೆ.

ಆಶಾ ರಮೇಶ್ ಮತ್ತು ಭಾರ್ತಿ ಅಲಿರವರು (1998), ಹೇಳುವಂತೆ, ಸ್ತ್ರೀ ಪರವಾಗಿ ಕಾನೂನು ರಚಿಸಲು ಸಂವಿಧಾನದ 15(3) ರ ಅನುಚ್ಛೇದದ ಪ್ರಕಾರ ಅನೇಕ ಉಪಯುಕ್ತ ಶಾಸನಬದ್ಧ ಅಧಿಕಾರಗಳನ್ನು ಕಾಯ್ದಿರಿಸಲಾಗಿದೆ. ಪುರಸಭೆಗೆ ನಡೆಯುವ ಚುನಾವಣೆಗಳಲ್ಲಿ ಮಹಿಳಾ ಸದಸ್ಯರಿಗೆ ಮೀಸಲಾತಿ ಸೌಲಭ್ಯದ ಅನಿವಾರ್ಯತೆಯನ್ನು ನ್ಯಾಯಾಲಯ ಎತ್ತಿ ಹಿಡಿದಿದೆ. ಹಾಗೇ ಸರ್ಕಾರಿ ನೇಮಕಾತಿಗಳಲ್ಲಿ, ಶಾಸನ ಸಭೆ ಮತ್ತು ಸಂಸತ್ತುಗಳಲ್ಲಿ ಮಹಿಳಾ ಮೀಸಲಾತಿಯು ಈ ಅನುಚ್ಛೇದದ ಅಡಿಯಲ್ಲಿ ನೀಡಬೇಕೆನ್ನುವುದು ಮಹಿಳೆಯರಿಗೆ ಆದ್ಯತೆಯನ್ನಿತ್ತು ಒದಗಿಸಲಾದ ವಿಶೇಷ ಸವಲತ್ತಾಗಿದೆ[40]. ಸ್ತ್ರೀ–ಪುರುಷರಲ್ಲಿ ಸಮಾನತೆಯನ್ನು ಕಲ್ಪಿಸುವಲ್ಲಿ ಸಂವಿಧಾನ ಇಟ್ಟ ಹೆಜ್ಜೆ ಪ್ರಗತಿ ಪರವಾದುದು ಎಂಬ ಅಭಿಪ್ರಾಯವನ್ನು ಮಂಡಿಸಿದ್ದಾರೆ.

ಜೀವನ್‌ದಾಸ್‌ರವರು (2009), "ಮಹಿಳಾ ಅಧ್ಯಯನ" ಎಂಬ ಲೇಖನದಲ್ಲಿ ಸಂವಿಧಾನದ ಮುನ್ನುಡಿಯಲ್ಲಿ ಸ್ತ್ರೀ ಪುರುಷರೆಂಬ ಭೇದಭಾವವಿಲ್ಲದೆ ಎಲ್ಲರೂ ಸರಿಸಮಾನರು, ಎಲ್ಲರಿಗೂ ಸಮಾನ ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಯ ಹಕ್ಕನ್ನು ನೀಡುವ ಭರವಸೆ ನೀಡಲಾಗಿದೆ ಎಂಬ ಅಂಶವನ್ನು ಉಲ್ಲೇಖಿಸಿ ಮೂಲಭೂತ ಹಕ್ಕುಗಳಲ್ಲಿ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಸ್ತ್ರೀ ಶಿಕ್ಷಣ ಸೌಲಭ್ಯವನ್ನು ಕಲ್ಪಿಸಲಾಗಿದೆ. ತಾರತಮ್ಯ ಧೋರಣೆಯನ್ನು ನಿಷೇಧಿಸಲಾಗಿದೆ[41]. ಈ ರೀತಿ ಸಂವಿಧಾನಾತ್ಮಕ ಸೌಲಭ್ಯಗಳು ಸಮಾನತೆಯನ್ನು ಸಾಧಿಸುವ ಕ್ರಮಗಳಾಗಿವೆ ಎಂದು ವಿವರಿಸಿದ್ದಾರೆ.

ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆ ಮಹಿಳೆಯರಿಗೆ ಎಲ್ಲಾ ರಂಗಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶವನ್ನು ಒದಗಿಸುತ್ತದೆ ಹಾಗೂ ವಿಶೇಷವಾದ ಅವಕಾಶಗಳನ್ನು ಪ್ರತ್ಯೇಕವಾಗಿರಿಸುತ್ತದೆ ಎಂದು ಹೇಳಿರುವ ಎಸ್. ವಿ. ಶಿಂಧೆಯವರು (1994), ಎಲ್ಲ ಜನರನ್ನು ಸಮಾನ ದೃಷ್ಟಿಯಿಂದ ಕಾಣುವ,

ಗೌರವಿಸುವ ಹಾಗೂ ತಾರತಮ್ಯ ತೋರದಿರುವುದನ್ನು ಕಾಣುತ್ತೇವೆ. ಯಾವುದೇ ಬೇಧ ಭಾವವಿಲ್ಲದೆ ಎಲ್ಲಾ ಜನರಿಗೆ ಮತಾಧಿಕಾರ, ಕಾನೂನಿನೆಡೆಯಲ್ಲಿ ಸಮಾನತೆ, ಸ್ವತಂತ್ರ ನ್ಯಾಯಾಂಗ, ಆಡಳಿತ ವಿಕೇಂದ್ರೀಕರಣ ಮೊದಲಾದ ಲಕ್ಷಣಗಳು ಮಹಿಳೆಯರ ಹಕ್ಕನ್ನು ನೀಡುವ ಸಾಮಾಜಿಕ ನ್ಯಾಯದ ಸೂಚಕಗಳಾಗಿವೆ ಎಂಬುದು ಆಡಳಿತದ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಉತ್ತೇಜನವನ್ನು ನೀಡಿದೆ ಎಂದು ವಿಶ್ಲೇಷಿಸಿದ್ದಾರೆ[42].

ವರ್ಮಾ ಎಸ್. ಜಿ.ರವರು (1999), ತಮ್ಮ "ಸ್ಟೇಟಸ್ ಆಫ್ ವುಮೆನ್ ಇನ್ ಇಂಡಿಯಾ" ಎಂಬ ಗ್ರಂಥದಲ್ಲಿ, ವಿಶೇಷವಾಗಿ ಮಹಿಳಾ ಸದಸ್ಯೆಯರಿಗೆ ಭಾರತೀಯ ಸಂವಿಧಾನವು ನೀಡಿದ ಕೊಡುಗೆ ವಿಶಿಷ್ಟವಾದದ್ದು. 14 ರಿಂದ 18ನೇ ವಿಧಿಯ ಪ್ರಕಾರ ನೀಡಿದ ಸಮಾನತೆಯ ಹಕ್ಕು 23 ಮತ್ತು 24ನೆಯ ವಿಧಿಗಳ ಪ್ರಕಾರದ ಶೋಷಣೆಯ ವಿರುದ್ಧದ ಹಕ್ಕು ಇತ್ಯಾದಿಗಳು ಮಹಿಳಾ ಅಭಿವೃದ್ಧಿ ವಿಚಾರದಲ್ಲಿ ಸಂವಿಧಾನವು ನೀಡಿದ ಬಹುಮುಖ್ಯ ಅಂಶಗಳು. ಹಕ್ಕುಗಳನ್ನು ಒದಗಿಸುವುದರ ಜೊತೆಗೆ ಅವುಗಳ ದುರುಪಯೋಗವಾಗದಂತೆ ರಕ್ಷಣೆಯನ್ನೂ ಒದಗಿಸಲಾಗಿದೆ. ಅಂತೆಯೇ ಮತ, ವಂಶ, ಜಾತಿ, ಲಿಂಗ, ಜನ್ಮ ಸ್ಥಳದ ಆಧಾರದ ಮೇಲೆ ನಡೆಯುವ ಅಸಮಾನತೆಗಳನ್ನು ನಿಷೇಧಿಸಲಾಗಿದೆ ಮಾತ್ರವಲ್ಲದೇ ಭಾರತದ ಸಂವಿಧಾನವು ಸ್ತ್ರೀಯರಿಗೆ ನೀಡಿದ ಮೂಲಭೂತ ಹಕ್ಕುಗಳಲ್ಲಿ ಸಮಾನತೆ ಹಕ್ಕು ಬಹುಮುಖ್ಯವಾದುದು ಎಂದು ತಿಳಿಸಿರುತ್ತಾರೆ[43].

ಭಾರತದ ಸಂವಿಧಾನವು ಸ್ತ್ರೀ–ಪುರುಷರಿಗೆ ಸಮಾನತೆಯನ್ನು ಹಾಗೂ ಮಹಿಳೆಯರಿಗೆ ವಿಶೇಷ ಬೆಂಬಲವನ್ನು ನೀಡಿದೆ. ಇವುಗಳನ್ನು ಸಂವಿಧಾನದ ಮೂರು ನಿಯಮಾವಳಿಗಳಲ್ಲಿ ಕಾಣಬಹುದು. ನಿಯಮಾವಳಿ 14, ಸರ್ಕಾರವು ಯಾವುದೇ ವ್ಯಕ್ತಿಗೆ ಕಾನೂನಿನ ಎದುರು ಸಮಾನತೆ ಅಥವಾ ಕಾನೂನಿನ ಸಮಾನ ರಕ್ಷಣೆಯನ್ನು ನಿರಾಕರಿಸಬಾರದು ಎಂದು ಹೇಳುತ್ತದೆ. ನಿಯಮಾವಳಿ 15 ಸರ್ಕಾರವು ಯಾವುದೇ ಪ್ರಜೆಯ ವಿರುದ್ಧ ಲಿಂಗದ ಆಧಾರದ ಮೇಲೆ ತಾರತಮ್ಯ ಮಾಡಬಾರದು ಎಂದು ಘೋಷಿಸಿದೆ. ನಿಯಮಾವಳಿ 15(3) ಮಹಿಳೆಯರನ್ನು ಬೆಂಬಲಿಸುವ ದೃಢವಾದ ವಿವೇಚನೆಗಳನ್ನು ಮಾಡುವಂತೆ ರಾಜ್ಯಗಳನ್ನು ಶಕ್ತವಾಗಿಸುವ ವಿಶೇಷವಾದ ಅವಕಾಶಗಳನ್ನು ನೀಡಿದೆ. ಮೇಲಾಗಿ, ಸರ್ಕಾರವು ಮಹಿಳೆಯರ ಬೆಂಬಲಕ್ಕಾಗಿ ವಿಶೇಷವಾದ ಕಾನೂನುಗಳನ್ನು ಜಾರಿಗೊಳಿಸಬಹುದು. ನಿಯಮಾವಳಿ 16, ಲಿಂಗದ ಆಧಾರದ ಮೇಲೆ ಸಾರ್ವಜನಿಕ ಉದ್ಯೋಗಾವಕಾಶದ ವಿಷಯಗಳಲ್ಲಿ ಯಾವುದೇ ನಾಗರಿಕರಿಗೆ ತಾರತಮ್ಯವಾಗಬಾರದು ಎಂದು ಖಚಿತಪಡಿಸಿದೆ. ನಿಯಮಾವಳಿ 42, ಯೋಗ್ಯ ಮತ್ತು ಮಾನವೀಯ ಸ್ಥಿತಿಗತಿಯ ಕೆಲಸ ನೀಡುವಂತೆ

ರಾಜ್ಯಗಳಿಗೆ ನಿರ್ದೇಶಿಸುತ್ತದೆ. ಎಲ್ಲದಕ್ಕೂ ಮೇಲಾಗಿ, ಮಹಿಳೆಯರ ಘನತೆಗೆ ಕುಂದು ತರುವಂತಹ ಸಂಪ್ರದಾಯಗಳನ್ನು ತ್ಯಜಿಸುವಂತೆ ಮಾಡಲು ಸಂವಿಧಾನವು ನಿಯಮಾವಳಿ 15 (ಜೆ) ಮತ್ತು (ಇ) ಮೂಲಕ ಪ್ರತಿಯೊಬ್ಬ ನಾಗರಿಕನ ಮೇಲೆ ಮೂಲಭೂತ ಕರ್ತವ್ಯವನ್ನು ಪರಿಶೀಲಿಸಿದೆ[44]. ಇವೆಲ್ಲ ಮೂಲಭೂತ ಹಕ್ಕುಗಳು ಆದ್ದರಿಂದ ಯಾವುದೇ ತಾರತಮ್ಯಕ್ಕೆ ಒಳಗಾದರೆ ಮಹಿಳೆಯು ನ್ಯಾಯಾಲಯದ ಮೊರೆ ಹೋಗಬಹುದು ಎಂದು ಗಿರಿಜಾ ವ್ಯಾಸ್‌ರವರು (2011), "ಮಹಿಳಾ ಹಕ್ಕುಗಳ ಮೌಲ್ಯಮಾಪನ" ಎಂಬ ಲೇಖನದಲ್ಲಿ ತಿಳಿಸುತ್ತಾ ಸಂವಿಧನಾತ್ಮಕ ಸೌಲಭ್ಯಗಳು ಮಹಿಳಾ ಸಮಾನತೆಯನ್ನು ಸಾಧಿಸಲು ಹಲವಾರು ಅವಕಾಶಗಳನ್ನು ಸೃಷ್ಟಿಸಿದೆ ಎಂದು ವಿವರಿಸಿದ್ದಾರೆ.

ಮಹಿಳೆಯರ ಸ್ಥಾನವನ್ನು ಅಧ್ಯಯನ ನಡೆಸಲು ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಒಳಗೊಳ್ಳುವ ಕ್ರಮಗಳನ್ನು ಸೂಚಿಸಲು ಸರಕಾರ ಕೆಲವು ಮುಖ್ಯ ಸಮಿತಿಗಳನ್ನು ನೇಮಕ ಮಾಡಿದ್ದು, ಅವುಗಳು ಮಹಿಳೆಯರಿಗೆ ಪ್ರಮುಖ ಸ್ಥಾನಗಳನ್ನು ನೀಡುವ ಬಗ್ಗೆ ನಿರ್ದಿಷ್ಟ ಸಲಹೆಗಳನ್ನು ನೀಡಿವೆ. ಮಹಿಳೆಯರ ಪಾತ್ರದ ಕುರಿತಾದ ಸಮಿತಿಯ ಸಲಹೆಯಂತೆ ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಖಾತ್ರಿಗೊಳಿಸಲು ಕಾಯಿದೆಯು ಮಹಿಳೆಯರ ಪಂಚಾಯತ್‌ನ ಸ್ಥಾಪನೆಯು ಪ್ರಮುಖ ಬದಲಾವಣೆಯ ಉಪಕ್ರಮವಾಗಿದೆ ಎಂಬ ಅಂಶವು ಭಾರತ ಸರಕಾರಕ್ಕೆ ಸಲ್ಲಿಸಲಾದ 'ರಿಪೋರ್ಟ್ ಆಫ್ ದ ಕಮಿಟಿ ಆನ್ ದ ಸ್ಟೇಟಸ್ ಆಫ್ ವುಮೆನ್ ಇನ್ ಇಂಡಿಯಾ-2009'[45] ಎಂಬ ವರದಿಯಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಿದಾಗ ಕೆಲವೇ ಕೆಲವು ಮಹಿಳಾ ಚುನಾಯಿತರು ಅಥವಾ ಸ್ಪರ್ಧಿಗಳಿದ್ದರು. ಸಮಿತಿಗಳು ಪಂಚಾಯತ್‌ರಾಜ್ ಸಂಸ್ಥೆಯ ರಚನೆಯನ್ನು ಶಿಫಾರಸ್ಸು ಮಾಡಿದಾಗ ಈ ಸಂಸ್ಥೆಯಲ್ಲಿ ಮಹಿಳೆಯರ ಪಾತ್ರದ ಬಗ್ಗೆ ತಿಳಿಸಿರಲಿಲ್ಲ. ಬಲವಂತ್ ರಾಯ್ ಮತ್ತು ಅಶೋಕ್ ಮೆಹ್ತಾ ಸಮಿತಿಯು ಮಹಿಳಾ ಸದಸ್ಯರನ್ನು ಚುನಾಯಿಸಬೇಕೆಂದು ಶಿಫಾರಸ್ಸು ಮಾಡಿತು. ಹೆಚ್ಚಿನ ರಾಜ್ಯಗಳಲ್ಲಿ ಪಂಚಾಯತ್‌ರಾಜ್ ಸಂಸ್ಥೆ ಅಸ್ತಿತ್ವಕ್ಕೆ ಬಂದರೂ ಎರಡೂ ಅಥವಾ ಮೂರಕ್ಕಿಂತ ಹೆಚ್ಚಿನ ಮಹಿಳಾ ಪ್ರತಿನಿಧಿಗಳಿರಲಿಲ್ಲ. 1974ರಲ್ಲಿ 'ಸಮಾನತೆಯೆಡೆಗೆ'[46] ಎನ್ನುವ ವರದಿಯು ಮಹಿಳೆಯರ ಸ್ಥಿತಿಗತಿ ಸುಧಾರಿಸುವ ಬದಲು ಕೆಳಮಟ್ಟಕ್ಕಿಳಿದಿದೆ ಎನ್ನುವುದನ್ನು ಸೂಚಿಸಿದ್ದರಿಂದ ಮಹಿಳೆಯರ ಅಂತಸ್ತು ರಾಷ್ಟ್ರೀಯ ವಿಷಯವಾಯಿತು. ಇದರ ಪರಿಣಾಮವಾಗಿ ಪ್ರಗತಿ ಮತ್ತು ಅಭಿವೃದ್ಧಿ ಲಿಂಗಾಧಾರಿತ ವಿಷಯಗಳಾದವು. ಇದರಿಂದ ಪಂಚಾಯತ್‌ರಾಜ್ ಸಂಸ್ಥೆಗಳು ಸ್ಥಾಪನೆಗೊಂಡು ಮೀಸಲಾತಿ ಮೂಲಕ ಮಹಿಳೆಯರಿಗೆ ಪ್ರತಿನಿಧಿತ್ವ ದೊರಕಿರುವುದು ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಒಂದು ಉತ್ತಮ

ಬೆಳವಣಿಗೆ ಎಂಬುದಾಗಿ ಟಿ. ಎಮ್. ಜೋಸೆಫ್‌ರವರು (2007), ತಮ್ಮ "ಲೋಕಲ್ ಗವರ್ನೆನ್ಸ್ ಇನ್ ಇಂಡಿಯಾ", ಎಂಬ ಸಂಶೋಧನಾ ಗ್ರಂಥದಲ್ಲಿ ವಿವರಿಸಿರುತ್ತಾರೆ.

1970ರ ಕೊನೆಯಲ್ಲಿ ಮತ್ತು 1980ರ ಆರಂಭದಲ್ಲಿ ಮಹಿಳಾ ಚಳವಳಿಯಲ್ಲಿ ಮಹತ್ತರವಾದ ಬದಲಾವಣೆ ಕಾಣುತ್ತದೆ. ಮಹಿಳೆಯರ ಸ್ಥಾನಮಾನದ ಕುರಿತ 1974ರಲ್ಲಿ ಬಿಡುಗಡೆಯಾದ 'ಸಮಾನತೆಯ ಕಡೆಗೆ ವರದಿ'ಯು ಮಹಿಳೆಯರ ರಾಜಕೀಯ ಶಕ್ತಿಯ ಬಗ್ಗೆ ಚರ್ಚಿಸುತ್ತದೆ ಮತ್ತು ಪಂಚಾಯತ್‌ನಲ್ಲಿ ಮಹಿಳಾ ಮೀಸಲಾತಿಯನ್ನು ಶಿಫಾರಸ್ಸು ಮಾಡುತ್ತದೆ. ಮಹಿಳೆಯರ ಮಹತ್ವಾಕಾಂಕ್ಷೆ ಮತ್ತು ಪಂಚಾಯತ್ ಪ್ರವೇಶದ ಪ್ರಯತ್ನಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಉದಾಹರಣೆಗಳು ಅಲ್ಲಲ್ಲಿ ದೊರೆಯುತ್ತದೆ ಎಂಬುವುದು 1986ರಲ್ಲಿ ಸರಕಾರಕ್ಕೆ ನೀಡಲಾದ ಶೇತ್ಕಾರಿ ಸಂಘಟನೆಯ ಸಮಿತಿಯ ವರದಿಯಲ್ಲಿ ಉಲ್ಲೇಖಿಸಲ್ಪಟ್ಟ ಅಭಿಪ್ರಾಯವಾಗಿದೆ[47].

ರಾಜಕೀಯ ಸಬಲೀಕರಣ ಎನ್ನುವುದು ಪ್ರಾತಿನಿಧ್ಯವನ್ನು ಖಾತ್ರಿಗೊಳಿಸುವುದರಿಂದ ಸ್ತ್ರೀವಾದಿಗಳು ಮಹಿಳಾ ಮೀಸಲಾತಿಯನ್ನು ಒಂದು ಸಾಧನದಂತೆ ಪರಿಗಣಿಸುತ್ತಾರೆ ಎಂಬುದನ್ನು ಗಮನಿಸಿರುವ ಶುಭ ಮತ್ತು ಭಾರ್ಗವರವರು(2000), 1993ರ ಕಾಯಿದೆಯ ನಂತರ ಕರ್ನಾಟಕದ ಪಂಚಾಯತ್‌ರಾಜ್ ಚುನಾವಣೆಯನ್ನು ವಿಶ್ಲೇಷಿಸಿದಾಗ ಪಂಚಾಯತ್‌ನ ಸದಸ್ಯರಾದ ಹೆಚ್ಚಿನ ಮಹಿಳೆಯರು ಯಾವುದೇ ರಾಜಕೀಯ ಹಿನ್ನೆಲೆ ಇರದ ಅನಕ್ಷರಸ್ಥರು ಎಂಬುದನ್ನು ಕಂಡುಕೊಂಡಿರುತ್ತಾರೆ. ಆದ್ದರಿಂದ ಮಹಿಳೆಯರ ಸಮಸ್ಯೆಗೆ ಮೀಸಲಾತಿ ವಿಧೇಯಕವು ಒಂದು ಪರಿಷ್ಕೃತ ನಿವಾರಣೋಪಾಯವಾಗಿದೆ ಎಂಬುದಾಗಿ ವಿಶ್ಲೇಷಿಸಿದ್ದಾರೆ[48].

ದೇಶಪಾಂಡೆ ಎನ್.ರವರು(1995), "ಪಾರ್ಟಿಸಿಪೇಷನ್ ಆಫ್ ವುಮೆನ್ ಇನ್ ಪೊಲಿಟಿಕ್ಸ್", ಎಂಬ ಲೇಖನದಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ ನೀತಿಯನ್ನು ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯವು ಮೊದಲು ಜಾರಿಗೊಳಿಸಿತು. 1985ರ ಕಾಯ್ದೆಯ ಪ್ರಕಾರ 25% ಸ್ಥಾನವನ್ನು ಮಹಿಳೆಯರಿಗೆ ಮೀಸಲಾಗಿರಿಸಿತು. 1993ರ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಯ ಪ್ರಕಾರ ಸಂವಿಧಾನದ 73ನೇ ತಿದ್ದುಪಡಿಯು ತ್ರಿಸ್ತರ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ 33.33% ಸ್ಥಾನಗಳನ್ನು ಮೀಸಲಾಗಿರಿಸಿದೆ. ಅನಂತರ 1995ರ ಗ್ರಾಮಪಂಚಾಯತ್ ಚುನಾವಣೆಯ ಒಟ್ಟು ಸ್ಥಾನದಲ್ಲಿ 43.3% ಸ್ಥಾನವನ್ನು ಉತ್ತಮ ರಾಜಕೀಯ ಹಿನ್ನೆಲೆ ಹೊಂದಿದ ಮಹಿಳೆಯರು ಪಡೆದುಕೊಂಡರು. ವಿಶೇಷವಾಗಿ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಮಹಿಳೆಯರು ಸ್ವಯಂಪ್ರೇರಿತರಾಗಿ ಸ್ಪರ್ಧಿಸಿದವರ ಸಂಖ್ಯೆ ಬಹಳ ಕಡಿಮೆ[49]. ಹೆಚ್ಚಿನ ಸಂದರ್ಭಗಳಲ್ಲಿ ಮಹಿಳೆಯು ಸ್ಪರ್ಧಿಸಲು ಕುಟುಂಬದ ಪ್ರೇರಣೆಯೇ ಪ್ರಮುಖ ಕಾರಣ ಎಂದು ತನ್ನ ಅಧ್ಯಯನದಲ್ಲಿ ತಿಳಿಸಿರುತ್ತಾರೆ.

ವಿಶ್ವದ ಎಲ್ಲಾ ದೇಶಗಳಲ್ಲಿ ಮಹಿಳೆಯರು ದುರ್ಬಲ ವರ್ಗದ ಒಂದು ಭಾಗವಾಗಿದ್ದಾರೆ. ಧರ್ಮ, ವರ್ಗ ಹಾಗೂ ಲಿಂಗ ವ್ಯವಸ್ಥೆಗಳ ಆಧಾರದ ಮೇಲೆ ತುಳಿತಕ್ಕೆ ಒಳಗಾಗುತ್ತಾರೆ. ಮಾನವ ಹಕ್ಕುಗಳ ಘೋಷಣೆಯಲ್ಲಿ ಹೇಳಿರುವ ಎಷ್ಟೋ ಹಕ್ಕುಗಳಿಂದ ಮಹಿಳೆಯರು ವಂಚಿತರಾಗುತ್ತಿದ್ದಾರೆ. 1950ರಲ್ಲಿ ಸಂವಿಧಾನ ರಚಿಸಿಕೊಂಡ ಭಾರತ 1948ರ ಮಾನವ ಹಕ್ಕುಗಳ ಘೋಷಣೆಯನ್ನು ಸೇರಿಸಿಕೊಂಡಿತು. ಸಂವಿಧಾನದ ಮುನ್ನುಡಿಯು ಮಾನವತಾವಾದವನ್ನು ಬಿಂಬಿಸುವ ಅಂಶಗಳನ್ನು ಹೇಳುತ್ತದೆ. ಸಂವಿಧಾನದ ಮೂರನೇ ಭಾಗದಲ್ಲಿ ಮೂಲಭೂತ ಹಕ್ಕುಗಳನ್ನು ಒಳಗೊಂಡ 12 ರಿಂದ 35ನೇ ವಿಧಿಗಳನ್ನು ರೂಪಿಸಲಾಗಿದೆ.

ಸಂವಿಧಾನದ ನಾಲ್ಕನೇ ಭಾಗದಲ್ಲಿ ರಾಜ್ಯ ನಿರ್ದೇಶನ ತತ್ವಗಳನ್ನು ಸೇರಿಸಲಾಗಿದೆ. ಸಂವಿಧಾನದ 14, 15, 16 ಮತ್ತು 21ನೇ ವಿಧಿಯು ಮಹಿಳೆಯರಿಗೆ ಕಾನೂನಿನ ರಕ್ಷಣೆ, ಸ್ತ್ರೀ-ಪುರುಷರ ನಡುವೆ ತಾರತಮ್ಯ ತೋರಿಸಬಾರದು, ತಾರತಮ್ಯ ವಿರುದ್ಧ ನೀತಿ ಮತ್ತು ಘನತೆಯಿಂದ ಬದುಕುವ ಹಕ್ಕನ್ನು ನೀಡುತ್ತಿದೆ ಅಲ್ಲದೆ ಮಹಿಳಾ ಹಕ್ಕುಗಳನ್ನು ಕಾಪಾಡುವುದಕ್ಕೆ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ. 1979ರ ಮಹಿಳೆಯರ ವಿರುದ್ಧದ ಎಲ್ಲಾ ಪ್ರಕಾರದ ಪಕ್ಷಪಾತ ಧೋರಣೆಯ ನಿರ್ಮೂಲನ ಒಪ್ಪಂದವು ನಮ್ಮ ದೇಶದಲ್ಲೂ ಕಾಯಿದೆಯಾಗಿ ಜಾರಿಗೆ ಬಂದಿದೆ. ಮಹಿಳಾ ಹಕ್ಕುಗಳ ರಕ್ಷಣೆಗಾಗಿ ಇಷ್ಟೆಲ್ಲ ಕಾಯಿದೆ ಕಾನೂನುಗಳ ರಕ್ಷಣೆಯಿದ್ದರೂ ಅವುಗಳ ಉಲ್ಲಂಘನೆಯಾಗುತ್ತಿದೆ[50]. ಸಾಮಾಜಿಕ ಕಟ್ಟುಪಾಡುಗಳು, ಧಾರ್ಮಿಕ ನಂಜಿಕೆಗಳು, ಪುರುಷ ಪ್ರಧಾನ ವ್ಯವಸ್ಥೆ ನ್ಯಾಯ ದೊರಕಿಸುವಲ್ಲಿ ವಿಳಂಬ ಮಾಡುತ್ತಿವೆ ಎಂದು ವಾದವನ್ನು ಗೀತಾ ಕೃಷ್ಣಮೂರ್ತಿಯವರು(2009), "ಮಹಿಳಾ ಹಕ್ಕುಗಳು" ಎಂಬ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ.

ಸ್ತ್ರೀ-ಪುರುಷರಲ್ಲಿ ಸಮಾನತೆಯನ್ನು ಕಲ್ಪಿಸುವಲ್ಲಿ ಸಂವಿಧಾನ ಇಟ್ಟ ಹೆಜ್ಜೆ ಪ್ರಗತಿಪರವಾದುದು. ಸಂವಿಧಾನ ಹಾಗೂ ಕಾನೂನುಗಳು ಮಹಿಳಾ ಸಮಾನತೆಯನ್ನು ಎತ್ತಿಹಿಡಿದರೂ ಎಲ್ಲೂ ಅವಳನ್ನು ಸ್ವತಂತ್ರ ಮನೋಭಾವದ ವ್ಯಕ್ತಿಯನ್ನಾಗಿ ಒಪ್ಪಿಕೊಂಡಿದ್ದು ಕಂಡುಬರುವುದಿಲ್ಲ. ಮಹಿಳೆಯರ ಸುರಕ್ಷತೆಗೆ ಸಂಬಂಧಿಸಿದ ಹಕ್ಕುಗಳು ಮತ್ತು ಸವಲತ್ತುಗಳಿಗೆ ಪ್ರಾಶಸ್ತ್ಯ ಕೊಟ್ಟು ಹಲವಾರು ಕಾಯ್ದೆಗಳನ್ನು ಜಾರಿಗೊಳಿಸಲಾಗಿದೆ. ಆದರೆ ಆ ಕಾಯ್ದೆಗಳ ಬಗೆಗಿನ ಅಜ್ಞಾನ ಮತ್ತು ಅನಕ್ಷರತೆಯಿಂದಾಗಿ ಅವುಗಳನ್ನು ಸರಿಯಾಗಿ ಅನುಷ್ಠಾನಗೊಳಿಸಲಾಗಿಲ್ಲ. ಮಹಿಳಾ ಹಕ್ಕುಗಳ ರಕ್ಷಣೆಗಾಗಿ ಕಾಯ್ದೆ ಕಾನೂನುಗಳಿದ್ದರೂ ಅವುಗಳ ಉಲ್ಲಂಘನೆಯಾಗುತ್ತಿದೆ. ಸಾಮಾಜಿಕ ಕಟ್ಟುಪಾಡುಗಳು, ಧಾರ್ಮಿಕ ನಂಜಿಕೆಗಳು, ಪುರುಷ ಪ್ರಧಾನ ವ್ಯವಸ್ಥೆ ನ್ಯಾಯ ದೊರಕಿಸುವಲ್ಲಿ ವಿಳಂಬ ಮಾಡುತ್ತಿವೆ ಎಂದು ಕೆ. ಎಸ್. ಸಕ್ಸೇನಾರವರು (1999), ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಮಹಿಳೆಯರ ಸಹಭಾಗಿತ್ವದ ಕುರಿತು ವಿವರಿಸಿದ್ದಾರೆ[51].

ಕೆ. ಜಯಲಕ್ಷ್ಮೀಯವರು (2001), "ವುಮೆನ್ ಆ್ಯಂಡ್ ಪೊಲಿಟಿಕಲ್ ಪಾರ್ಟಿಸಿಪೇಷನ್ ಇನ್ ಇಂಡಿಯಾ", ಎಂಬ ಲೇಖನದಲ್ಲಿ ಮೀಸಲಾತಿಯ ಹೆಚ್ಚಳ ಮಹಿಳೆಯರ ಭಾಗವಹಿಸುವಿಕೆಗೆ ಭರವಸೆಯನ್ನು ನೀಡುವುದಿಲ್ಲ. ಇದು ಮಹಿಳಾ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸಬಹುದೇ ಹೊರತು, ಗ್ರಾಮೀಣ ಮಹಿಳೆಯರ ಗುಣಾತ್ಮಕ ಅಭಿವೃದ್ಧಿಯ ಬಗ್ಗೆ ಕಾಳಜಿ ವಹಿಸುವುದಿಲ್ಲವಾದ್ದರಿಂದ ಅನೇಕ ನಿರೀಕ್ಷೆಗಳು ಈಡೇರದೇ ಉಳಿದುಬಿಡುತ್ತದೆ. ಪಂಚಾಯತ್‌ರಾಜ್‌ನ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ಪ್ರವೇಶ ಈ ಅಂತರವನ್ನು ತಗ್ಗಿಸುವಲ್ಲಿ ಭರವಸೆ ಮಾತ್ರವಾಗಿದೆ. ಎಲ್ಲಿವರೆಗೆ ಗ್ರಾಮೀಣ ಬಡ, ಅನಕ್ಷರಸ್ಥ ಮತ್ತು ಅಸ್ಪೃಶ್ಯ ಮಹಿಳೆಯರಿಗೆ ಬೆಂಬಲ ದೊರೆಯುವುದಿಲ್ಲವೋ ಅಲ್ಲಿಯವರೆಗೆ ಸಂವಿಧಾನಾತ್ಮಕ ಕಾನೂನಿನ ಕ್ರಮಗಳ ಎಲ್ಲಾ ಪ್ರಯತ್ನಗಳು ನಿರೀಕ್ಷಿತ ಉದ್ದೇಶದಿಂದ ದೂರವೇ ಉಳಿದುಬಿಡುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ[52].

ಸಂವಿಧಾನಾತ್ಮಕವಾಗಿ ಮಹಿಳೆಯರ ಭಾಗವಹಿಸುವಿಕೆ ಮತ್ತು ಸಬಲೀಕರಣದ ಬಗೆಗೆ ಸ್ಪಷ್ಟವಾಗಿ ವಿವರಿಸಿದರೂ, ಸ್ವಾತಂತ್ರ್ಯ ದೊರಕಿ 70 ವರ್ಷಗಳಾಗುತ್ತಿದ್ದರೂ ಈ ಎಲ್ಲಾ ವಿಧಿಗಳು ತಮ್ಮ ನಿರೀಕ್ಷಿತ ಗುರಿಗಳನ್ನು ಸಾಧಿಸುವುದರಲ್ಲಿ ಯಶಸ್ವಿಯಾಗಿರುವುದಿಲ್ಲ ಎಂಬುದಾಗಿ ಮೇಲೆ ವಿವರಿಸಿದ ಹೆಚ್ಚಿನ ಸಂವಿಧಾನಾತ್ಮಕ ಉಪಕ್ರಮಗಳ ಬಗೆಗಿನ ಸಾಹಿತ್ಯ ಹಾಗೂ ಅವುಗಳು ಸಾಧಿಸಿದ ಯಶಸ್ಸಿನ ಕುರಿತು ವಿದ್ವಾಂಸರ ವಿಶ್ಲೇಷಣೆಯ ಚರ್ಚೆಯನ್ನು ಹೆಚ್ಚಿನ ಸಂಶೋಧನಾ ಅಧ್ಯಯನಗಳು ಉಲ್ಲೇಖಿಸಿರುತ್ತವೆ. ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಲಿಸಿದರೆ ಪೂರ್ವದ ಆಫ್ರಿಕಾ ಮತ್ತು ಏಷ್ಯಾದ ಅಭಿವೃದ್ಧಿಯ ಪಥದಲ್ಲಿ ಮುಂದುವರಿಯುತ್ತಿರುವ ರಾಷ್ಟ್ರಗಳೆಂದು ಪರಿಗಣಿಸಲ್ಪಡುವ ದೇಶಗಳಲ್ಲಿ ಇನ್ನೂ ಮಹಿಳೆಯರ ಸ್ಥಿತಿಗತಿಗಳು ಯಾವುದೇ ಕ್ಷೇತ್ರದಲ್ಲಿ ಸುಧಾರಿಸಿರುವುದಿಲ್ಲ. ಈ ನಿಟ್ಟಿನಲ್ಲಿ ಸಂವಿಧಾನದಲ್ಲಿ ವಿವರಿಸಿದ ಲಿಂಗ ಸಮಾನತೆ ಮತ್ತು ರಾಜಕೀಯ ಸಹಭಾಗಿತ್ವಕ್ಕೆ ಪೂರಕವಾಗಿರುವ ಸಂವಿಧಾನಾತ್ಮಕ ಮತ್ತು ಶಾಸನೀಯ ಸೌಲಭ್ಯಗಳು ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ಸನ್ನು ಸಾಧಿಸಿರುತ್ತದೆಯೇ? ಇಲ್ಲವಾದರೆ, ಅವುಗಳಿಗೆ ಕಾರಣಗಳಾವುವು? ಎಂಬುವುದನ್ನು ವಿವರಿಸುವುದು ಹಾಗೂ ಸರಕಾರಗಳು ಮಹಿಳಾ ಸಬಲೀಕರಣಕ್ಕಾಗಿ ಯಾವ ರೀತಿಯ ಉಪಕ್ರಮಗಳನ್ನು ತೆಗೆದುಕೊಳ್ಳಬಹುದು ಎಂಬುದಾಗಿ ವಿಮರ್ಶಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿರುತ್ತದೆ.

ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ

ಭಾರತೀಯ ಮಹಿಳೆ ರಾಜಕೀಯ ಚಟುವಟಿಕೆಯಲ್ಲಿ ಇಂದು ಸಕ್ರಿಯವಾಗಿ ಪಾಲ್ಗೊಳ್ಳುತ್ತಿಲ್ಲ. ಇದಕ್ಕೆ ನಮ್ಮ ಸಂಕೀರ್ಣ ಸಾಮಾಜಿಕ ವ್ಯವಸ್ಥೆ, ಕಟ್ಟುಪಾಡುಗಳು, ಕೌಟುಂಬಿಕ ವ್ಯವಸ್ಥೆ ಹಾಗೂ ಪುರುಷ ಪ್ರಧಾನ ಸಮಾಜ ಕಾರಣವಾಗಿರುತ್ತದೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮಹಿಳೆ ಬಲಿಷ್ಟವಾದರೆ ಮಾತ್ರ ರಾಜಕೀಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ನಂತರ ಭಾರತದ ರಾಷ್ಟ್ರೀಯ ಮತ್ತು ಸ್ಥಳೀಯ ರಾಜಕೀಯ ಚಟುವಟಿಕೆಗಳಲ್ಲಿ ಪ್ರತಿಷ್ಠಿತ ಕುಟುಂಬದಿಂದ ಬಂದ, ಆರ್ಥಿಕವಾಗಿ ಬಲಿಷ್ಟ ಹಿನ್ನೆಲೆಯನ್ನು ಹೊಂದಿರುವ ಹಾಗೂ ಉನ್ನತ ಶಿಕ್ಷಣವನ್ನು ಪಡೆದ ಮಹಿಳೆಯರು ಮಾತ್ರ ಭಾಗವಹಿಸಿರುವುದು ಕಂಡುಬರುತ್ತದೆ. ಅಧ್ಯಯನದ ಹಿಂದಿನ ವಿವರಣೆಗಳಲ್ಲಿ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತಹ ಪ್ರಸ್ತಾವನೆಗಳು ಮತ್ತು ಸಲಹೆಗಳು ಹಾಗೂ ಮಹಿಳಾ ಸಬಲೀಕರಣಕ್ಕೆ ಸಂಬಂಧಪಟ್ಟಂತಹ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಅವಕಾಶಗಳು ಹಾಗೂ ಅವುಗಳ ಜಾರಿಯ ಬಗೆಗಿನ ವಿಮರ್ಶೆಯನ್ನು ಸುದೀರ್ಘವಾಗಿ ಉಲ್ಲೇಖಿಸಲಾಗಿರುತ್ತದೆ. ಮಹಿಳೆಯು ರಾಜಕೀಯವಾಗಿ ಸಕ್ರಿಯವಾಗಬೇಕಾದರೆ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಗಳು ತನ್ನದೇ ಆದ ಕೊಡುಗೆಯನ್ನು ನೀಡುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ವಿಭಾಗದಲ್ಲಿ ಮಹಿಳೆಯರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಹಿನ್ನೆಲೆಗಳು ಹಾಗೂ ಅವು ಯಾವ ರೀತಿಯಲ್ಲಿ ಮಹಿಳೆಯರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಪ್ರೇರೇಪಿಸುತ್ತದೆ ಮತ್ತು ಅದಕ್ಕಿರುವ ಅಡೆತಡೆಗಳ ಬಗೆಗಿನ ಸಾಹಿತ್ಯ ಪರಾಮರ್ಶನ ನಡೆಸಲಾಗಿರುತ್ತದೆ.

ಮಧುಶ್ರೀ ದಾಸ್ ಗುಪ್ತ (2013), "ವುಮೆನ್ ಎಂಪವರ್‌ಮೆಂಟ್ ಇನ್ ಇಂಡಿಯಾ" ಆರ್ಥಿಕ ಅನಾನುಕೂಲತೆ ಮತ್ತು ಮಹಿಳೆಯರ ದೌರ್ಜನ್ಯ ಭಾರತದಲ್ಲಿ ಹೆಚ್ಚಾಗಿರುವುದರಿಂದ ಮಹಿಳೆಯರ ಪರವಾದ ಕಾನೂನು ಮತ್ತು ಅದರ ಕಾರ್ಯಸಾಧನೆಗಳ ಮಧ್ಯೆ ವಿಶೇಷವಾದ ಅಂತರವಿರುವುದರಿಂದ ಮಹಿಳೆಯರು ರಾಜಕೀಯ ಪ್ರವೇಶ ಮಾಡುವುದಿಲ್ಲ. ಇದಲ್ಲದೆ, ಸಾಮುದಾಯಿಕವಾಗಿ ಮತ್ತು ಕೌಟುಂಬಿಕವಾಗಿ ಮಹಿಳೆಯರು ಮತ್ತು ಹೆಣ್ಣುಮಕ್ಕಳನ್ನು ಸ್ವತಂತ್ರವಾಗಿ ತಿರುಗಾಡದಂತೆ, ಹೆಚ್ಚು ಶಿಕ್ಷಣ ಪಡೆಯದಂತೆ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಅವರನ್ನು ನಿರ್ಬಂಧಿಸಲಾಗುತ್ತದೆ. ಈ ಕಾರಣದಿಂದ ಸ್ಥಳೀಯ ಪಂಚಾಯತ್ ಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಮಹಿಳೆಯರಿಗೆ ಮೀಸಲಾತಿ ಇದ್ದರೂ ಅವರ ರಾಜಕೀಯ ಸಹಭಾಗಿತ್ವಕ್ಕೆ ತೊಂದರೆಯಾಗುತ್ತದೆ[53].

ನಿರ್ಮಲ್ ಬುಚ್ (2013), "ಪಂಚಾಯತ್‌ಗಳು ಮತ್ತು ಮಹಿಳೆಯರು" ಎಂಬ ಸಂಶೋಧನಾ ಲೇಖನದಲ್ಲಿ ಇದುವರೆಗೆ ಸಾಂಪ್ರದಾಯಿಕವಾಗಿ ಪುರುಷರು ಅನುಭವಿಸುತ್ತಿದ್ದ ಅಧಿಕಾರವನ್ನು ಪಡೆಯುವುದಕ್ಕೆ ಮಹಿಳೆಯರು ಹೊಸವರ್ಗದ ಪ್ರತಿಸ್ಪರ್ಧಿಗಳು ಎನ್ನುವುದನ್ನು ಭಾರತೀಯ ಸಮಾಜ ಸುಲಭವಾಗಿ, ಸಿದ್ಧವಾಗಿ ಗ್ರಹಿಸುವುದು ಸಾಧ್ಯವಿಲ್ಲ. ಮಹಿಳೆಯರನ್ನು ಈಗಿರುವ ರಾಜಕೀಯ ಸಂದರ್ಭದಲ್ಲಿ ನೇಮಿಸುವುದು ಅವರ ಜಾತಿ, ವರ್ಗ, ಧರ್ಮ ಮತ್ತು ಪಕ್ಷದ ಕಾರಣದಿಂದ. ಆದ್ದರಿಂದ ಮಹಿಳೆಯರು ತಳಹಂತದ ಸಂಸ್ಥೆಗಳಲ್ಲಿ ಅಧಿಕಾರವನ್ನು ಪಡೆಯಲು ತೀವ್ರವಾದ ಪೈಪೋಟಿಯನ್ನು ಎದುರಿಸಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ[54].

ಅಜಿತ್ ಪಾಲ್ (2009), "ವುಮೆನ್ಸ್ ಪಾರ್ಟಿಸಿಪೇಷನ್ ಎಟ್ ಗ್ರಾಸ್ ರೂಟ್ ಲೆವೆಲ್", ಎಂಬ ಲೇಖನದಲ್ಲಿ ಸಂವಿಧಾನದಲ್ಲಿ ಮಹಿಳೆಗೆ ರಾಜಕೀಯ ಸಮಾನತೆಯನ್ನು ನೀಡಿದ್ದು ರಾಜಕೀಯ ಪ್ರಕ್ರಿಯೆಯಲ್ಲಿ ಅವಳು ಭಾಗವಹಿಸುವಂತೆ ಮಾಡುವುದರತ್ತ ಇಟ್ಟ ಮಹತ್ವದ ಹೆಜ್ಜೆ ಎನ್ನಬಹುದು. ಆದರೆ ಮಹಿಳೆಗೆ ಸಮಾಜದಲ್ಲಿ ಇರುವ ಗೌಣ ಸ್ಥಾನಮಾನ, ಆರ್ಥಿಕ ಅವಲಂಬನೆ, ಅಸಮರ್ಥತೆ, ಸಾಂಸ್ಕೃತಿಕ ಕಟ್ಟುಪಾಡುಗಳು ಮತ್ತು ಮೌಲ್ಯಗಳು ಹಾಗೂ ರಾಜಕೀಯದಲ್ಲಿ ಮಹಿಳೆ ಭಾಗವಹಿಸುವುದರ ಬಗ್ಗೆ ಸಮಾಜ ತಳೆದಿರುವ ದೃಷ್ಟಿಕೋನ ಇವುಗಳಿಂದಾಗಿ ಭಾರತದ ಮಹಿಳೆ ಇನ್ನೂ ರಾಜಕೀಯ ಪ್ರಕ್ರಿಯೆಯ ಹೊರವಲಯದಲ್ಲಿಯೇ ಉಳಿದಿದ್ದಾಳೆ[55]. ವರ್ಷಗಳು ಕಳೆದರೂ ಸಂಸತ್ತಿನ ಚುನಾವಣೆಗಳಲ್ಲಿ ಮಹಿಳಾ ಸ್ಪರ್ಧಿಗಳ ಸಂಖ್ಯೆ ಹೆಚ್ಚಿಲ್ಲ ಎಂದು ಗುರುತಿಸಿದ್ದಾರೆ.

ಘನಶ್ಯಾಮ್ ಶಾ (2008), "ಕಾಸ್ಟ್– ಎಂಡ್ ಡೆಮಾಕ್ರಟಿಕ್ ಪೊಲಿಟಿಕ್ಸ್ ಇನ್ ಇಂಡಿಯಾ" ಎಂಬ ಗ್ರಂಥದಲ್ಲಿ ಭಾರತೀಯ ಜಾತಿ ಪದ್ಧತಿಯು ಸಾಮಾಜಿಕ ಹೊರತಳ್ಳುವಿಕೆಗೆ ಮುಖ್ಯ ಕಾರಣವಾಗಿದೆ. ಇದು ಒಂದೇ ತರವಾಗಿರದೇ ಹಲವಾರು ಸಾಂಸ್ಕೃತಿಕ ವೈವಿಧ್ಯತೆಗಳನ್ನು ಹೊಂದಿದೆ. ಇಂತಹ ಜಾತಿಯ ಸಾಂಸ್ಕೃತಿಕ ವೈರುಧ್ಯಗಳನ್ನು ಪ್ರಪಂಚದ ಯಾವುದೇ ಭಾಗದಲ್ಲಿ ನೋಡಲು ಸಾಧ್ಯವಿಲ್ಲ. ಭಾರತೀಯ ಸಮಾಜದಲ್ಲಿ ದಲಿತ ಮತ್ತು ಹಿಂದುಳಿದ ಸಮುದಾಯಗಳು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಅಂಚೀಕೃತ ಸಮುದಾಯಗಳಾಗಿವೆ. ಸಾಮಾಜಿಕವಾಗಿ ಆರ್ಥಿಕ ಮತ್ತು ರಾಜಕೀಯ ಹೊರತಳ್ಳುವಿಕೆಯ ಜೊತೆಗೆ ಶೈಕ್ಷಣಿಕವಾಗಿ ಅಂಚೀಕೃತ ಸಮುದಾಯವಾಗಿವೆ[56]. ಭಾರತೀಯ ಸಮಾಜದ ಸಾಂಸ್ಕೃತಿಕ ಸಮುದಾಯಗಳ ಹಿಂದೆ ರಾಜಕೀಯ ಕಾನೂನುಗಳು ನಿಲ್ಲುವುದಿಲ್ಲ ಅದರ ಬದಲಿಗೆ ಅಗಾಧವಾದ ಧಾರ್ಮಿಕ ಪ್ರಭಾವವು ಸಾಂಸ್ಕೃತಿಕ ಸಮುದಾಯಗಳ ಚೈತನ್ಯದ ನೆಲೆಗಳಾಗಿವೆ ಎಂದು ತಿಳಿಸಿರುತ್ತಾರೆ.

[illegible]

[illegible]

[illegible]

ಎಸ್.ಬಿ.ವರ್ಮಾ (2005), "ಸ್ಟೇಟಸ್ ಆಫ್ ವುಮೆನ್ ಇನ್ ಇಂಡಿಯಾ", ಎಂಬ ಗ್ರಂಥದಲ್ಲಿ ಭಾರತದಲ್ಲಿ ಯಾವುದೇ ಸಾಮಾಜಿಕ ವ್ಯವಸ್ಥೆಯಲ್ಲಿನ ಸ್ತ್ರೀಯರು ಹಾಗೂ ಪುರುಷರು ಎಲ್ಲಾ ರೀತಿಗಳಲ್ಲೂ 'ಸಮಾನ' ವೆನ್ನಬಹುದಾದ ಸ್ಥಾನಮಾನವನ್ನು ಹೊಂದಿರುವುದಿಲ್ಲ. ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣ ಹಾಗೂ ಆಧುನಿಕತೆಯಲ್ಲಿ ಮುನ್ನಡೆ ಸಾಧಿಸಿದರೂ ಬಿಗುವಿನಿಂದ ಕೂಡಿದ ಪರಂಪರೆಯ ಹಿಡಿತದಿಂದ ಹೊರಬರುವುದು ಅವರಿಗೆ ಕಠಿಣವಾಗಿದೆ. ಅವರು ತಮ್ಮದೇ ಆದ ಸ್ವಪ್ರತಿಷ್ಟೆಯನ್ನು, ಒಂದು ಗುರುತನ್ನು ಅಥವಾ ಅನನ್ಯತೆಯನ್ನು ಹೊಂದಲು ಹೋರಾಡುತ್ತಿದ್ದಾರೆ. ಎಲ್ಲಾ ನಿಟ್ಟಿನಿಂದಲೂ ಸಮಾನತೆಯತ್ತ ಸಾಗುವ ಆತ್ಮವಿಶ್ವಾಸ ಹಾಗೂ ಧೈರ್ಯ ಅವರಿಗಿನ್ನು ಬಂದಿಲ್ಲ. ಅಂತೆಯೇ ಅವರ ಶೋಷಣೆ ಹಾಗೂ ಅವರ ವಿರುದ್ಧದ ಹಿಂಸೆ ಮುಂದುವರಿದಿದೆ. ಸಮಾಜದ ದುರ್ಬಲ ವರ್ಗಗಳಿಗೆ ಅದರಲ್ಲೂ ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟುಗಳ ವರ್ಗಗಳಿಗೆ ಸೇರಿದ ಸ್ತ್ರೀಯರ ಸ್ಥಾನಮಾನವಂತೂ ಬಹಳ ದಯನೀಯವಾದ ಸ್ಥಿತಿಯಲ್ಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ[57].

ಅರ್ಶಿ ಪರ್ವೀನ್ (2006), "ಸೋಷಿಯಲ್ ಜಸ್ಟಿಸ್ ಎಂಡ್ ಇಂಡಿಯನ್ ವುಮೆನ್", ಎಂಬ ಲೇಖನದಲ್ಲಿ ಹೆಚ್ಚಿನ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆಗಳು ಈಗಾಗಲೇ ನಿರ್ಮಾಣಗೊಂಡಿವೆ. ಇದರಲ್ಲಿ ಹೆಚ್ಚಿನವು ಮಹಿಳೆಯರ ಮೀಸಲಾತಿಯನ್ನು ಸ್ಥಳೀಯ ಆಡಳಿತದಲ್ಲಿ ನೀಡಿದೆ. ಆದರೆ ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಂತದಲ್ಲಿ ಮಹಿಳೆಯರ ಕೊಡುಗೆ ಅಧಿಕೃತವಾಗಿ ಅತ್ಯಂತ ಕಡಿಮೆ ಎಂದೇ ಹೇಳಬಹುದು. ಹೆಚ್ಚಿನ ರಾಜ್ಯಗಳಲ್ಲಿ ಮಹಿಳಾ ಪ್ರತಿನಿಧಿಗಳಿಗೆ ಚುನಾವಣೆಯನ್ನು ನಡೆಸುವ ಬದಲು ಅವರನ್ನು ನೇಮಿಸುವುದೇ ರೂಢಿಯಾಗಿದೆ. ಇದು ಪಂಚಾಯತ್ ವ್ಯವಸ್ಥೆಯಲ್ಲಿ ಪುರುಷರ ಪ್ರಾಬಲ್ಯವನ್ನು ಅಥವಾ ದಬ್ಬಾಳಿಕೆಯನ್ನು ಪ್ರತಿನಿಧಿಸುತ್ತದೆ. ರಾಜಕೀಯ ವಲಯದಲ್ಲಿ ಪ್ರವೇಶಿಸದಿರುವುದು ಮಹಿಳೆಯರ ಮುಗ್ಧತೆಯೋ, ಅಜಾಗ್ರತೆಯೋ ಆಗಿ ಉಳಿದಿಲ್ಲ. ಇದೊಂದು ವೈಯಕ್ತಿಕ ನಿರ್ಧಾರಗಳನ್ನು ತೆಗೆದುಕೊಳ್ಳಲಾರದ ಅನಿವಾರ್ಯ ಸ್ಥಿತಿಯಲ್ಲಿದ್ದಾಳೆ. ಇಂದು ರಾಜಕೀಯ ಎನ್ನುವುದು ಹಣ ಮತ್ತು ತೋಳ್ಬಲದ ಮೇಲೆ ನಡೆಯುತ್ತಿರುವ ಅಸಹ್ಯ ಆಟವಾಗಿದೆ[58].

ಶಮೀಮ್ ಅಸ್ಮತ್, ಚಂದಾ ದೇವಿ (2012), "ವುಮೆನ್ ಎಂಪವರ್‌ಮೆಂಟ್ ಇನ್ ಇಂಡಿಯಾ", ಪುರುಷ ಪ್ರಧಾನವಾದ ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳೆಯರು ಭಾಗವಹಿಸಲು ಅನೇಕ ತೊಂದರೆಗಳಿವೆ. ಮುಖ್ಯವಾಗಿ ಲಿಂಗ ತಾರತಮ್ಯ, ಮಹಿಳೆಯರು ಸ್ವತಂತ್ರವಾಗಿ ಓಡಾಡುವಂತಿಲ್ಲ. ಅವರಿಗೆ ಮನೆಯ ಜವಾಬ್ದಾರಿಗಳಿವೆ ಮತ್ತು ಸಂಸಾರದ ತಾಪತ್ರಯಗಳಿವೆ. ಆದ್ದರಿಂದ ಅವರು

ರಾಜಕೀಯ ಪ್ರಕ್ರಿಯೆಯಲ್ಲಿ ಹೆಚ್ಚು ಸಮಯವನ್ನು ವ್ಯಯಿಸಲಾರರು ಮತ್ತು ವ್ಯಯಿಸಬಾರದೆಂಬುದು ಐತಿಹಾಸಿಕ ಪೂರ್ವಾಗ್ರಹಗಳಾಗಿವೆ[59]. ಆದ್ದರಿಂದ ನಿರಂತರ ಪ್ರಯತ್ನದಿಂದ ಮಾತ್ರ ರಾಜಕೀಯ ಪ್ರಕ್ರಿಯೆಗಳಲ್ಲಿ, ಸಂಸ್ಥೆಗಳಲ್ಲಿ ಮಹಿಳೆಯರನ್ನು ಸಕ್ರಿಯಗೊಳಿಸಲು ಮತ್ತು ಅವರ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯ ಎಂದು ಸಲಹೆಯನ್ನು ನೀಡಿದ್ದಾರೆ.

ಗೀತಾ ಕೃಷ್ಣ ಮೂರ್ತಿ (2009), "ಮಹಿಳಾ ಹಕ್ಕುಗಳು ಮಾನವ ಹಕ್ಕುಗಳ ನೆಲೆಯಲ್ಲಿ", ಎಂಬ ಗ್ರಂಥದಲ್ಲಿ ಮಹಿಳೆಯರ ವಿರುದ್ಧ ಮಾಡುವ ತಾರತಮ್ಯ ಹಕ್ಕುಗಳ ಸಮಾನತೆಯ ಮತ್ತು ಮಾನವ ಘನತೆಗಿರುವ ಗೌರವದ ತತ್ವಗಳನ್ನು ಉಲ್ಲಂಘಿಸುತ್ತವೆ. ಅಷ್ಟೇ ಅಲ್ಲದೆ ಮಹಿಳೆಯರು ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಪುರುಷರಿಗೆ ಸರಿಸಮನಾಗಿ ಭಾಗವಹಿಸುವುದಕ್ಕೆ ಇದು ಅಡ್ಡಿಯಾಗುತ್ತದೆ, ಸಮಾಜದ ಹಾಗೂ ಕುಟುಂಬದ ಏಳಿಗೆಯನ್ನು ಕುಂಠಿತಗೊಳಿಸುತ್ತದೆ ಮತ್ತು ತಮ್ಮ ದೇಶ ಮತ್ತು ಮನುಕುಲದ ಸೇವೆಯಲ್ಲಿ ತೊಡಗುವ ಮಹಿಳೆಯರ ಸಾಮಾರ್ಥ್ಯ ಪೂರ್ಣವಾಗಿ ವಿಕಸನ ಗೊಳ್ಳದಂತೆ ಮಾಡುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ[60].

ಟಿ. ಎಂ. ಜೋಸೆಫ್ (2007), "ಲೋಕಲ್ ಗವರ್ನೆನ್ಸ್ ಇನ್ ಇಂಡಿಯಾ", ಎಂಬ ಲೇಖನದಲ್ಲಿ ಮಹಿಳೆಯರ ಗೆಲುವುಗಳನ್ನು ಗೌಣವಾಗಿರಿಸಿ, ಅವರ 'ಸೋಲು'ಗಳನ್ನು ಅಬ್ಬರದ ಪ್ರಚಾರಕ್ಕೊಳಪಡಿಸಿ, ಅವರಿಗೆ ಸ್ವತಂತ್ರವಾಗಿ ಅಧಿಕಾರ ನಿಭಾಯಿಸುವ ಸಾಮರ್ಥ್ಯವಿಲ್ಲವೆಂದು ಸಾರುವಂಥ ಒಂದು ಸಾಂಸ್ಥಿಕ ವ್ಯವಸ್ಥೆಯೇ ನಮ್ಮಲ್ಲಿದೆ. ಈ ಕಾರಣಕ್ಕಾಗಿಯೇ ಇದುವರೆಗೂ ರಾಜ್ಯ–ರಾಷ್ಟ್ರ ರಾಜಕಾರಣದಲ್ಲಿ ಮಹಿಳಾ ಮೀಸಲಾತಿ ಮಸೂದೆ ಜಾರಿಯಾಗಿಲ್ಲ. ರಾಜಕೀಯ ಜೀವನದಲ್ಲಿ ತಮ್ಮನ್ನು ಬಹುಕಾಲದಿಂದ ತೊಡಗಿಸಿಕೊಂಡಿರುವ ಅನೇಕ ಮಹಿಳೆಯರೂ ಒಂದು ವ್ಯವಸ್ಥಿತ ರೀತಿಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆ ಆಗಿರುವ ಪ್ರತಿನಿಧಿಗಳ ಬೆಂಬಲಕ್ಕೆ ನಿಂತಿಲ್ಲವೆಂಬ ಸವಾಲು ಎದುರಿಸುತ್ತಿದ್ದಾರೆ. ಅಲ್ಲದೆ ಕೌಟುಂಬಿಕ ಕಾರಣಗಳು, ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆ ಅನುಭವ ಹಾಗೂ ತರಬೇತಿಗಳ ಕೊರತೆ, ಅನಕ್ಷರತೆ ಹಾಗೂ ಅಜ್ಞಾನ, ಸಾಮುದಾಯಿಕ ಬೆಂಬಲದ ಅಭಾವ, ದೈಹಿಕ–ಮಾನಸಿಕ ಹಿಂಸೆಗಳ ಭಯ ಇವೇ ಮುಂತಾದುವು ಮಹಿಳಾ ಸಬಲೀಕರಣದ ದಾರಿಯಲ್ಲಿನ ಮುಖ್ಯ ಸವಾಲುಗಳು[61]. ಆದರೆ ಇದೆಲ್ಲವನ್ನೂ ಮೆಟ್ಟಿ ನಿಲ್ಲಲು ಹೊಸದಾಗಿ ತಾವು ಪಡೆದಿರುವ ಅಧಿಕಾರವನ್ನು ಮಹಿಳೆಯರು ಸಮರ್ಥವಾಗಿ ಬಳಸಿಕೊಳ್ಳಬೇಕಾದ ಅವಶ್ಯಕತೆಯೇ ಅಲ್ಲ, ಅನಿವಾರ್ಯತೆಯೂ ಆಗಿದೆ ಎಂದು ಲೇಖಕರು ಪ್ರತಿಪಾದಿಸಿದ್ದಾರೆ.

ವೈ. ಟಿ. ಪವಾರ್ (2009), "ರೋಲ್ ಆಫ್ ವುಮೆನ್ ಇನ್ ಇಂಡಿಯನ್ ಪೊಲಿಟಿಕ್ಸ್", ಎಂಬ ಸಂಶೋಧನಾ ಲೇಖನದಲ್ಲಿ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಹಕ್ಕು ಪ್ರತಿಯೊಬ್ಬ ನಾಗರಿಕನಿಗೂ ಇದೆ. ಇದು ಮೂಲಭೂತ ಹಕ್ಕು ಅಲ್ಲದೆ ಅದನ್ನು ಚಲಾಯಿಸುವುದು ಕರ್ತವ್ಯವೂ ಆಗಿರುತ್ತದೆ. ರಾಜಕೀಯದಲ್ಲಿ ಮಹಿಳೆಯ ಭಾಗವಹಿಸುವಿಕೆಯನ್ನು ಈ ದೃಷ್ಟಿಯಿಂದ ನೋಡಿದಾಗ ಅವಳಿನ್ನು ರಾಜಕೀಯದ ಹೊರ ಆವರಣದಲ್ಲಿಯೇ ಉಳಿದಿದ್ದಾಳೆ. ಇದಕ್ಕೆ ಕಾರಣ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಮಹಿಳೆಗೆ ಪ್ರಾತಿನಿಧ್ಯ ಅತ್ಯಂತ ಕಡಿಮೆ. ಭಾರತದಲ್ಲಿ 1937ರಲ್ಲಿ ಮಹಿಳೆಗೆ ಸೀಮಿತ ಮತದಾನದ ಹಕ್ಕನ್ನು ನೀಡಲಾಯಿತು. ಅಂದಿನಿಂದ ಮತದಾರಳಾಗಿ, ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಯಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಲೇ ಬಂದಿದ್ದಾಳೆ. ಆದರೆ ಮಹಿಳೆಯ ರಾಜಕೀಯ ಭಾಗವಗಹಿಸುವಿಕೆಯ ಚರಿತ್ರೆಯನ್ನು ನೋಡಿದಾಗ ಯಾವುದೇ ರಾಜಕೀಯ ಪಕ್ಷವೂ ಮಹಿಳೆಯರನ್ನು ಒಂದು ರಾಜಕೀಯ ಶಕ್ತಿಯನ್ನಾಗಿ ಪರಿಗಣಿಸಿಯೇ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ ಎಂದು ಗುರುತಿಸಿದ್ದಾರೆ[62].

ಮೈತ್ರೇಯಿ ಕೃಷ್ಣರಾಜ್ (1998), "ವುಮೆನ್ ಎಂಡ್ ಡೆವಲಪ್‌ಮೆಂಟ್", ಎಂಬ ಸಂಶೋಧನಾ ಲೇಖನದಲ್ಲಿ ಪಿತೃ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಲಿಂಗತಾರತಮ್ಯವನ್ನು ಹೋಗಲಾಡಿಸುವ ಪ್ರಯತ್ನಗಳಾಗ ಬೇಕಾಗಿರುವುದು ಮೂಲತಃ ಕುಟುಂಬದ ಹಂತದಲ್ಲಿ, ಸಾಂಪ್ರದಾಯಿಕ ಸಮಾಜದಲ್ಲಿ ಧರ್ಮ ಅತ್ಯಂತ ಪ್ರಭಾವಶಾಲಿ. ಇದು ವಿಧಿಸುವ ಕಟ್ಟುಕಟ್ಟಳೆಗಳೆಲ್ಲ ಪುರುಷ ಸ್ನೇಹಿಯಾದವುಗಳು. ಈ ಚೌಕಟ್ಟಿನಲ್ಲಿ ಮಹಿಳೆಯರು, ಅವರವರ ನಿಗದಿತ ಪಾತ್ರಗಳನ್ನು ನಿರ್ವಹಿಸಬೇಕಾಗುವುದು ಅನಿವಾರ್ಯವಾಗುತ್ತದೆ. ಆದ್ದರಿಂದ ಈ ತಾರತಮ್ಯವನ್ನು ಯಾವುದೇ ಸಾಮಾಜಿಕ ಕಾರ್ಯನೀತಿಗಳಾಗಲೀ ಕಾನೂನು ಕ್ರಮಗಳಾಗಲೀ ಹೋಗಲಾಡಿಸುವುದು ಸಾಧ್ಯವಿಲ್ಲ[63]. ಆದ್ದರಿಂದ ಅಪೇಕ್ಷಿತ ಬದಲಾವಣೆಯನ್ನು ಕುಟುಂಬ ಹಾಗೂ ಸಾಂಸ್ಥಿಕ ಹಂತದಲ್ಲೇ ತರುವ ಪ್ರಯತ್ನಗಳಾಗಬೇಕು ಎಂದು ಸಲಹೆಯನ್ನಿತ್ತಿದ್ದಾರೆ.

ಪ್ರೊಮೀಲಾ ಕಪೂರ್ (2009), "ಸ್ಟೆಪ್ಸ್ ಟು ಎನ್‌ಹ್ಯಾನ್ಸ್ ವುಮೆನ್ಸ್ ಪೊಲಿಟಿಕಲ್ ಪಾರ್ಟಿಸಿಪೇಷನ್", ಎಂಬ ಸಂಶೋಧನಾ ಲೇಖನದಲ್ಲಿ ಜಾಗತಿಕ ಮತ್ತು ಭಾರತದ ಪರಿಸ್ಥಿತಿಯನ್ನು ಪರಿಶೀಲಿಸಿದಾಗ ಮಹಿಳೆಯರು ಸಾಮಾನ್ಯವಾಗಿ ರಾಜಕೀಯದಲ್ಲಿ ಬಹಳಷ್ಟು ಆಸಕ್ತಿಯನ್ನು ಹೊಂದಿರುವುದಿಲ್ಲ. ಇದಕ್ಕೆ ಕಾರಣ ನೈತಿಕ ಮೌಲ್ಯದ ಕುಸಿತ, ರಾಜಕೀಯ ಅಧಿಕಾರ ಸಾಧಿಸಲು ಹೆಚ್ಚಾದ ಹಣದ ಉಪಯೋಗ ಮತ್ತು ರಾಜಕೀಯ ಅಪರಾಧೀಕರಣವಾಗಿದೆ. ಮಹಿಳೆಯರ ರಾಜಕೀಯ

ಸಶಕ್ತೀಕರಣಕ್ಕೆ ಲಿಂಗ ಪಡಿಯಚ್ಚಿನ ಪಾತ್ರವು ಪ್ರಮುಖ ತಡೆಯಾಗಿದೆ. ರಾಜಕೀಯ ಪಕ್ಷಗಳಿಗೆ ಮಹಿಳೆಯರ ಯಶಸ್ವಿನ ಬಗ್ಗೆ ಪೂರ್ಣ ಪ್ರಮಾಣದ ಭರವಸೆಯಿಲ್ಲದಿದ್ದುದರಿಂದ ಅವರಿಗೆ ನಾಮಪತ್ರ ಸಲ್ಲಿಸಲು ಅವಕಾಶವನ್ನು ನೀಡುವುದಿಲ್ಲ. ಹಾಗೂ ಕೆಲವು ರಾಜಕೀಯ ಪಕ್ಷಗಳು ಮಹಿಳೆಯರು ನಾಯಕತ್ವಕ್ಕೆ ಅಸಮರ್ಥರೆಂದು ಪರಿಗಣಿಸಿದೆ. ಅದಲ್ಲದೆ ಮಹಿಳೆಯರು ಸಂಸತ್ತಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣ ಸಿಗುವುದಿಲ್ಲ ಮತ್ತು ಚರ್ಚೆಯಲ್ಲಿ ಭಾಗವಹಿಸದಿರುವುದು, ಮಹಿಳೆಗೆ ಸಂಬಂಧಪಟ್ಟ ವಿಷಯದ ಬಗ್ಗೆ ಧ್ವನಿಯೆತ್ತದಿರುವುದು ಕಂಡು ಬರುತ್ತದೆ. ಭಾರತದಲ್ಲಿ ಮಹಿಳೆಯರಿಗೆ ಸಂಸತ್ತು ಮತ್ತು ವಿಧಾನ ಸಭೆಯಲ್ಲಿ ಸರಿಯಾದ ಪ್ರತಿನಿಧಿತ್ವ ನೀಡಲು ಸರಕಾರದ ಮೇಲೆ ಒತ್ತಡ ತರಲು ಯಾವುದೇ ಮಹಿಳಾ ಚಳುವಳಿಯಿಲ್ಲದಿರುವುದು ಕೂಡ ಲಿಂಗ ಅಸಮಾನತೆಗೆ ಕಾರಣ ಎಂದು ವಿಶ್ಲೇಷಿಸಿರುತ್ತಾರೆ[64].

ಪ್ರೇಮಾ ಆರ್. ಜಿ ಅಪಚಂದ (2010), "ಲಿಂಗ ವ್ಯವಸ್ಥೆ ಸಂಕಥನ", ಎಂಬ ಗ್ರಂಥದಲ್ಲಿ ಇಂದಿನ ಭಾರತದ ರಾಜಕಾರಣ ಜಾತಿ, ವರ್ಗ ಶ್ರೇಣಿಯ ಯಾಜಮಾನ್ಯವನ್ನು ಮರುಪ್ರತಿಷ್ಠಾಪಿಸುತ್ತಿದೆ. ನಮ್ಮ ದೇಶದ ಬಹುಪಾಲು ಎಲ್ಲಾ ರಾಜಕೀಯ ಪಕ್ಷಗಳು ಜಾತಿಯನ್ನು ನಿರಾಕರಿಸಿ ಅಸ್ತಿತ್ವವನ್ನು ಉಳಿಸಿಕೊಳ್ಳಲಾರವು. ರಾಷ್ಟ್ರದ ಪ್ರಧಾನಿಯಿಂದ ಹಿಡಿದು ಕೊನೆಯ ಮಂಡಲ ಪಂಚಾಯ್ತಿಯ ಸಾಮಾನ್ಯ ಸದಸ್ಯರೂ ಕೂಡ ಇವತ್ತು ಧಾರ್ಮಿಕ ರಾಜಕಾರಣದ ತಂತ್ರಗಳನ್ನು ಅನುಸರಿಸುತ್ತಾರೆ. ಮಹಿಳಾ ಸಮುದಾಯದ ವಿಷಯಕ್ಕೆ ಬಂದಾಗ ಜಾತಿ ಶ್ರೇಣಿಕರಣದಿಂದಾಗಿ ಮಹಿಳೆಯು ಏಣಿ ಶ್ರೇಣಿ ವ್ಯವಸ್ಥೆಯ ಕೊನೆಯ ಮೆಟ್ಟಿಲಿನಲ್ಲಿದ್ದಾಳೆ. ಜಾತಿ ಮತ್ತು ಧರ್ಮಗಳು ಮಹಿಳೆಯರನ್ನು ಕೊನೆಯ ಸ್ಥಾನದಲ್ಲಿರಿಸಿದೆ. ಧರ್ಮ ಮತ್ತು ಜಾತಿಯನ್ನು ಮೀರಿಕೊಂಡು ಮಹಿಳೆ ರಾಜಕೀಯದಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವುದು ಕಷ್ಟವಾಗಿದೆ. ಭಾರತ ದಿನದಿಂದ ದಿನಕ್ಕೆ ಎಷ್ಟೇ ಮುಂದುವರಿಯುತ್ತಿರುವ ರಾಷ್ಟ್ರವಾದರೂ ಧರ್ಮ ಹಾಗೂ ಜಾತಿಯ ಬಂಧನದಿಂದ ತನ್ನನ್ನು ಇನ್ನೂ ಮುಕ್ತಗೊಳಿಸಿಕೊಂಡಿಲ್ಲ. ಮಹಿಳೆ ಎಷ್ಟೇ ಸಾಧನೆ ಮಾಡುತ್ತಿದ್ದರೂ, ಮಾಡಿದ್ದರೂ ಆಕೆಯ ಜಾತಿ ಮತ್ತು ಧರ್ಮದ ಆಧಾರದ ಮೇಲೆ ಆಕೆಯನ್ನು ಅಳೆಯಲಾಗುತ್ತಿದೆ ಎಂದು ವಿಶ್ಲೇಷಿಸಿದ್ದಾರೆ[65].

ಶ್ರೀಲತಾ ಬಾಟ್ಲಿವಾಲಾ (2012), "ಲಿಂಗ ಸಂಬಂಧಗಳು ಮತ್ತು ಸಮಸ್ಯೆಗಳು – ಕರ್ನಾಟಕದಲ್ಲಿ ಗ್ರಾಮೀಣ ಮಹಿಳೆಯರ ಸ್ಥಾನ" ಎನ್ನುವ ಲೇಖನದಲ್ಲಿ ಆರು ಜಿಲ್ಲೆಗಳಲ್ಲಿ ನಡೆಸಿದ ಸಮೀಕ್ಷೆಯು ಸಮಾಜದಲ್ಲಿ ಮಹಿಳೆಯ ಸ್ಥಾನವನ್ನು ಪ್ರಭಾವಿಸುವ ಅಂಶಗಳೆಂದರೆ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಆಯಾಮಗಳು ಸಮಾಜದಲ್ಲಿ ಮಹಿಳೆಯ ರಾಜಕೀಯ ಸ್ಥಾನದ ಮೇಲೆ ಅಪಾರವಾದ ಪರಿಣಾಮವನ್ನು ಉಂಟುಮಾಡುತ್ತದೆ. ಈ ಕಾರಣದಿಂದ ಶಾಸ್ತ್ರೀಯ ವ್ಯಾಖ್ಯೆಗಳು ಹೇಳುವ ಮಹಿಳೆಯ

ಕರ್ತವ್ಯ ಮತ್ತು ವಾಸ್ತವವಾಗಿ ಮಹಿಳೆಯರ ಸ್ಥಾನದ ಬಗ್ಗೆ ಸಮುದಾಯ ಗ್ರಹಿಸುವ ರೀತಿಯಲ್ಲಿ ಆಳವಾದ ಅಂತರವನ್ನು ಗುರುತಿಸಬಹುದು ಎಂದು ವಿಶ್ಲೇಷಿಸಿದ್ದಾರೆ[66].

ಬಿ. ಎನ್. ಬಿರಾದಾರ್ (2000), "ವರ್ಕಿಂಗ್ ಆಫ್ ಜಿಲ್ಲಾ ಪಂಚಾಯತ್ ಇನ್ ಕರ್ನಾಟಕ – ಎ ಕೇಸ್ ಸ್ಟಡಿ ಆಫ್ ಬಿಜಾಪುರ", ಎಂಬ ಸಂಶೋಧನಾ ಗ್ರಂಥದಲ್ಲಿ ಜಿಲ್ಲಾ ಪಂಚಾಯತ್‌ನ ಕಲಾಪಗಳಲ್ಲಿ ಮಹಿಳಾ ಸದಸ್ಯರು ಸಕ್ರಿಯವಾಗಿ ಭಾಗವಹಿಸುತ್ತಿಲ್ಲ ಎನ್ನುವುದನ್ನು ಗಮನಿಸಲಾಗಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಶಿಕ್ಷಣದ ಕೊರತೆ, ಆತ್ಮವಿಶ್ವಾಸದ ಕೊರತೆ, ಪುರುಷ ಪ್ರಧಾನ ಸಮಾಜ, ತರಬೇತಿಯ ಕೊರತೆ ಮತ್ತು ಸಾಂಪ್ರದಾಯಿಕ ಸಾಂಸಾರಿಕ ಹಿನ್ನೆಲೆ ಪ್ರಾಮುಖ್ಯವಾಗಿದೆ[67]. ಇವರ ಸಲಹೆಯ ಪ್ರಕಾರ ಮಹಿಳಾ ಸದಸ್ಯರು ತರಬೇತಿಯಿಂದ ಪರಿಣಾಮಕಾರಿಯಾಗಿ ಭಾಗವಹಿಸಲು ಸಾಧ್ಯ ಎಂದು ವ್ಯಕ್ತಪಡಿಸಿದ್ದಾರೆ.

ಅಮೃತಾ ಬಿ. ಎಸ್. (2012), "ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ" ಎಂಬ ಸಂಶೋಧನಾ ಗ್ರಂಥದಲ್ಲಿ ಪುರುಷರಂತೆ ಮಹಿಳೆಯರಿಗೂ ರಾಜಕೀಯ ಹಿತಾಸಕ್ತಿಗಳ ಬೇಡಿಕೆಗಳಿವೆ. ಅವೆಲ್ಲವುಗಳಿಗೆ ಸ್ಥಳೀಯ ಹಂತದಿಂದಲೂ ಜನಮನ್ನಣೆ ಪ್ರತಿನಿಧಿತ್ವ ಶಾಸನ ಬದ್ಧತೆಯ ಅಗತ್ಯತೆ ಇದೆ. ಇವೆಲ್ಲವುಗಳನ್ನು ಸ್ಥಳೀಯ ಕಾಯ್ದೆಗಳನ್ನಾಗಿ, ಧೋರಣೆಗಳನ್ನಾಗಿ ಅನುಷ್ಠಾನಯೋಗ್ಯ ಯೋಜನೆಗಳನ್ನಾಗಿ ಮಾರ್ಪಡಿಸುವ ಅಗತ್ಯತೆ ಇದೆ. ಮಹಿಳೆಯರ ರಾಜಕೀಯ ಮತ್ತು ಆಡಳಿತಾತ್ಮಕ ಪಾಲ್ಗೊಳ್ಳುವಿಕೆಯ ವಿನಃ ರೂಪುಗೊಂಡ ಮತ್ತು ರೂಪುಗೊಳ್ಳಬಹುದಾದ ಮಹಿಳಾಪರ ಶಾಸನಗಳು ಮತ್ತು ಯೋಜನೆಗಳು ಬರೀ ಅಲಂಕೃತ ಕಾಗದದ ಕುಸುಮಗಳಾಗಿವೆ. ತತ್‌ಪರಿಣಾಮವಾಗಿ ಪಂಚಾಯತ್ ಸಭೆಯಲ್ಲಿ ಭಾಗವಹಿಸುವ ಮಹಿಳಾ ಪ್ರತಿನಿಧಿಗಳನ್ನು ಅಧಿಕಾರ ಶೂನ್ಯ ಉತ್ಸವಮೂರ್ತಿಗಳನ್ನಾಗಿ ಪುರುಷರ ಕೈಗೊಂಬೆಗಳನ್ನಾಗಿ ಮಾಡಲಾಗಿದೆ[68]. ಮಹಿಳಾಪರ ಪ್ರಜಾಪ್ರಭುತ್ವಕ್ಕೆ ಉಂಟಾಗಬಹುದಾದ ಅಪಚಾರದಿಂದ ವ್ಯವಸ್ಥೆಯನ್ನು ಪಾರುಮಾಡಬೇಕಾದರೆ ಅಧಿಕ ಪ್ರಮಾಣದಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಬೇಕಾಗಿದೆ ಎಂದು ವಿಮರ್ಶಿಸಿದ್ದಾರೆ.

ಭಾರ್ಗವ ಬಿ. ಎಸ್. (1993), "ಪೊಸಿಷನ್ ಆಫ್ ವುಮೆನ್ ಇನ್ ಪೊಲಿಟಿಕಲ್ ಇನ್ಸ್‌ಟಿಟ್ಯೂಷನ್ಸ್", ಎಂಬ ಲೇಖನದಲ್ಲಿ ರಾಜಕೀಯದಲ್ಲಿ ಮಹಿಳೆಯ ಪಾತ್ರ ಬಹುಮಟ್ಟಿಗೆ ಮಹಿಳೆಯರ ಸಮಾಜಿಕ ಹಾಗೂ ಶೈಕ್ಷಣಿಕ ಸ್ಥಾನಮಾನವನ್ನು ಅವಲಂಬಿಸುತ್ತದೆ. ಮಹಿಳಾ ಸಾಕ್ಷರತೆಯ ಪ್ರಮಾಣ

ಕಡಿಮೆಯಾಗಿರುವುದರ ನೇರ ಪರಿಣಾಮವಾಗಿ ಮಹಿಳೆ ರಾಜಕೀಯ ಕ್ಷೇತ್ರದಿಂದ ದೂರ ಉಳಿದಿದ್ದಾಳೆ. ಅನಕ್ಷರಸ್ಥ ಮಹಿಳೆಗೆ ರಾಜಕಾರಣ ಎಂದರೆ ಏನೆಂಬುದೇ ತಿಳಿದಿರುವುದಿಲ್ಲ. ಮತ ಚಲಾಯಿಸುವ ಹಕ್ಕುಗಳಾಗಲೀ, ನಾಗರಿಕಳಾಗಿ ಅವಳು ಹೊಂದಿರುವ ಹಕ್ಕುಗಳಾಗಲೀ ಅವಳಿಗೆ ತಿಳಿದಿರುವುದಿಲ್ಲ. ಸಾಮಾನ್ಯವಾಗಿ ತನ್ನ ಕುಟುಂಬದಲ್ಲಿ ಯಜಮಾನ ಹೇಳಿದ ಚಿಹ್ನೆಯ ಮುಂದೆ ಹೆಬ್ಬೆಟ್ಟು ಗುರುತು ಮಾಡುವ ಮೂಲಕ ದೇಶದ ರಾಜಕೀಯದಲ್ಲಿ ಭಾಗವಹಿಸುವ ಮಟ್ಟಿಗೆ ಅವಳ ಪಾತ್ರ ಸೀಮಿತವಾಗಿರುತ್ತದೆ. ಅಲ್ಲದೆ ರಾಜಕೀಯದಲ್ಲಿ ಭ್ರಷ್ಟಾಚಾರ ಮತ್ತು ಅದಕ್ಷತೆಯಿಂದಾಗಿ ಹಾಗೂ ತಮ್ಮ ದಿನನಿತ್ಯದ ಜೀವನದ ಸಮಸ್ಯೆಗಳೊಂದನ್ನು ರಾಜಕೀಯ ಪರಿಹರಿಸಿಲ್ಲ ಎಂದು ಮಹಿಳೆಯರು ಭಾವಿಸುವುದರಿಂದಾಗಿ ಮಹಿಳೆಯರಲ್ಲಿ ರಾಜಕೀಯ ಬಗ್ಗೆ ಮೋಹ ಉಳಿದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ[69].

ಓಂಕಾರ ಕಾಕಡೆ ಮತ್ತು ಬಸವಂತಿಕೋಟೂರು (2011), "ಪಂಚಾಯತ್‌ರಾಜ್, ಮಹಿಳಾ ಸಬಲೀಕರಣ ಮತ್ತು ಮಾಧ್ಯಮ", ಎಂಬ ಲೇಖನದಲ್ಲಿ ಮಾನವ ಜನಾಂಗದ ಸೃಷ್ಟಿಯ ಕೇಂದ್ರ ಬಿಂದು ಮಹಿಳೆ. ಆದರೆ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಮತ್ತು ಸಾಮಾಜಿಕ ಜೀವನದ ಪ್ರಧಾನ ಸ್ಥಾನಗಳಿಂದ ಮಹಿಳೆ ಬಹುತೇಕ ದೂರ. ಇದಕ್ಕೆ ಬಹುಮುಖ್ಯ ಕಾರಣ ಪುರುಷ ಪ್ರಧಾನ ವ್ಯವಸ್ಥೆ. ಸಮಾಜದಲ್ಲಿ ಅಸಮಾನತೆ, ಲಿಂಗ ತಾರತಮ್ಯ ಬಹುದೊಡ್ಡ ಸಮಸ್ಯೆಯಾಗಿ ಆಳವಾಗಿ ಬೇರೂರಿದೆ. ಇದರಿಂದಾಗಿ ಮಹಿಳೆಯರು ಅಸಮಾನತೆ, ಅನಾರೋಗ್ಯ, ಹೆಣ್ಣು ಭ್ರೂಣ ಹತ್ಯೆ, ಅನಕ್ಷರತೆ, ಅನ್ಯಾಯ, ಅಪೌಷ್ಠಿಕತೆ, ಕೌಟುಂಬಿಕ ದೌರ್ಜನ್ಯ, ಮೂಡನಂಬಿಕೆ ಹಾಗೂ ದೇವರು, ಧರ್ಮಗಳ ಹೆಸರಿನಲ್ಲಿ ಶೋಷಣೆಗೆ ಒಳಗಾಗುತ್ತಿದ್ದಾರೆ. ಹೀಗಾಗಿ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯಿಂದ ಕೂಡಿದ ವ್ಯವಸ್ಥೆಯಲ್ಲಿ ಮಹಿಳೆಯರ ಬದುಕು ಹಸನಾಗಿಲ್ಲ. ರಾಷ್ಟ್ರಮಟ್ಟದಲ್ಲಿ ಹಾಗೂ ಅಂತಾರಾಷ್ಟ್ರಮಟ್ಟದಲ್ಲಿ ಸರ್ಕಾರ, ಸಂಘಸಂಸ್ಥೆಗಳು ಮತ್ತು ಮಹಿಳಾ ಸಂಘಟನೆಗಳು ಮಹಿಳೆಯರ ಜೀವನದ ಗುಣಮಟ್ಟ ಸುಧಾರಿಸಲು ಕೆಲಸ ಮಾಡುತ್ತಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಫಲಿತಾಂಶಗಳು ದೊರೆತಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಕಷ್ಟು ಅಭಿವೃದ್ಧಿಪರ ಕಾರ್ಯಕ್ರಮ ಹಾಕಿಕೊಂಡಿದ್ದರೂ ಪುರುಷ ಪ್ರಧಾನ ವ್ಯವಸ್ಥೆ ಮಾತ್ರ ನಿರೀಕ್ಷಿತ ಪ್ರಮಾಣದಲ್ಲಿ ಬದಲಾಗಿಲ್ಲ. ಜಾಗತೀಕರಣದಿಂದಾಗಿ ಲಿಂಗ ಅಸಮಾನತೆಗಳು ಇನ್ನಷ್ಟು ಹೆಚ್ಚಾಗುತ್ತಿವೆ[70].

ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ತಾರತಮ್ಯ, ಕಷ್ಟಸಂಕೋಲೆಗಳಿಂದ ಮಹಿಳೆ ಹೊರಬರಬೇಕಾದರೆ ಅದಕ್ಕೆ ಪ್ರಮುಖ ಪರಿಹಾರವೆಂದರೆ ಪುರುಷ ಮತ್ತು ಮಹಿಳೆಯರ ನಡುವೆ

ಸಮತೋಲನದ ವಾತವರಣ ಸೃಷ್ಟಿಸಬೇಕು. ಎಲ್ಲಿಯ ವರೆಗೆ ಮಹಿಳೆಯು ತನ್ನನ್ನು ಅಬಲೆಯನ್ನಾಗಿಸುವ ವ್ಯವಸ್ಥೆಯ ಸಂಕೋಲೆಯಿಂದ ಬಿಡುಗಡೆ ಆಗುವುದಿಲ್ಲವೋ ಮತ್ತು ಮಹಿಳೆಯರು ಅನುಭವಿಸುತ್ತಿರವ ವ್ಯವಸ್ಥೆ ಸರಿಯಾಗುವುದಿಲ್ಲವೋ ಅಲ್ಲಿಯತನಕ ಮಹಿಳಾ ಸಬಲೀಕರಣ ಅಸಾಧ್ಯ. ಮಹಿಳೆಯ ಮೇಲಾಗುವ ತಾರತಮ್ಯದ ವಿರುದ್ದ ಧಾರ್ಮಿಕ, ಸಾಂಸ್ಕೃತಿಕ ಮತ್ತು ಶಾಸನಾತ್ಮಕವಾಗಿ ಹೋರಾಟ ಮಾಡುವುದೇ ಸಬಲೀಕರಣ. ಅಂದರೆ ಮಹಿಳೆಯರು ಬಂಧಮುಕ್ತರಾಗಿ ಸ್ವತಂತ್ರ, ಮುಕ್ತ ಆಯ್ಕೆಯ ಅವಕಾಶಗಳು ಮತ್ತು ವೈಯಕ್ತಿಕ ಗೌರವದಿಂದ ಅವಕಾಶ ಒದಗಿಸುವುದೇ ಮಹಿಳಾ ಸಬಲೀಕರಣ ಎಂದು ವಿಶ್ಲೇಷಿಸಿದ್ದಾರೆ[71].

ಸೂರತ್ ಸಿಂಗ್ (2004), "ಎಂಪವರ್‌ಮೆಂಟ್ ಆಫ್ ವುಮೆನ್ ಮೆಂಬರ್ಸ್ ಇನ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್" ಎಂಬ ಲೇಖನದಲ್ಲಿ ಮಹಿಳೆಯರ ಸಬಲೀಕರಣವು ಅವಶ್ಯವಾಗಿ ಕೆಳಗಿನಿಂದ ಮೇಲಕ್ಕೆ ಕೊಂಡೊಯ್ಯುವಂತಹ ಪ್ರಕ್ರಿಯೆಯಾಗಬೇಕೆ ಹೊರತು ಮೇಲಿನಿಂದ ಕೆಳಕ್ಕೆ ಬರುವಂತಹ ಕಾರ್ಯತಂತ್ರವಾಗಬಾರದು. ಅಂದರೆ, ಮಹಿಳಾ ಸಬಲೀಕರಣವು ಬೇರು ಮಟ್ಟದಿಂದ ಪ್ರಾರಂಭವಾಗಬೇಕು. ಅಸಲಿ ಮಹಿಳಾ ಸಬಲೀಕರಣಕ್ಕೆ ಮಹಿಳೆಯರ ಧ್ವನಿ ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ಅವರ ಪಾತ್ರದ ಅಗತ್ಯವಿದೆ. ಇತ್ತೀಚಿನ ಅನುಭಗಳು ಹೇಳುವುದೇನೆಂದರೆ, ಸಬಲೀಕರಣದ ಕಡೆಗೆ ಕೆಲಸ ಮಾಡುತ್ತಿರುವ ಮಹಿಳಾ ಯೋಜಕರು, ಮಹಿಳೆಯರು ತಮ್ಮ ಹಿತಾಸಕ್ತಿಗಳೇನೆಂಬುದನ್ನು ಮತ್ತು ಹೇಗೆ ಬದಲಾವಣೆ ತರಬೇಕೆಂಬುದನ್ನು ನಿರ್ಧರಿಸಿಕೊಳ್ಳಲು ಅವರಿಗೇ ಅವಕಾಶ ನೀಡುವ ಮಾರ್ಗಗಳನ್ನು ರೂಪಿಸಬೇಕು.

ಸಬಲೀಕರಣವನ್ನು ಉತ್ತೇಜಿಸಲು ಮಹಿಳೆಯರ ಸಬಲೀಕರಣದ ಗುರಿ ಇಟ್ಟುಕೊಂಡಿರುವ ಸಂಸ್ಥೆಗಳು, ಆ ಮಹಿಳೆಯರಿಗೆ ಜವಾಬ್ದಾರಿ ಮತ್ತು ರಚನಾ ಕ್ರಮ ಮತ್ತು ಕಾರ್ಯ ಪದ್ಧತಿಯನ್ನು ವಿಮರ್ಶಿಸುವ ಅಗತ್ಯವಿದೆ. ಆದರೆ ವಾಸ್ತವವಾಗಿ ಭಾರತದಲ್ಲಿ ಮಹಿಳೆಯರ ಸಬಲೀಕರಣಕ್ಕೆ ಇರುವ ಮುಖ್ಯ ಅಡೆತಡೆಗಳಲ್ಲಿ ಕೆಲವೆಂದರೆ ಅಜ್ಞಾನ ಮತ್ತು ಅನಕ್ಷರತೆ. ಸಾಮಾನ್ಯ ಮಹಿಳೆಯು ಎದುರಿಸುವ ನಿಜ ಜೀವನದ ಸಮಸ್ಯೆಗಳಲ್ಲಿ ಕೆಲವೆಂದರೆ, ಅನುಭವದ ಕೊರತೆ, ಏಕ ಪ್ರಕಾರದ ಸಾಂಸ್ಕೃತಿಕ ಮನೋಭಾವ, ವಿಶ್ವಾಸದ ಕೊರತೆ, ಆರ್ಥಿಕ ಸಬಲೀಕರಣದ ಕೊರತೆ ಮತ್ತು ಅನಕ್ಷರತೆ, ಮನೆಕೆಲಸಗಳ ಹೊರೆ ಹಾಗೂ ಕಾನೂನು ಮತ್ತು ಕಾರ್ಯಪದ್ಧತಿಗಳ ಅಜ್ಞಾನ, ಸರ್ಕಾರ ಹಾಗೂ ಇತರ ಆಡಳಿತ ಸಂಸ್ಥೆಗಳ ನಡುವೆ ಕಳಪೆ ಸಂಪರ್ಕ, ದುರ್ಬಲ ವ್ಯವಸ್ಥೆ, ನೀತಿ ಸನ್ನಿವೇಶದ ಬದಲಾವಣೆ, ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಂಸ್ಥಿಕ ಬೆಂಬಲವನ್ನು ಹೇಗೆ ಪಡೆದು ಕೊಳ್ಳಬೇಕು ಎಂಬ

ಬಗ್ಗೆ ತಿಳಿವಳಿಕೆ ಕೊರತೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಹಿಳೆಯ ಸಬಲೀಕರಣದ ವಿಷಯವನ್ನು ಬಗೆಹರಿಸಲು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದರೂ ಸಹ, ಸಾಧಿಸಿರುವ ವಾಸ್ತವಿಕ ಪ್ರಗತಿ ತುಂಬಾ ಕಡಿಮೆ ಎಂದು ಅಭಿಪ್ರಾಯ ತಿಳಿಸಿರುತ್ತಾರೆ[72].

ಎಸ್. ಗೋವಿಂದೇ ಗೌಡ ಹಾಗೂ ಇತರರು (1996), "ಡೆವಲಪ್‌ಮೆಂಟಲ್ ರೋಲ್ ಆಫ್ ವುಮೆನ್ ಮೆಂಬರ್ಸ್ ಆಫ್ ಪಂಚಾಯತ್‌ರಾಜ್ ಇನ್‌ಸ್ಟಿಟ್ಯೂಷನ್ಸ್", ಇವರು ಕರ್ನಾಟಕದಲ್ಲಿ ಪಂಚಾಯತಿಗೆ ಚುನಾಯಿತರಾಗಿರುವ ಮಹಿಳೆಯರ ಮೇಲಿನ ಒಂದು ಅಧ್ಯಯನದಲ್ಲಿ ಅಭಿವೃದ್ಧಿ ಹೊಂದಿರುವ ತಾಲೂಕುಗಳ ಪಂಚಾಯತ್‌ನ ಮಹಿಳಾ ಸದಸ್ಯರು ಹಿಂದುಳಿದ ತಾಲೂಕಿನ ತಮ್ಮ ಸಹವರ್ತಿಗಳಿಗಿಂತ ಹೆಚ್ಚು ಉತ್ತಮವಾದ ಪ್ರಗತಿಪರ ಪಾತ್ರವನ್ನು ವಹಿಸುತ್ತಾರೆ ಎನ್ನುವುದನ್ನು ಕಂಡುಕೊಂಡಿದ್ದಾರೆ. ಅಧ್ಯಯನವು ಹೊರಗೆಡಹುವಂತೆ, ವಯಸ್ಸು, ಶಿಕ್ಷಣ, ಜಾತಿ, ಕುಟುಂಬದ ವಾರ್ಷಿಕ ಆದಾಯ ಮತ್ತು ಮಹಿಳಾ ನಾಯಕರ ಭೂ–ಹಿಡುವಳಿ ಇವೇ ಮೊದಲಾದ ಸಾಮಾಜಿಕ ಲಕ್ಷಣಗಳಲ್ಲಿ ಕೇವಲ ಶಿಕ್ಷಣ ಹಾಗೂ ಕುಟುಂಬದ ವಾರ್ಷಿಕ ವರಮಾನಗಳು ಅವರ ಅಭಿವೃದ್ಧಿಪರ ನಿರ್ವಹಣೆಯ ಜೊತೆಗೆ ಧನಾತ್ಮಕ ಹಾಗೂ ಗಣನೀಯ ಸಂಬಂಧವನ್ನು ಹೊಂದಿತ್ತು. ಅಧ್ಯಯನದ ಫಲಿತಾಂಶಗಳು ಹೇಳುವಂತೆ, ಸೂಕ್ತ ಗುರುತಿಸುವಿಕೆ ಹಾಗೂ ಪ್ರೇರಣೆ ನೀಡಿದಲ್ಲಿ, ಪಂಚಾಯತ್ ರಾಜ್ ಸಂಸ್ಥೆಯ ಮಹಿಳಾ ಸದಸ್ಯರು ಅಭಿವೃದ್ಧಿಯ ಪಾತ್ರವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯ ಎಂದು ಅಭಿಪ್ರಾಯ ಪಟ್ಟಿದ್ದಾರೆ[73].

ಎಸ್. ವಾಲಿ, ಬಿ.ಕೆ.ಅನಿತ, ಅನಿತ ಗುರುಮೂರ್ತಿ (1998), "ಸ್ಟೇಟಸ್ ಆಫ್ ರೂರಲ್ ವುಮೆನ್ ಇನ್ ಕರ್ನಾಟಕ", ಎಂಬ ಲೇಖನದಲ್ಲಿ ಕರ್ನಾಟಕದಲ್ಲಿ ನಡೆಸಿದ ಅಧ್ಯಯನಗಳಲ್ಲಿ ಕಂಡುಬಂದಿರುವುದೇನೆಂದರೆ, ಹೆಚ್ಚಿನ ಸಂದರ್ಭಗಳಲ್ಲಿ ಮಹಿಳೆಯರನ್ನು ಗಂಭೀರವಾಗಿ ಪರಿಗಣಿಸಲಾಗುವುದಿಲ್ಲ. ಅದು ಅವರ ಅನುಭವದ ಕೊರತೆಯಿಂದಾಗಿ ಅಲ್ಲ. ಬದಲಾಗಿ, ಅವರ ಜ್ಞಾನದ ಕೊರತೆಯಿಂದಾಗಿ. ಮಾಹಿತಿಯ ಕೊರತೆಯಿರುವ ಕ್ಷೇತ್ರಗಳೆಂದರೆ: ಸಂವಿಧಾನಿಕ ತಿದ್ದುಪಡಿಗಳು (ಅವರ ಅಧಿಕಾರ ಮತ್ತು ಕರ್ತವ್ಯಗಳು), ಗ್ರಾಮ ಪಂಚಾಯತ್‌ನ ವ್ಯಾಪ್ತಿ, ಹಣಕಾಸಿನ ವಿಚಾರಗಳು, ಸಾಲ ತೆಗೆದುಕೊಳ್ಳುವುದರಲ್ಲಿರುವ ಅನುಕೂಲಗಳು ಹಾಗೂ ಅನನುಕೂಲಗಳು, ಬ್ಯಾಂಕುಗಳು, ಹಾಗೂ ಇತರ ಸಂಗತ ಸಂಸ್ಥೆಗಳು ಹಾಗೂ ಸರಕಾರೀ ಸಂಸ್ಥೆಗಳ ಕಾರ್ಯವೈಖರಿಯ ಅಂದಾಜು, ಇತ್ಯಾದಿ. ಆದಾಯ, ಭೂಮಿ, ವಸತಿ, ಹಾಗೂ ಸಾಲ ಸೌಲಭ್ಯಗಳಿಗಿರುವ ಪರಿಮಿತ ಅವಕಾಶವು ಮಹಿಳೆಯರು ಚುನಾವಣೆಗೆ ಸ್ಪರ್ಧಿಸುವುದು, ಪ್ರಚಾರ, ತಮ್ಮ ಕ್ಷೇತ್ರದ ರಚನೆ ಹಾಗೂ ಸುಸ್ಥಿರತೆಯನ್ನು

ಕಾಪಾಡುವುದು, ಹಾಗೂ ಚುನಾಯಿತ ಪ್ರತಿನಿಧಿಗಳಾಗಿ ತಮ್ಮ ಪಾತ್ರ ನಿರ್ವಹಿಸುವುದು, ಇವೇ ಮೊದಲಾಗಿ ಪರಿಣಾಮಕಾರಿಯಾಗಿ ಚುನಾವಣಾ ಪ್ರಕ್ರಿಯೆಯಲ್ಲಿ ತೊಡಗುವುದಕ್ಕೆ ಅಡ್ಡಿಯನ್ನುಂಟುಮಾಡುತ್ತದೆ. ಚುನಾಯಿತ ಪ್ರತಿನಿಧಿಯ ದಕ್ಷತೆ, ವಿಶೇಷವಾಗಿ ಪಂಚಾಯತ್‌ರಾಜ್ ಸಂಸ್ಥೆಯಲ್ಲಿ, ಸರಕಾರಿ ಅಧಿಕಾರಿಗಳಿಗೆ ಅವರಿಗಿರುವ ಅವಕಾಶವನ್ನು ಹೊಂದಿಕೊಂಡಿದೆ[74]. ಯಾಕೆಂದರೆ, ಹೆಚ್ಚಿನ ಕಾರ್ಯಕ್ರಮಗಳನ್ನು ಅವರ ಮೂಲಕವೇ ಕಳುಹಿಸಲಾಗುತ್ತದೆ. ಲಿಂಗ ಸೂಕ್ಷ್ಮತೆಯ ಕೊರತೆಯುಳ್ಳ ಸರಕಾರೀ ಅಧಿಕಾರಿಗಳಿಂದ ಎದುರಾಗುವ ಪ್ರತಿರೋಧದಿಂದಾಗಿ ಮಹಿಳಾ ಚುನಾಯಿತ ಪ್ರತಿನಿಧಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಅಡ್ಡಿಯುಂಟಾಗುತ್ತದೆ ಎಂದು ತಿಳಿಸಿರುತ್ತಾರೆ.

ಆಶಾ ರಮೇಶ್ ಮತ್ತು ಭಾರ್ತಿ ಆಲಿ (2001), "ಟುವರ್ಡ್ಸ್ ಪೊಲಿಟಿಕಲ್ ಎಂಪವರ್‌ಮೆಂಟ್– ಪ್ರೊಫೈಲಿಂಗ್ ಎಲೆಕ್ಟೆಡ್ ವುಮೆನ್ ಮೆಂಬರ್ಸ್ ಇನ್ ಕರ್ನಾಟಕ ಎಂಡ್ ಗುಜರಾತ್", ಎಂಬ ಸಂಶೋಧನೆಯಲ್ಲಿ, ಪಂಚಾಯತ್ ಮಹಿಳಾ ಸದಸ್ಯೆಯರು, ತಮ್ಮ ಪತಿ ಅಥವಾ ಕುಟುಂಬದ ಯಾರಾದರೂ ಗಂಡಸರು ಹಣಕಾಸಿನ ವ್ಯವಹಾರವನ್ನು ನೋಡಿಕೊಂಡಿರುವುದರಿಂದ ಕೆಲವು ಮಹಿಳೆಯರಿಗೆ ಅವರ ಚುನಾವಣೆಯಲ್ಲಿ ಎಷ್ಟು ಖರ್ಚಾಗಿದೆ ಎಂಬುದೂ ಗೊತ್ತಿರಲಿಲ್ಲ, ಕೆಲವರಿಗೆ ಇಂತಹ ಮಾಹಿತಿಯನ್ನು ಹೊರಗೆಡವಲು ಇಷ್ಟವಿರಲಿಲ್ಲ. ಅಧಿಕಾರದಲ್ಲಿರಲು ಬೇಕಾದ ಹಣಕಾಸು ಮತ್ತು ತಾಕತ್ತನ್ನು ಹೆಚ್ಚಿಸಲು ಮತ್ತು ಚುನಾಯಿಸುವ ಸಮುದಾಯದ ಮೇಲೆ ತಮ್ಮ ನಿರ್ಧಾರವನ್ನು ಹೇರಲು ಹಾಗೂ ವಿರೋಧಿ ಸ್ಪರ್ಧಿಗಳನ್ನು ಹಾಗೂ ಮತದಾರರನ್ನು ಬೆದರಿಸಲು ದುಡ್ಡು ಮತ್ತು ತೋಳುಬಲವನ್ನು ಉಪಯೋಗಿಸಲಾಗುತ್ತದೆ. ಮಹಿಳೆಯರು ರಾಜಕೀಯಕ್ಕೆ ಪ್ರವೇಶಿಸದಂತೆ ತಡೆಯಲು, ಮರ್ಯಾದೆಯನ್ನು ಕಳೆದು ಅವರಲ್ಲಿ ಭಯವನ್ನು ಹುಟ್ಟಿಸುವುದು ರಾಜಕೀಯದ ಬಹು ಮುಖ್ಯ ಅಂಗವಾಗಿದೆ. ಇದೂ ಅಲ್ಲದೇ, ಭ್ರಷ್ಟಾಚಾರವನ್ನೂ ಕ್ರಮಬದ್ಧವಾಗಿ ಅಳವಡಿಸಿಕೊಳ್ಳಲಾಗಿದೆ[75]. ಅಪರಾಧೀಕರಣ ಮತ್ತು ಭ್ರಷ್ಟಾಚಾರಗಳು ಮಹಿಳೆಯರ ಮೌಲ್ಯ ಕ್ರಮಗಳಲ್ಲಿಲ್ಲವಾದ್ದರಿಂದ ಅವರನ್ನು ಸಾಮಾನ್ಯವಾಗಿ ರಾಜಕೀಯದಿಂದ ದೂರವಿಡಲಾಗುತ್ತದೆ ಎಂದು ತಿಳಿಸಿರುತ್ತಾರೆ.

ರುಮಾ ಬ್ಯಾನರ್ಜಿ (1995), "ವುಮೆನ್ ಇನ್ ಪಂಚಾಯತ್‌ರಾಜ್: ಎ ಸ್ಟಡಿ ಇನ್ ವೆಸ್ಟ್ ಬೆಂಗಲ್", ಸಾಮಾನ್ಯವಾಗಿ, ಅವಿವಾಹಿತ ಮಹಿಳೆಯರು ಗ್ರಾಮ ಪಂಚಾಯತ್‌ನಲ್ಲಿ ಪ್ರತಿನಿಧಿಸುವುದು ಕಡಿಮೆ. ಪಶ್ಚಿಮ ಬಂಗಾಲದಲ್ಲಿ 50 ಗ್ರಾಮ ಪಂಚಾಯತ್‌ನ ಮಹಿಳಾ ಸದಸ್ಯರ ಮೇಲೆ ನಡೆಸಿದ ಒಂದು ಅಧ್ಯಯನದಲ್ಲಿ, ನಾಲ್ಕು ಮಹಿಳೆಯರು ವಿಧವೆಯರಾಗಿದ್ದರು, ಹಾಗೂ ನಾಲ್ವರು ಅವಿವಾಹಿತೆಯರಾಗಿದ್ದರು. ಉಳಿದ 42 ಮಂದಿ (ಶೇ.84) ವಿವಾಹಿತೆಯರಾಗಿದ್ದರು. "ವಿವಾಹಿತ

ಮಹಿಳೆಯರ" ಪ್ರಾತಿನಿಧಿತ್ವವು ವಾಸ್ತವವಾಗಿ ಅವರ ಭಾಗವಹಿಸುವಿಕೆಯನ್ನು ಸೂಚಿಸಬೇಕಾಗಿಲ್ಲ. ಯಾಕೆಂದರೆ, ಹೆಚ್ಚಿನ ಸಂದರ್ಭಗಳಲ್ಲಿ ಅವರ ಕುಟುಂಬದ ಪುರುಷ ಸದಸ್ಯರೇ ನಿರ್ಧಾರ ಮಾಡುವವರಾಗಿರುತ್ತಾರೆ. ಹೀಗೆ ವೈವಾಹಿಕ ಸ್ಥಿತಿಗತಿಯು ರಾಜಕೀಯ ಭಾಗವಹಿಸುವಿಕೆಗೆ ತಡೆಯಲ್ಲದಿದ್ದರೂ, ಆಚರಣೆಯ ವಿಚಾರಕ್ಕೆ ಬರುವಾಗ ವಿವಾಹಿತ ಮಹಿಳೆಯರು ಚುನಾವಣೆಗೆ ಸ್ಪರ್ಧಿಸುವುದು ಹೆಚ್ಚು ಸಮ್ಮತವಾಗಿದೆ. ಪಶ್ಚಿಮ ಬಂಗಾಳದಲ್ಲಿ, ಗ್ರಾಮ ಪಂಚಾಯತ್‌ನ 50ರಲ್ಲಿ 14 ಮಂದಿಯಷ್ಟು ಮಹಿಳಾ ಸದಸ್ಯರು (ಶೇ.28), ಸ್ವಂತ ಆದಾಯ ಇರುವಂತಹ ಮಹಿಳೆ ಮಾತ್ರ ಪಂಚಾಯತ್‌ನ ಸಕ್ರಿಯ ಸದಸ್ಯರಾಗಬಹುದಾದ ಸಾಮರ್ಥ್ಯ ಹೊಂದಿದ್ದಾರೆಂದು ನಂಬಿದ್ದಾರೆ[76]. ಚುನಾವಣಾ ಪ್ರಚಾರದಲ್ಲಿ ಉಪಯೋಗಿಸಬಹುದಾದಂತಹ ಸಂಪನ್ಮೂಲವು ಪುರುಷರಿಗಿಂತ ಮಹಿಳೆಯರ ವಶದಲ್ಲಿ ಕಡಿಮೆ ಮಟ್ಟದಲ್ಲಿ ಇರುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ರಾಕೇಶ್ ಕೆ. ಸಿಂಗ್ (2012), "ಪಂಚಾಯತ್‌ರಾಜ್‌ನಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳು", ಎಂಬ ಅಧ್ಯಯನವು ಸಂದಿಗ್ಧ ವಿಚಾರಗಳನ್ನು ಬೆಳಕಿಗೆ ತರುತ್ತದೆ. ಒಂದು ವೇಳೆ ಹೆಚ್ಚಿನ ಮೀಸಲು ಸ್ಥಾನಗಳಿಂದಾಗಿ ಚುನಾವಣೆಯಲ್ಲಿ ಸ್ಪರ್ಧಿಸುವ ಮಹಿಳೆಯರ ಸಂಖ್ಯೆ ಹೆಚ್ಚಾದರೂ, ಈ ಮಹಿಳೆಯರು ಸಾಮಾಜಿಕ ನಿಲುವುಗಳಿಂದಾಗಿ ರಾಜಕೀಯದಲ್ಲಿ ಖಂಡಿತವಾಗಿಯೂ ಮುಂದುವರಿಯುತ್ತಾರೆ ಎಂಬುದು ಖಚಿತವಿಲ್ಲ. ತರಬೇತಿಯ ಕೊರತೆ ಮತ್ತು ಕ್ರಮಗಳಿಂದಾಗಿ, ತಮ್ಮ ಕೆಳಮಟ್ಟದ ಅರ್ಹತೆಗಳಿಂದಾಗಿ ಅವರು ಒದ್ದಾಡಬೇಕಾಗುತ್ತದೆ. ಹೆಚ್ಚಿನ ಮಹಿಳೆಯರೂ ತಮ್ಮೊಂದಿಗೆ ಚುನಾಯಿತ ಮಹನೀಯ ಸಹಅಭ್ಯರ್ಥಿಗಳಿಗಿಂತ ಕಡಿಮೆ ಶಿಕ್ಷಣವನ್ನು ಹೊಂದಿರುತ್ತಾರೆ. ಉದಾಹರಣೆಗೆ, ಸ್ಥಾನಗಳ ಬದಲಾವಣೆಗಳು ಕೂಡಾ ಮತ್ತೆ ಸ್ಪರ್ಧಿಸಲು ಸ್ಫೂರ್ತಿಗೊಂಡ ಮಹಿಳೆಯರ ಆಸಕ್ತಿಯ ವಿರುದ್ಧವೇ ಕೆಲಸ ಮಾಡುವಂತೆ ಕಾಣುತ್ತದೆ. ಎಲ್ಲಾ ಸಮೀಕ್ಷೆಗಳು ಶಿಫಾರಸ್ಸು ಮಾಡಿದಂತೆ, "ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳು", ಎಂಬುದರ ಬಗ್ಗೆ ಮರುಚಿಂತನೆ ಅಗತ್ಯವೆಂದು ತೋರಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ[77].

ನಮಗೆ ದೊರಕುವ ಸಾಕ್ಷ್ಯಾಧಾರಗಳ ಅಭಿಪ್ರಾಯದಂತೆ, ಎಪ್ಪತ್ತರ ದಶಕದಲ್ಲಿ ಗೌರವಾನ್ವಿತ ಕುಟುಂಬದ ಮಹಿಳೆಯರು ನಿರ್ಲಿಪ್ತರಾಗಿ ರಾಜಕೀಯ ಪ್ರವೇಶಿಸುತ್ತಿಲ್ಲ ಎಂಬ ವಿರೋಧಗಳಿದ್ದು, ಅನಂತರ ಸ್ವಲ್ಪಮಟ್ಟಿನ ಮೇಲ್‌ಸ್ತರದ ಮಹಿಳೆಯರು ಪಂಚಾಯತ್‌ರಾಜ್ ಸಂಸ್ಥೆಗೆ ಆಯ್ಕೆಯಾಗಿದ್ದನ್ನು ಗುರುತಿಸಬಹುದು. ಮಹಾರಾಷ್ಟ್ರದ ಒಂದು ಅಧ್ಯಯನದ ಪ್ರಕಾರ, ಹೀಗೆ ಆಯ್ಕೆಯಾದ ಮಹಿಳೆಯರು ಅಭಿವೃದ್ಧಿ ದೃಷ್ಟಿಕೋನವನ್ನು ಹೊಂದಿದ್ದು ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಯ ಬೇಡಿಕೆಯನ್ನು

ಗಮನಿಸಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕೆ ಒಲವು ತೋರಿದರು ಎಂದು ವಿಶೇಷಿಸಿದ್ದಾರೆ[78]. ಇವರ ಕಂಡುಕೊಳ್ಳುವಿಕೆಯಂತೆ 1970ರ ದಶಕದ ನಂತರ ರಾಜಕೀಯ ಚಟುವಟಿಕೆಗಳಲ್ಲಿ ತನ್ನ ಪಾತ್ರವನ್ನು ನಿರ್ವಹಿಸಲು ಮಹಿಳೆ ಆರಂಭಿಸಿದಳು ಹಾಗೂ ಒಟ್ಟು ವ್ಯವಸ್ಥೆಯ ಮೇಲೆ ಅದು ಬೀರಿದ ಪರಿಣಾಮದ ಬಗೆಗೆ ಹೇಜೆಲ್ ಡಿ. ಲಿಮಾರವರು (1993) ಅವಲೋಕಿಸಿರುತ್ತಾರೆ.

'ವುಮೆನ್ ಇನ್ ಲೋಕಲ್ ಗವರ್ನ್‌ಮೆಂಟ್ ಇನ್ ಮಹಾರಾಷ್ಟ್ರ' ಲೇಖನದಲ್ಲಿ ಹೇಜೆಲ್ ಡಿ. ಲಿಮಾರವರ (1993), ಕಂಡುಕೊಳ್ಳುವಿಕೆಯಂತೆ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಹೆಂಗಸಿನ ಪಾತ್ರ ಎಂದರೆ, ಜಿಲ್ಲಾ ಪರಿಷತ್ ಮತ್ತು ಪಂಚಾಯತ್ ಸಮಿತಿಗಳಲ್ಲಿ ಪ್ರಮುಖವಾದ ನಿರ್ಧಾರಗಳ ಮೇಲೆ ಬೆಳಕು ಚೆಲ್ಲುವುದು ಆಗಿದೆ. ಆದರೆ, ಸಾಮಾಜಿಕವಾಗಿ ಇರುವ ಅಡೆತಡೆಗಳು ಮಹಿಳೆಯರನ್ನು ಆತ್ಮವಿಶ್ವಾಸದಿಂದ ಮುಂದುವರಿಯದ ಹಾಗೆ ಮಾಡಿರುತ್ತದೆ. ಇದು ರಾಜಕೀಯದಲ್ಲಿರುವ ಸಾಮಾಜಿಕ ಹಿಡುಗುಗಳನ್ನು ತೋರಿಸುತ್ತದೆ ಎಂದಿದ್ದಾರೆ[79].

ಜಿಲ್ಲಾ ಪಂಚಾಯತ್ ಸಭೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಒಂದು ಕಣ್ಣು ತೆರೆಸುವ ವಿಷಯವೇ ಆಗಿದೆ. ಒಂದು ವೇಳೆ ಯಾವುದಾದರೂ ಮಹಿಳೆಯು ಏನಾದರೊಂದು ವಿಷಯವನ್ನು ಎತ್ತುವುದಾದರೂ ಮೀಟಿಂಗ್ ಮುಗಿದ ಮೇಲೆ, ಎಲ್ಲಾ ಪುರುಷರು ಹೋದ ಮೇಲೆ ಅಧ್ಯಕ್ಷರಲ್ಲಿ ಅಥವಾ ಉಪಾಧ್ಯಕ್ಷರಲ್ಲಿ ಈ ವಿಷಯ ಪ್ರಸ್ತಾಪಿಸುತ್ತಿದ್ದಳು. ಹೆಚ್ಚಾಗಿ ಒಬ್ಬ ಪುರುಷನು ಅವಳನ್ನು ಬೆಂಬಲಿಸಲು ಅವಳ ಜೊತೆ ಇರುತ್ತಿದ್ದನು. ಸಾಂಸ್ಕೃತಿಕ ಅಂಶಗಳಿಂದಾಗಿ ಮತ್ತು ನಗರ ಪ್ರದೇಶಗಳಿಗೆ ಕರಾವಳಿಯ ಮತ್ತು ದಕ್ಷಿಣ ಕರ್ನಾಟಕದ ಮಹಿಳೆಯರು ಹೆಚ್ಚು ಹೊಂದಿಕೊಂಡಿದ್ದರಿಂದ, ಅವರು ಉತ್ತರ ಕರ್ನಾಟಕದ ಮಹಿಳೆಯರಿಗಿಂತ ಅಧಿಕ ಮಾತನಾಡಬಲ್ಲವರಾಗಿದ್ದರು. ಪುರುಷರ ಜೊತೆ ಸಾಮಾಜಿಕ ಭಿನ್ನತೆ ಮತ್ತು ಮಹಿಳೆಯರ ಅನನುಭವ ಮತ್ತು ಅವರ ಮಾತನ್ನು ಇತರರು ಒಪ್ಪುತ್ತಾರೆನ್ನುವ ಖಚಿತತೆ ಇಲ್ಲದೇ ಇರುವುದರ ಕಾರಣದಿಂದಾಗಿ ಮಹಿಳೆಯರು ಸಭೆಗಳಲ್ಲಿ ಹಾಜರಾಗುವ ಸಂದರ್ಭ ಬಿಟ್ಟರೆ ಹೆಚ್ಚಿನ ಮಹಿಳೆಯರು ಜಿಲ್ಲಾ ಪರಿಷತ್ ಕಛೇರಿಗೂ ಭೇಟಿ ನೀಡುತ್ತಿರಲಿಲ್ಲ. ಆಗಾಗ, ಪುರುಷರು ಮಹಿಳೆಯರನ್ನು ಸಭಾಂಗಣದೊಳಗೆ ಕರೆದೊಯ್ಯುತ್ತಿದ್ದರು ಮತ್ತು ಅಲ್ಲಿ ಅವರನ್ನು ಮಾತನಾಡುವಂತೆ ಉತ್ತೇಜಿಸುತ್ತಿದ್ದರು.

ಜಿಲ್ಲಾ ಪರಿಷತ್ ಸಭೆಗಳಲ್ಲಿ ಸದಸ್ಯೆಯಾಗಿರುವ ಹೆಂಡತಿಯ ಬದಲಿಗೆ ಆಕೆಯ ಗಂಡ ಮಾತನಾಡಿರುವ ನಿದರ್ಶನಗಳು ಕಾಣಸಿಕ್ಕಿವೆ ಎಂದು ಜನಪ್ರತಿನಿಧಿಗಳಾಗಿ ಮಹಿಳೆಯರು ತಮ್ಮ

ಪತಿ ಅಥವಾ ಇತರ ಪುರುಷರ ಜೊತೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಡನೆ ಚರ್ಚಿಸುವುದಕ್ಕೆ ಆದ್ಯತೆ ನೀಡುತ್ತಿದ್ದರು. ಈ ರೀತಿಯ ಅನೌಪಚಾರಿಕ ವಿಧಾನಗಳ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದರು ಎಂಬ ಫಲಿತವನ್ನು ಜಾರ್ಜ್ ಮ್ಯಾಥ್ಯೂಸ್ (1986), ತಮ್ಮ ಅಧ್ಯಯನದಲ್ಲಿ ಕಂಡುಕೊಂಡಿರುತ್ತಾರೆ[80].

ರಾಜಕೀಯ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಮತ್ತು ಅಧ್ಯಕ್ಷೀಯ ಅಧಿಕಾರದ ಪಾತ್ರದಲ್ಲಿ ಮಹಿಳೆಯರಿಗೆ ದೊರಕಬಹುದಾದ ಲಾಭಗಳನ್ನು ಪರೀಕ್ಷಿಸುವುದು. ಇದರ ಪ್ರಕಾರ ಮಹಿಳಾ ಸದಸ್ಯರನ್ನಾಗಿ ಆರಿಸುವಲ್ಲಿ ಜಾತಿಯು ವಿಶಿಷ್ಟ ಪಾತ್ರವನ್ನು ವಹಿಸುತ್ತದೆ. ವಿದ್ಯೆ ಮತ್ತು ಭಾಗವಹಿಸುವಿಕೆ ಒಂದಕ್ಕೊಂದು ಪೂರಕ ಅಂಶಗಳು. ಆರ್ಥಿಕ ಸ್ಥಿತಿ ಎನ್ನುವುದು ಆಕೆಗೆ ಆತ್ಮವಿಶ್ವಾಸ ಮತ್ತು ಪ್ರೋತ್ಸಾಹವನ್ನು ಒದಗಿಸುತ್ತದೆ[81]. ಈ ರೀತಿ ಮಹಿಳೆಯರ ರಾಜಕೀಯ ಸಹಭಾಗಿತ್ವದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ಪರಿಣಾಮ ಬೀರುತ್ತದೆ ಎಂಬುದನ್ನು ಮಾನಿಕ್ಯಂಬಾ (1998), "ವುಮೆನ್ ಇನ್ ಪಂಚಾಯತ್‌ರಾಜ್ ಸ್ಟ್ರಕ್ಚರ್"ನ ತಮ್ಮ ಅಧ್ಯಯನದಲ್ಲಿ ಗುರುತಿಸಿದ್ದಾರೆ.

ಒರಿಸ್ಸಾದ ಅಂಕಿ ಅಂಶಗಳ ಅಧ್ಯಯನದಲ್ಲಿ, ಹೆಚ್ಚಿನ ಮಹಿಳೆಯರು ಅವರ ಗಂಡಂದಿರು ಅಥವಾ ಪ್ರಭಾವಿ ರಾಜಕಾರಣಿಗಳ ಒತ್ತಡದಿಂದ ಆಯ್ಕೆಯಾಗಿರುತ್ತಾರೆ. ಶೇ.42ರಷ್ಟು ಮಹಿಳೆಯರು ನಿರ್ಧಾರ ತೆಗೆದುಕೊಳ್ಳುವಲ್ಲಿ ಭಾಗಿಯಾಗಿರುತ್ತಾರೆ. ಉಳಿದ ಶೇಕಡಾ 58 ಮಹಿಳೆಯರಿಗೆ ನಿರ್ಧಾರವನ್ನು ತೆಗೆದುಕೊಳ್ಳಲು ಅವಕಾಶ ನೀಡಲಾಗುವುದಿಲ್ಲ. ಅಂಗವಿಕಲ ಮಹಿಳೆಯರಂತೂ ಶೈಕ್ಷಣಿಕ ಮತ್ತು ಆತ್ಮವಿಶ್ವಾಸದ ವಿಷಯದಲ್ಲಿ ಕೊರತೆಯನ್ನು ಅನುಭವಿಸುತ್ತಾರೆ ಎಂದು ಒರಿಸ್ಸಾದ ಸ್ಥಳೀಯ ಸರಕಾರಗಳು ಮತ್ತು ಮಹಿಳಾ ಸಬಲೀಕರಣದ ಬಗೆಗಿನ ತಮ್ಮ ಅಧ್ಯಯನದಲ್ಲಿ ಸಚ್ಚಿದಾನಂದ ಸತ್ಪತಿ (2002), ಅಭಿಪ್ರಾಯಪಟ್ಟಿದ್ದಾರೆ[82].

ರಶ್ಮಿ ಅರುಣ್ (2002), "ರೋಲ್ ಆಫ್ ವುಮೆನ್ ಇನ್ ಪಂಚಾಯತ್‌ರಾಜ್"ನಲ್ಲಿ, ಮಧ್ಯಪ್ರದೇಶದ ಒಂದು ವಿದ್ಯಮಾನದ ಅಧ್ಯಯನದ ಪ್ರಕಾರ ರಾಜಕೀಯ ಪ್ರವೇಶಿಸಿದ ಹೆಚ್ಚಿನ ಹೆಂಗಸರು ಯಾವುದೇ ರಾಜಕೀಯ ಹಿನ್ನೆಲೆಯಿಂದ ಬಂದವರಲ್ಲ. ಅಂತಹವರು ಮನಸ್ಸಿಲ್ಲದ ಮನಸ್ಸಿನಿಂದ ಇಂದು ರಾಜಕೀಯ ಪ್ರಜ್ಞೆಯನ್ನು, ಉತ್ಸಾಹವನ್ನು, ದೃಷ್ಟಿಕೋನವನ್ನು, ಪ್ರಬುದ್ಧತೆಯನ್ನು ಹೊಂದಿರುತ್ತಾರೆ ಎಂದು ಅಭಿಪ್ರಾಯಪಡುತ್ತಾರೆ[83].

ಚುನಾವಣೆಯಲ್ಲಿ ಸ್ಪರ್ಧಿಸುವ ಪುರುಷರಿಗೆ ಹೋಲಿಸಿದಾಗ ಮಹಿಳೆಯರ ಸಂಖ್ಯೆ ಕಡಿಮೆ. 1952ರ ಚುನಾವಣೆಯಲ್ಲಿ ಸ್ಪರ್ಧಿಸಿದ ಮಹಿಳೆಯರ ಸಂಖ್ಯೆ 2.3%. ಆದರೆ 1999ರ ಚುನಾವಣೆಯಲ್ಲಿ

ಅದು 6.5%ಕ್ಕೆ ಏರಿದೆ. ಆದರೆ ಜನಸಂಖ್ಯೆಗೆ ಹೋಲಿಸಿದಾಗ ಮಹಿಳಾ ಸ್ಪರ್ಧಿಗಳ ಶೇಕಡಾವಾರು ಸಂಖ್ಯೆ ಅತ್ಯಂತ ಕನಿಷ್ಟ ಮಟ್ಟದಲ್ಲಿದೆ. ಇಂದಿನ ಚುನಾವಣೆಯನ್ನು ಪರಿಶೀಲಿಸುವಾಗ ಒಟ್ಟು 93% ಪುರುಷ ಹಾಗೂ 7% ಮಹಿಳಾ ಸ್ಪರ್ಧಿಗಳಿದ್ದಾರೆ. ಆದರೆ ಗೆಲುವಿನ ಶೇಕಡಾವಾರು ಫಲಿತಾಂಶದಲ್ಲಿ ಮಹಿಳೆಯರೇ ಮೇಲುಗೈ ಸಾಧಿಸಿದ್ದಾರೆ. 1952ರಲ್ಲಿ ಗೆಲುವು ಕಂಡ ಪುರುಷ ಸ್ಪರ್ಧಿಗಳು ಶೇ.26.5 ಪ್ರತಿಶತವಾದರೆ ಮಹಿಳೆಯರ ಸಂಖ್ಯೆ ಶೇ. 51.16ರಷ್ಟಿತ್ತು. ಆದರೆ 14ನೇ ಲೋಕಸಭೆ ಚುನಾವಣೆಯಲ್ಲಿ ಅದು ಕೇವಲ ಶೇಕಡಾ 12.6 ಪ್ರತಿಶತಕ್ಕೆ ಇಳಿದಿದೆ[84]. ಈ ರೀತಿಯಾಗಿ ಚುನಾವಣೆಗೆ ಸ್ಪರ್ಧಿಸಿದ ಮಹಿಳೆಯರಲ್ಲಿ ಯಶಸ್ಸಿನ ಪ್ರಮಾಣ ಹೆಚ್ಚಾಗಿದ್ದರೂ ಅವರನ್ನು ನಿರಂತರವಾಗಿ ಚುನಾವಣಾ ಪ್ರಕ್ರಿಯೆಗಳಲ್ಲಿ ಅಭ್ಯರ್ಥಿಗಳನ್ನಾಗಿಸದೇ ವಂಚಿಸಲಾಗುತ್ತದೆ ಎಂದು ಸಿವಲ್ ಬಿ. ಆರ್. (2002), "ಎಂಪವರ್‌ಮೆಂಟ್ ಆಫ್ ವುಮೆನ್", ಎಂಬ ಸಂಶೋಧನಾ ಗ್ರಂಥದಲ್ಲಿ ಅಂಕಿ-ಅಂಶ ಸಹಿತವಾಗಿ ತಮ್ಮ ವಾದವನ್ನು ಮಂಡಿಸಿರುತ್ತಾರೆ.

ಶಾಸಕಾಂಗದ ಸಂಸ್ಥೆಗಳಲ್ಲಿ ಮಾತ್ರವಲ್ಲದೆ ಪಕ್ಷಗಳ ಮಟ್ಟದಲ್ಲಿಯೂ ಸ್ತ್ರೀಯರ ಸಹಭಾಗಿತ್ವ ಬಹಳ ಕಡಿಮೆ ಇದೆ. ಭಾರತದ ಎಲ್ಲಾ ರಾಜಕೀಯ ಪಕ್ಷಗಳಲ್ಲಿಯೂ ಕೂಡಾ ಪುರುಷರ ಪ್ರಾಬಲ್ಯವೇ ಇದ್ದು ಪಕ್ಷಗಳ ಅಧಿಕಾರ ಸ್ಥಾನಗಳಲ್ಲಿ ಸ್ತ್ರೀಯರಿಗೆ ಸರಿಯಾದ ಪ್ರಾತಿನಿಧ್ಯವೇ ಇಲ್ಲವಾಗಿದೆ. 2001ರಲ್ಲಿನ ರಾಜಕೀಯ ಸ್ಥಿತಿಯನ್ನು ಹಿನ್ನೆಲೆಯಲ್ಲಿರಿಕೊಂಡು ಹೇಳುವುದಾದರೆ, ಕಾಂಗ್ರೆಸ್ ಪಕ್ಷದ ಕೇಂದ್ರೀಯ "ಕಾರ್ಯಕಾರಿ ಸಮಿತಿ"ಯ ಒಟ್ಟು 20 ಸದಸ್ಯರಲ್ಲಿ 3 ಮಂದಿ ಸ್ತ್ರೀಯರಾಗಿದ್ದರು. ಭಾರತೀಯ ಜನತಾ ಪಕ್ಷದ "ಕಾರ್ಯಕಾರಿ ಸಮಿತಿ"ಯ ಒಟ್ಟು 75 ಸದಸ್ಯರಲ್ಲಿ 8 ಮಂದಿ ಸ್ತ್ರೀಯರಿದ್ದರೆ, ಅದೇ ಪಕ್ಷದ "ರಾಷ್ಟ್ರೀಯ ಪರಿಷತ್‌ನ" ಒಟ್ಟು 650 ಸದಸ್ಯರಲ್ಲಿ 150 ಮಂದಿ ಸ್ತ್ರೀಯರಿದ್ದರು. ಭಾರತದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 150 ಮಂದಿ ಸದಸ್ಯರಲ್ಲಿ ಕೇವಲ 12 ಮಂದಿ ಮಾತ್ರ ಸ್ತ್ರೀಯರಿದ್ದರೆ ಅದರ ಕೇಂದ್ರೀಯ ಕಾರ್ಯಕಾರಿ ಸಮಿತಿಯಲ್ಲೂ ಕೂಡಾ 21 ಸದಸ್ಯರಲ್ಲಿ ಕೇವಲ 3 ಮಂದಿ ಸ್ತ್ರೀಯರಿದ್ದರು. ರಾಜ್ಯ ಮತ್ತು ಜಿಲ್ಲಾ ಮಟ್ಟದ ರಾಜಕಾರಣದಲ್ಲೂ ಹೆಚ್ಚು ಕಡಿಮೆ ಇದೇ ಸ್ಥಿತಿ ಇದೆ. ಸ್ತ್ರೀಯರ ಬಗ್ಗೆ ಕಾಳಜಿ ವಹಿಸಿ ಮಾತನಾಡುವ ಯಾವುದೇ ರಾಜಕೀಯ ಪಕ್ಷವು ಕೂಡಾ ಅವರಿಗೆ ಜನಸಂಖ್ಯೆಯಲ್ಲಿನ ಪ್ರಮಾಣಕ್ಕನುಗುಣವಾಗಿ ರಾಜಕೀಯ ಪ್ರಾತಿನಿಧ್ಯ ನೀಡಲು ಸಿದ್ಧವಿಲ್ಲ ಎಂಬ ವಾಸ್ತವಿಕ ಚಿತ್ರಣವನ್ನು ರಾಷ್ಟ್ರೀಯ ಪಕ್ಷಗಳು ಮಹಿಳೆಯರನ್ನು ವ್ಯವಸ್ಥಿತವಾಗಿ ರಾಜಕೀಯದಿಂದ ಹೊರಗಿಡುತ್ತವೆ ಎಂಬ ಅಂಶವನ್ನು ಎಳೆಎಳೆಯಾಗಿ ಸಾಧನಾ ಆರ್ಯರವರು (2006), ವಿವರಿಸಿರುತ್ತಾರೆ[85].

ಅಜಿತ್ ಪಾಲ್ (2009), "ವುಮೆನ್ಸ್ ಪಾರ್ಟಿಸಿಪೇಷನ್ ಎಟ್ ಗ್ರಾಸ್ ರೂಟ್ ಲೆವೆಲ್: ಆ್ಯನ್ ಎನ್ಯಾಲಿಸಿಸ್" ಎಂಬ ಲೇಖನದಲ್ಲಿ ಭಾರತದಲ್ಲಿ ಸುಮಾರು 50 ಪ್ರತಿಶತದಷ್ಟು ಇರುವ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯು ನಗಣ್ಯವಾಗಿದೆ. ಮಹಿಳೆಯರಿಗೆ 1/3 ಭಾಗ ಶಾಸನ ಸಭೆಗಳ ಸ್ಥಾನಗಳನ್ನು ಮೀಸಲಿಡಬೇಕೆನ್ನುವ ವಿಧೇಯಕವನ್ನು ಮಂಡಿಸಲು ಮತ್ತು ಶಾಸನಾತ್ಮಕ ಕ್ರಮಗಳನ್ನು ಕೈಗೊಳ್ಳಲು ರಾಜಕೀಯ ಪಕ್ಷಗಳು ಉತ್ಸುಕತೆಯನ್ನು ತೋರುವುದಿಲ್ಲ. ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ಮಹಿಳೆಯರಿಗೆ ನೀಡಿದ ಮೀಸಲಾತಿಯ ಹೊರತಾಗಿ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯ ಸಹಭಾಗಿತ್ವ ಅತ್ಯಲ್ಪವಾಗಿದೆ. ಸ್ವಾತಂತ್ರ್ಯ ಆಂದೋಲನದಲ್ಲಿ ಮಹಿಳೆಯರು ಸಕ್ರಿಯರಾಗಿ ಭಾಗಿಗಳಾದರೂ ಇಂದು ರಾಜಕೀಯ ಕ್ಷೇತ್ರದಲ್ಲಿ ಹಿಂಸೆ ಮತ್ತು ಭಯೋತ್ಪಾದನೆಯಿಂದಾಗಿ ರಾಜಕೀಯದಿಂದ ದೂರ ಉಳಿಯಲು ಬಯಸುತ್ತಾರೆ[86]. ರಾಜಕೀಯ ಪಕ್ಷಗಳ ಮಹಿಳಾ ಸಂಘಟನೆಗಳು ಇಂದು ಪುರುಷರಿಂದ ನಿಯಂತ್ರಿಸಲ್ಪಡುತ್ತಿದೆ ಎಂದು ತನ್ನ ಅಧ್ಯಯನದಲ್ಲಿ ತಿಳಿಸಿರುತ್ತಾರೆ.

ರಿಸರ್ವೇಷನ್ ಆಫ್ ಸೀಟ್ಸ್ ಫಾರ್ ವುಮೆನ್ ಇನ್ ಲೆಜಿಸ್ಲೇಚರ್ ಪ್ರಾಸ್ಪೆಕ್ಟ್ಸ್, ರಾಜ್ಯಸಭಾ ಸೆಕ್ರೇಟರಿಯೇಟ್ ರಿಪೋರ್ಟ್–2008, 20ನೇ ಶತಮಾನದಲ್ಲಿ ಮಹಿಳೆಯರ ಸಶಕ್ತೀಕರಣದ ರಾಜಕೀಯ ವಿಚಾರ ಎನ್ನುವುದು ಪ್ರಪಂಚದಾದ್ಯಂತ ಹೊಸ ಚಾಲನೆಯನ್ನು ಪಡೆದುಕೊಂಡಿತು. 1990ರಲ್ಲಿ "ಯುನೈಟೆಡ್ ನೇಷನ್ಸ್ ಎಕನಾಮಿಕ್ & ಸೋಷಿಯಲ್ ಕೌನ್ಸಿಲ್" ಎನ್ನುವುದು 1995ರ ಹೊತ್ತಿಗೆ ಶೇಕಡಾ 30ರಷ್ಟು ಮಹಿಳೆಯರು ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ಥಾನದಲ್ಲಿರುತ್ತಾರೆ. ದುರಾದೃಷ್ಟವೆಂದರೆ 1995ರ ಹೊತ್ತಿಗೆ ಕೇವಲ ಶೇಕಡಾ10 ಮಹಿಳೆಯರು ಲೋಕಸಭಾ ಸದಸ್ಯರಾಗಿದ್ದರು. ಈಗ ಇದು ಶೇಕಡಾ16ಕ್ಕೆ ಏರಿದರೆ, ಶೇಕಡಾ 30 ಮೀಸಲಾತಿ ಎನ್ನುವುದು ದೂರವೇ ಆಗಿದೆ. ಈ ಅಂಕಿಅಂಶಗಳು ಪ್ರತಿಪಾದಿಸುವುದು ಏನೆಂದರೆ ರಾಜಕೀಯ ವಲಯದಲ್ಲಿ ಪುರುಷರೇ ಪ್ರಧಾನವಾಗಿದ್ದಾರೆ ಎಂಬುದು. ಭಾರತದ 14ನೇ ಲೋಕಸಭಾ ಚುನಾವಣೆಯಲ್ಲಿ ಕೇವಲ 51 ಮಹಿಳಾ ಸಂಸದರು ಮತ್ತು ರಾಜ್ಯಸಭೆಯಲ್ಲಿ ಕೇವಲ 23 ಮಹಿಳೆಯರು ಸದಸ್ಯರಾಗಿದ್ದರು ಎಂಬುದನ್ನು ಕಾಣಬಹುದು[87].

ಮಾನವ ಹಕ್ಕುಗಳ ವಿಶ್ವವ್ಯಾಪಿ ಘೋಷಣೆಯಲ್ಲಿ ಕೊಡಲಾಗಿರುವ ಹಕ್ಕುಗಳು ಎಲ್ಲರಿಗೂ ಸಮಾನತೆ, ಸ್ವಾತಂತ್ರ್ಯ, ನೆಮ್ಮದಿ ಮತ್ತು ನಾಗರಿಕ, ರಾಜಕೀಯ ಮತ್ತು ಆರ್ಥಿಕ ಹಕ್ಕುಗಳನ್ನು ದೊರಕಿಸಿಕೊಡುವ ಒಂದು ನೆಲೆಗಟ್ಟನ್ನು ಹಾಕಿಕೊಡುತ್ತದೆ. ಹಾಗಿದ್ದರೂ ಕೂಡ ಇದರ ರಚನೆ ಮತ್ತು ವ್ಯಾಖ್ಯಾನ ಪುರುಷ ಪ್ರಧಾನ ಮತ್ತು ಪುರುಷ ಕೇಂದ್ರಿತ ದೃಷ್ಟಿಕೋನದಿಂದಲೇ ಇದುವರೆಗೂ ನಡೆದುಕೊಂಡು ಬಂದಿದೆ ಎಂಬುದು ನಿರ್ವಿವಾದ. ಮಾನವ ಹಕ್ಕುಗಳ ವಿಶ್ವವ್ಯಾಪಿ ಘೋಷಣೆಯು

ಪುರುಷರಿಗೆ ಮತ್ತು ಸ್ತ್ರೀಯರಿಗೆ ಸಮಾನ ಹಕ್ಕುಗಳನ್ನು ನೀಡುವುದನ್ನು ಮತ್ತು ಮಾನವ ಹಕ್ಕುಗಳನ್ನು ಸ್ತ್ರೀ ಪುರುಷರೆಂಬ ತಾರತಮ್ಯವಿಲ್ಲದೆ ಎಲ್ಲರೂ ಅನುಭವಿಸಬೇಕೆಂಬುವುದನ್ನು ಧೃಡಪಡಿಸಿದರೂ ಸಹ ಮಹಿಳಾ ರಾಜಕೀಯ ಹಕ್ಕುಗಳ ಬಗೆಗಿನ ಚರ್ಚೆಯನ್ನು ಮುಖ್ಯ ಕಾರ್ಯಸೂಚಿಯನ್ನಾಗಿ ಪರಿಗಣಿಸಿಲ್ಲ ಎಂದು ಕೆ.ಎಸ್. ಸಕ್ಸೇನಾ (1999), "ವುಮೆನ್ಸ್ ಪೊಲಿಟಿಕಲ್ ಪಾರ್ಟಿಸಿಪೇಷನ್ ಇನ್ ಇಂಡಿಯಾ", ಎಂಬ ಗ್ರಂಥದಲ್ಲಿ ಪ್ರತಿಪಾದಿಸಿದ್ದಾರೆ[88].

ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಹಿನ್ನಡೆಗೆ ಕೇವಲ ಪುರುಷರೇ ಜವಾಬ್ದಾರರೇ? ತಮ್ಮ ಹಕ್ಕು, ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವಲ್ಲಿ ಮಹಿಳೆಯರ ಪಾಲೇನು? ಎಂದು ಪ್ರಶ್ನಿಸುತ್ತಾ ರಾಜಕೀಯ ಭಾಗವಹಿಸುವಿಕೆ ತಮ್ಮ ಹಕ್ಕಾಗಿದೆಯೇ ಹೊರತು ಪುರುಷರು ಅಥವಾ ಪಕ್ಷಗಳ ಕೃಪಾಕಟಾಕ್ಷ ಅಲ್ಲ ಎಂಬುದನ್ನು ಮೊದಲು ಮಹಿಳೆಯರು ಅರಿಯಬೇಕು ಎಂದಿದ್ದಾರೆ. ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾದ ಅಧಿಕಾರವನ್ನು ಪಡೆದ ಅನೇಕ ಮಹಿಳೆಯರು ತಮ್ಮ ನಾಯಕತ್ವವನ್ನು ಸಾಬೀತು ಮಾಡಿ ತೋರಿಸಿದ್ದಾರೆ. ಇನ್ನೂ ಅನೇಕ ಮಹಿಳೆಯರು ಅವರ ಗಂಡ, ತಂದೆ ಅಥವಾ ಅಣ್ಣ ತಮ್ಮಂದಿರ ಕೈಗೊಂಬೆಗಳಾಗಿದ್ದಾರೆ ಎಂಬುದೂ ನಿಜ. ಆದರೆ ಇವರೂ ನಿಧಾನವಾಗಿ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುತ್ತಿದ್ದಾರೆ. ಪುರುಷ ಹಸ್ತಕ್ಷೇಪವನ್ನು ನಿರಾಕರಿಸುವ ಮನೋಭಾವವನ್ನು ಬೆಳೆಸಿಕೊಳ್ಳುವಂಥ ಧೀಮಂತಿಕೆಯನ್ನು ಇವರಲ್ಲಿ ಬೆಳೆಸಬೇಕಿದೆ. ರಾಜಕೀಯ ಪ್ರವೇಶಕ್ಕೆ ಮುನ್ನ ತರಬೇತಿ ಹಾಗೂ ತಯಾರಿಯ ಕೊರತೆ ಇವರಲ್ಲಿ ಎದ್ದು ತೋರುತ್ತಿದೆ ಎಂದು ರೂಪಾ ಹಾಸನರವರು (2010), 'ಮಹಿಳೆ ಮತ್ತು ಆಧುನಿಕತೆಯ ಸವಾಲುಗಳು' ಎಂಬ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ[89].

ಹೆಚ್ಚಾಗಿ ಕೌಟುಂಬಿಕ ಹಿನ್ನಲೆ ಮತ್ತು ಪುರುಷ ರಾಜಕೀಯ ಬೆಂಬಲದ ಮೂಲಕ ಕೆಲವು ಮಹಿಳೆಯರು ಸಂಸತ್ತಿನ ಸದಸ್ಯರಾಗಿ, ರಾಜ್ಯ ಶಾಸಕಾಂಗದ ಸದಸ್ಯರಾಗಿ ಮತ್ತು ವಿರೋಧ ಪಕ್ಷದ ನಾಯಕಿಯರಾಗಿ ಸ್ಥಾನವನ್ನು ಪಡೆದಿದ್ದಾರೆ. ಆದರೆ ಶಾಸಕಾಂಗದಲ್ಲಿರುವ ಶೇಕಡವಾರು ಮಹಿಳೆಯರು ಮತ್ತು ಅವರ ನಿರ್ಧಾರ ತೆಗೆದುಕೊಳ್ಳುವ ಸ್ಥಾನ ಯಾವಾಗಲೂ ಕೆಳಮಟ್ಟದಲ್ಲಿರುತ್ತದೆ. ಭಾರತದ ಪ್ರಜಾಪ್ರಭುತ್ವದಲ್ಲಿ ಮಹಿಳೆಯರಿಗೆ ಅವರ ಸಂಖ್ಯೆಯ ಬಲಕ್ಕನ್ನುಸಾರವಾಗಿ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಹಂಚಿರುವುದಿಲ್ಲ ಮತ್ತು ಅವರು ನೀತಿ ನಿರೂಪಣೆಯಲ್ಲಿ ಪಾಲ್ಗೊಳ್ಳುವುದಿಲ್ಲ. ಆದುದರಿಂದ ಮಹಿಳೆಯರ ಭಾಗವಹಿಸುವಿಕೆ ಮತ್ತು ಅವರ ಅರ್ಥಪೂರ್ಣವಾದ ಅಧಿಕಾರದ ವಿನಿಯೋಗದ ಮಧ್ಯೆ ಅಂತರವಿದೆ ಎಂದು ಸುಶೀಲ್ ಕೌಶಿಕ್ (1998), ಅಭಿಪ್ರಾಯಪಟ್ಟಿದ್ದಾರೆ[90].

ರಾಜಕೀಯ ಪ್ರಕ್ರಿಯೆಯಲ್ಲಿ ಕಾನೂನಿನ ತಡೆಗಳಿಲ್ಲದಿದ್ದರೂ ಮಹಿಳೆಯರ ಸಹಭಾಗಿತ್ವದಲ್ಲಿ ಕೊರತೆಗಳಿವೆ ಹಾಗೂ ಆಡಳಿತ ಮತ್ತು ರಾಜಕೀಯದಲ್ಲಿ ಮಹಿಳೆಯರ ಕಡಿಮೆ ಪ್ರತಿನಿಧಿತ್ವವಿದೆ. ಮನೆವಾರ್ತೆ, ಹಣಕಾಸಿನ ಕೊರತೆ, ರಾಜಕೀಯದಲ್ಲಿ ಹೆಚ್ಚುತ್ತಿರುವ ಅಪರಾಧಗಳು ಮತ್ತು ರಾಜಕೀಯದಲ್ಲಿ ಮೋಸದಿಂದ ಕೊಲೆ ಮಾಡುವ ಪ್ರವೃತ್ತಿ ಇತ್ಯಾದಿಗಳು ಮಹಿಳೆಯರು ರಾಜಕೀಯದಲ್ಲಿ ಹಿನ್ನಡೆ ಅನುಭವಿಸುವ ಹಾಗೆ ಮಾಡಿದೆ[91]. ಅಲ್ಲದೆ ರಾಜಕೀಯ ಪಕ್ಷದಲ್ಲಿ ಮಹಿಳಾ ರಾಜಕಾರಣಿಗಳು ತಿಳಿಸುವ ಹಾಗೆ ನಾಯಕತ್ವದ ಸ್ಥಾನ ದೊರಕುವುದು ಕಡಿಮೆಎಂಬುದನ್ನು ಆಶೇನ್ ರಾಯ್‌ರವರು (2003), ತನ್ನ ಗ್ರಂಥದಲ್ಲಿ ಕಂಡುಕೊಂಡಿರುತ್ತಾರೆ.

ಎಂ. ಚಂದ್ರ ಪೂಜಾರಿ (2012), 'ಆರ್ಥಿಕ ಬಲದ ಕಲ್ಪನೆ ಮತ್ತು ಸಾಮಾಜಿಕ ಅಸಾಮರ್ಥ್ಯ', ಎಂಬ ಲೇಖನದಲ್ಲಿ ಶಾರೀರಿಕ ಅಂಗವಿಕಲತೆ ವ್ಯಕ್ತಿಗೆ ತನ್ನ ಸಾಮರ್ಥ್ಯ ಬಳಸಿಕೊಳ್ಳಲು ಅಡ್ಡಿಯಾಗುವಂತೆ, ಸಾಮಾಜಿಕ ಅಂಗವಿಕಲತೆ ಕೂಡ ವ್ಯಕ್ತಿಗೆ ತನ್ನ ಸಾಮರ್ಥ್ಯ ಬಳಸಿಕೊಳ್ಳಲು ಅಡ್ಡಿಯಾಗುತ್ತದೆ. ಎರಡು ಬಗೆಯ ಸಾಮಾಜಿಕ ಅಸಾಮರ್ಥ್ಯಗಳಿವೆ – ಸಾಂಪ್ರದಾಯಿಕ ಮತ್ತು ಆಧುನಿಕ ಸಾಮಾಜಿಕ ಅಸಾಮರ್ಥ್ಯಗಳು. ಜಾತಿ, ಧರ್ಮ ಮತ್ತು ಲಿಂಗಭೇದಗಳು, ಸಾಂಪ್ರದಾಯಿಕ ಸಾಮಾಜಿಕ ಅಸಾಮರ್ಥ್ಯಗಳು. ಜಾತಿ, ಧರ್ಮ, ಲಿಂಗಗಳಿರುವುದು ಸಮಸ್ಯೆಯಲ್ಲ ಆದರೆ ಇವುಗಳನ್ನು ಮೇಲುಕೀಳು ರೂಪದಲ್ಲಿ ಕಟ್ಟಿಕೊಳ್ಳುವುದು ಸಮಸ್ಯೆ. ಮೇಲುಕೀಳುಗಳು ಅಸಾಮರ್ಥ್ಯವನ್ನು ಸೃಷ್ಟಿಸುತ್ತವೆ ಮತ್ತು ಬದುಕಿನ ಅವಕಾಶಗಳನ್ನು ಬಳಸಿಕೊಳ್ಳಲು ಅಡ್ಡಿಯಾಗುತ್ತದೆ[92]. ಅತ್ಯಂತ ಕಡಿಮೆ ಶಿಕ್ಷಣ ಹೊಂದಿದವರು, ಕಡಿಮೆ ಆದಾಯವುಳ್ಳವರು, ಕಡಿಮೆ ಭೂಮಿ ಉಳ್ಳವರು, ಕಡಿಮೆ ಸಂಪನ್ಮೂಲಗಳ ಒಡೆತನ ಹೊಂದಿದವರು ಯಾರೆಂದು ಪರಿಶೀಲಿಸಿದ್ದರೆ ಎಲ್ಲ ಕಡೆ ಏಣಿಯ ಬುಡದಲ್ಲಿರುವವರೇ ಇರುವುದು. ಇದುವೇ ಸಾಂಪ್ರದಾಯಿಕ ಸಾಮಾಜಿಕ ಅಸಾಮರ್ಥ್ಯಗಳು ಕೆಲಸ ಮಾಡುತ್ತಿರುವುದಕ್ಕೆ ದೊಡ್ಡ ಸಾಕ್ಷಿ ಎಂದು ವಿಶ್ಲೇಷಿಸಿದ್ದಾರೆ.

ಸಾಧನಾ ವೈ. ಮಾಥಾದ್‌ರವರ (2009), ಪ್ರಕಾರ, ಚರಿತ್ರೆಯನ್ನು ಅವಲೋಕಿಸಿದಾಗ ಲಿಂಗ ತಾರತಮ್ಯತೆಯ ಹಿನ್ನೆಲೆಯಲ್ಲಿ ಮಹಿಳೆಯು ಅಸ್ತಿತ್ವರಹಿತಳಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಉದಾಸೀನಕ್ಕೆ ಒಳಗಾಗುತ್ತಲೇ ಬಂದಿದ್ದಾಳೆ. ಪುರುಷನಿಗಿಂತ ಮಹಿಳೆ ದುರ್ಬಲಳು ಎನ್ನುವ ಅಸಮಾನ ನೆಲೆಗಳು ಕುಟುಂಬದಿಂದ ಹಿಡಿದು ಸಮಾಜದ ವಿವಿಧ ಸ್ತರಗಳಲ್ಲಿ ಬೆಸೆದುಕೊಂಡಿವೆ. ಇತಿಹಾಸದಲ್ಲಿ ರಾಜಮನೆತನದ ಹಾಗೂ ಉನ್ನತ ವರ್ಗದ ಮಹಿಳೆಯರನ್ನು ಬಿಟ್ಟರೆ ಸಾಮಾನ್ಯ ವರ್ಗಗಳ ಮಹಿಳೆಯರ ಸ್ಥಾನಮಾನಗಳನ್ನು ಗುರುತಿಸುವುದು ಕಷ್ಟ[93]. ರಾಜಕೀಯ ಕ್ಷೇತ್ರದಲ್ಲಿ ಆಕೆಯ ಭಾಗವಹಿಸುವಿಕೆ ಅಪರೂಪದ ಮತ್ತು ಅನಿವಾರ್ಯದ ಸಂದರ್ಭಗಳಲ್ಲಿ ಮಾತ್ರವಾಗಿದೆ ಎಂಬುದಾಗಿ ತಮ್ಮ ಸಂಶೋಧನೆಯಲ್ಲಿ ವಿಶ್ಲೇಷಿಸಿದ್ದಾರೆ.

ಜ್ಯೋತ್ಸ್ನಾ ಮಹೇಶ್ (2011), "ಪೊಲಿಟಿಕಲ್ ಎಂಪವರ್‌ಮೆಂಟ್ ಆಫ್ ವುಮೆನ್ : ವಿಥ್ ರೆಫರೆನ್ಸ್ ಟು ಪಂಚಾಯತ್‌ರಾಜ್ ಇನ್‌ಸ್ಟಿಟ್ಯೂಷನ್ಸ್ – ಎ ಕೇಸ್ ಸ್ಟಡಿ ಆಫ್ ಉಡುಪಿ ಡಿಸ್ಟ್ರಿಕ್ಟ್" ಎಂಬ ಸಂಶೋಧನಾ ಗ್ರಂಥದಲ್ಲಿ ಕೆಲವು ಸ್ತ್ರೀಯರು ರಾಜಕೀಯ ಜೀವನದಲ್ಲಿ ಸಮಭಾಗ ಪಡೆಯಬಲ್ಲ, ಸ್ವತಂತ್ರ ಆಡಳಿತ ನಡೆಸಬಲ್ಲ ಸಾಮರ್ಥ್ಯ ಹೊಂದಿದ್ದರೂ ಅತ್ತ ಕಡೆ ಗಮನ ಹರಿಸದಿರುವುದಕ್ಕೆ ಇವರು ಬೆಳೆದ ಪರಿಸರ ಮತ್ತು ಅಂದಿನ ಸಾಮಾಜಿಕ ಮೌಲ್ಯಗಳು ಕಾರಣವಾಗಿವೆ ಎಂಬುದನ್ನು ಕಂಡುಕೊಂಡು ಇಂದು ರಾಜಕೀಯ ಕ್ಷೇತ್ರವು ಪುರುಷರ ಪ್ರಬಲ ಕೋಟೆಯಾಗಿ ಕಂಡುಬರುತ್ತಿದೆ. ಮಹಿಳೆ ಪುರುಷರಿಗಿಂತ ಬಲಹೀನಳು ಎಂಬ ಜೈವಿಕ ಅಂಶವನ್ನು ಆಧಾರವಾಗಿಟ್ಟುಕೊಂಡು ಮಹಿಳೆಯನ್ನು ಅಧಿಕಾರ ರಾಜಕಾರಣದಿಂದ ದೂರವಿಡಲಾಗುತ್ತದೆ. ರಾಜಕೀಯ ಪಕ್ಷಗಳು ಚುನಾವಣಾ ಸ್ಥಾನಗಳಿಗಾಗಿ ಪುರುಷರಿಗೆ ಪ್ರಾಧಾನ್ಯತೆಯನ್ನು ನೀಡುತ್ತಿವೆ. ಆದುದರಿಂದ ಮಹಿಳೆಯರನ್ನು ಕುರಿತ ಲಿಂಗಭೇದ, ಪೂರ್ವಾಗ್ರಹ ದೃಷ್ಟಿ ಇನ್ನೂ ಬದಲಾಗಿಲ್ಲ ಎಂಬ ಫಲಿತವನ್ನು ನೀಡಿದ್ದಾರೆ[94].

ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿದಾಗ ಮೇಲ್‌ಸ್ತರದ, ಕುಲೀನ, ವಿದ್ಯಾವಂತ ಮಹಿಳೆಯರು ರಾಜಕಾರಣದಲ್ಲಿ ಸಕ್ರಿಯವಾಗಿ ಭಾಗವಹಿಸುವುದನ್ನು ಹೆಚ್ಚಿನ ಪರಾಮರ್ಶನ ಗ್ರಂಥಗಳು ಉಲ್ಲೇಖಿಸುತ್ತವೆ. ಮಹಿಳೆಯು ಪುರುಷನಿಗೆ ಅಧೀನಳಾಗಿ ಕಾರ್ಯನಿರ್ವಹಿಸಿರುವುದು ಹೆಚ್ಚಾಗಿ ಕಂಡುಬಂದಿದ್ದು, ಕೆಲವು ಸಂದರ್ಭಗಳನ್ನು ಹೊರತುಪಡಿಸಿದರೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಿದ ಅಂಶಗಳು ಕಂಡುಬರುವುದಿಲ್ಲ. ಇದರಿಂದಾಗಿ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು ಮಹಿಳೆಯರ ರಾಜಕೀಯ ಚಟುವಟಿಕೆಗಳಲ್ಲಿ ನಿರ್ಣಾಯಕ ಪಾತ್ರಗಳನ್ನು ವಹಿಸುತ್ತದೆ ಎಂದು ಹೇಳಬಹುದು.

ಮಹಿಳಾ ಸಬಲೀಕರಣ

ಅಧ್ಯಾಯದ ಹಿಂದಿನ ವಿಭಾಗದಲ್ಲಿ ಮಹಿಳೆ ಮತ್ತು ಸಂವಿಧಾನಾತ್ಮಕ ಸೌಲಭ್ಯಗಳು ಎಂಬ ತಲೆಬರಹದಡಿಯಲ್ಲಿ ಭಾರತದ ಸಂವಿಧಾನದಲ್ಲಿ ಮಹಿಳಾ ಸಬಲೀಕರಣಕ್ಕೆ ಸಂಬಂಧಪಟ್ಟ ಉಪಕ್ರಮಗಳು ಹಾಗೂ ಅವುಗಳಿಗೆ ಸಂಬಂಧಪಟ್ಟ ಸಾಹಿತ್ಯ ಪರಾಮರ್ಶನಗಳನ್ನು ವಿಮರ್ಶಾತ್ಮಕವಾಗಿ ವಿವರಿಸಲಾಗಿದೆ. ರಾಜಕೀಯ ಕ್ಷೇತ್ರದಲ್ಲಿ ಮಹಿಳೆ ಸಕ್ರಿಯವಾಗಿ ಭಾಗವಹಿಸುವುದಕ್ಕೆ ಇರುವ ಸಾಮಾಜಿಕ ಮತ್ತು ಆರ್ಥಿಕ ನೆಲೆಗಟ್ಟಿನ ವಿವರಣೆಯು ಮಹಿಳೆಯರನ್ನು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ಪುರುಷ ಪ್ರಧಾನ ಸಮಾಜ ವಿಧಿಸಿದ ಕಟ್ಟುಪಾಡುಗಳ ಬಗೆಗಿನ ವಿವರಣೆಯು ಅಧ್ಯಯನಕ್ಕೆ ಒಂದು ತಾತ್ವಿಕ ಚೌಕಟ್ಟನ್ನು ರೂಪಿಸಲು ಸಹಕಾರಿಯಾಗುತ್ತದೆ. ಇದರ ಮುಂದುವರಿದ ಭಾಗವಾಗಿ ಮಹಿಳಾ

ಸಬಲೀಕರಣಕ್ಕೆ ಸಂಬಂಧಪಟ್ಟಂತೆ ನಡೆದಂತಹ ಸಂಶೋಧನೆಗಳು ಮತ್ತು ವಿದ್ವಾಂಸರ ಫಲಿತಗಳನ್ನು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗುವಂತೆ ಈ ವಿಭಾಗದಲ್ಲಿ ವಿವರಿಸಲಾಗಿರುತ್ತದೆ.

ಸಂವಿಧಾನದ 73 ನೇ ತಿದ್ದುಪಡಿಯು ಪಂಚಾಯತ್‌ಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಿತು. ಇದರಿಂದ ಮಹಿಳೆಯರು ಇಂದು ಸಕ್ರಿಯವಾಗಿ ತಮ್ಮನ್ನು ಸ್ಥಳೀಯ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದಕ್ಕೆ ಕಾರಣವಾಗಿದೆ. ಮಹಿಳೆಯರು ಮುಂದಾಳತ್ವ ವಹಿಸಿರುವ ಅನೇಕ ಪಂಚಾಯತ್‌ಗಳಲ್ಲಿ ದಕ್ಷವಾಗಿ ಅಧಿಕಾರ ನಿರ್ವಹಿಸುವ ಮೂಲಕ ಅವರುಗಳು ಅಧಿಕಾರಿಯಾಗಿ ಕೆಲಸ ನಿರ್ವಹಿಸಲು ಅಶಕ್ತ ಮತ್ತು ಹೊರಗಿನ ಜವಾಬ್ದಾರಿ ನಿರ್ವಹಿಸಲು ಆಕೆಯಿಂದ ಸಾಧ್ಯವಿಲ್ಲ ಎಂಬ ಗ್ರಹಿಕೆಯನ್ನು ಹುಸಿಯಾಗಿಸಿದ್ದಾರೆ[95]. ಕೆಲವು ಮಹಿಳಾ ಸದಸ್ಯರು ಗ್ರಾಮೀಣ ಸಮಾಜವನ್ನು ಬದಲಾಯಿಸುವ ಮಟ್ಟಿಗೆ ಕ್ರಾಂತಿ ಪಥದಲ್ಲಿ ಸಾಗಿದ್ದಾರೆ ಎಂದು ತನ್ನ ಸಂಶೋಧನೆಯಲ್ಲಿ ವೀರಭಾರತಿಯವರು (2009), ಕಂಡುಕೊಂಡಿದ್ದಾರೆ.

ಒಡಿಶಾದಲ್ಲಿ ಸಂವಿಧಾನದ 73ನೇಯ ತಿದ್ದುಪಡಿಯ ಪರಿಣಾಮದ ಮೇಲಿನ ಒಂದು ಅಧ್ಯಯನವು ಹೇಳುವ ಪ್ರಕಾರ ಶೇಕಡಾ 80–90ರಷ್ಟು ಮಹಿಳೆಯರು ಪಂಚಾಯತ್ ಸಭೆಗಳಲ್ಲಿ ನಿಯಮಿತವಾಗಿ ಭಾಗವಹಿಸುತ್ತಾರೆ. ಅಂದರೆ ಪ್ರಜಾಪ್ರಭುತ್ವವು, ತಳ ಮಟ್ಟದಲ್ಲಿ, ಮೊದಲಿಗಿಂತ ಹೆಚ್ಚು ಭಾಗೀದಾರಿಕೆಯಿಂದ ಕೂಡಿದೆ ಎನ್ನುವುದನ್ನು ಇದು ಸೂಚಿಸುತ್ತದೆ. ಅಧ್ಯಯನವು ಕಂಡಂತೆ ಇದರಲ್ಲಿ ಹೆಚ್ಚಿನ ಮಹಿಳೆಯರು, ವಿಶೇಷವಾಗಿ ಗ್ರಾಮ ಪಂಚಾಯತ್ ಮಟ್ಟದಲ್ಲಿ, ಕೆಳಮಟ್ಟದ ಆದಾಯದ ಗುಂಪಿನಿಂದ ಬಂದವರಾಗಿದ್ದರು. ಜೊತೆಗೆ, ಮಹಿಳೆಯರ ಇರುವಿಕೆಯಿಂದ ಪಂಚಾಯತಿಯ ಕಾರ್ಯ ವೈಖರಿಯಲ್ಲಿ ಬದಲಾವಣೆಗಳಾಗಿರುವಂತೆ ಕಾಣುತ್ತದೆ. ಅಧ್ಯಯನವು ಕಂಡುಕೊಂಡಿರುವ ಇನ್ನೊಂದು ಅಂಶವೆಂದರೆ ಮಹಿಳೆಯರ ಅಸ್ತಿತ್ವದಿಂದಾಗಿ ತಳ ಮಟ್ಟದಲ್ಲಿ ರಾಜಕೀಯ ಸಂಸ್ಥೆಯ ಮಾನದಂಡವು ಕುಸಿದಿಲ್ಲ. ಹೆಚ್ಚಿನ ಮಹಿಳೆಯರಿಗೆ ಇದು ಪ್ರಥಮ ಅನುಭವವಾಗಿದ್ದು, ಜೊತೆಗೆ ಅನಕ್ಷರಸ್ತರೂ ಆಗಿರುವುದರಿಂದ, ಆರಂಭದಲ್ಲಿ ಅವರು ಪಂಚಾಯತ್ ಚಟುವಟಿಕೆಗಳನ್ನು ನಡೆಸುವಲ್ಲಿ ತಮ್ಮ ಪುರುಷ ಸಹವರ್ತಿಗಳ ಬೆಂಬಲ ಪಡೆದಿರುತ್ತಾರೆ. ಆದರೆ, ಕ್ರಮೇಣ ತಾವು ಸ್ವತಂತ್ರರಾಗಿರುತ್ತಾರೆ. ಆದುದರಿಂದ 73 ನೇ ತಿದ್ದುಪಡಿಯು ಮಹಿಳೆಯರ ಮೇಲೆ ಸಶಕ್ತೀಕರಣದ ಪರಿಣಾಮವನ್ನು ಬೀರಿದೆ ಎಂಬುದಾಗಿ ಮಹಿಳಾ ಮೀಸಲಾತಿ ಮಸೂದೆಯ ಅಗತ್ಯತೆಯ ಬಗ್ಗೆ ಪ್ರಬಲ ವಾದವನ್ನು ಬಿದಾಯತ್ ಮೊಹಾಂತಿ (1995), "ಪಂಚಾಯತ್‌ರಾಜ್, 73ರ್ಡ್ ಕಾನ್ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಎಂಡ್ ವುಮೆನ್", ಎಂಬ ಸಂಶೋಧನಾ ಗ್ರಂಥದಲ್ಲಿ ಮಂಡಿಸಿರುತ್ತಾರೆ[96].

73ನೇ ತಿದ್ದುಪಡಿಗಿಂತ ಮುಂಚಿನ ಮಹಿಳಾ ಪ್ರತಿನಿಧಿಗಳ ಈ ಹಿಂದಿನ ಅಧ್ಯಯನಗಳು ಮಹಿಳೆಯರ ಮಹತ್ವದ ಇರುವಿಕೆಯು ಉನ್ನತ ವರ್ಗದವರದಾಗಿತ್ತು, ಉದಾಹರಣೆಗೆ ಮಹಾರಾಷ್ಟ್ರದಲ್ಲಿ ಮರಾಠ ಪಂಗಡದಿಂದ ಹಾಗೂ 20 ಎಕರೆಗಿಂತ ಹೆಚ್ಚು ಜಮೀನುಳ್ಳವರು ಹಾಗೂ ಕರ್ನಾಟಕದಲ್ಲಿ ಲಿಂಗಾಯತರು ಹಾಗೂ ಒಕ್ಕಲಿಗರು ಮಾತ್ರ ಪಂಚಾಯತಿನ ಮಹಿಳಾ ಪ್ರತಿನಿಧಿಗಳಾಗಿದ್ದರು. ಆದರೆ, 73ನೇ ತಿದ್ದುಪಡಿಯ ನಂತರದ ಮಹಿಳಾ ಪ್ರತಿನಿಧಿಗಳ ಚಿತ್ರಣವನ್ನು ಗಮನಿಸಿದರೆ, ಅವರಲ್ಲಿ ಹೆಚ್ಚಿನವರು ಅನಕ್ಷರಸ್ತರು ಹಾಗೂ ಸಾಮಾಜಿಕ ಮತ್ತು ಆರ್ಥಿಕ ಸ್ತರದಲ್ಲಿ ಕೆಳಮಟ್ಟದ ಕುಟುಂಬಗಳಿಂದ ಬಂದವರಾಗಿದ್ದಾರೆ. ಅವರು ತಮಗಿಂತ ಮೊದಲು ರಾಜಕೀಯ ಪ್ರವೇಶ ಮಾಡಿರುವವರಿಗಿಂತ ತುಲನಾತ್ಮಕವಾಗಿ ಕಡಿಮೆ ವಯಸ್ಸಿನವರಾಗಿದ್ದು, ಹೆಚ್ಚಾಗಿ ಸಾರ್ವಜನಿಕ ರಾಜಕೀಯ ರಂಗಕ್ಕೆ ಇಳಿದ ಪ್ರಥಮ ತಲೆಮಾರಿನವರಾದರೂ ಸಕ್ರಿಯವಾಗಿ ರಾಜಕಾರಣದಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಎಂಬುದಾಗಿ ಸಮಾಜದ ಶೋಷಿತ, ತುಳಿತಕ್ಕೊಳಪಟ್ಟ ಸಮುದಾಯದ ಮಹಿಳೆಯರು ಭಾಗವಹಿಸುವಂತಹ ಸ್ಥಿತ್ಯಂತರಕ್ಕೆ ಕಾರಣವಾಯಿತು ಎಂಬುದನ್ನು ನಿರ್ಮಲಾ ಬುಚ್‌ರವರು (2000), ತಮ್ಮ ಸಂಶೋಧನಾ ಲೇಖನದಲ್ಲಿ ಕಂಡುಕೊಂಡಿರುತ್ತಾರೆ[97].

ಸೀಮಾ ಪಿ. ಸಾಲ್ಗಾಂವ್ಕರ್ (2006), "ವುಮೆನ್, ಪೊಲಿಟಿಕಲ್ ಪವರ್ ಎಂಡ್ ದ ಸ್ಟೇಟ್", ಎಂಬ ಗ್ರಂಥದಲ್ಲಿ ಪಂಚಾಯತ್‌ಗಳಲ್ಲಿ ಮಹಿಳಾ ನಾಯಕತ್ವದ ಬಗ್ಗೆ ಹಲವಾರು ಅಧ್ಯಯನಗಳು ಆಗಿವೆ. ಪಶ್ಚಿಮ ಬಂಗಾಲ, ಹರ್‍ಯಾಣ, ಮಹಾರಾಷ್ಟ್ರ ಮತ್ತು ರಾಜಸ್ಥಾನಗಳಲ್ಲಿ ಮಹಿಳಾ ಪ್ರಾತಿನಿಧ್ಯವು ಉತ್ತಮವಾಗಿವೆ. ಕೇರಳ ಮತ್ತು ಕರ್ನಾಟಕ ಗ್ರಾಮ ಪಂಚಾಯತ್ ಚುನಾವಣೆಗಳಲ್ಲಿ ಶೇಕಡಾ 43ರಷ್ಟು ಸ್ಥಾನಗಳನ್ನು ಮಹಿಳೆಯರು ಪಡೆದುಕೊಂಡಿದ್ದಾರೆ. ಒರಿಸ್ಸಾದಲ್ಲಿ ಮಹಿಳೆಯರ ಸಾಕ್ಷರತೆ 29%ರಷ್ಟು ಕಡಿಮೆಯಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ತಳಮಟ್ಟದಲ್ಲಿ ರಾಜಕೀಯ ಪ್ರಾತಿನಿಧ್ಯವನ್ನು ಪಡೆದಿದ್ದಾರೆ[98]. ಒಟ್ಟಾರೆಯಾಗಿ ಮಹಿಳೆಯರ ಸಾಮಾಜಿಕ ಹಿನ್ನೆಲೆ, ಶೈಕ್ಷಣಿಕ ಮಟ್ಟ, ಆರ್ಥಿಕ ಹಿನ್ನೆಲೆಗಳು ಮಹಿಳೆಯ ರಾಜಕೀಯ ಭಾಗವಹಿಸುವಿಕೆಯಲ್ಲಿ ನಿರ್ಣಾಯಕ ಅಂಶಗಳಾಗಿರುವುದಿಲ್ಲ ಎಂಬ ಇತರ ಅಧ್ಯಯನಗಳಲ್ಲಿ ಕಂಡುಕೊಂಡ ಫಲಿತಗಳಿಂದ ಭಿನ್ನವಾದ ಕಂಡುಕೊಳ್ಳುವಿಕೆಯನ್ನು ಪ್ರಸ್ತುತ ಲೇಖನದಲ್ಲಿ ಗಮನಿಸಬಹುದು.

ಜಯಲ್ ನೀರಜ ಗೋಪಾಲ್ (2005), "ಎಂಜೆಂಡರಿಂಗ್ ಲೋಕಲ್ ಡೆಮಾಕ್ರಸಿ: ದ ಇಂಪ್ಯಾಕ್ಟ್ ಆಫ್ ಕೋಟಾಸ್ ಆಫ್ ವುಮೆನ್ ಇನ್ ಇಂಡಿಯಾಸ್ ಪಂಚಾಯತ್ಸ್", ಎಂಬ ಗ್ರಂಥದಲ್ಲಿ ಸಾಮಾಜಿಕ ಹಾಗೂ ಸಾಂಘಿಕ ತಡೆಗೋಡೆಗಳ ಹೊರತಾಗಿಯೂ, ಚುನಾಯಿತ ಮಹಿಳಾ

ಪ್ರತಿನಿಧಿಗಳ ಭಾಗವಹಿಸುವಿಕೆಯು ಅಭಿವೃದ್ಧಿ ಮತ್ತು ಅಧಿಕಾರ ಎರಡರ ಫಲಿತಾಂಶದಲ್ಲೂ ಪ್ರಕಟವಾಗಿದೆ. ತಮ್ಮ ದೃಷ್ಟಿಯಲ್ಲಿ ಅತಿ ಹೆಚ್ಚಾಗಿ ಒತ್ತುಕೊಡಬೇಕು ಎನಿಸುವಂತಹ ಅಭಿವೃದ್ಧಿಗೆ ಮಹಿಳೆಯರು ಆದ್ಯತೆ ಕೊಡುತ್ತಾರೆಂದು ಗಮನಿಸಲಾಗಿದೆ. ಪುರುಷರಿಗೆ ಅನುಕೂಲ ಆಗುವಂತಹ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯನ್ನು ವಿರೋಧಿಸಿ, ಗ್ರಾಮಕ್ಕೆ ಕೊಳವೆ ನೀರನ್ನು ತರುವ ಕಾರ್ಯವನ್ನು ಕೈಗೆತ್ತಿಕೊಳ್ಳುವಲ್ಲಿ ಅಥವಾ ತಮ್ಮ ಮಗಳಂದಿರು ಓದುವ ಉದ್ದೇಶದೊಂದಿಗೆ ಗ್ರಾಮದಲ್ಲಿ ಕಿರಿಯ ಅಥವಾ ಹಿರಿಯ ಪ್ರಾಥಮಿಕ ಶಾಲೆಯನ್ನು ಕಟ್ಟಿಸುವ ಕಾರ್ಯದ ಯೋಜನೆಯ ಬಗ್ಗೆ ಕೆಲಸ ಮಾಡುವಲ್ಲಿ ಮಹಿಳೆಯರು ಮುಂದಾಳತ್ವ ವಹಿಸಿದ್ದಾರೆ. ವೈದ್ಯಕೀಯ ಸಿಬ್ಬಂದಿ ಮತ್ತು ಶಿಕ್ಷಕರು ಆರೋಗ್ಯ ಕೇಂದ್ರದಲ್ಲಿ ಮತ್ತು ಶಾಲೆಗಳಲ್ಲಿ ಪ್ರಸ್ತುತವಿರುವಂತೆ ಮತ್ತು ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಯ ಪೋಷಣ ಕೇಂದ್ರಗಳನ್ನು ಪರೀಕ್ಷಿಸಿ ನಿಯಂತ್ರಿಸುವಲ್ಲಿ ಕೂಡಾ ಮಹಿಳೆಯರು ಬಹುವಾಗಿ ಒಳಗೊಂಡಿದ್ದಾರೆ. ಹೊಗೆಯಿಲ್ಲದ ಒಲೆಗಳು, ಶಿಶುಪಾಲನಾ ಕೇಂದ್ರಗಳು, ಸಮುದಾಯ ಭವನಗಳಿಗಾಗಿ ಶ್ರಮ ವಹಿಸುವಲ್ಲಿ ಅವರು ಮುಖ್ಯ ಪಾತ್ರವಹಿಸಿದ್ದಾರೆ, ಹಾಗೂ ಕುಟುಂಬ ಮತ್ತು ವೈವಾಹಿಕ ವಿಚಾರಗಳಲ್ಲಿ, ನಿಂದಿಸಲ್ಪಟ್ಟವರಿಗೆ ಮತ್ತು ಮದ್ಯವ್ಯಸನಿ ಗಂಡಂದಿರಿಗೆ ತಜ್ಞ ಮಾರ್ಗದರ್ಶನ ನೀಡುವಲ್ಲಿ ಮುಂದಾಳತ್ವ ವಹಿಸಿದ್ದಾರೆ[99]. ಕೆಲವೊಮ್ಮೆ, ಪಂಚಾಯತಿಯಲ್ಲಿ ನಾಯಕತ್ವ ವಹಿಸಿರುವ ಮಹಿಳೆಯರು ಸಮುದಾಯದ ಮಹತ್ತರ ಏಳಿಗೆಗಾಗಿ ಗ್ರಾಮದ ಕೆರೆಗಳ ಹರಾಜು, ಸಮುದಾಯ ಅರಣ್ಯಗಳು ಮತ್ತು ಹಳ್ಳಿ ಮಾರುಕಟ್ಟೆಗಳ ಕಲ್ಯಾಣ ಯೋಜನೆಯನ್ನು ಕೈಗೆತ್ತಿಕೊಳ್ಳುವುದರಿಂದ ತಮ್ಮ ಆದಾಯದಲ್ಲಿ ನಾಟಕೀಯ ಹೆಚ್ಚಳ ಕೂಡಾ ಅಗಿದೆ ಎಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ.

ಹರಿಯಾಣದ ಪಂಚಾಯತ್‌ನ ನಾಲ್ಕು ಜಿಲ್ಲೆಗಳಲ್ಲಿ ಸುಮಾರು ನೂರಕ್ಕೂ ಮಿಕ್ಕಿ ಚುನಾಯಿತ ಮಹಿಳೆಯರ ಪ್ರಗತಿಯನ್ನು ಮರುಪರಿಶೀಲನೆ ಮಾಡಿದೆ. ಅವರಲ್ಲಿ ಹೆಚ್ಚಿನ ಮಹಿಳಾ ಸದಸ್ಯರು, ಯುವ ಮಹಿಳೆಯರೂ ಸೇರಿದಂತೆ ಚುನಾಯಿತರಾದ ಸಂದರ್ಭದಲ್ಲಿ ಅನಕ್ಷರಸ್ತರಾಗಿದ್ದರು. ಅಧಿಕಾರಕ್ಕೆ ಬಂದ ಎರಡು ವರ್ಷಗಳಲ್ಲಿ ಅವರು ಅಕ್ಷರ ಕಲಿಯುವ ಬೇಡಿಕೆಯನ್ನು ಮುಂದಿಟ್ಟರು ಹಾಗೂ ಸಾಮಾನ್ಯವಾಗಿ ತಮ್ಮ ಹೆಣ್ಣುಮಕ್ಕಳ ಶಿಕ್ಷಣದ ಅಗತ್ಯವನ್ನು ಮನಗಂಡಿರುವುದನ್ನು ಭಾರತೀಯ ಸಾಮಾಜಿಕ ವಿಜ್ಞಾನ ಸಂಸ್ಥೆಯ (2000). ಒಂದು ಅಧ್ಯಯನವು ಪ್ರತಿನಿಧಿಯಾಗಿ ಆಯ್ಕೆಯಾದ ಮಹಿಳೆಯರು ಶಿಕ್ಷಣಕ್ಕೆ ಕೊಟ್ಟ ಆದ್ಯತೆಯನ್ನು ಸ್ಪಷ್ಟವಾಗಿ ವಿವರಿಸುತ್ತದೆ ಹಾಗೂ ಸಕ್ರಿಯ ಭಾಗವಹಿಸುವಿಕೆಯಲ್ಲಿ ಶಿಕ್ಷಣದ ಅಗತ್ಯತೆಯನ್ನು ಕಂಡುಕೊಂಡಿರುತ್ತದೆ[100].

"ಪಂಚಾಯತ್‌ರಾಜ್: ವುಮೆನ್ ಚೇಂಜಿಂಗ್ ಗವರ್‌ನೆನ್ಸ್"ನಲ್ಲಿ ಲೇಖಕರ ಪ್ರಕಾರ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿನ ಅನುಭವಗಳು ಅನೇಕ ಹೆಂಗಸರನ್ನು ಬದಲಾಯಿಸಿವೆ. ಇದರಲ್ಲಿ ಮಹಿಳಾ ಸಬಲೀಕರಣ, ಆತ್ಮವಿಶ್ವಾಸ, ರಾಜಕೀಯ ಜಾಗೃತಿ ಮತ್ತು ವಿಷಯದ ಖಚಿತತೆಯನ್ನು ಒಳಗೊಂಡಿರುತ್ತದೆ[101]. ಮಹಿಳಾ ಸಬಲೀಕರಣ ಎನ್ನುವುದು ಗಂಡಸರ ಸಾಂಪ್ರದಾಯಿಕ ಪ್ರಭುತ್ವ ಮತ್ತು ಹಿರಿಮೆಯ ಆದರ್ಶಕ್ಕೆ ಸವಾಲಾಗಿದೆ ಎಂದು ದೇವಕಿ ಜೈನ್‌ರವರು (2014), ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಮೀಸಲಾತಿ ಸೌಲಭ್ಯಗಳನ್ನು ಬಳಸಿಕೊಂಡು ಸಕ್ರಿಯವಾಗಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಿರುವುದನ್ನು ಉಲ್ಲೇಖಿಸಿರುತ್ತಾರೆ.

ಶುಭ ಕೆ. (1997), "ಕರ್ನಾಟಕ ಪಂಚಾಯತ್ ಎಲೆಕ್ಷನ್ 1995" ಅಧ್ಯಯನದಲ್ಲಿ ಪಂಚಾಯತ್ ಚುನಾವಣೆಯನ್ನು ವಿಶ್ಲೇಷಿಸುತ್ತಾ ಪಂಚಾಯತ್ ಸದಸ್ಯತ್ವದಲ್ಲಿ ಇತ್ತೀಚಿನ ಯುವತಿಯರು ಹೆಚ್ಚು ಆಸಕ್ತಿಯನ್ನು ತೋರುತ್ತಿದ್ದಾರೆ. ಅದರಲ್ಲಿ ಹಿಂದುಳಿದ ವರ್ಗಗಳ ಹೆಂಗಸರ ಪ್ರಾತಿನಿಧ್ಯ ಅಧಿಕವಾಗಿ ಕಾಣುತ್ತಿದೆ[102]. ಅಲ್ಲದೇ ಹೆಚ್ಚಿನ ಮಹಿಳಾ ಸದಸ್ಯರು ರಾಜಕೀಯ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದಾರೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

1993ರಲ್ಲಿ ಮಾಡಲಾದ ಸಂವಿಧಾನದ 73ನೇ ತಿದ್ದುಪಡಿ ಜನರನ್ನು ಒಳಗೊಳ್ಳುವ ಪ್ರಜಾಸತ್ತೆಯ ಪ್ರಕ್ರಿಯೆಗೆ ಒಂದು ಮಹತ್ವದ ಪಾತ್ರ ವಹಿಸುವಂಥದ್ದು. ಇದರಿಂದ ಸ್ಥಳೀಯ ಸಂಸ್ಥೆಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಮಹಿಳೆಯರು ಆಡಳಿತದಲ್ಲಿ ಪಾಲ್ಗೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದರಂತೆ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಎಷ್ಟೋ ಸಮುದಾಯಗಳ ಮಹಿಳೆಯರಿಗೂ ಮುಖ್ಯವಾಹಿನಿ ಆಡಳಿತದಲ್ಲಿ ಪಾಲುಗೊಳ್ಳಲು ಅವಕಾಶ ಲಭಿಸಿದೆ. ಕೆಳಸ್ತರದಲ್ಲಿನ ಮಹಿಳೆಯರು ಅಧಿಕಾರದಲ್ಲಿ ನಿರ್ಧಾರ ಕೈಗೊಳ್ಳುವ ಸ್ಥಾನದಲ್ಲಿರುವುದಕ್ಕೆ ಗ್ರಾಮಾಂತರ ಪುರುಷ ಪ್ರಧಾನ ಸಮಾಜ ವ್ಯವಸ್ಥೆ ತನ್ನ ಅದುವರೆಗಿನ ಹಿಡಿತವನ್ನೂ ಬಿಟ್ಟುಕೊಡಲು ಸಿದ್ಧವಾಗದಿದ್ದರೂ ಇಂತಹ ಅವಕಾಶ ನಿರ್ಮಾಣ ಜನರನ್ನು ಒಳಗೊಳ್ಳುವ ಪ್ರಜಾಸತ್ತೆಯಲ್ಲಿ ಅತ್ಯಂತ ಪ್ರಮುಖವಾದದ್ದು ಎಂಬುದು ಸ್ಪಷ್ಟ. ಆದರೆ ಈಗಿನ ಪರಿಸ್ಥಿತಿ ಹೇಗಿದೆ ಎಂದರೆ ಅನಕ್ಷರತೆ, ಮನೆಯವರ ಅಸಹಕಾರ, ಅಧಿಕಾರಶಾಹಿಯ ಉದಾಸೀನತೆ, ಸಮುದಾಯದ ಅಸಡ್ಡೆಯಂತಹ ಅಂಶಗಳು ಗ್ರಾಮಾಂತರ ಪ್ರದೇಶಗಳಲ್ಲಿ ಮಹಿಳೆಯರ ಅಧಿಕಾರದ ಅವಕಾಶಕ್ಕೆ ಅಡ್ಡಿಯಾಗುವಂತಹ ಅಂಶಗಳಾಗಿವೆ. ಜನರನ್ನು ಒಳಗೊಂಡ ಪ್ರಜಾಸತ್ತೆ ಸಾಕಾರಗೊಳ್ಳುವುದಕ್ಕೆ ನಿರ್ಲಕ್ಷಿತ ಮಹಿಳೆಯರು ಆಡಳಿತದಲ್ಲಿ ಸಕ್ರಿಯವಾಗಲೇಬೇಕು. ಗ್ರಾಮ ಮಟ್ಟದಿಂದ ಸಂಸತ್ತಿನವರೆಗೆ ಪ್ರತಿನಿಧಿಯನ್ನು ಆಯ್ಕೆ ಮಾಡಲು ಪುರುಷರು ಮತಾಧಿಕಾರ ಪಡೆದಿದ್ದರೂ ಭಾರತೀಯ ಮಹಿಳೆ ಈಗಲೂ ತಾನು

ಸಬಲೆಯಾಗಿಲ್ಲ[103]. ದೇಶದ ಹಿಂದುಳಿದ, ಅಲಕ್ಷಿತ, ನಿರ್ಲಕ್ಷಿತ, ಕೆಳಸ್ತರದ ಮಹಿಳೆ ಆಡಳಿತದ ಎಲ್ಲ ಹಂತಗಳಲ್ಲಿ ಪಾಲುಗೊಳ್ಳುವಂಥ ಪರಿಸ್ಥಿತಿಯನ್ನು ನಿರ್ಮಿಸುವುದು ಪ್ರಜಾಸತ್ತೆಯನ್ನು ಬಲಪಡಿಸುವ ದೃಷ್ಟಿಯಿಂದ ಅವಶ್ಯಕವಾಗಿದೆ ಎಂದು ಗಾಯತ್ರಿದೇವಿಯವರು (2005), ಈ ತಿದ್ದುಪಡಿಯ ಸಾಧಕ ಬಾಧಕಗಳು, ರಾಜಕೀಯ ಸಹಭಾಗಿತ್ವದಲ್ಲಿ ಎದುರಿಸುವ ಸಾಮಾಜಿಕ, ಆರ್ಥಿಕ ಅಡೆತಡೆಗಳ ಬಗೆಗೆ ವಿಮರ್ಶಿಸಿ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬಲವರ್ಧನೆಗೆ ಸಲಹೆಯನ್ನು ನೀಡಿರುತ್ತಾರೆ.

ದತ್ತ ಬಿಶಾಖ (2008), "ಹೂ ವಿಲ್ ಮೇಕ್‌ದಿ ಚಪಾತಿಸ್, –ಎ ಸ್ಟಡಿ ಆಫ್ ಆಲ್ – ವುಮೆನ್ ಪಂಚಾಯತ್ ಇನ್ ಮಹಾರಾಷ್ಟ್ರ" ಎಂಬ ಅಧ್ಯಯನದಲ್ಲಿ ಪಂಚಾಯತ್‌ನಲ್ಲಿ ಮಹಿಳೆಯರ ಭಾಗವಹಿಸುವಿಕೆಯಿಂದ ಹೆಚ್ಚಳಗೊಳ್ಳುತ್ತಿರುವ ಅಭಿವೃದ್ಧಿ ಏಳಿಗೆಗಳು ಮೆಚ್ಚುಗೆ ಪಡೆಯುವಂಥದ್ದಾಗಿದೆ. ಚುನಾಯಿತ ಮಹಿಳಾ ಪ್ರತಿನಿಧಿಗಳು ಅವರ ವಿರುದ್ಧ ನಡೆಯುವ ಬಹಿರಂಗ ಪಕ್ಷಪಾತದ ಬಗ್ಗೆ ಪಂಚಾಯತಿಯಲ್ಲಿ ಆಗಾಗ ವರದಿ ಮಾಡುತ್ತಾರೆ. ಸಹೋದ್ಯೋಗಿಗಳಿಂದ ನಡೆಯುವ ಪುರುಷ ಪ್ರಾಬಲ್ಯ ಸಭೆಗಳು, ಮಹಿಳಾ ಸದಸ್ಯರ ಅಭಿಪ್ರಾಯ ಹಾಗೂ ಸಲಹೆಗಳ ಕಡೆ ತಿರಸ್ಕಾರ ಮತ್ತು ಸಾಮಾನ್ಯವಾಗಿ ಅಧಿಕಾರಿಗಳಿಂದ ನಿರ್ಲಕ್ಷ್ಯದ ನಡವಳಿಕೆ. ಅದಾಗ್ಯೂ, ಮಹಿಳೆ ಪ್ರತ್ಯೇಕವಾಗಿ ಕುಳಿತುಕೊಳ್ಳುವಂತಹ ಮತ್ತು ಗಂಡಸರ ಮುಂದೆ ಮಾತನಾಡದಿರುವ ಸಾಮಾಜಿಕ ಕಟ್ಟಳೆಯಲ್ಲಿ ನಿಧಾನವಾದ ಬದಲಾವಣೆಯಂತಹ ಸಣ್ಣ ಪುಟ್ಟ ಏಳಿಗೆಗಳು ಆಗಿವೆ. ಮೊದಲು, 'ಚಪಾತಿ ಯಾರು ಮಾಡುತ್ತಾರೆ?' ಮತ್ತು 'ಮಕ್ಕಳನ್ನು ಯಾರು ನೋಡಿಕೊಳ್ಳುತ್ತಾರೆ?' ಎಂಬಂಥಾ ಪ್ರಶ್ನೆಗಳು ಭಾಗವಹಿಸುವಿಕೆಗೆ ತಡೆಗೋಡೆಯಾಗಿತ್ತು. ಈಗ, ಮನೆಯಲ್ಲಿ ಮಹಿಳೆಯರು ಮಾತ್ರವಲ್ಲದೇ ಕೆಲವೊಮ್ಮೆ ಗಂಡಸರು ಕೂಡಾ ಮನೆಕೆಲಸಗಳ ಜವಾಬ್ದಾರಿಗಳನ್ನು ಹಂಚಿಕೊಳ್ಳುತ್ತಾರೆ. ಚುನಾವಣೆಯು ಒಟ್ಟಿನಲ್ಲಿ ಕುಟುಂಬಕ್ಕೆ ಹೆಚ್ಚಿನ ಸ್ಥಾನಮಾನವನ್ನು ತರುತ್ತದೆಯೆಂಬ ಮತ್ತು ಮೇಲ್‌ಜಾತಿಯ ಕುಟುಂಬಗಳ ಮದುವೆಗಳಿಗೆ ಆಮಂತ್ರಣ ಹಾಗೂ ಸಾಮಾಜಿಕವಾಗಿ ಹೆಚ್ಚಿನ ಗೌರವ ತರುತ್ತದೆಯೆಂಬ ಭಾವನೆಯಿದೆ ಎಂದು ಮಹಿಳಾ ಮೀಸಲಾತಿಯ ಪರಿಣಾಮವಾಗಿ ಸಾಮಾಜಿಕವಾಗಿ ಮಹಿಳಾ ಪ್ರತಿನಿಧಿಗಳು ಉತ್ತಮ ಸ್ಥಾನಮಾನ ಪಡೆಯುವುದಕ್ಕೆ ಕಾರಣವಾಗಿರುತ್ತದೆ[104]. ರಾಜಕೀಯ ಅಧಿಕಾರಗಳನ್ನು ಸಮರ್ಪಕವಾಗಿ ಚಲಾಯಿಸುವಂತಾಗಿದೆ ಎಂದು ಬದಲಾದ ಪರಿಸ್ಥಿತಿಯ ಬಗೆಗೆ ಲೇಖಕರು ಬೆಳಕು ಚೆಲ್ಲಿರುತ್ತಾರೆ.

ಸಂವಿಧಾನ ಮತ್ತು ರಾಜ್ಯದ ಹಲವಾರು ಕಾನೂನುಗಳು ಮಹಿಳೆಯರಿಗೆ ಸಮಾನ ಸ್ಥಾನಮಾನ ಮತ್ತು ಅವಕಾಶಗಳನ್ನು ಕಲ್ಪಿಸಿದೆ. ಇವುಗಳನ್ನು ಪಡೆಯುವಂತಾಗಲು ಮಹಿಳೆಯರಿಗೆ ಸಾಮಾಜಿಕ ಹಾಗೂ ರಾಜಕೀಯ ಹಕ್ಕುಗಳ ಬಗ್ಗೆ ತಿಳಿವಳಿಕೆ ಮೂಡಿಸುವ ಅವಶ್ಯಕತೆಯಿದೆ. ರಾಜ್ಯವು ಮಹಿಳೆಯರಿಗೆ

ಕಾನೂನಿನ ತಿಳುವಳಿಕೆ ಮತ್ತು ಕಾನೂನು ಸಲಹಾ ಕೇಂದ್ರಗಳನ್ನು ಸ್ಥಾಪಿಸಿದೆ. ಇಂತಹ ಕೇಂದ್ರಗಳನ್ನು ಜಿಲ್ಲಾ ಹಾಗೂ ಮಂಡಲ ಪ್ರದೇಶದಲ್ಲಿ ಸ್ಥಾಪಿಸಿದರೆ ಅವರು ಪುರುಷರ ದಬ್ಬಾಳಿಕೆ ಮತ್ತು ದೌರ್ಜನ್ಯಗಳ ವಿರುದ್ಧ ಹೋರಾಡುವುದು ಸಾಧ್ಯವಾಗುತ್ತದೆ. ಈ ಪ್ರಮುಖವಾದ ಕಾರ್ಯದಲ್ಲಿ ಎನ್.ಜಿ.ಓ. ಮತ್ತು ಮಹಿಳಾ ಸಂಘಟನೆಗಳು ಕೈಜೋಡಿಸುವುದು ಅವಶ್ಯಕವಾಗಿದೆ. ಕಾನೂನು ತಿಳುವಳಿಕೆಯ ಬಗ್ಗೆ ಕಾರ್ಯಾಗಾರ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಮಹಿಳಾ ಸಬಲೀಕರಣದಲ್ಲಿ ಇವರು ಚಾರಿತ್ರಿಕ ಪಾತ್ರವನ್ನು ನಿರ್ವಹಿಸಬಹುದು ಎಂದು ಮಹಿಳಾ ಸಬಲೀಕರಣದ ಔಚಿತ್ಯವನ್ನು ಸ್ಟೀಫನ್ ಮತ್ತು ರಾಜಶೇಖರನ್‌ರವರು (2001), ತಮ್ಮ ಲೇಖನದಲ್ಲಿ ವ್ಯಕ್ತಪಡಿಸಿರುತ್ತಾರೆ[105].

ಅನುಸೂಚಿತ ಜಾತಿಯ ಮಹಿಳಾ ಪ್ರತಿನಿಧಿಗಳು ಪಂಚಾಯತ್ ಸಭೆಯಲ್ಲಿ ಅಧ್ಯಕ್ಷತೆ ವಹಿಸುವುದನ್ನು ನಿರಾಕರಿಸಲ್ಪಡುತ್ತಿರುವಂತೆಯೇ, ಮಹಿಳಾ ಸರಪಂಚ್, ಮನೆಗೆ ಹೋಗಿ ಚಹಾ ಮಾಡು ಎಂದು ಹೇಳಿಸಿಕೊಂಡರೂ ಅಧ್ಯಕ್ಷತೆ ಪಡೆಯಲು ತನ್ನ ಹಕ್ಕನ್ನು ದೃಢವಾಗಿ ಕೇಳಿ ಪಡೆದ ಉದಾಹರಣೆಗಳೂ ಇವೆ. ಇಂತಹ ಪ್ರಸಂಗಗಳು ಅವರ ಹಕ್ಕಿನ ಅರಿವನ್ನು ಹೆಚ್ಚಿಸಿದೆ. ಅಂತೆಯೇ ತಮ್ಮ ಕೆಲಸಕಾರ್ಯಗಳನ್ನು ನಡೆಸುವ ಸಾಮರ್ಥ್ಯ ಮೊದಲಿಗಿಂತಲೂ ಪ್ರಭಾವಶಾಲಿಯಾಗಿರುತ್ತದೆ. ಇದು ಹೆಚ್ಚಾಗಿ ಸರಕಾರೇತರ ಸಂಸ್ಥೆಗಳ ಸಾಮರ್ಥ್ಯ–ಬೆಳೆಸುವಿಕೆಯ ಪ್ರಯತ್ನಗಳ ಫಲವಾಗಿದೆ. ಉದಾಹರಣೆಗೆ, ಕರ್ನಾಟಕದಲ್ಲಿ ಮಹಿಳಾ ಸಮಾಖ್ಯದ ಮುಂಚೂಣಿಯ ಪ್ರಯತ್ನಗಳು ಬಡವರನ್ನು, ಕೆಳ ಜಾತಿಯ ಗ್ರಾಮೀಣ ಮಹಿಳೆಯರನ್ನು ಸಂಘ ಅಥವಾ ಸಮಷ್ಟಿಯೊಳಗೆ ತರುವ ಕಾರ್ಯ ರಾಜಕೀಯದಲ್ಲಿ ಭಾಗವಹಿಸಲು ಅವರನ್ನು ತಯಾರು ಮಾಡುವುದು, ಚುನಾವಣೆಯ ನಂತರ ಅವರಿಗೆ ತರಬೇತಿ ನೀಡುವುದು ಮತ್ತು ಸಾಮಾನ್ಯವಾಗಿ ಸ್ಪಂದಿಸುವ ಮತ್ತು ಉತ್ತರದಾಯಿ ವಾತಾವರಣವನ್ನು ಸೃಷ್ಟಿ ಮಾಡುವಂತಹ ರೂಪವನ್ನು ಪಡೆಯಿತು[106]. ಮಹಿಳೆಯರಿಗೆ ವಿಶೇಷವಾಗಿ ಗ್ರಾಮಸಭೆಯ ಸಭೆಗಳಲ್ಲಿ ಹಾಜರಾಗಲು ಪ್ರೋತ್ಸಾಹಿಸಲಾಯಿತು ಮತ್ತು ಗ್ರಾಮಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಲ್ಲಿ ಸಹಾಯ ಮಾಡಲಾಯಿತು ಎಂದು ಸರಕಾರೇತರ ಸಂಸ್ಥೆಗಳ ತಳಸ್ತರದಿಂದ ಬಂದಂತಹ ಮಹಿಳಾ ಸದಸ್ಯರಿಗೆ ಅರಿವು ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರಿಂದ ಸಾಧ್ಯವಾಯಿತು ಎಂಬುದಾಗಿ ರೇವತಿ ನಾರಾಯಣನ್ (2002), ತಿಳಿಸಿರುತ್ತಾರೆ.

ಮಹಿಳಾ ಸಬಲೀಕರಣವನ್ನು ಸಾಧಿಸುವಲ್ಲಿ, ಸಮಾಜದ ಬೇರೆ ಬೇರೆ ವರ್ಗಗಳ ಸಹಕಾರದ ಅಗತ್ಯವನ್ನು ಪರಿಗಣಿಸಬಹುದು. ಈ ದಿಸೆಯಲ್ಲಿ ಧಾರ್ಮಿಕ ಮುಖಂಡರು, ರಾಜಕೀಯ ನಾಯಕರು ಮೊದಲಾದವರು ತಮ್ಮ ಅಹಂಕಾರವನ್ನು ಮರೆತು ಪುರುಷರಂತೆಯೇ ಮಹಿಳೆಯರೂ ಸಮಾಜದ

ಒಂದು ಅಂಗವೆಂದು ಅರ್ಥಮಾಡಿಕೊಳ್ಳಲು ಮತ್ತು ಅವರ ಸಾಧನೆಯನ್ನು ಮೆಚ್ಚಿಕೊಳ್ಳಲು ಮುಂದೆ ಬರಬೇಕಾಗುತ್ತದೆ. ಪುರುಷ ಪ್ರಧಾನ ಸಮಾಜ ಪರಿವರ್ತಿತವಾಗಿ, ಪುರುಷ ಮತ್ತು ಮಹಿಳಾ ಸಮಾನತೆಯನ್ನು ಪ್ರತಿಪಾದಿಸುವ ಉತ್ತಮ ಸಾಮಾಜಿಕ– ಆರ್ಥಿಕ ವ್ಯವಸ್ಥೆ ನಿರ್ಮಾಣವಾಗುವವರೆಗೆ ಭವಿಷ್ಯ ಮಸುಕಾಗಿಯೇ ಕಾಣುತ್ತದೆ ಎಂದು ಶಶಿ ಕೌಲ್ ಮತ್ತು ಶ್ರದ್ಧಾ ಸಾಹ್ನಿರವರು (2009), ತಮ್ಮ ಅಧ್ಯಯನದ ಫಲಿತಗಳಲ್ಲಿ ವಿವರಿಸಿರುತ್ತಾರೆ[107].

ಕರ್ನಾಟಕದ ಅಧ್ಯಯನ ತೋರಿಸುವುದೇನೆಂದರೆ ಮಹಿಳೆಯರಲ್ಲಿ ಸಾಮಾಜಿಕ ದೋಷಗಳಿವೆ ಮತ್ತು ಸಮರ್ಪಕವಾಗಿ ಕಾರ್ಯನಿರ್ವಹಿಸುವಲ್ಲಿ ಅನೇಕ ನಿರ್ಬಂಧಗಳಿವೆ. ಆದರೆ ಅನುಭವದಿಂದ ಅವರ ದಕ್ಷತೆ ಸುಧಾರಿಸುತ್ತದೆ. ಮೇಲಾಗಿ ನಿಯಮಿತವಾಗಿ ಚುನಾವಣೆ ನಡೆದಂತೆ ಮಹಿಳೆಯರ ಸ್ವಾತಂತ್ರ್ಯವು ಹೆಚ್ಚುತ್ತದೆ. ಇಂದು ಮಹಿಳೆಯರು ಬೆಂಬಲ ಮತ್ತು ಗುರುತಿಸುವಿಕೆಗಾಗಿ ತಮ್ಮ ಕುಟುಂಬದ ಪುರುಷರ ಮೇಲೆ ಹೆಚ್ಚು ಅವಲಂಬಿತರಾಗಿಲ್ಲ. ದಶಕಗಳಿಂದ ನಡೆಯುವ ಚುನಾವಣಾ ಪ್ರಕ್ರಿಯೆಯು ತಳಮಟ್ಟದ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಹತ್ತಿಕ್ಕುವುದರಿಂದ ಮಹಿಳೆಯರ ಜನ್ಮದತ್ತ ಸಾಮರ್ಥ್ಯಗಳನ್ನು ವಿಕಾಸವಾಗಗೊಡಲಿಲ್ಲ ಎಂದು ಜಾರ್ಜ್ ಮಾಥ್ಯೂರವರು (1994), ಪ್ರಸ್ತುತ ಮಹಿಳೆಯರು ತಮ್ಮ ಸುತ್ತಲೂ ವಿಧಿಸಲ್ಪಟ್ಟಿರುವ ಎಲ್ಲಾ ದಿಗ್ಬಂಧನಗಳಿಂದ ಹೊರಬಂದು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ವಿಶ್ಲೇಷಿಸಿದ್ದಾರೆ[108].

ಮಹಿಳೆಯರಿಗೆ ದೊರೆತಿರುವ ಅವಕಾಶಗಳನ್ನು ಅನುಭವಗಳನ್ನಾಗಿ ಪರಿವರ್ತಿಸಿ ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕೆ ಅವರಿಗೆ ಬೆಂಬಲ ನೀಡುವಂಥ ವಾತಾವರಣವನ್ನು ಸೃಷ್ಟಿಸುವುದರಲ್ಲಿ ಸರ್ಕಾರ ಮತ್ತು ನಾಗರಿಕ ಸಮಾಜದ ಪಾತ್ರವು ಅಷ್ಟೇ ಮುಖ್ಯ. ಆಡಳಿತ ವ್ಯವಸ್ಥೆಯಲ್ಲಿ ಮಹಿಳೆಯರ ಇರುವಿಕೆ ಸಾಂಕೇತಿಕ ಚಿಹ್ನೆಯಾಗದೆ ಒಂದು ಸಶಕ್ತ ಮಹಿಳಾ ಸಮೂಹ ನಿರ್ಮಾಣಕ್ಕೆ ನಾಂದಿ ಹಾಡಿದರೆ ಮಾತ್ರ ರಾಜಕೀಯ ಸಶಕ್ತೀಕರಣಕ್ಕೆ ನಿಜವಾದ ಅರ್ಥ ಬರುವುದು ಎಂದು ಎಸ್.ಬಿ. ಪವಾರ್ ಮತ್ತು ವೈ.ಟಿ. ಪವಾರ್‌ರವರು (2009), ತಮ್ಮ ಅಧ್ಯಯನದ ಫಲಿತಗಳನ್ನು ಆಧಾರವಾಗಿಟ್ಟುಕೊಂಡು ಸಲಹೆಗಳನ್ನು ನೀಡಿರುತ್ತಾರೆ[109].

ಆರ್. ಸೆಯಾನ್ (2002), "ಇನ್ ಲೆಜಿಸ್ಲೇಷನ್ ಎಂಡ್ ಜುಡಿಷಿಯಲ್ ಇನಿಷಿಯೇಟಿವ್ಸ್ ಟುವಾರ್ಡ್ಸ್ ವುಮೆನ್ ಎಂಪವರ್‌ಮೆಂಟ್", ಎಂಬ ಅಧ್ಯಾಯನದಲ್ಲಿ ಮಹಿಳೆಯರ ಹಕ್ಕುಗಳು ಮತ್ತು ಸೌಲಭ್ಯಗಳಿಗೆ ಬೇಕಾದ ಶಾಸನಗಳು ಹಲವಾರು. ಆದರೆ ಅಜ್ಞಾನ ಹಾಗೂ ಅನಕ್ಷರತೆಯಿಂದ ಈ ಶಾಸನಗಳು ಸರಿಯಾಗಿ ಅನುಷ್ಠಾನಗೊಂಡಿರುವುದಿಲ್ಲ. ಭಾರತದ ಶಾಸನಗಳು ಮಹಿಳೆಯರ

ಸಶಕ್ತೀಕರಣದ ಉದ್ದೇಶವನ್ನು ಹೊಂದಿವೆ. ಭಾರತದ ನ್ಯಾಯಾಲಯದಲ್ಲಿ ಕೊಟ್ಟ ನ್ಯಾಯಿಕ ತೀರ್ಪುಗಳು ಮಹಿಳೆಯರನ್ನು ಶೋಷಣೆಯಿಂದ ರಕ್ಷಿಸಲು ಸಕ್ರಿಯವಾದ ಪಾತ್ರವನ್ನು ವಹಿಸಿವೆ. ಶಾಸನಗಳನ್ನು ಅನುಷ್ಠಾನಗೊಳಿಸುವ ಸಂಸ್ಥೆಯ ಕೊರತೆ ಇದ್ದರೂ ಶಾಸನೀಯ ಮತ್ತು ನ್ಯಾಯಿಕ ತತ್ವಗಳು ಸಮಾಜದಲ್ಲಿ ಮಹಿಳೆಯರನ್ನು ಉತ್ತಮ ಸ್ಥಾನದಲ್ಲಿರಿಸಿದೆ[110]. ಆದರೂ ಭಾರತದಲ್ಲಿ ಪೂರ್ಣ ಪ್ರಮಾಣದ ಸಶಕ್ತೀಕರಣವನ್ನು ಸಾಧಿಸಲು ಮಹಿಳೆಯರು ಬಹಳಷ್ಟು ಮೈಲುಗಳನ್ನು ಸವೆಯಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಾಲತಿ ಸುಬ್ರಹ್ಮಣಿಯನ್ (2005), "ಪೊಲಿಟಿಕಲ್ ಪಾರ್ಟಿಸಿಪೇಷನ್ ಎಂಡ್ ರೆಪ್ರೆಸೆಂಟೇಷನ್ ಆಫ್ ವುಮೆನ್ ಇನ್ ಇಂಡಿಯನ್ ಪೊಲಿಟಿಕ್ಸ್", ಎಂಬ ಸಂಶೋಧನಾ ಗ್ರಂಥದಲ್ಲಿ ಉದಾರ ಪ್ರಜಾಪ್ರಭುತ್ವವು ವಿವೇಚನೆ, ಕಾನೂನು ಮತ್ತು ಆಯ್ಕಾ ಸ್ವಾತಂತ್ರ್ಯದ ತಳಹದಿಯ ಮೇಲೆ ರಚನೆಯಾಗಿದೆ. ಆದರೂ ಬೇರೆ ಬೇರೆ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿರುವ ವಿವಿಧ ಸಾಮಾಜಿಕ ಗುಂಪುಗಳ ಸ್ಥಾನದಲ್ಲಿ ಅಧಿಕಾರ ವಾಸ್ತವವಾಗಿ ಯಾವಾಗಲೂ ಸಮಾನವಾಗಿರುವುದಿಲ್ಲ. ಇದು ನಿರ್ದಿಷ್ಟವಾಗಿ ಮಹಿಳೆಯರಿಗೆ ಅನ್ವಯವಾಗುತ್ತದೆ. ಸಮಾಜ ಅಥವಾ ರಾಜ್ಯದ ಸ್ವರೂಪವು ಮಹಿಳೆಯರ ರಾಜಕೀಯ ಉಪಸ್ಥಿತಿ ಮತ್ತು ಭಾಗವಹಿಸುವಿಕೆಯ ಮೇಲೆ ಪರಿಣಾಮ ಬೀರುತ್ತದೆ. ಪ್ರಜಾಪ್ರಭುತ್ವ, ಆಡಳಿತ ಮತ್ತು ರಾಜ್ಯದ ತತ್ವಗಳು ಯಾವಾಗಲೂ ಲಿಂಗ ತಟಸ್ಥ್ಯವಾಗಿರದೆ ಐತಿಹಾಸಿಕ ಅಂಶಗಳು ಮತ್ತು ಅನುಭವ ಇವೆರಡರ ಫಲವಾಗಿದೆ. ರಾಜ್ಯ ಮತ್ತು ಅದರ ಸಂಘಟಿತ ಅಸ್ತಿತ್ವವು ಇತರ ಸಾಮಾಜಿಕ ಸಂಘಟನೆಯ ಹಾಗೇ ಒಂದೇ ಸಮನವಾದ ಸಾಮಾಜಿಕ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ. ಆದುದರಿಂದ ರಾಜಕೀಯ ಪ್ರಕ್ರಿಯೆ, ನಿರ್ಧಾರ ತೆಗೆದು ಕೊಳ್ಳುವಿಕೆ ಮತ್ತು ನೀತಿ ನಿರೂಪಣೆಯ ಮಹಿಳೆಯರ ಭಾಗವಹಿಸುವಿಕೆಯಲ್ಲಿ ಲಿಂಗ ಸಮತೋಲನದ ಪರಿಶೀಲನೆಯ ಅಗತ್ಯವಿದೆ. ರಾಷ್ಟ್ರೀಯ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಯಲ್ಲಿ ಮಹಿಳೆಯರ ಸೀಮಿತ ಸ್ವರೂಪದ ಭಾಗವಹಿಸುವಿಕೆ ಮತ್ತು ಪ್ರತಿನಿಧಿತ್ವ, ಮಹಿಳೆ ಮತ್ತು ಶಾಸನಬದ್ಧ ಸಂಸ್ಥೆಯ ಪ್ರಮುಖ ಕಾರಣವಾಗಿದೆ. ಮಹಿಳೆ ಮತ್ತು ಪುರುಷರಿಬ್ಬರು ಶಾಸನ ಬದ್ಧವಾಗಿ ರಾಜಕೀಯ ಹುದ್ದೆಗೆ ಅರ್ಹರಾಗಿರುತ್ತಾರೆ. ಆದರೆ ರಾಜಕೀಯ ವ್ಯವಸ್ಥೆಯಲ್ಲಿ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರಿಗೆ ಸಮಾನತೆಯ ಬೆಂಬಲವಿಲ್ಲ. ಮಹಿಳೆಯರ ಭಾಗವಹಿಸುವಿಕೆಯು ಪುರುಷರ ಭಾಗವಹಿಸುವಿಕೆಗೆ ಸರಿಸಮಾನವಾಗಿರಬೇಕು. ಇದು ಆಗದೆ ಇದ್ದರೆ ರಾಜಕೀಯ ವ್ಯವಸ್ಥೆಯಲ್ಲಿ ಆಳವಾದ ಲೋಪವಿದೆ ಎಂದರ್ಥ ಎಂದು ವಿಶ್ಲೇಷಿಸಿದ್ದಾರೆ[111].

ಎಂ.ಚಂದ್ರ ಪೂಜಾರಿಯವರು (2016), "ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಲಿಂಗ ಸಂಬಂಧ ಮತ್ತು ರಾಜಕೀಯ" ಎಂಬ ವಿಷಯದ ಬಗ್ಗೆ ಮಾತನಾಡುತ್ತಾ, ಕಾನೂನುಗಳು ಬಂದಕೂಡಲೇ ಎಲ್ಲ ಬದಲಾಗುತ್ತದೆ ಎನ್ನಲಾಗುವುದಿಲ್ಲ. ಮಹಿಳೆಯರ ರಾಜಕೀಯ ಬಲವರ್ಧನೆಗೆ ಮೇಲ್‌ಸ್ತರದ ಸರಕಾರಗಳಲ್ಲಿ ಅವರಿಗೆ ಮೀಸಲಾತಿ ನೀಡುವ ಮಸೂದೆ ಜಾರಿಗೊಳ್ಳಬೇಕು ಮತ್ತು ತಳಸ್ತರದ ಸಂಸ್ಥೆಗಳು ಬಲಗೊಳ್ಳಬೇಕು. ಲಿಂಗ ಸಂಬಂಧ, ಜಾತಿ ಹಾಗೂ ಧರ್ಮ ಸಂಬಂಧಗಳು ಸಮಾನತೆಯ ನೆಲೆಯಲ್ಲಿ ಇಲ್ಲ. ಇವೆಲ್ಲವೂ ಅಸಮಾನತೆ ನೆಲೆಯಲ್ಲಿ ಇದೆ ಈ ಅಸಮಾನತೆಗಳು ಹೊಡೆದು ಬಡಿದು ನಡೆಯುವುದಿಲ್ಲ. ಅವರ‍್ಯಾಕೆ ಮೇಲಿರಬೇಕು ಇವರ‍್ಯಾಕೆ ಕೆಳಗಿರಬೇಕೆಂದು ಒಪ್ಪಿಸುವ ವಿಚಾರಗಳಿವೆ. ಈ ವಿಚಾರಗಳನ್ನು ನಾವೆಲ್ಲ ಒಪ್ಪಿಕೊಂಡ ಕಾರಣಕ್ಕೆ ಲಿಂಗ ಅಸಮಾನತೆಗಳು ಜೀವಂತ ಇವೆ. ಆದುದರಿಂದ ಮಹಿಳೆಯರಿಗೆ ಹಣ, ಜಾತಿ, ಧರ್ಮದ ಬೆಂಬಲ ಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ[112].

ಮಹಿಳೆ ಮತ್ತು ವಿಕೇಂದ್ರೀಕರಣ

ವಿ.ಡಿ. ಮಹಾಜನ್‌ರವರು(1982), ಮೇಲಿನ ಹಂತದಿಂದ ಕೆಳಹಂತಕ್ಕೆ ಅಧಿಕಾರ ವರ್ಗಾವಣೆ ಆಗುವುದನ್ನು ವಿಕೇಂದ್ರೀಕರಣ ಎಂದಿದ್ದಾರೆ. ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಲೋಕತಾಂತ್ರಿಕ ವಿಕೇಂದ್ರೀಕರಣ ಎಂದು ಕರೆಯಲಾಗುತ್ತಿತ್ತು[113]. ವಿಕೇಂದ್ರೀಕರಣ ವ್ಯವಸ್ಥೆಯು ಬಹುಮುಖ್ಯವಾಗಿ ಜನತೆಯ ಆಸಕ್ತಿಯನ್ನು ರಾಜಕೀಯದಲ್ಲಿ ಹೆಚ್ಚಿಸುವಂತಹುದಾಗಿದೆ. ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು, ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಲು, ಆ ಮೂಲಕ ರಾಜ್ಯ ಮತ್ತು ರಾಷ್ಟ್ರ ಮಟ್ಟದ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ಬೇಕಾದ ಅಡಿಪಾಯವನ್ನು ಹಾಕಿಕೊಡುತ್ತದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ, ದುರ್ಬಲ ವರ್ಗದವರ ಹಾಗೂ ಮಹಿಳೆಯರ ಸಶಕ್ತೀಕರಣ, ಇತ್ಯಾದಿಗಳು ವಿಕೇಂದ್ರೀಕರಣದ ಬಹುಮುಖ್ಯ ಉದ್ದೇಶ. ಈ ಉದ್ದೇಶ ಎಷ್ಟರ ಮಟ್ಟಿಗೆ ಇಂದು ಪ್ರಚಲಿತವಿರುವ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಆಚರಣೆಗೆ ಬಂದಿದೆ. ಮಹಿಳೆಯರು ಸ್ವಯಂ ಪ್ರೇರಣೆಯಿಂದ ಈ ವ್ಯವಸ್ಥೆಯಲ್ಲಿ ಸಹಭಾಗಿಗಳಾಗುತ್ತಿದ್ದಾರೆಯೇ? ಚುನಾಯಿತ ಮಹಿಳೆಗೆ ತನ್ನ ಹಕ್ಕು ಬಾಧ್ಯತೆಗಳ ಬಗ್ಗೆ ಇರುವ ತಿಳುವಳಿಕೆ ಯಾವ ರೀತಿಯದ್ದು? ರಾಜಕೀಯ ಭಾಗವಹಿಸುವಿಕೆ ಮತ್ತು ನಿರ್ಣಯ ಪ್ರಕ್ರಿಯೆಯಲ್ಲಿ ಆಕೆಯ ಸ್ಥಾನಮಾನ ಏನು? ಎಂಬುವುದನ್ನು ಅಧ್ಯಯನ ಮಾಡುವುದು ಪ್ರಸ್ತುತ ವಿಷಯದ ಉದ್ದೇಶವಾಗಿದೆ.

ಉತ್ತಮ ಆಡಳಿತ ಮತ್ತು ಮಾನವ ಅಭಿವೃದ್ಧಿಗೆ ವಿಕೇಂದ್ರೀಕರಣವು ಸ್ಥಳೀಯ ವಾತಾವರಣ, ಸಂದರ್ಭ, ಜವಾಬ್ದಾರಿ ಮತ್ತು ಅಗತ್ಯಗಳ ಮೂಲಕ ಹೆಚ್ಚಿನ ಪ್ರಾಮಾಣಿಕತೆ, ಪಾರದರ್ಶಕತೆ ಮತ್ತು

ಜವಾಬ್ದಾರಿಯನ್ನೂ ನಿರ್ಮಿಸುತ್ತದೆ. ತಳಮಟ್ಟದ ರಾಜಕೀಯ ನಿರ್ಧಾರದ ಪ್ರಕ್ರಿಯೆಯಲ್ಲಿ ಮಹಿಳಾ ಮತ್ತು ಎಲ್ಲಾ ಜನಾಂಗೀಯ ಗುಂಪುಗಳ ಪ್ರತಿನಿಧಿತ್ವ ಮತ್ತು ವಿಶಾಲವಾದ ಭಾಗವಹಿಸುವಿಕೆಗೆ ವಿಕೇಂದ್ರೀಕರಣವು ಅವಕಾಶವನ್ನು ಕಲ್ಪಿಸುತ್ತದೆ ಎಂದು ವಿಶ್ವಸಂಸ್ಥೆಯ ಯುಎನ್‌ಡಿಪಿ (2005), ಮಾನವ ಅಭಿವೃದ್ಧಿ ವರದಿ ಸ್ಪಷ್ಟಪಡಿಸುತ್ತದೆ[114].

ರಾಕೇಶ್ ಕೆ. ಸಿಂಗ್ (2012), "ಪಂಚಾಯತ್‌ರಾಜ್‌ನಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳು", ಎಂಬ ಸಂಶೋಧನಾ ಗ್ರಂಥದಲ್ಲಿ ಭಾರತದಲ್ಲಿ ಪಂಚಾಯತ್ ರಾಜ್ ಎನ್ನುವುದು ಹೊಸತಾದ ವಿದ್ಯಮಾನವೇನಲ್ಲ. ಇತಿಹಾಸದಲ್ಲಿನ ಅದರ ವಿವರಣೆಯು ಸುಮಾರು ಸಾವಿರ ವರುಷಗಳಿಗೂ ಹಿಂದೆಯೇ ಇದ್ದುದಕ್ಕೆ ಪುರಾವೆಗಳಿವೆ. ಗ್ರಾಮಗಳು ಸ್ವತಂತ್ರ ಗಣರಾಜ್ಯಗಳಾಗಿದ್ದು ತಮ್ಮ ಪಂಚಾಯತುಗಳಿಂದ ಆಳಲ್ಪಡುತ್ತಿದ್ದ ಪುರಾತನ ಭಾರತೀಯ ಸಂಸ್ಥೆಗಳಲ್ಲಿ ಇದರ ಬೇರು ಹುದುಗಿದೆ. ಈ ಅವಧಿಯಲ್ಲಿ ಮಹಿಳೆಯರಿಗೆ ರಾಜಕೀಯದಲ್ಲಿ ಭಾಗವಹಿಸುವಿಕೆಯು ಅವಕಾಶ ಇರಲಿಲ್ಲವೆನ್ನುವುದಕ್ಕಿಂತ ಹೆಚ್ಚಾಗಿ ಅಸ್ತಿತ್ವದಲ್ಲಿದ್ದ ಪುರುಷಪ್ರಧಾನ ವ್ಯವಸ್ಥೆಯಿಂದಾಗಿ ಅವರು ಅದರಲ್ಲಿ ಹೆಚ್ಚು ಆಸಕ್ತರಾಗಿರಲಿಲ್ಲ ಎನ್ನುವುದು ಸೂಕ್ತ. ತಮ್ಮ ನಿಷ್ಕರುಣೆಯ, ನಿರ್ದಯವಾದ ಕರ ವಸೂಲಿ ಪದ್ಧತಿ ಹಾಗೂ ಭೂ ಹಿಡುವಳಿಯ ಜಮೀನ್ದಾರಿ ಪದ್ಧತಿಯನ್ನು ಪರಿಚಯಿಸುವುದರ ಮೂಲಕ ಬ್ರಿಟಿಷರು ಈ ಪುರಾತನ ಗಣರಾಜ್ಯಗಳನ್ನು ಹಾಗೂ ರಾಜಕೀಯದಲ್ಲಿ ಮಹಿಳೆಯ ಭಾಗವಹಿಸುವಿಕೆಯನ್ನು ಸಂಪೂರ್ಣವಾಗಿ ನಾಶಮಾಡಿದರು. ಭಾರತೀಯ ಸಮಾಜದಲ್ಲಿ 'ಮಹಿಳೆಯರಿಗೆ ಮತದಾನ'ದ ಅವಕಾಶ ನೀಡುವುದು ತೀರಾ ಅಕಾಲಿಕ ವಿಚಾರವೆಂಬುದು ಬ್ರಿಟಿಷರ ಅಭಿಪ್ರಾಯವಾಗಿತ್ತು. ಸ್ವಾತಂತ್ರ್ಯ ನಂತರ, ಸಮಾನತೆಯಂತಹ ವಿಚಾರಗಳನ್ನು ಎತ್ತಿಹಿಡಿಯುವ ಸಂವಿಧಾನವನ್ನು ಹೊಂದಿರುವ ಹೊರತಾಗಿಯೂ ಸಾಮಾಜಿಕ ನ್ಯಾಯವನ್ನು ಸಾಧಿಸಲು ಇದುವರೆಗೂ ಸಾಧ್ಯವಾಗಿಲ್ಲ. ಭಾರತದಲ್ಲಿ ಮಹಿಳೆಯೋರ್ವರು ಪ್ರಧಾನಿಯಾಗಿದ್ದಾಗಲೂ, ಮಹಿಳೆಯರ ಸ್ಥಾನಮಾನ ಮತ್ತು ಪರಿಸ್ಥಿತಿಯಲ್ಲಿ ಹೇಳಿಕೊಳ್ಳುವಂತಹ ಗಣನೀಯ ಬದಲಾವಣೆಗಳೇನೂ ಕಂಡುಬರಲಿಲ್ಲ[115]. ಸ್ವಯಂ-ಆಡಳಿತ ಆರಂಭವಾಗಿ 66 ವರುಷಗಳೇ ಸಂದಿವೆಯಾದರೂ ಭಾರತದ ರಾಜಕೀಯದಲ್ಲಿನ ಮಹಿಳೆಯರ ಭಾಗವಹಿಸುವಿಕೆಯು ನಗಣ್ಯವಾಗಿದೆ ಎಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ.

ಭಾರತದ ಅಭಿವೃದ್ಧಿ ಮತ್ತು ರಾಜಕೀಯ ಕ್ಷೇತ್ರದಲ್ಲಿ ಪ್ರಜಾಪ್ರಭುತ್ವ ಮತ್ತು ವಿಕೇಂದ್ರೀಕರಣ ಯಾವುದೇ ಚರ್ಚೆಯಲ್ಲಿ ಪ್ರಮುಖ ವಿಷಯಗಳಾಗಿವೆ. ಗ್ರಾಮೀಣ ಭಾರತದಲ್ಲಿ ಪಂಚಾಯತ್‌ರಾಜ್ ಸಂಸ್ಥೆ ತಳಮಟ್ಟದ ಆಡಳಿತ ವ್ಯವಸ್ಥೆ. ಪ್ರಜಾಪ್ರಭುತ್ವ ಮತ್ತು ವಿಕೇಂದ್ರೀಕರಣದ ಗುರಿಗಳನ್ನು ಅರಿತುಕೊಂಡು

ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಅತ್ಯಂತ ಸಮರ್ಥ ಮತ್ತು ವ್ಯವಸ್ಥಿತವಾಗಿ ನಿರೂಪಿಸಲಾಗಿದೆ. ಅಭಿವೃದ್ಧಿಯಲ್ಲಿ, ವಿಕೇಂದ್ರೀಕರಣವು ರಾಜಕೀಯ ಮತ್ತು ಆರ್ಥಿಕ ಕಾಳಜಿ ನಡುವೆ ಒಂದೆಡೆ ಅತ್ಯಂತ ಸ್ಪಷ್ಟವಾಗಿ ಬೆಳೆಯುತ್ತಿರುವ ವಲಯವಾಗಿದೆ. ವಿಶ್ವ ಬ್ಯಾಂಕಿನ ಒಂದು ದಾಖಲೆಗಳಲ್ಲಿ ವಿಕೇಂದ್ರೀಕರಣವು ರಾಜಕೀಯದಲ್ಲಿ ಪ್ರೇರಕ ಶಕ್ತಿಯಾಗಿದೆ. ಬಹುತೇಕ ದೇಶಗಳಲ್ಲಿ ವಿಕೇಂದ್ರೀಕರಣದ ಗುರಿ ಉತ್ತಮ ರಾಜಕೀಯ ಮತ್ತು ಆರ್ಥಿಕ ಸೇವೆಗಳನ್ನು ನೀಡುವುದಾಗಿದೆ ಎಂಬ ಸಂತೋಷದ ನಿದರ್ಶನಗಳು ಕಂಡು ಬರಬಹುದು. ರಾಜಕೀಯ ಉದ್ದೇಶವು ಮಹಿಳೆಯರ ರಾಜಕೀಯ ಜವಾಬ್ದಾರಿಯನ್ನು ಹೆಚ್ಚಿಸಬಹುದು ಮತ್ತು ಸ್ಥಳೀಯ ಮಟ್ಟದಲ್ಲಿ ಭಾಗವಹಿಸುವಿಕೆ ಸಹ ಆರ್ಥಿಕ ಉದ್ದೇಶದ ಜತೆ ಸೇರಿ ಸಾರ್ವಜನಿಕ ಸಂಪನ್ಮೂಲಗಳ ಬಳಕೆ ಬಗ್ಗೆ ಉತ್ತಮ ನಿರ್ಧಾರಗಳನ್ನು ಮತ್ತು ಸೇವೆಗಳನ್ನು ನೀಡುವ ಇಚ್ಛೆಯು ಹೆಚ್ಚಾಗಬಹುದು ಎಂದು ಜೇಮ್ಸ್ ಫೋರ್ಡ್‌ರವರು (2003), ತಮ್ಮ ವರದಿಯಲ್ಲಿ ವಿಶ್ಲೇಷಿಸಿರುತ್ತಾರೆ[116].

ಸ್ವತಂತ್ರ ಭಾರತವು ಪ್ರಜಾಸತ್ತಾತ್ಮಕ ಆಡಳಿತ ವಿಕೇಂದ್ರೀಕರಣಕ್ಕೆ ಬುನಾದಿಯನ್ನೊದಗಿಸಿತು. ಅನೇಕ ಪ್ರಾಂತೀಯ ಸರಕಾರಗಳು ಗ್ರಾಮೀಣ ಸ್ವಾಯತ್ತ ಸರಕಾರದ ಘಟಕಗಳಾಗಿ ಗ್ರಾಮ ಪಂಚಾಯತ್‌ಗಳ ರಚನೆಗೆ ಅನೇಕ ಕ್ರಮಗಳನ್ನು ಕೈಗೊಂಡವು. ಈ ಸ್ಥಳೀಯ ಸರಕಾರದ ಪರಿಕಲ್ಪನೆಯನ್ನು ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳಲ್ಲಿ ಅಳವಡಿಸಲಾಯಿತು. ಆದರೆ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಪ್ರಯೋಗವು ವಿಫಲವಾಯಿತು. ಸ್ಥಳೀಯ ಸ್ವಯಂ ಆಡಳಿತ ಸರಕಾರಗಳ ಸಬಲೀಕರಣಕ್ಕಾಗಿ ಸಂವಿಧಾನಕ್ಕೆ 73 ಹಾಗೂ 74ನೇ ತಿದ್ದುಪಡಿಗಳನ್ನು ತರುವ ಮೂಲಕ ಸಾಂವಿಧಾನಿಕ ಮಾನ್ಯತೆ ನೀಡುವಲ್ಲಿ ಸರಕಾರವು ಯಶಸ್ವಿಯಾಯಿತು. ಈ ತಿದ್ದುಪಡಿಯು ಸ್ಥಳೀಯ ಸರಕಾರಗಳಲ್ಲಿ ಮಹಿಳೆಯರಿಗಾಗಿ 33.33% ಪ್ರಾತಿನಿಧಿತ್ವವನ್ನು ಮೀಸಲಿರಿಸಿದೆ. ಮಹಿಳಾ ಮೀಸಲಾತಿ ಒದಗಿಸುವುದರ ಮೂಲಕ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಸಮಾನತೆಯ ಪರಿಕಲ್ಪನೆಯನ್ನು ಸಂವಿಧಾನಾತ್ಮಕವಾಗಿ ನೀಡಲಾಗಿದೆ ಎಂದು ಡಿ. ಡಿ. ಬಸುರವರು (1998), ಸಂವಿಧಾನದ ಉಪಕ್ರಮಗಳನ್ನು ವಿವರಿಸಿರುತ್ತಾರೆ[117].

ಅಧ್ಯಯನದ ಸೈದ್ಧಾಂತಿಕ ಮತ್ತು ತಾತ್ವಿಕ ನೆಲೆಗಟ್ಟು

"ಲಿಂಗ ಸಮಾನತೆ ಮತ್ತು ರಾಜಕೀಯ ಸಹಭಾಗಿತ್ವ: ಸ್ಥಳೀಯ ಸಂಸ್ಥೆಗಳ ಅಧ್ಯಯನ"ದ ಬಗೆಗೆ ಜಾಗತಿಕ ಮತ್ತು ವಿಶೇಷವಾಗಿ ರಾಷ್ಟ್ರೀಯ ಮಟ್ಟದಲ್ಲಿ ವ್ಯವಸ್ಥಿತವಾಗಿ ಮತ್ತು ವೈಜ್ಞಾನಿಕವಾಗಿ ಅಧ್ಯಯನಗಳು ಮತ್ತು ಸಂಶೋಧನೆಗಳು ಬಹಳಷ್ಟು ನಡೆದಿದ್ದರೂ ಹೆಚ್ಚಿನ ಅಧ್ಯಯನಗಳ ಫಲಿತಗಳು ಒಂದೇ ರೀತಿಯಲ್ಲಿ ಇರುವುದನ್ನು ಗಮನಿಸಬಹುದು. ಹೆಚ್ಚಿನ ಅಧ್ಯಯನಗಳು ಮಹಿಳೆಯರ ರಾಜಕೀಯ

ಸಹಭಾಗಿತ್ವಕ್ಕೆ ಇರುವ ಅಡೆತಡೆಗಳ ಬಗ್ಗೆ ಚರ್ಚಿಸಿ ಮಹಿಳೆಯರು ರಾಜಕೀಯವಾಗಿ ಸಹಭಾಗಿಗಳಾಗದಿರುವುದಕ್ಕೆ ಅವರುಗಳ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ ಹಾಗೂ ಪುರುಷ ಪ್ರಧಾನ ಸಮಾಜದ ದಮನಕಾರಿ ಧೋರಣೆಗಳೇ ಕಾರಣ ಎಂಬ ಸಮಾನ ಫಲಿತಗಳನ್ನು ಪರಾಮರ್ಶನಕ್ಕೊಳಪಡಿಸಿದ ಹೆಚ್ಚಿನ ಅಧ್ಯಯನಗಳು ವಿವರಿಸಿರುವುದು ಕಂಡುಬರುತ್ತದೆ. ಈ ವಿವರಣೆಗಳನ್ನು ಗಮನಿಸಿದಾಗ ಪರಿಣಾಮಕಾರಿ ಸಹಭಾಗಿತ್ವಕ್ಕೆ ಸಂಬಂಧಪಟ್ಟಂತೆ ಪೂರಕವಾದ ಹಾಗೂ ಸರಕಾರಗಳು ಜಾರಿಗೆ ತರಬಹುದಾದಂತಹ ವಸ್ತುನಿಷ್ಠ ಕಾರ್ಯಸಾಧ್ಯವಾದ ಸಲಹೆಗಳನ್ನು ನೀಡಿರದೇ ಇರುವುದನ್ನು ಈಗಾಗಲೇ ಸಾಹಿತ್ಯ ಪರಾಮರ್ಶನದ ಸಂದರ್ಭದಲ್ಲಿ ಗಮನಿಸಲಾಗಿರುತ್ತದೆ. ಅಭಿವೃದ್ಧಿ ಮತ್ತು ಮಹಿಳೆಯರ ರಾಜಕೀಯ ಸಹಭಾಗಿತ್ವಕ್ಕೆ ಸಂಬಂಧಪಟ್ಟ ಸಾಹಿತ್ಯವನ್ನು ವಿಮರ್ಶೆಗೊಳಪಡಿಸಿದ ಸಂದರ್ಭದಲ್ಲಿ ಕಂಡುಕೊಂಡ ಫಲಿತಗಳನ್ನು ಪ್ರಸ್ತುತ ಅಧ್ಯಯನಕ್ಕೆ ಒಂದು ನಿರ್ದಿಷ್ಟ ಸೈದ್ಧಾಂತಿಕ ಮತ್ತು ತಾತ್ವಿಕ ಚೌಕಟ್ಟುಗಳನ್ನು ರಚಿಸಿಕೊಳ್ಳಲು ಬಳಸಿಕೊಳ್ಳಲಾಗಿರುತ್ತದೆ.

ಪಂಚಾಯತ್‌ರಾಜ್ ಕಾಯ್ದೆಯ ಮೀಸಲಾತಿಗಳ ಜಾರಿ ಮತ್ತು ಅಧಿಕಾರದ ವಿಕೇಂದ್ರೀಕರಣದಿಂದ ಗ್ರಾಮೀಣ ಮಟ್ಟದಲ್ಲಿ ಮಹಿಳೆಯರು ಹೆಚ್ಚು ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಸಮಾಜದಲ್ಲಿರುವ ದೊಡ್ಡ ಸಂಖ್ಯೆಯ ಬಡವರು ವಿಶೇಷವಾಗಿ ಮಹಿಳೆಯರು ವ್ಯವಸ್ಥೆಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಕ್ರಿಯೆಗಳಿಂದ ಹೊರಗಿಡಲ್ಪಟ್ಟಿದ್ದಾರೆ. ಇದು ಅಸಮಾನತೆ, ತಾರತಮ್ಯತೆ ಮತ್ತು ಶೋಷಣೆಗಳಿಗೆ ದೊಡ್ಡ ಮಟ್ಟದಲ್ಲಿ ಕಾರಣವಾಗಿರುತ್ತದೆ. ಮಹಿಳೆಯರು ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ನಾಯಕತ್ವವನ್ನು ವಹಿಸಿದರೂ ಪುರುಷ ಪ್ರಧಾನ ಸಮಾಜ ಅವರ ಕಾರ್ಯವೈಖರಿ ಹಾಗೂ ಅವರ ನಾಯಕತ್ವವನ್ನು ಸುಲಭವಾಗಿ ಒಪ್ಪುವುದಕ್ಕೆ ಸಿದ್ಧರಿರುವುದಿಲ್ಲ. ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆ, ಅಳವಡಿಸಿಕೊಂಡ ಮೌಲ್ಯಗಳು, ನಂಬಿಕೆಗಳು ಹಾಗೂ ಕಟ್ಟುಪಾಡುಗಳು ಕಾರಣವಾಗಿರುತ್ತವೆ. ಮಹಿಳೆಯರಿಗೆ ತರಬೇತಿ, ಸಂಘಟನೆ, ಸಾಮಾನ್ಯ ಜ್ಞಾನದ ಕೊರತೆ ಮತ್ತು ತಮ್ಮ ಸಹವರ್ತಿಗಳಿಂದ ಬೆಂಬಲ ದೊರಕದಿರುವುದು ಪ್ರಮುಖ ಕಾರಣವಾಗಿರುತ್ತದೆ.

ರಾಜಕೀಯ ಪಕ್ಷಗಳು ಮಹಿಳೆಯರಿಗೆ ಮೀಸಲಾತಿಯನ್ನು ನೀಡುವ ಮತ್ತು ಅಧಿಕಾರವನ್ನು ಹಂಚಿಕೊಳ್ಳುವ ಪ್ರಶ್ನೆ ಬಂದಾಗಲೆಲ್ಲಾ ಅವೈಚಾರಿಕ ಕಾರಣಗಳನ್ನು ನೀಡಿ ಅವರನ್ನು ಸಕ್ರಿಯ ರಾಜಕಾರಣದಿಂದ ಹೊರಗಿಡುತ್ತವೆ. ಮಹಿಳೆಯರಿಗೆ ಅಧಿಕಾರ ನೀಡಿದರೆ ಪುರುಷ ಪ್ರಧಾನ ಸಮಾಜದ ಪ್ರಾಧಾನ್ಯತೆ ಮತ್ತು ಏಕಸ್ವಾಮ್ಯತೆ ತಪ್ಪಿ ಹೋಗಬಹುದು ಎಂಬ ಭಯದ ಭಾವನೆ. ಆಡಳಿತಾತ್ಮಕ ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಮಹಿಳೆ ಅಸಮರ್ಥಳು. ಅವಳು ಅಬಲೆ ಮತ್ತು ಪುರುಷರ ದೈಹಿಕ

ಕಾಮನೆಗಳನ್ನು ತೀರಿಸಲು ಇರುವ ಭೋಗದ ವಸ್ತು ಎಂದು ಪರಿಗಣಿಸಿ ಆಕೆ ಕೇವಲ ಮನೆವಾರ್ತೆ ಕೆಲಸಗಳಿಗೆ ಮಾತ್ರ ಸೀಮಿತವಾಗಿರುವವಳು ಎಂಬ ಪೂರ್ವಗ್ರಹಿಕೆಯು ಅವರನ್ನು ಅಧಿಕಾರ ವಂಚಿತರನ್ನಾಗಿ ಮಾಡಿ ಪುರುಷರಿಗೆ ಅಧೀನರಾಗಿ ಕಾರ್ಯನಿರ್ವಹಿಸುವಂತೆ ಮಾಡಿರುತ್ತದೆ. ಶ್ರೀಮಂತ, ಮೇಲ್‌ಸ್ತರದ, ಕುಲೀನ ಮನೆತನಕ್ಕೆ ಸೇರಿದ ಮತ್ತು ರಾಜಕೀಯ ಕುಟುಂಬದ ಹಿನ್ನೆಲೆ ಹೊಂದಿದ ವಿದ್ಯಾವಂತ ಮಹಿಳೆಯರು ಮಾತ್ರ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಧ್ಯ ಎಂಬ ತಪ್ಪು ಕಲ್ಪನೆ. ಮಹಿಳಾ ಸಶಕ್ತೀಕರಣ ಪ್ರಭುತ್ವದ ಒಂದು ನೀತಿ ಮತ್ತು ಕಾರ್ಯಕ್ರಮವಾಗಿ ಉಳಿದಿದೆಯೇ ಹೊರತು ನಿರೀಕ್ಷಿತ ಪ್ರಮಾಣದ ಯಶಸ್ಸನ್ನು ಸಾಧಿಸುವುದರಲ್ಲಿ ವೈಫಲ್ಯವನ್ನು ಹೊಂದಿರುತ್ತದೆ.

ಮಹಿಳಾ ಸಬಲೀಕರಣಕ್ಕೆ ಸಂಬಂಧಪಟ್ಟ ಸಂವಿಧಾನಾತ್ಮಕ ಸೌಲಭ್ಯಗಳು ಮತ್ತು ಉಪಕ್ರಮಗಳನ್ನು ಗಮನಿಸಿದಾಗ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಶೇ.50 ಕ್ಕಿಂತ ಹೆಚ್ಚಿರುವ ಮಹಿಳೆಯರ ಸಶಕ್ತೀಕರಣಕ್ಕಾಗಿ ಹಲವಾರು ಉಪಕ್ರಮಗಳನ್ನು ಮತ್ತು ಕಾರ್ಯಕ್ರಮಗಳನ್ನು ಸಂವಿಧಾನದಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದು. ಅವುಗಳಲ್ಲಿ ಪ್ರಮುಖವಾದವುಗಳು:

ಸಂವಿಧಾನದ ಮೂರನೇ ಅಧ್ಯಾಯದ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ವಿವರಿಸಿದ ಸಮಾನತೆಯ ಹಕ್ಕು, ಸ್ತ್ರೀ–ಪುರುಷರಿಬ್ಬರೂ ಸಮಾನರು, ಎಲ್ಲರಿಗೂ ಸಮಾನವಾದ ಕಾನೂನು, ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಮಪಾಲು, ಸಮಾನ ಅವಕಾಶ, ರಕ್ಷಣೆ ಎಂಬ ಉದಾತ್ತ ಮೌಲ್ಯಗಳ ಉಲ್ಲೇಖವಿರುವುದು ಮಹಿಳೆ ಪರಿಣಾಮಕಾರಿ ರಾಜಕೀಯ ಸಹಭಾಗಿತ್ವಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸುತ್ತದೆ. ಸಂವಿಧಾನದ 4ನೇ ಭಾಗದಲ್ಲಿ ವಿಧಿ 36 ರಿಂದ ವಿಧಿ 51 ರವರೆಗಿನ ವಿಧಿಗಳು ರಾಜ್ಯ ನಿರ್ದೇಶಕ ತತ್ವಗಳ ಬಗ್ಗೆ ಉಲ್ಲೇಖಿಸಿವೆ. ಈ ತತ್ವಗಳು ಮಹಿಳೆಯರಿಗೆ ಗೌರವ ನೀಡುವುದು ಹಾಗೂ ಅವರ ಹಿತಾಸಕ್ತಿಗಳನ್ನು ಸಂರಕ್ಷಿಸುವುದು ಸಮಾಜದ ಮತ್ತು ರಾಷ್ಟ್ರದ ಜವಾಬ್ದಾರಿ ಎಂಬುದಾಗಿ ಸ್ಪಷ್ಟವಾಗಿ ಉಲ್ಲೇಖಿಸಿರುತ್ತದೆ. ವಿಕೇಂದ್ರೀಕರಣ ವ್ಯವಸ್ಥೆಯ ಸುಧಾರಣೆಗಾಗಿ ನಿಯೋಜಿಸಲ್ಪಟ್ಟ 1957ರ ಬಲವಂತ್ ರಾಯ್ ಮೆಹ್ತಾ ಸಮಿತಿ ಮತ್ತು 1977ರ ಅಶೋಕ್ ಮೆಹ್ತಾ ಸಮಿತಿ ಮಹಿಳಾ ಸಶಕ್ತೀಕರಣಕ್ಕಾಗಿ ಸ್ಥಳೀಯ ಚುನಾಯಿತ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ನೀಡುವುದರ ಬಗ್ಗೆ ಬಲವಾಗಿ ಪ್ರತಿಪಾದಿಸಿರುವುದು.

1974ರ 'ಸಮಾನತೆಯೆಡೆಗೆ' ಎನ್ನುವ ವರದಿಯು ಮಹಿಳೆಯರ ಸ್ಥಿತಿಗತಿ ಸುಧಾರಿಸುವ ಬದಲು ಕೆಳಮಟ್ಟಕ್ಕಿಳಿದಿದೆ ಎನ್ನುವುದನ್ನು ಸೂಚಿಸಿದ್ದರಿಂದ ಮಹಿಳೆಯರ ಅಂತಸ್ತು ರಾಷ್ಟ್ರೀಯ ವಿಷಯವಾಯಿತು. ಇದರ ಪರಿಣಾಮವಾಗಿ ಮಹಿಳೆಯರ ಪ್ರಗತಿ ಮತ್ತು ಅಭಿವೃದ್ಧಿ ಲಿಂಗಾಧಾರಿತ ವಿಷಯಗಳಾದವು. ಕರ್ನಾಟಕದ ಪಂಚಾಯತ್‌ರಾಜ್ ಕಾಯ್ದೆ 1983 ಕರ್ನಾಟಕದ ಪಂಚಾಯತ್‌ರಾಜ್

ಇತಿಹಾಸದಲ್ಲಿ ಹೊಸಯುಗವನ್ನೇ ತಂದಿರುತ್ತದೆ. ಈ ಕಾಯ್ದೆ ತ್ರಿಸ್ತರದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ರೂಪಿಸಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಶೇಕಡಾ 25 ಮೀಸಲಾತಿಯನ್ನು ಒದಗಿಸಿರುವುದು ಮಹಿಳೆಯರ ರಾಜಕೀಯ ಸಹಭಾಗಿತ್ವಕ್ಕೆ ನೀಡಿದ ಪ್ರೋತ್ಸಾಹವಾಗಿರುತ್ತದೆ. 1992ರ ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿ ಕಾಯ್ದೆಯು ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಶೇ.33 ಮೀಸಲಾತಿಯನ್ನು ನೀಡಬೇಕು ಎಂಬುದು ಏಕರೂಪವಾಗಿ ರಾಷ್ಟ್ರಾದ್ಯಂತ 1993ರಲ್ಲಿ ಜಾರಿಗೆ ಬಂದಿರುವುದು ಮಹಿಳೆಯರ ರಾಜಕೀಯ ಸಹಭಾಗಿತ್ವಕ್ಕೆ ಸಂಬಂಧಪಟ್ಟಂತೆ ಕ್ರಾಂತಿಕಾರಿ ಬೆಳವಣಿಗೆಗೆ ನಾಂದಿ ಹಾಡಿರುವುದು.

ಸಮಾಜವಾದಿ ವ್ಯವಸ್ಥೆಯಿಂದ ಪ್ರೇರೇಪಣೆಗೊಂಡು ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಸೋವಿಯತ್ ಒಕ್ಕೂಟದಲ್ಲಿ ಯಶಸ್ಸನ್ನು ಸಾಧಿಸಿದ ಪಂಚವಾರ್ಷಿಕ ಯೋಜನೆಗಳ ಮಾಹಿತಿಯನ್ನು ಸಮಾಜವಾದಿ ತತ್ವಗಳ ಬಗ್ಗೆ ಒಲವಿದ್ದ ಪ್ರಧಾನಮಂತ್ರಿ ಜವಾಹರ್‌ಲಾಲ್ ನೆಹರೂರವರು ಪಂಚವಾರ್ಷಿಕ ಯೋಜನೆಯನ್ನು ಅಭಿವೃದ್ಧಿಯ ಮಾದರಿಯಾಗಿ 1950ರಲ್ಲಿ ಅಳವಡಿಸಿಕೊಳ್ಳಲಾಗಿ 5ನೇ ಪಂಚವಾರ್ಷಿಕ ಯೋಜನೆಯು ಮಹಿಳಾ ಸಶಕ್ತೀಕರಣ ಮತ್ತು ಅಭಿವೃದ್ಧಿಗೆ ಪ್ರಾಧಾನ್ಯತೆಯನ್ನು ನೀಡಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ತದನಂತರ ಮಹಿಳಾ ಸಶಕ್ತೀಕರಣಕ್ಕೆ ಹೆಚ್ಚಿನ ಉತ್ತೇಜನ ನೀಡಿ ಸರಕಾರಗಳು ಹಲವಾರು ಮಹಿಳಾ ಪರ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನಗಳನ್ನು ಆರಂಭಿಸಿರುವುದು.

ಸ್ವತಂತ್ರ ಭಾರತದ ಸಂವಿಧಾನಾತ್ಮಕ ಉಪಕ್ರಮಗಳು ಮತ್ತು ಸಶಕ್ತೀಕರಣಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಜಾರಿಗೆ ತಂದಂತಹ ನೀತಿ ಕಾರ್ಯಕ್ರಮಗಳ ಬಗ್ಗೆ ಈಗಾಗಲೇ ಉಲ್ಲೇಖಿಸಲಾಗಿರುತ್ತದೆ. ಹಾಗಿದ್ದರೂ, ಮಹಿಳಾ ಸಶಕ್ತೀಕರಣ ಹಾಗೂ ರಾಜಕೀಯ ಚಟುವಟಿಕೆಗಳಲ್ಲಿ ಪರಿಣಾಮಕಾರಿ ಸಹಭಾಗಿತ್ವಕ್ಕೆ ಸಾಧ್ಯವಾಗಿರುವುದಿಲ್ಲ. ಇವುಗಳು ಯಾಕಾಗಿ ಯಶಸ್ಸನ್ನು ಸಾಧಿಸಿಲ್ಲ ಎಂಬುದಾಗಿ ಮಹಿಳೆಯರ ಸಾಮಾಜಿಕ ಸ್ಥಾನಮಾನ ಮತ್ತು ಆರ್ಥಿಕ ಹಿನ್ನೆಲೆ ಮಹಿಳೆ ಹಿಂದುಳಿಯಲು ಮೂಲ ಕಾರಣ ಎಂಬ ಪ್ರಾಕಲ್ಪನೆಗೆ ಅನುಸಾರವಾಗಿ ಈ ವಿಷಯಕ್ಕೆ ಸಂಬಂಧಪಟ್ಟ ಸಾಹಿತ್ಯ ಪರಾಮರ್ಶನ ಮಾಡಿದಾಗ ಕಂಡುಕೊಂಡ ಅಂಶಗಳು ಯಾವುದೆಂದರೆ, ಸಾಂಪ್ರದಾಯಿಕವಾಗಿ ಪುರುಷರು ಅನುಭವಿಸುತ್ತಿದ್ದ ಅಧಿಕಾರವನ್ನು ಪಡೆಯುವುದಕ್ಕೆ ಮಹಿಳೆಯರು ಹೊಸ ವರ್ಗದ ಪ್ರತಿಸ್ಪರ್ಧಿಗಳು ಎನ್ನುವ ಪರಿಕಲ್ಪನೆ. ಇಲ್ಲಿರುವಂತಹ ಶ್ರೇಣೀಕೃತ ಜಾತಿ ಪದ್ಧತಿ, ಸಾಂಸ್ಕೃತಿಕ ವೈವಿಧ್ಯಗಳು, ವರ್ಗಭೇದಗಳು ಮತ್ತು ಶೋಷಣೆ ಮಹಿಳೆಯರ ಸಾಮಾಜಿಕ ಹೊರತಳ್ಳುವಿಕೆಗೆ ಪ್ರಮುಖ

ಕಾರಣವಾಗಿರುವುದು. ಆಧುನಿಕ ಶಿಕ್ಷಣದ ಅಲಭ್ಯತೆ, ಕಾನೂನಿನ ಬಗೆಗಿನ ಅರಿವಿನ ಕೊರತೆ, ಸೂಕ್ತ ರಾಜಕೀಯ ಪರಿಜ್ಞಾನ ಇಲ್ಲದಿರುವುದು, ಸಮರ್ಪಕ ತರಬೇತಿ ಪಡೆಯುವುದರಿಂದ ಪುರುಷ ಪ್ರಧಾನ ಸಮಾಜ ಇವರನ್ನು ಹೊರಗಿಟ್ಟಿರುವುದೂ ಕಾರಣವಾಗಿದೆ. ಪುರುಷ ಪ್ರಧಾನ ಸಮಾಜದ ದಬ್ಬಾಳಿಕೆ, ದೌರ್ಜನ್ಯ ಮಹಿಳೆಯರನ್ನು ಯಾವುದೇ ಪ್ರಮುಖ ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಯಿಂದ ಹೊರಗಿರಿಸಿ ಮನೆಯ ನಾಲ್ಕು ಗೋಡೆಯ ಒಳಗೆ ಅವರ ಕಾರ್ಯವೈಖರಿಯನ್ನು ಸೀಮಿತಗೊಳಿಸುವುದಕ್ಕೆ ಮೀಸಲಿರಿಸಿರುವುದು ಮಹಿಳೆಯರು ತಮ್ಮ ಧ್ವನಿಯೆತ್ತದಿರುವುದಕ್ಕೆ ಕಾರಣವಾಗಿರುವುದು.

ಮೀಸಲಾತಿ ನೀತಿಯು ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಅವಕಾಶಗಳನ್ನು ಒದಗಿಸಿದ್ದರೂ ಗ್ರಾಮೀಣ ಪ್ರದೇಶದಲ್ಲಿ ದಲಿತ ಮತ್ತು ಹಿಂದುಳಿದ ಜಾತಿಗಳಿಗೆ ಸೇರಿದ ಮಹಿಳೆಯರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಇರುವ ಹಣಕಾಸಿನ ಕೊರತೆ, ರಾಜಕೀಯದಲ್ಲಿ ಹೆಚ್ಚುತ್ತಿರುವ ಅಪರಾಧೀಕರಣ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಭಯದ ವಾತಾವರಣ ಇತ್ಯಾದಿಗಳು ಮಹಿಳೆಯರು ಪರಿಣಾಮಕಾರಿಯಾಗಿ ರಾಜಕೀಯ ಸಹಭಾಗಿತ್ವಕ್ಕೆ ತಡೆಯಾಗಿರುವುದು. ಚುನಾಯಿತರಾದರೂ ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದಕ್ಕೆ ಅವಕಾಶವಿಲ್ಲದೇ ಎಲ್ಲಾ ಅರ್ಹತೆಗಳನ್ನು ಹೊಂದಿದ್ದರೂ ತಮ್ಮ ಕುಟುಂಬದ ಪುರುಷ ಸದಸ್ಯರಿಗೆ ಅಧೀನರಾಗಿ ಕಾರ್ಯನಿರ್ವಹಿಸುವ ಅನಿವಾರ್ಯತೆ ಮಾನಸಿಕವಾಗಿ ಕುಗ್ಗುವುದಕ್ಕೆ ಕಾರಣವಾಗಿ ತಮ್ಮ ದಕ್ಷತೆಯನ್ನು ತೋರಿಸುವಲ್ಲಿ ಅಸಹಾಯಕರಾಗುವಂತೆ ಮಾಡಿರುತ್ತದೆ. ಜಾಗತೀಕರಣದ ಪರಿಣಾಮವಾಗಿ ಇಂದು ಮಹಿಳೆ ತನ್ನ ಸ್ವತಂತ್ರ ಅಸ್ತಿತ್ವವನ್ನು ಮತ್ತು ದಕ್ಷತೆಯನ್ನು ಸಮರ್ಥವಾಗಿ ಪ್ರದರ್ಶಿಸಿದರೂ ನಾಗರಿಕ ಸಮಾಜ ಹಾಗೂ ಪ್ರಜ್ಞಾವಂತ ಪುರುಷರು ಇವರುಗಳನ್ನು ತಮ್ಮ ಸ್ವಹಿತಾಸಕ್ತಿಗೆ ಬಳಸಿಕೊಳ್ಳುವುದು, ಹೆಚ್ಚುತ್ತಿರುವ ಮಹಿಳಾ ದೌರ್ಜನ್ಯ ಪ್ರಕರಣಗಳು, ಸ್ವಅಸ್ತಿತ್ವವನ್ನು ಕಿತ್ತುಹಾಕಿರುವುದು, ಇತ್ಯಾದಿ ಮಹಿಳೆಯರನ್ನು ಅಧೀರಳನ್ನಾಗಿ ಮಾಡುತ್ತದೆ.

ಮಹಿಳಾ ಸಬಲೀಕರಣಕ್ಕೆ ಸಂಬಂಧಪಟ್ಟ ಪೂರಕ ಸಲಹೆಗಳನ್ನು ನೀಡಿದಂತಹ ಸಾಹಿತ್ಯಗಳನ್ನು ವಿಮರ್ಶೆಗೊಳಪಡಿಸಿದ ಸಂದರ್ಭದಲ್ಲಿ ಕಂಡುಬಂದಂತಹ ಪ್ರಮುಖ ಅಂಶಗಳು ಯಾವುದೆಂದರೆ, ಮಹಿಳೆಯರನ್ನು ಹೆಚ್ಚು ಸುಶಿಕ್ಷಿತರನ್ನಾಗಿ ಮಾಡುವುದು, ಅವರಿಗೆ ರಾಜಕೀಯದ ಬಗೆಗೆ ಅರಿವು ಮೂಡಿಸಿದ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ತಲತಲಾಂತರಗಳಿಂದ ಒಪ್ಪಿಕೊಂಡು ಬಂದಂತಹ "ಮಹಿಳೆ ಅಬಲೆ" ಎಂಬ ಗ್ರಹಿಕೆಯನ್ನು ಸಮಾಜದಲ್ಲಿ ಅರಿವು ಮೂಡಿಸುವುದರ ಮೂಲಕ ಬದಲಾಯಿಸುವುದಕ್ಕೆ ಪ್ರಯತ್ನಿಸಬೇಕು. ಮಹಿಳೆಯರನ್ನು ಮನೆವಾರ್ತೆ ಚಟುವಟಿಕೆಗಳಿಗೆ ಮಾತ್ರ ಸೀಮಿತಗೊಳಿಸದೇ ಪುರುಷರು ಎಲ್ಲಾ ಕಾರ್ಯಗಳನ್ನು ಸಮಾನವಾಗಿ

ಹಂಚಿಕೊಳ್ಳುವುದರ ಮೂಲಕ ಮತ್ತು ಅವರುಗಳನ್ನು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮತ್ತು ನಿರ್ಣಯ ತೆಗೆದುಕೊಳ್ಳುವ ಕಾರ್ಯಗಳಲ್ಲಿ ಮುಕ್ತವಾಗಿ ಅವಕಾಶಗಳನ್ನು ಕಲ್ಪಿಸುವುದರ ಮೂಲಕ ಮಹಿಳಾ ಸಬಲೀಕರಣ ಸಾಧ್ಯವಾಗುತ್ತದೆ. ಪ್ರಭುತ್ವ ಮತ್ತು ಸ್ಥಳೀಯ ಸರಕಾರದ ನೀತಿ ನಿರೂಪಣೆಗಳಲ್ಲಿ ಮಹಿಳೆಯರನ್ನು ಸಕ್ರಿಯವಾಗಿ ಭಾಗವಹಿಸುವುದಕ್ಕೆ ಪ್ರೋತ್ಸಾಹ ನೀಡುವುದು.

ರಾಜಕೀಯ ಪಕ್ಷಗಳು, ಧಾರ್ಮಿಕ ಮುಖಂಡರು, ಸಾಮಾಜಿಕ ನೇತಾರರು ತಮ್ಮ ಕಾರ್ಯಚಟುವಟಿಕೆಗಳಲ್ಲಿ ಮಹಿಳಾ ಪರ ಚಟುವಟಿಕೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡುವಂತೆ ಉತ್ತೇಜನ ಕ್ರಮಗಳನ್ನು ಕೈಗೊಳ್ಳಬೇಕು. ಸ್ಥಳೀಯ ಸರಕಾರಗಳ ಪುರುಷ ಸದಸ್ಯರು, ಅಧಿಕಾರಿಗಳು, ಕುಟುಂಬದ ಸದಸ್ಯರುಗಳು ಹಾಗೂ ಗ್ರಾಮಸ್ಥರು ಮಹಿಳಾ ಪ್ರತಿನಿಧಿಗಳನ್ನು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತೆ ಪೂರಕ ವಾತಾವರಣವನ್ನು ಸೃಷ್ಟಿಸಬೇಕು. ಸಮೂಹ ಮಾಧ್ಯಮಗಳು ಮಹಿಳೆಯರನ್ನು ತಮ್ಮ ಜಾಹೀರಾತುಗಳಿಗೆ ಸರಕುಗಳಾಗಿ ಸೀಮಿತಗೊಳಿಸದೇ ಅವರುಗಳನ್ನು ಅಭಿವೃದ್ಧಿಯ ಹರಿಕಾರರು ಎಂದು ಪರಿಗಣಿಸಿ ಗೌರವಿಸಿ ಒಂದು ಆರೋಗ್ಯಕರ ಸಮಾಜವನ್ನು ನಿರ್ಮಿಸುವುದು ಮಹಿಳೆಯರು ತಮ್ಮ ಕೀಳರಿಮೆ ಹೋಗಲಾಡಿಸಿ ಸಮಾಜದ ಮುಖ್ಯವಾಹಿನಿಗೆ ಬಂದು ಅಭಿವೃದ್ಧಿ ಪಥ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಒಂದು ಗುಣಾತ್ಮಕ ಅವಕಾಶವಾಗುತ್ತದೆ.

ಮಹಾತ್ಮ ಗಾಂಧೀಜಿಯವರ ಕನಸಾದ ಗ್ರಾಮ ಸ್ವರಾಜ್ಯದ, ಸ್ವಾವಲಂಬಿ ಸಧೃಡ ಗ್ರಾಮಗಳು ಮತ್ತು ತಳಮಟ್ಟದವರೆಗೆ ಅಧಿಕಾರದ ವಿಕೇಂದ್ರೀಕರಣದ ಪರಿಕಲ್ಪನೆಗೆ ಅನುಗುಣವಾಗಿ ಜಾರಿಗೆ ಬಂದ ಸಂವಿಧಾನ ಅಧಿಕಾರ ವಿಕೇಂದ್ರೀಕರಣ ಪ್ರಕ್ರಿಯೆಗೆ ಹೆಚ್ಚು ಒಲವನ್ನು ತೋರಿರುವುದನ್ನು ಗಮನಿಸಬಹುದು. ಸ್ಥಳೀಯ ಆಡಳಿತದ ಸುಧಾರಣೆಗೆ ಸಂಬಂಧಪಟ್ಟಂತಹ ಹೆಚ್ಚಿನ ಆಯೋಗಗಳು ಮತ್ತು ಎರಡು ಆಡಳಿತಾತ್ಮಕ ಸುಧಾರಣಾ ಆಯೋಗಗಳು ವಿಕೇಂದ್ರೀಕರಣದ ವ್ಯವಸ್ಥೆ ಮತ್ತು ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಭಾಗವಹಿಸುವಿಕೆಗೆ ಸಮಾನ ಅವಕಾಶವನ್ನು ಕಲ್ಪಿಸಿದಾಗ ಮಾತ್ರ ಪ್ರಸ್ತುತ ಭಾರತದಲ್ಲಿ ಜಾರಿಗೆ ಬಂದಿರುವ ಪ್ರಜಾಸತ್ತಾತ್ಮಕ ವ್ಯವಸ್ಥೆಯು ಯಶಸ್ವಿಯಾಗುವ ಸಾಧ್ಯತೆಗಳು ಹೆಚ್ಚಿವೆ ಎಂಬ ಅಂಶವನ್ನು ವಿವರಿಸಿರುತ್ತದೆ. ಈ ನಿಟ್ಟಿನಲ್ಲಿ 1990ರ ದಶಕದ ಕ್ರಾಂತಿಕಾರಿ ರೀತಿಯಲ್ಲಿ ಜಾರಿಗೆ ಬಂದು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆಗೆ ಸ್ಥಳೀಯ ಸಂಸ್ಥೆಗಳು ಸಾಕ್ಷೀಕರಣಗೊಂಡದ್ದನ್ನು ಗಮನಿಸಬಹುದು. ಹೆಚ್ಚಿನ ಅಧ್ಯಯನಗಳು ಅಧಿಕಾರದ ವಿಕೇಂದ್ರೀಕರಣದಿಂದ ಪುರುಷ ಪ್ರಧಾನ ಸಮಾಜದ ದಬ್ಬಾಳಿಕೆ ಮತ್ತು ದೌರ್ಜನ್ಯಗಳು ಕಡಿಮೆಯಾಗಿ

ಮಹಿಳೆಯರ ರಾಜಕೀಯ ಸಹಭಾಗಿತ್ವದಲ್ಲಿ ಗಣನೀಯ ಏರಿಕೆ ಆಗಿರುತ್ತದೆ ಎಂಬ ಸಕಾರಾತ್ಮಕ ಅಂಶವನ್ನು ವಿವರಿಸಿರುತ್ತದೆ. ಈ ಜಿಜ್ಞಾಸೆಯನ್ನು ಆದ್ಯತೆಯನ್ನಾಗಿರಿಸಿಕೊಂಡು ಪ್ರಸ್ತುತ ಅಧ್ಯಯನದಲ್ಲಿ ವಿಕೇಂದ್ರೀಕರಣ ಪ್ರಕ್ರಿಯೆಯು ಉಡುಪಿ ಜಿಲ್ಲೆಯಲ್ಲಿ ಮಹಿಳಾ ಸಶಕ್ತೀಕರಣಕ್ಕೆ ಮತ್ತು ರಾಜಕೀಯ ಸಹಭಾಗಿತ್ವಕ್ಕೆ ಯಾವ ರೀತಿಯಲ್ಲಿ ಕೊಡುಗೆಯನ್ನು ನೀಡುತ್ತದೆ ಎಂಬುದನ್ನು ಅಧ್ಯಯನ ಮಾಡುವುದಕ್ಕೆ ಹೆಚ್ಚಿನ ಗಮನವನ್ನು ನೀಡಲಾಗಿರುತ್ತದೆ.

ಸಾಹಿತ್ಯ ಪರಾಮರ್ಶನದ ಸಂದರ್ಭದಲ್ಲಿ ಕಂಡುಕೊಂಡ ಪ್ರಮುಖ ಫಲಿತಗಳನ್ನು ಪ್ರಸ್ತುತ ಅಧ್ಯಯನದ ಉದ್ದೇಶಕ್ಕೆ ಮುಖಾಮುಖಿಯಾಗಿ ಈ ಕೆಳಗಿನ ಸೈದ್ಧಾಂತಿಕ ಚೌಕಟ್ಟನ್ನು ರಚಿಸಿಕೊಂಡು ಅವುಗಳ ಅಧ್ಯಯನಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗಿರುತ್ತದೆ. ಮಹಿಳೆಯರಿಗೆ ರಾಜಕೀಯ ಅಧಿಕಾರವನ್ನು ನೀಡುವುದರ ಮತ್ತು ಅದರ ಸಾಧಕ–ಬಾಧಕಗಳ ಬಗ್ಗೆ ಹೆಚ್ಚಿನ ಅಧ್ಯಯನಗಳು ಮಹಿಳೆಯರಿಗೆ ಸಂವಿಧಾನದತ್ತವಾಗಿ ನೀಡಲ್ಪಟ್ಟಿರುವ ಉಪಕ್ರಮಗಳು ಅವರುಗಳನ್ನು ಸಶಕ್ತರನ್ನಾಗಿ ಮಾಡುವುದಕ್ಕೆ ಮತ್ತು ಅವರನ್ನು ರಾಜಕೀಯ ಸಹಭಾಗಿತ್ವದಿಂದ ಹೊರಗಿರಿಸಿದೆ ಎಂಬ ಪ್ರಾಕಲ್ಪನೆಗೆ ಅನುಸಾರವಾಗಿ ಸ್ವತಂತ್ರ ಭಾರತದಲ್ಲಿ ಮಹಿಳೆಯರ ಸಶಕ್ತೀಕರಣದ ಬಗೆಗಿನ ಸಂವಿಧಾನಾತ್ಮಕ ಮತ್ತು ಪ್ರಭುತ್ವದ ಉಪಕ್ರಮಗಳು ಅವರುಗಳನ್ನು ಶಕ್ತರನ್ನಾಗಿ ಮಾಡಿಸಿದೆ ಎಂಬ ಅಂಶಕ್ಕೆ ಆದ್ಯತೆಯನ್ನು ನೀಡುವುದು. ಕಾಲಕಾಲಕ್ಕೆ ಸರಕಾರ ತೆಗೆದುಕೊಂಡಂತಹ ಪ್ರಮುಖ ನಿರ್ಣಯಗಳು ಮಹಿಳೆಯರನ್ನು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಮಾಡುವಲ್ಲಿ ಸಫಲವಾಗಿದೆಯೇ ಎಂಬುದನ್ನು ಅರಿತುಕೊಳ್ಳುವುದು. ಹಿಂದಿನ ಅಧ್ಯಯನಗಳು ಮಹಿಳೆಯರಿಗೆ ಸಾಕಷ್ಟು ಅವಕಾಶಗಳು ದೊರಕಿದ್ದರೂ ಅವರ ಆರ್ಥಿಕ ಹಿನ್ನೆಲೆ, ಕೌಟುಂಬಿಕ ಜವಾಬ್ದಾರಿಗಳು ಅವರುಗಳನ್ನು ಜನಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುವಲ್ಲಿ ವಿಫಲಗೊಳಿಸಿರುತ್ತದೆ ಎಂಬ ಫಲಿತವನ್ನು ಕಂಡುಕೊಂಡಿರುವುದು. ಎಷ್ಟು ಸಫಲವಾಗಿದೆ ಎಂಬುದನ್ನು ವಿಮರ್ಶಿಸುವುದು. ಪುರುಷ ಪ್ರಧಾನ ಸಮಾಜ ಮಹಿಳೆಯರನ್ನು ದ್ವಿತೀಯ ದರ್ಜೆಯ ನಾಗರಿಕರನ್ನಾಗಿ ಪರಿಗಣಿಸಿ ಅವರುಗಳನ್ನು ವ್ಯವಸ್ಥೆಯಿಂದ ದೂರವಿಟ್ಟಿರುವುದು ಶತಮಾನಗಳಿಂದ ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಮಹಿಳೆಯರು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು ಪೂರಕವಾಗುವಂತಹ, ಕಾರ್ಯಸಾಧುವಾದ ಮತ್ತು ವಸ್ತುನಿಷ್ಠವಾದ ಸಲಹೆಗಳನ್ನು ನೀಡುವುದು ಹಾಗೂ ಪ್ರಸ್ತುತ ಅಧ್ಯಯನದ ಸೈದ್ಧಾಂತಿಕ ಮತ್ತು ತಾತ್ವಿಕ ಚೌಕಟ್ಟನ್ನಾಗಿ ಪರಿಗಣಿಸಿ ಸಂಪೂರ್ಣ ಅಧ್ಯಯನವನ್ನು ಈ ಚೌಕಟ್ಟಿನೊಳಗಡೆ ಹಿಡಿದಿಡುವ ಪ್ರಯತ್ನವನ್ನು ಸಾಹಿತ್ಯ ಪರಾಮರ್ಶನದ ಪ್ರಸ್ತುತ ಅಧ್ಯಾಯದಲ್ಲಿ ಮಾಡಲಾಗಿರುತ್ತದೆ.

ಕೊನೆಟಿಪ್ಪಣಿಗಳು

1. ಯಂಗ್ ಕೆ., ಜೆಂಡರ್ ಎಂಡ್ ಡೆವಲಪ್‌ಮೆಂಟ್–ಎ ರೇಷನಲ್ ಅಪ್ರೋಚ್, ಅಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಆಕ್ಸ್‌ಫರ್ಡ್, 1998. ಪುಟ 69–74.
2. ರೋಚನಾ ಮಜುಮ್ದಾರ್, "ಹಿಸ್ಟರಿ ಆಫ್ ವುಮೆನ್ಸ್ ರೈಟ್ಸ್", ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ, ಮೇ 31, 2003. ಪುಟ 2130–2164.
3. ಅದೇ. ಪುಟ 2130–2164.
4. ರೋಶಿ ನಂದಲ್ಸ್, ವುಮೆನ್ ಡೆವಲಪ್‌ಮೆಂಟ್ ಆ್ಯಂಡ್ ಪಂಚಾಯತ್‌ರಾಜ್, ಕನಿಷ್ಕ ಪಬ್ಲೀಷರ್ಸ್, 1998. ಪುಟ 112–150.
5. ಬಿ. ಎಸ್. ಖನ್ನಾ, ರೂರಲ್ ಲೋಕಲ್ ಸೆಲ್ಫ್ ಗವರ್ನಮೆಂಟ್: ನ್ಯಾಷನಲ್ ಪರ್ಸ್‌ಪೆಕ್ಟಿವ್ ಆ್ಯಂಡ್ ಸ್ಟೇಟ್ ಸ್ಟಡೀಸ್, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1994. ಪುಟ 64–97.
6. ನೀರಾ ದೇಸಾಯಿ ಮತ್ತು ವಿಭೂತಿ ಪಟೇಲ್, ಇಂಡಿಯನ್ ವುಮೆನ್ – ಚೇಂಜ್ ಆ್ಯಂಡ್ ಚ್ಯಾಲೆಂಜಸ್, ಪಾಪ್ಯುಲರ್ ಪ್ರಕಾಶನ್ ಪ್ರೈವೇಟ್ ಲಿಮಿಟೆಡ್, ಬಾಂಬೆ, 1990. ಪುಟ 116–150.
7. ಎಂ. ಉಷಾ, ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004. ಪುಟ 40–82.
8. ಎಂ. ಚಂದ್ರ ಪೂಜಾರಿ, "ಪ್ರಗತಿಗಾಗಿ ಬಲಾಢ್ಯರ ಗುರುತಿನ ರಾಜಕೀಯ". ಕನ್ನಡಪ್ರಭ ದಿನಪತ್ರಿಕೆ, 5ನೇ ಅಕ್ಟೋಬರ್, 2016. ಪುಟ 6.
9. ಅದೇ. ಪುಟ 6.
10. ಮೈತ್ರೇಯಿ ಕೃಷ್ಣರಾಜ್, ಬಿಟ್ವೀನ್ ಪಬ್ಲಿಕ್ ಆ್ಯಂಡ್ ಪ್ರೈವೇಟ್ ಮೊರ್ಟ್ಯಾಲಿಟಿ, ಶುಭದಾ ಸರಸ್ವತ್ಸ್ ಪ್ರಕಾಶನ, ಪುಣೆ, 1988. ಪುಟ 202–224.
11. ಮಾರ್ಥನುಸ್‌ಬಾಮ್, ಜೆಂಡರ್ ಆ್ಯಂಡ್ ಗವರ್ನೆನ್ಸ್, ವುಮೆನ್ ಡೆವಲಪ್‌ಮೆಂಟ್ ರಿಸರ್ಚ್ ಸೆಂಟರ್ (ಯುಎನ್‌ಡಿಪಿ), ನ್ಯೂಡೆಲ್ಲಿ, 2003. ಪುಟ 28–61.
12. ಲೀನಾ ಗೋನ್‌ಸಲಾಯ್, ವುಮೆನ್ ಆ್ಯಂಡ್ ಹ್ಯೂಮನ್ ರೈಟ್ಸ್ ಅಂಡರ್ ದ ಇಂಡಿಯನ್ ಕಾನ್ಸ್ಟಿಟ್ಯೂಷನ್, ಎ.ಪಿ.ಹೆಚ್ ಪಬ್ಲಿಷರ್ಸ್ ಕಾರ್ಪೊರೇಶನ್, ನ್ಯೂಡೆಲ್ಲಿ, 2001. ಪುಟ 21–25.
13. ಎಮ್.ಡಿ. ಮಸ್ತಾನ್‌ವಾಲಿ, ವುಮೆನ್ ಆ್ಯಂಡ್ ಪೊಲಿಟಿಕ್ಸ್, ಅನ್ಮೋಲ್ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ನ್ಯೂಡೆಲ್ಲಿ, 2002. ಪುಟ 211–230.
14. ಒಡೆಯರ್ ಡಿ. ಹೆಗ್ಗಡೆ, ಭಾರತದಲ್ಲಿ ಮಹಿಳಾ ರಾಜಕೀಯ ಪ್ರಾತಿನಿಧ್ಯ, ಅರ್ಜುನ್ ಪಬ್ಲಿಷಿಂಗ್ ಹೌಸ್, ಮೈಸೂರು, 2007. ಪುಟ 76–101.
15. ಆರ್. ಇಂದಿರಾ, "ಪ್ರಜಾಸತ್ತಾತ್ಮಕ ಅಧಿಕಾರ ವಿಕೇಂದ್ರೀಕರಣ ಮತ್ತು ಮಹಿಳಾ ಸಬಲೀಕರಣ", 'ಯೋಜನಾ' ಅಭಿವೃದ್ಧಿ ಮಾಸಪತ್ರಿಕೆ, ಅಗೋಸ್ಟ್, 2012. ಪುಟ 26–29.
16. ವಿಪುಲ್ ಪಾಂಡೆ, "ರೋಲ್ ಆಫ್ ವುಮೆನ್ ಇನ್ ಇಂಡಿಯನ್ ಪಾಲಿಟಿಕ್ಸ್". ಹೆಚ್‌ಟಿಟಿಪಿ//:ಡಬ್ಲ್ಯುಡಬ್ಲ್ಯುಡಬ್ಲ್ಯು.ಜೆಸ್ಟೋರ್.ಒಆರ್‌ಜಿ, 2013.

17. ಎಂ. ದಿನೇಶ್ ಹೆಗ್ಡೆ, "ಅಭಿವೃದ್ಧಿ ಅಂಚಿನ ಸಮುದಾಯಗಳು: ಹಿಂದುಳಿದ ವರ್ಗಗಳ ಒಂದು ಅಧ್ಯಯನ" ಎಂ. ಚಂದ್ರ ಪೂಜಾರಿ (ಸಂ.), ಅಭಿವೃದ್ಧಿ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007. ಪುಟ 71–94.

18. ಸಿ.ಎನ್. ಶಂಕರ್ ರಾವ್, ಮಾನವಹಕ್ಕುಗಳು ಮತ್ತು ಲಿಂಗ ಸಮಾನತೆ, ಜೈಭಾರತ್ ಪ್ರಕಾಶನ, ಮಂಗಳೂರು, 2006. ಪುಟ 37–58.

19. ರೀಚಾ ಉಪಾಧ್ಯಾಯ, ವುಮೆನ್ ಎಂಪವರ್‌ಮೆಂಟ್ ಇನ್ ಇಂಡಿಯಾ, ದ ಏಷ್ಯಾ ಫೌಂಡೇಷನ್, ಇಂಡಿಯಾ, 2010. ಪುಟ 186–212.

20. ಅರ್ಶಿ ಪರ್ವೀನ್, ಸೋಷಿಯಲ್ ಜಸ್ಟೀಸ್ ಆ್ಯಂಡ್ ಇಂಡಿಯನ್ ವುಮೆನ್, ಇಂಡಿಯನ್ ಪಬ್ಲಿಷರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್, ನ್ಯೂಡೆಲ್ಲಿ, 2008. ಪುಟ 260–294.

21. ಭಾವನಾ ಝೂರ್ಥ, ವುಮೆನ್ ಆ್ಯಂಡ್ ಪೊಲಿಟಿಕ್ಸ್ ಇನ್ ಇಂಡಿಯಾ, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1998. ಪುಟ 64–98.

22. ಟಿ. ಎಮ್. ಜೋಸೆಫ್, ಲೋಕಲ್ ಗವರ್ನೆನ್ಸ್ ಇನ್ ಇಂಡಿಯಾ, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪೆನಿ, ನ್ಯೂಡೆಲ್ಲಿ, 2007. ಪುಟ 42–51.

23. ಎಮ್‌ಡಿ. ಮಸ್ತಾನ್‌ವಾಲಿ, ವುಮೆನ್ ಎಂಡ್ ಪೊಲಿಟಿಕ್ಸ್, ಅನ್ಮೋಲ್ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ನ್ಯೂಡೆಲ್ಲಿ, 2002. ಪುಟ 32–38.

24. ಹೇಮಲತಾ ಎಚ್. ಎಂ., ರಾಜಕೀಯ ಮತ್ತು ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಮಹಿಳೆಯರು, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು, 2004. ಪುಟ 11–71.

25. ರಾಕೇಶ್ ಚಂದ್ರ, "ವುಮೆನ್ ಎಂಪವರ್‌ಮೆಂಟ್ ಇನ್ ಇಂಡಿಯಾ", ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 62, ಮಾರ್ಚ್ 2012. ಪುಟ 16–27.

26. ಹೇಮಲತಾ ಮಹಿಷಿ, "ಮಹಿಳೆ ಮತ್ತು ಹಕ್ಕುಗಳು", 'ಯೋಜನಾ' ಕನ್ನಡ ಪ್ರಕಾಶನ ವಿಭಾಗ, ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರಕಾರ, ಜೂನ್ 2012. ಪುಟ 21–23.

27. ಜಿ. ಎನ್. ಅಮೃತಾ, "ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ", ಕರ್ನಾಟಕ ಜರ್ನಲ್ ಆಫ್ ಪೊಲಿಟಿಕ್ಸ್, 2012. ಪುಟ 13–16.

28. ರಾಕೇಶ್ ಕೆ. ಸಿಂಗ್, "ಎಲೆಕ್ಟೆಡ್ ವುಮೆನ್ ರೆಪ್ರೆಸೆಂಟೇಟಿವ್ಸ್ ಇನ್ ಪಂಚಾಯತ್‌ರಾಜ್", ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 62, ಮಾರ್ಚ್ 2012. ಪುಟ 8–12.

29. ಅದೇ. ಪುಟ 8–12.

30. ಎಸ್. ನರಸಿಂಹನ್, ವುಮೆನ್ಸ್ ರೋಲ್ ಇನ್ ಗ್ರಾಮಸಭಾ. ರಾಮ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1997. ಪುಟ 121–140.

31. ಎಂ. ಚಂದ್ರ ಪೂಜಾರಿ, ಮಹಿಳೆ ಮತ್ತು ಅಭಿವೃದ್ಧಿ – ಅಭಿವೃದ್ಧಿ ಮತ್ತು ರಾಜಕೀಯ ಪಲ್ಲವ ಪ್ರಕಾಶನ, ಚನ್ನಪಟ್ಟಣ, 2014. ಪುಟ 79–89.

32. ಮಧು ಕಿಶ್ವರ್, "ವುಮೆನ್ ಆ್ಯಂಡ್ ಪೊಲಿಟಿಕ್ಸ್: ಬಿಯಾಂಡ್ ಕೋಟಾಸ್". ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ, ವಾಲ್ಯೂಮ್ 31, ನಂ. 43, 1996. ಪುಟ 2871.

33. ಎಂ. ಚಂದ್ರ ಪೂಜಾರಿ, ಮಹಿಳೆ ಮತ್ತು ಸಂಸ್ಕೃತಿ ಇನ್ ಅಭಿವೃದ್ಧಿ ಮತ್ತು ರಾಜಕೀಯ, ಪಲ್ಲವ ಪ್ರಕಾಶನ, ಚನ್ನಪಟ್ಟಣ, 2014. ಪುಟ 71–78.

34. ಜಿ. ಪಲಂತುರ್ರೈ, ಸ್ಟಡಿ ಆನ್ ಎಲೆಕ್ಟೆಡ್ ವುಮೆನ್ ರೆಪ್ರೆಸೆಂಟೇಟಿವ್ಸ್ ಇನ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್, ಕಾನ್ಸೆಪ್ಟ್ ಪಬ್ಲಿಷಿಂಗ್ ಹೌಸ್. ನ್ಯೂಡೆಲ್ಲಿ, 2008. ಪುಟ 68–90.

35. ಜಾರ್ಜ್ ಮ್ಯಾಥ್ಯೂ (2002), ಪಂಚಾಯತ್‌ರಾಜ್ ಫ್ರಮ್ ಲೆಜಿಸ್ಲೇಷನ್ ಟು ಮೂವ್‌ಮೆಂಟ್, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪೆನಿ, ನ್ಯೂಡೆಲ್ಲಿ, 1994. ಪುಟ 22–41.

36. ವಿ. ಕೆ. ಅಗ್ನಿಹೋತ್ರಿ, ರಿಸರ್ವೇಷನ್ ಆಫ್ ಸೀಟ್ಸ್ ಫಾರ್ ವುಮೆನ್ ಇನ್ ಲೆಜಿಸ್ಲೇಟಿವ್ ಬಾಡೀಸ್: ಪರ್ಸ್‌ಪೆಕ್ಟಿವ್ಸ್, ರಾಜ್ಯಸಭಾ ಸೆಕ್ರೆಟರಿಯೇಟ್ ರಿಪೋರ್ಟ್, ನ್ಯೂಡೆಲ್ಲಿ, 2008. ಪುಟ 114–120.

37. ಸಾಧನಾ ವೈ. ಮಥಾದ್, "ದ ಪೊಲಿಟಿಕಲ್ ಮೊಬಿಲೈಸೇಷನ್ ಅಫ್ ವುಮೆನ್ ಇನ್ ಕರ್ನಾಟಕ–ಎ ಕೇಸ್ ಸ್ಟಡಿ ಆಫ್ ಧಾರವಾಡ ಡಿಸ್ಟ್ರಿಕ್ಟ್", ಪಿಎಚ್. ಡಿ ಪದವಿಗಾಗಿ ಧಾರವಾಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಅಪ್ರಕಟಿತ ಸಂಶೋಧನಾ ಪ್ರೌಢ ಪ್ರಬಂಧ, 2009. ಪುಟ 147–158.

38. ಆರ್. ಸೆಯಾನ್, "ಲೆಜಿಸ್ಲೇಟಿವ್ ಎಂಡ್ ಜ್ಯುಡಿಷಿಯಲ್ ಇನಿಷಿಯೇಟಿವ್ಸ್ ಟುವರ್ಡ್ಸ್ ವುಮೆನ್ ಎಂಪವರ್‌ಮೆಂಟ್", ಎಚ್‌ಟಿಟಿಪಿ//:ಡಬ್ಲ್ಯುಡಬ್ಲ್ಯುಡಬ್ಲ್ಯು.ಜೆಸ್ಟೋರ್.ಓಆರ್‌ಜಿ, ಅಕ್ಟೋಬರ್ 6, 2013.

39. ಎ. ಶ್ರೀಧರ, ಪಂಚಾಯತ್ ಸಂಸ್ಥೆಯ ಸಾಮಾಜಿಕ ಆಯಮಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006. ಪುಟ 18–26.

40. ಆಶಾ ರಮೇಶ್ ಮತ್ತು ಭಾರ್ತಿ ಅಲಿ, ರಿಸರ್ವೇಷನ್ ಟುವಾರ್ಡ್ಸ್ ಪೊಲಿಟಿಕಲ್ ಎಂಪವರ್‌ಮೆಂಟ್, ಕಾನ್ಸೆಪ್ಟ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. 1998. ಪುಟ 67–88.

41. ಜೀವನ್‌ದಾಸ್, ಮಹಿಳಾ ಅಧ್ಯಯನ, ಶ್ರುತಿ ಪ್ರಕಾಶನ, ಉಡುಪಿ, 2009. ಪುಟ 136–175.

42. ಎಸ್. ವಿ. ಶಿಂಧೆ, ವುಮೆನ್ ಇನ್ ಇಂಡಿಯನ್ ಪೊಲಿಟಿಕ್ಸ್, ಅನ್ಮೋಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1994. ಪುಟ 146–194.

43. ಎಸ್. ಬಿ. ವರ್ಮಾ, ಸ್ಟೇಟಸ್ ಆಫ್ ವುಮೆನ್ ಇನ್ ಇಂಡಿಯಾ, ಸ್ಟರ್ಲಿಂಗ್ ಪಬ್ಲಿಷರ್ಸ್, ನ್ಯೂಡೆಲ್ಲಿ, 1999. ಪುಟ 61–72.

44. ಗಿರಿಜಾ ವ್ಯಾಸ್, ಮಹಿಳಾ ಹಕ್ಕುಗಳ ಮೌಲ್ಯಮಪನ, ಯೋಜನಾ, ಅಭಿವೃದ್ಧಿ ಮಾಸಪತ್ರಿಕೆ, ಸಂಚಿಕೆ 9, ಎಪ್ರಿಲ್ 2011. ಪುಟ 9–11.

45. ಗವರ್ನ್‌ಮೆಂಟ್ ಆಫ್ ಇಂಡಿಯಾ, ರಿಪೋರ್ಟ್ ಆಫ್ ದ ಕಮಿಟಿ ಆನ್ ದ ಸ್ಟೇಟಸ್ ಆಫ್ ವುಮೆನ್ ಇನ್ ಇಂಡಿಯಾ, ವರದಿ, 2009. ಪುಟ 8–22.

46. ಟಿ. ಎಮ್. ಜೋಸೆಫ್, ಲೋಕಲ್ ಗವರ್ನೆನ್ಸ್ ಇನ್ ಇಂಡಿಯಾ, ಕಾನ್ಸೆಪ್ಟ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 2007. ಪುಟ 265–284.

47. ಸಮಾನತೆಯೆಡೆಗೆ', 1974. ಮಹಿಳೆಯರ ಮೊದಲ ದಶಕದ (1975–85) ಅಂಗವಾಗಿ ಪ್ರಕಟಿಸಲಾದ 'ಸಮಾನತೆಯೆಡೆಗೆ' ಎಂಬ ದಾಖಲೆಯು ಮಹಿಳಾ ಸಮಾನತೆಯ ಕುರಿತು ಪ್ರತಿಪಾದಿಸುತ್ತದೆ. ಈ ದಾಖಲೆಯು ಭಾರತೀಯ ಮಹಿಳೆಯರ ಜೀವನದ ಪ್ರತಿಯೊಂದು ವಿಷಯದ ಬಗೆಗೆ ಸಮೀಕ್ಷೆಯನ್ನು ನೀಡುತ್ತದೆ.

48. ಶುಭ ಮತ್ತು ಭಾರ್ಗವ, "ಪಂಚಾಯತ್‌ರಾಜ್ ಸಿಸ್ಟಂ ಇನ್ ಕರ್ನಾಟಕ". ಜರ್ನಲ್ ಆಫ್

ಸೋಷಿಯಲ್ ಸಯನ್ಸಸ್, ವಾಲ್ಯೂಮ್ 5, ನಂ. 2, ಜುಲೈ–ಡಿಸೆಂಬರ್, 2000. ಪುಟ 11–13.

49. ಎನ್. ದೇಶಪಾಂಡೆ, ಪಾರ್ಟಿಸಿಪೇಷನ್ ಆಫ್ ವುಮೆನ್ ಇನ್ ಪೊಲಿಟಿಕ್ಸ್, ಇಂಟರ್–ಇಂಡಿಯಾ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1995. ಪುಟ 22–25.

50. ಗೀತಾ ಕೃಷ್ಣಮೂರ್ತಿ, ಮಹಿಳಾ ಹಕ್ಕುಗಳು ಇನ್–ಮಹಿಳಾ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009. ಪುಟ 39–80.

51. ಕೆ. ಎಸ್. ಸಕ್ಸೇನಾ, ವುಮೆನ್ಸ್ ಪೊಲಿಟಿಕಲ್ ಪಾರ್ಟಿಸಿಪೇಷನ್ ಇನ್ ಇಂಡಿಯಾ, ಸಬ್‌ಲೈಮ್ ಪಬ್ಲಿಕೇಷನ್ಸ್, ಜೈಪುರ, 1999. ಪುಟ 114–121.

52. ಕೆ. ಜಯಲಕ್ಷ್ಮೀ, "ವುಮೆನ್ ಆ್ಯಂಡ್ ಪೊಲಿಟಿಕಲ್ ಪಾರ್ಟಿಸಿಪೇಷನ್ ಇನ್ ಇಂಡಿಯಾ", ಜರ್ನಲ್ ಆಫ್ ರೂರಲ್ ಡೆವಲಪ್‌ಮೆಂಟ್, ವಾಲ್ಯೂಮ್ 19, ನಂ. 4, ಡಿವಿಷನ್ ಮಿನಿಸ್ಟ್ರಿ ಆಫ್ "ಐ ಆ್ಯಂಡ್ ಟಿ". 2001. ಪುಟ 469–478.

53. ಮಧುಶ್ರೀ ದಾಸ್‌ಗುಪ್ತಾ, ವುಮೆನ್ ಎಂಪವರ್‌ಮೆಂಟ್ ಇನ್ ಇಂಡಿಯಾ, ಡಿವಿಷನ್ ಮಿನಿಸ್ಟ್ರಿ ಆಫ್ "ಐ ಆ್ಯಂಡ್ ಬಿ", ಗವರ್ನ್‌ಮೆಂಟ್ ಆಫ್ ಇಂಡಿಯಾ, 2013. ಪುಟ 70–72.

54. ನಿರ್ಮಲ್ ಬುಚ್, "ಪಂಚಾಯತ್‌ಗಳು ಮತ್ತು ಮಹಿಳೆಯರು", ಯೋಜನಾ, ಅಭಿವೃದ್ಧಿ ಮಾಸಪತ್ರಿಕೆ, ಜೂನ್ 2013. ಪುಟ 36–44.

55. ಅಜಿತ್ ಪಾಲ್, "ವುಮೆನ್ಸ್ ಪಾರ್ಟಿಸಿಪೇಷನ್ ಎಟ್ ಗ್ರಾಸ್ ರೂಟ್ ಲೆವೆಲ್", ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ, ವಾಲ್ಯೂಮ್ 47, ನಂ. 12, 2009. ಪುಟ 22–25.

56. ಘನಶ್ಯಾಮ್ ಶಾ, ಕಾಸ್ಟ್ ಎಂಡ್ ಡೆಮಾಕ್ರಟಿಕ್ ಪೊಲಿಟಿಕ್ಸ್ ಇನ್ ಇಂಡಿಯಾ, ಆಶೀಷ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 2008. ಪುಟ 287–310.

57. ಎಸ್. ಬಿ. ವರ್ಮಾ, ಸ್ಟೇಟಸ್ ಆಫ್ ವುಮೆನ್ ಇನ್ ಇಂಡಿಯಾ, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2005. ಪುಟ 116–160.

58. ಅರ್ಶಿ ಪರ್ವೀನ್, ಸೋಷಿಯಲ್ ಜಸ್ಟಿಸ್ ಎಂಡ್ ಇಂಡಿಯನ್ ವುಮೆನ್, ಇಂಡಿಯನ್ ಪಬ್ಲಿಷರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್, ನ್ಯೂಡೆಲ್ಲಿ, 2006. ಪುಟ 318–347.

59. ಶಮಿಮ್ ಅಸ್ಮತ್ ಮತ್ತು ಚಂದಾ ದೇವಿ, ವುಮೆನ್ ಎಂಪವರ್‌ಮೆಂಟ್ ಇನ್ ಇಂಡಿಯಾ, ಮಿತ್ತಲ್ ಪಬ್ಲಿಷರ್ಸ್, ನ್ಯೂಡೆಲ್ಲಿ, 2012. ಪುಟ 347–349.

60. ಗೀತಾ ಕೃಷ್ಣಮೂರ್ತಿ, ಮಹಿಳಾ ಹಕ್ಕುಗಳು ಮಾನವ ಹಕ್ಕುಗಳ ನೆಲೆಯಲ್ಲಿ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009. ಪುಟ 1–78.

61. ಟಿ. ಎಂ. ಜೋಸೆಫ್, ಲೋಕಲ್ ಗವರ್ನೆನ್ಸ್ ಇನ್ ಇಂಡಿಯಾ, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪೆನಿ, ನ್ಯೂಡೆಲ್ಲಿ, 2007. ಪುಟ 11–24.

62. ವೈ. ಟಿ. ಪವಾರ್, ರೋಲ್ ಆಫ್ ವುಮೆನ್ ಇನ್ ಇಂಡಿಯನ್ ಪೊಲಿಟಿಕ್ಸ್, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2009. ಪುಟ 250–268.

63. ಮೈತ್ರೇಯಿ ಕೃಷ್ಣರಾಜ್, ವುಮೆನ್ ಎಂಡ್ ಡೆವಲಪ್‌ಮೆಂಟ್, ಶುಭದಾ ಸಾರಸ್ವತ್ಸ್ ಪ್ರಕಾಶನ್, ಪುಣೆ, 1998. ಪುಟ 150–210.

64. ಪ್ರೋಮೀಲಾ ಕಪೂರ್, ಸ್ಟೆಪ್ಸ್ ಟು ಎನ್‌ಹ್ಯಾನ್ಸ್ ವುಮೆನ್‌ಸ್ ಪೊಲಿಟಿಕಲ್ ಪಾರ್ಟಿಸಿಪೇಷನ್, ಕಾಳೀ ಫಾರ್ ವುಮೆನ್ ಪ್ರೆಸ್, ನ್ಯೂಡೆಲ್ಲಿ, 2009. ಪುಟ 28–46.

65. ಪ್ರೇಮಾ ಆರ್. ಜಿ ಅಪಚಂದ, *ಲಿಂಗ ವ್ಯವಸ್ಥೆ ಸಂಕಥನ*, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, 2010. ಪುಟ 37–60.
66. ಶ್ರೀಲತಾ ಬಾಟ್ಲಿವಾಲಾ, "ಸ್ಟೇಟಸ್ ಆಫ್ ವುಮೆನ್ ಇನ್ ಕರ್ನಾಟಕ", ಎಚ್‌ಟಿಟಿಪಿ// :ಡಬ್ಲ್ಯುಡಬ್ಲ್ಯುಡಬ್ಲ್ಯು.ಜೆಸ್ಟೋರ್.ಓಆರ್‌ಜಿ, ಜೂನ್ 11, 2012.
67. ಎನ್. ಬಿರಾದಾರ್, "ವರ್ಕಿಂಗ್ ಆಫ್ ಜಿಲ್ಲಾ ಪಂಚಾಯತ್ ಇನ್ ಕರ್ನಾಟಕ–ಎ ಕೇಸ್ ಸ್ಟಡಿ ಆಫ್ ಬಿಜಾಪುರ", ಅಪ್ರಕಟಿತ ಪಿಎಚ್. ಡಿ ಗ್ರಂಥ. 2000. ಪುಟ 66–140.
68. ಅಮೃತಾ ಬಿ. ಎಸ್., "ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ", *ಕರ್ನಾಟಕ ಜರ್ನಲ್ ಆಫ್ ಪೊಲಿಟಿಕ್ಸ್*, 2012. ಪುಟ 10–13.
69. ಭಾರ್ಗವ ಬಿ. ಎಸ್., *ಪೊಸಿಷನ್ ಆಫ್ ವುಮೆನ್ ಇನ್ ಪೊಲಿಟಿಕಲ್ ಇನ್ಸ್‌ಟಿಟ್ಯೂಷನ್ಸ್*, ಪ್ರಿಂಟ್‌ವೆಲ್ ಪಬ್ಲಿಷರ್ಸ್, ಜೈಪುರ, 1993. ಪುಟ 220–225.
70. ಓಂಕಾರ ಕಾಕಡೆ ಮತ್ತು ಬಸವಂತಿಕೋಟೂರು, "ಪಂಚಾಯತ್‌ರಾಜ್, ಮಹಿಳಾ ಸಬಲೀಕರಣ ಮತ್ತು ಮಾಧ್ಯಮ", *ಕರ್ನಾಟಕ ಜರ್ನಲ್ ಆಫ್ ಪೊಲಿಟಿಕ್ಸ್*, 2011. ಪುಟ 11–14.
71. ಅದೇ. ಪುಟ 11–14.
72. ಸೂರತ್ ಸಿಂಗ್, "ಎಂಪವರ್‌ಮೆಂಟ್ ಆಫ್ ವುಮೆನ್ ಮೆಂಬರ್ಸ್ ಇನ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್", 'ಕುರುಕ್ಷೇತ್ರ' ಮಾಸಪತ್ರಿಕೆ, ಅಗೋಸ್ಟ್ 2004. ಪುಟ 22–26.
73. ಎಸ್. ಗೋವಿಂದೇ ಗೌಡ ಹಾಗೂ ಇತರರು, "ಡೆವಲಪ್‌ಮೆಂಟಲ್ ರೋಲ್ ಆಫ್ ವುಮೆನ್ ಮೆಂಬರ್ಸ್ ಆಫ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್: ಎ ಸ್ಟಡಿ ಇನ್ ಕರ್ನಾಟಕ", *ಜರ್ನಲ್ ಆಫ್ ರೂರಲ್ ಡೆವಲಪ್‌ಮೆಂಟ್*, ವಾಲ್ಯೂಮ್ 15, ನಂ. 2, ಎನ್.ಐ.ಡಿ, 1996. ಪುಟ 249–256.
74. ಎಸ್. ವಾಲಿ, ಬಿ.ಕೆ.ಅನಿತ, ಅನಿತ ಗುರುಮೂರ್ತಿ, *ಸ್ಟೇಟಸ್ ಆಫ್ ರೂರಲ್ ವುಮೆನ್ ಇನ್ ಕರ್ನಾಟಕ*, ಎನ್.ಐ.ಎ.ಸಿ, ಬೆಂಗಳೂರು, 1998. ಪುಟ 6–7.
75. ಆಶಾ ರಮೇಶ್ ಮತ್ತು ಭಾರತಿ ಆಲಿ, *ಟುವರ್ಡ್ಸ್ ಪೊಲಿಟಿಕಲ್ ಎಂಪವರ್‌ಮೆಂಟ್–ಪ್ರೊಫೈಲಿಂಗ್ ಎಲೆಕ್ಟೆಡ್ ವುಮೆನ್ ಮೆಂಬರ್ಸ್ ಇನ್ ಕರ್ನಾಟಕ ಎಂಡ್ ಗುಜರಾತ್*, ಬುಕ್ಸ್ ಫಾರ್ ಚೇಂಜ್, 2001. ಪುಟ 88–92.
76. ರುಮಾ ಬ್ಯಾನರ್ಜಿ, *ವುಮೆನ್ ಇನ್ ಪಂಚಾಯತ್‌ರಾಜ್ : ಎ ಸ್ಟಡಿ ಇನ್ ವೆಸ್ಟ್ ಬೆಂಗಲ್*, *ಡೆವಲಪ್‌ಮೆಂಟ್ ಡೈಲಾಗ್ಸ್*, ಕೋಲ್ಕತ್ತಾ, 1995. ಪುಟ 88–106.
77. ರಾಕೇಶ್ ಕೆ. ಸಿಂಗ್, "ಎಲೆಕ್ಟೆಡ್ ವುಮೆನ್ ರೆಪ್ರೆಸೆಂಟೇಟಿವ್ಸ್ ಇನ್ ಪಂಚಾಯತ್‌ರಾಜ್", *ಸೋಷಿಯಲ್ ಆ್ಯಕ್ಷನ್*, ವಾಲ್ಯೂಮ್ 62, ಜನವರಿ–ಮಾರ್ಚ್ 2012. ಪುಟ 12–15.
78. ಹೇಜೆಲ್ ಡಿ. ಲಿಮಾ, *ವುಮೆನ್ ಇನ್ ಲೋಕಲ್ ಗವರ್ನ್‌ಮೆಂಟ್*, ಕಾನ್ಸೆಪ್ಟ್ ಪಬ್ಲಿಷರ್ಸ್, ನ್ಯೂಡೆಲ್ಲಿ, 1993. ಪುಟ 178–185.
79. *ಹೇಜೆಲ್ ಡಿ. ಲಿಮಾ, ವುಮೆನ್ ಇನ್ ಲೋಕಲ್ ಗವರ್ನ್‌ಮೆಂಟ್ ಇನ್ ಮಹಾರಾಷ್ಟ್ರ*, ಕಾನ್ಸೆಪ್ಟ್ ಪಬ್ಲಿಷರ್ಸ್, ನ್ಯೂಡೆಲ್ಲಿ, 1993. ಪುಟ 124–148.
80. *ಜಾರ್ಜ್ ಮ್ಯಾಥ್ಯೂಸ್, ಪಂಚಾಯತ್‌ರಾಜ್ ಇನ್ ಕರ್ನಾಟಕ ಟುಡೇ: ಇಟ್ಸ್ ನ್ಯಾಷನಲ್ ಡೈಮೆನ್ಷನ್ಸ್*, ಕಾನ್ಸೆಪ್ಟ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1986. ಪುಟ 42–84.

81. ಕೆ. ಮಾನಿಕ್ಯಂಬಾ, ವುಮೆನ್ ಇನ್ ಪಂಚಾಯತ್‌ರಾಜ್ ಸ್ಟ್ರಕ್ಚರ್, ಗ್ಯಾನ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1998. ಪುಟ 314–331.
82. ಸಚ್ಚಿದಾನಂದ ಸತ್ಪತಿ, "ವುಮೆನ್ ಎಂಪವರ್‌ಮೆಂಟ್ ಆ್ಯಂಡ್ ಪಂಚಾಯತ್‌ರಾಜ್: ಎ ಕೇಸ್ ಸ್ಟಡಿ ಫ್ರಮ್ ಒರಿಸ್ಸಾ", ಎಚ್‌ಟಿಟಿಪಿ//:ಡಬ್ಲ್ಯುಡಬ್ಲ್ಯುಡಬ್ಲ್ಯು.ಆನ್‌ಲೈನ್ ವುಮೆನ್ ಇನ್ ಪೊಲಿಟಿಕ್ಸ್.ಓಆರ್‌ಜಿ/ಇಂಡಿಯಾ, 2002.
83. ರಶ್ಮಿ ಅರುಣ್, "ರೋಲ್ ಆಫ್ ವುಮೆನ್ ಇನ್ ಪಂಚಾಯತ್‌ರಾಜ್", ಜರ್ನಲ್ ಆಫ್ ಸೋಷಿಯಲ್ ಸಯನ್ಸಸ್, ವಾಲ್ಯೂಮ್ 11, ನಂ. 8, 2002. ಪುಟ 43–46.
84. ಸಿವಲ್ ಬಿ. ಆರ್., "ಎಂಪವರ್‌ಮೆಂಟ್ ಆಫ್ ವುಮೆನ್", ವುಮೆನ್ಸ್ ಲಿಂಕ್, ವಾಲ್ಯೂಮ್ 8, ನಂ. 2, 2002. ಪುಟ 11–20.
85. ಸಾಧನಾ ಆರ್ಯ, ವುಮೆನ್, ಜೆಂಡರ್ ಇಕ್ವಾಲಿಟಿ ಆ್ಯಂಡ್ ದ ಸ್ಟೇಟ್, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2006. ಪುಟ 117–220.
86. ಅಜಿತ್ ಪಾಲ್, "ವುಮೆನ್ಸ್ ಪಾರ್ಟಿಸಿಪೇಷನ್ ಎಟ್ ಗ್ರಾಸ್ ರೂಟ್ ಲೆವೆಲ್", ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ವಾಲ್ಯೂಮ್ 47, ನಂ. 12, 2009. ಪುಟ 4–24.
87. ಗವರ್ನ್‌ಮೆಂಟ್ ಆಫ್ ಇಂಡಿಯಾ, ರಾಜ್ಯಸಭಾ ಸೆಕ್ರೇಟರಿಯೇಟ್ ರಿಪೋರ್ಟ್–2008, ರಿಸರ್ವೇಷನ್ ಆಫ್ ಸೀಟ್ಸ್ ಫಾರ್ ವುಮೆನ್ ಇನ್ ಲೆಜಿಸ್ಲೇಚರ್ ಪ್ರಾಸ್ಪೆಕ್ಟಸ್, 2008.
88. ಕೆ.ಎಸ್. ಸಕ್ಸೇನಾ, ವುಮೆನ್‌ಸ್ ಪೊಲಿಟಿಕಲ್ ಪಾರ್ಟಿಸಿಪೇಷನ್ ಇನ್ ಇಂಡಿಯಾ, ಸಬ್‌ಲೈಮ್ ಪಬ್ಲಿಕೇಷನ್ಸ್, ಜೈಪುರ, 1999. ಪುಟ 61–106.
89. ರೂಪಾ ಹಾಸನ, ಮಹಿಳೆ ಮತ್ತು ಆಧುನಿಕತೆಯ ಸವಾಲುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010. ಪುಟ 1–15.
90. ಸುಶೀಲ್ ಕೌಶಿಕ್, ಪೊಲಿಟಿಕಲ್ ಪಾರ್ಟಿಸಿಪೇಷನ್ ಎಂಡ್ ವುಮೆನ್ ರೆಪ್ರೆಸೆಂಟೇಷನ್ ಇನ್ ಇಂಡಿಯಾ, ಅನ್ಮೋಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1998. ಪುಟ 36–90.
91. ಆಶೇನ್ ರಾಯ್, ವುಮೆನ್ ಇನ್ ಪವರ್ ಆ್ಯಂಡ್ ಡಿಸಿಷನ್ ಮೇಕಿಂಗ್, ರಜತ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2003. ಪುಟ 68–86.
92. ಎಂ. ಚಂದ್ರ ಪೂಜಾರಿ, "ಆರ್ಥಿಕ ಬಲದ ಕಲ್ಪನೆ ಮತ್ತು ಸಾಮಾಜಿಕ ಅಸಾಮರ್ಥ್ಯ", ವಿಜಯ ಕರ್ನಾಟಕ, ಸೆಪ್ಟೆಂಬರ್ 21, 2012. ಪುಟ 8.
93. ಸಾಧನಾ ವೈ. ಮಥಾದ್, "ಪೊಲಿಟಿಕಲ್ ಮೊಬಿಲೈಸೇಷನ್ ಆಫ್ ವುಮೆನ್ ಇನ್ ಕರ್ನಾಟಕ–ಎ ಕೇಸ್ ಸ್ಟಡಿ ಆಫ್ ಧಾರವಾಡ ಡಿಸ್ಟ್ರಿಕ್ಟ್", ಪಿಎಚ್. ಡಿ ಪದವಿಗಾಗಿ ಕರ್ನಾಟಕ ಯುನಿವರ್ಸಿಟಿ ಧಾರವಾಡಕ್ಕೆ ಸಲ್ಲಿಸಿದ ಸಂಶೋಧನಾ ಪ್ರಬಂಧ, 2009. ಪುಟ 111–145.
94. ಜ್ಯೋತ್ಸ್ನಾ ಮಹೇಶ್, "ಪೊಲಿಟಿಕಲ್ ಎಂಪವರ್‌ಮೆಂಟ್ ಆಫ್ ವುಮೆನ್ ವಿದ್ ರೆಫರೆನ್ಸ್ ಟು ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್–ಎ ಕೇಸ್ ಸ್ಟಡಿ ಆಫ್ ಉಡುಪಿ ಡಿಸ್ಟ್ರಿಕ್ಟ್", ಪಿಎಚ್. ಡಿ ಪದವಿಗಾಗಿ ಮಾಹೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾದ ಅಪ್ರಕಟಿತ ಸಂಶೋಧನಾ ಗ್ರಂಥ, 2011. ಪುಟ 142–165.
95. ವೀರಭಾರತಿ, "ಮೀಸಲಾತಿ ಮತ್ತು ಸಮಾನತೆ", ಸ್ಪರ್ಧಾಸ್ಫೂರ್ತಿ, 2009. ಪುಟ 4–5.
96. ಬಿದಾಯತ್ ಮೊಹಾಂತಿ, ಪಂಚಾಯತ್‌ರಾಜ್, 73ರ್ಡ್ ಕಾನ್ಸ್‌ಟಿಟ್ಯೂಷನಲ್ ಅಮೆಂಡ್‌ಮೆಂಟ್ ಎಂಡ್ ವುಮೆನ್, ಇನ್ಸ್‌ಟಿಟ್ಯೂಟ್ ಆಫ್ ಸೋಷಿಯಲ್ ಸಯನ್ಸಸ್, ನ್ಯೂಡೆಲ್ಲಿ, 1995. ಪುಟ 5–7.

97. ನಿರ್ಮಲಾ ಬುಚ್, ಪಂಚಾಯತ್ಸ್ ಎಂಡ್ ವುಮೆನ್, ಸ್ಟೇಟಸ್ ಆಫ್ ಪಂಚಾಯತ್‌ರಾಜ್ ಇನ್ ದ ಸ್ಟೇಟ್ಸ್ ಆ್ಯಂಡ್ ಯೂನಿಯನ್ ಟೆರಿಟರೀಸ್ ಆಫ್ ಇಂಡಿಯಾ, ಇನ್ಸ್‌ಟಿಟ್ಯೂಟ್ ಆಫ್ ಸೋಷಿಯಲ್ ಸಯನ್ಸಸ್, 2000. ಪುಟ 3–4.

98. ಸೀಮಾ ಪಿ. ಸಾಲ್ಗಾಂವ್ಕರ್, ವುಮೆನ್, ಪೊಲಿಟಿಕಲ್ ಪವರ್ ಎಂಡ್ ದ ಸ್ಟೇಟ್, ಅಭಿಜಿತ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2006. ಪುಟ 28–64.

99. ಜಯಲ್ ನೀರಜ ಗೋಪಾಲ್, ಎಂಜೆಂಡರಿಂಗ್ ಲೋಕಲ್ ಡೆಮಾಕ್ರಸಿ : ದ ಇಂಪ್ಯಾಕ್ಟ್ ಆಫ್ ಕೋಟಾಸ್ ಆಫ್ ವುಮೆನ್ ಇನ್ ಇಂಡಿಯಾಸ್ ಪಂಚಾಯತ್ಸ್, ಎನ್.ಐ.ಆರ್.ಡಿ, ನ್ಯೂಡೆಲ್ಲಿ. 2005. ಪುಟ 53–69.

100. ವರದಿ–2000, ಇನ್ಸ್‌ಟಿಟ್ಯೂಟ್ ಆಫ್ ಸೋಷಿಯಲ್ ಸಯನ್ಸಸ್, ನ್ಯೂಡೆಲ್ಲಿ, 2000. ಪುಟ 4–8.

101. ದೇವಕಿ ಜೈನ್, "ಪಂಚಾಯತ್‌ರಾಜ್: ವುಮೆನ್ ಚೇಂಜಿಂಗ್ ಗವರ್ನೆನ್ಸ್" ಎಚ್‌ಟಿಟಿಪಿ// :ಡಬ್ಲ್ಯುಡಬ್ಲ್ಯುಡಬ್ಲ್ಯು.ಯುಎನ್‌ಡಿಪಿ.ಓಆರ್‌ಜಿ. ನವಂಬರ್ 13, 2014.

102. ಶುಭ ಕೆ., ಕರ್ನಾಟಕ ಪಂಚಾಯತ್ ಎಲೆಕ್ಷನ್ *1995*, ಕಾನ್ಸೆಪ್ಟ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1997. ಪುಟ 11–18.

103. ಗಾಯತ್ರಿ ದೇವಿ, "ಗ್ರಾಮ ಪಂಚಾಯತ್ ಮಹಿಳಾ ಅಧ್ಯಕ್ಷರು ಮತ್ತು ಗ್ರಾಮೀಣ ಅಭಿವೃದ್ಧಿ", ಐಸ್ಯಾಕ್ ವರದಿ, ಕರ್ನಾಟಕ ಸರಕಾರ, ಬೆಂಗಳೂರು, 2005. ಪುಟ 6–8.

104. ದತ್ತ ಬಿಶಾಖ, ಹೂ ವಿಲ್ ಮೇಕ್‌ದಿ ಚಪಾತಿಸ್, –ಎ ಸ್ಟಡಿ ಆಫ್ ಆಲ್–ವುಮೆನ್ ಪಂಚಾಯತ್ ಇನ್ ಮಹಾರಾಷ್ಟ್ರ, ಸ್ತ್ರೀ ಪಬ್ಲಿಕೇಷನ್ಸ್, ಕೋಲ್ಕತ್ತಾ, 2008. ಪುಟ 88–106.

105. ಸ್ಟೀಫನ್ ಎಫ್. ಎನ್. ಮತ್ತು ರಾಜಶೇಖರನ್, ಎನ್ ಎಂಪೀರಿಕಲ್ ಸ್ಟಡಿ ಆಫ್ ವುಮೆನ್ ಇನ್ ಲೋಕಲ್ ಸೆಲ್ಫ್ ಗವರ್ನೆನ್ಸ್ ಇನ್ ಕರ್ನಾಟಕ, ಸರ್ಚ್ ಪಬ್ಲಿಕೇಷನ್ಸ್, ಬೆಂಗಳೂರು, 2001. ಪುಟ 52–64.

106. ರೇವತಿ ನಾರಾಯಣನ್, ಗ್ರಾಸ್‌ರೂಟ್ಸ್ ಜೆಂಡರ್ ಎಂಡ್ ಗವರ್ನೆನ್ಸ್ : ಪಂಚಾಯತ್‌ರಾಜ್ ಎಕ್ಸ್‌ಪೀರಿಯನ್ಸಸ್ ಫ್ರಂ ಮಹಿಳಾ ಸಮಖ್ಯ ಕರ್ನಾಟಕ, ಅಜಂತಾ ಪಬ್ಲಿಕೇಶನ್ಸ್, ನ್ಯೂಡೆಲ್ಲಿ, 2002. ಪುಟ 120–124

107. ಶಶಿ ಕೌಲ್ ಎಂಡ್ ಶ್ರದ್ಧಾ ಸಾಹ್ನಿ, ಸ್ಟಡಿ ಆನ್ ದ ಪಾರ್ಟಿಸಿಪೇಷನ್ ಆಫ್ ವುಮೆನ್ ಇನ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್, ಇನ್ಸ್‌ಟಿಟ್ಯೂಟ್ ಆಫ್ ಸೋಷಿಯಲ್ ಸಯನ್ಸ್, ನ್ಯೂಡೆಲ್ಲಿ, 2009. ಪುಟ 8–11.

108. ಜಾರ್ಜ್ ಮಾಥ್ಯೂ, ಪಂಚಾಯತ್‌ರಾಜ್ ಫ್ರಂ ಲೆಜಿಸ್ಲೇಷನ್ ಟು ಮೂವ್‌ಮೆಂಟ್, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪೆನಿ, ನ್ಯೂಡೆಲ್ಲಿ, 1994. ಪುಟ 118–168.

109. ಎಸ್.ಬಿ. ವರ್ಮಾ ಮತ್ತು ವೈ.ಟಿ. ಪವಾರ್, ರೂರಲ್ ಎಂಪವರ್‌ಮೆಂಟ್, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2009. ಪುಟ 289–321.

110. ಆರ್. ಸೆಯಾನ್, ಇನ್ ಲೆಜಿಸ್ಲೇಷನ್ ಎಂಡ್ ಜುಡಿಷಿಯಲ್ ಇನಿಷಿಯೇಟಿವ್ಸ್ ಟುವಾರ್ಡ್ಸ್ ವುಮೆನ್ ಎಂಪವರ್‌ಮೆಂಟ್, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2002. ಪುಟ 264–320.

111. ಮಾಲತಿ ಸುಬ್ರಹ್ಮಣಿಯನ್, "ಪೊಲಿಟಿಕಲ್ ಪಾರ್ಟಿಸಿಪೇಷನ್ ಎಂಡ್ ರೆಪ್ರೆಸೆಂಟೇಷನ್ ಆಫ್ ವುಮೆನ್ ಇನ್ ಇಂಡಿಯನ್ ಪೊಲಿಟಿಕ್ಸ್", ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 65, ನಂ. 1, 2005. ಪುಟ 40–41

112. ಎಂ. ಚಂದ್ರ ಪೂಜಾರಿಯವರು ಯು.ಜಿ.ಸಿ. ಪ್ರಾಯೋಜಕತ್ವದ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ "ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಲಿಂಗ ಸಂಬಂಧ ಮತ್ತು ರಾಜಕೀಯ"ದ ಬಗ್ಗೆ ಉದ್ಘಾಟಕರಾಗಿ ಮಾತನಾಡಿದ ವಿಷಯ. ದಿ. 28.01.2016, ಎಂ.ಎಸ್.ಆರ್.ಎಸ್., ಕಾಲೇಜು, ಶಿರ್ವ.

113. ವಿ. ಡಿ. ಮಹಾಜನ್, ದ ಕಾನ್ಸ್‌ಟಿಟ್ಯೂಷನ್ ಆಫ್ ಇಂಡಿಯಾ, ಎಸ್. ಚಂದ್ ಆ್ಯಂಡ್ ಕಂ., ನ್ಯೂಡೆಲ್ಲಿ, 1982. ಪುಟ 224–310.

114. ಯುಎನ್‌ಡಿಪಿ ವರದಿ, 2005. ಪುಟ ಸಂಖ್ಯೆ 26–30

115. ರಾಕೇಶ್ ಕೆ. ಸಿಂಘ್, "ಎಲೆಕ್ಟೆಡ್ ವುಮೆನ್ ರೆಪ್ರೆಸೆಂಟೇಟಿವ್ಸ್ ಇನ್ ಪಂಚಾಯತ್‌ರಾಜ್", ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 62, ಜನವರಿ–ಮಾರ್ಚ್, 2012. ಪುಟ 6–8.

116. ಜೇಮ್ಸ್ ಪೋರ್ಡ್, *ರೇಷನಲ್ ಫಾರ್ ಡೀಸೆಂಟ್ರಲೈಸೇಷನ್*, ವರ್ಲ್ಡ್ ಬ್ಯಾಂಕ್ ನೋಟ್ಸ್, ವಾಷಿಂಗ್ಟನ್ ಡಿ. ಸಿ., 2003. ಪುಟ 8–10.

117. ಡಿ. ಡಿ. ಬಸುರವರು, ಇಂದಿನ ಆಧುನಿಕ ರಾಷ್ಟ್ರದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ಹೊರೆಯನ್ನು ಕಡಿಮೆ ಮಾಡಬೇಕಾದ ಅಗತ್ಯವಿದೆ. ಆದುದರಿಂದ ಸ್ಥಳೀಯ ಸರಕಾರಗಳನ್ನು ಸ್ಥಾಪಿಸಲಾಗಿದೆ. (ವಿವರಗಳಿಗೆ ಎಂ. ವಿ. ಪೈಲಿ, ಇನ್‌ಟ್ರೊಡಕ್ಷನ್ ಟು ದ ಕಾನ್ಸ್‌ಟಿಟ್ಯೂಷನ್ ಆಫ್ ಇಂಡಿಯಾ, ವಿಕಾಸ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1998. ಪುಟ 16–102.)

ಅಧ್ಯಾಯ –2

ಅಧ್ಯಯನ ಕ್ಷೇತ್ರ ಪರಿಚಯ

ಅಧ್ಯಾಯ – 2

ಅಧ್ಯಯನ ಕ್ಷೇತ್ರ ಪರಿಚಯ

ದ್ವಿತೀಯ ಅಧ್ಯಾಯದಲ್ಲಿ ಉಡುಪಿ ಜಿಲ್ಲೆಯ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಮತ್ತು ಭೌಗೋಳಿಕ ಅಂಶಗಳ ಬಗ್ಗೆ ಚರ್ಚಿಸಲಾಗಿರುತ್ತದೆ. ಇದರಿಂದಾಗಿ ಪ್ರಸ್ತುತ ಅಧ್ಯಯನದ ಸಮಸ್ಯೆ, ಉದ್ದೇಶ ಮತ್ತು ಅವುಗಳು ಆವರಿಸಿಕೊಂಡಿರುವ ಪ್ರದೇಶಗಳ ಬಗ್ಗೆ ಸಂಪೂರ್ಣ ಚಿತ್ರಣ ಪಡೆಯಲು ಸಾಧ್ಯವಾಗುತ್ತದೆ. 1997ರ ಪೂರ್ವದಲ್ಲಿ ಉಡುಪಿ ಜಿಲ್ಲೆಯು ದಕ್ಷಿಣ ಕನ್ನಡ ಜಿಲ್ಲೆಯ ಅವಿಭಾಜ್ಯ ಅಂಗವಾಗಿತ್ತು. ಆಡಳಿತವನ್ನು ಮತ್ತಷ್ಟು ಜನಪರವನ್ನಾಗಿಸಿ ಜಿಲ್ಲೆಯ ಎಲ್ಲಾ ಜನರನ್ನು ತಲುಪಲು ಆಗೋಸ್ಟ್ 24, 1997ರಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ಉಡುಪಿ ಮತ್ತು ದಕ್ಷಿಣ ಕನ್ನಡ ಎಂಬುದಾಗಿ ಎರಡು ಕಂದಾಯ ಜಿಲ್ಲೆಗಳಾಗಿ ವಿಭಜಿಸಲಾಯಿತು[1]. ಪ್ರಸ್ತುತ ಉಡುಪಿ ಜಿಲ್ಲೆಯು ಉಡುಪಿ, ಕುಂದಾಪುರ ಮತ್ತು ಕಾರ್ಕಳ ಎಂಬ ಮೂರು ತಾಲೂಕುಗಳನ್ನು ಹೊಂದಿದೆ. ಉಡುಪಿ ನಗರವು ಇದರ ಪ್ರಧಾನ ಕೇಂದ್ರವಾಗಿದೆ. ಪೂರ್ವದಲ್ಲಿ ಪಶ್ಚಿಮ ಘಟ್ಟಗಳು, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಇವೆರಡರ ನಡುವೆ ಇರುವ ಉಡುಪಿಯು ರಾಜ್ಯದ ಮೂರು ಕರಾವಳಿ ಜಿಲ್ಲೆಗಳಲ್ಲಿ ಒಂದಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯು ದಕ್ಷಿಣದ ಮೇರೆಯಾಗಿದ್ದು, ಉತ್ತರದಲ್ಲಿ ಉತ್ತರ ಕನ್ನಡ ಮತ್ತು ಪೂರ್ವದಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಹಾಗೂ ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಇವುಗಳು ಇತರ ಮೇರೆಗಳಾಗಿವೆ. ಜಿಲ್ಲೆಯು ರಾಜ್ಯ ರಾಜಧಾನಿ ಬೆಂಗಳೂರಿನಿಂದ 422 ಕಿ.ಮೀ. ದೂರದಲ್ಲಿದ್ದು, ರಾಜ್ಯದ ಮುಖ್ಯ ಬಂದರು ನಗರವಾದ ಮಂಗಳೂರಿನಿಂದ 60 ಕಿ.ಮೀ. ದೂರದಲ್ಲಿದೆ[2]. ಆಡಳಿತಾತ್ಮಕವಾಗಿ, ಈ ಜಿಲ್ಲೆಯಲ್ಲಿ 248 ಗ್ರಾಮಗಳು, 146 ಗ್ರಾಮಪಂಚಾಯತ್‌ಗಳು, ಒಂದು ನಗರ ಸಭೆ (ಉಡುಪಿ ನಗರ), ಎರಡು ಪುರಸಭೆಗಳು (ಕಾರ್ಕಳ ಮತ್ತು ಕುಂದಾಪುರ ನಗರಗಳು) ಮತ್ತು ಒಂದು ಪಟ್ಟಣ ಪಂಚಾಯತ್‌ನ್ನು (ಸಾಲಿಗ್ರಾಮ) ಹೊಂದಿದೆ[3].

ಉಡುಪಿ ಜಿಲ್ಲೆಯು ದಕ್ಷಿಣ ಕನ್ನಡದೊಂದಿಗೆ 'ತುಳುನಾಡು' (ತುಳು ಭಾಷೆಯನ್ನಾಡುವ ಜನರನ್ನೊಳಗೊಂಡಿರುವ ಭೂಪ್ರದೇಶ) ಎಂದು ಕರೆಯಲ್ಪಡುತ್ತಿತ್ತು. ಉಡುಪಿಯು ಸ್ಥಳೀಯ ಆಡುಭಾಷೆ ತುಳುವಿನಲ್ಲಿ 'ಒಡಿಪು'[4] ಎಂದು ಕರೆಯಲ್ಪಡುತ್ತಿತ್ತು. ಕನ್ನಡ, ತುಳು ಮತ್ತು ಕೊಂಕಣಿ ಜಿಲ್ಲೆಯ ಮುಖ್ಯ ಭಾಷೆಗಳಾಗಿವೆ. ಉಡುಪಿಯು ತನ್ನಲ್ಲಿರುವ ದೇವಸ್ಥಾನಗಳು, ಸಮುದ್ರ ತೀರಗಳು, ಉಡುಪಿ ಹೊಟೇಲ್‌ಗಳು ಮತ್ತು ಉಡುಪಿ ಅಡುಗೆಗೆ ಹೆಸರುವಾಸಿಯಾಗಿದೆ. ಇದು ಕರ್ನಾಟಕದ ಸಾಂಸ್ಕೃತಿಕ

[illegible]

ಮತ್ತು ಆಧ್ಯಾತ್ಮಿಕ ರಾಜಧಾನಿಯೆಂದೂ ಪರಿಗಣಿಸಲ್ಪಟ್ಟಿದೆ. ರಾಜ್ಯದ ಮೂರು ಕರಾವಳಿ ಜಿಲ್ಲೆಗಳಲ್ಲಿ ಉಡುಪಿಯು ಒಂದು. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 3575 ಚ.ಕಿ.ಮೀ.ಗಳು[5]. ಇದು ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇಕಡಾ 2.08 ಆಗಿದೆ. ಜಿಲ್ಲೆಯು ಮೂರು ವಿಶಿಷ್ಟ ನೈಸರ್ಗಿಕ ವಲಯಗಳನ್ನು ಹೊಂದಿದೆ. ಕುಂದಾಪುರ ಮತ್ತು ಉಡುಪಿ ತಾಲೂಕುಗಳ ಪಶ್ಚಿಮದ ಭಾಗಗಳನ್ನು ಒಳಗೊಂಡ 98 ಕಿ.ಮೀ ಉದ್ದದ ಕರಾವಳಿ ಪ್ರದೇಶ, ಜಿಲ್ಲೆಯ ಶೇ.75ರಷ್ಟು ಪ್ರದೇಶವನ್ನು ಒಳಗೊಂಡ ಮಧ್ಯ ಬಯಲು ಪ್ರದೇಶ ಮತ್ತು ಕುಂದಾಪುರ ಮತ್ತು ಕಾರ್ಕಳ ತಾಲೂಕುಗಳ ಈಶಾನ್ಯ ಭಾಗವನ್ನು ಒಳಗೊಂಡ ಮಲೆನಾಡು ವಲಯ. ಇವೇ ಆ ಮೂರು ವಲಯಗಳಾಗಿವೆ[6]. ಜಿಲ್ಲೆಯಲ್ಲಿ ಸಾಮಾನ್ಯವಾಗಿ ವಾರ್ಷಿಕ 4302 ಮಿ.ಮೀ ಮಳೆ ಬೀಳುತ್ತದೆ. ಜಿಲ್ಲೆಯ ಮಣ್ಣು ಮೂರು ನಮೂನೆಗಳನ್ನು ಹೊಂದಿದೆ – ಕರಾವಳಿಯ ಮೆಕ್ಕೆ ಮಣ್ಣು, ಕೆಂಪುಜೇಡು ಮೇಲ್ಮಣ್ಣು ಮತ್ತು ಫಲವತ್ತಾದ ಕೆಂಪುಮಣ್ಣು. ಹೆಚ್ಚು ಮಳೆ ಬೀಳುವುದರಿಂದ ಸಾಮಾನ್ಯವಾಗಿ ಇಲ್ಲಿಯ ಮಣ್ಣು ಆಮ್ಲದಿಂದ ಕೂಡಿರುತ್ತದೆ. ಆದರೆ ಸಾರಜನಕ ಮತ್ತು ರಂಜಕಗಳನ್ನು ಒಳಗೊಂಡು ಅದು ಫಲವತ್ತತೆಯಿಂದ ಕೂಡಿರುತ್ತದೆ. ಜಿಲ್ಲೆಯು ಗುಡ್ಡಗಳು ಮತ್ತು ದಟ್ಟ ಅರಣ್ಯ ಪ್ರದೇಶಗಳಿಂದ ಕೂಡಿದ್ದು ಜಿಲ್ಲೆಯ ಶೇ.26ರಷ್ಟು ಭಾಗವು ದಟ್ಟವಾದ ಘಟ್ಟ ಪ್ರದೇಶಗಳಿಂದ ಕೂಡಿದೆ[7]. ಪಶ್ಚಿಮ ಘಟ್ಟಗಳ ತಲದಲ್ಲಿ ಹಲವಾರು ನದಿಗಳು ಹುಟ್ಟಿ, ಪಶ್ಚಿಮಾಭಿಮುಖವಾಗಿ ಹರಿದು, ಅರಬ್ಬಿ ಸಮುದ್ರವನ್ನು ಸೇರುತ್ತವೆ. ಸೀತಾನದಿ, ಸ್ವರ್ಣಾನದಿ, ಶಾಂಭವಿ, ಚಕ್ರ, ವರಾಹಿ ಮತ್ತು ಗಂಗೊಳ್ಳಿಯು ಪ್ರಮುಖ ನದಿಗಳಾಗಿವೆ.

ಉಡುಪಿ ಜಿಲ್ಲೆಯ ಸಾಮಾನ್ಯ ವಿವರಗಳು

ಜಿಲ್ಲೆಯು ಯಾತ್ರಾ ಸ್ಥಳಗಳಿಗೆ ಮತ್ತು ಸಾಂಸ್ಕೃತಿಕ ವೈವಿಧ್ಯತೆಗಳಿಗೆ ಹೆಸರುವಾಸಿಯಾಗಿದೆ. ಹದಿಮೂರನೇ ಶತಮಾನದಲ್ಲಿ ಮಧ್ವಾಚಾರ್ಯರಿಂದ ಸ್ಥಾಪಿತವಾದ ಕೃಷ್ಣ ದೇವಾಲಯ, ಅಷ್ಟ ಮಠಗಳು ಮತ್ತು ಎಂಟನೇ ಶತಮಾನದಲ್ಲಿ ಆದಿ ಶಂಕರಾಚಾರ್ಯರಿಂದ ಪ್ರತಿಷ್ಠಾಪಿತವಾದ ಮೂಕಾಂಬಿಕಾ ದೇವಾಲಯಗಳು ಜಿಲ್ಲೆಯ ಪ್ರಮುಖ ಯಾತ್ರಾ ಸ್ಥಳಗಳಾಗಿವೆ. ಮಲ್ಪೆ, ಕಾಪು, ತ್ರಾಸಿ ಮತ್ತು ಮರವಂತೆ ಕಡಲ ತೀರಗಳಾಗಿ ಹೆಸರುವಾಸಿಯಾಗಿವೆ. ಸೈಂಟ್ ಮೇರಿ ದ್ವೀಪ ನೈಸರ್ಗಿಕ ಸೌಂದರ್ಯದಿಂದ ಕೂಡಿದೆ. ಪಶ್ಚಿಮ ಘಟ್ಟಗಳ ಕುದಿತೀರ್ಥ ಜಲಪಾತ, ಬರಕಾಣ ಜಲಪಾತ, ಸೋಮೇಶ್ವರ ವನ್ಯಜೀವಿಧಾಮ ಮತ್ತು ಮೂಕಾಂಬಿಕಾ ವನ್ಯಜೀವಿ ಧಾಮಗಳು ಪ್ರೇಕ್ಷಣೀಯ ಸ್ಥಳಗಳಾಗಿವೆ[8]. ಐತಿಹಾಸಿಕ ಸ್ಥಳಗಳಾದ ಬಾರ್ಕೂರು, ಉದ್ಯಾವರ ಮತ್ತು ಕಾರ್ಕಳಗಳಲ್ಲಿನ ಸ್ಮಾರಕಗಳು ಪ್ರಮುಖವಾಗಿವೆ[9]. ಜಿಲ್ಲೆಯು ಯಕ್ಷಗಾನ, ಭೂತಕೋಲ, ಕಂಬಳ, ಜಾನಪದ ಕಲೆಗಳಿಗೂ, ವಿವಿಧ

ಜಾತ್ರೆ ಮತ್ತು ಹಬ್ಬಗಳಿಗೂ ಪ್ರಸಿದ್ಧಿಯಾಗಿದೆ. ಜಿಲ್ಲೆಯ ಆಂತರಿಕ ಮತ್ತು ಬಾಹ್ಯ ಸಾರಿಗೆ ವ್ಯವಸ್ಥೆಯು ದೇಶದ ಉತ್ತಮ ಸಾರಿಗೆ ಜಾಲಗಳಲ್ಲಿ ಒಂದಾಗಿದೆ. ರಾಜ್ಯ ಹೆದ್ದಾರಿಗಳು ನಗರ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಿವೆ. ರಾಷ್ಟ್ರೀಯ ಹೆದ್ದಾರಿ ಜಿಲ್ಲೆಯ ಮೂಲಕ ಹಾದುಹೋಗುತ್ತವೆ. ಬಜಪೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ನವಮಂಗಳೂರು ಬಂದರು ಉಡುಪಿ ಜಿಲ್ಲೆಯ ಸನಿಹದಲ್ಲಿದೆ. ಜಿಲ್ಲೆಯ ಮಲ್ಪೆ, ಗಂಗೊಳ್ಳಿ ಮತ್ತು ಮರವಂತೆಗಳಲ್ಲೂ ಸಣ್ಣ ಬಂದರುಗಳಿವೆ. ದೇಶದ ಬ್ಯಾಂಕಿಂಗ್ ನಕ್ಷೆಯಲ್ಲಿ ಉಡುಪಿ ಜಿಲ್ಲೆ ವಿಶಿಷ್ಟ ಸ್ಥಾನ ಪಡೆದಿದೆ. ಜಿಲ್ಲೆಯಲ್ಲಿ 22 ಬ್ಯಾಂಕುಗಳಿದ್ದು, ಅದರ 230 ಶಾಖೆಗಳಲ್ಲಿ 136 ಶಾಖೆಗಳು ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿ 5000ಕ್ಕಿಂತಲೂ ಕಡಿಮೆ ಜನಸಂಖ್ಯೆಗೆ ಒಂದು ಬ್ಯಾಂಕ್ ಶಾಖೆ ಇದೆ. ಜಿಲ್ಲೆಯ ತಲಾ ವರಮಾನ ರೂ.30,167ರಷ್ಟಿದೆ[10]. ಉಡುಪಿ ಜಿಲ್ಲೆಯ ಅಭಿವೃದ್ಧಿ ಉತ್ತಮವಾಗಿದ್ದು, ತಲಾ ಒಟ್ಟು ಆಂತರಿಕ ಉತ್ಪನ್ನದಲ್ಲಿ ರಾಜ್ಯದಲ್ಲಿ ಎರಡನೆಯ ಸ್ಥಾನವನ್ನು, ಸಾಕ್ಷರತೆಯಲ್ಲಿ ಮೂರನೆಯ ಸ್ಥಾನವನ್ನು ಪಡೆದಿದೆ.

ಕೋಷ್ಟಕ – 2.1

ಉಡುಪಿ ಜಿಲ್ಲೆಯ ವಿವರಗಳು

ವಿವರಗಳು	**ಕರ್ನಾಟಕ ರಾಜ್ಯ**	**ಉಡುಪಿ ಜಿಲ್ಲೆ**
ಜನಸಂಖ್ಯೆ	6,11,30,709	11,77,708
ವಿಸ್ತೀರ್ಣ (ಚ.ಕಿ.ಮೀ.ಗಳಲ್ಲಿ)	1,91,791	3,575
ಜನಸಾಂದ್ರತೆ (ಪ್ರತೀ ಕಿ.ಮೀ.ಗೆ)	319	287
ಸಾಕ್ಷರತೆಯ ಮಟ್ಟ	75.60%	86.29%
ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಪಡೆದಿರುವವರ ರ್‍ಯಾಂಕ್	07 (ರಾಜ್ಯಗಳಲ್ಲಿ)	03 (ಜಿಲ್ಲೆಗಳಲ್ಲಿ)
ತಲಾ ವರಮಾನ	36,954	39,307
ಒಟ್ಟು ಆದಾಯ (ಲಕ್ಷಗಳಲ್ಲಿ)	2,11,66,253	4,73,922
ಲಿಂಗಾನುಪಾತ	1000 : 955	1000 : 1094

ಮೂಲ : ಕೇಂದ್ರ ಸರಕಾರ ಜನಗಣತಿ – 2011 ಮತ್ತು ಕರ್ನಾಟಕ ಸರಕಾರ – 2010

ಲಿಂಗ ಸಂಬಂಧಿ ನೆಲೆಯಲ್ಲಿ ಉಡುಪಿ ಜಿಲ್ಲೆಯ ಅವಲೋಕನ

2011ರ ಜನಗಣತಿಯ ಪ್ರಕಾರ ಉಡುಪಿ ಜಿಲ್ಲೆಯ ಜನಸಂಖ್ಯೆಯು ಒಟ್ಟು 11.77 ಲಕ್ಷ ಆಗಿದ್ದು, ಇದರಲ್ಲಿ 5.62 ಲಕ್ಷ ಪುರುಷರು ಮತ್ತು 6.15 ಲಕ್ಷ ಮಹಿಳೆಯರು[11]. 2001ರಲ್ಲಿ 11.12 ಲಕ್ಷ ಇದ್ದ ಜನಸಂಖ್ಯೆ, 2011ರಲ್ಲಿ 11.77 ಲಕ್ಷಕ್ಕೆ ಏರಿದೆ[12]. ರಾಜ್ಯದಲ್ಲಿನ ತುಲನಾತ್ಮಕ ದಶವಾರ್ಷಿಕ ಏರಿಕೆಯು ಪ್ರತಿಶತ 15.7ರಷ್ಟು ಆಗಿದೆ. ಇದರಲ್ಲಿ ಪುರುಷರ ಪಾಲು ಪ್ರತಿಶತ 47.7ರಷ್ಟು ಇದ್ದರೆ, ಮಹಿಳೆಯರು ಪ್ರತಿಶತ 52.3ರಷ್ಟು ಇದ್ದಾರೆ. ಹಾಗಾಗಿ ಲಿಂಗಾನುಪಾತವು 1000:1094 ಇದೆ[13]. ರಾಜ್ಯಕ್ಕೆ (1000:955)[14] ಹೋಲಿಸಿದಲ್ಲಿ ಜಿಲ್ಲೆಯಲ್ಲಿ ಒಳ್ಳೆಯ ಲಿಂಗವಾರು ಅನುಪಾತವಿದ್ದರೂ, 2001ರಲ್ಲಿ 1130 ಇದ್ದುದು, 2011ರಲ್ಲಿ 1094ಗೆ ಇಳಿತ ಕಂಡಿದೆ[15]. ತಾಲೂಕುವಾರು ನೋಡಿದಾಗ ಉಡುಪಿ ತಾಲೂಕಿನಲ್ಲಿ 5.63 ಲಕ್ಷ ಜನಸಂಖ್ಯೆ ಇದ್ದರೆ, ಕುಂದಾಪುರದಲ್ಲಿ 3.98 ಲಕ್ಷ ಮತ್ತು ಕಾರ್ಕಳದಲ್ಲಿ 2.16 ಲಕ್ಷ ಜನಸಂಖ್ಯೆಯಿದೆ. ಕುಂದಾಪುರದಲ್ಲಿ ಲಿಂಗಾನುಪಾತವು ಅತಿ ಹೆಚ್ಚು ಅಂದರೆ 1124 ಇದ್ದು, ಕಾರ್ಕಳವು 1086 ಹೊಂದಿದ್ದು ಎರಡನೆಯ ಸ್ಥಾನದಲ್ಲಿದೆ. ಉಡುಪಿಯಲ್ಲಿ ಬಹಳ ಕಡಿಮೆ ಅಂದರೆ 1077 ಇದೆ[16].

ಧರ್ಮದ ನೆಲೆಯಲ್ಲಿ ಜನಸಂಖ್ಯೆಯನ್ನು ಗುರುತಿಸುವುದಾದಲ್ಲಿ ಹಿಂದೂಗಳು ಒಟ್ಟು ಜನಸಂಖ್ಯೆಯ ಪ್ರತಿಶತ 84ರಷ್ಟಿದ್ದು, ನಂತರದ ಸ್ಥಾನದಲ್ಲಿ ಪ್ರತಿಶತ 11ರಷ್ಟು ಮುಸ್ಲಿಮರು ಮತ್ತು ಪ್ರತಿಶತ 4ರಷ್ಟು ಕ್ರಿಶ್ಚಿಯನ್ನರು ಇದ್ದಾರೆ. ಜೈನರು ಮತ್ತು ಇತರ ಸಮುದಾಯದವರು ಜಿಲ್ಲೆಯ ಜನಸಂಖ್ಯೆಯಲ್ಲಿ ಪ್ರತಿಶತ ಒಂದಕ್ಕಿಂತಲೂ ಕಡಿಮೆಯಿದ್ದಾರೆ[17]. ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಸಂಖ್ಯೆ ರಾಜ್ಯದಲ್ಲಿಯೇ ಅತಿ ಕಡಿಮೆ. ಒಟ್ಟು 11.77 ಲಕ್ಷ ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರು 75449 ಇದ್ದು, ಇದು ಪ್ರತಿಶತ 6.4 ಆಗಿದ್ದು ರಾಜ್ಯದಲ್ಲಿರುವ ಪ್ರತಿಶತ 17.2ಕ್ಕಿಂತಲೂ ಬಹಳ ಕಡಿಮೆಯಿದೆ[18]. ಪರಿಶಿಷ್ಟ ಪಂಗಡದ ಮಂದಿ 25897 ಇದ್ದು, 4.5% ಆಗಿದೆ ಮತ್ತು ರಾಜ್ಯದಲ್ಲಿ ಇದು 7% ಇದೆ. ಆದರೂ ದಶವಾರ್ಷಿಕ ಬೆಳವಣಿಗೆಯು 2001–2011ರಲ್ಲಿನ 5.9% ಇರುವ ಒಟ್ಟು ಜನಸಂಖ್ಯೆಗೆ ಹೋಲಿಸಿದಲ್ಲಿ ಗಮನಾರ್ಹವಾಗಿ ಹೆಚ್ಚಿದ್ದು, ಪರಿಶಿಷ್ಟ ಜಾತಿಯವರಲ್ಲಿ ಪ್ರತಿಶತ 11.4ರಷ್ಟು ಮತ್ತು ಪರಿಶಿಷ್ಟ ಪಂಗಡದವರಲ್ಲಿ ಪ್ರತಿಶತ 27.1ರಷ್ಟು ಆಗಿದೆ. ಲಿಂಗವಾರು ಸಾಂದ್ರತೆಯನ್ನು ನೋಡಿದರೆ ಪ್ರತಿಶತ 49ರಷ್ಟು ಪರಿಶಿಷ್ಟ ಜಾತಿಯ ಮಹಿಳೆಯರಿದ್ದು, ಪರಿಶಿಷ್ಟ ಪಂಗಡದವರಲ್ಲಿ ಇದು ಪ್ರತಿಶತ 50ರಷ್ಟಿದೆ. ಪರಿಶಿಷ್ಟ ಜಾತಿ (1039) ಮತ್ತು ಪರಿಶಿಷ್ಟ ಪಂಗಡದವರಲ್ಲಿ (1017) ಲಿಂಗಾನುಪಾತವಿದ್ದು ಇದು ಜಿಲ್ಲೆಯ ಸರಾಸರಿಯಾದ 1094ಗೆ ಕಡಿಮೆಯಿದ್ದರೂ ರಾಜ್ಯ ಮಟ್ಟದ ಪರಿಶಿಷ್ಟ ವರ್ಗದ

(989) ಮತ್ತು ಪರಿಶಿಷ್ಟ ಪಂಗಡದದ್ದಕ್ಕಿಂತ (990) ಹೆಚ್ಚಾಗಿದೆ[19]. ಉಡುಪಿ ತಾಲೂಕಿನಲ್ಲಿ ಅತಿ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿದ್ದಾರೆ. ಜಿಲ್ಲೆಯ ಒಟ್ಟು 75429 ಪರಿಶಿಷ್ಟ ಜಾತಿಯ ಜನರಲ್ಲಿ ಉಡುಪಿ ತಾಲೂಕಿನಲ್ಲಿ 32843 ಜನರಿದ್ದು ಇದು ಪ್ರತಿಶತ 43.5 ಆಗುತ್ತದೆ. ಹಾಗೆಯೇ 52897 ಪರಿಶಿಷ್ಟ ಪಂಗಡದವರಲ್ಲಿ 26087 ಜನರು ಉಡುಪಿ ತಾಲೂಕಿನಲ್ಲಿದ್ದಾರೆ. ಪ್ರತಿಶತ 74ರಷ್ಟು ಪರಿಶಿಷ್ಟ ಜಾತಿಯವರು ಮತ್ತು ಪ್ರತಿಶತ 79ರಷ್ಟು ಪರಿಶಿಷ್ಟ ಪಂಗಡದವರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಾರೆ[20].

2011ರ ಜನಗಣತಿಯ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆಯಾದ 11,77,361ರಲ್ಲಿ 5,62,131 ಪುರುಷರು ಮತ್ತು 6,15,230 ಸ್ತ್ರೀಯರು. ಜಿಲ್ಲೆಯಲ್ಲಿನ ಸ್ತ್ರೀಯರ ಪ್ರತಿಶತ ಪ್ರಮಾಣವು 52.3 ಆಗಿದ್ದು, ರಾಜ್ಯ ಸರಾಸರಿಯು ಪ್ರತಿಶತ 49.3ರಷ್ಟು ಆಗಿದೆ. ರಾಜ್ಯದ ಲಿಂಗಾನುಪಾತವು 955 ಇದ್ದು, ಜಿಲ್ಲೆಯ ಲಿಂಗಾನುಪಾತವು 1094 ಇದೆ. 2001ರಲ್ಲಿ ಜಿಲ್ಲೆಯ ಲಿಂಗಾನುಪಾತವು 1130 ಇತ್ತು. ರಾಜ್ಯದಲ್ಲಿಯೇ ಲಿಂಗಾನುಪಾತದಲ್ಲಿ ಅತ್ಯುತ್ತಮ ನಿರ್ವಹಣೆಯನ್ನು ಉಡುಪಿ ಜಿಲ್ಲೆ ತೋರಿದ್ದರೂ, ನೆರೆಯ ಜಿಲ್ಲೆ ದಕ್ಷಿಣ ಕನ್ನಡ (1022) ಮತ್ತು ನೆರೆಯ ರಾಜ್ಯ ಕೇರಳಗಳಿಂದ (1058) ಉತ್ತಮ ಸ್ಥಿತಿಯಲ್ಲಿದ್ದರೂ, ಲಿಂಗಾನುಪಾತದಲ್ಲಿ ಪ್ರತಿಶತ 3ರಷ್ಟು ಇಳಿಕೆಯಿದೆ[21].

ದೀರ್ಘ ಮತ್ತು ಆರೋಗ್ಯವಂತ ಜೀವನವನ್ನು ಜನನ ಕಾಲದ ಜೀವನ ನಿರೀಕ್ಷೆ (ಎಲ್.ಇ.ಬಿ.)ಯ ಮೂಲಕ ಅಳೆಯಲಾಗುತ್ತಿದ್ದು, ಇದು ಉತ್ತಮ ಆರೋಗ್ಯದ ಸಂಕ್ಷಿಪ್ತ ಮಾಪಕವಾಗಿ ಮತ್ತು ಹೆಚ್.ಡಿ.ಐ.ಯಲ್ಲಿನ ಆರೋಗ್ಯ ಆಯಾಮಗಳ ಸೂಚಕವಾಗಿಯೂ ಇದೆ. ಕಳೆದೆರಡು ದಶಕಗಳಲ್ಲಿ ಉಡುಪಿ ಜಿಲ್ಲೆಯು ಎಲ್.ಇ.ಬಿ.ಯಲ್ಲಿ ದೃಢ ಪ್ರಗತಿಯನ್ನು ಸಾಧಿಸಿದೆ. 1991ರಲ್ಲಿ ಜಿಲ್ಲೆಯ ಎಲ್.ಇ.ಬಿ. 66.1 ವರ್ಷಗಳಿದ್ದುದು, 2001ಕ್ಕೆ 67.8 ವರ್ಷಗಳಾಗಿವೆ. ಈಗ ಅದು 73 ವರ್ಷಕ್ಕೆ ಏರಿಕೆಯಾಗಿದೆ[22]. ಉಡುಪಿ ಜಿಲ್ಲೆಯ ಎಲ್.ಇ.ಬಿ.ಯು ರಾಷ್ಟ್ರದ ಸರಾಸರಿ ಎಲ್.ಇ.ಬಿ(65.8)ಗಿಂತ ಹಾಗೂ ರಾಜ್ಯದ ಸರಾಸರಿ(66.9)ಗಿಂತ ಹೆಚ್ಚಿದೆ[23]. ಈ ರೀತಿ ಉಡುಪಿಯು ಎಲ್.ಇ.ಬಿ.ಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಲಿಂಗವಾರು ಗಮನಿಸಿದಲ್ಲಿ ಮಹಿಳೆಯರ ಎಲ್.ಇ.ಬಿ.ಯು ಪುರುಷರಿಗಿಂತ ಹೆಚ್ಚಿದೆ. ಜಿಲ್ಲೆಯ ಆರೋಗ್ಯ ಸೇವೆಗಳು ತಾಯಿ ಮತ್ತು ಮಕ್ಕಳ ಆರೋಗ್ಯಕ್ಕಾಗಿ ಜನನಿ ಸುರಕ್ಷಾ ಯೋಜನೆ, ಮಡಿಲು ಕಿಟ್ ಚೈಲ್ಡ್ ಬರ್ಥ್, ತಾಯಿಭಾಗ್ಯ ಪ್ಲಸ್ ಮತ್ತು ಪ್ರಸೂತಿ ಆರೈಕೆಯಂತಹ ಹಲವಾರು ಯೋಜನೆಗಳನ್ನು ಒದಗಿಸಿವೆ. ಈ ಎಲ್ಲಾ ಯೋಜನೆಗಳು ಜಿಲ್ಲೆಯಲ್ಲಿ ಮಹಿಳೆಯರ ಮರಣ ಪ್ರಮಾಣವು ಕಡಿಮೆಯಾಗಿರುವುದಕ್ಕೆ ಮುಖ್ಯ ಕಾರಣವಾಗಿರುತ್ತದೆ[24]. ಎಂಡಿಜಿಗಳು ವಿಶ್ವ ಬಡತನ ನಿವಾರಣೆಗೆ, ಹಸಿವಿನ ತಡೆಗೆ, ಉದ್ಯೋಗದ ಹೆಚ್ಚಳಕ್ಕೆ, ಮೂಲಭೂತ ಮತ್ತು ಆರೋಗ್ಯ ಸೇವೆಗಳ ಒದಗಣೆಗೆ ಮತ್ತು ಇತರ ಸುಸ್ಥಿರ ಅಭಿವೃದ್ಧಿ

ಕ್ರಮಗಳ ಮೂಲಕ ಅಶಕ್ತ ಮತ್ತು ದುರ್ಬಲ ವರ್ಗದ ಜನರ, ಅದರಲ್ಲಿಯೂ ಮಹಿಳೆಯರ ಸ್ಥಿತಿಯನ್ನು ಉತ್ತಮಗೊಳಿಸುವ ಉದ್ದೇಶವನ್ನಿಟ್ಟುಕೊಂಡಿದೆ. ಭಾರತದಲ್ಲಿ ತಾಯಂದಿರ ಮರಣ ಪ್ರಮಾಣವು ಹೆಚ್ಚಾಗಿರುವುದಕ್ಕೆ ಅನೀಮಿಯಾ, ಅಪೌಷ್ಟಿಕತೆ ಮತ್ತು ಮನೆಗಳಲ್ಲಾಗುವ ಹೆಚ್ಚಿನ ಹೆರಿಗೆಗಳು ಕೆಲವು ಕಾರಣಗಳಾಗಿವೆ. ಎಂಡಿಜಿಯ ಆರಂಭಿಕ ಪ್ರಗತಿ ವರದಿಯಲ್ಲಿ ಭಾರತದಲ್ಲಿನ ತಾಯಂದಿರ ಮರಣ ಪ್ರಮಾಣದ ಹೆಚ್ಚಳವು, ದಕ್ಷಿಣ ಏಷ್ಯಾ ವಲಯದಲ್ಲಿನ ತಾಯಂದಿರ ಮರಣ ಪ್ರಮಾಣ ತಡೆಯ ದರವನ್ನು ಹಿಂದಕ್ಕೆಳೆಯುತ್ತಿದೆ ಎನ್ನಲಾಗಿತ್ತು. ಆದರೆ ಇತ್ತೀಚೆಗೆ ಸರಕಾರದ ಪ್ರಯತ್ನದಿಂದಾಗಿ ತಾಯಂದಿರ ಮರಣ ಪ್ರಮಾಣದ ಇಳಿಕೆಯಲ್ಲಿ ಧನಾತ್ಮಕ ಫಲಿತಾಂಶಗಳು ಬಂದಿದ್ದು, ಅದೇ ಉಡುಪಿ ಜಿಲ್ಲೆಯಲ್ಲಿಯೂ ಪ್ರತಿಬಿಂಬಿತವಾಗಿದೆ[25]. ಉಡುಪಿ ಜಿಲ್ಲೆಯು ತಾಯಂದಿರ ಮರಣ ಪ್ರಮಾಣ ಕಡಿಮೆಯಿರುವ ರಾಜ್ಯದ ಜಿಲ್ಲೆಗಳಲ್ಲಿ ಒಂದಾಗಿದೆ. ಇದಕ್ಕೆ ವಿರುದ್ಧವಾಗಿ ರಾಜ್ಯ ಸರಾಸರಿಯಲ್ಲಿ ತಾಯಂದಿರ ಮರಣ ಪ್ರಮಾಣವು 100000 ಜೀವಂತ ಜನನಗಳ ಸಮಯದಲ್ಲಿ 144 ಇದ್ದರೆ, ಉಡುಪಿಯಲ್ಲಿ ಈ ಪ್ರಮಾಣವು 50ರಷ್ಟು ಮಾತ್ರ ಇದೆ[26].

ಅಮರ್ತ್ಯಸೇನ್‌ರವರ ಪ್ರಕಾರ "ಶಿಕ್ಷಣವಿಲ್ಲದಿದ್ದರೆ ಜನರು ಬಡತನದ ಅಂಚಿಗೆ ಇಳಿಯುತ್ತಾರೆ ಮಾತ್ರವಲ್ಲ ಮೂಕರಂತಾಗುತ್ತಾರೆ. ಶಿಕ್ಷಣದ ಸ್ವೀಕೃತಿಯು ಜನರನ್ನು ಕ್ರಿಯಾತ್ಮಕವಾಗಿ ಸಶಕ್ತರಾಗಿಸಿ ಮತ್ತು ಅವರ ಜೀವನದ ಆಯ್ಕೆಗಳನ್ನು ಸಾಧಿಸಲು, ಅವಕಾಶಗಳನ್ನು ಪಡೆದುಕೊಳ್ಳಲು, ಪರ್ಯಾಯ ವಿಷಯಗಳಲ್ಲಿ ತಮಗೆ ಉತ್ತಮವಾಗಿರುವುದನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯಗಳನ್ನು ವಿಸ್ತಾರಗೊಳಿಸುತ್ತದೆ. ಹೆಚ್ಚಿನ ಮತ್ತು ಅಂತರ್ಗತ ಬೆಳವಣಿಗೆಗೆ, ಸಮರ್ಪಕ ಜ್ಞಾನ ಮತ್ತು ಕೌಶಲಗಳನ್ನು ಹೊಂದಿರುವ ಸುಶಿಕ್ಷಿತ ಜನತೆಯ ಅಗತ್ಯವಿದೆ. ಆದುದರಿಂದ ಅದು ಮಾನವ ಸಾಮರ್ಥ್ಯ ಹೆಚ್ಚಿಸುವ, ಅವಕಾಶ ವೃದ್ಧಿಸುವ ಮತ್ತು ಸ್ಪಷ್ಟ ಬೆಳವಣಿಗೆಯ ಸಬಲೀಕರಣವಾಗಿ ಮನ್ನಣೆ ಪಡೆಯುತ್ತದೆ. ಹಾಗಾಗಿ ಶಿಕ್ಷಣವು ಉತ್ತಮ ಆರೋಗ್ಯಮಟ್ಟ, ಉತ್ತಮ ಉದ್ಯೋಗಾವಕಾಶ, ಉತ್ತಮ ಸಾಮಾಜಿಕ ಸಂಪರ್ಕ ಮತ್ತು ನಾಗರಿಕ ಹಾಗೂ ರಾಜಕೀಯ ಜೀವನದಲ್ಲಿ ಹೆಚ್ಚಿನ ಭಾಗವಹಿಸುವಿಕೆ ಸಾಧಿಸುವಲ್ಲಿ ನಿಕಟ ಸಂಗಾತಿಯಂತಿದೆ"[27] ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಜಿಲ್ಲೆಯಲ್ಲಿ ಆಧುನಿಕ ಶಿಕ್ಷಣ ವ್ಯವಸ್ಥೆಯು ಕೇವಲ ಇತ್ತೀಚಿನ ಇತಿಹಾಸವನ್ನು ಹೊಂದಿದೆ. ಜಿಲ್ಲೆಯಲ್ಲಿ ಪ್ರಾರಂಭಿಕ ದಿನಗಳಲ್ಲಿನ ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಕ್ರಿಶ್ಚಿಯನ್ ಮಿಷನರಿಗಳ ಕೊಡುಗೆಯು ಮಹತ್ತರವಾದುದು[28]. ಮೊದಲ ಪ್ರಾಥಮಿಕ ಶಾಲೆಯು 1832ರಲ್ಲಿ ಮಂಗಳೂರಿನಲ್ಲಿ ಆರಂಭವಾಯಿತು. ಬಾಸೆಲ್ ಮಿಶನ್‌ನಿಂದ ನಡೆಸಲ್ಪಡುವ ಶಾಲೆಗಳ ಸಂಖ್ಯೆ ಹೆಚ್ಚಾಗುತ್ತಾ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ಈ

ಸಂಖ್ಯೆ 300ನ್ನು ತಲುಪಿತು. ಈ ವಿದ್ಯಾಸಂಸ್ಥೆಗಳು ಮಂಗಳೂರು, ಉಡುಪಿ ಮತ್ತಿತರ ಪಟ್ಟಣಗಳಲ್ಲಿ ಅಲ್ಲದೇ ಸುತ್ತಲಿನ ಗ್ರಾಮೀಣ ಪ್ರದೇಶಗಳಲ್ಲೂ ಕಾರ್ಯನಿರ್ವಹಿಸುತ್ತಿದ್ದವು. 1855–56ರಲ್ಲಿ ಮದ್ರಾಸು ಪ್ರೆಸಿಡೆನ್ಸಿಯ ಶಿಕ್ಷಣ ವಿಭಾಗದ ಸ್ಥಾಪನೆಯೊಂದಿಗೆ 'ಹೊಸ ಶಿಕ್ಷಣ ವ್ಯವಸ್ಥೆ'[29]ಯು ಬ್ರಿಟೀಷರಿಂದ ಪರಿಚಯಿಸಲ್ಪಟ್ಟು ಮುಖ್ಯವಾಗಿ ಪಟ್ಟಣ ಪ್ರದೇಶಗಳಲ್ಲಿ ಶಾಲೆಗಳು ಆರಂಭಗೊಂಡವು. 1857ರಲ್ಲಿ ಮದರಾಸು ವಿಶ್ವವಿದ್ಯಾಲಯವು ಆರಂಭಗೊಂಡು ಗಣ್ಯ ಸಮುದಾಯಗಳಿಗೆ ಉನ್ನತ ಶಿಕ್ಷಣಕ್ಕೆ ದಾರಿ ಮಾಡಿಕೊಟ್ಟಿತು[30]. ವಿವಿಧ ಆರಂಭಿಕ ಪ್ರಯತ್ನಗಳಿದ್ದರೂ ಜಿಲ್ಲೆಯ ಜನಸಂಖ್ಯೆಯಲ್ಲಿ ಮುಕ್ಕಾಲು ಪಾಲಿಗಿಂತ ಹೆಚ್ಚು ಮಂದಿ ಸ್ವಾತಂತ್ರ್ಯ ದೊರೆತ ಸಮಯದವರೆಗೂ ನಿರಕ್ಷರರಾಗಿದ್ದರು. ಈಗಿನ ಉಡುಪಿ ಜಿಲ್ಲೆಯ ಮೂರು ತಾಲೂಕುಗಳಲ್ಲಿಯೂ ಯಾವುದೇ ಕಾಲೇಜು ಇರಲಿಲ್ಲ.

ಸ್ವಾತಂತ್ರ್ಯಾನಂತರ ಸರಕಾರವು ಈ ನಿಟ್ಟಿನಲ್ಲಿ ಮುಂಚೂಣಿಯಲ್ಲಿದ್ದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಹಲವಾರು ಕ್ಷೇತ್ರಗಳಲ್ಲಿ ತೊಡಗಿಕೊಂಡಿತು. ಸರಕಾರವು ಹೆಚ್ಚಿನ ಪಟ್ಟಣ ಕೇಂದ್ರಗಳಲ್ಲಿ ಪ್ರೌಢ ಶಿಕ್ಷಣ ಆರಂಭಿಸಲು ಪ್ರೌಢ ಶಾಲೆಗಳನ್ನು ಸ್ಥಾಪಿಸಿತು. ಸಾರ್ವಜನಿಕ ಕ್ಷೇತ್ರವು ಖಾಸಗಿಯವರಿಂದಲೂ ಬೆಂಬಲಿಸಲ್ಪಟ್ಟಿತು. ಮಣಿಪಾಲದ ಡಾ. ಟಿ.ಎಂ.ಎ.ಪೈ ಅವರು ಜಿಲ್ಲೆಯಲ್ಲಿ ಉನ್ನತ ಶಿಕ್ಷಣಕ್ಕೆ ಪ್ರವರ್ತಕರಾಗಿ 'ಅಕಾಡೆಮಿ ಆಫ್ ಜನರಲ್ ಎಜುಕೇಶನ್' ಸ್ಥಾಪಿಸಿದರು. ಮಣಿಪಾಲದಲ್ಲಿ 1953ರಲ್ಲಿ ಆರಂಭಗೊಂಡ ಕಸ್ತೂರ್ಬಾ ಮೆಡಿಕಲ್ ಕಾಲೇಜು ಭಾರತದಲ್ಲಿಯೇ ಮೊದಲ ಖಾಸಗಿ ಪ್ರಯತ್ನವಾಗಿತ್ತು. ಆ ಬಳಿಕ ತಾಂತ್ರಿಕ ಮಹಾವಿದ್ಯಾಲಯ, ಕಾನೂನು ಮಹಾವಿದ್ಯಾಲಯ ಮತ್ತು ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳು ಆರಂಭಗೊಂಡವು. ಈ ಎಲ್ಲದರಿಂದ ಇಂದು ಮಣಿಪಾಲ ವಿಶ್ವವಿದ್ಯಾಲಯವೆಂದು ಕರೆಯಲ್ಪಡುತ್ತಿರುವ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ) ಸಂಸ್ಥೆಯು ಡೀಮ್ಡ್ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು[31].

ಮಣಿಪಾಲದ ಪ್ರಯೋಗದಿಂದ ಇತರರು ಸ್ಫೂರ್ತಿಗೊಂಡು ಹಲವಾರು ಖಾಸಗಿ ವಿದ್ಯಾಸಂಸ್ಥೆಗಳು ಜಿಲ್ಲೆಯಲ್ಲಿ ಆರಂಭವಾದವು. ನಿಟ್ಟೆ ವಿದ್ಯಾಸಂಸ್ಥೆ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವಿದ್ಯಾಸಂಸ್ಥೆ ಮತ್ತು ಅದಮಾರು ಎಜುಕೇಶನಲ್ ಕೌನ್ಸಿಲ್ ಇವು ಜಿಲ್ಲೆಯ ವಿದ್ಯಾಕ್ಷೇತ್ರದಲ್ಲಿ ಮುಂದುವರಿದಿರುವ ಮುಖ್ಯ ಖಾಸಗಿ ಸಂಸ್ಥೆಗಳು. ಮಣಿಪಾಲದಲ್ಲಿರುವ ಮಣಿಪಾಲ ವಿಶ್ವವಿದ್ಯಾಲಯ, ನಿಟ್ಟೆ ವಿದ್ಯಾಸಂಸ್ಥೆಗಳು ದೇಶದಲ್ಲಿಯೇ ಹೆಸರು ಪಡೆದ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳಾಗಿವೆ. ಬಂಟಕಲ್‌ನಲ್ಲಿರುವ ಶ್ರೀ ಮಧ್ವ ವಾದಿರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಇತ್ತೀಚೆಗಿನ ಸೇರ್ಪಡೆ. ಬ್ರಹ್ಮಾವರದಲ್ಲಿರುವ

ವಲಯ ಕೃಷಿ ಸಂಶೋಧನಾ ಕೇಂದ್ರವು ಕೃಷಿಕರಿಗೆ ಆಧುನಿಕ ತಂತ್ರಜ್ಞಾನವನ್ನು ಒದಗಿಸಿ ಅವರಿಗೆ ಉತ್ತಮ ಕೃಷಿ ಸಂಬಂಧೀ ಶಿಕ್ಷಣವನ್ನು ನೀಡುತ್ತದೆ[32].

ಸ್ವಾತಂತ್ರ್ಯಾನಂತರ ಉಡುಪಿ ಜಿಲ್ಲೆಯು ಸಾಕ್ಷರತೆಯಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಉಡುಪಿ ಜಿಲ್ಲೆಯಲ್ಲಿ 2011ರ ಜನಗಣತಿಯ ಪ್ರಕಾರ ಸಾಕ್ಷರತೆಯ ಪ್ರಮಾಣವು ಪ್ರತಿಶತ 86.24ರಷ್ಟು ಇದೆ[33]. ಸಾಕ್ಷರತೆಯ ಪ್ರಮಾಣದಲ್ಲಿ ಉಡುಪಿ ಜಿಲ್ಲೆಯು ರಾಜ್ಯದಲ್ಲಿ ದಕ್ಷಿಣ ಕನ್ನಡ(88.62) ಮತ್ತು ಬೆಂಗಳೂರು ನಗರ(88.48)ಗಳ ನಂತರದ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ 2001–11ರ ದಶಕದಲ್ಲಿ ಸಾಕ್ಷರತಾ ಪ್ರಮಾಣವು ಪ್ರತಿಶತ 6ರಷ್ಟು ಏರಿಕೆಯಾಗಿದೆ. ಶೇ.81.25 ರಿಂದ ಶೇ.86.24 ಸಂಪೂರ್ಣ ಸಂಖ್ಯೆಗೆ ಸಂಬಂಧಿಸಿ ಹೇಳುವುದಾದರೆ ಜಿಲ್ಲೆಯ ಸಾಕ್ಷರತಾ ಪ್ರಮಾಣವು ಕಳೆದ ದಶಕದಲ್ಲಿ (2001–11) 810584 ರಿಂದ 926429ರಷ್ಟು (ಶೇಕಡಾ 14.3) ಅಧಿಕವಾಗಿದೆ. ಜಿಲ್ಲೆಯ ವಯಸ್ಕ ಅನಕ್ಷರಸ್ಥರ ಸಂಖ್ಯೆಯು 2001ರಲ್ಲಿ 187078ರಷ್ಟು ಇದ್ದು, ಪ್ರಸ್ತುತ ಈ ಪ್ರಮಾಣ 147772ಕ್ಕೆ ಇಳಿಕೆಯಾಗಿದೆ[34]. ಅನಕ್ಷರತೆ ಪ್ರತಿಶತ 21ರಷ್ಟು ಕಡಿಮೆಯಾಗಿದ್ದು ಈಗಲೂ ಒಟ್ಟು ವಯಸ್ಕ ಜನಸಂಖ್ಯೆಯಲ್ಲಿ 14 ಪ್ರತಿಶತ ಇದೆ. ಅಲ್ಲದೇ, ಜಿಲ್ಲೆಯ 147772 ನಿರಕ್ಷರರಲ್ಲಿ 104034 ಜನರು ಮಹಿಳೆಯರಾಗಿದ್ದು ಇದು ಪ್ರತಿಶತ 70ರಷ್ಟಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ[35]. ಆದರೂ ನೆರೆಯಲ್ಲಿರುವ ದಕ್ಷಿಣಕನ್ನಡ ಜಿಲ್ಲೆಗೆ ಹೋಲಿಸಿದಲ್ಲಿ ಉಡುಪಿ ಜಿಲ್ಲೆಯ ಸಾಕ್ಷರತೆಯು ಪ್ರತಿಶತ 2.76ರಷ್ಟು ಕಡಿಮೆಯಿದೆ[36].

2011ರ ಜನಗಣತಿಯಂತೆ ಜಿಲ್ಲೆಯ ಗಂಡಸರಲ್ಲಿ ಸಾಕ್ಷರತಾ ಪ್ರಮಾಣವು ಪ್ರತಿಶತ 91.4 ಮತ್ತು ಹೆಂಗಸರಲ್ಲಿ ಪ್ರತಿಶತ 81.6 ಇದೆ. ಇದು ರಾಜ್ಯ ಮಟ್ಟದಲ್ಲಿ ಪ್ರತಿಶತ 82.5 ಮತ್ತು ಪ್ರತಿಶತ 68.1ರಷ್ಟು ಇದೆ[37]. ಉಡುಪಿ ಜಿಲ್ಲೆಯು ರಾಜ್ಯದಲ್ಲಿ ಗಂಡಸರು ಮತ್ತು ಹೆಂಗಸರ ಸಾಕ್ಷರತಾ ಪ್ರಮಾಣವೆರಡರಲ್ಲಿಯೂ ಮೂರನೆಯ ಸ್ಥಾನದಲ್ಲಿದೆ. ಆದರೂ ದಶಕದ ಸಾಕ್ಷರತಾ ಪ್ರಮಾಣದಲ್ಲಿನ ಬೆಳವಣಿಗೆಯು ಕೇವಲ ಪ್ರತಿಶತ 6.3ರಷ್ಟು ಆಗಿದ್ದು, ರಾಜ್ಯಮಟ್ಟದಲ್ಲಿ ಈ ಪ್ರಮಾಣ ಪ್ರತಿಶತ 13.1ರಷ್ಟು ಇದೆ. ದಶಕವಾರು ಪ್ರಗತಿಯಲ್ಲಿ ಗಂಡಸರ ಸಾಕ್ಷರತೆಯ ಪ್ರಮಾಣವು 3.6ರಷ್ಟು ಇದ್ದು, ಹೆಂಗಸರ ಸಾಕ್ಷರತಾ ಪ್ರಮಾಣವು 8.5ರಷ್ಟಿದೆ. ಹೆಂಗಸರ ಗಣನೀಯ ಸಾಕ್ಷರತಾ ಪ್ರಮಾಣವು ಲಿಂಗಾಧಾರಿತ ಸಾಕ್ಷರತಾ ಅಸಮಾನತೆಯನ್ನು ಕಿರಿದುಗೊಳಿಸಿದ್ದು, 2001ರಲ್ಲಿ 13.04 ಇದ್ದುದು 2011ರಲ್ಲಿ 9.83 ಆಗಿದೆ. ರಾಜ್ಯ ಮಟ್ಟದಲ್ಲಿನ ಪ್ರತಿಶತ 14.4ರಷ್ಟು ಲಿಂಗ ಅಸಮಾನತೆಯನ್ನು ಗಮನಿಸಿದರೆ ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಗಣನೀಯವಾಗಿ ಕಡಿಮೆಯಿದೆ[38]. ತಾಲೂಕುಗಳ ನಡುವೆ ಸಾಕ್ಷರತಾ ಪ್ರಮಾಣದಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲ. ಕುಂದಾಪುರದಲ್ಲಿ ಕನಿಷ್ಠ ಎಂದು ಗುರುತಿಸಲ್ಪಡುವ

ಪ್ರತಿಶತ 81.6ರಷ್ಟು ಸಾಕ್ಷರತಾ ಪ್ರಮಾಣವಿದ್ದು, ಪ್ರತಿಶತ 86.7ರಷ್ಟು ಇರುವ ಕಾರ್ಕಳವು ಎರಡನೆಯ ಸ್ಥಾನದಲ್ಲಿದೆ. ಉಡುಪಿ ತಾಲೂಕು ಅತಿ ಹೆಚ್ಚು ಸಾಕ್ಷರತಾ ಪ್ರಮಾಣವನ್ನು ದಾಖಲು ಮಾಡಿದ್ದು ಇದು ಪ್ರತಿಶತ 89.3ರಷ್ಟು ಇದೆ. ಉಡುಪಿ ಮತ್ತು ಕುಂದಾಪುರ ತಾಲೂಕುಗಳ ನಡುವಿನ ಸಾಕ್ಷರತಾ ಪ್ರಮಾಣವು ಪ್ರತಿಶತ 7.7 ಆಗಿದ್ದು, ಕಾರ್ಕಳ ತಾಲೂಕಿನದು ಪ್ರತಿಶತ 2.6ರಷ್ಟು ಇದೆ. ಲಿಂಗಾಧಾರಿತ ದತ್ತಾಂಶ ವಿಶ್ಲೇಷಣೆಯು ಗಂಡು ಮತ್ತು ಹೆಣ್ಣು ಸಾಕ್ಷರರಲ್ಲಿ ಕುಂದಾಪುರದಲ್ಲಿ ಕನಿಷ್ಟ ಮತ್ತು ಉಡುಪಿಯಲ್ಲಿ ಗರಿಷ್ಟ ಸಾಕ್ಷರತಾ ಪ್ರಮಾಣವನ್ನು ತೋರಿಸುತ್ತದೆ. ಗರಿಷ್ಟ ಮತ್ತು ಕನಿಷ್ಟದಲ್ಲಿ ಗಂಡಸರ ಸಾಕ್ಷರತೆಯು ಪ್ರತಿಶತ 4.9 ಇದ್ದು ಹೆಂಗಸರಲ್ಲಿ ಪ್ರತಿಶತ 9.9 ಇದೆ[39].

ಶಿಕ್ಷಣದ ಪ್ರಾಪ್ತಿ ಮತ್ತು ಲಿಂಗ ಸಬಲೀಕರಣದ ನಡುವೆ ಹತ್ತಿರದ ಸಂಬಂಧವಿದೆ ಮತ್ತು ಲಿಂಗ ಸಮಾನತೆಯು ಅನೇಕ ಪ್ರಾಯೋಗಿಕ ಅಧ್ಯಯನಗಳಿಂದ ರುಜುವಾತಾಗಿದೆ. ಮಹಿಳಾ ಶಿಕ್ಷಣವು ಆರೋಗ್ಯದ ಮಟ್ಟ, ಫಲವಂತಿಕೆಯ ಇಳಿತ, ವಿವಾಹದ ಪ್ರಾಯದಲ್ಲಿನ ಏರಿಕೆ, ಸಣ್ಣ ಗಾತ್ರದ ಕುಟುಂಬ, ಮಕ್ಕಳ ಶಿಕ್ಷಣ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಹೆಚ್ಚಿನ ಆದಾಯ ಗಳಿಸುವಿಕೆಯ ಸಾಮರ್ಥ್ಯ ಹಾಗೂ ರಾಜಕೀಯ ಭಾಗವಹಿಸುವಿಕೆ ಇವೆಲ್ಲವುಗಳ ಸಂಪರ್ಕ ಕೊಂಡಿಯಾಗಿದೆ. ಉಡುಪಿ ಜಿಲ್ಲೆಯಲ್ಲಿ ಅತಿ ಹೆಚ್ಚು ಮಹಿಳಾ ಸಾಕ್ಷರತಾ ಪ್ರಮಾಣವಿದ್ದು, ರಾಜ್ಯ ಮಟ್ಟದಲ್ಲಿ ಬೆಂಗಳೂರು ನಗರ(ಶೇ.84.8)[40] ಮತ್ತು ದಕ್ಷಿಣಕನ್ನಡ(ಶೇಕಡಾ 84.04)[41]ಗಳ ನಂತರದ ಸ್ಥಾನವನ್ನು ತನ್ನದಾಗಿಸಿಕೊಂಡಿದೆ.

2001–11ರಲ್ಲಿ ಮಹಿಳೆಯರಲ್ಲಿನ ಅನಕ್ಷರಸ್ಥರ ಪ್ರಮಾಣದಲ್ಲಿ ಪ್ರತಿಶತ ಶೇ.2.4ರಷ್ಟು ಇಳಿಕೆಯಾಗಿದೆ ಮತ್ತು ಪುರುಷರಲ್ಲಿನ ಅನಕ್ಷರತೆಗೆ ಹೋಲಿಸಿದರೆ ಪ್ರತಿಶತ 1.5 ಕಡಿಮೆ ಇದೆ. ಕಳೆದ ದಶಕದಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣಗಳಲ್ಲಿನ ಹೆಣ್ಣುಮಕ್ಕಳ ನೋಂದಣಿಯಲ್ಲಿ ಗಣನೀಯವಾಗಿ ಏರಿಕೆಯಾಗಿದೆ. 1998–99ರಲ್ಲಿ ಹೆಣ್ಣುಮಕ್ಕಳ ಭಾಗವಹಿಸುವಿಕೆಯ ಪ್ರಮಾಣವು ಪ್ರಾಥಮಿಕ ಶಿಕ್ಷಣದಲ್ಲಿ ಪ್ರತಿಶತ 42ರಷ್ಟು ಇದ್ದು, ಇದು ಈಗ ಪ್ರತಿಶತ 48ಕ್ಕೆ ಏರಿಕೆಯಾಗಿದೆ[42]. ಹಾಗೆಯೇ, ಮಾಧ್ಯಮಿಕ ಶಿಕ್ಷಣ ಮತ್ತು ಪಿಯುಸಿಯಲ್ಲಿ ಅವರ ಭಾಗವಹಿಸುವಿಕೆಯ ಅನುಪಾತವು ಹುಡುಗರ ಭಾಗವಹಿಸುವಿಕೆಯ ಅನುಪಾತಕ್ಕಿಂತ ಹೆಚ್ಚಿದೆ. ಸಾಮಾನ್ಯ ಉನ್ನತ ಶಿಕ್ಷಣದಲ್ಲಿ ಒಟ್ಟು ವಿದ್ಯಾರ್ಥಿಗಳು ಪ್ರತಿಶತ 59ರಷ್ಟು ಇದ್ದಾರೆ. ಈ ಎಲ್ಲಾ ಪ್ರವೃತ್ತಿಗಳು ಜಿಲ್ಲೆಯ ಶಿಕ್ಷಣದಲ್ಲಿ ಯಾವುದೇ ಲಿಂಗ ತಾರತಮ್ಯವಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತವೆ. ವೃತ್ತಿಪರ ಶಿಕ್ಷಣದಲ್ಲಿ, ಇತ್ತೀಚೆಗೆ ಅವರ ನೋಂದಣಿಯು ಹೆಚ್ಚಾಗುತ್ತಿದ್ದರೂ, ಅದು ಹುಡುಗರಿಗಿಂತ ಕಡಿಮೆ ಇದೆ[43]. ಎಂಜಿನಿಯರಿಂಗ್‌ನಲ್ಲಿ ಅವರ ನೋಂದಣಿಯು ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಪ್ರತಿಶತ 27ರಷ್ಟು ಇದೆ. ಇದೇ ರೀತಿಯ ಪ್ರವೃತ್ತಿಯು ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಪಾಲಿಟೆಕ್ನಿಕ್‌ಗಳಲ್ಲಿಯೂ ಇದೆ. ಇದು ಬಹುಶಃ ವೃತ್ತಿಪರ ಕಾಲೇಜುಗಳಿಗಿರುವ

ಹೆಚ್ಚಿನ ಶುಲ್ಕ, ಹೆತ್ತವರಲ್ಲಿನ ಗಂಡು ಮಕ್ಕಳ ವೃತ್ತಿಪರ ಕೋರ್ಸ್‌ಗಳ ಕಡೆಗಿರುವ ಹೆಚ್ಚಿನ ಒಲವು, ಹೆಣ್ಣು ಮಕ್ಕಳು ಸಾಂಪ್ರದಾಯಿಕ ಉನ್ನತ ಶಿಕ್ಷಣಕ್ಕೆ ಆದ್ಯತೆ ನೀಡುವುದು, ಸ್ಥಳೀಯವಾಗಿ ವೃತ್ತಿಪರ ಉದ್ಯೋಗಗಳು ಮಹಿಳೆಯರಿಗೆ ದೊರಕದಿರುವುದು, ಸ್ವಉದ್ಯೋಗ ಆರಂಭಿಸಲು ಅಡ್ಡಿ ಇತ್ಯಾದಿಗಳ ಕಾರಣದಿಂದಾಗಿರಬೇಕು[44].

ಕೃಷಿ ಮತ್ತು ಇತರ ಚಟುವಟಿಕೆಗಳು

ಜಿಲ್ಲಾ ಆರ್ಥಿಕತೆಗೆ ಕೃಷಿ ಪ್ರಮುಖ ಆಧಾರವಾಗಿದೆ. ಕೃಷಿ ಹವಾಗುಣಕ್ಕೆ ಅನುಗುಣವಾಗಿ ಜಿಲ್ಲೆಯು ಕರಾವಳಿ ಪ್ರದೇಶ, ಮಧ್ಯ ಬಯಲು ಪ್ರದೇಶ ಮತ್ತು ಪ್ರಶ್ಚಿಮ ಘಟ್ಟ ಪ್ರದೇಶವೆಂದು ವಿಂಗಡಣೆಯಾಗಿದೆ. ಜಿಲ್ಲೆಯ ಭೂ ಬಳಕೆಯ ಪ್ರವೃತ್ತಿಯು ಪ್ರಸ್ತುತಪಡಿಸುವಂತೆ ಜಿಲ್ಲೆಯ ಭೌಗೋಳಿಕ ಪ್ರದೇಶ 3.56 ಲಕ್ಷ ಹೆಕ್ಟೇರು[45]. ಅದರಲ್ಲಿ ಅರಣ್ಯ ಪ್ರದೇಶ 1 ಲಕ್ಷ ಹೆಕ್ಟೇರು, ಸಾಗುವಳಿಯಾದ ಪ್ರದೇಶ 0.99 ಲಕ್ಷ ಹೆಕ್ಟೇರು (ಶೇ.27), ಬೀಳುಬಿದ್ದ ಪ್ರದೇಶ 0.13 ಲಕ್ಷ ಹೆಕ್ಟೇರು (ಶೇ.4). ಉಳಿದ ಶೇ.48ರಷ್ಟು ಭೂಪ್ರದೇಶ ಸಾಗುವಳಿಗೆ ಲಭ್ಯವಿಲ್ಲ[46]. ಜಿಲ್ಲೆಯ ಒಟ್ಟು ಸಾಗುವಳಿ ಪ್ರದೇಶ 1.22 ಲಕ್ಷ ಹೆಕ್ಟೇರು. ಸಾಗುವಳಿಯ ಸಾಂದ್ರತೆ 1.23. ನೀರಾವರಿ ಸೌಲಭ್ಯಗಳ ಕೊರತೆಯಿಂದಾಗಿ ಸಾಗುವಳಿ ಸಾಂದ್ರತೆಯು ಕಡಿಮೆ ಪ್ರಮಾಣದಲ್ಲಿದೆ[47]. ಭತ್ತ (0.62 ಲಕ್ಷ ಹೆಕ್ಟೇರ), ದ್ವಿದಳ ಧಾನ್ಯಗಳು (0.08 ಲಕ್ಷ ಹಕ್ಟೇರು) ಮತ್ತು ಎಣ್ಣೆ ಕಾಳುಗಳು (0.02 ಲಕ್ಷ ಹೆಕ್ಟೇರು) ಮುಖ್ಯ ಬೆಳೆಗಳಾಗಿವೆ. ಒಟ್ಟು ಬಿತ್ತನೆ ಪ್ರದೇಶದಲ್ಲಿ ಶೇ.80 ಪ್ರದೇಶದಲ್ಲಿ ಭತ್ತದ ಸಾಗುವಳಿ ಇದ್ದರೆ ಶೇ. 14ರಷ್ಟು ಪ್ರದೇಶದಲ್ಲಿ ದ್ವಿದಳ ಧಾನ್ಯಗಳನ್ನು ಬಿತ್ತಲಾಗಿದೆ[48]. ಕಬ್ಬನ್ನು 2000 ಹೆಕ್ಟೇರು ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಆದರೆ ಬ್ರಹ್ಮಾವರ ಸಕ್ಕರೆ ಕಾರ್ಖಾನೆಯು ಸ್ಥಗಿತಗೊಂಡಿದ್ದರಿಂದ ಪ್ರಸ್ತುತ ಈ ಬೆಳೆಯನ್ನು ರೈತರು ಕೈಬಿಡುತ್ತಿದ್ದಾರೆ[49]. ಆಹಾರ ಬೆಳೆಗಳಿಗೆ ಸಂಬಂಧಿಸಿದಂತೆ ಅಧಿಕ ಸಾಗುವಳಿ ವೆಚ್ಚ ಮತ್ತು ಕಾರ್ಮಿಕರ ಕೊರತೆಯಿಂದಾಗಿ ಇತ್ತೀಚಿನ ದಿನಗಳಲ್ಲಿ ಅದರ ಸಾಗುವಳಿ ಪ್ರದೇಶದಲ್ಲಿ ಇಳಿಕೆ ಕಂಡುಬರುತ್ತಿದೆ. ಜಿಲ್ಲೆಯಲ್ಲಿ ತೋಟಗಾರಿಕಾ ಬೆಳೆಗಳು ಅಧಿಕ ಪ್ರಮಾಣದಲ್ಲಿದೆ. ತೆಂಗು, ಗೋಡಂಬಿ, ಅಡಿಕೆ ಮತ್ತು ರಬ್ಬರು ಇವು ಪ್ರಮುಖ ತೋಟಗಾರಿಕಾ ಬೆಳೆಗಳಾಗಿವೆ. ಹೂಗಳಲ್ಲಿ ಮಲ್ಲಿಗೆ ಕೃಷಿಗೆ ಪ್ರಾಧಾನ್ಯತೆ ನೀಡಿದ್ದು[50], ಜಿಲ್ಲೆಯಲ್ಲಿ ಮಾವು, ಸಪೋಟ, ಬಾಳೆಹಣ್ಣು, ಪೈನಾಪಲ್ ಮತ್ತು ತರಕಾರಿ ಮುಂತಾದ ತೋಟಗಾರಿಕಾ ಬೆಳೆಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಏರಿಕೆ ಕಂಡುಬಂದಿದೆ. ಕುಂದಾಪುರವು ತೋಟಗಾರಿಕಾ ಉತ್ಪಾದನೆಯ ಪ್ರಮುಖ ಕೇಂದ್ರವಾಗಿದೆ. ಜಿಲ್ಲೆಯಲ್ಲಿ ಸುಮಾರು ಎರಡು ಲಕ್ಷ ರೈತರಿದ್ದಾರೆ. ಇದರಲ್ಲಿ ಬಹುಪಾಲು ರೈತರು (ಶೇ.90) ಸಣ್ಣ ಮತ್ತು ಅತೀ ಸಣ್ಣ ಹಿಡುವಳಿದಾರರಾಗಿದ್ದು, ಇವರು ಪಡೆದಿರುವ

ಸರಾಸರಿ ಭೂಹಿಡುವಳಿ ಗಾತ್ರಗಳು 2 ಹೆಕ್ಟೇರುಗಳಿಗಿಂತಲೂ ಕಡಿಮೆ ಇದೆ. ಜಿಲ್ಲೆಯಲ್ಲಿ ಒಂದು ಹೆಕ್ಟೇರ್‌ಗಿಂತ ಕಡಿಮೆ ಭೂಮಿ ಹೊಂದಿರುವ ರೈತರು ಶೇ.79ರಷ್ಟಿದ್ದಾರೆ, ಶೇ.11ರಷ್ಟು ರೈತರು ಒಂದರಿಂದ ಎರಡು ಹೆಕ್ಟೇರ್‌ಗಳಷ್ಟು ಭೂಮಿ ಹೊಂದಿದವರು ಮತ್ತು ಶೇ.10ರಷ್ಟು ಮಧ್ಯಮ ಮತ್ತು ದೊಡ್ಡ ಹಿಡುವಳಿದಾರರು ಒಟ್ಟಾಗಿ ಶೇ.48ರಷ್ಟು ಪ್ರದೇಶದಲ್ಲಿ ಸಾಗುವಳಿ ಮಾಡುತ್ತಿದ್ದಾರೆ[51]. ಜಿಲ್ಲೆಯ ಕೃಷಿ ವಾತಾವರಣ, ಭೌತಿಕ ಭೌಗೋಳಿಕ ಸ್ಥಿತಿಯು ಜಿಲ್ಲೆಯಲ್ಲಿ ಪಶು ಸಂಗೋಪನೆ ಅಭಿವೃದ್ಧಿಗೆ ಪೂರಕವಾಗಿಲ್ಲವೆಂದು ಘೋಷಿಸಿದ್ದರೂ ಜಿಲ್ಲೆಯ ಗ್ರಾಮೀಣ ಪ್ರದೇಶದ ಅಂಚಿನ ಮತ್ತು ಬಡ ಸಮುದಾಯದ ಹೆಚ್ಚಿನ ಮಹಿಳೆಯರು ತಮ್ಮ ಜೀವನ ನಿರ್ವಹಣೆಗಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ[52].

ಮಹಿಳಾ ಶ್ರಮಶಕ್ತಿಯ ಮಾದರಿಯನ್ನು ನೋಡಿದಾಗ ಉಡುಪಿ ಜಿಲ್ಲೆಯಲ್ಲಿ ಮಹಿಳೆಯರ ಶ್ರಮಶಕ್ತಿಯ ಮಾದರಿಯಲ್ಲಿ ಕಳೆದ ದಶಕದಲ್ಲಿ ರಚನಾತ್ಮಕ ಬದಲಾವಣೆಯಾಗಿದೆ[53]. 2001ರಲ್ಲಿ ಸುಮಾರು ಪ್ರತಿಶತ 47ರಷ್ಟು ಮಹಿಳಾ ಶ್ರಮಶಕ್ತಿಯು ಕೃಷಿಯಲ್ಲಿ ವ್ಯಸ್ತವಾಗಿತ್ತು ಮತ್ತು ಪ್ರತಿಶತ 53ರಷ್ಟು ಮನೆಯ ಅಥವಾ ಇತರ ಕೃಷಿಯೇತರ ಉದ್ಯೋಗಗಳಲ್ಲಿತ್ತು[54]. ಇದಕ್ಕೆ ವಿರುದ್ಧವಾಗಿ 2011ರಲ್ಲಿ ಮಹಿಳಾ ಶ್ರಮಶಕ್ತಿಯ ಕೃಷಿಯಲ್ಲಿನ ವ್ಯಸ್ತತೆ ಪ್ರತಿಶತ 32ರಷ್ಟು ಕಡಿಮೆಯಾಗಿದ್ದು[55], ಕುಟುಂಬದ ಮತ್ತು ಇತರ ಕೃಷಿಯೇತರ ಉದ್ಯೋಗಗಳಲ್ಲಿ ಪ್ರತಿಶತ 68ರಷ್ಟು ಹೆಚ್ಚಾಗಿದೆ[56]. ಉಡುಪಿ ಜಿಲ್ಲೆಯಲ್ಲಿ ಅತಿ ಹೆಚ್ಚು ಮಹಿಳಾ ಕೃಷಿಕರಿದ್ದರು. ಆದರೂ 2001–11ರ ದಶಕದಲ್ಲಿ ಮಹಿಳಾ ಕೃಷಿಕರ ಸಂಖ್ಯೆಯಲ್ಲಿ ಪ್ರತಿಶತ 44ರಷ್ಟು ಇಳಿಕೆಯಾಗಿದೆ[57]. ಈ ಇಳಿಕೆಯ ಫಲವಾಗಿ, ಅವರ ಕೃಷಿಕತ್ವವು 2001ರಲ್ಲಿದ್ದ ಪ್ರತಿಶತ 45ರಿಂದ, 2011ಕ್ಕೆ ಪ್ರತಿಶತ 39ಕ್ಕೆ ಇಳಿಯಿತು[58]. ಮಹಿಳೆಯರ ಕೃಷಿ ಕಾರ್ಮಿಕತೆಯ ಭಾಗವಹಿಸುವಿಕೆಯಲ್ಲೂ ಪ್ರತಿಶತ 36ರಷ್ಟು ಇಳಿಕೆ ದಾಖಲಾಗಿದೆ. ಜಿಲ್ಲೆಯಲ್ಲಿನ ಕೃಷಿ ವಲಯದ ಬೆಳವಣಿಗೆ ಕುಂಠಿತಗೊಂಡಾಗ ಕೃಷಿಯು ಮಹಿಳೆಯರಿಗೆ ಮುಖ್ಯ ಉದ್ಯೋಗದ ಮೂಲವಾಗಿ ಉಳಿಯಲಿಲ್ಲ[59]. ಪ್ರಸ್ತುತ ಅಧ್ಯಯನದಲ್ಲಿ ಗ್ರಾಮ ಪಂಚಾಯತ್‌ನ 26, ತಾಲೂಕು ಪಂಚಾಯತ್‌ನ 14 ಮತ್ತು ಜಿಲ್ಲಾ ಪಂಚಾಯತ್‌ನ 6 ಮಹಿಳಾ ಪ್ರತಿನಿಧಿಗಳು ಕೃಷಿ ಚಟುವಟಿಕೆಯಲ್ಲಿ ತೊಡಗಿರುವುದು ಕಂಡುಬರುತ್ತದೆ.

ತದನಂತರ ಮಹಿಳೆಯರಿಗೆ ಮುಖ್ಯವಾಗಿ ಉದ್ಯೋಗ ಒದಗಿಸಿಕೊಟ್ಟಿರುವಂತಹ ಉದ್ಯಮಗಳೆಂದರೆ ಬೀಡಿ ಉದ್ಯಮ ಮತ್ತು ಗೋಡಂಬಿ ಕಾರ್ಖಾನೆಗಳು[60]. ಇತ್ತೀಚೆಗಿನ ವರ್ಷಗಳಲ್ಲಿ ಬೀಡಿ ಉದ್ಯಮವು ಇಳಿಕೆಯತ್ತ ಸಾಗಿರುವುದು ಗ್ರಾಮೀಣ ಪ್ರದೇಶದಲ್ಲಿನ ಮಹಿಳಾ ಉದ್ಯೋಗಗಳನ್ನು ಬಾಧಿಸಿದೆ. ಜಿಲ್ಲೆಯಲ್ಲಿನ

[illegible]

[illegible]

[illegible]

[illegible]

[illegible]

ಇತರ ಲಿಂಗ ಸೂಕ್ಷ್ಮ ಉದ್ಯಮಗಳೆಂದರೆ ಸಿದ್ಧ ಉಡುಪು, ಆಹಾರ ಸಂಸ್ಕರಣೆ, ಪ್ಯಾರಾಮೆಡಿಕಲ್ ಸೇವೆಗಳು, ಇತ್ಯಾಧಿ. ಆದರೆ ಜಿಲ್ಲೆಯ ಕೇವಲ ಪ್ರತಿಶತ 6.5ರಷ್ಟು ಪ್ರಮಾಣದ ಕುಟುಂಬಗಳು ಸಂಘಟಿತ ವಲಯಗಳಲ್ಲಿ ಕೆಲಸ ಮಾಡುತ್ತಿದ್ದು, ಇದರಲ್ಲಿ ಪ್ರತಿಶತ 29ರಷ್ಟು ಸಾರ್ವಜನಿಕ ಕ್ಷೇತ್ರ ಮತ್ತು ಪ್ರತಿಶತ 71ರಷ್ಟು ಖಾಸಗಿ ಕ್ಷೇತ್ರದಲ್ಲಿದ್ದಾರೆ[61]. ಜಿಲ್ಲೆಯು 90 ಕಿ.ಮೀ ವಿಸ್ತಾರದ ಕರಾವಳಿ ಪ್ರದೇಶ ಹೊಂದಿದೆ. ಇದು ಉಡುಪಿ ಮತ್ತು ಕುಂದಾಪುರ ತಾಲೂಕುಗಳಲ್ಲಿ ಮೀನುಗಾರಿಕೆಗೆ ಉತ್ತಮ ಪರಿಸರ ಒದಗಿಸಿದೆ[62]. ಇಲ್ಲಿನ 5000ಕ್ಕಿಂತಲೂ ಅಧಿಕ ಕುಟುಂಬಗಳು ತಮ್ಮ ಜೀವನ ನಿರ್ವಹಣೆಗಾಗಿ ಮೀನುಗಾರಿಕೆಯನ್ನು ಅವಲಂಬಿಸಿದ್ದಾರೆ. ಜಿಲ್ಲೆಯು ಮೀನುಗಾರಿಕೆಗೆ ಹೆಸರುವಾಸಿಯಾಗಿದ್ದು, ರಾಜ್ಯದಲ್ಲಿನ ಒಟ್ಟು 1/3ನೇ ಅಂಶವು ಉಡುಪಿ ಜಿಲ್ಲೆಯಲ್ಲಿಯೇ ನಡೆಯುತ್ತದೆ. ಮೀನುಗಾರಿಕಾ ವೃತ್ತಿಯಲ್ಲಿ ತೊಡಗಿಕೊಂಡ 45,551 ಜನರಲ್ಲಿ 16,445 ಮಂದಿ ಮಹಿಳೆಯರಿದ್ದಾರೆ[63]. ಆದರೆ, ಪ್ರಸ್ತುತ ಅಧ್ಯಯನದಲ್ಲಿ ಅವರ ರಾಜಕೀಯ ಪ್ರತಿನಿಧಿತ್ವವು ಕಡಿಮೆಯಿರುವುದು ಗೋಚರಿಸಿರುತ್ತದೆ.

ಉಡುಪಿ ಜಿಲ್ಲೆಯು ಚಾರಿತ್ರಿಕವಾಗಿ ಮತ್ತು ಅಂತಾರಾಷ್ಟ್ರೀಯವಾಗಿ ಹೆಂಚು ಉದ್ಯಮ ಮತ್ತು ಗೋಡಂಬಿ ಉತ್ಪಾದನೆ ಮತ್ತು ರಫ್ತಿಗೆ ಹೆಸರುವಾಸಿಯಾಗಿದೆ. ಇನ್ನೊಂದು ಪಾರಂಪರಿಕ ಉದ್ಯಮವೆಂದರೆ ಬೀಡಿ ಸುತ್ತುವುದು. ಹೆಂಚು ಮತ್ತು ಬೀಡಿ ಉದ್ಯಮಗಳು ಬೇಡಿಕೆ ಕಡಿಮೆಯಿರುವುದರಿಂದ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿವೆ. 1990ರ ಸಮಯದಲ್ಲಿ ಜಿಲ್ಲೆಯು ಸಣ್ಣ ಮತ್ತು ಮಧ್ಯಮ ಉತ್ಪಾದನಾ ಉದ್ಯಮಗಳಲ್ಲಿ ಒಳ್ಳೆಯ ಪ್ರಗತಿಯನ್ನು ದಾಖಲಿಸಿದೆ. ಜಿಲ್ಲೆಯಲ್ಲಿ ಮೂರು ಕೈಗಾರಿಕಾ ಕೇಂದ್ರಗಳಿದ್ದು, ಮಣಿಪಾಲ, ಕುಂದಾಪುರ ಮತ್ತು ಕಾರ್ಕಳಗಳಲ್ಲಿವೆ. 13 ಮಧ್ಯಮ ಗಾತ್ರದ ಮತ್ತು 7398 ಸಣ್ಣ ಗಾತ್ರದ ಉದ್ಯಮಗಳು ಈ ಕೈಗಾರಿಕಾ ವಲಯಗಳಲ್ಲಿವೆ. ಇವುಗಳಲ್ಲಿ ಸುಮಾರು 45612 ಉದ್ಯೋಗಿಗಳಿದ್ದಾರೆ[64]. ಕೊಂಕಣ್ ರೈಲ್ವೆ, ಸುಝ್ಲಾನ್ ಮತ್ತು ನಂದಿಕೂರ್ ಥರ್ಮಲ್ ಯೋಜನೆಗಳು ಜಿಲ್ಲೆಯ ಅಭಿವೃದ್ಧಿಯನ್ನು ಪ್ರಚೋದಿಸುತ್ತವೆ[65]. ಆದರೆ ಉದ್ಯಮದ ಇಳಿಕೆಯ ಸಮಯದಲ್ಲಿ ಇವುಗಳ ಸ್ಥಿತಿ ಬಹಳ ಗಂಭೀರವಾಗಿರುತ್ತದೆ. ಬ್ರಹ್ಮಾವರದ ಸಕ್ಕರೆ ಕಾರ್ಖಾನೆಯು ತನ್ನ ಉತ್ಪಾದನೆಯನ್ನು ನಿಲ್ಲಿಸಿದ್ದು ಇದರಿಂದ ಜಿಲ್ಲೆಯಲ್ಲಿ ಕೃಷಿ ಮತ್ತು ಕೈಗಾರಿಕಾ ಉದ್ಯಮಗಳೆರಡಕ್ಕೂ ಹಾನಿಯಾಗಿರುವುದು ಗಮನಾರ್ಹ ಅಂಶವಾಗಿದೆ[66].

ಮಹಿಳೆಯರ ದುಡಿಮೆಯ ಸಹಭಾಗಿತ್ವವು ಅವರ ಆರ್ಥಿಕ ಸಬಲೀಕರಣದ ಮೇಲೆ, ಅವರ ಆದಾಯ ಮತ್ತು ವೆಚ್ಚಗಳ ಹಿಡಿತದ ಮೇಲೆ, ಕೆಲವು ವೈಯಕ್ತಿಕ ಸ್ವಾಯತ್ತತೆ ಮತ್ತು ನಿರ್ಧಾರ ತೆಗೆದುಕೊಳ್ಳುವಿಕೆಯಂತಹ ಮುಖ್ಯ ವಿಷಯಗಳ ಮೇಲೆ ಒಳನೋಟ ಬೀರುತ್ತದೆ. ಜಿಲ್ಲೆಯ ಒಟ್ಟು

ಜನಸಂಖ್ಯೆಯಲ್ಲಿ ಮಹಿಳೆಯರ ಪಾಲು ಪ್ರತಿಶತ 52.3ರಷ್ಟು ಇದ್ದರೂ, ಒಟ್ಟು ಶ್ರಮಶಕ್ತಿಯಲ್ಲಿ ಅವರ ಪಾಲು ಕೇವಲ ಪ್ರತಿಶತ 34.6ರಷ್ಟು ಮಾತ್ರ[67]. ಜಿಲ್ಲೆಯ ಒಟ್ಟು 513241 ಕೆಲಸಗಾರರಲ್ಲಿ 177842 ಮಹಿಳಾ ಕೆಲಸಗಾರರಿದ್ದಾರೆ. ಒಟ್ಟು ಕೆಲಸಗಾರರ ಸಂಖ್ಯೆಯು 2001ರಲ್ಲಿ 4.88ಲಕ್ಷ ಇದ್ದದ್ದು ಈಗ 5.13ಲಕ್ಷಕ್ಕೆ ಏರುವಾಗ, ಮಹಿಳಾ ಕೆಲಸಗಾರರ ಸಂಖ್ಯೆಯು ಎರಡು ಲಕ್ಷದಿಂದ 1.78ಲಕ್ಷಕ್ಕೆ ಇಳಿದಿದೆ. ಇದರ ಫಲವಾಗಿ ಮಹಿಳಾ ಶ್ರಮಶಕ್ತಿಯು 2001ರಲ್ಲಿದ್ದ ಪ್ರತಿಶತ 41ರಿಂದ ಈಗ ಪ್ರತಿಶತ 34.6ಕ್ಕೆ ಇಳಿತ ಕಂಡಿದೆ. ಇದಕ್ಕೆ ವಿರುದ್ಧವಾಗಿ ಇದೇ ಸಮಯದಲ್ಲಿ ರಾಜ್ಯಮಟ್ಟದಲ್ಲಿ ಮಹಿಳಾ ಶ್ರಮಶಕ್ತಿಯ ಪಾಲು ಪ್ರತಿಶತ 31ರಿಂದ ಪ್ರತಿಶತ 34.4ರಷ್ಟು ಏರಿಕೆಯಾಗಿದೆ[68]. ಇದನ್ನು ರಾಜ್ಯ ಮಟ್ಟಕ್ಕೆ ತುಲನೆ ಮಾಡಿದಾಗ ಪುರುಷ ಮತ್ತು ಮಹಿಳೆಯರ ಉದ್ಯೋಗದ ಪ್ರಮಾಣವು ಪ್ರತಿಶತ 2ರಷ್ಟು ಮತ್ತು ಪ್ರತಿಶತ 1.6ರಷ್ಟು ಏರಿಕೆ ಕಂಡಿದೆ[69].

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು 'ಮಂಗಳೂರು ಬೀಡಿ'ಗೆ ಹೆಸರುವಾಸಿಯಾಗಿವೆ[70]. ಬೀಡಿ ಸುತ್ತುವಿಕೆಯ ಕೆಲಸ ಮುಖ್ಯವಾಗಿ ಹೊರಗುತ್ತಿಗೆ ಆಧಾರದಲ್ಲಿ ಅವರವರ ಮನೆಗಳಲ್ಲಿ ಮಹಿಳೆಯರಿಂದ ನಡೆಯುತ್ತಿದೆ. ಸುಮಾರು 195000 ಬೀಡಿ ಕೆಲಸಗಾರರು ಜಿಲ್ಲೆಯಲ್ಲಿದ್ದು ಅವರಲ್ಲಿ ಪ್ರತಿಶತ 96ರಷ್ಟು ಕೆಲಸಗಾರರು ಮಹಿಳೆಯರಾಗಿದ್ದಾರೆ[71]. ಅವರು ಹೆಚ್ಚಾಗಿ ಗ್ರಾಮೀಣ ಮಹಿಳೆಯರಾಗಿದ್ದು, ದುರ್ಬಲ ವರ್ಗಕ್ಕೆ ಸೇರಿದವರಾಗಿದ್ದಾರೆ. ಬೀಡಿ ಕಂಪೆನಿಗಳು ಅವರ ಮನೆ ಬಾಗಿಲಿಗೆ ಕಚ್ಚಾವಸ್ತುಗಳನ್ನು ಒದಗಿಸುತ್ತಿದ್ದು, ಮಹಿಳೆಯರು ತಮ್ಮ ಬಿಡುವಿನ ಸಮಯದಲ್ಲಿ ಬೀಡಿ ಕಟ್ಟುವ ಮೂಲಕ ಕೆಲಸ ಮಾಡುತ್ತಿದ್ದಾರೆ. ಕಟ್ಟಿದ ಬೀಡಿಗಳನ್ನು ಹತ್ತಿರದ ಕೇಂದ್ರಗಳು ಸಂಗ್ರಹಿಸುತ್ತವೆ ಮತ್ತು ಸುತ್ತಲ್ಪಟ್ಟ ಬೀಡಿಯ ಸಂಖ್ಯೆಯ ಆಧಾರದಲ್ಲಿ ವೇತನ ಪಾವತಿ ಮಾಡಲಾಗುತ್ತದೆ. ಇದು ಮುಖ್ಯವಾಗಿ ಕಾರ್ಮಿಕರ ಮೇಲೆ ಅವಲಂಬಿತವಾಗಿದೆ. ಬೀಡಿ ಉದ್ಯಮವು ಜಿಲ್ಲೆಯ ಬಡಜನರಲ್ಲಿನ ಬಡತನ ನಿವಾರಣೆಗೆ ಗಣನೀಯ ಕೊಡುಗೆ ನೀಡಿದ್ದಲ್ಲದೆ, ಆ ಮೂಲಕ ಅವರ ಜೀವನ ಮಟ್ಟವನ್ನು ಸುಧಾರಿಸಿದೆ. ಬೀಡಿ ಕೆಲಸ ಮಾಡುವ ಮಹಿಳೆಯರು ಸಂಘಟಿತರಾಗಿದ್ದು, ಪ್ರಾವಿಡೆಂಟ್ ಫಂಡ್ ಇತ್ಯಾದಿ ಕೆಲವು ಅನುಕೂಲಗಳನ್ನು ಪಡೆದಿದ್ದಾರೆ. ಬೀಡಿ ಕಟ್ಟುವಿಕೆಯಲ್ಲಿನ ಕೆಲವು ಹಾನಿಕಾರಕ ಪರಿಣಾಮಗಳ ಹೊರತಾಗಿ, ಗ್ರಾಮೀಣ ಮಹಿಳೆಯರ ಆರ್ಥಿಕ ಸಶಕ್ತೀಕರಣದತ್ತ ಅದರ ಕೊಡುಗೆಯನ್ನು ಕಡೆಗಣಿಸಲು ಸಾಧ್ಯವಿಲ್ಲ[72]. ಮತ್ತೊಂದು ಗಮನಾರ್ಹ ದೊಡ್ಡ ಕ್ಷೇತ್ರವೆಂದರೆ ಕುಟುಂಬ ಉದ್ಯಮಗಳಲ್ಲಿ ಮಹಿಳೆಯರ ಉದ್ಯೋಗದ ಇಳಿಕೆ[73]. 2001ರಲ್ಲಿ ಇದು ಮಹಿಳಾ ಕೆಲಸಗಾರರಿಗೆ ಪ್ರತಿಶತ 26ರಷ್ಟು ಉದ್ಯೋಗವನ್ನು ಒದಗಿಸಿದ್ದು, 2011ಕ್ಕಾಗುವಾಗ ಅದರ ಪ್ರಮಾಣವು ಪ್ರತಿಶತ 2.8ರಷ್ಟು ಇಳಿಯಿತು. ಇದಕ್ಕೆ ವಿರುದ್ಧವಾಗಿ ಇತರ ಕೃಷಿಯೇತರ ಚಟುವಟಿಕೆಗಳಲ್ಲಿ ಮಹಿಳಾ ಉದ್ಯೋಗದ ಪ್ರಮಾಣವು ಗಣನೀಯವಾಗಿ ಏರಿತು[74].

[illegible]

[illegible]

ವೇತನದಲ್ಲಿನ ಲಿಂಗ ಅಸಮಾನತೆಯು ಲಿಂಗ ತಾರತಮ್ಯ ಮತ್ತು ಲಿಂಗ ಪಕ್ಷಪಾತದ ಕುರುಹಾಗಿದೆ. ಕಾರ್ಮಿಕರಲ್ಲಿನ ಲಿಂಗ ಅಸಮಾನತೆ, ಆರ್ಥಿಕ ಚಟುವಟಿಕೆಯಲ್ಲಿ ಪ್ರತ್ಯೇಕತಾವಾದ ಮತ್ತು ಉದ್ಯೋಗ ಮಾರುಕಟ್ಟೆಯಲ್ಲಿ ಸ್ತ್ರೀ ಪರಿವರ್ತನೆಗಳಲ್ಲಿ ಲಿಂಗ ಅಸಮಾನತೆ, ಲಿಂಗ ತಾರತಮ್ಯ ಮತ್ತು ಲಿಂಗ ಪಕ್ಷಪಾತಗಳು ಮುಖ್ಯವಾಗಿ ವ್ಯಕ್ತವಾಗುವುದು. ಪುರುಷ ಮತ್ತು ಮಹಿಳೆಯರಲ್ಲಿನ ವೇತನ ಅಸಮಾನತೆಯು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮುಂದುವರಿಯುತ್ತಿದೆ ಮತ್ತು ಹೆಚ್ಚಾಗುತ್ತಿದೆ. ಕೃಷಿ ಕಾರ್ಮಿಕ ಪುರುಷರಿಗೆ ರೂ.200ರಿಂದ ರೂ.250ರವರೆಗೆ ಮತ್ತು ಮಹಿಳೆಯರಿಗೆ ರೂ.150ರಿಂದ ರೂ.180ರವರೆಗೆ ವೇತನವಿದೆ. ನಗರ ಪ್ರದೇಶಗಳಲ್ಲಿ ಪುರುಷರಿಗೆ ರೂ.300ರಿಂದ ರೂ.500 ಮತ್ತು ಮಹಿಳೆಯರಿಗೆ ಇದು ರೂ.200ರಿಂದ ರೂ.300ರವರೆಗೆ ವೇತನವನ್ನು ಕೊಡಲಾಗುತ್ತದೆ[75]. ಮಹಿಳೆಯರು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಕೃಷಿ ಕಾರ್ಮಿಕರಾಗಿ, ಹೈನುಗಾರಿಕೆಯಲ್ಲಿ, ಕೋಳಿ ಸಾಕಣೆಯಲ್ಲಿ ಮತ್ತು ಕುಟುಂಬದ ಕೆಲಸಗಳಲ್ಲಿ ತೊಡಗಿರುತ್ತಾರೆ. ನಗರ ಪ್ರದೇಶಗಳಲ್ಲಿ ಅವರು ಮುಖ್ಯವಾಗಿ ಕಟ್ಟಡ ನಿರ್ಮಾಣದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲಿಯೂ ಹೆಚ್ಚಿನ ಇತರ ಉದ್ಯೋಗಾವಕಾಶಗಳಿಗೆ ಮಹಿಳೆಯರು ಪುರುಷರಿಗಿಂತ ಹಿಂದೆ ನಿಲ್ಲುತ್ತಾರೆ. ಲಿಂಗ ತಾರತಮ್ಯವು ಉದ್ಯೋಗದ ಮಾರುಕಟ್ಟೆಯಲ್ಲಿ ಇನ್ನೂ ಮುಂದುವರಿಯುತ್ತಿರುವುದಕ್ಕೆ ಮುಖ್ಯ ಕಾರಣ ಆರ್ಥಿಕ ಚಟುವಟಿಕೆಗಳಲ್ಲಿ ಲಿಂಗ ಪ್ರತ್ಯೇಕತೆ ಮತ್ತು ಬೇರೂರಿದ ಲಿಂಗಾಧಾರಿತ ಪಾತ್ರಗಳು, ಹಾಗೂ ಮಹಿಳೆಯರಿಗೆ ಏನು ಮಾಡಿದರೆ ಸ್ವೀಕಾರಾರ್ಹವೆಂಬ ಸಾಮಾಜಿಕ ರೂಢಿ[76]. ಕೆಲಸದಲ್ಲಿನ ಭಾಗವಹಿಸುವಿಕೆಯು ಸಮಾನ ಉದ್ಯೋಗಾವಕಾಶ ಮತ್ತು ಪುರುಷ ಮತ್ತು ಮಹಿಳೆಯರಿಬ್ಬರಲ್ಲೂ ಸಮಾನ ಗಳಿಕೆಗೆ ಬದಲಾಗುವಿಕೆಯು ಮೂಲದಿಂದ ಇದ್ದಲ್ಲಿ ಲಿಂಗ ತಾರತಮ್ಯ ಮತ್ತು ಮಹಿಳಾ ಅಪ್ರಧಾನತೆಯನ್ನು ಹೋಗಲಾಡಿಸಬಹುದು[77].

ಅಧ್ಯಯನಕ್ಕೊಳಪಡಿಸಿದ ಗ್ರಾಮ ಪಂಚಾಯತ್‌ಗಳ ವಿವರ

ಕಲ್ಯಾಣಪುರ ಗ್ರಾಮ ಪಂಚಾಯತ್ ಉಡುಪಿ ಜಿಲ್ಲೆ ಮತ್ತು ಉಡುಪಿ ತಾಲೂಕು ಕೇಂದ್ರದಿಂದ ಸುಮಾರು 8 ಕಿಲೋಮೀಟರ್ ದೂರದಲ್ಲಿ ಸುಮಾರು 1885.45 ಎಕ್ರೆ ಭೌಗೋಳಿಕ ವಿಸ್ತೀರ್ಣ ಹೊಂದಿದ್ದು ಉತ್ತರ ದಿಕ್ಕಿನಲ್ಲಿದೆ. ಈ ಗ್ರಾಮ ಪಂಚಾಯತ್‌ಯು 9 ವಾರ್ಡ್‌ಗಳನ್ನೊಳಗೊಂಡಿದೆ[78]. ಮಂಡಲ ಪಂಚಾಯತ್ ಕಾಲದಲ್ಲಿ ಕಲ್ಯಾಣಪುರ ಆಡಳಿತ ಕೇಂದ್ರಕ್ಕೆ ಸೇರಿದ್ದು ಗ್ರಾಮ ಪಂಚಾಯತ್ ವ್ಯವಸ್ಥೆ ಜಾರಿಗೊಂಡ ಬಳಿಕವೂ ಕಲ್ಯಾಣಪುರ ಕೇಂದ್ರ ಸ್ಥಾನವಾಗಿದೆ. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಇದು ಉನ್ನತ ಸ್ಥಾನದ ಗ್ರಾಮ ಪಂಚಾಯತ್[79]. ಈ

ಪಂಚಾಯತ್ ಬ್ರಹ್ಮಾವರ ಹೋಬಳಿಗೆ ಸೇರಿದೆ. ಇದು ಉಡುಪಿ ತಾಲೂಕು ಪಂಚಾಯತ್ ಕ್ಷೇತ್ರವಾಗಿದ್ದು ಉಡುಪಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಉಡುಪಿ ವಿಧಾನಸಭಾ ಕ್ಷೇತ್ರವನ್ನು ಹೊಂದಿದೆ. ಈ ಪಂಚಾಯತ್ ವ್ಯವಸ್ಥೆಗಳ ಜೊತೆಯಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಗ್ರಾಮಾಭಿವೃದ್ಧಿ ಸಮಿತಿಗಳು, ಸ್ವ-ಸಹಾಯ ಸಂಘಗಳು, ಯುವಕ ಸಂಘ, ಸ್ತ್ರೀ-ಶಕ್ತಿ ಸಂಘಗಳು, ಗ್ರಾಮ ಸಲಹಾ ಸಮಿತಿಗಳು, ದೇವಸ್ಥಾನ ಸಮಿತಿಗಳು ಮತ್ತು ಕ್ರಿಶ್ಚಿಯನ್ ಮತ್ತು ಮುಸ್ಲಿಂ ಸಮುದಾಯಕ್ಕೆ ಸೇರಿದ ಪ್ರಾರ್ಥನಾ ಮಂದಿರಗಳ ಸಮಿತಿಗಳು ಹೆಚ್ಚಾಗಿ ಇರುವುದು ಕಂಡುಬಂದಿರುತ್ತದೆ.

ಈ ಪಂಚಾಯತ್ ವ್ಯಾಪ್ತಿಯಲ್ಲಿ ಒಟ್ಟು 2836 ಕುಟುಂಬಗಳು ವಾಸವಾಗಿದ್ದು, ಕೂಲಿ ಇಲ್ಲಿನ ಪ್ರಧಾನ ಕಸುಬಾಗಿದೆ. ಮೀನುಗಾರಿಕೆ, ಚಾಪೆ ಹೆಣೆಯುವಿಕೆ, ಮೀನು ಹಿಡಿಯುವ ಬಲೆಯ ತಯಾರಿಕೆ ಮುಂತಾದ ಕಸುಬುಗಳಲ್ಲಿ ತೊಡಗಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಕಲ್ಯಾಣಪುರ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಸ್ತ್ರೀ-ಶಕ್ತಿ ಸಂಘಗಳು ಮತ್ತು ಮಹಿಳಾ ಸ್ವ ಸಹಾಯ ಸಂಘಗಳು ಉಳಿತಾಯವನ್ನು ಮಾಡಿಕೊಂಡು ಬ್ಯಾಂಕ್‌ಗಳ ಮುಖಾಂತರ ನೇರ ಸಾಲ ಸೌಲಭ್ಯವನ್ನು ಪಡೆದುಕೊಂಡು ಉತ್ತಮ ಮಟ್ಟದಲ್ಲಿದ್ದಾರೆ. ಅಧ್ಯಯನಕ್ಕೆ ಆಯ್ದುಕೊಂಡ ಈ ಪಂಚಾಯತ್‌ನಲ್ಲಿ ಇಪ್ಪತ್ತು ಪುರುಷ ಮತ್ತು ಒಂಬತ್ತು ಮಹಿಳಾ ಸದಸ್ಯರು ಸೇರಿ ಒಟ್ಟೂ ಇಪತ್ತೊಂಬತ್ತು ಸದಸ್ಯರಿದ್ದಾರೆ.

ಹಿರ್ಗಾನ ಗ್ರಾಮ ಪಂಚಾಯತ್ ತಾಲೂಕು ಕೇಂದ್ರವಾದ ಕಾರ್ಕಳದಿಂದ 6 ಕಿ.ಮೀ. ದೂರದಲ್ಲಿದ್ದು, ಪೂರ್ವದಿಕ್ಕಿನಲ್ಲಿದೆ. ಈ ಗ್ರಾಮದ ಹೆಸರೇ ಸೂಚಿಸುವಂತೆ ಹಿರಿದಾದ 'ಕಾನ' ಅಂದರೆ ಅರಣ್ಯದಿಂದ ಕೂಡಿದ ಈ ಪ್ರದೇಶ ಕ್ರಮೇಣ ಹಿರ್ಗಾನವಾಯಿತು ಎಂದು ಪ್ರತೀತಿ. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಇದು ಕೆಳಸ್ಥಾನದ ಗ್ರಾಮ ಪಂಚಾಯತ್[80]. ಈ ಗ್ರಾಮ ಪಂಚಾಯತ್ ಆರು ವಾರ್ಡ್‌ಗಳನ್ನೊಳಗೊಂಡಿದ್ದು ಆರು ಪುರುಷ ಸದಸ್ಯರು ಆರು ಮಹಿಳಾ ಸದಸ್ಯರಂತೆ ಒಟ್ಟು 12 ಜನ ಸದಸ್ಯರನ್ನೊಳಗೊಂಡಿದೆ. ಪೂರ್ವದಲ್ಲಿ ಪಶ್ಚಿಮ ಘಟ್ಟಗಳ ಸಾಲು, ಸ್ವರ್ಣಾ ನದಿಯು ಇಲ್ಲಿನ ಕೃಷಿ ಭೂಮಿಗಳಿಗೆ ನೀರುಣಿಸುತ್ತಾ ಉತ್ತರಕ್ಕೆ ಹರಿಯುತ್ತಿದೆ. ಹಿರ್ಗಾನ ಗ್ರಾಮ ಪಂಚಾಯತ್ ಶೇ.40 ಮಾತ್ರ ನೀರಾವರಿ ಕೃಷಿ ಭೂಮಿ ಆಗಿದ್ದು ಉಳಿದಂತೆ ಮಳೆಯಾಧಾರಿತ ಕೃಷಿಗೆ ಅವಲಂಬಿಸಿದ ಪ್ರದೇಶವಾಗಿದೆ. ಹಿರ್ಗಾನ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಎಸ್.ಸಿ., ಎಸ್.ಟಿ., ಬಂಟ, ರಾಜಾಪುರಿ ನಾಯಕ, ಜಿ.ಎಸ್.ಬಿ. ಬ್ರಾಹ್ಮಣ, ಮರಾಠಿ ನಾಯ್ಕ, ಬಿಲ್ಲವ, ಮೊಗವೀರ, ಶೆಟ್ಟಿಗಾರ ಬ್ರಾಹ್ಮಣ ಇನ್ನೂ ಮುಂತಾದ ಜನಾಂಗದವರು ವಾಸವಾಗಿದ್ದು ಸಹಬಾಳ್ವೆ ಜೀವನ ನಡೆಸುತ್ತಿದ್ದಾರೆ. ಮಹಿಳೆಯರು, ಮಕ್ಕಳು, ವೃದ್ಧರಿಗೆ ಹೆಚ್ಚಿನ ಸ್ಥಾನಮಾನಗಳುಂಟು.

ಹಾಗಾಗಿ ಇಲ್ಲಿನ ಸಾಮಾಜಿಕ ಜೀವನ ವ್ಯವಸ್ಥೆ ಚೆನ್ನಾಗಿದೆ. ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ಈ ಪ್ರದೇಶದ ಜನರು ಮುಂಚೂಣಿಯಲ್ಲಿದ್ದು ಶೈಕ್ಷಣಿಕವಾಗಿ ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 5 ಅಂಗನವಾಡಿ ಕೇಂದ್ರಗಳು, 5 ಮುಂದುವರಿಕೆ ಶಿಕ್ಷಣ ಕೇಂದ್ರಗಳು ಹಾಗೂ ಒಂದು ಗ್ರಂಥಾಲಯವಿದೆ. 1 ಕಿರಿಯ ಪ್ರಾಥಮಿಕ ಶಾಲೆ, 3 ಹಿರಿಯ ಪ್ರಾಥಮಿಕ ಶಾಲೆ ಹಾಗೂ 1 ಪ್ರೌಢ ಶಾಲೆ ಇದೆ. ಹಿರ್ಗಾನ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 60% ಕುಟುಂಬಗಳು ವ್ಯವಸಾಯದಲ್ಲಿ ತೊಡಗಿದ್ದು ಶೇಕಡಾ 30ರಷ್ಟು ಕುಟುಂಬಗಳು ಕೂಲಿಯಿಂದ ಜೀವನ ಮಾಡುತ್ತಿದ್ದಾರೆ. ಉಳಿದಂತೆ ಶೇಕಡಾ 10ರಷ್ಟು ಕುಟುಂಬಗಳು ಸರಕಾರಿ ನೌಕರರು, ಸ್ವ ಉದ್ಯೋಗದಲ್ಲಿ ತೊಡಗಿರುತ್ತಾರೆ. ಜನರ ಉಪ ಕಸುಬುಗಳಾಗಿ ಹೈನುಗಾರಿಕೆ, ಬೀಡಿ ಕಟ್ಟುವುದು, ಕುಂಬಾರಿಕೆ, ಮಲ್ಲಿಗೆ ಕೃಷಿ, ಕೋಳಿ ಫಾರ್ಮ್, ಗೇರು ಬೀಜ ಸಂಸ್ಕರಣೆ, ಕೊಬ್ಬರಿ ಎಣ್ಣೆ ತಯಾರಿಕೆ, ಮೀನು ಮಾರಾಟ, ಹೂವಿನ ವ್ಯಾಪಾರ, ಇತ್ಯಾದಿ ಕೈಗಾರಿಕೆಗಳಲ್ಲಿ ಜನರು ತೊಡಗಿಕೊಂಡು ತಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಂಡು ಜೀವನ ನಡೆಸುತ್ತಿದಾರೆ. ಅಲ್ಲದೇ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸ್ವ-ಸಹಾಯ ಸಂಘ, ಸ್ತ್ರೀ-ಶಕ್ತಿ ಸಂಘ, ಯುವಕ ಮಂಡಲ, ಯುವತಿ ಮಂಡಲಗಳಿದ್ದು ಚಟುವಟಿಕೆಯಲ್ಲಿ ತೊಡಗಿರುವುದು ಕಂಡುಬರುತ್ತಿದೆ[81].

ಕೋಟ ಗ್ರಾಮ ಪಂಚಾಯತ್ ಜಿಲ್ಲಾ ಹಾಗೂ ತಾಲೂಕು ಕೇಂದ್ರವಾದ ಉಡುಪಿಯಿಂದ ಸುಮಾರು 25 ಕಿ.ಮೀ. ದೂರದಲ್ಲಿದೆ. ಈ ಪಂಚಾಯತ್ ವ್ಯಾಪ್ತಿಗೆ ಗಿಳಿಯಾರು ಮತ್ತು ಮಣೂರು ಗ್ರಾಮಗಳು ಸೇರಿದ್ದು, ಭೌಗೋಳಿಕವಾಗಿ 2651.42 ಹೆಕ್ಟೇರ್ ವಿಸ್ತೀರ್ಣ ಹೊಂದಿದೆ. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಇದು ಮಧ್ಯಮ ಸ್ಥಾನದ ಗ್ರಾಮಪಂಚಾಯತ್[82]. ಈ ಗ್ರಾಮ ಪಂಚಾಯತ್ ಹತ್ತು ವಾರ್ಡ್‌ಗಳನ್ನೊಳಗೊಂಡಿದ್ದು ಹದಿನೈದು ಪುರುಷ ಸದಸ್ಯರು, ಹತ್ತು ಮಹಿಳಾ ಸದಸ್ಯರು ಸೇರಿ ಒಟ್ಟು 25 ಜನ ಸದಸ್ಯರನ್ನೊಳಗೊಂಡಿದೆ. ಈ ಪಂಚಾಯತ್ ವ್ಯಾಪ್ತಿಯಲ್ಲಿ ಬೇಸಾಯ ಮುಖ್ಯ ಕಸುಬಾಗಿದ್ದು, ಇಲ್ಲಿನ ಮಹಿಳೆಯರು ಹೆಚ್ಚಾಗಿ ಕೃಷಿ ಅವಲಂಬಿತರಾಗಿದ್ದಾರೆ. ಮುಖ್ಯ ಬೆಳೆ ಭತ್ತ, ನೆಲಗಡಲೆ, ದವಸ ಧಾನ್ಯ, ತರಕಾರಿ ಇತ್ಯಾದಿಗಳನ್ನು ಬೆಳೆಯುತ್ತಾರೆ. ಇಲ್ಲಿ ಶೇಕಡಾ 40ರಷ್ಟು ಜನರು ಮೀನುಗಾರಿಕೆಯಲ್ಲಿ ತೊಡಗಿದ್ದು ಯಾಂತ್ರಿಕ ದೋಣಿಗಳಲ್ಲಿ ಮೀನುಗಾರಿಕೆಯನ್ನು ನಡೆಸಿ ಜೀವನ ನಡೆಸುತ್ತಾರೆ. ಅಲ್ಲದೆ ಬೀಡಿ ಕೆಲಸಗಾರರು ಹೆಚ್ಚಾಗಿದ್ದು ಈ ಕಸುಬಿನಲ್ಲಿ ಮಹಿಳೆಯರೇ ಹೆಚ್ಚಾಗಿ ಕಂಡುಬರುತ್ತಾರೆ. ಪಂಚಾಯತ್ ವ್ಯಾಪ್ತಿಯಲ್ಲಿ ಹಲವಾರು ಜಾತಿಯವರು ವಾಸಿಸುತ್ತಿದ್ದು ಬಂಟ, ಬಿಲ್ಲವ, ಬ್ರಾಹ್ಮಣ, ಮೊಗವೀರ, ಶೇರ್ವೆಗಾರ, ಮರಾಠಿ ನಾಯ್ಕ, ಕ್ರಿಶ್ಚಿಯನ್, ಮುಸ್ಲಿಮ್, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಕೊಂಕಣಿ, ಶೆಟ್ಟಿಗಾರ

ಮುಂತಾದ ಜನಾಂಗದವರು ಸಹಬಾಳ್ವೆಯಿಂದ ಜೀವನ ನಡೆಸುತ್ತಿದಾರೆ. ಪ್ರಾಥಮಿಕ, ಪ್ರೌಢ ಶಾಲೆಗಳು ಮತ್ತು ಇತ್ತೀಚಿನ ದಶಕದಲ್ಲಿ ಪದವಿ ಪೂರ್ವ ಮತ್ತು ಪದವಿ ಕಾಲೇಜು ಪ್ರಾರಂಭ ಗೊಂಡಿರುತ್ತದೆ. ಈ ಪಂಚಾಯತ್ ವ್ಯಾಪ್ತಿಯಲ್ಲಿ ಸಾಕ್ಷರತೆ ಪ್ರಮಾಣ ಶೇಕಡಾ 100ರಷ್ಟು ಇದೆ[83]. ಗೇರು ಬೀಜ ಸಂಸ್ಕರಣೆ, ಕೊಬ್ಬರಿ ಎಣ್ಣೆ ತಯಾರಿಕೆ, ಮೀನು ಮಾರಾಟ, ಹೂವಿನ ವ್ಯಾಪಾರ ಇತ್ಯಾದಿ ಚಟುವಟಿಕೆಗಳಲ್ಲಿ ಜನರು ತೊಡಗಿಕೊಂಡು ತಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಅಲ್ಲದೇ ಮಹಿಳೆಯರು ವಿವಿಧ ಸ್ವಸಹಾಯ ಸಂಘಗಳಲ್ಲಿ ಸಕ್ರಿಯವಾಗಿ ತೊಡಗಿರುವುದು ಕಂಡುಬಂದಿರುತ್ತದೆ.

ಕಾರ್ಕಳ ತಾಲೂಕಿನ ಕುಕ್ಕುಂದೂರು ಗ್ರಾಮ ಪಂಚಾಯತ್ ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಮಧ್ಯಮ ಸ್ಥಾನದ ಗ್ರಾಮಪಂಚಾಯತ್ ಆಗಿದೆ[84]. ಸುಮಾರು 2747 ಕುಟುಂಬಗಳನ್ನು ಹೊಂದಿದ್ದು 12166 ಜನ ಸಂಖ್ಯೆಯನ್ನು ಹೊಂದಿದೆ. ಇದು 10 ವಾರ್ಡ್‌ಗಳನ್ನು ಹೊಂದಿದ್ದು, 17 ಪುರುಷ ಸದಸ್ಯರು, 13 ಮಹಿಳಾ ಸದಸ್ಯರಂತೆ ಒಟ್ಟು 30 ಜನ ಸದಸ್ಯರನ್ನು ಒಳಗೊಂಡಿದೆ. ಪೂರ್ವದಲ್ಲಿ ಪಳ್ಳಿ, ಪಶ್ಚಿಮಕ್ಕೆ ಬೈಲೂರು, ಉತ್ತರಕ್ಕೆ ಹಿರ್ಗಾನ, ದಕ್ಷಿಣಕ್ಕೆ ನಿಟ್ಟೆ ಗ್ರಾಮ ಪಂಚಾಯತ್‌ಗಳಿಂದ ಆವೃತ್ತವಾದ ಗ್ರಾಮವೇ ಕುಕ್ಕುಂದೂರು. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 11 ಅಂಗನವಾಡಿ ಕೇಂದ್ರಗಳು, 2 ಸ.ಕಿ.ಪ್ರಾ. ಶಾಲೆ, 2 ಖಾಸಗಿ ಕಿ.ಪ್ರಾ. ಶಾಲೆ, 2 ಸ.ಹಿ.ಪ್ರಾ. ಶಾಲೆ, 4 ಖಾಸಗಿ ಹಿ.ಪ್ರಾ. ಶಾಲೆ, 2 ಖಾಸಗಿ ಮತ್ತು 1 ಸರ್ಕಾರಿ ಪ್ರೌಢ ಶಾಲೆ ಮತ್ತು 1 ಖಾಸಗಿ ಕಾಲೇಜು, ಖಾಸಗಿ ಐಟಿಐ ಮತ್ತು ಟಿಸಿಎಚ್ ಕಾಲೇಜುಗಳಿವೆ. ಪಟ್ಟಣಕ್ಕೆ ಹೊಂದಿಕೊಂಡಿರುವುದರಿಂದ ಪಂಚಾಯತ್ ವ್ಯಾಪ್ತಿಯ ಎಲ್ಲಾ ಮಕ್ಕಳು ಶಾಲೆಗೆ ಹೋಗುತ್ತಾರೆ. ಸಾಕ್ಷರತಾ ಪ್ರಮಾಣವು ಉತ್ತಮವಾಗಿದೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಹೆಚ್ಚಿನ ಮಹಿಳೆಯರು ಕೃಷಿ ಮತ್ತು ತೋಟಗಾರಿಕೆ ಅವಲಂಬಿಸಿ ಜೀವನ ಸಾಗಿಸುತ್ತಿದ್ದಾರೆ. ಭತ್ತ ಇಲ್ಲಿನ ಪ್ರಮುಖ ಬೆಳೆಯಾಗಿದ್ದು ತೆಂಗು, ಬಾಳೆ, ಅಡಿಕೆ, ಮಾವು, ಮಲ್ಲಿಗೆ, ರಬ್ಬರ್, ಗೇರು, ಮತ್ತು ಸ್ವಲ್ಪ ಪ್ರಮಾಣದಲ್ಲಿ ರೇಷ್ಮೆ, ಶೇಂಗಾ ಬೆಳೆ ಬೆಳೆಯುತ್ತಾರೆ. ಈ ಪ್ರದೇಶದಲ್ಲಿ ಕೃಷಿ ಹೊರತುಪಡಿಸಿದರೆ ಹೈನುಗಾರಿಕೆ, ಬೀಡಿ ಕಟ್ಟುವುದು, ಗೇರು ಬೀಜ ಸಂಸ್ಕರಣೆ, ಶಿಲ್ಪಿ ಕೆತ್ತನೆ, ಕಲ್ಲು ಗಣಿಗಾರಿಕೆಯಂತಹ ಕೆಲಸವನ್ನು ಮಾಡುತ್ತಾರೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಹಲವಾರು ಜನಾಂಗದವರು ವಾಸಿಸುತ್ತಿದ್ದು ಬಿಲ್ಲವ, ಮುಸ್ಲಿಮ್, ಕ್ರಿಶ್ಚಿಯನ್, ಬಂಟ (ನಾಡವ, ಶೆಟ್ಟಿ, ಹೆಗ್ಡೆ), ಬ್ರಾಹ್ಮಣ, ಜೈನ, ಕುಲಾಲ, ವಿಶ್ವಕರ್ಮ, ಮಡಿವಾಳ, ಶೇರ್ವೆಗಾರ, ಮೊಯಿಲಿ, ಭಂಡಾರಿ, ಕೊಂಕಣಿ, ತಮಿಳು, ಭೋವಿ, ಪ.ಜಾತಿ (ಆದಿದ್ರಾವಿಡ, ನಲ್ಕೆ, ಮೇರ, ಪರವ), ಪ.ಪಂ. (ನಾಯ್ಕ, ಮಲೆಕುಡಿಯ,

ಕೊರಗ) ಜನಾಂಗದವರಿದ್ದಾರೆ[85]. ಇದು ಸಾಂಸ್ಕೃತಿಕವಾಗಿ ಹೆಸರುಗಳಿಸಿದ್ದು, ವಿವಿಧ ಸ್ವಸಹಾಯ ಸಂಘಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಕಾಣಬಹುದು.

ಉಡುಪಿ ತಾಲೂಕು ಕೇಂದ್ರದಿಂದ ಸುಮಾರು 28 ಕಿ.ಮೀ. ದೂರವಿರುವ ವಡ್ಡರ್ಸೆ ಗ್ರಾಮ ಪಂಚಾಯತ್ ಭೌಗೋಳಿಕವಾಗಿ ಪೂರ್ವಕ್ಕೆ ಯಡ್ತಾಡಿ ಗ್ರಾಮ ಹಾಗೂ ಶಿರಿಯಾರ ಗ್ರಾಮ, ಪಶ್ಚಿಮಕ್ಕೆ ಸಾಲಿಗ್ರಾಮ ಪಟ್ಟಣ ಪಂಚಾಯತ್ ಮತ್ತು ಕೋಟತಟ್ಟು ಪಂಚಾಯತ್, ಉತ್ತರಕ್ಕೆ ಕೋಟ ಪಂಚಾಯತ್ ಮತ್ತು ದಕ್ಷಿಣಕ್ಕೆ ಬಾರಕೂರು ಪಂಚಾಯತ್ ಹೊಂದಿದೆ. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಉನ್ನತ ಸ್ಥಾನದ ಗ್ರಾಮ ಪಂಚಾಯತ್[86]. ಈ ಗ್ರಾಮ ಪಂಚಾಯತ್ 6 ವಾರ್ಡ್‌ಗಳನ್ನೊಳಗೊಂಡಿದ್ದು 7 ಪುರುಷ ಸದಸ್ಯರು, 6 ಮಹಿಳಾ ಸದಸ್ಯರಂತೆ ಒಟ್ಟು 13 ಜನ ಸದಸ್ಯರನ್ನೊಳಗೊಂಡಿದೆ. ನಡುವೆ ಇರುವ ವಡ್ಡರ್ಸೆ ಗ್ರಾಮ ಪಂಚಾಯತ್ ರಾಷ್ಟ್ರೀಯ ಹೆದ್ದಾರಿಯಿಂದ ಪೂರ್ವಕ್ಕೆ 3 ಕಿ.ಮೀ. ದೂರದಲ್ಲಿದೆ. ವಡ್ಡರ್ಸೆ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಕ್ರಮವಾಗಿ ಅಚ್ಲಾಡಿ, ಬನ್ನಾಡಿ, ಕಾವಡಿ ಮತ್ತು ವಡ್ಡರ್ಸೆ ಗ್ರಾಮಗಳು ಸೇರಿರುತ್ತವೆ. ಇಲ್ಲಿನ ಜನ ಬೇಸಾಯವನ್ನು ನಂಬಿದ್ದು ಹೆಚ್ಚಿನ ಜನ ಕೃಷಿ ಕಾರ್ಮಿಕರಾಗಿರುತ್ತಾರೆ. ವಡ್ಡರ್ಸೆ ಗ್ರಾಮ ಪಂಚಾಯತ್ ಒಟ್ಟು ವಿಸ್ತೀರ್ಣ 3477.44 ಹೆಕ್ಟೇರ್ ಇದ್ದು ಕ್ರಮವಾಗಿ ವಡ್ಡರ್ಸೆ ಗ್ರಾಮ 836.17 ಹೆಕ್ಟೇರ್, ಬನ್ನಾಡಿ ಗ್ರಾಮ 486.61 ಹೆಕ್ಟೇರ್, ಕಾವಾಡಿ ಗ್ರಾಮ 1412.78 ಹೆಕ್ಟೇರ್ ಮತ್ತು ಅಚ್ಲಾಡಿ ಗ್ರಾಮ 742.18 ಹೆಕ್ಟೇರ್ ಹೊಂದಿರುತ್ತದೆ. ಕೃಷಿ ಅವಲಂಬಿತ ಕುಟುಂಬದ ಮಹಿಳೆಯರು ಮತ್ತು ಕೃಷಿ ಕಾರ್ಮಿಕರು ಹೆಚ್ಚಾಗಿದ್ದು ಶೇಕಡಾ 70ರಷ್ಟು ಬಿ.ಪಿ.ಎಲ್. ಪಡಿತರ ಚೀಟಿಯನ್ನು ಹೊಂದಿದ ಕುಟುಂಬದವರಾಗಿರುತ್ತಾರೆ. ವಿದ್ಯಾಭ್ಯಾಸಕ್ಕೆ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಸರಕಾರದಿಂದ ಇತ್ತೀಚಿನ ದಶಕಗಳಲ್ಲಿ ಪ್ರಾರಂಭಗೊಂಡಿರುತ್ತದೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸಾಕ್ಷರತೆ ಪ್ರಮಾಣ ಶೇಕಡಾ 100ರಷ್ಟು ಇದೆ[87]. ಇಲ್ಲಿ ಹಲವಾರು ಜನಾಂಗದವರು ವಾಸಿಸುತ್ತಿದ್ದು ಕ್ರಿಶ್ಚಿಯನ್, ಮುಸ್ಲಿಮ್, ಬಿಲ್ಲವ, ಬಂಟ, ಬ್ರಾಹ್ಮಣ, ಶೇರ್ವೆಗಾರ, ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರು ಸಹಬಾಳ್ವೆಯಿಂದ ಜೀವನವನ್ನು ನಡೆಸುತ್ತಿದ್ದಾರೆ. ಇಲ್ಲಿ ಧರ್ಮಸ್ಥಳ ಸ್ವಸಹಾಯ ಸಂಘವು ಉತ್ತಮ ಚಟುವಟಿಕೆಯಲ್ಲಿ ತೊಡಗಿದ್ದು, ಹೆಚ್ಚಿನ ಮಹಿಳೆಯರು ತಮ್ಮನ್ನು ಇದರಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಿರುತ್ತದೆ.

ಬಳ್ಕೂರು ಎಂಬುದು ಕರ್ನಾಟಕದ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿದೆ. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಕೆಳಸ್ಥಾನದ ಗ್ರಾಮ ಪಂಚಾಯತ್[88]. ಈ ಗ್ರಾಮ ಪಂಚಾಯತ್ 7 ವಾರ್ಡ್‌ಗಳನ್ನೊಳಗೊಂಡಿದ್ದು 7 ಪುರುಷ ಸದಸ್ಯರು, 4 ಮಹಿಳಾ ಸದಸ್ಯರಂತೆ

ಒಟ್ಟು 11 ಜನ ಸದಸ್ಯರನ್ನೊಳಗೊಂಡಿದೆ. ಈ ಪಂಚಾಯತ್ ಕುಂದಾಪುರ ಪಟ್ಟಣದಿಂದ 10 ಕಿ.ಮೀ. ಹಾಗೂ ಬೆಂಗಳೂರಿನಿಂದ 455 ಕಿ.ಮೀ. ದೂರದಲ್ಲಿದೆ. ಇದೊಂದು ಕೃಷಿ ಆಧಾರಿತ ಚಿಕ್ಕ ಹಳ್ಳಿ ಮತ್ತು ಈ ಪಂಚಾಯತ್‌ನ ಒಟ್ಟು ಬೌಗೋಳಿಕ ವಿಸ್ತೀರ್ಣ 471 ಹೆಕ್ಟೇರ್‌ಗಳು. ಬಳ್ಕೂರು ಪುರಾತನ ಮಹಾನಗರವಾದ ಬಸ್ರೂರು ಪಟ್ಟಣದ ಪಕ್ಕದ ಗ್ರಾಮ. ಸಮೃದ್ಧವಾದ ಬಳ್ಕೂರು ಬಯಲು ಭೂಮಿಯಾಗಿದ್ದು ನದಿಯ ದಡದಲ್ಲಿ ಭತ್ತ ಮತ್ತು ಇತರ ಜೀವನಾವಶ್ಯಕ ಬೆಳೆಗಳನ್ನು ಬೆಳೆಯಲಾಗುತ್ತದೆ. ವಾರಾಹಿ ನದಿಯು ಇಲ್ಲಿನ ಪ್ರಮುಖ ನೀರಿನ ಮೂಲವಾಗಿದೆ. ಆದರಲ್ಲಿ ಹರಿದು ಬರುವ ನೀರು ಮತ್ತು ಫಲವತ್ತಾದ ಮಣ್ಣು ಈ ಗ್ರಾಮವನ್ನು ರೂಪಿಸಿದೆ ಮತ್ತು ಪೋಷಿಸಿಕೊಂಡು ಬಂದಿವೆ. ಈ ಗ್ರಾಮ ಪಂಚಾಯತ್‌ನಲ್ಲಿ ಬ್ರಾಹ್ಮಣ, ಬಂಟ, ಬಿಲ್ಲವ, ಆಚಾರ್ಯ ಕುಲಾಲ, ಕ್ರಿಶ್ಚಿಯನ್, ಕೊರಗ, ಮರಾಠಿ, ಮುಸ್ಲಿಂ, ಮಡಿವಾಳ, ಸೇರ್ವೆಗಾರ, ಕೊಂಕಣಿ, ದೇವಾಡಿಗ, ಕುಂಬಾರ, ಮೊಯಿಲಿ ಮುಂತಾದವರಿದ್ದಾರೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 60% ಕುಟುಂಬಗಳು ವ್ಯವಸಾಯದಲ್ಲಿ ತೊಡಗಿದ್ದು ಶೇ.30ರಷ್ಟು ಕುಟುಂಬಗಳು ಕೂಲಿಯಿಂದ ಜೀವನ ಮಾಡುತ್ತಿದ್ದಾರೆ. ಉಳಿದಂತೆ ಶೇ.10ರಷ್ಟು ಕುಟುಂಬಗಳು ಸ್ವಉದ್ಯೋಗದಲ್ಲಿ ತೊಡಗಿರುತ್ತಾರೆ[89]. ಇಲ್ಲಿನ ಮಹಿಳೆಯರು ಹೆಚ್ಚಾಗಿ ಕೃಷಿ ಅವಲಂಬಿತ ಕುಟುಂಬದವರಾಗಿದ್ದು, ಹೆಚ್ಚಿನವರು ಕೃಷಿ ಕಾರ್ಮಿಕರಾಗಿ ಜೀವನ ನಡೆಸುತ್ತಿದ್ದಾರೆ.

ಈದು ಗ್ರಾಮ ಪಂಚಾಯತ್ ಎರಡು ಗ್ರಾಮಗಳನ್ನು ಹೊಂದಿದ್ದು ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಕೆಳಸ್ಥಾನದ ಗ್ರಾಮ ಪಂಚಾಯತ್[90]. ಈದು ಗ್ರಾಮ ಪಂಚಾಯತ್‌ನ ಭೌಗೋಳಿಕ ವಿಸ್ತೀರ್ಣ 5075 ಎಕ್ರೆ ಆಗಿರುತ್ತದೆ. 2001ರ ಜನಗಣತಿಯ ಪ್ರಕಾರ ಜನಸಂಖ್ಯೆ 6902 ಆಗಿದ್ದು ಒಟ್ಟು 1425 ಕುಟುಂಬಗಳನ್ನು ಒಳಗೊಂಡಿರುತ್ತದೆ. ಈ ಗ್ರಾಮ ಪಂಚಾಯತ್ 11 ವಾರ್ಡ್‌ಗಳನ್ನೊಳಗೊಂಡಿದ್ದು, 11 ಪುರುಷ ಸದಸ್ಯರು, 7 ಮಹಿಳಾ ಸದಸ್ಯರಂತೆ ಒಟ್ಟು 18 ಜನ ಸದಸ್ಯರನ್ನೊಳಗೊಂಡಿದೆ. ಈ ಗ್ರಾಮ ಪಂಚಾಯತ್‌ನಲ್ಲಿ ಬ್ರಾಹ್ಮಣ, ಬಂಟ, ಬಿಲ್ಲವ, ಆಚಾರ್ಯ ಕುಲಾಲ, ಕ್ರಿಶ್ಚಿಯನ್, ಕೊರಗ, ಮರಾಠಿ, ಮುಸ್ಲಿಂ, ಮಡಿವಾಳ, ಸೇರ್ವೆಗಾರ, ಕೊಂಕಣಿ, ದೇವಾಡಿಗ ಮುಂತಾದ ಜನಾಂಗದವರಿದ್ದಾರೆ. ಇವರೆಲ್ಲರೂ ಒಟ್ಟಿಗೆ ಸೇರಿಕೊಂಡು ಹೊಂದಾಣಿಕೆಯಿಂದ ಜೀವನ ನಡೆಸುತ್ತಿದ್ದಾರೆ. ಶೈಕ್ಷಣಿಕವಾಗಿ ಈದು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 10 ಅಂಗನವಾಡಿ ಕೇಂದ್ರಗಳು ಹಾಗೂ ಒಂದು ಗ್ರಂಥಾಲಯವಿದೆ. 1 ಕಿರಿಯ ಪ್ರಾಥಮಿಕ ಶಾಲೆ, 2 ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, 2 ಖಾಸಗಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಒಂದು ಪ್ರೌಢ ಶಾಲೆ. ಈದು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಶೇ.50 ಜನರು ವ್ಯವಸಾಯದಿಂದ ಜೀವನ ಸಾಗಿಸುತ್ತಿದ್ದು

ಇತರರು ಉಪಕಸುಬುಗಳಾದ ಕುಂಬಾರಿಕೆ, ಬಡಗಿ, ಕಮ್ಮಾರಿಕೆ, ಬುಟ್ಟಿ ಹೆಣೆಯುವುದು, ಬೀಡಿ ಕಟ್ಟುವುದು, ಹೊಲಿಗೆ, ಗೋಡಂಬಿ ಬೀಜ ಸಂಸ್ಕರಣೆ ಮುಂತಾದ ವೃತ್ತಿಯನ್ನು ಮಾಡುತ್ತಾರೆ[91]. ಕೃಷಿ ಕೆಲಸ, ಬೀಡಿ ಕಟ್ಟುವ ಹಾಗೂ ಬುಟ್ಟಿ ಹೆಣೆಯುವ ಕೆಲಸಗಳಲ್ಲಿ ಹೆಚ್ಚಾಗಿ ದುರ್ಬಲ ವರ್ಗಕ್ಕೆ ಸೇರಿದ ಮಹಿಳೆಯರೇ ಕಾಣಸಿಗುತ್ತಾರೆ. ಹೆಚ್ಚಿನ ಕುಟುಂಬಗಳು ಬಿ.ಪಿ.ಎಲ್ ಪಡಿತರ ಚೀಟಿಗಳನ್ನು ಹೊಂದಿದ್ದು, ಆರ್ಥಿಕವಾಗಿ ಈ ಗ್ರಾಮ ಮುಂದುವರಿದಿರುವುದಿಲ್ಲ.

ಕಾವ್ರಾಡಿ ಪಂಚಾಯತ್‌ಗೆ ಕಾವ್ರಾಡಿ ಹಾಗೂ ಹಳನಾಡು ಗ್ರಾಮಗಳು ಸೇರಿದ್ದು, ಈ ಮೊದಲು ಕಾವ್ರಾಡಿ, ವಾಲ್ತೂರು, ಕಂಡ್ಲೂರು ಗ್ರಾಮಗಳು ಬೇರೆ ಬೇರೆ ಇದ್ದು, ಬ್ರಿಟೀಷರ ಆಳ್ವಿಕೆಯಲ್ಲಿ ಸರ್ವೆ ಸೆಟ್ಲಮೆಂಟ್ ಕಾಲದಲ್ಲಿ ಕಾವ್ರಾಡಿ, ಕಂಡ್ಲೂರು ಸೇರಿ ಕಾವ್ರಾಡಿ ಗ್ರಾಮ ಎಂದಾಗಿದೆ. ಹಾಗೆಯೇ ಹಳನಾಡು ಗ್ರಾಮಕ್ಕೆ 67 ಹಾಗೂ ಕಾವ್ರಾಡಿ ಗ್ರಾಮಕ್ಕೆ 68 ಎಂದು ಸಮೂದಿಸಲಾಗಿದೆ. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಮಧ್ಯಮ ಸ್ಥಾನದ ಗ್ರಾಮಪಂಚಾಯತ್[92]. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸುಮಾರು 1330 ಕುಟುಂಬಗಳಿವೆ. ಈ ಗ್ರಾಮ ಪಂಚಾಯತ್ 7 ವಾರ್ಡ್‌ಗಳನ್ನೊಳಗೊಂಡಿದ್ದು, 7 ಪುರುಷ ಸದಸ್ಯರು, 8 ಮಹಿಳಾ ಸದಸ್ಯರಂತೆ ಒಟ್ಟು 15 ಜನ ಸದಸ್ಯರನ್ನೊಳಗೊಂಡಿದೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 2 ಅಂಗನವಾಡಿ ಕೇಂದ್ರ, 2 ಕಿರಿಯ ಮತ್ತು 1 ಹಿರಿಯ ಪ್ರಾಥಮಿಕ ಶಾಲೆ, 1 ಪೌಢ ಶಾಲೆ, 1 ಪದವಿ ಪೂರ್ವ ಶಿಕ್ಷಣದ ವ್ಯವಸ್ಥೆಯಿದೆ. ಆದರೂ ಈ ಭಾಗದ ಕೆಲವು ಜನಾಂಗಗಳಾದ ಪ.ಜಾ, ಪ.ಪಂ., ಹಿಂದುಳಿದ ವರ್ಗದವರು ತಮ್ಮ ಮಕ್ಕಳನ್ನು ಕಾಲೇಜು ಮೆಟ್ಟಿಲೇರುವ ಮುನ್ನವೇ ವಿದ್ಯಾಭ್ಯಾಸವನ್ನು ಬಿಡಿಸಿ ಕೂಲಿ ಕೆಲಸಗಳಿಗೆ ಕಳುಹಿಸುತ್ತಿದ್ದಾರೆ[93]. ಶೇಕಡಾ 70ರಷ್ಟು ಬಿ.ಪಿ.ಎಲ್. ಕುಟುಂಬವನ್ನು ಒಳಗೊಂಡಿರುತ್ತದೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕೃಷಿ ಮತ್ತು ತೋಟಗಾರಿಕೆ ಅವಲಂಬಿಸಿ ಜೀವನ ಸಾಗಿಸುತ್ತಿದ್ದಾರೆ. ಭತ್ತ ಇಲ್ಲಿನ ಪ್ರಮುಖ ಬೆಳೆಯಾಗಿದ್ದು ತೆಂಗು, ಬಾಳೆ, ಅಡಿಕೆ, ಮಾವು, ಮಲ್ಲಿಗೆ, ಗೇರು ಬೆಳೆಯುತ್ತಾರೆ. ಈ ಪ್ರದೇಶದಲ್ಲಿ ಕೃಷಿ ಹೊರತುಪಡಿಸಿದರೆ ಹೆಚ್ಚಿನ ಮಹಿಳೆಯರು ಹೈನುಗಾರಿಕೆ, ಬೀಡಿ ಕಟ್ಟುವುದು, ಗೇರು ಬೀಜ ಸಂಸ್ಕರಣೆಯ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಹಲವಾರು ಜನಾಂಗದವರು ಸಹಬಾಳ್ವೆಯಿಂದ ವಾಸಿಸುತ್ತಿದ್ದಾರೆ. ಈ ಪ್ರದೇಶದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘವು ತುಂಬಾ ಸಕ್ರಿಯವಾಗಿದ್ದು, ಹೆಚ್ಚಿನ ಮಹಿಳೆಯರು ಇದರಲ್ಲಿ ಸದಸ್ಯರಾಗಿರುವುದು ಕಂಡುಬಂದಿರುತ್ತದೆ.

ಈ ಪಂಚಾಯತ್ ಕೋಟತಟ್ಟು ಕಂದಾಯ ಗ್ರಾಮವನ್ನು ಒಳಗೊಂಡಿದ್ದು, 455 ಹೆಕ್ಟೇರ್ ವಿಸ್ತೀರ್ಣ ಹೊಂದಿದೆ. ಒಟ್ಟು 1245 ಕುಟುಂಬಗಳಿದ್ದು, 5263 ಜನಸಂಖ್ಯೆಯಿದೆ. ಈ ಗ್ರಾಮ ಪಂಚಾಯತ್ 6 ವಾರ್ಡ್‌ಗಳನ್ನೊಳಗೊಂಡಿದ್ದು 6 ಪುರುಷ ಸದಸ್ಯರು 8 ಮಹಿಳಾ ಸದಸ್ಯರಂತೆ ಒಟ್ಟು 14 ಜನ ಸದಸ್ಯರನ್ನೊಳಗೊಂಡಿದೆ. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಇದು ಮಧ್ಯಮ ಸ್ಥಾನದ ಗ್ರಾಮಪಂಚಾಯತ್ ಆಗಿದೆ[94]. ಈ ಗ್ರಾಮದಲ್ಲಿ ಅನೇಕ ಸಣ್ಣ ಸಣ್ಣ ಊರುಗಳಿದ್ದು, ಅವುಗಳಲ್ಲಿ ಗೊಬ್ಬರಬೆಟ್ಟು, ಹಂದಟ್ಟು, ಕದ್ರಿಕಟ್ಟು, ಬಾರಿಕೆರೆ, ಕಲ್ಮಾಡಿ, ಪಡುಕೆರೆ, ಚಚ್ಕೆರೆ ಇವುಗಳು ಪ್ರಮುಖವಾಗಿವೆ. ಗ್ರಾಮ ಪಂಚಾಯತ್ ಪ್ರದೇಶದ ಜನಸಂಖ್ಯೆಯಲ್ಲಿ ಬಹುತೇಕ ಜನರು ಮೊಗವೀರ, ಬಿಲ್ಲವ ಹಾಗೂ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ. ಬಹುತೇಕ ಕುಟುಂಬಗಳು ಸಣ್ಣ ಸಣ್ಣ ಹಿಡುವಳಿಗಳನ್ನು ಹೊಂದಿದ್ದು, ಸಣ್ಣ ಪ್ರಮಾಣದಲ್ಲಿ ಕೃಷಿಯನ್ನು ಮಾಡುತ್ತಿದ್ದಾರೆ. ಮೊಗವೀರ ಜನಾಂಗದ ಬಹುತೇಕ ಕುಟುಂಬಗಳು ಮೀನುಗಾರಿಕೆಯನ್ನು ಅವಲಂಬಿಸಿರುತ್ತಾರೆ. ಹೆಚ್ಚಿನ ಪ್ರದೇಶವು ಮರಳಿನಿಂದ ಕೂಡಿದ್ದು, ಕಪ್ಪು ಮಿಶ್ರಿತ ಕೃಷಿ ಭೂಮಿಯನ್ನು ಹೊಂದಿದೆ. ಭತ್ತ, ತೆಂಗು ಇಲ್ಲಿನ ಮುಖ್ಯ ಬೆಳೆಯಾಗಿರುತ್ತದೆ. ಹೈನುಗಾರಿಕೆಯಲ್ಲಿ ಹೆಚ್ಚಿನ ಮಹಿಳೆಯರು ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ ಅಲ್ಲದೇ ಅದು ಇಲ್ಲಿನ ಮುಖ್ಯವಾದ ಉಪವೃತ್ತಿಯಾಗಿದೆ. ಈ ಗ್ರಾಮ ಪಂಚಾಯತ್ ಶೈಕ್ಷಣಿಕವಾಗಿ ಸಾಕಷ್ಟು ಅಭಿವೃದ್ಧಿ ಹೊಂದಿದ್ದು 2 ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, 3 ಖಾಸಗಿ ಪ್ರೌಢ ಶಾಲೆಗಳು ಹಾಗೂ ಒಂದು ಪದವಿಪೂರ್ವ ವಿದ್ಯಾಲಯವನ್ನು ಒಳಗೊಂಡಿದೆ. ಯಕ್ಷಗಾನ ಕಲೆ ಇಲ್ಲಿಯ ಸಾಂಸ್ಕೃತಿಕ ಲೋಕದ ಪ್ರಮುಖ ಆಕರ್ಷಣೆಯಾಗಿದೆ. ಪಂಚಾಯತ್ ಪ್ರದೇಶದ ಬಹತೇಕ ಕುಟುಂಬಗಳು ಆರ್ಥಿಕವಾಗಿ ಸಬಲರಾಗಿದ್ದು ಜನರ ಆರೋಗ್ಯ ಸ್ಥಿತಿ ಕೂಡ ಸರಾಸರಿಗಿಂತ ಮೇಲ್ಮಟ್ಟದ್ದಾಗಿರುತ್ತದೆ[95].

ಶಿರ್ವ ಗ್ರಾಮವು ಪಶ್ಚಿಮ ಕರಾವಳಿಯ ಸಮೀಪದಲ್ಲಿದ್ದು ಉಡುಪಿಯಿಂದ ಸುಮಾರು 20 ಕಿ.ಮೀ. ದೂರದಲ್ಲಿದೆ. ಶೈಕ್ಷಣಿಕ ಕೇಂದ್ರಗಳಾದ ಮಣಿಪಾಲ, ನಿಟ್ಟೆ ಹಾಗೂ ಕಾರ್ಕಳ ಊರುಗಳಿಂದ ಆವೃತಗೊಂಡಿದೆ. ಗ್ರಾಮವು ಮಲ್ಲಿಗೆ ಹೂವಿನ ಕೃಷಿಗೆ ಹೆಸರುವಾಸಿಯಾಗಿದೆ. ಸುಮಾರು 13390 ಜನಸಂಖ್ಯೆಯಿಂದ ಕೂಡಿರುವ ಶಿರ್ವ ಗ್ರಾಮ ಪಂಚಾಯತ್‌ನ 19 ವಾರ್ಡುಗಳಲ್ಲಿ 13 ಪುರುಷ ಸದಸ್ಯರು 13 ಮಹಿಳಾ ಸದಸ್ಯರಂತೆ ಒಟ್ಟು 26 ಸದಸ್ಯರುಗಳನ್ನು ಹೊಂದಿರುವ ದೊಡ್ಡ ಗ್ರಾಮ ಪಂಚಾಯತ್ ಆಗಿದೆ. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಇದನ್ನು ಮಧ್ಯಮ ಸ್ಥಾನದ ಗ್ರಾಮ ಪಂಚಾಯತ್ ಎಂದು ಪರಿಗಣಿಸಲಾಗಿದೆ[96]. ಈ ಗ್ರಾಮದಲ್ಲಿ ಧರ್ಮ

ಮತ್ತು ಭಾಷೆಗೆ ಸಂಬಂಧಿಸಿದಂತೆ ಹಿಂದೂ ಮತ್ತು ಕ್ರೈಸ್ತ ಕುಟುಂಬಗಳು ಅನ್ಯೋನ್ಯವಾಗಿ ಜೀವನ ನಡೆಸುತ್ತಿದ್ದಾರೆ ಮತ್ತು ಮಾತೃ ಭಾಷೆಯಾಗಿ ಹೆಚ್ಚಾಗಿ ತುಳು ಮಾತನಾಡುತ್ತಾರೆ. ಅಲ್ಲದೆ ಕೊಂಕಣಿ, ಕನ್ನಡ, ಬ್ಯಾರಿ ಭಾಷೆಗಳು ಪ್ರಮುಖ ಆಡು ಭಾಷೆಗಳಾಗಿವೆ. ಇಲ್ಲಿನ ನಿವಾಸಿಗಳು ಮಧ್ಯ ಪ್ರಾಚ್ಯ ದೇಶಗಳಲ್ಲಿ ಕೆಲಸ ಮಾಡುತ್ತಿದ್ದು ದೇಶದ ಆರ್ಥಿಕತೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಇಲ್ಲಿಯ ಶೇ.50 ಜನರು ವ್ಯವಸಾಯದಿಂದ ಜೀವನ ಸಾಗಿಸುತ್ತಿದ್ದು ಇತರ ಕಸುಬುಗಳಾದ ಕಮ್ಮಾರಿಕೆ, ಬಡಗಿ, ಕುಂಬಾರಿಕೆ, ಬೀಡಿಕಟ್ಟುವುದು, ಗೋಡಂಬಿ ಬೀಜ ಸಂಸ್ಕರಣೆ ಇತ್ಯಾದಿ ವೃತ್ತಿಯನ್ನು ಮಾಡುತ್ತಿರುತ್ತಾರೆ. ಇಲ್ಲಿನ ಮಹಿಳೆಯರು ಹೆಚ್ಚಾಗಿ ಮಲ್ಲಿಗೆ ಕೃಷಿಯನ್ನು ಅವಲಂಬಿಸಿದ್ದು, ಹೈನುಗಾರಿಕೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಈ ಗ್ರಾಮ ಪಂಚಾಯತ್ ಶೈಕ್ಷಣಿಕವಾಗಿ ಸಾಕಷ್ಟು ಅಭಿವೃದ್ಧಿಯನ್ನು ಹೊಂದಿದ್ದು, ಎರಡು ಪದವಿ ಕಾಲೇಜುಗಳಿರುವುದು ವಿಶೇಷವಾಗಿರುತ್ತದೆ ಮಾತ್ರವಲ್ಲದೇ ಶೇ.100ರಷ್ಟು ಸಾಕ್ಷರತಾ ಪ್ರಮಾಣವನ್ನು ದಾಖಲಿಸಿದೆ[97]. ಇಲ್ಲಿ ಹಲವಾರು ಜನಾಂಗದವರು ವಾಸಿಸುತ್ತಿದ್ದು ಬ್ರಾಹ್ಮಣ, ಬಿಲ್ಲವ, ಕ್ರಿಶ್ಚಿಯನ್, ಬಂಟ, ಜೈನ, ಕುಲಾಲ, ಕೊಂಕಣಿ, ವಿಶ್ವಕರ್ಮ, ಮಡಿವಾಳ, ಶೇರ್ವೆಗಾರ, ಮೊಯಿಲಿ, ಮೊಗವೀರ, ಮುಸ್ಲಿಮ್, ಭಂಡಾರಿ, ಪ.ಜಾ., ಪ.ಪಂ. ಮುಂತಾದ ಜನಾಂಗದವರಿದ್ದಾರೆ.

ಗಂಗೊಳ್ಳಿ ಗ್ರಾಮ ಪಂಚಾಯತ್ ಕುಂದಾಪುರ ತಾಲೂಕಿನ ದೊಡ್ಡ ಗ್ರಾಮಗಳಲ್ಲೊಂದು. ಕುಂದಾಪುರದಿಂದ ಸುಮಾರು 19 ಕಿ.ಮೀ. ದೂರದಲ್ಲಿದೆ. ಗಂಗೊಳ್ಳಿ ಒಂದೇ ಒಂದು ಗ್ರಾಮವನ್ನು ಹೊಂದಿದ್ದು, ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಉನ್ನತ ಸ್ಥಾನದ ಗ್ರಾಮ ಪಂಚಾಯತ್ ಆಗಿರುತ್ತದೆ[98]. ಈ ಗ್ರಾಮ ಪಂಚಾಯತ್ 10 ವಾರ್ಡ್‌ಗಳನ್ನೊಳಗೊಂಡಿದ್ದು, 6 ಪುರುಷ ಸದಸ್ಯರು, 8 ಮಹಿಳಾ ಸದಸ್ಯರಂತೆ ಒಟ್ಟು 14 ಜನ ಸದಸ್ಯರನ್ನೊಳಗೊಂಡಿದೆ. ಈ ಪಂಚಾಯತ್ ವ್ಯಾಪ್ತಿಯ ಪ್ರದೇಶವು 1005 ಎಕ್ರೆ ವಿಸ್ತೀರ್ಣ ಹೊಂದಿದ್ದು, ಪೂರ್ವದಲ್ಲಿ ಪಂಚಗಂಗಾವಳಿ ನದಿಗಳ ಸಂಗಮ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ದಕ್ಷಿಣದಲ್ಲಿ ಗಂಗೊಳ್ಳಿ ಅಳಿವೆ ಬಾಗಿಲು ಮತ್ತು ಉತ್ತರದಲ್ಲಿ ಗುಜ್ಜಾಡಿ ಗ್ರಾಮಗಳಿಂದ ಸುತ್ತುವರಿದಿದೆ. ಲೈಟ್ ಹೌಸ್‌ನ್ನು ಹೊಂದಿರುವ ಗಂಗೊಳ್ಳಿ ಗ್ರಾಮವು ಪ್ರವಾಸಿ ತಾಣವೂ ಆಗಿದೆ. ಭೌಗೋಳಿಕವಾಗಿ ಚಿಕ್ಕ ಪ್ರದೇಶವಾದರೂ ಹೆಚ್ಚಿನ ಜನಸಾಂದ್ರತೆಯಿಂದ ಕೂಡಿದೆ. ಕುಂದಾಪುರದಿಂದ ಬೈಂದೂರಿಗೆ ಸಾಗುವಾಗ ಮುಳ್ಳಿಕಟ್ಟೆ ಕ್ರಾಸ್ ಅಥವಾ ತ್ರಾಸಿ ಕ್ರಾಸ್‌ನಿಂದ ಗಂಗೊಳ್ಳಿಗೆ ಸುಮಾರು 6 ಕಿ.ಮೀ. ದೂರವಿದೆ. ಗಂಗೊಳ್ಳಿ ಹೃದಯ ಭಾಗದಲ್ಲಿ ಮುಖ್ಯರಸ್ತೆ ಹಾದುಹೋಗುತ್ತದೆ. ಇಲ್ಲಿಯ ಜನರು ಕೃಷಿ, ಮೀನುಗಾರಿಕೆ ಮತ್ತು ಮರಳು

ತೆಗೆಯುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಲ್ಲಿಯ ಜನರ ಮುಖ್ಯ ಉದ್ಯೋಗ ಕೃಷಿ ಆಗಿದ್ದರೂ ಹೆಚ್ಚಿನ ಮಹಿಳೆಯರು ಖಾಸಗಿ ಹಾಗೂ ಸರಕಾರಿ ಸಂಸ್ಥೆಗಳಲ್ಲಿ ಮಾತ್ರವಲ್ಲದೇ ಸ್ವಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಪಂಚಾಯತ್ ವ್ಯಾಪ್ತಿಯಲ್ಲಿ ಅರಣ್ಯ ಹರಡಿಕೊಂಡಿದ್ದು, ಫಲವತ್ತಾದ ಭೂಮಿ, ಮರಳು ಯಥೇಚ್ಛ ಪ್ರಮಾಣದಲ್ಲಿ ದೊರಕುತ್ತದೆ ಆದುದರಿಂದ ಇದು ಆರ್ಥಿಕವಾಗಿ ಮುಂದುವರಿದ ಗ್ರಾಮವಾಗಿದೆ. ಇಲ್ಲಿ ತೆಂಗು, ಭತ್ತ, ಕಡಲೆ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯಲಾಗುತ್ತಿದೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಎಸ್.ಸಿ., ಎಸ್.ಟಿ., ಬಂಟ, ರಾಜಾಪುರಿ ನಾಯಕ, ಜಿ.ಎಸ್.ಬಿ., ಮರಾಠಿ ನಾಯ್ಕ, ಬಿಲ್ಲವ, ಮೊಗವೀರ, ಶೆಟ್ಟಿಗಾರ, ಬ್ರಾಹ್ಮಣ ಇನ್ನೂ ಮುಂತಾದ ಜನಾಂಗದವರು ವಾಸವಾಗಿದ್ದು ಸಹಬಾಳ್ವೆ ಜೀವನ ನಡೆಸುತ್ತಿದ್ದಾರೆ. ಇಲ್ಲಿನ ಮೊಗವೀರ ಮಹಿಳೆಯರು ಹೆಚ್ಚಾಗಿ ಮೀನುಗಾರಿಕೆಯಲ್ಲಿ ತೊಡಗಿರುವುದು ಕಂಡುಬಂದಿರುತ್ತದೆ. ಶಿಕ್ಷಣ, ಆರೋಗ್ಯ, ಆರ್ಥಿಕತೆ, ಸಾಂಸ್ಕೃತಿಕ, ಇತ್ಯಾದಿ ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಕಷ್ಟು ಅಭಿವೃದ್ಧಿಯನ್ನು ಹೊಂದಿದ ಗ್ರಾಮ ಪಂಚಾಯತ್ ಎಂದು ಪರಿಗಣಿಸಲಾಗಿದೆ[99].

ಕೋಣಿ ಗ್ರಾಮ ಪಂಚಾಯತ್ ಕೋಣಿ ಮತ್ತು ಕಂದಾವರ ಎಂಬ 2 ಗ್ರಾಮವನ್ನು ಹೊಂದಿದೆ. ಕೋಣಿ ಗ್ರಾಮವು 3 ವಾರ್ಡ್‌ನ್ನು, ಕಂದಾವರವು 2 ವಾರ್ಡ್‌ನ್ನು ಹೊಂದಿದೆ. ಕೋಣಿ ಗ್ರಾಮವು ಕುಂದಾಪುರ ತಾಲೂಕಿನಿಂದ 3 ಕಿ.ಮೀ. ದಕ್ಷಿಣಕ್ಕೆ ಇದೆ ಹಾಗೂ ಕಂದಾವರವು 6 ಕಿ.ಮೀ. ಪೂರ್ವದಲ್ಲಿದೆ. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಕೆಳಸ್ಥಾನದ ಗ್ರಾಮ ಪಂಚಾಯತ್ ಆಗಿದೆ[100]. ಕೋಣಿ ಗ್ರಾಮ ಪಂಚಾಯತ್‌ನ ಒಟ್ಟು ಜನಸಂಖ್ಯೆ 6343. ಕೋಣಿ ಗ್ರಾಮದಲ್ಲಿ 643 ಕುಟುಂಬಗಳಿದ್ದು, ಕಂದಾವರದಲ್ಲಿ 616 ಕುಟುಂಬಗಳಿವೆ. ಈ ಗ್ರಾಮ ಪಂಚಾಯತ್ 5 ವಾರ್ಡ್‌ಗಳನ್ನೊಳಗೊಂಡಿದ್ದು 7 ಪುರುಷ ಸದಸ್ಯರು, 7 ಮಹಿಳಾ ಸದಸ್ಯರಂತೆ ಒಟ್ಟು 14 ಜನ ಸದಸ್ಯರನ್ನೊಳಗೊಂಡಿದೆ. ಕೋಣಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬಿಲ್ಲವ ಸಮುದಾಯದವರೇ ಅಧಿಕ ಸಂಖ್ಯೆಯಲ್ಲಿದ್ದು ನಂತರದಲ್ಲಿ ಮೊಗವೀರ, ಶೇರ್ವೆಗಾರರು ಹಾಗೂ ಕ್ರೈಸ್ತರು ಬರುತ್ತಾರೆ. ಕೋಣಿ ಗ್ರಾಮದ ಜನರ ಮುಖ್ಯ ಉದ್ಯೋಗ ಕೃಷಿಯಾಗಿರುತ್ತದೆ. ಭತ್ತ ಇಲ್ಲಿನ ಪ್ರಮುಖ ಬೆಳೆಯಾಗಿದ್ದು ತೆಂಗು, ಬಾಳೆ, ಅಡಿಕೆ, ಮಾವು, ಮಲ್ಲಿಗೆ, ರಬ್ಬರ್, ಗೇರು, ಮತ್ತು ಸ್ವಲ್ಪ ಪ್ರಮಾಣದಲ್ಲಿ ರೇಷ್ಮೆ, ಶೇಂಗಾ ಬೆಳೆ ಬೆಳೆಯುತ್ತಾರೆ. ಈ ಪ್ರದೇಶದ ಮಹಿಳೆಯರು ಕೃಷಿ ಹೊರತುಪಡಿಸಿದರೆ ಹೈನುಗಾರಿಕೆ, ಬೀಡಿ ಕಟ್ಟುವುದು, ಗೇರು ಬೀಜ ಸಂಸ್ಕರಣೆ, ಕಲ್ಲು ಗಣಿಗಾರಿಕೆ, ಮೊದಲಾದ ಕೆಲಸಗಳನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ[101].

ಈ ಗ್ರಾಮ ಪಂಚಾಯತ್ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿದೆ. ಅಂಪಾರು ಗ್ರಾಮ ಪಂಚಾಯತ್ 5 ವಾರ್ಡುಗಳನ್ನು ಒಳಗೊಂಡಿದ್ದು, 5 ಪುರುಷ ಮತ್ತು 7 ಮಹಿಳಾ ಸದಸ್ಯರಂತೆ ಒಟ್ಟು 12 ಸದಸ್ಯರ ಬಲ ಹೊಂದಿದೆ. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಮಧ್ಯಮ ಸ್ಥಾನದ ಗ್ರಾಮಪಂಚಾಯತ್ ಆಗಿದೆ[102]. ಈ ಗ್ರಾಮ ಪಂಚಾಯತ್ ಒಟ್ಟು 5170 ಜನಸಂಖ್ಯೆಯನ್ನು ಹೊಂದಿದ್ದು ಅದರಲ್ಲಿ 2481 ಗಂಡು, 2689 ಹೆಣ್ಣು ಆಗಿದ್ದು, ಸ್ತ್ರೀಯರ ಲಿಂಗಾನುಪಾತವು ಹೆಚ್ಚಿನ ಪ್ರಮಾಣದಲ್ಲಿದೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸುಮಾರು 1320 ಕುಟುಂಬಗಳಿವೆ. ಅಲ್ಲದೇ 2 ಅಂಗನವಾಡಿ ಕೇಂದ್ರ, 4 ಕಿರಿಯ ಮತ್ತು 2 ಹಿರಿಯ ಪ್ರಾಥಮಿಕ ಶಾಲೆ, 1 ಪೌಢ ಶಾಲೆ, 1 ಪದವಿಪೂರ್ವ ಶಿಕ್ಷಣದ ವ್ಯವಸ್ಥೆಯಿದೆ. ಆದರೂ ಈ ಭಾಗದ ಕೆಲವು ಜನಾಂಗಗಳಾದ ಪ.ಜಾ, ಪ.ಪಂ., ವರ್ಗದವರು ತಮ್ಮ ಮಕ್ಕಳನ್ನು ಪ್ರಾಥಮಿಕ ಹಂತದಲ್ಲಿಯೇ ವಿದ್ಯಾಭ್ಯಾಸವನ್ನು ಬಿಡಿಸಿ ಕೂಲಿ ಕೆಲಸಗಳಿಗೆ ಕಳುಹಿಸುತ್ತಿದ್ದಾರೆ. ಶೇಕಡಾ 77ರಷ್ಟು ಬಿ.ಪಿ.ಎಲ್. ಕುಟುಂಬವನ್ನು ಒಳಗೊಂಡಿರುತ್ತದೆ. ಈ ಗ್ರಾಮ ಪಂಚಾಯತ್‌ನಲ್ಲಿ ಬಹುತೇಕ ಜನರು ಕೊಂಕಣಿ, ಬಿಲ್ಲವ, ಮೊಗವೀರ, ಶೇರ್ವೆಗಾರ ಹಾಗೂ ಬಂಟ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕೃಷಿ ಮತ್ತು ತೋಟಗಾರಿಕೆ ಅವಲಂಬಿಸಿ ಜೀವನ ಸಾಗಿಸುತ್ತಿದ್ದಾರೆ. ಭತ್ತ ಇಲ್ಲಿನ ಪ್ರಮುಖ ಬೆಳೆಯಾಗಿದ್ದು ತೆಂಗು, ಬಾಳೆ, ಮಾವು, ಮಲ್ಲಿಗೆ, ಗೇರು ಬೆಳೆಯುತ್ತಾರೆ. ಈ ಪ್ರದೇಶದಲ್ಲಿನ ಹೆಚ್ಚಿನ ಮಹಿಳೆಯರು ಕೃಷಿ ಹೊರತುಪಡಿಸಿದರೆ ಹೈನುಗಾರಿಕೆ, ಬೀಡಿ ಕಟ್ಟುವುದು ಇತ್ಯಾದಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆ[103].

ಉಪ್ಪೂರು ರೆವಿನ್ಯೂ ಗ್ರಾಮವನ್ನು ಹೊಂದಿರುವ ಗ್ರಾಮ ಪಂಚಾಯತ್. ತಾಲೂಕು ಕೇಂದ್ರವಾದ ಉಡುಪಿಯಿಂದ ಸುಮಾರು 10 ಕಿ.ಮೀ. ದೂರದಲ್ಲಿದೆ. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಇದು ಕೆಳಸ್ಥಾನದ ಗ್ರಾಮ ಪಂಚಾಯತ್ ಆಗಿದೆ[104]. ಇದು ಉಡುಪಿ ಜಿಲ್ಲೆಯ ನಂ. 24ನೇ ಗ್ರಾಮ ಪಂಚಾಯತ್ ಆಗಿರುತ್ತದೆ. ಉತ್ತರಕ್ಕೆ ಬೈಕಾಡಿ, ಹೇರೂರು, ದಕ್ಷಿಣಕ್ಕೆ ಶಿವಳ್ಳಿ, ಪೂರ್ವಕ್ಕೆ ಆರೂರು ಮತ್ತು ಹಾವಂಜೆ, ಪಶ್ಚಿಮಕ್ಕೆ ಕಲ್ಯಾಣಪುರ, ಉತ್ತರ ಮತ್ತು ದಕ್ಷಿಣದಲ್ಲಿ ನದಿಗಳಿಂದ ಸುತ್ತುವರಿದಿದ್ದು ಪಶ್ಚಿಮದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುತ್ತದೆ. ಉಪ್ಪೂರು ಗ್ರಾಮ ಪಂಚಾಯತ್ ಭೌಗೋಳಿಕವಾಗಿ ಅಧೀನ ನಂಜ 1125.96 ಎಕ್ರೆ ಅಧೀನ ಭಾಗಾಯ್ತು, 343.02 ಎಕ್ರೆ ಅಧೀನ ಪುಂಜ, 743.06 ಎಕ್ರೆ ಅನಾಧೀನ ಪುಂಜ, 245.56 ಎಕ್ರೆ ಪೊರಂಬೋಕು, 642.47 ಎಕ್ರೆ ಜುಮಲಾ, 3103.07 ಎಕ್ರೆಯುನ್ನು ಹೊಂದಿದೆ. ಪಂಚಾಯತ್ ವ್ಯಾಪ್ತಿಯಲ್ಲಿ ನದಿಗಳು

ಹರಿಯುವುದರಿಂದ ಇಲ್ಲಿಯ ಜನರು ಕೃಷಿ, ಮೀನುಗಾರಿಕೆ, ಮರಳು ತೆಗೆಯುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಲ್ಲಿಯ ಜನರ ಮುಖ್ಯ ಉದ್ಯೋಗ ಕೃಷಿ ಆಗಿದೆ. ಅಲ್ಲದೇ ಖಾಸಗಿ ಹಾಗೂ ಸರಕಾರಿ ಸಂಸ್ಥೆಗಳಲ್ಲಿ ಮತ್ತು ಸ್ವಯಂ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಉಪ್ಪೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಲ್ಲುಗಣಿಗಳು, ಸಾಮಾಜಿಕ ಅರಣ್ಯಗಳು, ಫಲವತ್ತಾದ ಭೂಮಿ, ಮರಳು ಯಥೇಚ್ಛ ಪ್ರಮಾಣದಲ್ಲಿದ್ದು ಇದೊಂದು ಆರ್ಥಿಕತೆಯ ಮೂಲವಾಗಿಯೂ ಕಂಡುಬರುತ್ತದೆ. ಎಲ್ಲಕ್ಕಿಂತ ಸುಶಿಕ್ಷಿತ ಮಾನವ ಸಂಪನ್ಮೂಲವು ಇಲ್ಲಿಯ ಮುಖ್ಯ ವಿಶೇಷತೆಯಾಗಿದೆ[105]. ಒಟ್ಟು 224.50 ಎಕ್ರೆಯಲ್ಲಿ ತೆಂಗು, ಭತ್ತ, ಕಡಲೆ, ದ್ವಿದಳ ಧಾನ್ಯಗಳನ್ನು ಬೆಳೆಯಲಾಗುತ್ತಿದೆ. ಉಪ್ಪೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಒಟ್ಟು 7170 ಜನಸಂಖ್ಯೆ ಇದ್ದು ಅದರಲ್ಲಿ 3481 ಪುರುಷರು ಹಾಗೂ 3689 ಮಹಿಳೆಯರಾಗಿದ್ದು, ಲಿಂಗಾನುಪಾತದಲ್ಲಿ ಸ್ತ್ರೀಯರ ಸಂಖ್ಯೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿದೆ. ಪ.ಜಾ. 436 ಜನಸಂಖ್ಯೆ (ಗಂ.217+ಹೆ.219), ಪ.ಪಂ. ಒಟ್ಟು 96 (ಗಂ.48+ಹೆ.48) ಜನಸಂಖ್ಯೆ ಹೊಂದಿದೆ. ಕ್ರೈಸ್ತ, ಮುಸಲ್ಮಾನರು, ಬ್ರಾಹ್ಮಣರು, ಬಂಟರು, ರಾಮಕ್ಷತ್ರಿಯರು, ಮೊಗವೀರರು, ಬಿಲ್ಲವರು, ಪ.ಜಾತಿ, ಪ.ಪಂ.ಗಳನ್ನು ಹೊಂದಿರುವ ಗ್ರಾಮ ಪಂಚಾಯತ್ ಎಲ್ಲಾ ಧರ್ಮಗಳ ನೆಲೆ ಬೀಡಾಗಿದೆ. ದೊಡ್ಡ ರೈತರು 7, ಸಣ್ಣ ರೈತರು 126, ಮಧ್ಯಮ (2–10ಹೆ) 44, ಅತೀ ಸಣ್ಣ (1ಕಡಿಮೆ) 1509 ಜನರನ್ನು ಗ್ರಾಮ ಪಂಚಾಯತ್ ಹೊಂದಿದೆ. ಅಲ್ಲದೇ 560 ಕೂಲಿಕಾರ್ಮಿಕರು, 75 ಕುಶಲಕರ್ಮಿಗಳನ್ನು ಹೊಂದಿದೆ. ಈ ಗ್ರಾಮ ಪಂಚಾಯತು 8 ವಾರ್ಡ್‌ಗಳನ್ನೊಳಗೊಂಡಿದ್ದು 8 ಪುರುಷ ಸದಸ್ಯರು 8 ಮಹಿಳಾ ಸದಸ್ಯರಂತೆ ಒಟ್ಟು 16 ಮಂದಿ ಸದಸ್ಯರನ್ನೊಳಗೊಂಡಿದೆ. ಈ ಗ್ರಾಮ ಸಂಪೂರ್ಣ ಸಾಕ್ಷರತೆಯನ್ನು ಹೊಂದಿದೆ.

ವಾರಂಬಳ್ಳಿ ಗ್ರಾಮ ಪಂಚಾಯತ್ ಜಿಲ್ಲಾ/ತಾಲೂಕು ಕೇಂದ್ರವಾದ ಉಡುಪಿಯಿಂದ 13 ಕಿ.ಮೀ. ಉತ್ತರ ದಿಕ್ಕಿನಲ್ಲಿದೆ. ಈ ಗ್ರಾಮ ಪಂಚಾಯತ್ ಕೇವಲ ಒಂದು ಗ್ರಾಮವನ್ನು ಒಳಗೊಂಡಿದೆ. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಇದು ಉನ್ನತ ಸ್ಥಾನದ ಗ್ರಾಮ ಪಂಚಾಯತ್[106]. ಇಲ್ಲಿ ಹಿಂದೆ ಅಳುಪ ಮತ್ತು ಜೈನರ ಆಳ್ವಿಕೆ ಇತ್ತು. ಇದು ಆಡಳಿತ ಕೇಂದ್ರವಾಗಿ ನಂತರ ಮಂಡಲ ಪಂಚಾಯತ್ ವ್ಯವಸ್ಥೆಯಲ್ಲಿ ಕೇಂದ್ರಸ್ಥಾನವಾಗಿದ್ದು, ಬಳಿಕ ಗ್ರಾಮ ಪಂಚಾಯತ್ ವ್ಯವಸ್ಥೆಯು ಜಾರಿಗೊಂಡಿದೆ. ಈ ಗ್ರಾಮ ಪಂಚಾಯತ್ 5 ವಾರ್ಡುಗಳನ್ನು ಒಳಗೊಂಡಿದ್ದು, 6 ಪುರುಷ ಮತ್ತು 8 ಮಹಿಳಾ ಸದಸ್ಯರಂತೆ ಒಟ್ಟು 14 ಸದಸ್ಯರ ಬಲ ಹೊಂದಿದೆ. ಇದು ಬ್ರಹ್ಮಾವರ ಹೋಬಳಿಗೆ ಸೇರಿದೆ. ವಾರಂಬಳ್ಳಿ ತಾಲೂಕು ಪಂಚಾಯತ್ ಕ್ಷೇತ್ರ ಮತ್ತು ಬ್ರಹ್ಮಾವರ ಜಿಲ್ಲಾ ಪಂಚಾಯತಿ

ಕ್ಷೇತ್ರದ ವ್ಯಾಪ್ತಿಯಲ್ಲಿದೆ. ಈ ಪಂಚಾಯತ್ ವ್ಯವಸ್ಥೆಗಳ ಜೊತೆಯಲ್ಲಿಯೇ ಗ್ರಾಮಗಳಲ್ಲಿ ಗ್ರಾಮ ಸಲಹಾ ಸಮಿತಿ, ಗ್ರಾಮಾಭಿವೃದ್ಧಿ ಸಮಿತಿ ಇತ್ಯಾದಿ ಇರುವುದು ಕಂಡುಬಂದಿರುತ್ತದೆ. ಈ ಪಂಚಾಯತ್ ವ್ಯಾಪ್ತಿಯಲ್ಲಿ ಶೇಕಡಾ 50 ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ಪ್ರಮುಖ ಬೆಳೆಯಾದ ಭತ್ತ, ತೆಂಗು, ಅಡಿಕೆ, ರಬ್ಬರ್, ಮಲ್ಲಿಗೆ ಕೃಷಿ ಇತ್ಯಾದಿಗಳ ಜೊತೆಗೆ ಶೇಕಡಾ 20ರಷ್ಟು ಜನರು ಉಪ ಕಸುಬುಗಳಾದ ಬಡಗಿ, ಕುಂಬಾರ, ಬೀಡಿಕಟ್ಟುವುದು, ಮೀನುಕಾರಿಕೆ, ಹೈನುಗಾರಿಕೆ ಟೈಲರಿಂಗ್ ಮುಂತಾದ ವೃತ್ತಿಯನ್ನು ಅವಲಂಬಿಸಿರುತ್ತಾರೆ. ಶೇಕಡಾ 20ರಷ್ಟು ಕುಟುಂಬಗಳು ಕೂಲಿಯಿಂದ ಜೀವನ ನಡೆಸುತ್ತಿದ್ದಾರೆ. ಉಳಿದಂತೆ ಶೇಕಡಾ 10ರಷ್ಟು ಕುಟುಂಬಗಳು ಸರಕಾರಿ ನೌಕರಿ ಮತ್ತು ಸ್ವ ಉದ್ಯೋಗದಲ್ಲಿ ತೊಡಗಿರುತ್ತಾರೆ. ಈ ಪಂಚಾಯತ್ ವ್ಯಾಪ್ತಿಯಲ್ಲಿ ಬಿಲ್ಲವ, ಬ್ರಾಹ್ಮಣ, ಜೈನ, ಕ್ರಿಶ್ಚಿಯನ್, ಮುಸ್ಲಿಮ್, ಮೊಯಿಲಿ, ಕುಲಾಲ, ಮೊಗವೀರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇತ್ಯಾದಿ ಜನಾಂಗದವರು ವಾಸಿಸುತ್ತಿದ್ದಾರೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸುಮಾರು 1330 ಕುಟುಂಬಗಳಿವೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 7 ಅಂಗನವಾಡಿ ಕೇಂದ್ರ, 3 ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆ, 3 ಪೌಢ ಶಾಲೆ, 2 ಪದವಿಪೂರ್ವ ಶಿಕ್ಷಣ ಹಾಗೂ ಒಂದು ಪದವಿ ಕಾಲೇಜು ಹಂತದ ಶಿಕ್ಷಣದ ವ್ಯವಸ್ಥೆಯಿದೆ. ಆದರೂ ಈ ಭಾಗದ ಕೆಲವು ಜನಾಂಗಗಳಾದ ಪ.ಜಾ, ಪ.ಪಂ., ಹಿಂದುಳಿದ ವರ್ಗದವರು ತಮ್ಮ ಮಕ್ಕಳನ್ನು ಕಾಲೇಜು ಹಂತದಲ್ಲಿಯೇ ವಿದ್ಯಾಭ್ಯಾಸವನ್ನು ಬಿಡಿಸಿ ಕೂಲಿ ಕೆಲಸಗಳಿಗೆ ಕಳುಹಿಸುತ್ತಿದ್ದಾರೆ[107]. ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ಆರ್ಥಿಕತೆಯಲ್ಲಿ ಮುಂದುವರಿದ ಗ್ರಾಮವೆಂದು ಪರಿಗಣಿಸಲಾಗಿದೆ. ಇಲ್ಲಿ ಸ್ವಸಹಾಯ ಸಂಘಗಳು ಹೆಚ್ಚಿದ್ದು ಮಹಿಳೆಯರು ಅದರಲ್ಲಿ ಸಕ್ರಿಯವಾಗಿ ತೊಡಗಿರುವುದು ಕಂಡುಬಂದಿರುತ್ತದೆ.

ಕೋಟೇಶ್ವರ ಗ್ರಾಮವು ಉಡುಪಿ ಜಿಲ್ಲೆಯ ಉತ್ತರ ತುದಿಯ ತಾಲೂಕು ಕೇಂದ್ರವಾದ ಕುಂದಾಪುರದಿಂದ 4 ಕಿ.ಮೀ. ದಕ್ಷಿಣದಲ್ಲಿದೆ. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಉನ್ನತ ಸ್ಥಾನದ ಗ್ರಾಮ ಪಂಚಾಯತ್ ಎಂದು ಪರಿಗಣಿಸಲಾಗಿದೆ[108]. ಹಿಂದಿನ ಕಾಲದಲ್ಲಿ ಹಲವು ಗ್ರಾಮಗಳನ್ನು ಒಟ್ಟಾಗಿ ಕೋಟೇಶ್ವರ ಮಾಗಣಿ ಎಂದು ಕರೆಯಲಾಗುತ್ತಿತ್ತು. ಈ ಗ್ರಾಮ ಪಂಚಾಯತ್ 6 ವಾರ್ಡ್‌ಗಳನ್ನೊಳಗೊಂಡಿದ್ದು 5 ಪುರುಷ ಸದಸ್ಯರು, 10 ಮಹಿಳಾ ಸದಸ್ಯರಂತೆ ಒಟ್ಟು 15 ಜನ ಸದಸ್ಯರನ್ನೊಳಗೊಂಡಿದೆ. ಇದು ಭೌಗೋಳಿಕವಾಗಿ ಪಶ್ಚಿಮದಲ್ಲಿ ಅರಬ್ಬೀ ಸಮುದ್ರ, ಉತ್ತರದಲ್ಲಿ ಕುಂದಾಪುರ, ಪೂರ್ವದಲ್ಲಿ ಕೋಣಿ–ಕಟ್ಕೇರೆ, ದಕ್ಷಿಣದಲ್ಲಿ ಗೋಪಾಡಿ–ಬೀಜಾಡಿಗಳನ್ನು ಹೊಂದಿದೆ. ಕೋಟೇಶ್ವರದ ಸುತ್ತಮುತ್ತ 68 ಧಾರ್ಮಿಕ ಕ್ಷೇತ್ರಗಳಿದ್ದು ಅವುಗಳಲ್ಲಿ ಕೋಟಿಲಿಂಗೇಶ್ವರ ಸನ್ನಿಧಾನ ಅತ್ಯಂತ ಪ್ರಮುಖವಾದುದು. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 2

ಕಿರಿಯ ಪ್ರಾಥಮಿಕ ಶಾಲೆ, 2 ಹಿರಿಯ ಪ್ರಾಥಮಿಕ ಶಾಲೆ, 1 ಸರ್ಕಾರಿ ಪ್ರೌಢ ಶಾಲೆ ಮತ್ತು ಖಾಸಗಿ ಕಾಲೇಜುಗಳಿವೆ. ಇಲ್ಲಿಯ ಸಾಕ್ಷರತಾ ಪ್ರಮಾಣವು ಶೇಕಡಾ 100ರಷ್ಟು ಇದೆ. ಈ ಗ್ರಾಮ ಪಂಚಾಯತ್‌ನಲ್ಲಿ ಬಹುತೇಕ ಜನರು ಬ್ರಾಹ್ಮಣ, ಬಿಲ್ಲವ, ಮೊಗವೀರ, ಶೇರ್ವೆಗಾರ ಹಾಗೂ ಬಂಟ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ. ಈ ಗ್ರಾಮದ ಹೆಚ್ಚಿನ ಜನರ ಮುಖ್ಯ ಕಸುಬು ಬೇಸಾಯವಾಗಿದೆ. ಇಲ್ಲಿನ ಮಹಿಳೆಯರು ಹೆಚ್ಚಾಗಿ ಬೀಡಿ ಕಾರ್ಮಿಕರಾಗಿದ್ದು, ಗೋಡಂಬಿ ಬೀಜ ಸಂಸ್ಕರಣೆಯ ಕಾರ್ಖಾನೆಯಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಸಂಗೀತ, ನಾಟಕ, ಯಕ್ಷಗಾನ ಇತ್ಯಾದಿ ಇಲ್ಲಿನ ಸಾಂಸ್ಕೃತಿಕ ಆಕರ್ಷಣೆಯಾಗಿದೆ. ಇಲ್ಲಿಯ ಜನರು ಮೀನುಗಾರಿಕೆ, ಹೈನುಗಾರಿಕೆ, ಕಲ್ಲುಗಣಿಗಾರಿಕೆ, ಕೃಷಿ ಬೆಳೆಯಾದ ಭತ್ತ, ತೆಂಗು, ಅಡಿಕೆ, ಮಲ್ಲಿಗೆ ಇತ್ಯಾದಿಗಳನ್ನು ಬೆಳೆಸುತ್ತಾರೆ[109].

ಈ ರೀತಿ ಸಂಶೋಧನಾ ಕ್ಷೇತ್ರಕಾರ್ಯಕ್ಕೆ ಸಂಬಂಧಪಟ್ಟಂತೆ ಮಹಿಳಾ ಪ್ರತಿನಿಧಿಗಳ ಕ್ರಿಯಾಶೀಲತೆ ಮತ್ತು ಒಟ್ಟು ಬೆಳವಣಿಗೆಯ ಮೇಲೆ ಬೆಳಕು ಚೆಲ್ಲಲು ರಾಜ್ಯದ ಕರಾವಳಿ ಪ್ರದೇಶದ ನೂತನ ಜಿಲ್ಲೆಯಾದ ಉಡುಪಿ ಜಿಲ್ಲೆಯ ಮೂರು ತಾಲೂಕುಗಳಾದ ಕಾರ್ಕಳ, ಕುಂದಾಪುರ ಮತ್ತು ಉಡುಪಿ ತಾಲೂಕುಗಳನ್ನು ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಗಿರುತ್ತದೆ. ಈ ತಾಲೂಕುಗಳ ಹದಿನಾರು ಗ್ರಾಮ ಪಂಚಾಯತ್‌ನ ನೂರನಲವತ್ತೆರಡು ಮಹಿಳಾ ಸದಸ್ಯರನ್ನು, ಉಡುಪಿ, ಕಾರ್ಕಳ ಮತ್ತು ಕುಂದಾಪುರ ತಾಲೂಕಿನ ಎಲ್ಲಾ 51 ಮಹಿಳಾ ಸದಸ್ಯರನ್ನು ಹಾಗೂ ಉಡುಪಿ ಜಿಲ್ಲಾ ಪಂಚಾಯತ್‌ನ ಎಲ್ಲಾ ಹದಿಮೂರು ಮಹಿಳಾ ಸದಸ್ಯರನ್ನು ಮೌಖಿಕವಾಗಿ ಸಂದರ್ಶಿಸಲಾಗಿರುತ್ತದೆ. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ 2008ರ ಪ್ರಕಾರ ಮಾನವ ಅಭಿವೃದ್ಧಿ ಸೂಚಿಗಳಿಗೆ ಅನುಗುಣವಾಗಿ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕು, ಕುಂದಾಪುರ ತಾಲೂಕು ಮತ್ತು ಉಡುಪಿ ತಾಲೂಕಿನ ಗ್ರಾಮ ಪಂಚಾಯತ್‌ಗಳನ್ನು ಉನ್ನತ ಸ್ಥಾನದ ಗ್ರಾಮ ಪಂಚಾಯತ್‌ಗಳು, ಮಧ್ಯಮ ಸ್ಥಾನದ ಗ್ರಾಮಪಂಚಾಯತ್‌ಗಳು ಮತ್ತು ಕೆಳಸ್ಥಾನದ ಗ್ರಾಮ ಪಂಚಾಯತ್‌ಗಳು ಎಂದು ವರ್ಗೀಕರಣ ಮಾಡಲಾಗಿದೆ. ಇದಕ್ಕನುಗುಣವಾಗಿ ಉಡುಪಿ ಜಿಲ್ಲೆಯ ಗ್ರಾಮ ಪಂಚಾಯತ್‌ಗಳನ್ನು ಕ್ಷೇತ್ರಕಾರ್ಯಕ್ಕೆ ಆಯ್ಕೆ ಮಾಡುವಾಗ ಒಟ್ಟು 146 ಗ್ರಾಮ ಪಂಚಾಯತ್‌ಗಳಲ್ಲಿ 10%ನ್ನು (16 ಗ್ರಾಮ ಪಂಚಾಯತ್‌ಗಳನ್ನು) ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಒಟ್ಟು ಅಧ್ಯಯನಕ್ಕೆ ಸಂಬಂಧಪಟ್ಟಂತೆ ಕಾರ್ಕಳ ತಾಲೂಕಿನ ಗ್ರಾಮ ಪಂಚಾಯತ್‌ಗಳಾದ ಹಿರ್ಗಾನ, ಕುಕ್ಕುಂದೂರು, ಈದು; ಕುಂದಾಪುರ ತಾಲೂಕಿನ ಗ್ರಾಮ ಪಂಚಾಯತ್‌ಗಳಾದ ಗಂಗೊಳ್ಳಿ, ಕಾವ್ರಾಡಿ, ಕೋಟೇಶ್ವರ, ಅಂಪಾರು, ಕೋಣಿ, ಬಳ್ಕೂರು ಮತ್ತು ಉಡುಪಿ ತಾಲೂಕಿನ ಗ್ರಾಮ ಪಂಚಾಯತ್‌ಗಳಾದ ಕಲ್ಯಾಣಪುರ, ವಾರಂಬಳ್ಳಿ, ವಡ್ಡರ್ಸೆ, ಕೋಟತಟ್ಟು, ಕೋಟ, ಶಿರ್ವ, ಉಪ್ಪೂರು ಗ್ರಾಮ ಪಂಚಾಯತ್‌ಗಳನ್ನು ಸಮುಚಿತ ನಮೂನೆ ವಿಧಾನದ ಮೂಲಕ ಆಯ್ದುಕೊಳ್ಳಲಾಗಿದೆ.

ಕೊನೆಟಿಪ್ಪಣಿಗಳು

1. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 11–18.
2. ಅದೇ ಪುಟ ಸಂಖ್ಯೆ 11–18.
3. ಅದೇ ಪುಟ ಸಂಖ್ಯೆ 11–18.
4. ಗುರುರಾಜ್ ಭಟ್, "ಸ್ಟಡೀಸ್ ಇನ್ ತುಳುವ ಹಿಸ್ಟರಿ ಆ್ಯಂಡ್ ಕಲ್ಚರ್", ಪಬ್ಲಿಷ್‌ಡ್ ಬೈ ಗುರುರಾಜ್ ಭಟ್, ಮಣಿಪಾಲ್ ಪವರ್ ಪ್ರೆಸ್, ಮಣಿಪಾಲ. ಪುಟ 22–68. ಉಡುಪಿ ಜಿಲ್ಲೆಯನ್ನು ತುಳುನಾಡು ಎಂದು ಕರೆಯಲಾಗುತ್ತದೆ. ಉಡುಪಿ ಎಂಬ ಹೆಸರು ತುಳುಪದ 'ಉಡುಪ' ಎಂಬ ಪದದಿಂದ ಬಂದಿದೆ ಎಂದು ಹೇಳಲಾಗುತ್ತದೆ. ಕ್ರಿ.ಪೂ. 4ನೇ ಶತಮಾನದ ಸಂಗಮ ಸಾಹಿತ್ಯದಲ್ಲಿ ತುಳುನಾಡಿನ ವಿವರಣೆ ದೊರೆಯುತ್ತದೆ. ವಿಜಯ ನಗರ ಅರಸರ ಕಾಲದಲ್ಲಿ 'ತುಳುವ' ತುಳು ಮಾತನಾಡುವ ಜನರು ಎಂಬುದಕ್ಕೆ ಹೆಚ್ಚಿನ ಮನ್ನಣೆ ನೀಡಲಾಗಿತ್ತು.
5. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 11.
6. ಅದೇ ಸಂಖ್ಯೆ ಪುಟ 11.
7. ಜಿಲ್ಲಾ ಪಂಚಾಯತ್ ಉಡುಪಿ, ಉಡುಪಿ ಡಿಸ್ಟ್ರಿಕ್ಟ್ ಅಟ್ ಗ್ಲ್ಯಾನ್ಸ್, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, 2013–14. ಪುಟ 7–10.
8. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಪ್ರಕಟಿಸಿರುವ 'ವಲಯವಾರು ಕರ್ನಾಟಕದ ಒಟ್ಟು ಜಿಲ್ಲಾ ವರಮಾನದ ಅಂದಾಜು' ಎಂಬ ವರದಿಯಿಂದ ಜಿಲ್ಲಾ ವರಮಾನದ ಮತ್ತು ತಲಾ ವರಮಾನದ ವಿವರಗಳನ್ನು ಪಡೆದು ಕೊಳ್ಳಲಾಗಿದೆ. 2011, ಪುಟ 12–66
9. ಅದೇ ಸಂಖ್ಯೆ ಪುಟ 76–84
10. ಅದೇ ಸಂಖ್ಯೆ ಪುಟ 76–84
11. ಗವರ್ನ್‌ಮೆಂಟ್ ಆಫ್ ಇಂಡಿಯಾ, 2011, ಸೆನ್ಸಸ್ 2011, ಆಫೀಸ್ ಆಫ್ ರಿಜಿಸ್ಟ್ರಾರ್ ಜನರಲ್, ಇಂಡಿಯಾ. ಪುಟ 6–20.
12. ಗವರ್ನ್‌ಮೆಂಟ್ ಆಫ್ ಕರ್ನಾಟಕ, 2001, ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್, ಪ್ಲಾನಿಂಗ್ ಆ್ಯಂಡ್ ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟ್, 2001, ಬೆಂಗಳೂರು. ಪುಟ 18–32.
13. ಉಡುಪಿ ಜಿಲ್ಲಾ ಅಂಕಿಅಂಶಗಳು 2011–2012, ಜಿಲ್ಲಾ ಪಂಚಾಯತ್, ಉಡುಪಿ, 2012. ಪುಟ 6–8.
14. ಅದೇ ಸಂಖ್ಯೆ ಪುಟ 6–8.
15. ಜಿಲ್ಲಾ ಪಂಚಾಯತ್ ಉಡುಪಿ, ಉಡುಪಿ ಡಿಸ್ಟ್ರಿಕ್ಟ್ ಅಟ್ ಗ್ಲ್ಯಾನ್ಸ್, 2013–14. ಪುಟ 22–31.
16. ಅದೇ ಸಂಖ್ಯೆ ಪುಟ 22–31.
17. ಉಡುಪಿ ಜಿಲ್ಲಾ ಪಂಚಾಯತ್ ವರದಿ – ಆಧಾರ 2001 ಮತ್ತು 2011ರ ಜನಗಣತಿ, ಜಿಲ್ಲಾ ಪಂಚಾಯತ್, ಉಡುಪಿ, 2012. ಪುಟ 11–18.
18. ಅದೇ ಸಂಖ್ಯೆ ಪುಟ 11–18.

19. ಅದೇ ಪುಟ ಸಂಖ್ಯೆ 11–18.
20. ಅದೇ ಪುಟ ಸಂಖ್ಯೆ 11–18.
21. ಅದೇ ಪುಟ ಸಂಖ್ಯೆ 11–18.
22. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಉಡುಪಿ – ಆಧಾರ: ಡಿಸ್ಟ್ರಿಕ್ಟ್ ಹೆಲ್ತ್ ಆರ್ಗನೈಸೇಷನ್, 2011–2012. ಪುಟ 151–160.
23. ಅದೇ ಪುಟ ಸಂಖ್ಯೆ 151–160.
24. ಉಡುಪಿ ಜಿಲ್ಲೆ–ಒಂದು ಅವಲೋಕನ, 2013–2014, ಡಿ.ಎಚ್.ಓ., 2014. ಪುಟ 66–97.
25. ಅದೇ ಪುಟ ಸಂಖ್ಯೆ 66–97.
26. ಅದೇ. ಪುಟ 66–97.
27. ಅಮರ್ತ್ಯಸೇನ್, ದ ಎಕನಾಮಿಕ್ಸ್ ಆಫ್ ಹ್ಯಾಪಿನೆಸ್ ಎಂಡ್ ಕೆಪೆಬಿಲಿಟಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 2008. ಪುಟ 124–162.
28. ಗುರುರಾಜ್ ಭಟ್, "ಸ್ಟಡೀಸ್ ಇನ್ ತುಳುವ ಹಿಸ್ಟರಿ ಆ್ಯಂಡ್ ಕಲ್ಚರ್ ಫ್ರಮ್ ಪ್ರೀ–ಹಿಸ್ಟಾರಿಕ್ ಟೈಮ್ಸ್ ಟು ಮಾಡರ್ನ್", ಮಣಿಪಾಲ್ ಪವರ್ ಪ್ರೆಸ್, 1975, ಮಣಿಪಾಲ. ಪುಟ 22–114. ಹೆಣ್ಣು ಮಕ್ಕಳಿಗೆ ಶಾಲೆ ನಿಷೇದವೆನಿಸಿದಂತಹ ಕಾಲದಲ್ಲಿ 1882ರಲ್ಲಿ ಬೆಸೆಲ್ ಮಿಷನ್ ಉಡುಪಿಯಲ್ಲಿ ಬಾಲಕಿಯರಿಗಾಗಿ ಶಾಲೆಯನ್ನು ಸ್ಥಾಪಿಸಿತು ಅಲ್ಲದೇ ಮೊದಲ ಬಾರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೂ ಶಾಲೆಗಳಲ್ಲಿ ಪ್ರವೇಶ ನೀಡಿತು.
29. ಅದೇ ಪುಟ ಸಂಖ್ಯೆ 22–114.
30. ಗವರ್ನ್‌ಮೆಂಟ್ ಆಫ್ ಕರ್ನಾಟಕ, ಎಜ್ಯುಕೇಷನ್ ಇನ್ ಕರ್ನಾಟಕ: ಆ್ಯನ್ ಎನಾಲಿಟಿಕಲ್ ರಿಪೋರ್ಟ್, ಎಸ್.ಎಸ್.ಎ, ಬೆಂಗಳೂರು, ಕರ್ನಾಟಕ, 2012. ಪುಟ 22–31.
31. ಅದೇ ಪುಟ ಸಂಖ್ಯೆ 22–31.
32. ಅದೇ ಪುಟ ಸಂಖ್ಯೆ 22–31.
33. ಗವರ್ನ್‌ಮೆಂಟ್ ಆಫ್ ಇಂಡಿಯಾ, ಸೆನ್ಸಸ್ 2011, ಆಫೀಸ್ ಆಫ್ ರಿಜಿಸ್ಟ್ರಾರ್ ಜನರಲ್, ಇಂಡಿಯಾ, 2012. ಪುಟ 28–36.
34. ಅದೇ ಪುಟ ಸಂಖ್ಯೆ 28–36.
35. ಅದೇ ಪುಟ ಸಂಖ್ಯೆ 28–36.
36. ಅದೇ ಪುಟ ಸಂಖ್ಯೆ 28–36.
37. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2014, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2014. ಪುಟ 283–285.
38. ಅದೇ ಪುಟ ಸಂಖ್ಯೆ 101–134.
39. ಅದೇ ಪುಟ ಸಂಖ್ಯೆ 101–134.
40. ಅದೇ ಪುಟ ಸಂಖ್ಯೆ 101–134.
41. ಗವರ್ನ್‌ಮೆಂಟ್ ಆಫ್ ಕರ್ನಾಟಕ, 2005, ಕರ್ನಾಟಕ ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್–2005, ಪ್ಲ್ಯಾನಿಂಗ್ ಆ್ಯಂಡ್ ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟ್, 2006. ಪುಟ 66–102.
42. ಡಿ.ಐ.ಎಸ್.ಇ, ಉಡುಪಿ 2013–2014 ಸರ್ವೇ. ಪುಟ 11–42.

43. ಅದೇ ಪುಟ ಸಂಖ್ಯೆ 11–42.
44. ಅದೇ ಪುಟ ಸಂಖ್ಯೆ 11–42.
45. ಜಿಲ್ಲಾ ಪಂಚಾಯತ್ ಉಡುಪಿ, ಉಡುಪಿ ಡಿಸ್ಟ್ರಿಕ್ಟ್ ಅಟ್ ಗ್ಲ್ಯಾನ್ಸ್, 2013–14, ಗವರ್ನ್‌ಮೆಂಟ್ ಆಫ್ ಕರ್ನಾಟಕ, ಬೆಂಗಳೂರು, 2014. ಪುಟ 26–28.
46. ಅದೇ ಪುಟ ಸಂಖ್ಯೆ 26–28.
47. ಅದೇ ಪುಟ ಸಂಖ್ಯೆ 26–28.
48. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2014, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2014. ಪುಟ 49–60.
49. ಅದೇ ಪುಟ ಸಂಖ್ಯೆ 286–290.
50. ಅದೇ ಪುಟ ಸಂಖ್ಯೆ 286–290.
51. 2001ರ ಜನಗಣತಿ ವರದಿ. ಗವರ್ನ್‌ಮೆಂಟ್ ಆಫ್ ಇಂಡಿಯಾ, ಸೆನ್ಸಸ್ ಆಫ್ ಇಂಡಿಯಾ–2001, ಗವರ್ನ್‌ಮೆಂಟ್ ಪ್ರೆಸ್, 2001, ಪುಟ 25–34
52. ಅದೇ ಪುಟ ಸಂಖ್ಯೆ 25–34
53. 2011ರ ಜನಗಣತಿ ವರದಿ. ಗವರ್ನ್‌ಮೆಂಟ್ ಆಫ್ ಇಂಡಿಯಾ, ಸೆನ್ಸಸ್ ಆಫ್ ಇಂಡಿಯಾ–2011, ಗವರ್ನ್‌ಮೆಂಟ್ ಪ್ರೆಸ್, 2011, ಪುಟ 66–102
54. ಅದೇ ಪುಟ ಸಂಖ್ಯೆ 66–102
55. ಅದೇ ಪುಟ ಸಂಖ್ಯೆ 96–102
56. ಅದೇ ಪುಟ ಸಂಖ್ಯೆ 58–64
57. ಜಿಲ್ಲಾ ಪಂಚಾಯತ್ ವರದಿ–2012–13, ಆಧಾರ: ಉಡುಪಿ ಜಿಲ್ಲಾ ಪಂಚಾಯತ್ ವರದಿ, 2012–13. ಪುಟ 16–17.
58. ಅದೇ ಪುಟ ಸಂಖ್ಯೆ 16–17.
59. ಬೀಡಿ ಉದ್ಯಮವು ಇತ್ತೀಚಿನ ವರ್ಷಗಳಲ್ಲಿ ಇಳಿಕೆಯತ್ತ ಸಾಗಿರುವುದು ಗ್ರಾಮೀಣ ಪ್ರದೇಶದ ಮಹಿಳೆಯರ ಉದ್ಯೋಗಗಳನ್ನು ಬಾಧಿಸಿದೆ. ಇದರಿಂದಾಗಿ ಮಹಿಳೆಯರ ಜೀವನಮಟ್ಟದಲ್ಲಿ ಏರುಪೇರಾಗಿರುವುದು ಕಂಡುಬಂದಿರುತ್ತದೆ.
60. ಮೀನುಗಾರಿಕಾ ಇಲಾಖೆ ವರದಿ, ಉಡುಪಿ ಜಿಲ್ಲೆ, 2014. ಪುಟ 49–61.
61. ಅದೇ ಪುಟ ಸಂಖ್ಯೆ 49–61.
62. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2014, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2014. ಪುಟ 55–65.
63. ಅದೇ ಪುಟ ಸಂಖ್ಯೆ 55–65.
64. ಅದೇ ಪುಟ ಸಂಖ್ಯೆ 55–65.
65. ಉಡುಪಿ ಜಿಲ್ಲಾ ಅಂಕಿಅಂಶಗಳ ನೋಟ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ಉಡುಪಿ, 2014. ಪುಟ 59–62. ಈ ಮಾಹಿತಿಯು 2005–06ಕ್ಕೆ ಸಂಬಂಧಿಸಿದೆ. ಈ ಮಾಹಿತಿಯನ್ನು ಉಡುಪಿ ಜಿಲ್ಲಾ ಸಾಂಖ್ಯಿಕ ಅಧಿಕಾರಿಯವರು ಪ್ರಕಟಿಸಿರುವ ಜಿಲ್ಲಾ ಅಂಕಿ ಅಂಶಗಳ ನೋಟ ಎಂಬ ದಾಖಲೆಯಿಂದ ಹಾಗೂ ಜಿಲ್ಲೆ ಕೈಗಾರಿಕಾ ಕೇಂದ್ರದಿಂದ ಪಡೆಯಲಾಗಿದೆ.
66. ಅದೇ ಪುಟ ಸಂಖ್ಯೆ 59–62.

67. ಅದೇ ಪುಟ ಸಂಖ್ಯೆ 59–62.
68. ಅದೇ ಪುಟ ಸಂಖ್ಯೆ 59–62.
69. ಅದೇ ಪುಟ ಸಂಖ್ಯೆ 59–62.
70. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2014, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2014. ಪುಟ 288–289.
71. ಅದೇ ಪುಟ ಸಂಖ್ಯೆ 288–289.
72. ಅದೇ ಪುಟ ಸಂಖ್ಯೆ 288–289.
73. ಅದೇ ಪುಟ ಸಂಖ್ಯೆ 288–289.
74. ಅದೇ ಪುಟ ಸಂಖ್ಯೆ 288–289.
75. ಕೂಲಿ ಕಾರ್ಮಿಕ ಮಹಿಳೆಯರಿಗೆ ಮತ್ತು ಪುರುಷರಿಗೆ ವೇತನ ತಾರತಮ್ಯ ಮಾಡುವುದು ಮಾಹಿತಿದಾರರ ಮತ್ತು ಸ್ಥಳೀಯ ಜನರ ಜೊತೆ ಚರ್ಚಿಸುವಾಗ ಪಡೆದುಕೊಂಡ ಮಾಹಿತಿ.
76. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
77. ಅದೇ ಪುಟ ಸಂಖ್ಯೆ 31–39.
78. ಕಲ್ಯಾಣಪುರ ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13.
79. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
80. ಅದೇ ಪುಟ ಸಂಖ್ಯೆ 31–39.
81. ಹಿರ್ಗಾನ ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13
82. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
83. ಕೋಟ ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13
84. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
85. ಕುಕ್ಕುಂದೂರು ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13
86. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
87. ವಡ್ಡರ್ಸೆ ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13
88. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
89. ಬಳ್ಕೂರು ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13
90. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
91. ಈದು ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13

92. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
93. ಕಾವ್ರಾಡಿ ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13
94. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
95. ಕೋಟತಟ್ಟು ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13
96. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
97. ಶಿರ್ವ ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13
98. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
99. ಗಂಗೊಳ್ಳಿ ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13
100. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
101. ಕೋಣಿ ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13
102. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
103. ಅಂಪಾರು ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13
104. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
105. ಉಪ್ಪೂರು ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13
106. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
107. ವಾರಂಬಳ್ಳಿ ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13
108. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರಕಾರ, 2008. ಪುಟ 31–39.
109. ಕೋಟೇಶ್ವರ ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13

ಅಧ್ಯಾಯ – 3

ಲಿಂಗ ಸಮಾನತೆ ಮತ್ತು ರಾಜ್ಯದ ಉಪಕ್ರಮಗಳು

ಅಧ್ಯಾಯ – 3

ಲಿಂಗ ಸಮಾನತೆ ಮತ್ತು ರಾಜ್ಯದ ಉಪಕ್ರಮಗಳು

ಸ್ವಾತಂತ್ರ್ಯೋತ್ತರದಲ್ಲಿ ಅಸ್ತಿತ್ವಕ್ಕೆ ಬಂದ ಉದಾರವಾದಿ ಪ್ರಜಾಸತ್ತಾತ್ಮಕ ವ್ಯವಸ್ಥೆ ಮತ್ತು ಸರಕಾರ ಸ್ತ್ರೀಯರನ್ನು ಸಮಾನರನ್ನಾಗಿ ಪರಿಗಣಿಸಿ ಅವರ ಹಿತಾಸಕ್ತಿಗಳ ಸಂರಕ್ಷಣೆ ಹಾಗೂ ಕಲ್ಯಾಣಾಭಿವೃದ್ಧಿಯ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಿರುತ್ತದೆ. ಮಹಿಳೆಯರಿಗೆ ಸಾಮಾಜಿಕ ನ್ಯಾಯದೊಂದಿಗೆ ಲಿಂಗ ಸಮಾನತೆಯನ್ನು ಸ್ಥಾಪಿಸುವ ಭರವಸೆ ನೀಡಿದೆ. ಅಭಿವೃದ್ಧಿಯನ್ನು ಸಾಧಿಸಲು ಹಾಗೂ ಅವರನ್ನು ಸಬಲರನ್ನಾಗಿಸಲು ಅದು ಹಲವಾರು ಕಾಲಮಿತಿಯುಳ್ಳ ಯೋಜನೆಗಳನ್ನು ಹಾಗು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇಂತಹ ಯೋಜನೆ ಹಾಗೂ ಕಾರ್ಯಕ್ರಮಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳಲು ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಪ್ರಧಾನಿ ನೇತೃತ್ವವುಳ್ಳ ತಂಡಗಳನ್ನು ಕೂಡ ರಚಿಸಲಾಗಿದೆ. ಭಾರತದ ಸ್ತ್ರೀಯರ ಸಂಖ್ಯಾಶಕ್ತಿಯ ಬಗ್ಗೆ ಹೇಳುವುದಾದರೆ, ಅವರು ಇಲ್ಲಿನ ಜನಸಂಖ್ಯೆಯ 48.1% ರಷ್ಟಿದ್ದಾರೆ. ಅಂದರೆ, ಹೆಚ್ಚುಕಡಿಮೆ ಜನಸಂಖ್ಯೆಯ ಅರ್ಧದಷ್ಟು ಮಂದಿ ಇರುವ ಸ್ತ್ರೀಯರು ನಮ್ಮ 'ಮಾನವ ಸಂಪನ್ಮೂಲ'ದ ಅರ್ಧಭಾಗದಷ್ಟಾಗುತ್ತಾರೆ[1]. ಈ ಸಂಪನ್ಮೂಲದ ಬಲಸಂವರ್ಧನೆ ಸರ್ಕಾರದ ಕರ್ತವ್ಯವಾಗಿದೆ. 1950ರ ದಶಕದಿಂದಲೂ ಸರ್ಕಾರವು ಮಹಿಳೆಯರ ಹಾಗೂ ಮಕ್ಕಳ ಕಲ್ಯಾಣದ ಬಗ್ಗೆ ವಿಶೇಷ ಲಕ್ಷ್ಯವಹಿಸುತ್ತಾ ಬಂದಿದೆ. ಕಳೆದ ಅರುವತ್ತೈದು ವರ್ಷಗಳಿಂದ ಸ್ತ್ರೀ ಸಂಬಂಧಿತ ವಿಷಯಗಳ ಕುರಿತಾದ ಸರ್ಕಾರದ ತಾತ್ವಿಕ ದೃಷ್ಟಿಯಲ್ಲೂ ಗಣನೀಯ ಬದಲಾವಣೆಯಾಗುತ್ತಾ ಬಂದಿದೆ. 1970ರವರೆಗೂ "ಸ್ತ್ರೀಯರ ಕಲ್ಯಾಣ" ಸಾಧನೆಯು ಸರ್ಕಾರದ ತಾತ್ವಿಕತೆಯನ್ನು ನಿರ್ದೇಶಿಸುವ ಮಹತ್ವದ ಅಂಶವಾಗಿತ್ತು. 1980ರ ದಶಕದಲ್ಲಿ ಈ ದೃಷ್ಟಿಯು "ಸ್ತ್ರೀಯರ ಅಭಿವೃದ್ಧಿ ಸಾಧನೆ"ಯ ಕಡೆಗೆ ಹೊರಳಿದರೆ, 1990ರ ನಂತರದಲ್ಲಿ "ಸ್ತ್ರೀ–ಸಶಕ್ತೀಕರಣ"[2]ದ ವಿಚಾರವು ಸ್ತ್ರೀಯರ ಪ್ರಗತಿಗೆ ಸಂಬಂಧಿಸಿದ ಎಲ್ಲಾ ಸರ್ಕಾರೀ ಕಾರ್ಯಕ್ರಮಗಳ ನಿರ್ದೇಶಕ ಸೂತ್ರವೆನಿಸಿಕೊಂಡಿತು.

ಮಹಿಳಾ ಸಶಕ್ತೀಕರಣ

ಪುರುಷರಿಗೆ ಸರಿಸಮಾನವಾದ ನೆಲೆಯಲ್ಲಿ ಪಾತ್ರವಹಿಸಲು ಸಹಾಯಕವಾಗುವಂತೆ ಸ್ತ್ರೀಯರಿಗೆ ಸಮಾನವಾದ ಹಕ್ಕುಗಳನ್ನು, ಅವಕಾಶಗಳನ್ನು ಹೊಣೆಗಾರಿಕೆಗಳನ್ನು ಹಾಗೂ ಅಧಿಕಾರವನ್ನು ನೀಡುವಂತಹ ಪ್ರಕ್ರಿಯೆಯನ್ನು ಸ್ತ್ರೀಸಶಕ್ತೀಕರಣ ಎಂದೆನ್ನಬಹುದು. "ಮಹಿಳಾ ಸಶಕ್ತೀಕರಣ" ಎಂದರೆ ಸ್ತ್ರೀಯರಿಗೆ

ತಮ್ಮ ಜೀವನವನ್ನು ನಿಯಂತ್ರಿಸುತ್ತಿರುವ ಇತರರಿಂದ ಮುಕ್ತಿ ಪಡೆದುಕೊಳ್ಳಲು ಹಾಗೂ ತಮ್ಮ ಜೀವನವನ್ನು ಮತ್ತು ಅದಕ್ಕೆ ಸಂಬಂಧಿಸಿದ ಪರಿಸ್ಥಿತಿಗಳನ್ನು ತಾವೇ ನಿಯಂತ್ರಿಸಿಕೊಳ್ಳಲು ಸೂಕ್ತವಾದ ಶಕ್ತಿಯನ್ನು ನೀಡುವುದೆಂದರ್ಥ. ಇತಿಹಾಸದುದ್ದಕ್ಕೂ ಸ್ತ್ರೀಯರನ್ನು "ಅಬಲೆಯರು" ಅಥವಾ "ದುರ್ಬಲರು" ಎಂದು ಪರಿಗಣಿಸಲಾಗಿತ್ತಲ್ಲದೆ ಅವರನ್ನು "ದ್ವಿತೀಯ ದರ್ಜೆಯ ಪ್ರಜೆಗಳು" ಎಂಬಂತೆಯೇ ನೋಡಿಕೊಳ್ಳಲಾಗುತ್ತಿತ್ತು. ಕುಟುಂಬ ನಿರ್ವಹಣೆಯ ಹೊಣೆ ಹೊತ್ತವರು ಎಂಬ ಅರ್ಥದಲ್ಲಿ ಅವರನ್ನು "ಮನೆ-ನಿರ್ಮಾತೃಗಳು" ಎಂದು ಕೂಡಾ ಕರೆಯುವುದಿತ್ತು. ಕಾಲಕಳೆದಂತೆ ಸಾಮಾಜಿಕ ವ್ಯವಸ್ಥೆಗಳಲ್ಲಿ ಆದಂತಹ ಪರಿವರ್ತನೆಗನುಗುಣವಾಗಿ ಮಹಿಳೆಯರ ಬಗೆಗಿನ ದೃಷ್ಟಿಕೋನ ಬದಲಾಯಿತು. 20ನೇ ಶತಮಾನದ ಆರಂಭದಲ್ಲಿ ಬ್ರಿಟನ್ ಮತ್ತು ಅಮೆರಿಕದಲ್ಲಿ ಸ್ತ್ರೀಯರಿಗೂ ಮತದಾನದ ಸಮಾನ ಹಕ್ಕನ್ನು ನೀಡಿದ ಮೇಲಂತೂ ಪಶ್ಚಿಮದ ಸಮಾಜಗಳಲ್ಲಿ ಅವರ ಅಂತಸ್ತಿನಲ್ಲಿ ಭಾರೀ ಸುಧಾರಣೆಯಾಯಿತು[3]. ಮಹಿಳೆಯರ ಅದೆಷ್ಟೋ ಅನರ್ಹತೆಗಳು ದೂರವಾದವು. ಹೆಚ್ಚಿನ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿಸಮಾನವಾದ ಅವಕಾಶ ಮತ್ತು ಹಕ್ಕುಗಳನ್ನು ಸ್ತ್ರೀಯರಿಗೂ ನೀಡಲಾಯಿತು.

ಆಫ್ರಿಕಾ ಹಾಗೂ ಏಷ್ಯಾ ಖಂಡದಲ್ಲಿನ ರಾಷ್ಟ್ರಗಳ ಸ್ತ್ರೀಯರು 20ನೇ ಶತಮಾನದ ದ್ವಿತೀಯಾರ್ಧದಲ್ಲಿಯೂ ಪುರುಷರಿಗೆ ಸರಿಸಮಾನವಾದ ಅಂತಸ್ತನ್ನು ಪಡೆಯುವುದು ಸಾಧ್ಯವಾಗಲಿಲ್ಲ. ಅನೇಕ ಬಗೆಯ ಅನರ್ಹತೆಗಳ ಆರೋಪಗಳನ್ನು ಹೊತ್ತ ಸ್ತ್ರೀಯರ ಶೋಷಣೆ ಒಂದಲ್ಲ ಒಂದು ರೀತಿಯಲ್ಲಿ ನಡೆದೇ ಇತ್ತು. "ಸ್ತ್ರೀಯರು" ಎಂಬ ಲಿಂಗಾಧಾರಿತ ಕಾರಣದಿಂದ ಪುರುಷರಿಗೆ ಸಮಾನವಾದ ಹಕ್ಕು ಹಾಗೂ ಅವಕಾಶಗಳ ನಿರಾಕರಣೆ ನಿರಂತರವಾಗಿ ಮುಂದುವರಿದಿತ್ತು. ಈ ಬೆಳವಣಿಗೆಯನ್ನು "ಲಿಂಗ ತಾರತಮ್ಯತೆ"[4]ಯ ಸಮಸ್ಯೆ ಎಂದು ಜಾಗತಿಕ ಮಟ್ಟದಲ್ಲಿ ಪರಿಗಣಿಸಲಾಯಿತು. ವಿಶ್ವಸಂಸ್ಥೆ ಕೂಡಾ ತನ್ನ ಹಲವಾರು ಸಭೆ ಹಾಗೂ ಪ್ರಕಟಣೆಗಳಲ್ಲಿ ಈ ತಾರತಮ್ಯವನ್ನು ಆದಷ್ಟು ಬೇಗನೆ ಕೊನೆಗಾಣಿಸಬೇಕೆಂದು ಕರೆ ನೀಡಿತು. ಸ್ತ್ರೀಯರ ಯಾತನೆ ಪೀಡನೆಗಳು, ಸಮಸ್ಯೆಗಳು ಹಾಗೂ ಅನರ್ಹತೆಗಳು, ಅವರ ಬಗೆಗಿನ ಅನಾದರ-ಅಸಡ್ಡೆ ಹಾಗೂ ಅಪಮಾನಗಳು ಇತಿಹಾಸಕ್ಕೆ ಸಂದುಹೋದ ಸಂಗತಿಯೆಂದು ಪರಿಗಣಿಸಿ ಶೀಘ್ರವಾಗಿ ಅವುಗಳ ನಿವಾರಣೆಗೆ ಸಂಬಂಧಪಟ್ಟ ಉಪಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಇದರಿಂದಾಗಿ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದಾಗಿ ತನ್ನ ದೃಢ ನಿರ್ಧಾರವನ್ನು ವಿಶ್ವಸಂಸ್ಥೆ ವ್ಯಕ್ತಪಡಿಸಿತು.

ಜಾಗತಿಕ ಮಟ್ಟದಲ್ಲಿ ಮಹಿಳಾ ಸಬಲೀಕರಣದ ಬಗೆಗಿನ ಉಪಕ್ರಮಗಳು

ಸ್ತ್ರೀಯರ ಶೋಷಣೆ ನಿಂತು ಅವರು ಪುರುಷರಿಗೆ ಸರಿಸಮಾನವಾಗಿ ಜೀವಿಸುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕೆಂಬ ಹಂಬಲ ವಿಶ್ವಸಂಸ್ಥೆಯ ಮೂಲಕ ಪ್ರಕಟವಾಗುತ್ತಲೇ ಇತ್ತು. 1975ರ

ವರ್ಷವನ್ನು ಅದು "ಅಂತಾರಾಷ್ಟ್ರೀಯ ಮಹಿಳಾ ವರ್ಷ"[5]ವೆಂದು ಘೋಷಿಸಿದಾಗ ಅದರ ಕೆಲವು ಸದಸ್ಯ ರಾಷ್ಟ್ರಗಳು ಸ್ತ್ರೀಯರ ಕಡೆಗೆ ವಿಶೇಷ ದೃಷ್ಟಿ ಹರಿಸಿದುವು. ಇದುವರೆಗೂ ಕೇವಲ ಸ್ತ್ರೀಯರ ಸಮಸ್ಯೆಗಳ ನಿವಾರಣೆಗಾಗಿ [ಆರೋಗ್ಯವರ್ಧನೆ, ಪೌಷ್ಠಿಕ ಆಹಾರಾಂಶಗಳ ಒದಗಣೆ, ಅಗತ್ಯ ವಸ್ತುಗಳ ಪೂರೈಕೆಯ ಸಮಸ್ಯೆ, ಇತ್ಯಾದಿ] ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದ ದೇಶಗಳು ಅವರ "ಅಭಿವೃದ್ಧಿ"ಯ ಕಡೆಗೆ ತಮ್ಮ ಲಕ್ಷ್ಯವನ್ನು ಹರಿಸಬೇಕೆಂದು ತಿಳಿಸಲಾಯಿತು. ಮಹಿಳೆಯರ ಮೇಲಿನ ಎಲ್ಲಾ ರೀತಿಯ ತಾರತಮ್ಯ ನಿವಾರಣಾ ಒಪ್ಪಂದವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ತ್ರೀ–ಪುರುಷರ ಸಮಾನತೆಯನ್ನು ಸಾಧಿಸುವುದಾಗಿದೆ. 1979ರಲ್ಲಿ ಈ ಒಪ್ಪಂದವನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಲಾಗಿತ್ತು. ಸಮಾಜದಲ್ಲಿ ಸಂಪೂರ್ಣ ಸಮಾನತೆಯನ್ನು ಪಡೆದು ಮಹಿಳೆಯರು ತಮ್ಮ ಹಕ್ಕುಗಳನ್ನು ಅನುಭವಿಸುವ ಸ್ವಾತಂತ್ರ್ಯವನ್ನು ಈ ಒಪ್ಪಂದವು ಒದಗಿಸುತ್ತದೆ (ಸಿ.ಇ.ಡಿ.ಎ.ಡಬ್ಲ್ಯು). ಈ ಒಪ್ಪಂದಕ್ಕೆ 179 ದೇಶಗಳು ಸಹಿ ಹಾಕಿವೆ. ಇವುಗಳಲ್ಲಿ ಭಾರತವೂ ಒಂದು. ಇದರಿಂದ ಮಹಿಳೆಯರ ಮೇಲಿನ ಎಲ್ಲಾ ಬಗೆಯ ತಾರತಮ್ಯವನ್ನು ಹೋಗಲಾಡಿಸುವ ಹೊಣೆ ಸರಕಾರಕ್ಕಿದೆ. ಆದುದರಿಂದ ಈ ಒಪ್ಪಂದದಲ್ಲಿ ಸೂಚಿಸಿದ ಎಲ್ಲಾ ಹಕ್ಕುಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ಅಳವಡಿಸಿಕೊಳ್ಳಲು ಬೇಕಾದ ಕ್ರಮಗಳನ್ನು ತೆಗೆದುಕೊಂಡಿರುತ್ತದೆ.

1979ರ ವಿಶ್ವಸಂಸ್ಥೆಯ ಘೋಷಣೆಯ ಮುಂದುವರಿದ ಭಾಗವೆಂಬಂತೆ 1985ರಲ್ಲಿ ನೈರೋಬಿಯಲ್ಲಿ ಜರುಗಿದ ಮೂರನೆಯ "ಸ್ತ್ರೀಯರ ಜಾಗತಿಕ ಮಹಾಸಭೆ"ಯಲ್ಲಿ "ಮಹಿಳಾ ಸಶಕ್ತೀಕರಣ"[6]ದ ಪ್ರಯತ್ನವನ್ನು ನಡೆಸಬೇಕೆಂದು ಬಲವಾದ ಶಿಫಾರಸ್ಸು ಮಾಡಲಾಯಿತು. ಈ ಸಂಬಂಧವಾಗಿ ಪ್ರಕಟಣೆಯೊಂದನ್ನು ಹೊರಡಿಸಿ ಜಗತ್ತಿನ ಎಲ್ಲಾ ದೇಶಗಳೂ ಸ್ತ್ರೀ ಸಬಲೀಕರಣದ ಕುರಿತು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯ ಮಾಡಲಾಯಿತು. 1995ರಲ್ಲಿ ಚೀನಾದ ಬೀಜಿಂಗ್‌ನಲ್ಲಿ ನಡೆದ 4ನೇ ಜಾಗತಿಕ ಮಹಿಳಾ ಸಮ್ಮೇಳನದಲ್ಲಿ 189 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ಸ್ತ್ರೀಯರಿಗೆ ಸಂಬಂಧಿಸಿದ ಹನ್ನೆರಡು ಗಂಭೀರ ವಿಷಯಗಳನ್ನು ಗುರುತಿಸಲಾಯಿತು. ಅವುಗಳೆಂದರೆ ಸ್ತ್ರೀಯರು ಮತ್ತು ಬಡತನ, ಆರೋಗ್ಯ, ಆರ್ಥಿಕ ಸ್ಥಿತಿ, ಮಾಧ್ಯಮ ಮತ್ತು ಹಕ್ಕುಗಳು, ಪರಿಸರ, ಹೆಣ್ಣು ಮಗು, ಮಾನವ ಹಕ್ಕುಗಳು ಮತ್ತು ಮಹಿಳೆ, ಮಹಿಳೆಯರ ಅಭಿವೃದ್ಧಿಗಾಗಿ ಸಾಂಸ್ಥಿಕ ವ್ಯವಸ್ಥೆಗಳು, ಇತ್ಯಾದಿ. ಸಮ್ಮೇಳನದಲ್ಲಿ "ಲಿಂಗ ಸಮಾನತೆ"ಯನ್ನು ಸ್ಥಾಪಿಸುವ ಬಗ್ಗೆ ಸರ್ವಾನುಮತದ ತೀರ್ಮಾನ ಕೈಗೊಳ್ಳಲಾಯಿತು.

2000ದ ಜೂನ್‌ನಲ್ಲಿ ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯ "ಸಾಮಾನ್ಯ ಸಭೆ"ಯ ವಿಶೇಷ ಅಧಿವೇಶನ[7]ವೊಂದನ್ನು ಸಂಘಟಿಸಲಾಗಿದ್ದು ಅದರಲ್ಲಿ "ಮಹಿಳೆ–2000: 21ನೇ ಶತಮಾನಕ್ಕಾಗಿ

ಸಮಾನತೆ, ಅಭಿವೃದ್ಧಿ ಮತ್ತು ಶಾಂತಿ" ಎಂಬ ವಿಷಯದ ಕುರಿತಾಗಿ ಚರ್ಚಿಸಲಾಯಿತು[7]. ಈ ಅಧಿವೇಶನದಲ್ಲಿ ಸದಸ್ಯ ರಾಷ್ಟ್ರಗಳ ಸರ್ಕಾರೇತರ ಸಂಘ ಸಂಸ್ಥೆಗಳು ಭಾಗವಹಿಸಿದ್ದು, ಇವುಗಳಿಗೆ 'ಲಿಂಗ ಸಮಾನತೆ'ಯನ್ನು ಸ್ಥಾಪಿಸುವಲ್ಲಿ ತಮ್ಮ ತಮ್ಮ ದೇಶಗಳಲ್ಲಿ ನಡೆಸಲಾದ ಕಾರ್ಯಕ್ರಮಗಳ ಪ್ರಗತಿಯನ್ನು ಮೌಲ್ಯಮಾಪನ ಮಾಡಲು ಅವಕಾಶ ನೀಡಲಾಯಿತು. ಈ ಜಾಗತಿಕ ಸಮ್ಮೇಳನಗಳಲ್ಲಿ ಬಿಡುಗಡೆ ಮಾಡಲಾಗಿದ್ದ ಪ್ರಕಟಣೆಗಳನ್ನು ಆಧಾರವಾಗಿಟ್ಟುಕೊಂಡು ಭಾರತದಲ್ಲಿಯೂ "ಮಹಿಳಾ ಸಶಕ್ತೀಕರಣ"ಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಪ್ರಕಟಣೆ ಮಾಡಲಾಯಿತು. ಮಾತ್ರವಲ್ಲ, 2001ನೇ ವರ್ಷವನ್ನು "ಮಹಿಳಾ ಸಶಕ್ತೀಕರಣ ವರ್ಷ"[8] ಎಂದು ಘೋಷಿಸಲಾಯಿತು. ಈ ಪ್ರಕಟಣೆಯಲ್ಲಿ ಸ್ತ್ರೀಯರ ಅಭಿವೃದ್ಧಿಯನ್ನು ಸಾಧಿಸುವುದರ ಮೂಲಕ ಅವರನ್ನು ಸಬಲಗೊಳಿಸುವ ಕಾರ್ಯತಂತ್ರಗಳ ಬಗ್ಗೆಯೂ ಪ್ರಸ್ತಾಪಿಸಲಾಯಿತು.

ಲಿಂಗ ಸಮಾನತೆಗಾಗಿ ರಾಷ್ಟ್ರದಲ್ಲಿ ಕೈಗೊಳ್ಳಲಾದ ಉಪಕ್ರಮಗಳು

ಸ್ತ್ರೀಯರ ಜಾಗತಿಕ ಮಹಾಸಭೆಗಳಲ್ಲಿ ನೀಡಿದ ಕರೆಯಂತೆ ಭಾರತ ಸರ್ಕಾರ ಸಿದ್ಧಪಡಿಸಿದ ರಾಷ್ಟ್ರೀಯ ದಸ್ತಾವೇಜು ಅಥವಾ ಪ್ರಕಟಣೆ ಕೆಲವು ಕಾರ್ಯತಂತ್ರಗಳನ್ನು ಒಳಗೊಂಡಿದೆ. ಈ ಪ್ರಕಾರ ಮೂರು ಕಾರ್ಯತಂತ್ರಗಳ ಬಗ್ಗೆ ವಿಶೇಷ ಒತ್ತು ನೀಡಲಾಯಿತು. ಅವುಗಳೆಂದರೆ: ಸ್ತ್ರೀಯರ ರಾಜಕೀಯ ಸಹಭಾಗಿತ್ವವನ್ನು ಪಡೆಯಲು ಚುನಾವಣೆಗಳಲ್ಲಿ ಕನಿಷ್ಠ 35%ರಷ್ಟು ಸ್ಥಾನಗಳನ್ನು ಅವರಿಗಾಗಿ ಮೀಸಲಿಡಬೇಕು. ಮಾತ್ರವಲ್ಲ, ಕೆಲವೊಂದು ಅಧಿಕಾರದ ಹುದ್ದೆಗಳನ್ನು ಬ್ಲಾಕುಗಳ ಹಾಗೂ ಗ್ರಾಮಗಳ ಹಂತದ ನೌಕರಶಾಹಿಯಲ್ಲಿಯೇ ಸ್ತ್ರೀಯರಿಗಾಗಿ ಮೀಸಲಿರಿಸಬೇಕು[9]. ಆರ್ಥಿಕ ರಂಗದಲ್ಲಿ ಆದಾಯ ನೀಡುವಂತಹ ಕೆಲವೊಂದು ಹೊಸ ಯೋಜನೆಗಳನ್ನು ಸ್ತ್ರೀಯರಿಗಾಗಿ ಜಾರಿಗೊಳಿಸಬೇಕು. ಜೊತೆಗೆ ಗ್ರಾಮಾಭಿವೃದ್ಧಿಯ ದೃಷ್ಟಿಯಿಂದ ಕೈಗೊಳ್ಳಲಾದ ಎಲ್ಲಾ ಅಭಿವೃದ್ಧಿ ಯೋಜನೆಗಳಲ್ಲೂ (ಐಆರ್‌ಡಿಪಿ, ಜೆಆರ್‌ವೈ, ಟ್ರೈಸೆಮ್, ಇತ್ಯಾದಿ) ಒಂದು ನಿರ್ದಿಷ್ಟ ಸಂಖ್ಯೆಯ ಸ್ತ್ರೀಯರು ಅವುಗಳ ಫಲಾನುಭವಿಗಳಾಗುವಂತೆ ನೋಡಿಕೊಳ್ಳುವುದು ಮತ್ತು ಸಾಮಾಜಿಕ ರಂಗದಲ್ಲಿ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಸ್ತ್ರೀಯರ ಸಾಕ್ಷರತೆಯನ್ನು ಗಣನೀಯವಾಗಿ ಹೆಚ್ಚಿಸುವುದು. ಶೈಕ್ಷಣಿಕ ಜಾಗೃತಿಯೊಂದಿಗೆ ಅವರು ಸ್ವಾವಲಂಬಿ ಜೀವನವನ್ನು ನಡೆಸಲು ಅನುವು ಮಾಡಿಕೊಡುವುದು[10].

ಸ್ವಾತಂತ್ರ್ಯಾನಂತರದಲ್ಲಿ ಭಾರತವು ಪ್ರಜಾಪ್ರಭುತ್ವ ಮತ್ತು ಸಮಾನತೆಯ ತತ್ವಗಳನ್ನು ಒಪ್ಪಿಕೊಂಡು ಸ್ವೀಕರಿಸಿತು. ಅಂತೆಯೇ, ಅದು ಸ್ತ್ರೀ-ಪುರುಷರನ್ನು ಲಿಂಗಭೇದವಿಲ್ಲದೆ ಸಮಾನವಾಗಿ ಕಾಣುವ ತತ್ವಕ್ಕೆ ಬದ್ಧವಾಗಿದೆ. ಸ್ತ್ರೀಯರ ಅಂತಸ್ತು ಮತ್ತು ಸ್ಥಾನಮಾನಗಳನ್ನು ಉನ್ನತ ಸ್ತರಕ್ಕೆ ಏರಿಸಲು ಎಲ್ಲಾ

ಬಗೆಯ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳುವ ಪ್ರಯತ್ನವನ್ನು ಅದು ಮಾಡಿದೆ ಮತ್ತು ಮಾಡುತ್ತಲಿದೆ. ಲಿಂಗ ಸಮಾನತೆಯ ದೃಷ್ಟಿಯಿಂದ ರಾಜ್ಯವು ಕೈಗೊಂಡಿರುವ ಮೂರು ರೀತಿಯ ಉಪಕ್ರಮಗಳು ಈ ಕೆಳಗಿನಂತಿವೆ.

- ಸ್ತ್ರೀ ಸಂಬಂಧಿತವಾದ ಸಾಂವಿಧಾನಿಕ ಹಕ್ಕುಗಳು
- ಸ್ತ್ರೀ ಸಂಬಂಧಿತ ಕಾನೂನುಗಳು ಹಾಗೂ ಶಾಸನಗಳು
- ರಾಜ್ಯ ಮತ್ತು ರಾಷ್ಟ್ರಮಟ್ಟದ 'ಮಹಿಳಾ ಅಯೋಗಗಳ" ಸ್ಥಾಪನೆ

ಸ್ತ್ರೀಯರ ಸಾಂವಿಧಾನಿಕ ಹಕ್ಕುಗಳು

ಭಾರತೀಯ ಸಂವಿಧಾನವು ತನ್ನ ಪ್ರಸ್ತಾವನೆಯಲ್ಲಿಯೇ ದೇಶದ ಎಲ್ಲಾ ಪ್ರಜೆಗಳಿಗೂ ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ನೀಡುವ ಭರವಸೆಯನ್ನು ನೀಡಿದೆ. "ಸಮಾನತೆಯ ಹಕ್ಕು"[11] ಎಂಬುದಂತೂ ಮೂಲಭೂತ ಹಕ್ಕಿನ ಸ್ಥಾನವನ್ನು ಪಡೆದು ಸಂವಿಧಾನದ ಮೂರನೆಯ ಅಧ್ಯಾಯದಲ್ಲಿ 14ರಿಂದ 18ನೇ ವಿಧಿಯವರೆಗೆ ಸ್ಪಷ್ಟವಾಗಿ ಪ್ರಸ್ತಾಪಿಸಲ್ಪಟ್ಟಿದೆ. ಸಂವಿಧಾನದ ಹೆಚ್ಚಿನ ವಿಧಿಗಳು ಪ್ರಜೆಗಳಿಗೆ ಸ್ತ್ರೀ–ಪುರುಷ ಭೇದವಿಲ್ಲದಂತೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯವನ್ನು ಒದಗಿಸುವ ಭರವಸೆ ನೀಡುವುದು ಮಾತ್ರವಲ್ಲ, ಪ್ರತಿಯೊಬ್ಬರೂ ಯಾವುದೇ ಧರ್ಮವನ್ನು ಆರಾಧಿಸುವ ಮತ್ತು ಅವುಗಳಿಗೆ ಸಂಬಂಧಪಟ್ಟ ಆಚರಣೆಗಳನ್ನು ಮುಕ್ತವಾಗಿ ಇತರರ ಭಾವನೆಗಳಿಗೆ ಧಕ್ಕೆಯಾಗದಂತೆ ಆಚರಿಸುವ ಸ್ವಾತಂತ್ರ್ಯವನ್ನು ವಿವರಿಸುತ್ತದೆ. ಆಲೋಚನಾ ಸ್ವಾತಂತ್ರ್ಯದೊಂದಿಗೆ ಮುಕ್ತ ಅಭಿವ್ಯಕ್ತಿಯ ಅವಕಾಶವನ್ನು ಹೊಂದಿರಬಹುದು ಎಂದು ಸಂವಿಧಾನ ವಿವರಿಸಿದೆ. ಭಾರತದ ಸಂವಿಧಾನವು ಸ್ತ್ರೀಯರ ಶೋಷಣೆಯನ್ನು ತಪ್ಪಿಸಿ ಅವರಿಗೆ ಸಮಾನತೆ ಹಾಗೂ ಸಾಮಾಜಿಕ ನ್ಯಾಯವನ್ನು ಒದಗಿಸುವ ನೆಲೆಯಲ್ಲಿ ಹಲವು ರೀತಿಯ ಸಂರಕ್ಷಣೆ ಹಾಗೂ ಮೂಲಭೂತ ಹಕ್ಕುಗಳನ್ನು ಒದಗಿಸಿದೆ(ವಿಧಿ 12ರಿಂದ 35)[12]. ಅವುಗಳೆಂದರೆ: ಸ್ತ್ರೀಯರನ್ನು ಒಳಗೊಂಡಂತೆ ಎಲ್ಲಾ ಭಾರತೀಯರಿಗೆ ಸಮಾನತೆ(ವಿಧಿ 14), ಜಾತಿ, ಮತ, ಪಂಥ, ಜನಾಂಗ, ಲಿಂಗ, ಜನ್ಮಸ್ಥಳದ ಆಧಾರದಲ್ಲಿ ದೇಶದ ಯಾವುದೇ ಪ್ರಜೆಗೆ ಪಕ್ಷಪಾತ ಮಾಡಲಾಗುವುದಿಲ್ಲವೆಂಬ ಭರವಸೆ[ವಿಧಿ 15(1)], ಮತ, ಜನಾಂಗ, ಜಾತಿ, ಲಿಂಗ ಇತ್ಯಾದಿ ಆಧಾರದ ಮೇಲೆ ಸಾರ್ವಜನಿಕ ಉಪಯೋಗಕ್ಕಾಗಿಯೇ ಇರುವಂತಹ ಸ್ಥಳ, ಸಂಸ್ಥೆಗಳು, ಪ್ರದೇಶಗಳು ಇವುಗಳ ಬಳಕೆಯ ದೃಷ್ಟಿಯಿಂದ ದೇಶದ ಯಾವ ಪ್ರಜೆಗೂ ಅನರ್ಹತೆಯನ್ನು, ನಿರ್ಬಂಧವನ್ನು ಇಲ್ಲವೇ ಷರತನ್ನು ಹಾಕಲಾಗುವುದಿಲ್ಲ[ವಿಧಿ 15(2)], ಮಹಿಳೆಯರು ಮತ್ತು ಮಕ್ಕಳ ರಕ್ಷಣೆ, ಕಲ್ಯಾಣ ಅಥವಾ ಅಭಿವೃದ್ಧಿಯ ದೃಷ್ಟಿಯಿಂದ ರಾಜ್ಯವು ವಿಶೇಷ ಏರ್ಪಾಡುಗಳನ್ನು ಮಾಡಬಹುದು[ವಿಧಿ 15(3)].

ರಾಜ್ಯದ ಅಧೀನದಲ್ಲಿರುವ ಯಾವುದೇ ಕಛೇರಿಯಲ್ಲಿ ನೇಮಕಾತಿ ಅಥವಾ ಉದ್ಯೋಗದ ವಿಷಯಗಳಿಗೆ ಸಂಬಂಧಪಟ್ಟಂತೆ ಸ್ತ್ರೀಯರನ್ನು ಒಳಗೊಂಡಂತೆ ಎಲ್ಲಾ ನಾಗರಿಕರಿಗೂ ಸಮಾನತೆಯ ಅವಕಾಶ ನೀಡಲಾಗುವುದು[ವಿಧಿ 16], ಸ್ತ್ರೀ–ಪುರುಷ ಎಂಬ ಭೇದವಿಲ್ಲದೆ ರಾಜ್ಯದ ಎಲ್ಲಾ ಪ್ರಜೆಗಳಿಗೂ ಜೀವನಕ್ಕೆ ಅವಶ್ಯವಾದ ಸಾಧನಗಳನ್ನು ಒದಗಿಸುವ ನೀತಿಯನ್ನು ರಾಜ್ಯ ನಿರ್ದೇಶಿತ ತತ್ವಗಳಲ್ಲಿ ರೂಪಿಸುವುದು[ವಿಧಿ39(ಎ)], ಪುರುಷರಿಗೆ ಮತ್ತು ಸ್ತ್ರೀಯರಿಗೆ ಲಿಂಗಭೇದವೆಣಿಸದೆ "ಸಮಾನ ಕೆಲಸಕ್ಕೆ ಸಮಾನ ವೇತನ"[13]ವನ್ನು ನಿಗದಿಪಡಿಸುವುದು[ವಿಧಿ39(ಡಿ)], ಉದ್ಯೋಗ ನಿರ್ವಹಣೆಯ ದೃಷ್ಟಿಯಿಂದ ಅತ್ಯಗತ್ಯವಾದ ಹಾಗೂ ಮಾನವೀಯ ಎಂದೆನ್ನಬಹುದಾದ ಪರಿಸ್ಥಿತಿಗಳನ್ನು ನಿರ್ಮಿಸುವುದು. ಮಹಿಳಾ ಉದ್ಯೋಗಿಗಳಿಗೆ ಹೆರಿಗೆಯ ಸೌಲಭ್ಯವನ್ನು ಒದಗಿಸುವ ಹೊಣೆ ರಾಜ್ಯದ್ದಾಗಿರುತ್ತದೆ[ವಿಧಿ 42], ರಾಜ್ಯವು ತನ್ನ ಪ್ರಜೆಗಳ ಅದರಲ್ಲಿಯೂ ಸ್ತ್ರೀಯರನ್ನು ಒಳಗೊಂಡಂತೆ ದುರ್ಬಲ ವರ್ಗದ ಜನರ ಶೈಕ್ಷಣಿಕ ಹಾಗೂ ಆರ್ಥಿಕ ಆಸಕ್ತಿಗಳನ್ನು ಪ್ರೋತ್ಸಾಹಿಸಲು ವಿಶೇಷ ಮುತುವರ್ಜಿ ವಹಿಸಬೇಕು ಹಾಗೂ ಎಲ್ಲಾ ಬಗೆಯ ಸಾಮಾಜಿಕ ಅನ್ಯಾಯ ಮತ್ತು ಶೋಷಣೆಗಳಿಂದ ಅವರನ್ನು ಸಂರಕ್ಷಿಸುವ ಹೊಣೆ ವಹಿಸಿಕೊಳ್ಳಬೇಕು[ವಿಧಿ 46], ರಾಜ್ಯವು ಸಾರ್ವಜನಿಕ ಆರೋಗ್ಯವನ್ನು ಸುಧಾರಿಸುವತ್ತ ಲಕ್ಷ್ಯ ಹರಿಸುವುದರ ಜೊತೆಗೆ ತನ್ನ ಪ್ರಜೆಗಳ ಪೌಷ್ಠಿಕತೆ ಹಾಗೂ ಜೀವನ ಮಟ್ಟವನ್ನು ಸುಧಾರಿಸಲು ಪ್ರಯತ್ನಿಸಬೇಕಾದ ವಿಶೇಷ ಜವಾಬ್ದಾರಿಯನ್ನು ಹೊಂದಿರುವುದು[ವಿಧಿ 47], ಮಹಿಳೆಯರಿಗೆ ಅವಮಾನವಾಗುವಂತಹ ಸಾಮಾಜಿಕ ಬಲಾತ್ಕಾರ ಸಂಗತಿಗಳನ್ನು ನಿಯಂತ್ರಿಸುವುದು ಹಾಗೂ ಭಾರತದ ಜನಸಮುದಾಯದಲ್ಲಿ ಸಾಮರಸ್ಯ ಮತ್ತು ಸಮಾನ ಭ್ರಾತೃತ್ವ ಭಾವನೆಯನ್ನು ಪೋಷಿಸುವುದು ಮತ್ತು ಮಹಿಳೆಯರ ದೃಷ್ಠಿಯಿಂದ ಅವರಿಗೆ ಅವಹೇಳನಕಾರಿಯಾದಂತಹ ಪದ್ಧತಿಗಳನ್ನು ತ್ಯಜಿಸುವುದು[ವಿಧಿ 51(ಎ) ಮತ್ತು (ಈ)].

ಸಂವಿಧಾನದ 73 ಹಾಗೂ 74ನೇ ತಿದ್ದುಪಡಿಯ ಮೂಲಕ ಮಹಿಳೆಯರಿಗೆ ನೀಡಲಾಗಿರುವ ವಿಶೇಷ ಅವಕಾಶಗಳು[14]. ಇವು ಯಾವುದೆಂದರೆ ಪಂಚಾಯತ್ ಸ್ಥಾನಕ್ಕೆ ಮಹಿಳೆಯರಿಗೆ 1/3ರಷ್ಟು ಮೀಸಲಾತಿ. ಪ್ರತಿಯೊಂದು ಪಂಚಾಯತ್‌ಗೂ ನೇರ ಚುನಾವಣೆಯ ಮೂಲಕ ಭರ್ತಿ ಮಾಡಿಕೊಳ್ಳಲಾಗುವ ಒಟ್ಟು ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ಮಹಿಳೆಯರನ್ನು ಒಳಗೊಂಡಂತೆ 1/3ನೇ ಭಾಗಕ್ಕೆ ಕಡಿಮೆಯಿಲ್ಲದಷ್ಟು ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡತಕ್ಕದ್ದು. ಇಂತಹ ಮೀಸಲಾತಿಯ ಸ್ಥಾನಗಳನ್ನು ಪಂಚಾಯತ್‌ನ ವ್ಯಾಪ್ತಿಯಲ್ಲಿರುವ ವಿವಿಧ ಕ್ಷೇತ್ರಗಳಿಗೆ ಸರದಿಯ ಮೇಲೆ ಹಂಚ ತಕ್ಕದ್ದು [ವಿಧಿ 243 ಆ (3)] ಪಂಚಾಯತ್ ಅಧ್ಯಕ್ಷ ಸ್ಥಾನಗಳಿಗೆ ಮಹಿಳೆಯರಿಗೆ 1/3ರಷ್ಟು ಮೀಸಲಾತಿ: ಪಂಚಾಯತ್ ವ್ಯವಸ್ಥೆಯ ಪ್ರತಿಯೊಂದು ಹಂತದಲ್ಲಿನ

[ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್] ಅಧ್ಯಕ್ಷ ಸ್ಥಾನಗಳ ಒಟ್ಟು ಹುದ್ದೆಗಳಲ್ಲಿ 1/3ನೇ ಭಾಗಕ್ಕೆ ಕಡಿಮೆಯಿಲ್ಲದಷ್ಟು ಸ್ಥಾನಗಳನ್ನು ಮಹಿಳೆಯರಿಗಾಗಿ ಮಿಸಲಿಡತಕ್ಕದ್ದು. [ವಿಧಿ 243 ಅ (4)]

ಪುರಸಭೆಗಳಲ್ಲೂ ಮಹಿಳೆಯರಿಗೆ 1/3ರಷ್ಟು ಮೀಸಲಾತಿ. ಪ್ರತಿಯೊಂದು ಪುರಸಭೆ ಅಥವಾ ಮುನಿಸಿಪಾಲಿಟಿಗೂ ನೇರ ಚುನಾವಣೆಯ ಮೂಲಕ ಭರ್ತಿ ಮಾಡಿಕೊಳ್ಳಲಾಗುವ ಒಟ್ಟು ಸ್ಥಾನಗಳಿಗೆ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಮಹಿಳೆಯರೂ ಸೇರಿದಂತೆ ಒಟ್ಟು 1/3ನೇ ಭಾಗಕ್ಕೆ ಕಡಿಮೆಯಿಲ್ಲದಷ್ಟು ಸಂಖ್ಯೆಯ ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡತಕ್ಕದ್ದು. ಇಂತಹ ಮೀಸಲಾತಿಯ ಸ್ಥಾನಗಳನ್ನು ಪುರಸಭೆಯ ವ್ಯಾಪ್ತಿಯಲ್ಲಿರುವ ವಿವಿಧ ಕ್ಷೇತ್ರಗಳಿಗೆ ಸರದಿಯ ಮೇಲೆ ಹಂಚ ತಕ್ಕದ್ದು [ವಿಧಿ 243 ಡಿ (3)]. ಪುರಸಭೆಗಳ ಅಧ್ಯಕ್ಷ ಸ್ಥಾನಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಕ್ರಮ: ಪುರಸಭೆ ಅಥವಾ ಮುನಿಸಿಪಾಲಿಟಿಗಳ ಅಧ್ಯಕ್ಷ ಸ್ಥಾನಗಳ ಹುದ್ದೆಗಳನ್ನು ಕೂಡ ಪರಿಶಿಷ್ಟ ಜಾತಿಗಳು, ಪಂಗಡಗಳು ಹಾಗೂ ಮಹಿಳೆಯರಿಗಾಗಿ ಮೀಸಲಿರಿಸುವಾಗ ಆಗಿನ ವಿಧಾನಮಂಡಲವು ಕೈಗೊಳ್ಳುವ ಕಾನೂನಿನ ಅನ್ವಯ ಸೌಲಭ್ಯ ಕಲ್ಪಿಸಲಾಗುವುದು. [ವಿಧಿ 243 ಡಿ (4)]. ಈ ರೀತಿಯ ಸಂವಿಧಾನಾತ್ಮಕ ಚೌಕಟ್ಟಿನ ಹಿನ್ನೆಲೆಯಲ್ಲಿ ಭಾರತೀಯ ಶಾಸಕಾಂಗ ಕಾಲದಿಂದ ಕಾಲಕ್ಕೆ ಮಹಿಳೆಯರ ಸ್ವಾತಂತ್ರ್ಯ, ಸಮಾನತೆ ಮತ್ತು ಹಕ್ಕುಗಳನ್ನು ಕಾಪಾಡುವ ಉದ್ದೇಶದಿಂದ ಹಲವಾರು ಶಾಸನಗಳನ್ನು ರಚಿಸುತ್ತಾ ಬಂದಿದೆ.

ಕಾನೂನುಗಳು ಮತ್ತು ಶಾಸನಾತ್ಮಕ ಕ್ರಮಗಳು

ಭಾರತ ಸರ್ಕಾರವು ಸ್ತ್ರೀಯರ ಕಲ್ಯಾಣಾಭಿವೃದ್ಧಿ ಮತ್ತು ಅವರ ಹಿತಾಸಕ್ತಿಗಳ ಸಂರಕ್ಷಣೆಯ ದೃಷ್ಟಿಯಿಂದ ಹಲವಾರು ಶಾಸನಾತ್ಮಕ ಕ್ರಮಗಳನ್ನು ಕೈಗೊಂಡಿರುತ್ತದೆ. ಇದೇ ಉದ್ದೇಶದಿಂದ ಸ್ವಾತಂತ್ರ್ಯಪೂರ್ವದಲ್ಲಿ ಇದ್ದಂತಹ ವಸಾಹತುಶಾಹಿ ಬ್ರಿಟೀಷ್ ಸರಕಾರವು ಹಲವಾರು ಶಾಸನಾತ್ಮಕ ಕ್ರಮಗಳನ್ನು ಕೈಗೊಂಡಿದ್ದು ಅವುಗಳಲ್ಲಿ ಪ್ರಮುಖವಾದ ಕೆಲವು ಶಾಸನಗಳನ್ನು ಬದಲಾವಣೆಗಳೊಂದಿಗೆ ಸ್ವಾತಂತ್ರ್ಯಾನಂತರ ಅಸ್ತಿತ್ವಕ್ಕೆ ಬಂದ ಸರಕಾರ ಉಳಿಸಿಕೊಂಡಿದ್ದು, ಅವುಗಳು ಇಂದಿಗೂ ಜಾರಿಯಲ್ಲಿವೆ. ಸ್ವಾತಂತ್ರ್ಯಪೂರ್ವದಲ್ಲಿ ಪರಿಚಯಿಸಲ್ಪಟ್ಟು ಇಂದಿಗೂ ಜಾರಿಯಲ್ಲಿರುವ ಹಾಗೂ ಸ್ವಾತಂತ್ರ್ಯಾನಂತರದಲ್ಲಿ ಜಾರಿಗೊಳಿಸಲಾದ ಕೆಲವು ಪ್ರಮುಖ ಸ್ತ್ರೀ-ಸಂಬಂಧಿತ ಉಪಕ್ರಮಗಳು ಈ ಕೆಳಗಿನಂತಿದೆ.

ಹಿಂದೂ ವಿಧವಾ ಪುನರ್ವಿವಾಹ ಕಾಯ್ದೆ 1856. 'ಸತೀ ನಿಷೇಧ ಶಾಸನ'[15]ಕ್ಕೆ ಪೂರಕವಾಗಿದೆ. ಸತೀ ನಿಷೇಧದಿಂದಾಗಿ ವಿಧವೆಯರು ಜೀವಂತವಾಗಿ ಉಳಿಯುವಂತಾದರೂ ಹಲವಾರು ಬಗೆಯ ಕಷ್ಟ-ಸಂಕಷ್ಟಗಳಿಗೆ, ಅಸಡ್ಡೆ-ಅನಾದರಗಳಿಗೆ, ಹಿಂಸಾಚಾರ-ಶೋಷಣೆಗಳಿಗೆ ಬಲಿಯಾಗಬೇಕಾಯಿತು.

ಅವರ ಈ ದುಃಸ್ಥಿತಿಯನ್ನು ನಿವಾರಣೆ ಮಾಡಲು ಈ ಕಾಯ್ದೆಯನ್ನು ಜಾರಿಗೊಳಿಸಲಾಯಿತು[16]. ಈ ಕಾಯ್ದೆಯಂತೆ ಹಿಂದೂ ವಿಧವೆಯರ ಪುನರ್ವಿವಾಹವು ಕಾನೂನಿನ ದೃಷ್ಟಿಯಿಂದ ನ್ಯಾಯಸಮ್ಮತವೆನಿಸಿಕೊಂಡಿದೆ. ಭಾರತೀಯ ಕ್ರೈಸ್ತ ವಿವಾಹ ಕಾಯ್ದೆ 1872ರ ಶಾಸನವು ಅದರ 1828ರ ತಿದ್ದುಪಡಿಗಳೊಂದಿಗೆ ಕ್ರೈಸ್ತ ವಿವಾಹದ ಹಲವಾರು ಅಂಶಗಳನ್ನು ಒಳಗೊಂಡಿದೆ. ಈ ಶಾಸನವು ಕ್ರೈಸ್ತರಲ್ಲಿ ಬಹುಪತ್ನಿ ಹಾಗೂ ಬಹುಪತಿ ವಿವಾಹವನ್ನು ನಿಷೇಧಿಸುವುದಲ್ಲದೆ ಏಕಪತ್ನಿ ವಿವಾಹವನ್ನು ಕಡ್ಡಾಯವಾಗಿಸಿದೆ. ಕ್ರೈಸ್ತ ವಿವಾಹಕ್ಕೆ ಸಂಬಂಧಿಸಿದಂತೆ ವಿವಾಹವನ್ನು ನೆರವೇರಿಸುವುದು ಯಾರು? ಯಾವ ಸ್ಥಳ? ಯಾವ ಚರ್ಚ್‌ನಲ್ಲಿ? ಯಾವ ಸಮಯದಲ್ಲಿ? ವಿವಾಹವಾಗಲಿರುವ ಹುಡುಗ–ಹುಡುಗಿಯ ವಯಸ್ಸೆಷ್ಟು? ಇವೇ ಮುಂತಾದ ಅಂಶಗಳ ಕುರಿತು ನಿರ್ದಿಷ್ಟತೆಯಿರಬೇಕೆಂದು ಅದು ತಿಳಿಸುತ್ತದೆ. ಭಾರತೀಯ ವಿವಾಹ ವಿಚ್ಛೇದ ಕಾಯ್ದೆ 1872, ಭಾರತೀಯ ಕ್ರೈಸ್ತರು ನ್ಯಾಯಾಲಯದ ಮೂಲಕ ಯಾವೆಲ್ಲಾ ಕಾರಣಕ್ಕಾಗಿ ಮತ್ತು ಹೇಗೆ ವಿಚ್ಛೇದನ ಪಡೆಯಬಹುದು ಎಂಬುದನ್ನು ತಿಳಿಸುವುದು ಕೆಲವು ನಿರ್ದಿಷ್ಟ ಅಂಶಗಳ ಆಧಾರದ ಮೇಲೆ ವಿವಾಹವು ಹೇಗೆ ಅಸಿಂಧುವಾಗಿದ್ದು ವಿಚ್ಛೇದನೆಗೆ ಯೋಗ್ಯವಾಗಿದೆ ಎಂಬುದನ್ನೂ ಅದು ಸೂಚಿಸುವುದು ನ್ಯಾಯಿಕ ಬೇರ್ಪಡೆ, ವೈವಾಹಿಕ ಸಂಗಾತಿಗಳಿಗೆ ರಕ್ಷಣೆ ಮತ್ತು ದಾಂಪತ್ಯದ ಹಕ್ಕುಗಳ ಮರುಸ್ಥಾಪನೆಗೂ ಅದು ಅವಕಾಶ ನೀಡುತ್ತದೆ.

ಬಾಲ್ಯ ವಿವಾಹ ನಿಷೇಧ ಕಾಯ್ದೆ, 1929: ಏಪ್ರಿಲ್, 1931ರಲ್ಲಿ ಅನುಷ್ಠಾನಕ್ಕೆ ಬಂದ ಈ ಕಾಯ್ದೆಯಂತೆ "ಬಾಲ್ಯ ವಿವಾಹ"ವು ಕಾನೂನುಬಾಹಿರವೆಂದು ಸಾರಲ್ಪಟ್ಟಿತು. ವಿವಾಹವಾಗುವ ಯುವಕನಿಗೆ ಕನಿಷ್ಟ 18 ವರ್ಷ ಹಾಗೂ ಯುವತಿಗೆ ಕನಿಷ್ಟ 14 ವರ್ಷಗಳಾಗಿರಬೇಕೆಂದು ಈ ಕಾಯ್ದೆಯು ನಿಗದಿಪಡಿಸಿರುತ್ತದೆ. ದೇಶಾದ್ಯಂತ ಪ್ರಚಲಿತವಿದ್ದ ಬಾಲ್ಯವಿವಾಹವನ್ನು ತಡೆಗಟ್ಟಲು ಈ ಕಾಯ್ದೆಯು ಸಹಾಯಕವಾಯಿತು. ಬ್ರಿಟಿಷರ ಕಾಲದಲ್ಲಿ ಕೈಗೊಳ್ಳಲಾದ ಪಾರ್ಸಿ ವಿವಾಹ ಮತ್ತು ವಿಚ್ಛೇದ ಕಾಯ್ದೆ, 1936ರ ಶಾಸನದಂತೆ ಮುಸ್ಲಿಂ ಸ್ತ್ರೀಯರಿಗೂ ಕೆಲವು ನಿರ್ದಿಷ್ಟ ನೆಲೆಗಳಲ್ಲಿ ತಮ್ಮ ಗಂಡಂದಿರಿಗೆ ವಿಚ್ಛೇದ ನೀಡಲು ಅವಕಾಶವಿದೆ. ಅವುಗಳೆಂದರೆ ಗಂಡನ ಬಗ್ಗೆ 4 ವರ್ಷಗಳವರೆಗೆ ಯಾವುದೇ ಮಾಹಿತಿಯಿಲ್ಲವಾದರೆ, ಗಂಡನಿಗೆ 7 ವರ್ಷಗಳ ಕಾಲ ಕಾರಾಗೃಹವಾಸದ ಶಿಕ್ಷೆ ನೀಡಲ್ಪಟ್ಟಾಗ, ಗಂಡನು ನಪುಂಸಕನಾಗಿದ್ದರೆ, ಗಂಡನಿಗೆ ಕನಿಷ್ಟ 2 ವರ್ಷಗಳವರೆಗೆ ಮಾನಸಿಕ ಸ್ವಾಸ್ಥ್ಯ ಸರಿಯಿಲ್ಲದಿದ್ದರೆ, ಗಂಡನು ಕ್ರೂರಿಯಾಗಿದ್ದರೆ/ಗಂಭೀರ ರೂಪದ ಕಾಯಿಲೆಗೆ ಒಳಗಾಗಿದ್ದರೆ, ಹೆಂಡತಿಯನ್ನು ಸಾಕಲಾರದವನಾಗಿದ್ದರೆ, 15 ವರ್ಷದೊಳಗಿನ ಹುಡುಗಿಯನ್ನು ಮದುವೆಯಾಗಿದ್ದು ಆಕೆ ತನ್ನ 18 ವರ್ಷದೊಳಗೆ ಆ ಕುರಿತು ಅಸಮ್ಮತಿ ಸೂಚಿಸಿ ವಿಚ್ಛೇದನ ಬಯಸುವುದಾದರೆ ಇಂತಹ ಸಂದರ್ಭಗಳಲ್ಲಿ ವಿವಾಹಿತ ಮುಸ್ಲಿಂ ಸ್ತ್ರೀ ತನ್ನ ಗಂಡನಿಗೆ ಕಾನೂನುಬದ್ಧವಾಗಿ ವಿಚ್ಛೇದನ ನೀಡಬಹುದಾಗಿದೆ.

1872ರಲ್ಲಿ ಕೈಗೊಳ್ಳಲಾಗಿದ್ದ "ನಾಗರಿಕ ವಿವಾಹ ಕಾಯ್ದೆ"ಯ ಬದಲಿಗೆ ವಿಶೇಷ ವಿವಾಹ ಕಾಯ್ದೆಯನ್ನು 1954ರಲ್ಲಿ ಜಾರಿಗೆ ತರಲಾಗಿದ್ದು ಇದರ ಪ್ರಕಾರ ಪ್ರಬುದ್ಧ ಸ್ತ್ರೀ-ಪುರುಷರು ನೋಂದಾಯಿತ ವಿವಾಹವನ್ನು ಮಾಡಿಕೊಳ್ಳಬಹುದಾಗಿದೆ. ಈ ಕಾಯ್ದೆಯಂತೆ ನೋಂದಾಯಿತ ವಿವಾಹವಾಗಲಿಚ್ಚಿಸುವ ಎರಡೂ ಪಕ್ಷಗಳವರು ಕನಿಷ್ಠ ಒಂದು ತಿಂಗಳ ಮುಂಚೆ ವಿವಾಹಾಧಿಕಾರಿಗೆ ತಮ್ಮ ವಿವಾಹದ ಬಗ್ಗೆ ಲಿಖಿತ ಸೂಚನೆ ನೀಡತಕ್ಕದ್ದು. ಒಂದು ತಿಂಗಳವರೆಗೂ ಕೂಡ ಎರಡೂ ಪಕ್ಷಗಳ ಸಂಬಂಧಿಕರು, ಅಗತ್ಯವೆನಿಸಿದಲ್ಲಿ ಸಂಬಂಧಿತ ವಿವಾಹದ ಬಗ್ಗೆ ಆಕ್ಷೇಪಣೆ ಸಲ್ಲಿಸಬಹುದಾಗಿದೆ. ವಿವಾಹದ ಸಮಯದಲ್ಲಿ ಇಬ್ಬರು ಸಾಕ್ಷಿಗಳು ಹಾಜರಿರಬೇಕಾದ್ದು ಅಗತ್ಯ. ವಿವಾಹವಾಗಲಿಚ್ಛಿಸುವ ಸ್ತ್ರೀ-ಪುರುಷರ ವಯಸ್ಸು ಅನುಕ್ರಮವಾಗಿ ಕನಿಷ್ಠ 18 ಹಾಗೂ 21 ಆಗಿರಬೇಕೆಂದು ಈ ಕಾಯ್ದೆ ವಿವರಿಸುತ್ತದೆ.

ಹಿಂದೂ ವಿವಾಹ ಕಾಯ್ದೆ 1955, ಹಿಂದುಗಳಲ್ಲಿ ಬಾಲ್ಯ ವಿವಾಹ, ಬಹುಪತಿ ವಿವಾಹಗಳನ್ನು ನಿಷೇಧಿಸುವುದು. ಹಿಂದುಗಳೂ ಜೈನರು, ಬೌದ್ಧರು, ಸಿಖ್ಖರು ಹಾಗೂ ವೀರಶೈವರಿಗೆ ಸಮಾನವಾಗಿ ಈ ಕಾನೂನು ಅನ್ವಯವಾಗುತ್ತದೆ. ಈ ಕಾನೂನಿನ ಮುಖ್ಯಾಂಶಗಳು ಯಾವುದೆಂದರೆ – ಈ ಕಾಯ್ದೆಯು ಕಾನೂನುಬದ್ಧ ಹಿಂದೂ ವಿವಾಹಕ್ಕೆ ಅಗತ್ಯವಾದ ಷರತ್ತುಗಳನ್ನು ವಿಧಿಸುವುದು, ವಿವಾಹವಾಗುವವರು ಪ್ರಾಪ್ತ ವಯಸ್ಕರಾಗಿರಬೇಕೆಂದು [1978ರ ತಿದ್ದುಪಡಿಯಂತೆ ಪುರುಷನಿಗೆ 21 ವರ್ಷ, ಸ್ತ್ರೀಗೆ 18 ವರ್ಷ] ಸೂಚಿಸುವುದು, ಸ್ತ್ರೀ-ಪುರುಷರೀರ್ವರಿಗೂ ವಿವಾಹ ವಿಚ್ಛೇದನದ ಸಮಾನ ಹಕ್ಕುಗಳನ್ನು ನೀಡುವುದು, 1986ರ ತಿದ್ದುಪಡಿಯಂತೆ ಪರಸ್ಪರರಲ್ಲಿ ಹೊಂದಾಣಿಕೆಯ ಕೊರತೆಯಿದ್ದಾಗ ಅಥವಾ ಒಪ್ಪಿಗೆಯ ನೆಲೆಯಲ್ಲಿ ವಿವಾಹವಾದ ಒಂದು ವರ್ಷದ ಬಳಿಕ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಬಹುದು. ವಿಚ್ಛೇದನದ ತೀರ್ಪು ಸಿಕ್ಕಿದ ನಂತರ ವಿಚ್ಛೇದಿತರು ಕನಿಷ್ಠ ಒಂದು ವರ್ಷದವರೆಗೆ ಬೇರೆ ವಿವಾಹವಾಗುವಂತಿಲ್ಲ.

ಹಿಂದೂ ಉತ್ತರಾಧಿಕಾರ ಕಾಯ್ದೆ 1956ರಂತೆ ಸ್ತ್ರೀಯರಿಗೂ ಆಸ್ತಿಯ ಹಕ್ಕನ್ನು ನೀಡಲಾಯಿತು. ಈ ಕಾಯ್ದೆಯಂತೆ ಕುಟುಂಬದ ಹಿರಿಯ ಸದಸ್ಯರ ನಿಧನದ ಬಳಿಕ ಕುಟುಂಬದ ಪಿತ್ರಾರ್ಜಿತ ಆಸ್ತಿಗೆ ಆತನ ಮಗ, ಮಗಳು, ವಿಧವಾ ಪತ್ನಿ ಮತ್ತು ತಾಯಿ ಉತ್ತರಾಧಿಕಾರಿಗಳಾಗುತ್ತಾರೆ. ಆತ ಸ್ವಂತ ಸಂಪಾದಿಸಿದ ಆಸ್ತಿಯೂ ಕೂಡಾ [ಆತ ಉಯಿಲನ್ನು ಸಿದ್ದಪಡಿಸದೇ ಇದ್ದರೆ] ಆತನ ಸ್ತ್ರೀ ಹಾಗೂ ಪುರುಷ ವಾರಿಸುದಾರರಿಗೆ ಸಮಾನವಾಗಿ ಹಂಚಲ್ಪಡುವುದು. ಹಿಂದೂ ದತ್ತು ಮತ್ತು ಜೀವನಾಂಶ ಕಾಯ್ದೆ 1956ರಂತೆ ಮಕ್ಕಳಿಲ್ಲದ ಸ್ತ್ರೀ ಕೂಡ ಹೆಣ್ಣು ಅಥವಾ ಗಂಡು ಮಗುವೊಂದನ್ನು ದತ್ತು ಪಡೆಯಬಹುದಾಗಿದೆ ಹಾಗೂ ವಿಚ್ಛೇದಿತಳಾದ ಪತ್ನಿಯು ತನ್ನ ಗಂಡನಿಂದ ಜೀವನಾಂಶವನ್ನು ಪಡೆಯಬಹುದಾಗಿದೆ. ಕನ್ಯೆಯರ ಮತ್ತು ಮಹಿಳೆಯರ ಅನೈತಿಕ ವ್ಯವಹಾರ ಪ್ರತಿಬಂಧಕ ಕಾಯ್ದೆ

1956, ಸ್ತ್ರೀಯರನ್ನು ಅಪಹರಿಸುವುದನ್ನು ಮತ್ತು ಅವರನ್ನು ವೇಶ್ಯಾವೃತ್ತಿಗೆ ನೂಕುವುದನ್ನು ತಡೆಗಟ್ಟುವುದು. ಮೇಲೆ ಉಲ್ಲೇಖಿತ 1956ರ ಕಾಯ್ದೆಯನ್ನು ಇನ್ನಷ್ಟು ವಿಸ್ತೃತಗೊಳಿಸಲು 1986ರಲ್ಲಿ ಬದಲಿಸಿ "ವ್ಯಕ್ತಿಗಳ ಅನೈತಿಕ ವ್ಯವಹಾರ ನಿಗ್ರಹಣ ಕಾಯ್ದೆ" ಎಂದು ಕರೆಯಲಾಯಿತು. ಈ ತಿದ್ದುಪಡಿಯಂತೆ "ಅನೈತಿಕ ವ್ಯವಹಾರ"ದ ವ್ಯಾಪ್ತಿಯಲ್ಲಿ ಲೈಂಗಿಕ ಸೇವೆಯಲ್ಲಿ ತೊಡಗಿರುವ ಸ್ತ್ರೀಯರು ಹಾಗೂ ಹೆಣ್ಣು ಮಕ್ಕಳು ಮಾತ್ರವಲ್ಲದೆ ಗಂಡು ಮಕ್ಕಳು ಹಾಗೂ ಪುರುಷರೂ ಕೂಡ ಸೇರ್ಪಡೆಗೊಂಡಿರುತ್ತಾರೆ. ವೇಶ್ಯೆಯರಿಗೆ, ವ್ಯಭಿಚಾರ ಕೇಂದ್ರಗಳನ್ನು ನಡೆಸುವವರಿಗೆ ಹಾಗೂ ಇತರರಿಗೆ[ಆದರೆ ಪುರುಷ ಗಿರಾಕಿಗಳ ಹೊರತಾಗಿ] ಈ ತಿದ್ದುಪಡಿಯಂತೆ ಕಠಿಣ ಶಿಕ್ಷೆ ವಿಧಿಸಬಹುದಾಗಿದೆ[17].

ಪ್ರಸೂತಿಕಾ ಸೌಲಭ್ಯ ಕಾಯ್ದೆ 1961ರಂತೆ ದುಡಿಯುವ ವಿವಾಹಿತ ಮಹಿಳೆಯರಿಗೆ ಹೆರಿಗೆ ಸಂಬಂಧವಾಗಿ ಸಂಬಳ ಸಹಿತ ರಜೆ ಪಡೆಯುವ ಸೌಲಭ್ಯವಿದೆ. ವರದಕ್ಷಿಣೆ ನಿಷೇಧ ಕಾಯ್ದೆ 1961, ವರದಕ್ಷಿಣೆ ಪಡೆದು ವಿವಾಹವಾಗುವುದನ್ನು ಕಾನೂನುಬಾಹಿರವಾಗಿಸಿದೆ. ಮುಸ್ಲಿಮರಿಗೆ ಮಾತ್ರ ಇದು ಅನ್ವಯವಾಗುವುದಿಲ್ಲ. 1986ರಲ್ಲಿ ಇದನ್ನು ತಿದ್ದುಪಡಿ ಮಾಡಿ ಇನ್ನಷ್ಟು ಕಠಿಣಗೊಳಿಸಲಾಯಿತು. ಸ್ತ್ರೀಯರು ವರದಕ್ಷಿಣೆ ಸಂಬಂಧಿತ ಹಿಂಸೆ ಮತ್ತು ದೌರ್ಜನ್ಯಕ್ಕೆ ಬಲಿಪಶುಗಳಾಗುವುದನ್ನು ತಪ್ಪಿಸಲು ತಂದ ಕಾಯ್ದೆಯಿದು. 1986ರಲ್ಲಿ ಈ ಕಾಯ್ದೆಗೆ ತಿದ್ದುಪಡಿ ಮಾಡಿದಲ್ಲಿಂದ ಇದನ್ನು "ವರದಕ್ಷಿಣೆ ನಿಷೇಧ ತಿದ್ದುಪಡಿ ಕಾಯ್ದೆ, 1986" ಎಂದು ಕರೆಯಲಾಗುತ್ತಿದೆ. ವೈದ್ಯಕೀಯ ಗರ್ಭ ನಿವಾರಣಾ ಕಾಯ್ದೆ 1971ರಂತೆ ಕೇವಲ ವೈದ್ಯಕೀಯ ಕಾರಣಗಳಿಗಾಗಿ, ಗರ್ಭ ತಳೆದ 20 ವಾರಗಳೊಳಗೆ ಗರ್ಭಿಣಿ ಮಹಿಳೆಯು ಗರ್ಭ ನಿವಾರಣೆ ಮಾಡಿಕೊಳ್ಳಬಹುದಾಗಿದೆ. ಆದರೆ ಈ ಕಾಯ್ದೆಯು ಕ್ಷುಲ್ಲಕ ಕಾರಣಗಳಿಗಾಗಿ ಭ್ರೂಣಹತ್ಯೆ ಮಾಡುವುದನ್ನು ತಡೆಗಟ್ಟುತ್ತದೆ. ಪ್ರಸವಪೂರ್ವ ಲಿಂಗ ಪರೀಕ್ಷೆಗಳ [ನಿಯಂತ್ರಣ ಮತ್ತು ದುರುಪಯೋಗ ಪ್ರತಿಬಂಧಕ] ಕಾಯ್ದೆಯನ್ನು ಎಲ್ಲಕ್ಕಿಂತ ಮುಖ್ಯವಾಗಿ "ಅನಪೇಕ್ಷಿತ" ಹೆಣ್ಣು ಶಿಶುವನ್ನು ಅದು ಗರ್ಭದಲ್ಲಿರುವಾಗಲೇ ಹೊಸಕಿ ಹಾಕುವ ಪ್ರಯತ್ನವನ್ನು ತಡೆಗಟ್ಟಲು ಜಾರಿಗೆ ತರಲಾಗಿದೆ.

ಸಮಾನ ವೇತನ ಕಾಯ್ದೆ, 1976 "ಸಮಾನ ಕೆಲಸಕ್ಕೆ ಸಮಾನ ವೇತನ"ವೆಂಬ ತತ್ವವನ್ನು ಸ್ತ್ರೀ–ಪುರುಷ ಭೇದವಿಲ್ಲದೆ ಅನುಷ್ಠಾನಗೊಳಿಸಿದೆ. ಕಾರ್ಖಾನೆಗಳ ತಿದ್ದುಪಡಿ ಕಾಯ್ದೆ 1976ರಂತೆ ಉಳಿದ ಅನುಕೂಲತೆಗಳ ಜೊತೆಗೆ ಕಾರ್ಖಾನೆಗಳು ಸ್ತ್ರೀಯರಿಗಾಗಿ ಪ್ರತ್ಯೇಕ ಶೌಚಗೃಹಗಳನ್ನು, ವಿಶ್ರಾಂತಿ ಕೊಠಡಿಗಳನ್ನು ಏರ್ಪಡಿಸಬೇಕಾಗುವುದು. ತಾಯಂದಿರ ದುಡಿಮೆಯ ಅವಧಿಯಲ್ಲಿ [ಅವರ ಸಂಖ್ಯೆ 30ನ್ನು ಮೀರಿದ್ದರೆ] ಅವರ ಮಕ್ಕಳ "ಸಂರಕ್ಷಣೆ"ಗೂ ವ್ಯವಸ್ಥೆ ಮಾಡಬೇಕಾಗುತ್ತದೆ. ಕಾರ್ಖಾನೆಗಳಲ್ಲಿ ಸ್ತ್ರೀಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆಯಿರಬೇಕೆಂದೂ, ಅವರಿಗೆ ದಿನವೊಂದಕ್ಕೆ 9 ಗಂಟೆಗಳಿಗೂ

ಅಧಿಕ ದುಡಿಮೆಯನ್ನು ನೀಡಕೂಡದೆಂದು, ರಾತ್ರಿ 10–00 ಗಂಟೆಯಿಂದ ಬೆಳಿಗ್ಗೆ 5–00 ಗಂಟೆಯವರೆಗೆ ಅವರನ್ನು ದುಡಿಸಕೂಡದೆಂದೂ ಈ ಕಾಯ್ದೆ ವಿವರಿಸುತ್ತದೆ. ಅಪರಾಧ ಕಾನೂನು ತಿದ್ದುಪಡಿ ಕಾಯ್ದೆ, 1983 ಸ್ತ್ರೀಯರ ಮೇಲಾಗುವ ಅತ್ಯಾಚಾರ ಹಾಗೂ ಅನಾಚಾರಗಳನ್ನು ತಡೆಗಟ್ಟಲು ಸಹಾಯಕವಾಗಿದೆ. ಕುಟುಂಬ ನ್ಯಾಯಾಲಯ ಕಾಯ್ದೆ, 1984ರ ಪ್ರಕಾರ ವಿವಾಹ ಮತ್ತು ಕೌಟುಂಬಿಕ ವಿಚಾರಗಳಿಗೆ ಸಂಬಂಧಿಸಿದ ವಿವಾದಗಳನ್ನು ಸರಿಯಾದ ರೀತಿಯಲ್ಲಿ ಬಗೆಹರಿಸಲು ಕುಟುಂಬ ನ್ಯಾಯಾಲಯಗಳನ್ನು ಸ್ಥಾಪಿಸಲು ಹಾಗೂ ಅಲ್ಲಿ ಅವುಗಳನ್ನು ಬೇಗನೆ ಇತ್ಯರ್ಥಪಡಿಸಲು ಅವಕಾಶ ನೀಡುವುದು. ಮಹಿಳೆಯರನ್ನು ಅಸಭ್ಯವಾಗಿ ಚಿತ್ರಿಸುವುದರ ನಿಷೇಧ ಕಾಯ್ದೆ, 1986 ಜಾಹೀರಾತುಗಳು, ಪುಸ್ತಕಗಳು, ಕರಪತ್ರಗಳು ಮತ್ತಿತರ ಸಾಧನಗಳ ಮೂಲಕ ಮಹಿಳೆಯರನ್ನು ಅಸಭ್ಯವಾಗಿ ತೋರಿಸುವುದನ್ನು ಅಥವಾ ಚಿತ್ರಿಸುವುದನ್ನು ನಿಷೇಧಿಸಿದೆ. ಈ ಕಾಯ್ದೆಯ ಉಲ್ಲಂಘನೆಗೆ 200 ರೂಗಳ ದಂಡದೊಂದಿಗೆ 2 ವರ್ಷದ ಕಾರಾಗೃಹ ವಾಸದ ಶಿಕ್ಷೆಯನ್ನು ನೀಡಬಹುದಾಗಿದೆ.

ಬ್ರಿಟಿಷರ ಕಾಲದಲ್ಲಿ ಬ್ರಹ್ಮ ಸಮಾಜದ ನೇತಾರರಾಗಿದ್ದ ರಾಜಾರಾಮ ಮೋಹನರಾಯರ ಒತ್ತಡದ ಪರಿಣಾಮವಾಗಿ ಜಾರಿಗೊಳಿಸಲಾಗಿದ್ದ 1829ರ ಸತಿ ನಿಷೇಧ ಕಾಯ್ದೆಯು ಅಮಾನುಷವಾದ ಸತೀ ಆಚರಣೆಯನ್ನು ಕಾನೂನುಬಾಹಿರಗೊಳಿಸಿತು. ಸ್ವಾತಂತ್ರ್ಯಾನಂತರದಲ್ಲಿಯೂ ಈ ಕಾಯ್ದೆ ಜಾರಿಯಲ್ಲಿತ್ತು. 1987ರಲ್ಲಿ ರಾಜಸ್ತಾನದಲ್ಲಿ ರೂಪಾ ಕನ್ವರ್ ಎಂಬಾಕೆ ಸಾರ್ವಜನಿಕವಾಗಿ "ಸತಿ" ಆಚರಿಸಿದ ಬಳಿಕ ಈ ಕಾಯ್ದೆಯ ಬಗ್ಗೆ ಮರುಚಿಂತನೆ ಮಾಡಿ ಅದನ್ನು ಇನ್ನಷ್ಟು ಕಠಿಣವಾಗಿಸಿ "ಸತೀ ಆಚರಣೆಯ ಪ್ರತಿಬಂಧಕ ಕಾಯ್ದೆ, 1987" ರೂಪಿಸಲಾಯಿತು. ಮುಸ್ಲಿಂ ಮಹಿಳೆಯರ [ವಿಚ್ಛೇದನ ನಂತರ ಹಕ್ಕುಗಳ ರಕ್ಷಣಾ] ಕಾಯ್ದೆ, 1986 ಮತ್ತು ಇದ್ದತ್ ಕಾಯ್ದೆಯಂತೆ ವಿಚ್ಛೇದಗೊಂಡ ವಿವಾಹಿತ ಮುಸ್ಲಿಂ ಸ್ತ್ರೀ ತನ್ನ ಪತಿಯಿಂದ ತನ್ನ ಜೀವನ ನಿರ್ವಹಣೆಗಾಗಿ ಯಥೋಚಿತವಾದ ಆರ್ಥಿಕ ನೆರವನ್ನು "ಇದ್ದತ್"[18] [3 ತಿಂಗಳ ನಿರೀಕ್ಷಣಾ ಅವಧಿ] ಅವಧಿಯವರೆಗೆ ಪಡೆಯುವ ಹಕ್ಕನ್ನು ಹೊಂದಿರುತ್ತಾಳೆ.

ರಾಷ್ಟ್ರೀಯ ಮಹಿಳಾ ಆಯೋಗ ಕಾಯ್ದೆ, 1990ರ ಅನ್ವಯ "ರಾಷ್ಟ್ರೀಯ ಮಹಿಳಾ ಆಯೋಗ"ವನ್ನು 1992ರಲ್ಲಿ ಸ್ಥಾಪಿಸಿ ಮಹಿಳೆಯರಿಗೆ ಉತ್ತಮ ಕಾನೂನಿನ ರಕ್ಷಣೆ ನೀಡುವ ಭರವಸೆ ನೀಡಲಾಯಿತು. ಈ ರೀತಿಯ ಹಲವಾರು ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ಮಹಿಳೆಯರ ಹಿತಾಸಕ್ತಿಯನ್ನು ಕಾಪಾಡುವ ಹಾಗೂ ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನ ಮಾಡಲಾಗಿದೆ. ಭಾರತೀಯ ದಂಡ ಸಂಹಿತೆ ಕೂಡ ಸ್ತ್ರೀಯರಿಗೆ ಅವರ ವಿರುದ್ಧ ಅಪರಾಧಗಳು ನಡೆದಾಗ ಕಾನೂನಿನ ರೀತಿಯಲ್ಲಿ ರಕ್ಷಣೆ ನೀಡುತ್ತದೆ. ದಂಡಸಂಹಿತೆಯ ಪ್ರಕಾರ ಸ್ತ್ರೀಯರ ವಿರುದ್ಧದ

7 ಪ್ರಮುಖ ಅಪರಾಧಗಳು ಯಾವುದೆಂದರೆ – ಸ್ತ್ರೀಯರ ಮೇಲಿನ ಲೈಂಗಿಕ ಅತ್ಯಾಚಾರ, ಅಪಹರಣ, ವರದಕ್ಷಿಣೆಗಾಗಿ ಸ್ತ್ರೀಯರ ಕೊಲೆ ಮಾಡುವುದು, ಸ್ತ್ರೀಯರಿಗೆ ಹಿಂಸೆ ನೀಡಿಕೆ [ದೈಹಿಕ ಹಾಗೂ ಮಾನಸಿಕ], ಸ್ತ್ರೀಯರ ಪೀಡನೆ ಮತ್ತು 21 ವರ್ಷಗಳದೊಳಗಿನ ಹೆಣ್ಣು ಮಕ್ಕಳ ಮಾರಾಟ. ಅದೇ ರೀತಿ, ಸ್ಥಳೀಯ ಹಾಗೂ ವಿಶೇಷ ಕಾನೂನುಗಳ ಪ್ರಕಾರ ಪರಿಗಣಿತವಾದ 4 ಅಪರಾಧಗಳಾವುದೆಂದರೆ: ಸತಿ ಸಹಗಮನ, ವರದಕ್ಷಿಣೆ ನಿಷೇಧ ಉಲ್ಲಂಘನೆ, ಸ್ತ್ರೀಯರಲ್ಲಿ ಅನೈತಿಕ ವ್ಯವಹಾರ ನಡೆಸುವಿಕೆ ಹಾಗೂ ಸ್ತ್ರೀಯರನ್ನು ಅಸಭ್ಯವಾಗಿ ಚಿತ್ರಿಸುವುದು. ಕಾನೂನಿನ ವ್ಯಾಪ್ತಿಗೆ ಬರುವಂತೆ ಸರಿಯಾದ ರೀತಿಯಲ್ಲಿ ವರದಿಯಾದ ಅಪರಾಧ ಪ್ರಕರಣಗಳನ್ನು ಐಪಿಸಿ ಪ್ರಕಾರ ಗುರುತಿಸಿ ಸ್ತ್ರೀಯರಿಗೆ ನ್ಯಾಯ ಒದಗಿಸುವ ಪ್ರಯತ್ನ ನಡೆದಿದೆ. ಒಂದು ಅಂದಾಜಿನಂತೆ ಪ್ರತಿ ವರ್ಷ ಸ್ತ್ರೀಯರ ವಿರುದ್ಧದ ಕನಿಷ್ಠ 80,000 ಅಪರಾಧ ಪ್ರಕರಣಗಳು ಐಪಿಸಿ ಪ್ರಕಾರ ದಾಖಲಾತಿಯಾಗುತ್ತವೆ.

ಐಪಿಸಿಯ ಕೆಲವು ಸೆಕ್ಷನ್‌ಗಳು ಸ್ತ್ರೀಯರ ವಿರುದ್ಧ ನಡೆಸಲ್ಪಡುವ ಕೆಲವು ನಿರ್ದಿಷ್ಟ ಅಪರಾಧ ಪ್ರಕರಣಗಳಿಗೆ ವಿಶೇಷವಾಗಿ ಅನ್ವಯವಾಗುವುವು. ಅವು ಯಾವುವೆಂದರೆ, ಸ್ತ್ರೀಯರ ಅಪಹರಣ [ಒತ್ತಾಯಿಸಿ ಅಥವಾ ಮರುಳುಗೊಳಿಸಿ] (ಐಪಿಸಿ ಸೆಕ್ಷನ್ 363 ಮತ್ತು 373), ಸ್ತ್ರೀಯರ ಮೇಲಿನ ಲೈಂಗಿಕ ಅತ್ಯಾಚಾರ [ರೇಪ್] (ಐಪಿಸಿ ಸೆಕ್ಷನ್ 376), ಸ್ತ್ರೀಯರ ಪೀಡನೆ (ಐಪಿಸಿ ಸೆಕ್ಷನ್ 354), ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುವಿಕೆ (ಐಪಿಸಿ ಸೆಕ್ಷನ್ 498ಎ), ಲೈಂಗಿಕ ಉಪಟಳ (ಐಪಿಸಿ ಸೆಕ್ಷನ್ 509), ವರದಕ್ಷಿಣೆಗಾಗಿ ಕೊಲೆ ಅಥವಾ ಅವುಗಳ ಪ್ರಯತ್ನ (ಐಪಿಸಿ ಸೆಕ್ಷನ್ 302 ಹಾಗೂ 304ಬಿ), ಇತ್ಯಾದಿ ವಿಷಯಗಳನ್ನು ಕಾನೂನಾತ್ಮಕ ಅಪರಾಧಗಳೆಂದು ಗುರುತಿಸಲಾಗಿದೆ. ಅಪಾಯದಿಂದ ಮಹಿಳೆಯರನ್ನು ರಕ್ಷಿಸುವ ಉದ್ದೇಶದಿಂದಾಗಿ ಕಾಲದಿಂದ ಕಾಲಕ್ಕೆ ಮಹಿಳಾ ರಕ್ಷಣಾತ್ಮಕ ಕಾನೂನುಗಳನ್ನು ರಚಿಸುತ್ತಾ ಮತ್ತು ರಚಿಸಲ್ಪಟ್ಟ ಕಾನೂನುಗಳನ್ನು ಪರಿಷ್ಕರಿಸುತ್ತಾ ಮಹಿಳೆಯರ ರಕ್ಷಣೆಗೆ ಪೂರಕವಾಗುವಂತೆ ಕಾಲ, ಪ್ರದೇಶ ಮತ್ತು ಪ್ರತಿನಿಧಿಗಳ ಮನೋಧರ್ಮಕ್ಕೆ ತಕ್ಕಂತೆ ತಿದ್ದುಪಡಿಗಳನ್ನು ಕೂಡಾ ತರಲಾಗುತ್ತದೆ[19].

ರಾಷ್ಟ್ರೀಯ ಮಹಿಳಾ ಆಯೋಗ

ಮಹಿಳೆಯರ ಹಿತಾಸಕ್ತಿ ರಕ್ಷಿಸಲು ಮತ್ತು ಸಬಲೀಕರಣ ಪ್ರಕ್ರಿಯೆಯನ್ನು ಕ್ರಿಯಾಶೀಲಗೊಳಿಸುವ ಉದ್ದೇಶದಿಂದ ಸ್ವಾತಂತ್ರ್ಯನಂತರ ಭಾರತದಲ್ಲಿ ಸಂವಿಧಾನಾತ್ಮಕವಾಗಿ ಹಲವಾರು ಶಾಸನಾತ್ಮಕ ಅವಕಾಶಗಳನ್ನು ಕಲ್ಪಿಸಿರುವ ಹಿನ್ನೆಲೆಯಲ್ಲಿ ಮಹಿಳೆಯರ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅಭಿವೃದ್ಧಿಗೆ ಪೂರಕವಾದ ವಿಭಿನ್ನ ಆಯಾಮಗಳನ್ನೊಳಗೊಂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಾ ಬಂದಿವೆ. ಈ ಹಿನ್ನೆಲೆಯಲ್ಲಿ 1990ರ ರಾಷ್ಟ್ರೀಯ ಮಹಿಳಾ ಆಯೋಗ ಕಾಯ್ದೆಯ ಅಧಿನಿಯಮದ ಪ್ರಕಾರ ಕೇಂದ್ರ ಸರ್ಕಾರವು 1992ರಲ್ಲಿ "ರಾಷ್ಟ್ರೀಯ ಮಹಿಳಾ

ಆಯೋಗ"ವೊಂದನ್ನು ರಚಿಸಿತು. ಸ್ತ್ರೀಯರಿಗೆ ನೀಡಲಾಗಿರುವ ಸಾಂವಿಧಾನಿಕ ಸೌಲಭ್ಯಗಳನ್ನು ಒಳಗೊಂಡಂತೆ ಅವರ ಬಗೆಗಿನ ರಕ್ಷಣಾತ್ಮಕ ಕಾನೂನುಗಳು ಹಾಗೂ ಆರ್ಥಿಕ-ಸಾಮಾಜಿಕ ಅಭಿವೃದ್ಧಿಯ ಕಾರ್ಯಕ್ರಮಗಳು ಈ ಆಯೋಗದ ವ್ಯಾಪ್ತಿಗೆ ತರಲಾಯಿತು. ಇದರ ಮುಖ್ಯ ಉದ್ದೇಶವು ಸ್ತ್ರೀಯರ ಹಿತಾಸಕ್ತಿಗಳನ್ನು ರಕ್ಷಿಸುವುದು ಮತ್ತು ಅವರಿಗೆ ನ್ಯಾಯ ದೊರಕಿಸಿಕೊಡುವುದು ಹಾಗೂ ಅವರಿಗೆ ಕಾನೂನುಬದ್ಧವಾಗಿ ದೊರೆಯಬೇಕಾದ ಎಲ್ಲಾ ಬಗೆಯ ಸೌಲಭ್ಯಗಳು ದೊರೆಯುವಂತೆ ಮಾಡುವಲ್ಲಿ ಸಹಾಯ ಮಾಡುವುದಾಗಿದೆ. ಭಾರತದ ಸ್ತ್ರೀಯರ ಅಂತಸ್ತು ಸಮಿತಿಯು ಎರಡು ದಶಕಗಳ ಹಿಂದೆಯೇ ಇಂತಹ ಆಯೋಗವೊಂದನ್ನು ರಚಿಸುವ ಅವಶ್ಯಕತೆಯಿದೆ ಎಂಬುದನ್ನು ಒತ್ತಿ ಹೇಳಿ, ಆ ಕುರಿತು ಶಿಫಾರಸ್ಸು ಕೂಡಾ ಮಾಡಿತ್ತು. ಸ್ತ್ರೀಯರ ಸಮಸ್ಯೆಗಳನ್ನು ಕನಿಷ್ಟ ಮಟ್ಟಕ್ಕೆ ತರುವಲ್ಲಿ ಸರ್ಕಾರದ ವತಿಯಿಂದ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳ ಹಾಗೂ ಸರ್ಕಾರ ಕೈಗೊಂಡ ಕಾನೂನುಗಳ ಕಾರ್ಯಶೀಲತೆಯ ಮೇಲುಸ್ತುವಾರಿ ಮಾಡುವ ದೃಷ್ಟಿಯಿಂದ ಒಂದು ಆಯೋಗ ಅತ್ಯಗತ್ಯವಾಗಿದೆ ಎಂಬುದಾಗಿಯೂ ಅಭಿಪ್ರಾಯಪಟ್ಟಿತ್ತು. ಸ್ತ್ರೀಯರ ಆರ್ಥಿಕ-ಸಾಮಾಜಿಕ ಅಭಿವೃದ್ಧಿಗೆ ಆಯೋಗವು ನೆರವಾಗುವುದೆಂಬುದಾಗಿಯೂ ತಿಳಿಸಿತು[20].

1992ರಲ್ಲಿ ಸ್ಥಾಪಿತವಾಗಿರುವ ಮಹಿಳಾ ಆಯೋಗವು ಒಬ್ಬ ಮಹಿಳಾ ಅಧ್ಯಕ್ಷೆ ಹಾಗೂ ಐ.ಎ.ಎಸ್. ದರ್ಜೆಯ 5 ಮಂದಿ ಸದಸ್ಯ ಕಾರ್ಯದರ್ಶಿಗಳನ್ನು ಹೊಂದಿದ್ದು, ಇವರೆಲ್ಲರೂ ಕೇಂದ್ರ ಸರ್ಕಾರದ ವತಿಯಿಂದ ನೇಮಕಾತಿ ಹೊಂದಿದವರಾಗಿರುತ್ತಾರೆ. ಈ 5 ಮಂದಿಯಲ್ಲಿ ತಲಾ ಒಬ್ಬ ಸದಸ್ಯೆ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿರಬೇಕಾದ್ದು ಅತ್ಯವಶ್ಯವಾಗಿದೆ. ಇವರೆಲ್ಲರ ಕಾರ್ಯಾವಧಿ 3 ವರ್ಷಗಳಾಗಿರುತ್ತದೆ. 1992ರಿಂದ 1995ರವರೆಗಿನ ಪ್ರಥಮ ಅವಧಿಯಲ್ಲಿ ಶ್ರೀಮತಿ ಜಯಂತಿ ಪಟ್ನಾಯಕ್ ಅಧ್ಯಕ್ಷೆಯಾಗಿದ್ದರು[21]. ರಾಷ್ಟ್ರೀಯ ಮಹಿಳಾ ಆಯೋಗದ ಮಾದರಿಯಲ್ಲಿ ಕೆಲವು ರಾಜ್ಯಗಳೂ ಕೂಡ ರಾಜ್ಯ ಮಟ್ಟದ ಮಹಿಳಾ ಆಯೋಗಗಳನ್ನು ಹೊಂದಿವೆ. 2001ರ ಹೊತ್ತಿಗೆ ದೇಶದ್ಯಾಂತ ಸುಮಾರು 17 ರಾಜ್ಯಗಳಲ್ಲಿ ರಾಜ್ಯ ಮಟ್ಟದ ಮಹಿಳಾ ಆಯೋಗಗಳು ಸ್ಥಾಪಿತವಾಗಿದ್ದವು. ಕರ್ನಾಟಕ ಸರ್ಕಾರವು 1996ರ ಅಗಸ್ಟ್‌ನಲ್ಲಿ ರಾಜ್ಯ ಮಟ್ಟದ ಮಹಿಳಾ ಆಯೋಗವೊಂದನ್ನು ಸ್ಥಾಪಿಸಿದ್ದು ಶ್ರೀಮತಿ ಎಂ. ಪ್ರಭಾವತಿಯವರು ಅದರ ಪ್ರಥಮ ಅಧ್ಯಕ್ಷೆಯಾಗಿದ್ದರು[22].

ಮಹಿಳಾ ಆಯೋಗದ ಮುಖ್ಯ ಕಾರ್ಯಗಳೆಂದರೆ: ಸ್ತ್ರೀಯರ ಹಕ್ಕುಗಳನ್ನು ಕಾಪಾಡುವುದು ಮತ್ತು ಅವರ ಹಿತಾಸಕ್ತಿಗಳನ್ನು ಸಂರಕ್ಷಿಸುವುದು, ಸ್ತ್ರೀ-ಸಂಬಂಧಿತ ಶಾಸನಗಳ ಕಾರ್ಯಶೈಲಿಯನ್ನು ಪರಿಶೀಲಿಸುವುದು, ಸ್ತ್ರೀಯರ ವಿರುದ್ಧದ ದೌರ್ಜನ್ಯಗಳಿಗೆ ಸಂಬಂಧಿಸಿದ ನಿರ್ದಿಷ್ಟ ವ್ಯಕ್ತಿಗತ ದೂರುಗಳನ್ನು

ಕೈಗೆತ್ತಿಕೊಂಡು ನ್ಯಾಯ ದೊರಕಿಸಿಕೊಡುವಲ್ಲಿ ಶ್ರಮಿಸುವುದು ಅದರ ಕಾರ್ಯವಾಗಿದೆ. ಸ್ತ್ರೀಯರಿಗೆ ಅದಷ್ಟು ಶೀಘ್ರವಾಗಿ ನ್ಯಾಯ ದೊರಕಿಸಿಕೊಡುವುದಕ್ಕೆ ಆಯೋಗವು ಆದ್ಯತೆಯನ್ನು ನೀಡುವುದು, ಸ್ತ್ರೀಯರಿಗೆ "ದೈಹಿಕ ಹಾಗೂ ಮಾನಸಿಕ ಕಿರುಕುಳ" ಅಥವಾ ಪೀಡನೆ ನೀಡುವಂತಹ ನೀಚ ಆಚರಣೆಗಳ ಕುರಿತು ವಿಚಾರಣೆ ನಡೆಸುವುದು, ಕಾನೂನುಗಳಲ್ಲಿನ ಲೋಪ–ದೋಷಗಳನ್ನು ಅಧ್ಯಯನ ಮಾಡುವುದು, ಕಾನೂನಿನ ಜಾರಿಯ ಬಗ್ಗೆ ಪರಿಶೀಲನೆ ನಡೆಸಿ ತಪ್ಪಿದ್ದಲ್ಲಿ ಸೂಕ್ತ ಎಚ್ಚರಿಕೆ ನೀಡುವುದು, ಮಹಿಳಾ ಖೈದಿಗಳಿರುವ ಕಾರಾಗೃಹಗಳನ್ನು, ಪೋಲಿಸ್ ಠಾಣೆಗಳನ್ನು, ಮಹಿಳಾ ನಿರಾಶ್ರಿತರಿರುವ ತಾಣಗಳಿಗೆ ಭೇಟಿ ನೀಡುವುದು ಆಯೋಗದ ಇತರ ಮುಖ್ಯ ಕಾರ್ಯಗಳಾಗಿವೆ. ವ್ಯಕ್ತಿಗತ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾನೂನು ಕ್ರಮ ಕೈಗೊಳ್ಳಲು ಶಿಫಾರಸು ಮಾಡುವುದು, ಆಪಾದಿಸಲ್ಪಟ್ಟ ಲಿಂಗತಾರತಮ್ಯತೆಯ ಪ್ರಕರಣಗಳ ಶೋಧ ನಡೆಸುವುದು ಹಾಗೂ ಅಗತ್ಯ ಬಿದ್ದಲ್ಲಿ ಬಲಿಪಶುಗಳಾದ ಸ್ತ್ರೀಯರ ಪರವಾಗಿ ಕಾನೂನಿನ ಸಮರ ನಡೆಸಲು ಧನ ಸಹಾಯ ನೀಡುವುದು, ಸ್ತ್ರೀಯರ ಸಾಮಾನ್ಯ ಸ್ಥಿತಿಗತಿಗಳ ಬಗ್ಗೆ ಹಾಗೂ ಮುಖ್ಯವಾಗಿ ಅವರ ಸಮಸ್ಯೆ ಹಾಗೂ ಕುಂದು ಕೊರತೆಗಳ ಬಗ್ಗೆ ಸರ್ಕಾರಕ್ಕೆ ಆಗಿಂದಾಗ್ಗೆ ವರದಿ ಮಾಡುವುದು ಆಯೋಗದ ಮತ್ತೊಂದು ಪ್ರಮುಖ ಕಾರ್ಯವಾಗಿದೆ. ನಂತರ ಆಯೋಗದ ವರದಿ ಹಾಗೂ ಶಿಫಾರಸ್ಸುಗಳನ್ನು ಸಂಸತ್ತಿನ ಎರಡೂ ಸದನಗಳಲ್ಲಿ ಚರ್ಚೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗುತ್ತದೆ.

ಸ್ತ್ರೀ ಸಂಬಂಧಿತವಾದ ಅನೇಕ ವಿಷಯಗಳ ಬಗ್ಗೆ ಆಯೋಗವು ಜನರಿಂದ, ಮುಖ್ಯವಾಗಿ ಸ್ತ್ರೀಯರಿಂದ ದೂರುಗಳನ್ನು ಸ್ವೀಕರಿಸುತ್ತದೆ. ಉದಾಹರಣೆಗೆ, ಸಾಂಸಾರಿಕ ಹಿಂಸೆ, ಉಪಟಳ ನೀಡುವಿಕೆ, ವರದಕ್ಷಿಣೆ ಪೀಡನೆ, ವಿವಾಹ ಪರಿತ್ಯಾಜ್ಯ, ದ್ವಿತೀಯ ವಿವಾಹ, ಲೈಂಗಿಕ ಅತ್ಯಾಚಾರ, ಪ್ರಕರಣ ನೋಂದಾಯಿಸಲು ಪೊಲೀಸರಿಂದ ನಿರಾಕರಣೆ, ಗಂಡನಿಂದ ಕ್ರೌರ್ಯ ಹಾಗೂ ವಂಚನೆ, ಲಿಂಗ ತಾರತಮ್ಯ, ಕಾರ್ಯತಾಣದಲ್ಲಿ ಲೈಂಗಿಕ ಕಿರುಕುಳ ಮುಂತಾದ ವಿಷಯಗಳ ಕುರಿತಾಗಿ ದೂರುಗಳನ್ನು ಸ್ವೀಕರಿಸುವ ಆಯೋಗವು ಇವುಗಳಿಗೆ ಬಲಿಯಾದ ಸ್ತ್ರೀಯರ ಹಿತಾಸಕ್ತಿಗಳನ್ನು ಸಂರಕ್ಷಿಸುವ ಹಾಗೂ ಅವರಿಗೆ ನ್ಯಾಯ ಒದಗಿಸುವ ಪ್ರಯತ್ನ ನಡೆಸುತ್ತದೆ. ಸ್ತ್ರೀ ಸಂಬಂಧಿತ ದೂರುಗಳ ಕುರಿತಾಗಿ ಪೊಲೀಸರು ನಡೆಸುವ ವಿಚಾರಣೆ ಅಥವಾ ಶೋಧಗಳನ್ನು ತ್ವರಿತಗೊಳಿಸುವಲ್ಲಿ ಹಾಗೂ ಆ ಕುರಿತು ಆಗಿಂದಾಗ್ಗೆ ಸೂಕ್ತ ಮಾಹಿತಿ ನೀಡುವಲ್ಲಿ ಆಯೋಗವು ಸಹಕಾರಿಯಾಗಿದೆ. ಆಯೋಗವು ಕೌಟುಂಬಿಕ ತಗಾದೆಗಳಲ್ಲಿ ಮಧ್ಯಸ್ಥಿಕೆ ವಹಿಸಿ ಎರಡೂ ಪಕ್ಷಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ವಿವಾದಗಳು ಉಭಯ ಪಕ್ಷದವರ ನಡುವೆ ಸಮಾಧಾನಕರವಾಗಿ ಬಗೆಹರಿಯುವಂತೆ ಮಾಡುತ್ತದೆ. ಗಂಭೀರ

ಸ್ವರೂಪದ ಅಪರಾಧಗಳ ಸಂದರ್ಭಗಳಲ್ಲಿ ಆಯೋಗವು "ವಿಚಾರ ಸಮಿತಿ"ಗಳನ್ನು ರಚಿಸುತ್ತದೆ. ಕೆಲವೊಮ್ಮೆ ಈ ಸಮಿತಿಗಳು ಸ್ಥಳ ಪರೀಕ್ಷೆ ನಡೆಸಿ, ಸಾಕ್ಷಿಗಳನ್ನು ಪರಿಶೀಲಿಸಿ, ಪುರಾವೆಗಳನ್ನು ಸಂಗ್ರಹಿಸಿ ಪ್ರಕರಣದ ಬಗ್ಗೆ ವರದಿ ಹಾಗೂ ತನ್ನ ಶಿಫಾರಸ್ಸುಗಳನ್ನು ಸಂಬಂಧಿತ ಅಧಿಕಾರಿಗಳಿಗೆ ಕಳಿಸಿಕೊಟ್ಟು ಸೂಕ್ತ ಕ್ರಮಕ್ಕಾಗಿ ಆಗ್ರಹಿಸಿದ ಬಳಿಕ ಸಮಿತಿಯ ವರದಿಯು ಜಾರಿಯಾಗಿರುವ ಬಗ್ಗ ಆಯೋಗವು ಮಾಹಿತಿ ನೀಡುತ್ತದೆ[23].

ಸ್ತ್ರೀ ಸಂಬಂಧಿತ ವಿಷಯಗಳಾದ – ಸ್ತ್ರೀಯರ ವಿರುದ್ಧ ಹಿಂಸೆ, ಕಾರ್ಯತಾಣದಲ್ಲಿ ಲೈಂಗಿಕ ಅತ್ಯಾಚಾರ, ಕೃಷಿ ಹಾಗೂ "ಪಂಚಾಯತ್‌ರಾಜ್" ವ್ಯವಸ್ಥೆಯಲ್ಲಿ ಸ್ತ್ರೀಯರ ಪಾತ್ರ, ಸ್ತ್ರೀ ಶಿಕ್ಷಣ, ಆರೋಗ್ಯ ಹಾಗೂ ಉದ್ಯೋಗ ಸ್ಥಿತಿಗತಿಗಳು, ಪೋಲೀಸರ ವಶದಲ್ಲಿರುವ ಸ್ತ್ರೀಯರಿಗೆ ನ್ಯಾಯ ನೀಡಿಕೆ – ಇವೇ ಮೊದಲಾದವುಗಳ ಕುರಿತು ಆಯೋಗವು ವಿಚಾರ ಸಂಕಿರಣಗಳನ್ನು, ಅಭ್ಯಾಸ ವರ್ಗಗಳನ್ನು ಹಾಗೂ ಸಮ್ಮೇಳನಗಳನ್ನು ನಡೆಸುತ್ತದೆ. ಕೆಲವೊಮ್ಮೆ ಇವುಗಳನ್ನು ನಡೆಸುವ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡಿ ಪ್ರೋತ್ಸಾಹಿಸುತ್ತದೆ. ಆಯೋಗವು ಸ್ತ್ರೀಯರಿಗೆ ಸಂಬಂಧಿಸಿದ ಕೆಲವು ವಿಶಿಷ್ಟ ವಿಷಯಗಳ ಕುರಿತು ವಿಶೇಷ ಅಧ್ಯಯನಗಳನ್ನು ನಡೆಸುತ್ತದೆ. ಉದಾಹರಣೆಗೆ, ವಿಚ್ಛೇದಿತ ಸ್ತ್ರೀಯರ ಸ್ಥಿತಿ, ನ್ಯಾಯಿಕ ನಿರ್ಣಯಗಳಲ್ಲಿ ಹಾಗೂ ಕುಟುಂಬ ನ್ಯಾಯಾಲಯಗಳಲ್ಲಿ ಲಿಂಗ ಪೂರ್ವಾಗ್ರಹ ಸ್ತ್ರೀಯರ ವಿಷಯವಾಗಿ ಹಲವು ಆಯೋಗಗಳು ನೀಡಿರುವ ವರದಿಗಳಲ್ಲಿ ಕಾಣಬರುವ ಸಾಮಾಜಿಕ ಲಿಂಗ ಸಂಬಂಧಿತ ಅಂಶಗಳು, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಸ್ತ್ರೀಯರ ಸಹಭಾಗಿತ್ವದ ಪರಿಣಾಮ, ಕೊಳಚೆ ಪ್ರದೇಶಗಳಲ್ಲಿರುವ ಸ್ತ್ರೀಯರ ಆರೋಗ್ಯ ಹಾಗೂ ಶಿಕ್ಷಣ, ಮನೋವಿಕಲತೆಗೆ ಒಳಗಾದ ಸ್ತ್ರೀಯರು, ಸ್ತ್ರೀಯರಿಗೆ ಸಾಲ ನೀಡಿಕೆಯ ಅಗತ್ಯತೆ, ಪರಿಶಿಷ್ಟ ಜಾತಿಗೆ ಸೇರಿದ ಸ್ತ್ರೀಯರ ಸಾಮಾಜಿಕ ಆರ್ಥಿಕ ಅಭಿವೃದ್ಧಿ, ದುರ್ಬಲ ವರ್ಗಕ್ಕೆ ಸೇರಿದ ಸ್ತ್ರೀಯರ ಪರಿಸ್ಥಿತಿಗಳು – ಇವೇ ಮೊದಲಾದ ವಿಶಿಷ್ಟ ವಿಷಯಗಳ ಕುರಿತು ಆಯೋಗವು ಅಧ್ಯಯನ ನಡೆಸಿದೆ. ಸ್ತ್ರೀಯರ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರಿಯಾದ ಧೋರಣೆ–ನಿಲುವುಗಳನ್ನು ತಳೆಯಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಇಂತಹ ಅಧ್ಯಯನಗಳು ಬಹಳಷ್ಟು ಸಹಕಾರಿಯಾಗಿವೆ[24].

ಆಯೋಗವು 1994ರಲ್ಲಿ ತನ್ನದೇ ಆದ ಗ್ರಂಥಾಲಯವೊಂದನ್ನು ಆರಂಭಿಸಿದ್ದು ಅದರಲ್ಲಿಂದು ಸ್ತ್ರೀಯರ ಅಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದ ಸುಮಾರು 2300 ಪುಸ್ತಕಗಳಿವೆ. ಗ್ರಂಥಾಲಯದಲ್ಲಿ ಹಲವು ಉತ್ತಮ ಆಕರ ಗ್ರಂಥಗಳೂ ಇವೆ. ಆಯೋಗ ತಾನೂ ಕೂಡ ಆಗಿಂದಾಗ್ಗೆ ಕೆಲವು ಪ್ರಕಟಣೆಗಳನ್ನು ಹೊರಡಿಸುತ್ತದೆ. ಈವರೆಗೆ ಅದು ಇಂಗ್ಲೀಷ್ ಹಾಗೂ ಹಿಂದಿಗಳಲ್ಲಿ ಒಟ್ಟು ಸುಮಾರು 100 ಪ್ರಕಟಣೆಗಳನ್ನು

ಹೊರತಂದಿದೆ. ಹೆಣ್ಣು ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೆಣ್ಣು ಮಕ್ಕಳ ರಾಷ್ಟ್ರೀಯ ಕ್ರಿಯಾ ಯೋಜನೆ(1991–2000)ಯ ಅಡಿಯಲ್ಲಿ ಹೆಣ್ಣು ಮಕ್ಕಳ ಸಮಗ್ರ ಅಭಿವೃದ್ಧಿಗೆ ಪ್ರಯತ್ನಿಸಲಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗಾಗಿ "ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ"ಯನ್ನು ಸ್ಥಾಪಿಸಿ, ಆ ಮೂಲಕ ಮಹಿಳೆಯರ ಅಭಿವೃದ್ಧಿಗಾಗಿ ಸ್ತ್ರೀಶಕ್ತಿ ಯೋಜನೆ, ಸಾಂತ್ವನ ಯೋಜನೆ, ಶಿಷ್ಯ ವೇತನ, ವೃತ್ತಿ ತರಬೇತಿಗೆ ಆರ್ಥಿಕ ಸಹಾಯ, ಸ್ವಶಕ್ತಿ ಯೋಜನೆಗಳು, ವಿಧವಾ ವೇತನ ಇತ್ಯಾದಿ ಕ್ರಮಗಳನ್ನು ಜಾರಿಗೊಳಿಸಿದೆ. ಜಿಲ್ಲಾ ಪಂಚಾಯತ್ ಮೂಲಕ 'ನಮ್ಮ ಮಗಳು–ನಮ್ಮ ಶಕ್ತಿ' ಯೋಜನೆ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಮಹಿಳಾ ಮಂಡಳಿಗಳಿಗೆ ಅನುದಾನ, ಶಿಶುಪಾಲನಾ ಕೇಂದ್ರಗಳ ಸ್ಥಾಪನೆಯ ಮೂಲಕ ಮಹಿಳೆಯರ ಅಭಿವೃದ್ಧಿಪರ ಹಿತಾಸಕ್ತಿಗಳನ್ನು ರಕ್ಷಿಸಲಾಗುತ್ತಿದೆ.

ಕೇಂದ್ರ ಸರಕಾರದ ಪ್ರಾಯೋಜಕತ್ವದಲ್ಲಿ ಉದ್ಯೋಗಸ್ಥ ಮಹಿಳೆಯರಿಗೆ ವಸತಿಗೃಹಗಳ ನಿರ್ಮಾಣ ಯೋಜನೆ, ರಾಷ್ಟ್ರೀಯ ಹೆರಿಗೆ ಭತ್ತೆ ಯೋಜನೆ, ಬಾಲಿಕಾ ಸಮೃದ್ಧಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಆರ್ಥಿಕವಾಗಿ ಸಬಲಗೊಳಿಸಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮಹಿಳೆಯರಿಗೆ ಉದ್ಯೋಗ ಯೋಜನೆ, ಮಹಿಳಾ ತರಬೇತಿ ಯೋಜನೆ, ಮಾರುಕಟ್ಟೆ ಯೋಜನೆ, ಮಹಿಳಾ ಸ್ವಉದ್ಯೋಗ ಮಾರ್ಗದರ್ಶಿ ಕೇಂದ್ರ, ದೇವದಾಸಿ ಪುನರ್‌ವಸತಿ ಯೋಜನೆ, ಗ್ರಾಮೀಣ ಮಹಿಳೆಯರ ಅಭಿವೃದ್ಧಿ ಮತ್ತು ಅಧಿಕಾರ ನೀಡಿಕೆ ಯೋಜನೆ, ಇತ್ಯಾದಿಗಳು ಮಹಿಳೆಯರನ್ನು ಸಬಲಗೊಳಿಸುವ ಪ್ರಯತ್ನವನ್ನು ಮಾಡಿವೆ[25].

ಸ್ತ್ರೀಯರ ಅಭಿವೃದ್ಧಿಯು ಯಾವ ರೀತಿಯಲ್ಲಿ ನಡೆಯುತ್ತಿದೆ ಎಂಬುದನ್ನು ಪರಿಶೀಲಿಸಲು ಆಯೋಗವು ವಿವಿಧ ರಾಜ್ಯಗಳಿಗೆ ಭೇಟಿ ನೀಡುತ್ತದೆ. ಈಗಾಗಲೇ ಅದು ತಮಿಳುನಾಡು, ಆಂಧ್ರ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಒರಿಸ್ಸಾ, ರಾಜಸ್ತಾನ, ಸಿಕ್ಕಿಂ, ಅಸ್ಸಾಂ, ತ್ರಿಪುರ ಮತ್ತು ಮಣಿಪುರಗಳಿಗೆ ಭೇಟಿ ನೀಡಿ ಆ ರಾಜ್ಯಗಳಲ್ಲಿನ ಸ್ತ್ರೀಯರ ಸ್ಥಿತಿಗತಿ, ಅಭಿವೃದ್ಧಿಯ ಕುರಿತು ತನ್ನದೇ ಆದ ಮೌಲ್ಯಮಾಪನ ಮಾಡಿರುತ್ತದೆ[26]. ಲಿಂಗ ಸಮಾನತೆ ಹಾಗೂ ಸ್ತ್ರೀ ಸಬಲೀಕರಣ ವಿಷಯಗಳಿಗೆ ಸಂಬಂಧಿಸಿದಂತೆ ಆಯೋಗವು ರಾಜ್ಯ ಮಟ್ಟದ ಆಯೋಗಗಳೊಂದಿಗೆ ಹಾಗೂ ಸರ್ಕಾರೇತರ ಸಂಘಟನೆಗಳೊಂದಿಗೆ ಸಂವಹನ ನಡೆಸುತ್ತದೆ. ಆಯೋಗವು ಮಾಧ್ಯಮದೊಂದಿಗೆ, ಸಾಮಾಜಿಕ ಕಾರ್ಯಕರ್ತರೊಂದಿಗೆ, ವಿಶ್ವವಿದ್ಯಾಲಯ ಮಟ್ಟದ ಪ್ರಾಧ್ಯಾಪಕರೊಂದಿಗೆ ಹಾಗೂ ವಿದ್ವಾಂಸರೊಂದಿಗೆ ಚರ್ಚೆ, ಸಂವಹನಗಳನ್ನು ನಡೆಸಿ, ಅದರ ಆಧಾರದ ಮೇಲೆ ಸ್ತ್ರೀಯರ ಹಿತಸಂರಕ್ಷಣೆಯ ವಿಚಾರಕ್ಕೆ ಸಂಬಂಧಿಸಿದಂತೆ ಅದು ಸರ್ಕಾರಕ್ಕೆ ಸೂಕ್ತ ಸಲಹೆ–ಶಿಫಾರಸುಗಳನ್ನು ನೀಡುತ್ತದೆ[27].

ರಾಷ್ಟ್ರ ಕೈಗೊಂಡಿರುವ ಕೆಲವು ವಿಶೇಷ ಉಪಕ್ರಮಗಳು

ಭಾರತ ಸರ್ಕಾರವು ಸ್ತ್ರೀಯರ ಹಿತದೃಷ್ಟಿಯಿಂದ ಅದರಲ್ಲೂ ಮುಖ್ಯವಾಗಿ ಆರೋಗ್ಯ, ಶಿಕ್ಷಣ, ಗ್ರಾಮ ಮತ್ತು ನಗರಾಭಿವೃದ್ಧಿ, ಉದ್ಯೋಗ, ಶಿಕ್ಷಣ ಇವೇ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸ್ತ್ರೀಯರ ಕಲ್ಯಾಣಾಭಿವೃದ್ಧಿಯನ್ನು ಸಾಧಿಸಲು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಸ್ತ್ರೀಯರ ಶಿಕ್ಷಣಕ್ಕೆ ಸಂಬಂಧಿಸಿದ ಅಭಿವೃದ್ಧಿ ಯೋಜನೆಗಳನ್ನು ಕೇಂದ್ರದ ಮಾನವ ಸಂಪನ್ಮೂಲ ಇಲಾಖೆ, ಸ್ತ್ರೀ ಅಧ್ಯಯನ ಕೇಂದ್ರ, ಯೂನಿಸೆಫ್, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ಪ್ರಶಿಕ್ಷಣ ಪರಿಷತ್, ರಾಷ್ಟ್ರೀಯ ವಯಸ್ಕ ಶಿಕ್ಷಣ ಕಾರ್ಯಕ್ರಮ, ಫೋರ್ಡ್ ಪೌಂಡೇಶನ್ ಮುಂತಾದವುಗಳ ಮೂಲಕ ಕೈಗೊಳ್ಳಬಹುದು. ವಿಶ್ವವಿದ್ಯಾಲಯ ಧನಸಹಾಯ ಆಯೋಗದ ನೆರವಿನೊಂದಿಗೆ ಮಹಿಳಾ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿದ್ದು ಅವುಗಳ ಮೂಲಕ ಸ್ತ್ರೀ-ಸಂಬಂಧಿತ ವಿಚಾರ ಹಾಗೂ ಸಮಸ್ಯೆಗಳನ್ನು ಅಳವಾಗಿ ಅಧ್ಯಯನ ಮಾಡುವ ಪ್ರಯತ್ನ ನಡೆಸಲಾಗಿದೆ. ಯೂನಿಸೆಫ್, ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನಾ ಪರಿಷತ್, ವಿಶ್ವವಿದ್ಯಾಲಯ ಧನ ಸಹಾಯ ಮಂಡಳಿ, ಯುನೆಸ್ಕೊ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘಟನೆ, ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನ ಪರಿಷತ್ ಮುಂತಾದ ಸಂಸ್ಥೆಗಳು ಸ್ತ್ರೀಯರ ಸಮಸ್ಯೆಗಳ ಕುರಿತಾಗಿ ವಿಶೇಷ ಅಧ್ಯಯನಗಳನ್ನು ಮತ್ತು ಸಂಶೋಧನೆಗಳನ್ನು ನಡೆಸುತ್ತವೆ[28].

ಸ್ತ್ರೀಯರ ಆರೋಗ್ಯವರ್ಧನೆ ಕುರಿತಾದ ಕಾರ್ಯಕ್ರಮಗಳನ್ನು ಭಾರತೀಯ ವೈದ್ಯಕೀಯ ಸಂಶೋಧನ ಪರಿಷತ್, ಕೇಂದ್ರ ಸರ್ಕಾರ ಆರೋಗ್ಯ ಸೇವಾ ಯೋಜನೆ ಮುಂತಾದ ಸಂಸ್ಥೆಗಳ ಮೂಲಕ ಅನುಷ್ಠಾನ ಮಾಡಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಕುಟುಂಬ ಕಲ್ಯಾಣ ಕೇಂದ್ರಗಳು ಸ್ತ್ರೀಯರ ಆರೋಗ್ಯಾಭಿವೃದ್ಧಿಗಾಗಿ ಶ್ರಮಿಸುತ್ತಿವೆ. ವಿಶ್ವ ಆರೋಗ್ಯ ಸಂಘಟನೆ, ವಿಶ್ವ ಬ್ಯಾಂಕ್ ಹಾಗೂ ಫೋರ್ಡ್ ಫೌಂಡೇಶನ್‌ನಂತಹ ಸಂಸ್ಥೆಗಳು ಮಹಿಳೆಯರಿಗೆ ನೆರವು ನೀಡುವ ಕಾರ್ಯಕ್ರಮಗಳಲ್ಲಿ ತೊಡಗಿವೆ[29]. 1985ರಲ್ಲಿ "ಸ್ತ್ರೀಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ"ಯನ್ನು ರಚಿಸುವ ನಿರ್ಧಾರವನ್ನು ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು ಕೈಗೊಂಡಿತು. 1953ರಲ್ಲಿ ಸ್ಥಾಪಿತವಾದ "ಕೇಂದ್ರೀಯ ಸಮಾಜ ಕಲ್ಯಾಣ ಮಂಡಳಿ"ಯು ಸ್ತ್ರೀಯರ ಮತ್ತು ಮಕ್ಕಳ ಹಾಗೂ ದುರ್ಬಲ ವರ್ಗದವರ ಕಲ್ಯಾಣಾಭಿವೃದ್ಧಿಯ ಮುಖ್ಯ ಉದ್ದೇಶವನ್ನು ಹೊಂದಿದ್ದು ಸ್ವಾತಂತ್ರ್ಯಾನಂತರದಲ್ಲಿ ಸ್ತ್ರೀಯರ ಹಾಗೂ ಮಕ್ಕಳ ಕಲ್ಯಾಣ ಸಾಧನೆಯ ದೃಷ್ಟಿಯಿಂದ ಸರ್ಕಾರೇತರ ಸಂಘಟನೆಗಳಿಗೆ ಸಹಭಾಗಿತ್ವವನ್ನು ಪಡೆಯುವಲ್ಲಿ ಸಫಲತೆಯನ್ನು ಗಳಿಸಿದ ಮೊಟ್ಟಮೊದಲ ಸರ್ಕಾರಿ ಇಲಾಖೆಯಾಗಿದೆ[30]. ಯೋಜನಾ ಆಯೋಗದ ಮೂಲಕವಾಗಿ ಸ್ಥಾಪಿತವಾದ ಈ ಸಂಸ್ಥೆಯು

ಸ್ತ್ರೀಯರ ಕಲ್ಯಾಣಾಭಿವೃದ್ಧಿಯ ದೃಷ್ಟಿಯಿಂದ ದುರ್ಬಲ/ಅಸಹಾಯಕ ಸ್ತ್ರೀಯರಿಗೆ[ನಿರಾಶ್ರಿತರಾದ ವಿಧವೆಯರಿಗೆ, ಮನೆಯಿಂದ ಹೊರದೂಡಲ್ಪಟ್ಟ ಸ್ತ್ರೀಯರಿಗೆ] ವಸತಿಯ ರಕ್ಷಣೆ ನೀಡುವುದು, ಸ್ತ್ರೀಯರಿಗಾಗಿ 'ಸಾಮಾಜಿಕ ಶಿಕ್ಷಣ ಕೇಂದ್ರ' ಹಾಗೂ 'ವಯಸ್ಕ ಶಿಕ್ಷಣ ಕೇಂದ್ರ'ಗಳನ್ನು ತೆರೆಯುವುದು, ಕುಟುಂಬ ಸಲಹಾ ಕೇಂದ್ರಗಳನ್ನು ನಡೆಸುವುದು, ಪ್ರೌಢ ಸ್ತ್ರೀಯರಿಗಾಗಿ ಕೆಲವು ಸಂಕ್ಷಿಪ್ತ ಶಿಕ್ಷಣ ಕೋರ್ಸ್‌ಗಳನ್ನು ನಡೆಸುವುದು, ಮಕ್ಕಳಿಗಾಗಿ ರಜಾಕಾಲೀನ ಶಿಬಿರಗಳನ್ನು ಆಯೋಜಿಸುವುದು, ಮನೋರಂಜನಾ ಕೇಂದ್ರಗಳನ್ನು ತೆರೆಯುವುದು, ದುಡಿಯುವ ಮಹಿಳೆಯರಿಗಾಗಿ ವಸತಿ ನಿಲಯಗಳನ್ನು ಸ್ಥಾಪಿಸುವವರಿಗೆ ಹಾಗೂ ಶಿಶು ವಿಹಾರಗಳಿಗೆ ನೆರವು ನೀಡುವುದು ಮುಂತಾದ ಹಲವಾರು ಕಾರ್ಯಯೋಜನೆಗಳನ್ನು ಮಂಡಳಿಯು ಹಮ್ಮಿಕೊಂಡಿದೆ. ಸ್ತ್ರೀಯರಿಗೆ ಉತ್ತಮ ಸೇವೆಯನ್ನು ನೀಡುವ ಸರ್ಕಾರೇತರ ಸಂಘಟನೆಗೆ ಈ ಇಲಾಖೆಯು ಪ್ರತೀ ವರ್ಷವೂ ರೂ.50,000 ಸಹಾಯಧನ ನೀಡುತ್ತದೆ. ದೇಶಾದ್ಯಂತ ಇಂತಹ 18,000 ಸರ್ಕಾರೇತರ ಸಂಘಟನೆಗಳು ಸಹಾಯಧನ ಪಡೆಯುತ್ತಿವೆ[31].

ಸಂಚಾರಿ ಶಿಶು ವಿಹಾರಗಳು, ಮುಂಬೈಯಂತಹ ಮಹಾನಗರಗಳಲ್ಲಿ ದುಡಿಯುವ ಸ್ತ್ರೀಯರ 12 ವರ್ಷಕ್ಕೂ ಕಡಿಮೆ ವಯಸ್ಸಿನ ಮಕ್ಕಳಿಗೆ ಶಿಕ್ಷಣ ನೀಡುತ್ತಿವೆ. 'ಅನ್ನಪೂರ್ಣ' ಯೋಜನೆಯಂತೆ ದೊಡ್ಡ ನಗರಗಳಲ್ಲಿ (ಮುಖ್ಯವಾಗಿ ಮುಂಬೈ) ದುಡಿಮೆಗಾಗಿ ಬರುವ ಸ್ತ್ರೀಯರಿಗೆ ಮಧ್ಯಾಹ್ನದ ಊಟದ ಸೌಲಭ್ಯ ಕಲ್ಪಿಸಲಾಗಿದೆ. “ಸ್ವ-ಉದ್ಯೋಗಿ ಸ್ತ್ರೀಯರ ಸಂಘ”ವು ಒಂದು ನೊಂದಾಯಿತ ಸಂಘಟಣೆಯಾಗಿದ್ದು ಇದು ಬೀಡಿ ಕಟ್ಟುವವರು, ತಲೆಹೊರೆ ಮೂಲಕ ಮಾರುವವರು, ಮೀನು ಮಾರುವವರು, ಕಬ್ಬಿಣ, ಪ್ಲಾಸ್ಟಿಕ್ ಮತ್ತಿತರ ವಸ್ತುಗಳನ್ನು ಹೆಕ್ಕಿ ಸಂಗ್ರಹಿಸಿ ಮಾರುವವರಿಗೆ ಶೋಷಣೆಯಾಗದಂತೆ ನೋಡಿಕೊಳ್ಳುತ್ತದೆ. ಅಲ್ಲದೇ, ದುಡಿಯುವ ಸ್ತ್ರೀಯರ ವೇದಿಕೆ “ಮಹಿಳಾ ಸೇವಾ ಸಹಕಾರಿ ಬ್ಯಾಂಕು” ಇವೇ ಮುಂತಾದ ಹಲವಾರು ಸಂಘಟನೆಗಳೂ ಸ್ತ್ರೀಯರ ಹಿತಸಂರಕ್ಷಣೆಗಾಗಿ ಶ್ರಮಿಸುತ್ತಿವೆ. ಈ ರೀತಿ ಸ್ತ್ರೀಯರ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಲವಾರು ಯೋಜನೆಗಳ ಮೂಲಕ ಕಾರ್ಯಗತಗೊಳಿಸಲಾಗುತ್ತಿದೆ. ಅವುಗಳೆಂದರೆ, ಪಂಚವಾರ್ಷಿಕ ಯೋಜನೆ, ದುಡಿಯುವ ಸ್ತ್ರೀಯರಿಗಾಗಿ ವಸತಿ ನಿಲಯಗಳು, “ಮಹಿಳಾಭಿವೃದ್ಧಿ ರಾಷ್ಟ್ರೀಯ ಸಮಿತಿ”, “ಕೇಂದ್ರೀಯ ಸಮಾಜ ಕಲ್ಯಾಣ ಮಂಡಳಿ”, “ರಾಷ್ಟ್ರೀಯ ಮಹಿಳಾ ಕೋಶ”, “ಮಹಿಳಾ ಸಮೃದ್ಧಿ ಯೋಜನಾ”, “ಮಹಿಳಾ ಅಭಿವೃದ್ಧಿ ನಿಗಮ”, “ಮಹಿಳಾ ಕಲ್ಯಾಣ ಮತ್ತು ಸಹಾಯಕ ಸೇವೆಗಳು”, “ಇಂದಿರಾ ಮಹಿಳಾ ಯೋಜನಾ”[1995], “ಸಾಮಾಜಿಕ ಸಹಾಯಕ ಯೋಜನೆ”, “ಸ್ವ-ಸಹಾಯ ಸಮೂಹಗಳು”, ಇತ್ಯಾದಿ[32].

ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಗೆ ಸೇರಿದ “ಸ್ತ್ರೀಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ”ಯು ಸ್ತ್ರೀಯರ ಅಭಿವೃದ್ಧಿಯ ದೃಷ್ಟಿಯಿಂದ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ[33].

ಅದೇ ರೀತಿ 7ನೇ ಪಂಚವಾರ್ಷಿಕ ಯೋಜನೆಯಲ್ಲಿಯೂ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಅವುಗಳೆಂದರೆ ತರಬೇತಿ ಮತ್ತು ಉದ್ಯೋಗ ಕಾರ್ಯಕ್ರಮಕ್ಕೆ ಬೆಂಬಲ. ಗ್ರಾಮೀಣ ಮತ್ತು ಬಡ ಸ್ತ್ರೀಯರಿಗಾಗಿ ತಿಳುವಳಿಕೆ ನಿರ್ಮಾಣ ಶಿಬಿರ. ಸ್ತ್ರೀಯರ ತರಬೇತಿ ಕೇಂದ್ರಗಳು ಅಥವಾ ಸಂತ್ರಸ್ತ ಸ್ತ್ರೀಯರ ಪುನರ್ವಸತಿ ಸಂಸ್ಥೆಗಳು, ಸ್ವಯಂ ಕ್ರಿಯಾ ಕೇಂದ್ರಗಳು ಮತ್ತು ಕುಟುಂಬ ಸಲಹಾ ಕೇಂದ್ರಗಳು, ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗಾಗಿ ಅಲ್ಪಕಾಲೀನ ವಸತಿ ನಿಲಯಗಳು, ಉಚಿತ ಕಾನೂನು ನೆರವು ಮತ್ತು ಅರೆ ಕಾನೂನು ತರಬೇತಿ, ಮತ್ತು ದುಡಿಯುವ ಸ್ತ್ರೀಯರ ವಸತಿ ನಿಲಯಗಳು[34].

ಮಹಿಳೆಯರ ಹಕ್ಕುಗಳ ಸಂರಕ್ಷಣೆ ಹಾಗೂ ಅವರ ಅಭಿವೃದ್ಧಿಯ ಅಗತ್ಯತೆಯ ಮಹತ್ವವನ್ನು ಜನ ಸಾಮಾನ್ಯರೆಲ್ಲರಿಗೂ ಮನದಟ್ಟು ಮಾಡಲು ಸರ್ಕಾರವು ಹಲವಾರು ರೀತಿಯ ಮಹಿಳಾ ದಿನಾಚರಣೆಗಳನ್ನು ಸಾರ್ವಜನಿಕವಾಗಿ ಆಚರಿಸುತ್ತಾ ಬಂದಿದೆ. ಅವುಗಳೆಂದರೆ: 1975ನೇ ವರ್ಷವನ್ನು ವಿಶ್ವಸಂಸ್ಥೆಯ ಕರೆಯಂತೆ "ಅಂತಾರಾಷ್ಟ್ರೀಯ ಮಹಿಳಾ ವರ್ಷ"ವಾಗಿ ಆಚರಿಸಲಾಗುತ್ತಿದೆ. ತದನಂತರ ಪ್ರತಿ ವರ್ಷ ಮಾರ್ಚ್ 8ನ್ನು "ಅಂತಾರಾಷ್ಟ್ರೀಯ ಮಹಿಳಾ ದಿನ"ವನ್ನಾಗಿ ಆಚರಿಸಿಕೊಂಡು ಬರಲಾಗಿದೆ. 1990ನೇ ವರ್ಷವನ್ನು "ಹೆಣ್ಣು ಮಗುವಿನ ಸಾರ್ಕ್ ವರ್ಷ"ವೆಂದು ಹಾಗೂ 1991ರಿಂದ 2000ರ ವರೆಗಿನ ದಶಕವನ್ನು "ಹೆಣ್ಣು ಮಕ್ಕಳ ಸಾರ್ಕ್ ದಶಕ"[35]ವೆಂದು ಆಚರಿಸಲಾಗಿತ್ತು. 2001ನೇ ವರ್ಷವನ್ನು "ಮಹಿಳಾ ಸಶಕ್ತೀಕರಣ ವರ್ಷ"ವೆಂದು ಆಚರಿಸಲಾಗಿದೆ. 2010ನೇ ವರ್ಷವನ್ನು 'ಮಿಲೇನಿಯಮ್ ಅಭಿವೃದ್ಧಿ ಗುರಿ (ಎಂ.ಡಿ.ಜಿ)' ಶೃಂಗವೆಂದು ಸಾರಿದೆ[36].

ಈ ರೀತಿಯಲ್ಲಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾನಂತರ ಜಾರಿಗೆ ಬಂದಂತಹ ಹೆಚ್ಚಿನ ಮಹಿಳಾಪರ ಕಾನೂನುಗಳು ಮತ್ತು ಉಪಕ್ರಮಗಳು ಮಹಿಳೆಯರ ಸಬಲೀಕರಣದ ಉದ್ದೇಶವನ್ನು ಹೊಂದಿದ್ದವು. ತದನಂತರ ಮಹಿಳೆಯರಿಗೆ ಸಮಾನ ಅವಕಾಶಗಳು ದೊರೆತರೂ ರಾಜಕೀಯ ಕ್ಷೇತ್ರದಲ್ಲಿ ಅವರ ಪಾಲ್ಗೊಳ್ಳುವಿಕೆಯು ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲದ ಕಾರಣ ಸ್ಥಳೀಯ ಸಂಸ್ಥೆಗಳ ಕಾಯ್ದೆಗಳಿಗೆ ಕ್ರಾಂತಿಕಾರಿ ಬದಲಾವಣೆಯನ್ನು ತಂದು ಅವರುಗಳ ರಾಜಕೀಯ ಸಹಭಾಗಿತ್ವವನ್ನು ಖಾತರಿಪಡಿಸಲಾಯಿತು. ಮಹಿಳಾ ಸಬಲೀಕರಣಕ್ಕೆ ಸಂಬಂಧಪಟ್ಟಂತೆ ಇರುವಂತಹ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಉಪಕ್ರಮಗಳ ಬಗ್ಗೆ ಪ್ರಸ್ತುತ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿರುತ್ತದೆ.

ಕೊನೆಟಿಪ್ಪಣಿಗಳು

1. ಗವರ್ನ್‌ಮೆಂಟ್ ಆಫ್ ಇಂಡಿಯಾ: 1991 ಮತ್ತು 2011ರ ಜನಗಣತಿ ವರದಿ, ಆಫೀಸ್ ಆಫ್ ರಿಜಿಸ್ಟ್ರರ್ ಜನರಲ್, ಇಂಡಿಯಾ 2011.
2. ಮಹಿಳೆಯರನ್ನು ದುರ್ಬಲರೆಂದು ಪರಿಗಣಿಸಿ ಮುಖ್ಯವಾಹಿನಿಯಿಂದ ಹಾಗೂ ಅವಕಾಶದಿಂದ ವಂಚಿತರನ್ನಾಗಿರಿಸಿದ್ದು ಎಲ್ಲಾ ವಲಯಗಳಲ್ಲೂ ಕಂಡುಬರುವ ಅಂಶವಾಗಿರುತ್ತದೆ. ಆದುದರಿಂದ ಸರ್ಕಾರವು ಸ್ತ್ರೀ ಸಂಬಂಧಿತ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿ ಸ್ತ್ರೀ ಸಶಕ್ತೀಕರಣಕ್ಕೆ ಸಂಬಂಧಿಸಿದ ಕಾನೂನು ಕ್ರಮಗಳನ್ನು ತೆಗೆದುಕೊಂಡಿರುತ್ತದೆ.
3. ಗಿರಿರಾಜ್ ಶಾ, 'ದ ಎನ್‌ಸೈಕ್ಲೋಪೀಡಿಯಾ ಆಫ್ ವುಮೆನ್ ಸ್ಟಡೀಸ್', ವಾಲ್ಯೂಮ್ 2, ಗ್ಯಾನ್ ಪಬ್ಲಿಷಿಂಗ್ ಹೌಸ್ ನ್ಯೂಡೆಲ್ಲಿ, 1995, ಪುಟ 632–687.
4. ಕಿರಣ್ ದೇವೇಂದ್ರ, *ಸ್ಟೇಟಸ್ ಆ್ಯಂಡ್ ಪೊಸಿಶನ್ ಆಫ್ ವುಮೆನ್ ಇನ್ ಇಂಡಿಯಾ*, ವಿಕಾಸ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 1990. ಪುಟ 4–29.
5. 1974ರ 'ಸಮನತೆಯೆಡೆಗೆ' ಎನ್ನುವ ವರದಿಯು ಮಹಿಳೆಯರ ಸ್ಥಿತಿಗತಿ ಸುಧಾರಿಸುವ ಬದಲು ಕೆಳಮಟ್ಟಕ್ಕಿಳಿದಿದೆ ಎನ್ನುವುದನ್ನು ಸೂಚಿಸಿದ್ದರಿಂದ ಮಹಿಳೆಯರ ಅಂತಸ್ತು ರಾಷ್ಟ್ರೀಯ ವಿಷಯವಾಯಿತು. ಇದರ ಪರಿಣಾಮವಾಗಿ ಮಹಿಳೆಯರ ಪ್ರಗತಿ ಮತ್ತು ಅಭಿವೃದ್ಧಿ ಲಿಂಗಾಧಾರಿತ ವಿಷಯಗಳಾಯಿತು.
6. 1979ರ ಮಹಿಳೆಯರ ಮೇಲಿನ ಎಲ್ಲಾ ರೀತಿಯ ತಾರತಮ್ಯ ನಿವಾರಣಾ ಒಪ್ಪಂದವು ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ತ್ರೀ ಮತ್ತು ಪುರುಷರ ಸಮಾನತೆಯನ್ನು ಪ್ರತಿಪಾದಿಸಿತು. ಇದರ ಮುಂದಿನ ಭಾಗವಾಗಿ 1985ರಲ್ಲಿ ನೈರೋಬಿಯಲ್ಲಿ ನಡೆದ ಸ್ತ್ರೀಯರ ಜಾಗತಿಕ ಮಹಾಸಭೆಯಲ್ಲಿ 179 ರಾಷ್ಟ್ರಗಳು ಸ್ತ್ರೀ ಸಶಕ್ತೀಕರಣದ ಪ್ರಯತ್ನ ನಡೆಸಬೇಕೆಂದು ಶಿಫಾರಸು ನೀಡಿತು. (ವಿವರಣೆಗಾಗಿ ರಾಮ್ ಅಹೂಜ, ರೈಟ್ಸ್ ಆಫ್ ವುಮೆನ್, ಎ ಫೆಮಿನಿಸ್ಟ್ ಪರ್ಸ್‌ಪೆಕ್ಟಿವ್, ರಾವತ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2001. ಪುಟ 66–128).
7. ಅದೇ ಪುಟ ಸಂಖ್ಯೆ 66–128.
8. ಅದೇ ಪುಟ ಸಂಖ್ಯೆ 66–128.
9. ಚ. ನ. ಶಂಕರ್ ರಾವ್, *ಮಾನವ ಹಕ್ಕುಗಳು ಮತ್ತು ಲಿಂಗ ಸಮಾನತೆ*, ಜೈ ಭಾರತ್ ಪ್ರಕಾಶನ, ಮಂಗಳೂರು, 2006. ಪುಟ 98–115.
10. ಅದೇ ಪುಟ ಸಂಖ್ಯೆ 98–115.
11. ಎ. ಸಿ. ಕಪೂರ್, *ಇಂಡಿಯನ್ ಗವರ್ನ್‌ಮೆಂಟ್ ಆ್ಯಂಡ್ ಪೊಲಿಟಿಕ್ಸ್*, 13ನೇ ಎಡಿಷನ್, ಎಸ್. ಚಂದ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1997. ಪುಟ 1–66.
12. ಭಾರತದ ಸಂವಿಧಾನದ ಭಾಗ 3, ವಿಧಿ 12–35ರಲ್ಲಿ ಮೂಲಭೂತ ಹಕ್ಕುಗಳನ್ನು ಸ್ತ್ರೀ ಪುರುಷ ಬೇಧವಿಲ್ಲದೆ ರಾಷ್ಟ್ರದ ಎಲ್ಲಾ ಪ್ರಜೆಗಳಿಗೂ ಸಮಾನವಾಗಿ ನೀಡಿದೆ (ಹೆಚ್ಚಿನ ವಿವರಣೆಗಾಗಿ ಅದೇ ಪುಟ 1–66).
13. ಸಂವಿಧಾನದ ಭಾಗ 4, ವಿಧಿ 36ರಿಂದ51ರಲ್ಲಿ ರಾಜ್ಯ ನಿರ್ದೇಶಕ ತತ್ವಗಳಲ್ಲಿ ಮಹಿಳಾ ಸಾಮಾಜಿಕ – ಆರ್ಥಿಕ ಕಲ್ಯಾಣ ಮತ್ತು ಮಹಿಳಾ ಅಭಿವೃದ್ಧಿಗಾಗಿ ನಿರ್ದಿಷ್ಟ ನಿರ್ದೇಶನಗಳನ್ನು ಉಲ್ಲೇಖಿಸಿದೆ. (ಹೆಚ್ಚಿನ ವಿವರಣೆಗಾಗಿ ಅದೇ ಪುಟ 1–66).

14. ಪಿ.ಬಿ. ರಾಥೋಡ್, ಇಂಡಿಯನ್ ಕಾನ್ಸ್‌ಟಿಟ್ಯೂಷನ್, ಗವರ್ನ್‌ಮೆಂಟ್ ಆ್ಯಂಡ್ ಪೊಲಿಟಿಕಲ್ ಸಿಸ್ಟಮ್ಸ್, ಎ.ಬಿ.ಡಿ. ಪಬ್ಲಿಷರ್ಸ್, ಜೈಪುರ್, 2004. ಪುಟ 282–325.
15. ಸತೀಸಹಗಮನ ನಿಷೇಧ ಕಾಯ್ದೆ, 1829, ಅಮಾನುಷವಾದ ಸತೀಸಹಗಮನದ ಪದ್ಧತಿ ಮತ್ತು ಆಚರಣೆಯನ್ನು ಕಾನೂನು ಬಾಹಿರಗೊಳಿಸಿತು.
16. ಬಂಗಾಳದ ಪ್ರಸಿದ್ಧ ವಿಚಾರವಾದಿ ಹಾಗೂ ಸಮಾಜ ಸುಧಾರಕ ಈಶ್ವರಚಂದ್ರ ವಿದ್ಯಾಸಾಗರರು ಬ್ರಿಟಿಷ್ ಸರ್ಕಾರದ ಮೇಲೆ ಒತ್ತಡ ಹೇರಿದ್ದರ ಪರಿಣಾಮವಾಗಿ ಸತೀ ನಷೇಧ ಕಾಯ್ದೆ ಅನುಷ್ಠಾನಕ್ಕೆ ಬಂದಿತು.
17. ಅನೈತಿಕ ವ್ಯವಹಾರ ನಿಗ್ರಹಣ ಕಾಯ್ದೆಯನ್ನು 1986ರಲ್ಲಿ ತಿದ್ದುಪಡಿ ಮಾಡಿದಾಗ ಕೆಲವು ವಿಶೇಷ ಅಂಶಗಳನ್ನು ಸೇರ್ಪಡೆಗೊಳಿಸಿತು: 1. ವ್ಯಭಿಚಾರ ಕೇಂದ್ರಗಳಿಗೆ ಪೋಲೀಸರು ದಾಳಿಮಾಡುವಾಗ ಎರಡು ಮಹಿಳಾ ಪೋಲೀಸರು ಇರಲೇಬೇಕು. 2. ಅವರ ವಿಚಾರಣೆಯನ್ನು ಮಹಿಳಾ ಪೋಲೀಸರೇ ನಡೆಸತಕ್ಕದ್ದು ಅಥವ ಸೇವಾಸಂಸ್ಥೆಗೆ ಸೇರಿದ ಎರಡು ಮಹಿಳಾ ಸದಸ್ಯೆಯರ ಸಮ್ಮುಖದಲ್ಲಿ ನಡೆಸತಕ್ಕದ್ದು. 3. ಅವರ ಪುನರ್ವಸತೀಕರಣದ ಬಗ್ಗೆಯೂ ಈ ಕಾಯ್ದೆ ಪ್ರಸ್ತಾಪಿಸುತ್ತದೆ.
18. ರಾಜೀವ ಗಾಂಧಿಯವರು ಪ್ರಧಾನಮಂತ್ರಿಯಾಗಿದ್ದಾಗ ಜಾರಿಗೆ ತಂದ ಈ ಕಾಯ್ದೆಯು 'ಮತಬ್ಯಾಂಕಿನ' ರಾಜಕೀಯ ಉದ್ದೇಶಗಳನ್ನು ಹೊಂದಿತ್ತು ಎಂಬುದಾಗಿ ಇದರ ಬಗ್ಗೆ ರಾಜಕೀಯ ಕೋಲಾಹಲ ನಿರ್ಮಾಣವಾಗಿತ್ತು.
19. ಭಾರತೀಯ ಕ್ರೈಮ್ಸ್ ಬ್ರಾಂಚ್ ವರದಿ, 2001ರ ಜನಗಣತಿ ದಾಖಲೆ.
20. ಸಿ.ಎಸ್.ಡಬ್ಲ್ಯು.ಐ.(1992), ದ ಕಮಿಟಿ ಓನ್ ದ ಸ್ಟೇಟಸ್ ಆಫ್ ವುಮೆನ್ ಇನ್ ಇಂಡಿಯಾ, ಭಾರತ ಸರ್ಕಾರವು ಮಹಿಳೆಯರ ಸ್ಥಾನಮಾನ ಮತ್ತು ಅಂತಸ್ತುಗಳ ಪರಿಶೀಲನೆಯನ್ನು ಮಾಡಲು ರಚಿಸಿದ ಸಮಿತಿಯಾಗಿರುತ್ತದೆ.
21. ಜ. ನ. ಶಂಕರ್ ರಾವ್, ಮಾನವ ಹಕ್ಕುಗಳು ಮತ್ತು ಲಿಂಗ ಸಮಾನತೆ, ಜೈ ಭಾರತ್ ಪ್ರಕಾಶನ, ಮಂಗಳೂರು, 2006. ಪುಟ 108–111.
22. ಅದೇ ಪುಟ ಸಂಖ್ಯೆ 108–111.
23. ಅದೇ ಪುಟ ಸಂಖ್ಯೆ 108–111.
24. ಅದೇ ಪುಟ ಸಂಖ್ಯೆ 108–111.
25. ಮರ್ಲಿನ್ ಮಾರ್ಟಿಸ್, *ಲಿಂಗತ್ವ ಸಮನ್ವಾಯಕ್ಕಾಗಿ ರಾಜ್ಯದ ಉಪಕ್ರಮಗಳು*, ಕಿಶೋರಿ ನಾಯಕ್ (ಸಂ.), *'ಲಿಂಗತ್ವ ಸಮನ್ವಾಯ'*, ಮಹಿಳಾ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಲಯ, 2007. ಪುಟ 88–106.
26. ಎಸ್. ಅನಂತ್, *'ಮಹಿಳಾ ಸಬಲೀಕರಣ ಮತ್ತು ಭಾರತ ಸಂವಿಧಾನ'*, ಶೈಲಜಾ ಹಿರೇಮಠ (ಸಂ.), *'ಮಹಿಳಾ ಅಧ್ಯಯನ'*, ಸಂಪುಟ 9, ಸಂಚಿಕೆ 1, ಜನವರಿ–ಜೂನ್ 2007, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007. ಪುಟ 47–52.
27. ಕೃಷ್ಣ ಕೊಥಾಯ್, 'ರಿಪೋರ್ಟ್ ಆಫ್ ದ ಆ್ಯಕ್ಷನ್ ರಿಸರ್ಚ್ ಆನ್ ದಿ ಮ್ಯಾನೇಜ್‌ಮೆಂಟ್ ಆಫ್ ಪಂಚಾಯತ್ಸ್ ಇನ್ ಉಡುಪಿ ಡಿಸ್ಟ್ರಿಕ್ಟ್', ಮಿನಿಸ್ಟ್ರಿ ಆಫ್ ರೂರಲ್ ಡೆವಲಪ್‌ಮೆಂಟ್, ಗವರ್ನ್‌ಮೆಂಟ್ ಆಫ್ ಇಂಡಿಯಾ, ನ್ಯೂಡೆಲ್ಲಿ. ಪುಟ 1–13.
28. ಅದೇ ಪುಟ ಸಂಖ್ಯೆ 22–43.

29. ಆರುನಿಮ ಬಸು, ವುಮೆನ್ ಎಂಪವರ್‌ಮೆಂಟ್ ಇನ್ ಇಂಡಿಯಾ, ಅನ್‌ಮೋಲ್ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ನ್ಯೂಡೆಲ್ಲಿ, 2003. ಪುಟ 1–42.
30. ಅದೇ ಪುಟ 1–42.
31. ಅದೇ ಪುಟ 1–42.
32. ಕೆ.ಜಿ. ಶಿವರಾಮ ಕೃಷ್ಣನ್, "ಜ್ಯುಡೀಶಿಯಲ್ ಸೆಟ್‌ಬ್ಯಾಕ್ ಫಾರ್ ಲೋಕಲ್ ಬಾಡೀಸ್", ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, 45, ನಂ. 32, ಆಗಸ್ಟ್ 7, 2010. ಪುಟ 43–46.
33. ಆರ್.ಕೆ. ಶರ್ಮಾ, ಎಂಪವರಿಂಗ್ ವುಮೆನ್ ತ್ರೂ ಸೆಲ್ಫ್‌ಹೆಲ್ಪ್ ಗ್ರೂಪ್, ಎಂ.ಪಿ. ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2004. ಪುಟ 66–225.
34. ಅದೇ. ಪುಟ 66–225.
35. ಪ್ರೊಮೀಳಾ ಕಪೂರ್, ಎಂಪವರಿಂಗ್ ದ ಇಂಡಿಯನ್ ವುಮೆನ್, ಪಬ್ಲಿಕೇಷನ್ಸ್ ಡಿವಿಜನ್, ಗವರ್ನ್‌ಮೆಂಟ್ ಆಫ್ ಇಂಡಿಯಾ, ಪಟಿಯಾಲ ಹೌಸ್, ನ್ಯೂಡೆಲ್ಲಿ, 2001. ಪುಟ 4–18.
36. ಜಯಲಕ್ಷ್ಮೀ, ಮಿಲೇನಿಯಂ ಡೆವಲಪ್‌ಮೆಂಟ್ ಗೋಲ್ಸ್, ಯು.ಎನ್.ಡಿ.ಪಿ. ವರದಿ, 2010. ಪುಟ 4.

ಅಧ್ಯಾಯ – 4

ರಾಜ್ಯದ ಉತ್ತೇಜನ ಕ್ರಮಗಳು ಮತ್ತು ಮಹಿಳಾ ಪಾಲ್ಗೊಳ್ಳುವಿಕೆ

ಅಧ್ಯಾಯ–4

ರಾಜ್ಯದ ಉತ್ತೇಜನ ಕ್ರಮಗಳು ಮತ್ತು ಮಹಿಳಾ ಪಾಲ್ಗೊಳ್ಳುವಿಕೆ

ಪಾಶ್ಚಿಮಾತ್ಯ ರಾಷ್ಟ್ರಗಳು ವಿಶೇಷವಾಗಿ ಅಮೆರಿಕಾ ಮತ್ತು ಯುರೋಪಿನ ರಾಷ್ಟ್ರಕ್ಕೆ ಹೋಲಿಸಿ ದಕ್ಷಿಣ ಏಷ್ಯಾ ರಾಷ್ಟ್ರಗಳಾದ ಆಫ್ರಿಕ ಮತ್ತು ಬೆಳವಣಿಗೆ ಹೊಂದುತ್ತಿರುವ ಏಷ್ಯಾದ ರಾಷ್ಟ್ರಗಳನ್ನು ಅವಲೋಕಿಸಿದಾಗ ಇಲ್ಲಿಯವರೆಗಿನ ಜನಗಣತಿಗಳು, ಅಂಕಿ ಅಂಶಗಳು ಮತ್ತು ಅಧ್ಯಯನಗಳು ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರ ಪಾಲು ಶೇಕಡಾ 50ಕ್ಕಿಂತಲೂ ಹೆಚ್ಚಿರುವುದನ್ನು ಸ್ಪಷ್ಟವಾಗಿ ಉಲ್ಲೇಖಿಸಿರುವುದು ಕಂಡುಬರುತ್ತದೆ[1]. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಎಲ್ಲಾವರ್ಗಗಳ ಜನರು ಯಾವುದೇ ತಾರತಮ್ಯವಿಲ್ಲದೆ ವಿಶೇಷವಾಗಿ ಲಿಂಗ ಸಂಬಂಧಿ ಶೋಷಣೆಗಳಿಲ್ಲದೇ ಸಮಾನವಾಗಿ ಪಾಲ್ಗೊಂಡಾಗ ಮಾತ್ರ ಪ್ರಜಾಸತ್ತಾತ್ಮಕ ವ್ಯವಸ್ಥೆ ಯಶಸ್ವಿಯಾಗುತ್ತದೆ ಮತ್ತು ಅರ್ಥಪೂರ್ಣವಾಗುತ್ತದೆ. ಈ ಹಿನ್ನೆಲೆಯಲ್ಲಿ 21ನೇಯ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಸರ್ಕಾರಗಳು ರಾಜಕೀಯದಲ್ಲಿ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆಗೆ ತೆಗೆದುಕೊಂಡಂತಹ ಉತ್ತೇಜನಕಾರಿ ಕ್ರಮಗಳು ಸಮಾಜದ ಎಲ್ಲಾ ವರ್ಗಗಳ ಮಹಿಳೆಯರಿಗೂ ತಲುಪುವಲ್ಲಿ ಮತ್ತು ಆಕರ್ಷಿಸುವುದರಲ್ಲಿ ಯಶಸ್ವಿಯಾಗಿರುತ್ತದೆಯೇ? ಎಂಬುದನ್ನು ಪ್ರಮುಖವಾಗಿ ಗಮನದಲ್ಲಿರಿಸಿ ಪ್ರಸ್ತುತ ಅಧ್ಯಾಯದಲ್ಲಿ ಕ್ಷೇತ್ರಕಾರ್ಯಕ್ಕಾಗಿ ಆರಿಸಿಕೊಂಡ ಮಹಿಳಾ ಪ್ರತಿನಿಧಿಗಳ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ ಮತ್ತು ಅವರುಗಳ ರಾಜಕೀಯ ಪಾಲ್ಗೊಳ್ಳುವಿಕೆಯ ಮೇಲೆ ಬೀರಿದ ಪರಿಣಾಮಗಳನ್ನು ವಿವರವಾಗಿ ಚರ್ಚಿಸಲಾಗಿರುತ್ತದೆ.

ಸಾಂಪ್ರದಾಯಿಕ ಮತ್ತು ಸಂಕೀರ್ಣ ಸಾಮಾಜಿಕ ವ್ಯವಸ್ಥೆ ಮಹಿಳೆಯರನ್ನು ತಲತಲಾಂತರಗಳಿಂದ ಶೋಷಣೆಗೆ ಒಳಪಡಿಸಿ ದ್ವಿತೀಯ ದರ್ಜೆಯ ನಾಗರಿಕರನ್ನಾಗಿಸಿ ದೌರ್ಜನ್ಯವೆಸಗಿ, ರಾಷ್ಟ್ರದ ಮುಖ್ಯವಾಹಿನಿಯಿಂದ ಸಂಪೂರ್ಣವಾಗಿ ಹೊರಗಿರಿಸಿದೆ. ಇತಿಹಾಸವನ್ನು ಅವಲೋಕಿಸಿದಾಗ ಪ್ರಮುಖವಾಗಿ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆ ಮಹಿಳೆಯರನ್ನು ವ್ಯವಸ್ಥಿತವಾಗಿ ರಾಜಕೀಯ ಚಟುವಟಿಕೆಗಳಿಂದ ಹೊರಗಿಟ್ಟಿರುವುದು ಎಲ್ಲಾ ರಾಷ್ಟ್ರಗಳನ್ನು ಗಮನಿಸಿದಾಗ ವಿಶೇಷವಾಗಿ ಅಭಿವೃದ್ಧಿಯಲ್ಲಿ ಮುಂದುವರಿದಿರುವ ಹಾಗೂ ಮುಂದುವರಿಯುತ್ತಿರುವ ಬಹುತೇಕ ರಾಷ್ಟ್ರಗಳ ರಾಜಕೀಯ ವ್ಯವಸ್ಥೆಯಲ್ಲಿ ಕಂಡುಬಂದಿರುವುದನ್ನು ಹೆಚ್ಚಿನ ಅಧ್ಯಯನಗಳು ಸ್ಪಷ್ಟಪಡಿಸಿರುತ್ತವೆ[2].

1993ರ ಸಂವಿಧಾನದ 73ನೇ ತಿದ್ದುಪಡಿಯು ಈ ಎಲ್ಲಾ ಶೋಷಣೆಗಳನ್ನು ಸಂಪೂರ್ಣವಾಗಿ ತೊಡೆದು ಹಾಕಿ ಮಹಿಳೆಯರ ಸಬಲೀಕರಣಕ್ಕೆ ಮತ್ತು ರಾಜಕೀಯ ಸಹಭಾಗಿತ್ವಕ್ಕೆ ಅವಕಾಶ ಮಾಡಿಕೊಟ್ಟ

ಕ್ರಾಂತಿಕಾರಿ ಬದಲಾವಣೆಯಾಗಿರುತ್ತದೆ. ಮಹಿಳಾ ಸಶಕ್ತೀಕರಣಕ್ಕೆ ಸಂಬಂಧಪಟ್ಟ ಈ ತಿದ್ದುಪಡಿಯು ಜಾರಿಗೆ ಬಂದು ಎರಡು ದಶಕಗಳು ಕಳೆದರೂ, ಸಂವಿಧಾನದತ್ತವಾಗಿ ಸಮಾನ ಅವಕಾಶಗಳು ದೊರೆತರೂ, ಸ್ಥಳೀಯ ಮಟ್ಟದಲ್ಲಿ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯು ಸಂಖ್ಯಾತ್ಮಕವಾಗಿ ಪುರುಷ ಪ್ರತಿನಿಧಿಗಳಿಗಿಂತಲೂ ಏರಿಕೆಯಾಗಿದ್ದರೂ, ಧನಾತ್ಮಕ ಬದಲಾವಣೆಗಳಾಗಿರುವುದು ಕಂಡುಬರುವುದಿಲ್ಲ. ತಳಸ್ತರಗಳ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಸ್ತುತ ಮಹಿಳೆಯರಿಗೆ ಪುರುಷರ ಒತ್ತಡ, ರಾಜಕೀಯ ಪಕ್ಷಗಳ ಆಮಿಷಗಳು, ಕುಟುಂಬದ ಒತ್ತಾಯ ಮತ್ತು ಇತರ ಬಾಧ್ಯತೆಗಳಿಗೆ ಕಟ್ಟುಬಿದ್ದು ಸ್ವ-ಆಸಕ್ತಿ ಇಲ್ಲದಿದ್ದರೂ ನಾಮಕಾವಸ್ಥೆಗಾಗಿ ಸ್ಥಳೀಯ ಮಟ್ಟದಲ್ಲಿ ಚುನಾವಣೆಗೆ ಸ್ಪರ್ಧಿಸುವುದು ಮತ್ತು ಆಯ್ಕೆಯಾಗುವುದು. 1993ರ ಸಂವಿಧಾನದ ತಿದ್ದುಪಡಿಯ ಕಾಯ್ದೆ ತನ್ನ ಮೂಲ ಆಶಯವನ್ನು ಸಾಧಿಸುವುದರಲ್ಲಿ ಸಫಲವಾಗಿರುವುದಿಲ್ಲ ಎಂಬುದು ಸ್ಪಷ್ಟವಾಗಿ ಅರಿವಿಗೆ ಬರುವ ಅಂಶವಾಗಿರುತ್ತದೆ[3].

ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮಹಿಳೆಯರು ಅನಕ್ಷರಸ್ಥರಾಗಿರುವುದು, ಅವರಲ್ಲಿನ ಬಡತನ, ಕೆಳಜಾತಿಗೆ ಸೇರಿದವರೆಂಬ ಕೀಳರಿಮೆ ಮತ್ತು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ತಮ್ಮ ಅವಶ್ಯಕತೆಗಳನ್ನು ಪೂರೈಸುವುದರಿಂದ ವಂಚಿತರಾದವರು, ದುರ್ಬಲರು ಎಂಬಿತ್ಯಾದಿ ಕಾರಣಗಳು ಅವರುಗಳ ರಾಜಕೀಯ ಭಾಗವಹಿಸುವಿಕೆಗೆ ಇರುವಂತಹ ಅಡೆತಡೆಗಳು ಎಂಬುದಾಗಿ ಹೆಚ್ಚಿನ ಅಧ್ಯಯನಗಳು ಸಾಬೀತುಪಡಿಸಿರುತ್ತದೆ[4]. ಕರ್ನಾಟಕದ ಒಟ್ಟು 30 ಕಂದಾಯ ಜಿಲ್ಲೆಗಳನ್ನು ಅಭಿವೃದ್ಧಿಯ ಮಾಪನಗಳಿಗೆ ಅನುಗುಣವಾಗಿ ವರ್ಗೀಕರಿಸಲಾಗಿರುತ್ತದೆ[5]. ಉಡುಪಿ ಜಿಲ್ಲೆಯನ್ನು ಇತರ ಜಿಲ್ಲೆಗಳಿಗೆ ಹೋಲಿಸಿದಾಗ ಸಾಕ್ಷರತೆ, ಉದ್ಯಮಶೀಲತೆ, ಆರೋಗ್ಯ, ತಲಾ ವರಮಾನ ಇತ್ಯಾದಿಗಳನ್ನು ಗಮನಿಸಿದಾಗ ಅಭಿವೃದ್ಧಿಯನ್ನು ಸಾಧಿಸಿದ ಜಿಲ್ಲೆ ಹಾಗೂ ಬ್ಯಾಂಕಿಂಗ್, ಸಾಂಸ್ಕೃತಿಕ, ಆರೋಗ್ಯ ಮತ್ತಿತರ ಕ್ಷೇತ್ರಗಳಲ್ಲಿ ರಾಷ್ಟ್ರದಲ್ಲಿಯೇ ಗುರುತಿಸಲ್ಪಟ್ಟ ಪ್ರದೇಶವೆಂದು ಪರಿಗಣಿಸಲಾಗಿರುತ್ತದೆ[6]. ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ 2008ರ ಪ್ರಕಾರ ಮಹಿಳೆಯರು ಸಾಮಾಜಿಕವಾಗಿ ಹಾಗೂ ಇತರ ಕ್ಷೇತ್ರಗಳಲ್ಲಿ ಪುರುಷರಿಗೆ ಸಮಾನರೆಂದು ಪರಿಗಣಿಸಲ್ಪಟ್ಟಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಜಿಜ್ಞಾಸೆಗೊಳಪಡಿಸಿದಾಗ ಈ ಪ್ರದೇಶದಲ್ಲಿ ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯವಾಗಿ ಮತ್ತು ಜನಪ್ರತಿನಿಧಿಗಳಾಗಿ ಪರಿಣಾಮಕಾರಿಯಾಗಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲವೇ? ಎಂಬುದನ್ನು ಅರಿತುಕೊಳ್ಳುವುದು ಅವರುಗಳ ವೈಯಕ್ತಿಕ ಜೀವನ, ಅಂತಸ್ತು, ಸ್ಥಾನಮಾನಗಳು ಎಷ್ಟರಮಟ್ಟಿಗೆ ಅವರ ರಾಜಕೀಯ ಪಾಲ್ಗೊಳ್ಳುವಿಕೆಯ ಮೇಲೆ ಪ್ರಭಾವ ಬೀರುತ್ತದೆ? ಎಂಬ ಅಂಶಕ್ಕೆ ಪ್ರಸ್ತುತ ಅಧ್ಯಯನದಲ್ಲಿ ಮಹತ್ವವನ್ನು ನೀಡಲಾಗಿರುತ್ತದೆ.

ಇದುವರೆಗೆ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಗೆ ಸಂಬಂಧಪಟ್ಟಂತೆ ನಡೆದ ಹೆಚ್ಚಿನ ಅಧ್ಯಯನಗಳ(ಕೃಷ್ಣ ಕೊಥಾಯ್)[7] ಫಲಿತಗಳು ಮಹಿಳೆಯರು ಸಂವಿಧಾನಾತ್ಮಕವಾಗಿ ತಮಗೆ ನೀಡಲ್ಪಟ್ಟಿರುವ ಹಕ್ಕುಗಳನ್ನು ಉಪಯೋಗಿಸಿಕೊಂಡು ಜನಪ್ರತಿನಿಧಿಗಳಾಗಿ ಆಯ್ಕೆಯಾಗಿ ಮತದಾರರ ನಿರೀಕ್ಷೆಗನುಗುಣವಾಗಿ ಕಾರ್ಯನಿರ್ವಹಿಸಿದರೂ ಅವುಗಳನ್ನು ಗುರುತಿಸಲಾಗಿರುವುದಿಲ್ಲ ಎಂಬುದಾಗಿ ಸ್ಪಷ್ಟಪಡಿಸಿರುತ್ತದೆ ಮಾತ್ರವಲ್ಲದೇ, ಯಾವುದೇ ಸ್ವಾತಂತ್ರ್ಯವನ್ನು ಅನುಭವಿಸುವುದರಿಂದ ವಂಚಿತಳಾಗಿ ಇನ್ನು ಪಿತೃಪ್ರಧಾನ ಮತ್ತು ಪುರುಷ ಪ್ರಧಾನ ಕೌಟುಂಬಿಕ ಬಂಧನಗಳಿಂದ ಸಿಲುಕಿರುವುದು ಆಕೆಯ ನಿಷ್ಕ್ರಿಯತೆ ಮತ್ತು ಅಸಹಾಯಕತೆಗೆ ಕಾರಣವಾಗಿರುತ್ತದೆ. ಇವುಗಳಿಗೆ ಮಹಿಳೆಯರ ಮೇಲೆ ಹೇರಿದ ನಿರ್ಬಂಧಗಳು ಮತ್ತು ಸೀಮಿತ ಅವಕಾಶಗಳ ಲಭ್ಯತೆ ಪ್ರಮುಖವಾಗಿರುತ್ತದೆ ಎಂಬುದಾಗಿ ಅಧ್ಯಯನ ಸ್ಪಷ್ಟಪಡಿಸಿರುತ್ತದೆ. ಈ ಕಂಡುಕೊಳ್ಳುವಿಕೆಯು ಸಾರ್ವತ್ರಿಕವಾಗಿ ಎಲ್ಲಾ ಚುನಾಯಿತ ಮಹಿಳಾ ಪ್ರತಿನಿಧಿಗಳಿಗೂ ಅನ್ವಯಿಸುತ್ತದೆಯೇ? ಪ್ರಾದೇಶಿಕವಾಗಿ ಮತ್ತು ಅಭಿವೃದ್ಧಿಯ ಮಾಪನಗಳಲ್ಲಿ ವೈವಿಧ್ಯತೆಯನ್ನು ಹೊಂದಿರುವ ಉಡುಪಿ ಜಿಲ್ಲೆಯಲ್ಲಿ ಇದಕ್ಕಿಂತ ಭಿನ್ನವಾದ ಫಲಿತಗಳು ಕಾಣಸಿಗಬಹುದೇ ಎಂಬುದು ಅತ್ಯಂತ ಪ್ರಮುಖ ಪ್ರಶ್ನೆಯಾಗಿರುತ್ತದೆ.

ಕ್ಷೇತ್ರಕಾರ್ಯಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಅಧ್ಯಯನದ ಉದ್ದೇಶಗಳಿಗೆ ಆದ್ಯತೆಯನ್ನಾಗಿಸಿ ಸೈದ್ಧಾಂತಿಕ ಚೌಕಟ್ಟಿಗೆ ಸೀಮಿತಗೊಳಿಸಿ, ಪ್ರಸ್ತುತ ಅಧ್ಯಯನದಲ್ಲಿ ವಿಮರ್ಶಾತ್ಮಕವಾಗಿ ಹಾಗೂ ಇತರ ಅಧ್ಯಯನಗಳ ಫಲಿತಗಳೊಂದಿಗೆ ತಾಳೆಯಾಗಿರಿಸಿ ವಿಸ್ತೃತವಾಗಿ ಚರ್ಚಿಸಲಾಗಿರುತ್ತದೆ. ಪ್ರಸ್ತುತ ಸಂಶೋಧನೆಯನ್ನು ಉಡುಪಿ ಜಿಲ್ಲೆಯ ಮೂರು ತಾಲೂಕುಗಳಾದ ಉಡುಪಿ, ಕುಂದಾಪುರ ಮತ್ತು ಕಾರ್ಕಳ ತಾಲೂಕಿನ ಆಯ್ದ ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳ ಮಹಿಳಾ ಪ್ರತಿನಿಧಿಗಳನ್ನು ನೇರ ಸಂದರ್ಶನದ ಮೂಲಕ ಸಂಪರ್ಕಿಸಿ ಮಾಹಿತಿಯನ್ನು ಕಲೆಹಾಕಲಾಗಿರುತ್ತದೆ. ಪ್ರಶ್ನಾವಳಿಯಲ್ಲಿರುವ ಲೋಪ-ದೋಷಗಳನ್ನು ಮುಖ್ಯ ಸಂದರ್ಶನದ ಪೂರ್ವದಲ್ಲಿ ಪಂಚಯತ್‌ಗಳ ಎಲ್ಲಾ ಸ್ತರಗಳ 30 ಸದಸ್ಯರ ಪ್ರಾಯೋಗಿಕ (ಪೈಲೇಟ್) ಅಧ್ಯಯನ ನಡೆಸಿ ಪ್ರಶ್ನಾವಳಿಯಲ್ಲಿ ನಮೂದಿಸಲ್ಪಟ್ಟ ಪ್ರಶ್ನೆಗಳ ಪ್ರಸ್ತುತತೆಯ ಬಗ್ಗೆ ಅವರನ್ನು ಸಂದರ್ಶಿಸಿ ಪ್ರಾಯೋಗಿಕವಾಗಿ ನಡೆಸಲಾಗಿರುತ್ತದೆ. ಇಂತಹ ಸಂದರ್ಶನಗಳ ಮೂಲಕ ದೊರಕಿದ ಸಲಹೆಗಳನ್ನು ಆದರಿಸಿ ಪ್ರಶ್ನಾವಳಿಯಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಲಾಗಿರುತ್ತದೆ. ಈ ಎಲ್ಲಾ ಸಂದರ್ಶನಗಳನ್ನು ಸಂಶೋಧಕನ ನೆಲೆಯಲ್ಲಿ ಸ್ವಯಂ ಆಗಿ ನಿರ್ವಹಿಸಲಾಗಿರುತ್ತದೆ.

ಉಡುಪಿ ಜಿಲ್ಲೆಯ ಜನಸಂಖ್ಯೆ ಮತ್ತು ಪ್ರತಿನಿಧಿತ್ವದಲ್ಲಿರುವ ಲಿಂಗಾನುಪಾತ

1991ರ ಜನಗಣತಿಯು ಉಡುಪಿ ಜಿಲ್ಲೆಯಲ್ಲಿ 4,86,409 ಗಂಡಸರು ಮತ್ತು 5,51,690 ಮಹಿಳೆಯರ ಉಪಸ್ಥಿತಿಯ ಬಗ್ಗೆ ವಿವರಿಸುತ್ತದೆ[8]. 2001ರ ಜನಗಣತಿಯಲ್ಲಿ ಪುರುಷರ ಸಂಖ್ಯೆ 5,22,231ಕ್ಕೆ ಏರಿಕೆಯಾಗಿ ಮಹಿಳೆಯರ ಸಂಖ್ಯೆಯು 5,62,131ಕ್ಕೆ ಹೆಚ್ಚಳವಾಗಿರುವುದನ್ನು ತಿಳಿಸುತ್ತದೆ[9].

ಕೋಷ್ಟಕ – 4.1

ಜನಸಂಖ್ಯೆ ಮತ್ತು ಜಾತಿವಾರು ಪ್ರತಿನಿಧಿತ್ವ

ಜನಸಂಖ್ಯೆ	ಪುರುಷರು		ಮಹಿಳೆಯರು		ಒಟ್ಟು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
	562131	47.75	615230	52.25	1177361	100
ಗ್ರಾಮ ಪಂಚಾಯತ್ ಸದಸ್ಯರು	1332	55.55	1066	44.45	2398	100
ತಾಲೂಕು ಪಂಚಾಯತ್ ಸದಸ್ಯರು	44	48	51	51.52	95	99.52
ಜಿಲ್ಲಾ ಪಂಚಾಯತ್ ಸದಸ್ಯರು	12	48	13	52	25	100
ಜಾತಿವಾರು ಪ್ರತಿನಿಧಿತ್ವ						
ಜಾತಿಗಳು	ಗ್ರಾಮ ಪಂಚಾಯತ್		ತಾಲೂಕು ಪಂಚಾಯತ್		ಜಿಲ್ಲಾ ಪಂಚಾಯತ್	
	ಪುರುಷ	ಮಹಿಳೆ	ಪುರುಷ	ಮಹಿಳೆ	ಪುರುಷ	ಮಹಿಳೆ
ಪರಿಶಿಷ್ಟ ಜಾತಿ	37	146	03	03	01	01
ಪರಿಶಿಷ್ಟ ಪಂಗಡ	27	147	0	03	0	01
ಇತರ ಹಿಂದುಳಿದ ವರ್ಗ	480	314	11	21	04	04
ಇತರರು	788	459	31	24	07	07
ಒಟ್ಟು	**1332**	**1066**	**45**	**51**	**12**	**13**

ಮೂಲ : 2011ರ ಜನಗಣತಿ ವರದಿ

ಕೋಷ್ಟಕ 4.1ರ ವಿಶ್ಲೇಷಣೆಯ ಪ್ರಕಾರ 2011ರ ಜನಗಣತಿಯು ಪುರುಷರ ಸಂಖ್ಯೆ 5,62,131 ಮತ್ತು ಮಹಿಳೆಯರ ಸಂಖ್ಯೆ 6,15,230ಕ್ಕೆ ಹೆಚ್ಚಿರುವುದರ ಬಗ್ಗೆ ಮಾಹಿತಿ ನೀಡುತ್ತದೆ[10]. ಲಿಂಗಾನುಪಾತದಲ್ಲಿ

ಮಹಿಳೆಯರ ಪ್ರಮಾಣವನ್ನು ರಾಜ್ಯ ಮಟ್ಟಕ್ಕೆ ಹೋಲಿಸಿದಾಗ ಸ್ತ್ರೀಪುರುಷರ ಅನುಪಾತ 1000 : 955 ಇದ್ದರೆ ಉಡುಪಿ ಜಿಲ್ಲಾ 2011ರ ಜನಗಣತಿ ಪ್ರಕಾರ ಸ್ತ್ರೀಪುರುಷರ ಅನುಪಾತ 1000 : 1094 ಇರುವುದು ಮಹಿಳೆಯರ ಸಂಖ್ಯೆಯಲ್ಲಿ ಹೆಚ್ಚಾಗಿರುವುದನ್ನು ತಿಳಿಸುತ್ತದೆ[11]. ಅಧ್ಯಯನ ಸಂದರ್ಭದಲ್ಲಿ ಉಡುಪಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳ ಅಂಕಿಅಂಶವನ್ನು ಅವಲೋಕಿಸಿದಾಗ 1332 (55.55%) ಪುರುಷ ಪ್ರತಿನಿಧಿಗಳು ಹಾಗೂ 1066 (44.45%) ಮಹಿಳಾ ಪ್ರತಿನಿಧಿಗಳು ಆಯ್ಕೆಯಾಗಿರುತ್ತಾರೆ[12]. ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು 20.02% ಇದ್ದರೆ, ಮಹಿಳೆಯರ ಪ್ರತಿನಿಧಿತ್ವ 13.09%ರಷ್ಟಿದೆ[13]. ಇತರರು ಅಂದರೆ ಸಾಮಾನ್ಯ ವರ್ಗದ ಪ್ರತಿನಿಧಿಗಳನ್ನು ಪರಿಗಣಿಸಿದಾಗ ಅಲ್ಲಿಯೂ ಪುರುಷ ಪ್ರತಿನಿಧಿಗಳು ಮೇಲುಗೈ ಸಾಧಿಸಿರುವುದು ಅವರುಗಳ ಸಂಖ್ಯೆ 32.86%ರಷ್ಟಿದ್ದರೆ, 19.14%ರಷ್ಟು ಮಾತ್ರ ಮಹಿಳಾ ಪ್ರತಿನಿಧಿಗಳು ಸ್ಥಳೀಯ ಸಂಸ್ಥೆಗಳಲ್ಲಿ ಪ್ರತಿನಿಧಿಸಲ್ಪಟ್ಟಿರುತ್ತಾರೆ[14]. ಹಿಂದುಳಿದ ಮತ್ತು ಇತರ ಸಮುದಾಯದ ಪುರುಷ ಪ್ರತಿನಿಧಿಗಳ ಸಂಖ್ಯೆಯು ಮಹಿಳಾ ಪ್ರತಿನಿಧಿಗಿಂತ ಅಧಿಕವಿರುತ್ತದೆ. ಇದಕ್ಕೆ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗ ಮತ್ತು ಸಮುದಾಯಕ್ಕೆ ಸೇರಿದ ಮಹಿಳೆಯರಿಗೆ ಜಾತಿ ಆಧಾರಿತ ಮೀಸಲಾತಿ ಅವಕಾಶಗಳನ್ನು ಕಲ್ಪಿಸದಿರುವುದು ಕಾರಣವಾಗಿರುತ್ತದೆ[15]. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಜನರ ಪ್ರಮಾಣವು 12%ಕ್ಕಿಂತ ಕಡಿಮೆಯಿದ್ದರೂ ಗ್ರಾಮ ಪಂಚಾಯತಿಗಳಲ್ಲಿ ಅವರ ಪ್ರಮಾಣವು ಮೂರು ತಾಲೂಕುಗಳಲ್ಲಿ ಪ್ರತಿಶತ 14ರಿಂದ 17ರವರೆಗಿದೆ. ಆದರೂ ಈ ಪ್ರಮಾಣವು 73ನೇ ತಿದ್ದುಪಡಿ ಕಾಯ್ದೆಯಲ್ಲಿ ಸೂಚಿಸಿದ ಪ್ರತಿಶತ 18% ಕ್ಕಿಂತ ಕಡಿಮೆಯಿದೆ[16]. ಅಧ್ಯಯನದಲ್ಲಿ ವಿಶೇಷವಾಗಿ ಕಂಡುಕೊಂಡ ಅಂಶವೆಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪ್ರತಿನಿಧಿಗಳಲ್ಲಿ ಮಹಿಳೆಯರ ಸಂಖ್ಯೆ ಪುರುಷರ ಸಂಖ್ಯೆಗಿಂತ ಹೆಚ್ಚಾಗಿರುತ್ತದೆ. ಪುರುಷರ ಪ್ರತಿನಿಧಿತ್ವ 2.7%ರಷ್ಟಿದ್ದರೆ, ಮಹಿಳೆಯರು ಜಿಲ್ಲೆಯಲ್ಲಿ ಒಟ್ಟಾಗಿ 12%ರಷ್ಟಿದ್ದಾರೆ. ಇದರಿಂದಾಗಿ ಸಂವಿಧಾನಾತ್ಮಕ ಉಪಕ್ರಮಗಳಿಂದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮಹಿಳೆಯರ ಪ್ರತಿನಿಧಿತ್ವಕ್ಕೆ ನೀಡಿದ ಅವಕಾಶವು ಪರಿಣಾಮಕಾರಿಯಾಗಿ ಜಾರಿಯಾಗಿದೆ ಎಂಬುದನ್ನು ಅಧ್ಯಯನವು ಕಂಡುಕೊಂಡಿರುತ್ತದೆ.

ಮೂರೂ ತಾಲೂಕು ಪಂಚಾಯತ್‌ಗಳಲ್ಲಿ ಮಹಿಳೆಯರ ಪ್ರತಿನಿಧಿತ್ವವು ಪುರುಷರ ಪ್ರತಿನಿಧಿತ್ವಕ್ಕಿಂತ ಹೆಚ್ಚಾಗಿದೆ. ಉಡುಪಿ ಜಿಲ್ಲೆಯ ಕುಂದಾಪುರ, ಕಾರ್ಕಳ ಮತ್ತು ಉಡುಪಿ ತಾಲೂಕುಗಳ ಪಂಚಾಯತ್‌ನ ಒಟ್ಟು ತೊಂಬತ್ತೈದು ಪ್ರತಿನಿಧಿಗಳಲ್ಲಿ ಐವತ್ತೊಂದು(ಶೇಕಡಾ 52) ಮಹಿಳಾ ಪ್ರತಿನಿಧಿಗಳಿದ್ದರೆ,

ನಲುವತ್ತ ನಾಲ್ಕು(ಶೇಕಡಾ 48) ಪುರುಷ ಪ್ರತಿನಿಧಿಗಳಿದ್ದಾರೆ[17]. ತಾಲೂಕು ಪಂಚಾಯತ್‌ಗಳಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪ್ರತಿನಿಧಿತ್ವವು ಅವರ ಜನಸಂಖ್ಯೆಯ ಪ್ರತಿಶತ ಪ್ರಮಾಣಕ್ಕಿಂತ ಎಲ್ಲಾ ತಾಲೂಕುಗಳಲ್ಲಿಯೂ ಕಡಿಮೆಯಿದೆ. ಪ್ರತೀ ತಾಲೂಕುಗಳಲ್ಲಿಯೂ ಪರಿಶಿಷ್ಟ ಜಾತಿಗೆ ಸೇರಿದ ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀ ಪ್ರತಿನಿಧಿಗಳಿದ್ದಾರೆ. ಪರಿಶಿಷ್ಟ ಪಂಗಡದವರಲ್ಲಿ ಕಾರ್ಕಳ ಮತ್ತು ಕುಂದಾಪುರ ತಾಲೂಕುಗಳಲ್ಲಿ ಒಬ್ಬಳೇ ಒಬ್ಬ ಮಹಿಳಾ ಪ್ರತಿನಿಧಿಯಿದ್ದರೆ ಮತ್ತು ಉಡುಪಿ ತಾಲೂಕಿನಲ್ಲಿ ಒಬ್ಬ ಪುರುಷ ಮತ್ತು ಒಬ್ಬ ಮಹಿಳೆಯಿದ್ದಾರೆ. ಇದೇ ರೀತಿ ಜಿಲ್ಲಾ ಪಂಚಾಯತ್‌ನಲ್ಲಿನ ಒಟ್ಟು 25 ಸದಸ್ಯರಲ್ಲಿ 13 ಮಹಿಳೆಯರು ಮತ್ತು 12 ಪುರುಷರು ಇದ್ದು, ಇದರಲ್ಲಿ ಒಬ್ಬ ಪುರುಷ ಮತ್ತು ಒಬ್ಬ ಮಹಿಳೆ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದರೆ, ಒಬ್ಬ ಮಹಿಳೆಯು ಪರಿಶಿಷ್ಟ ಪಂಗಡದವರಾಗಿರುತ್ತಾರೆ[18]. ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ನಲ್ಲಿ ಸಂವಿಧಾನದ 73ನೇ ತಿದ್ದುಪಡಿಯು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಪ್ರತಿಶತ 18ರಷ್ಟು ಮೀಸಲಾತಿ ನೀಡಬೇಕೆಂದು ಹೇಳಿದ್ದರೂ ಈ ಅವಕಾಶಗಳನ್ನು ಉಪಯೋಗಿಸುವುದರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಮಹಿಳೆಯರು ಸಫಲರಾಗಿಲ್ಲದೇ ಇರುವುದು ಎದ್ದು ಕಾಣುತ್ತದೆ[19].

ಮಾಹಿತಿದಾರರ ರಾಜಕೀಯ ಪ್ರವೇಶ

ಅಧ್ಯಯನಕ್ಕೆ ಆಯ್ದುಕೊಂಡ(206) ಮಹಿಳಾ ಜನ ಪ್ರತಿನಿಧಿಗಳ ರಾಜಕೀಯ ಹಿನ್ನೆಲೆಯ ವಿಶ್ಲೇಷಣೆಯ ಪ್ರಕಾರ ಮಾಹಿತಿದಾರರಲ್ಲಿ 1993ಕ್ಕೂ ಮೊದಲೇ ಆಯ್ಕೆಯಾದವರು ಗ್ರಾಮ ಪಂಚಾಯತ್‌ನ ಮೂರು, ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ನ ತಲಾ ಒಂದು ಮಹಿಳಾ ಪ್ರತಿನಿಧಿಗಳು 1994–98ರ ಚುನಾವಣೆಯಲ್ಲಿ ಗ್ರಾಮ ಪಂಚಾಯತ್‌ನ ನಾಲ್ಕು, ತಾಲೂಕು ಪಂಚಾಯತ್‌ನ ಒಂದು, 1998–2003ರ ಚುನಾವಣೆಯಲ್ಲಿ ಗ್ರಾಮ ಪಂಚಾಯತ್‌ನ ಆರು ಮತ್ತು ತಾಲೂಕು ಪಂಚಾಯತ್‌ನ ಐದು ಮಹಿಳಾ ಪ್ರತಿನಿಧಿಗಳು, 2004–2009ರ ಚುನಾವಣೆಯಲ್ಲಿ ಗ್ರಾಮ ಪಂಚಾಯತ್‌ನ 12, ತಾಲೂಕು ಪಂಚಾಯತ್‌ನ ಎಂಟು ಮತ್ತು ಜಿಲ್ಲಾ ಪಂಚಾಯತ್‌ನ ಎರಡು ಮಹಿಳಾ ಪ್ರತಿನಿಧಿಗಳು ಆಯ್ಕೆಯಾಗಿದ್ದು, 2010–15ರ ಚುನಾವಣೆಯಲ್ಲಿ ಗ್ರಾಮ ಪಂಚಾಯತ್‌ನ 117, ತಾಲೂಕು ಪಂಚಾಯತ್‌ನ 36 ಮತ್ತು ಜಿಲ್ಲಾ ಪಂಚಾಯತ್‌ನ 10 ಮಹಿಳಾ ಪ್ರತಿನಿಧಿಗಳು ಆಯ್ಕೆಯಾಗಿರುವುದು ಕಂಡುಬರುತ್ತದೆ.

ಕೋಷ್ಟಕ – 4.2

ಮಾಹಿತಿದಾರರ ರಾಜಕೀಯ ಪ್ರವೇಶ

ರಾಜಕೀಯ ಪ್ರವೇಶ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
1993ಕ್ಕೂ ಮೊದಲು	03	2.12	01	1.96	01	7.70
1994 ರಿಂದ 1998	04	2.82	01	1.96	0	0.00
1998 ರಿಂದ 2003	06	4.22	05	3.52	0	0.00
2004 ರಿಂದ 2009	12	8.45	08	15.69	02	15.38
2010 ರಿಂದ 2015	117	82.39	36	70.58	10	76.92
ಒಟ್ಟು	**142**	**100**	**51**	**100**	**13**	**100**

ಮೂಲ : ಪಂಚಾಯತ್ ದಾಖಲೆಗಳಿಂದ – 2013

ಕೋಷ್ಠಕ 4.2ರ ವಿವರಣೆಯನ್ನು ಗಮನಿಸಿದಾಗ ಶೇ.79 ಮಹಿಳಾ ಪ್ರತಿನಿಧಿಗಳಿಗೆ ಇದು ಪ್ರಥಮ ಅವಧಿಯ ಚುನಾವಣಾ ಆಯ್ಕೆಯಿಂದ ದೊರಕಿದ ರಾಜಕೀಯದ ಅನುಭವವಾಗಿರುತ್ತದೆ. ಹಾಗೂ ಒಮ್ಮೆ ಚುನಾವಣೆಗೆ ಸ್ಪರ್ಧಿಸಿ ಆಯ್ಕೆಯಾದ ಮಹಿಳಾ ಪ್ರತಿನಿಧಿ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಹೆಚ್ಚು ಆಸಕ್ತಿಯನ್ನು ತೋರಿಸದಿರುವುದು ಪ್ರಮುಖವಾಗಿ ಕಂಡುಬರುವ ಅಂಶವಾಗಿರುತ್ತದೆ. ಈ ಅಂಶಗಳನ್ನು ತುಲನಾತ್ಮಕವಾಗಿ ಅಧ್ಯಯನ ಪ್ರದೇಶದ ಪುರುಷ ಅಭ್ಯರ್ಥಿಗೆ ಹೋಲಿಸಿದಾಗ ಪ್ರಥಮವಾಗಿ ಚುನಾವಣೆಗೆ ಸ್ಪರ್ಧಿಸಿದ ಪುರುಷ ಅಭ್ಯರ್ಥಿ ಅದೇ ಸ್ಥಾನಕ್ಕೆ ಸ್ಪರ್ಧಿಸುವುದು ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯ ಉನ್ನತ ಸ್ತರಕ್ಕೆ ಸ್ಪರ್ಧಿಸುವ ಅವಕಾಶ ಪಡೆಯಲು ಬಯಸುತ್ತಾರೆ. ಮಹಿಳೆಯರ ಪುನರಾಯ್ಕೆ ಸಂಖ್ಯೆಯಲ್ಲಿ ಗಣನೀಯವಾಗಿ ಇಳಿಮುಖವಾಗಿರುವುದನ್ನು ವಿಶ್ಲೇಷಿಸಿದಾಗ ಇದಕ್ಕೆ ಮೂಲ ಕಾರಣ ರಾಜಕೀಯ ಪಕ್ಷ ಮತ್ತು ಕುಟುಂಬದ ಒತ್ತಾಯಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸುವುದು, ಏಕಕಾಲದಲ್ಲಿ ಮನೆವಾರ್ತೆ ಮತ್ತು ರಾಜಕೀಯವನ್ನು ನಿಭಾಯಿಸುವುದರಲ್ಲಿ ಸಮಸ್ಯೆಯನ್ನು ಎದುರಿಸಿರುವುದು, ರಾಜಕೀಯ ಅಪರಾಧೀಕರಣದಿಂದ ಬೇಸತ್ತು ಸಕ್ರಿಯ ರಾಜಕಾರಣದಿಂದ ಹೊರಗಿರುವುದರಿಂದ ಮನಃಶಾಂತಿ ಮತ್ತು ಸಂತೋಷದಿಂದ ಜೀವನ ಸಾಗಿಸಬಹುದು, ಇದೇ ಮುಂತಾದ ಕಾರಣಗಳಿಂದ ಮಹಿಳೆಯರು ರಾಜಕೀಯದಿಂದ ಹೊರಗುಳಿಯಲು ಬಯಸುತ್ತಾರೆ ಎಂದು ಹೆಚ್ಚಿನ ಅಧ್ಯಯನಗಳಲ್ಲಿ (ಮಧು ಕಿಶ್ವರ್ 1996, ಮಲ್ಹೋತ್ರ 2006, ಗಾಯತ್ರಿ ದೇವಿ 2013)[20] ಕಂಡುಕೊಂಡ ಫಲಿತವು ಪ್ರಸ್ತುತ ಅಧ್ಯಯನದಲ್ಲಿಯೂ ಕಂಡುಬರುತ್ತದೆ.

ಮಾಹಿತಿದಾರರ ಪ್ರಸ್ತುತ ಸ್ಥಾನಮಾನ

ಸಂದರ್ಶನಕ್ಕೆ ಆಯ್ಕೆ ಮಾಡಿದ 206 ಮಹಿಳಾ ಪ್ರತಿನಿಧಿಗಳು ಪ್ರಸ್ತುತ ರಾಜಕೀಯದಲ್ಲಿ ಹೊಂದಿರುವ ಹುದ್ದೆ ಮತ್ತು ಸ್ಥಾನಮಾನಗಳನ್ನು ಅವಲೋಕಿಸಿದಾಗ ಗ್ರಾಮಪಂಚಾಯತ್‌ನ ಅಧ್ಯಕ್ಷರಾಗಿ 10, ಉಪಾಧ್ಯಕ್ಷರಾಗಿ 12, ಸ್ಥಾಯಿಸಮಿತಿಯ ಸದಸ್ಯರಾಗಿ 25, ತಾಲೂಕು ಪಂಚಾಯತ್‌ನ ಅಧ್ಯಕ್ಷರಾಗಿ ಮೂವರು, ಉಪಾಧ್ಯಕ್ಷರಾಗಿ ಎರಡು, ಸ್ಥಾಯಿಸಮಿತಿಯ ಸದಸ್ಯರಾಗಿ 37, ಜಿಲ್ಲಾ ಪಂಚಾಯತ್‌ನ ಉಪಾಧ್ಯಕ್ಷರಾಗಿ ಒಬ್ಬರು, ಸ್ಥಾಯಿಸಮಿತಿಯ ಸದಸ್ಯರಾಗಿ 13, ಮಹಿಳಾ ಪ್ರತಿನಿಧಿಗಳು ಈ ಅವಧಿಯಲ್ಲಿ ಕಾರ್ಯನಿರ್ವಹಿಸಿರುವುದು ಕಂಡುಬಂದಿರುತ್ತದೆ. (ಕೋಷ್ಟಕ 4.3)

ಕೋಷ್ಟಕ – 4.3

ಪ್ರಸ್ತುತ ಸ್ಥಾನಮಾನ

ಸ್ಥಾನಮಾನ	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು
ಅಧ್ಯಕ್ಷೆ	10	03	0
ಉಪಾಧ್ಯಕ್ಷೆ	12	02	01
ಸ್ಥಾಯಿ ಸಮಿತಿ ಸದಸ್ಯೆ	25	37	13

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಈ ಅಂಶವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಮಹಿಳಾ ಪ್ರತಿನಿಧಿಗಳ ಅಭಿಪ್ರಾಯದಂತೆ ಅಧಿಕಾರಗಳನ್ನು ನೀಡಿ ಯಾವುದೇ ರೀತಿಯ ಹಸ್ತಕ್ಷೇಪವನ್ನು ನಡೆಸದೇ ಇದ್ದ ಸಂದರ್ಭದಲ್ಲಿ ಸಮರ್ಥವಾಗಿ ಅಧಿಕಾರ ಚಲಾಯಿಸಲು ಅವಕಾಶವಾಗುತ್ತದೆ ಎಂಬ ಅಭಿಪ್ರಾಯವನ್ನು ಹಂಚಿಕೊಂಡಿರುತ್ತಾರೆ. ಈ ಅಭಿಪ್ರಾಯವು ಪುರುಷರಷ್ಟೇ ಸಮರ್ಥವಾಗಿ ಅಧಿಕಾರವನ್ನು ಚಲಾಯಿಸುವುದರಲ್ಲಿ ಮಹಿಳೆಯು ಸಮರ್ಥಳಾಗಿರುತ್ತಾಳೆ ಮತ್ತು ಅಸಮಾನತೆಗಳಿಲ್ಲದೆ ಕಾರ್ಯನಿರ್ವಹಿಸಬಲ್ಲಳು ಎಂಬ ಅಂಶವನ್ನು ಪುಷ್ಠೀಕರಿಸುತ್ತದೆ.

ಮಾಹಿತಿದಾರರ ಧರ್ಮ

ಜನರ ಧಾರ್ಮಿಕ ಅಂಶವು ಅವರ ಜೀವನದ ಅನೇಕ ವಿಷಯಗಳನ್ನು ನಿರ್ಧರಿಸುತ್ತದೆ ಮತ್ತು ಪ್ರಭಾವಿಸುತ್ತದೆ. ರಾಜ್ಯದಲ್ಲಿ ಎಲ್ಲಾ ಧರ್ಮೀಯರೂ ವಾಸವಾಗಿದ್ದು ಅವರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಲಕ್ಷಣಗಳು ಮಾತ್ರ ಭಿನ್ನಭಿನ್ನವಾಗಿವೆ. ಬಹುಸಂಖ್ಯಾತರಾದ ಹಿಂದೂಗಳು ಅನೇಕ ಜಾತಿ, ಉಪಜಾತಿಗಳಿಂದ ಮತ್ತೆ ವಿಭಜಿಸಲ್ಪಟ್ಟು ಬಹಳ ಸಂಕೀರ್ಣವಾದ ವ್ಯವಸ್ಥೆಯಲ್ಲಿ

ಶತಮಾನಗಳಿಂದಲೂ ಬದುಕುತ್ತಿದ್ದಾರೆ. ಜಾತಿ ಪದ್ಧತಿಯ ಪ್ರಭಾವವು ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಮೇಲೆ ಪ್ರಭಾವ ಬೀರಿರುವುದು ಹಾಗೂ ಇದು ಅವರ ಧರ್ಮದ ಮೂಲದಿಂದ ಪ್ರಭಾವಿತವಾದ ಅಂಶವಾಗಿದೆ.

ಕೋಷ್ಟಕ – 4.4

ಮಾಹಿತಿದಾರರ ಧರ್ಮ

ಧರ್ಮ	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	ಶೇಕಡಾ
ಹಿಂದೂ	125	47	12	89.32
ಮುಸ್ಲಿಂ	02	0	0	00.97
ಕ್ರಿಶ್ಚಿಯನ್	13	04	01	08.74
ಜೈನ	02	00	0	00.97
ಒಟ್ಟು	**142**	**51**	**13**	**100**

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಕೋಷ್ಟಕ 4.4ರ ವಿಶ್ಲೇಷಣೆಯು ಮಹಿಳಾ ಜನ ಪ್ರತಿನಿಧಿಗಳು ಯಾವ ಧರ್ಮಗಳಿಗೆ ಸೇರಿದವರಾಗಿದ್ದಾರೆ ಎಂಬ ಅಂಶದ ಬಗ್ಗೆ ಬೆಳಕು ಚೆಲ್ಲುತ್ತದೆ. ಒಟ್ಟು ಸಂದರ್ಶಿಸಿದ 142 ಗ್ರಾಮ ಪಂಚಾಯತ್‌ನ ಮಹಿಳಾ ಪ್ರತಿನಿಧಿಗಳಲ್ಲಿ 125 ಮಹಿಳಾ ಪ್ರತಿನಿಧಿಗಳು ಹಿಂದು, 13 ಕ್ರಿಶ್ಚಿಯನ್, 2 ಮುಸ್ಲಿಮ್ ಮತ್ತು 2 ಜೈನ್ ಧರ್ಮಕ್ಕೆ ಸೇರಿದವರಾಗಿರುತ್ತಾರೆ. ಜಿಲ್ಲಾ ಪಂಚಾಯತಿನ ಒಟ್ಟು 13 ಪ್ರತಿನಿಧಿಗಳಲ್ಲಿ 12 ಹಿಂದು ಹಾಗೂ 1 ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರಾಗಿರುತ್ತಾರೆ. ತಾಲೂಕು ಪಂಚಾಯತಿನ 51 ಮಹಿಳಾ ಪ್ರತಿನಿಧಿಗಳಲ್ಲಿ 47 ಹಿಂದು ಮತ್ತು 4 ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರಾಗಿರುತ್ತಾರೆ.

ಹಿಂದುಗಳೇ ಹೆಚ್ಚಾಗಿರುವ ಪ್ರದೇಶದಲ್ಲಿ ಸಹಜವಾಗಿಯೇ ಅವರ ಪ್ರಾಬಲ್ಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಎದ್ದು ಕಾಣುತ್ತದೆ. ಚಾರಿತ್ರಿಕವಾಗಿ ಮುಸ್ಲಿಮ್, ಕ್ರಿಶ್ಚಿಯನ್ ಮತ್ತು ಜೈನ ಧರ್ಮದವರ ಪ್ರಾಬಲ್ಯವು ಸಾಮಾಜಿಕ ರಚನೆಯಲ್ಲಿ ಹಿಂದುಗಳಿಗಿಂತ ಮಿಗಿಲಾಗಿ ಇರುವುದಿಲ್ಲ. ಜನಸಂಖ್ಯೆಯೂ ಕಡಿಮೆ ಇದ್ದು, ಅವರು ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಸಾರ್ವಜನಿಕ ಸ್ಥಾನಮಾನಗಳನ್ನು ಹೊಂದುವುದರಲ್ಲಿ ಇಂದಿಗೂ

ಹಿಂದುಳಿದಿರುವುದು ಎದ್ದು ಕಾಣುತ್ತದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಹಿಂದೂ ಧರ್ಮಕ್ಕೆ ಸೇರಿದ ಜನ ಸಂಖ್ಯೆ ಹೆಚ್ಚಾಗಿದ್ದು ಸಹಜವಾಗಿಯೇ ಹೆಚ್ಚಾಗಿ ಪಾಲ್ಗೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿರುತ್ತದೆ. ಮುಸ್ಲಿಮ್ ಸಮುದಾಯ ತನ್ನದೇ ಆದ ಸಾಂಪ್ರದಾಯಿಕ ಚೌಕಟ್ಟನ್ನು ಒಳಗೊಂಡಿದ್ದು ಮಹಿಳೆಯರನ್ನು ಸಾರ್ವಜನಿಕ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಕರ್ನಾಟಕ ರಾಜ್ಯದ ಇತರ ಜಿಲ್ಲೆಗೆ ಹೋಲಿಸಿದಾಗ ಉಡುಪಿ ಜಿಲ್ಲೆಯ ಮುಸ್ಲಿಮ್ ಸಮುದಾಯವು ಹೆಚ್ಚಿನ ವಿದ್ಯಾಭ್ಯಾಸವನ್ನು ಹೊಂದಿರುವುದನ್ನು 2011ರ ಜನಗಣತಿ ವರದಿ[21] ಮತ್ತು ಜಿಲ್ಲೆಗೆ ಸಂಬಂಧಪಟ್ಟ 2008ರ ಮಾನವಾಭಿವೃದ್ಧಿ ವರದಿ[22] ಉಲ್ಲೇಖಿಸಿದರೂ ಜನ ಪ್ರತಿನಿಧಿಗಳಾಗಿ ಆಯ್ಕೆಯಾಗುವುದಕ್ಕೆ ಮುಸ್ಲಿಮ್ ಮಹಿಳೆಯರು ಆಸಕ್ತಿ ತೋರಿಸದಿರುವುದನ್ನು ಎತ್ತಿ ತೋರಿಸುತ್ತದೆ. ಹೆಚ್ಚಿನ ವಿದ್ಯಾಭ್ಯಾಸ ಹೊಂದಿದ ಕ್ರಿಶ್ಚಿಯನ್ ಮತ್ತು ಜೈನ ಸಮುದಾಯಕ್ಕೆ ಸೇರಿದ ಮಹಿಳೆಯರು ಆಸಕ್ತಿಯನ್ನು ತೋರಿಸದಿರುವುದು ಹಾಗೂ ಅವರುಗಳು ವೃತ್ತಿಪರ ಶಿಕ್ಷಣ ಪಡೆದು ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಉನ್ನತ ಹುದ್ದೆ ಪಡೆಯುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿರುವುದು ಕ್ಷೇತ್ರಕಾರ್ಯದಲ್ಲಿ ಗಮನಿಸಿದ ಅಂಶವಾಗಿದೆ.

ಮಾಹಿತಿದಾರರ ಜಾತಿ

ಮಹಿಳೆಯರ ಪಾಲಿಗೆ ಸಾರ್ವಜನಿಕ ಕ್ಷೇತ್ರದಲ್ಲಿನ ಭಾಗವಹಿಸುವಿಕೆಯನ್ನು ಮತ್ತು ಸಬಲೀಕರಣವನ್ನು ಪ್ರೋತ್ಸಾಹಿಸದ ಮತ್ತು ಅಂಗೀಕರಿಸದ ಸಾಂಪ್ರದಾಯಿಕವಾದ ಅಡ್ಡಿ ಎಂದರೆ ಸಾಮಾಜಿಕ ಪಿಡುಗುಗಳಲ್ಲೊಂದಾದ ಜಾತಿ ವ್ಯವಸ್ಥೆಯೆಂಬುದು ಸರ್ವ ವಿಧಿತ. ಸಾಂಪ್ರದಾಯಿಕವಾಗಿ ಅದು ಮಹಿಳೆಯರ ಸಾಮಾಜಿಕ ಪಾಲ್ಗೊಳ್ಳುವಿಕೆಯನ್ನು ಪ್ರತಿರೋಧಿಸುತ್ತದೆ. ಮಾತ್ರವಲ್ಲ, ಅವರನ್ನು ನಿಯಂತ್ರಿಸಿ ಕುಟುಂಬ ಹಾಗೂ ಸಮಾಜದ ಇತರ ಸಂಸ್ಥೆಗಳ ಮೂಲಕ ಅದನ್ನು ಅನುಷ್ಠಾನಗೊಳಿಸುತ್ತದೆ. ಇದರಿಂದಾಗಿ ಅವರು ಅನ್ಯಾಯ ಮತ್ತು ಅಸಮಾನತೆಗೊಳಗಾಗುತ್ತಾರೆ[23]. ಜಾತಿಯ ಪ್ರಾಬಲ್ಯವು ರಾಜಕೀಯ ಪಾಲ್ಗೊಳ್ಳುವಿಕೆಗೆ ಪ್ರಮುಖವಾದೊಂದು ತಡೆಯಾಗಿರುತ್ತದೆ. ಅಂದರೆ, ಬಲಾಢ್ಯ ಜಾತಿಗಳಿಗೆ ಸೇರಿದ ಜನರು ಕೆಳ ಜಾತಿಯವರನ್ನು, ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿದ ಮಹಿಳೆಯರ ವಿರುದ್ಧ ಅಸಮಾನ ಧೋರಣೆ ತೋರಿ ಅವರ ಪ್ರಜಾಸತ್ತಾತ್ಮಕ ಅವಕಾಶಗಳಿಗೂ ಅಡ್ಡಿಯನ್ನು ಉಂಟುಮಾಡುತ್ತಾರೆ. ಮೀಸಲಾತಿಯ ಆಧಾರದ ಮೇಲೆ ಸ್ಥಾನಗಳನ್ನು ಪಡೆದಿದ್ದರೂ ಈ ಜಾತಿಗಳಿಗೆ ಸೇರಿದ ಮಹಿಳೆಯರು ಅವಕಾಶವಂಚಿತರಾಗಿದ್ದು, ರಾಜಕೀಯವ್ಯವಸ್ಥೆಯಲ್ಲಿ ಪ್ರವೇಶ ಮಾಡಿಯೂ ರಾಜಕೀಯ ಅಸ್ಪೃಶ್ಯರಾಗಿ ಮುಂದುವರಿಯುತ್ತಿರುವುದನ್ನು ವಿಶ್ಲೇಷಿಸಿರುವುದನ್ನು ವಿಸ್ತೃತವಾಗಿ

ಚರ್ಚಿಸಲಾಗಿರುತ್ತದೆ[24]. ಸ್ಥಳೀಯ ಸಂಸ್ಥೆಗಳ ಕಲಾಪಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರೂ ತಮ್ಮ ಕ್ರಿಯಾಶೀಲ ಚಟುವಟಿಕೆಗಳಿಂದ ತಮ್ಮನ್ನು ರಾಜಕೀಯವಾಗಿ ಗುರುತಿಸಿಕೊಂಡಿದ್ದರೂ ರಾಜಕೀಯದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಲು ಸಾಧ್ಯವಾಗದೇ ಇರುವುದು ರಾಷ್ಟ್ರದ ಸಂವಿಧಾನವು ಮತನಿರಾಪೇಕ್ಷತಾ ತತ್ವಕ್ಕೆ ಅನುಗುಣವಾಗಿ ಸರ್ವರಿಗೂ ಎಲ್ಲಾ ಕ್ಷೇತ್ರಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಳ್ಳುವುದಕ್ಕೆ ಸಮಾನ ಅವಕಾಶವಿರುತ್ತದೆ ಎಂಬ ಮೂಲತತ್ವಕ್ಕೆ ವಿರೋಧವಾಗಿರುವುದು ಪ್ರಸ್ತುತ ವ್ಯವಸ್ಥೆಯ ವಿಡಂಬನೆ ಎಂಬುದಾಗಿ ಹೇಳಬಹುದು[25].

ಕೋಷ್ಟಕ – 4.5

ಮಾಹಿತಿದಾರರ ಜಾತಿ

ಜಾತಿ	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	ಶೇಕಡಾ
ಸಾಮಾನ್ಯ	62	24	07	07.02
ಹಿಂ. ವರ್ಗ	44	21	04	56.76
ಪ. ಜಾತಿ	19	03	01	24.32
ಪ. ಪಂಗಡ	17	03	01	11.90
ಒಟ್ಟು	**142**	**47**	**13**	**100**

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಕೋಷ್ಟಕ 4.5ರಲ್ಲಿ ಅಧ್ಯಯನ ಪ್ರದೇಶದಲ್ಲಿ ಮಹಿಳಾ ಜನ ಪ್ರತಿನಿಧಿಗಳು ವಿವಿಧ ಜಾತಿ, ಕೋಮುಗಳಿಗೆ ಸೇರಿದವರಾಗಿರುತ್ತಾರೆ ಎಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ. ಮೇಲಿನ ವಿವರಣೆಗಳು ಪುರುಷ ಮತ್ತು ಮಹಿಳಾ ಪ್ರತಿನಿಧಿಗಳಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಮತ್ತು ಆಯ್ಕೆಯಾಗಲು ರಾಜಕೀಯ ಪಕ್ಷಗಳು ಅನಿವಾರ್ಯ. ಮೀಸಲಾತಿ ನೀತಿಗೆ ಅನುಗುಣವಾಗಿ ಮೇಲ್ಜಾತಿ ಅಭ್ಯರ್ಥಿಗಳಿಗೆ ಅವಕಾಶವಿಲ್ಲದಿರುವ ಕಾರಣಕ್ಕೋಸ್ಕರ ಅನಿವಾರ್ಯವಾಗಿ ಆಯ್ಕೆಮಾಡಿಕೊಂಡ ವ್ಯವಸ್ಥೆಯಾಗಿರುತ್ತದೆ ಎಂಬುದಾಗಿ ಕ್ಷೇತ್ರಕಾರ್ಯದಿಂದ ಪಡೆದ ಮಾಹಿತಿಗಳು ನಿಖರವಾಗಿ ತಿಳಿಸುತ್ತದೆ. ಅಧ್ಯಯನಕ್ಕೊಳಪಡಿಸಿದ ಗ್ರಾಮ ಪಂಚಾಯತ್‌ನ 142 ಮಹಿಳಾ ಪ್ರತಿನಿಧಿಗಳಲ್ಲಿ ಹಿಂದುಳಿದ ವರ್ಗದ ನಲುವತ್ತ ನಾಲ್ಕು, ಪರಿಶಿಷ್ಟ ಜಾತಿಯ ಹತ್ತೊಂಬತ್ತು, ಪರಿಶಿಷ್ಟ ಪಂಗಡದ ಹದಿನೇಳು ಮತ್ತು ಸಾಮಾನ್ಯ ವರ್ಗದ ಅರುವತ್ತೆರಡು ಮಹಿಳಾ ಪ್ರತಿನಿಧಿಗಳಾಗಿದ್ದಾರೆ. ತಾಲೂಕು ಪಂಚಾಯತ್‌ನ ಐವತ್ತೊಂದು ಮಹಿಳಾ ಪ್ರತಿನಿಧಿಗಳಲ್ಲಿ ಹಿಂದುಳಿದ ವರ್ಗದ ಇಪ್ಪತ್ತೊಂದು, ಪರಿಶಿಷ್ಟ ಜಾತಿಯ ಮೂವರು, ಪರಿಶಿಷ್ಟ

ಪಂಗಡಕ್ಕೆ ಸೇರಿದ ಮೂವರು ಹಾಗೂ ಸಾಮಾನ್ಯ ವರ್ಗದ ಇಪ್ಪತ್ತನಾಲ್ಕು ಮಹಿಳಾ ಪ್ರತಿನಿಧಿಗಳಿದ್ದಾರೆ. ಜಿಲ್ಲಾ ಪಂಚಾಯತ್‌ನ ಹದಿಮೂರು ಮಹಿಳಾ ಪ್ರತಿನಿಧಿಗಳಲ್ಲಿ ಹನ್ನೊಂದು ಹಿಂದುಳಿದ ವರ್ಗದ ನಾಲ್ಕು, ಸಾಮಾನ್ಯ ವರ್ಗದ ಏಳು, ಓರ್ವ ಪರಿಶಿಷ್ಟ ಜಾತಿಯ ಮತ್ತು ಓರ್ವ ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳಾ ಪ್ರತಿನಿಧಿಗಳಿದ್ದಾರೆ. ಇದು ಸಂವಿಧಾನದಲ್ಲಿ ವಿವರಿಸಿದ ಮೀಸಲಾತಿ ನೀತಿಗೆ ಅನುಗುಣವಾಗಿರುವುದನ್ನು ಕಂಡುಕೊಳ್ಳಲಾಗಿರುತ್ತದೆ.

ಸಾಮಾನ್ಯ ಗುಂಪಿಗೆ ಸೇರಿದ ಮಹಿಳಾ ಪ್ರತಿನಿಧಿಗಳಲ್ಲಿ ನಾಲ್ವರು ಬ್ರಾಹ್ಮಣರು, ಆರು ಸಾರಸ್ವತರು ಮತ್ತು ಮೂವರು ವಿಶ್ವಕರ್ಮ ಜಾತಿಗೆ ಸೇರಿದವರಾಗಿರುತ್ತಾರೆ. ಹಿಂದುಳಿದ ಜಾತಿಗಳಿಗೆ ಸೇರಿದವರಲ್ಲಿ ಹದಿನಾರು ಬಂಟರು, ಐವರು ಖಾರ್ವಿ ಜಾತಿಯವರು, ಇಬ್ಬರು ಕೋಟಕ್ಷತ್ರಿಯರು, ಓರ್ವ ನಾಯರ್, ಮೂವರು ಶೇರ್ವೆಗಾರ ಜಾತಿಯ ಮಹಿಳಾ ಜನಪ್ರತಿನಿಧಿಗಳು ಕಂಡುಬಂದಿರುತ್ತಾರೆ. ಒಟ್ಟು ಅರವತ್ತೊಂದು ಜನ ಮಹಿಳಾ ಪ್ರತಿನಿಧಿಗಳು ಹಿಂದುಳಿದ ಜಾತಿಗಳಿಗೆ ಸೇರಿದವರಾಗಿರುತ್ತಾರೆ. ಮೂವತ್ತಮೂರು ಮಂದಿ ಪರಿಶಿಷ್ಟ ಜಾತಿ ಮತ್ತು ಹದಿನೆಂಟು ಮಂದಿ ಪರಿಶಿಷ್ಟ ಬುಡಕಟ್ಟಿಗೆ ಸೇರಿದ ಮಹಿಳಾ ಪ್ರತಿನಿಧಿಗಳಿರುತ್ತಾರೆ. ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲೂ ಹೆಚ್ಚೂ ಕಡಿಮೆ ಇದೇ ಪರಿಸ್ಥಿತಿ ಕಂಡುಬಂದಿರುತ್ತದೆ. ಇದನ್ನು ಅವಲೋಕಿಸಿದಾಗ ಮೀಸಲಾತಿ ನೀತಿಯ ಪರಿಣಾಮಕಾರಿ ಅನುಷ್ಠಾನದಿಂದಾಗಿ ಎಲ್ಲಾ ಜಾತಿ ಮತ್ತು ಉಪಜಾತಿಗಳಿಗೆ ಸೇರಿದ ಮಹಿಳೆಯರಿಗೆ ಜನಪ್ರತಿನಿಧಿಗಳಾಗಿ ಆಯ್ಕೆಯಾಗಿರುವುದಕ್ಕೆ ಅವಕಾಶ ದೊರಕಿರುತ್ತದೆ. ದುರ್ಬಲ ವರ್ಗಕ್ಕೆ ಸೇರಿದ ಜನ ಪ್ರತಿನಿಧಿಗಳಿಗಿಂತ ಮೇಲ್ಜಾತಿಗೆ ಸೇರಿದ ಮಹಿಳಾ ಪ್ರತಿನಿಧಿಗಳು ಪರಿಣಾಮಕಾರಿಯಾಗಿ ಅಧಿಕಾರ ಚಲಾಯಿಸುತ್ತಿರುವುದು ಮತ್ತು ತಮ್ಮ ನಿರ್ಣಯಗಳನ್ನು ಬಲವಂತದಿಂದ ಮತ್ತು ಆಮಿಷಗಳನ್ನು ಒಡ್ಡುವುದರ ಮೂಲಕ ಆರ್ಥಿಕವಾಗಿ ಹಿಂದುಳಿದ ಕೆಳಜಾತಿಗೆ ಸೇರಿದ ಪ್ರತಿನಿಧಿಗಳ ಮೇಲೆ ಹೇರಿ ತಮ್ಮ ನಿಯಂತ್ರಣದಲ್ಲಿರಿಸಿರುವುದು ತಮ್ಮ ಹಿತಾಸಕ್ತಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವಂತೆ ಮಾಡುವುದರಲ್ಲಿ ಯಶಸ್ವಿಯಾಗಿರುತ್ತಾರೆ. ಮೀಸಲಾತಿ ನೀತಿಯಿಂದಾಗಿ ಕೆಳಜಾತಿಗೆ ಸೇರಿದ ಜನಪ್ರತಿನಿಧಿಗಳು ಹೆಚ್ಚು ಸಕ್ರಿಯವಾಗಿ ರಾಜಕಾರಣದಲ್ಲಿ ಭಾಗವಹಿಸುತ್ತಾರೆ ಮತ್ತು ಅವರ ಸಬಲೀಕರಣಕ್ಕೆ ಕಾರಣವಾಗುತ್ತದೆ ಎಂಬ ಪ್ರಾಕಲ್ಪನೆಯು ವಾಸ್ತವಿಕವಾಗಿ ತಪ್ಪಾಗಿರುತ್ತದೆ ಎಂಬುದಾಗಿ ತಿಳಿದುಬರುತ್ತದೆ. ಮಹಿಳಾ ಸಬಲೀಕರಣದ ಬಗೆಗೆ ನಡೆದಂತಹ ಹೆಚ್ಚಿನ ಅಧ್ಯಯನಗಳು[26] ಈ ವಿಷಯವನ್ನು ಸ್ಪಷ್ಟಪಡಿಸಿದರೂ ಅಭಿವೃದ್ಧಿ ಹೊಂದಿದ ಹೆಚ್ಚು ಸುಶಿಕ್ಷಿತರನ್ನು ಹೊಂದಿದ ಜಿಲ್ಲೆಯಾದ ಉಡುಪಿಯಲ್ಲಿ ಇದಕ್ಕೆ ವ್ಯತಿರಿಕ್ತವಾದ ಫಲಿತಗಳು ಅಧ್ಯಯನದ ಮೂಲಕ ಕಂಡುಕೊಳ್ಳಬಹುದು ಎಂಬ ಪ್ರಸ್ತುತ ಸಂಶೋಧಕರ ಅಭಿಪ್ರಾಯವು ಸಂಪೂರ್ಣವಾಗಿ ಸುಳ್ಳಾಗಿರುವುದು ಜನ ಪ್ರತಿನಿಧಿಗಳ ಜಾತಿ ಮತ್ತು ಧರ್ಮದ ಅಂಶಗಳನ್ನು ಕೂಲಂಕುಷವಾಗಿ ವಿಮರ್ಶೆಗೊಳಪಡಿಸಿದಾಗ ಎದ್ದು ಕಾಣುತ್ತದೆ.

ಮಾಹಿತಿದಾರರ ವಯಸ್ಸು

ವ್ಯಕ್ತಿಯ ವಯಸ್ಸು ಆತನ ದೈನಂದಿನ ಮತ್ತು ಸಾರ್ವಜನಿಕ ಕಾರ್ಯಗಳನ್ನು ನಿರ್ದೇಶಿಸುತ್ತದೆ ಹಾಗೂ ತೀರ್ಮಾನಿಸುತ್ತದೆ. ರಾಜಕೀಯದಲ್ಲಿ ಜನ ಪ್ರತಿನಿಧಿಗಳಾಗುವುದಂತೂ ಮಹಿಳೆಯರ ಪಾಲಿಗೆ ಇತ್ತೀಚಿನ ದಿನಗಳಲ್ಲಿ ಸಬಲೀಕರಣವಾಗಿರುವುದರಿಂದ, ಸಾಂಪ್ರದಾಯಿಕವಾದ ನಿಯಮ, ಬಂಧನಗಳನ್ನು ಮೆಟ್ಟಿ ನಿಂತು ಸಾರ್ವಜನಿಕ ವಲಯಕ್ಕೆ ಪ್ರವೇಶ ಮಾಡುವುದು ಅಷ್ಟು ಸುಲಭವಾದ ಕೆಲಸವಲ್ಲ. ಚಿಕ್ಕ ವಯಸ್ಸಿನ, ಇನ್ನೂ ವಿವಾಹವಾಗದ ಮಹಿಳೆಯರಿಗೆ ಅಂದರೆ ಇಪ್ಪತ್ತೈದು ವರ್ಷಗಳಿಗಿಂತ ಕಡಿಮೆ ಇರುವ ಯುವತಿಯರು ಗ್ರಾಮಾಂತರ ಪ್ರದೇಶಗಳಲ್ಲಿ ಪಂಚಾಯತಿಯಂತಹ ಸಾರ್ವಜನಿಕ ವಲಯದಲ್ಲಿ ಕಾರ್ಯ ನಿರ್ವಹಿಸಲು ಸಾಧ್ಯವಾಗುವುದಕ್ಕೆ ಕುಟುಂಬದ ಒಪ್ಪಿಗೆ ಸಿಗುವುದು ಅತ್ಯಂತ ಅವಶ್ಯವಾಗಿರುತ್ತದೆ. ಈಗಾಗಲೇ ಕುಟುಂಬದ ಸದಸ್ಯರು ಯಾರಾದರೂ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಿರುವುದು ಎಲ್ಲಾ ಪ್ರದೇಶಗಳಲ್ಲಿ ಯಾವುದೇ ವಯಸ್ಸು, ಅಂತಸ್ತು, ಜಾತಿ, ವರ್ಗಗಳನ್ನು ಪರಿಗಣಿಸದೇ ಇರುವುದು ಸರ್ವೇಸಾಮಾನ್ಯವಾಗಿರುವ ಅಂಶವಾಗಿರುತ್ತದೆ. ಮಹಿಳಾಪರ ಅಧ್ಯಯನಗಳು ವಿಶೇಷವಾಗಿ ರಾಜಕೀಯ ಸಹಭಾಗಿತ್ವಕ್ಕೆ ಸಂಬಂಧಪಟ್ಟ ಅಧ್ಯಯನಗಳು ಈ ಅಂಶವನ್ನು ಪುಷ್ಟೀಕರಿಸಿರುವುದನ್ನು ಕಾಣಬಹುದು[27]. ಪ್ರಸ್ತುತ ಅಧ್ಯಯನದಲ್ಲಿ ಕಂಡುಬಂದ ಫಲಿತಗಳು ಈ ಅಂಶವನ್ನು ವಿವರಿಸುತ್ತದೆ.

ಕೋಷ್ಟಕ – 4.6

ಮಾಹಿತಿದಾರರ ವಯಸ್ಸು

ವಯಸ್ಸು	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	ಶೇಕಡಾ
18–25	2	0	0	00.97
26–35	23	19	01	20.87
36–45	68	20	07	46.11
46–55	36	11	04	24.75
56–60	08	01	01	04.85
60ಕ್ಕೂ ಹೆಚ್ಚು	05	0	0	02.45
ಒಟ್ಟು	**142**	**51**	**13**	**100**

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಕೋಷ್ಟಕ 4.6ರ ಪ್ರಕಾರ ಗ್ರಾಮ ಪಂಚಾಯತ್‌ನ ಹೆಚ್ಚಿನ(68) ಮಹಿಳಾ ಪ್ರತಿನಿಧಿಗಳು. ತಾಲೂಕು ಪಂಚಾಯತ್‌ನ ಇಪ್ಪತ್ತು ಮಹಿಳಾ ಪ್ರತಿನಿಧಿಗಳು ಮತ್ತು ಜಿಲ್ಲಾ ಪಂಚಾಯತ್‌ನ ಏಳು

ಮಹಿಳಾ ಪ್ರತಿನಿಧಿಗಳು ಮೂವತ್ತಾರರಿಂದ ನಲುವತ್ತೈದು ವರ್ಷ ವಯಸ್ಸಿನ ಮಧ್ಯದವರಾಗಿರುತ್ತಾರೆ. ಗ್ರಾಮ ಪಂಚಾಯತ್‌ನ ಮೂವತ್ತಾರು ಮಹಿಳಾ ಪ್ರತಿನಿಧಿಗಳು, ತಾಲೂಕು ಪಂಚಾಯತ್‌ನ ಹನ್ನೊಂದು ಮಹಿಳಾ ಪ್ರತಿನಿಧಿಗಳು ಮತ್ತು ಜಿಲ್ಲಾ ಪಂಚಾಯತ್‌ನ ನಾಲ್ವರು ನಲುವತ್ತಾರರಿಂದ ಐವತ್ತೈದು ವರ್ಷ ವಯಸ್ಸಿನವರಾಗಿರುತ್ತಾರೆ. ಗ್ರಾಮ ಪಂಚಾಯತ್‌ನ ಇಪ್ಪತ್ತಮೂರು, ತಾಲೂಕು ಪಂಚಾಯತ್‌ನ ಹತ್ತೊಂಬತ್ತು ಮತ್ತು ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಗಳು ಇಪ್ಪತ್ತಾರರಿಂದ ಮೂವತ್ತೈದು ವರ್ಷ ವಯಸ್ಸಿನವರಾಗಿರುತ್ತಾರೆ. ಗ್ರಾಮ ಪಂಚಾಯತ್‌ನ ಎಂಟು, ತಾಲೂಕು ಪಂಚಾಯತ್‌ನ ಓರ್ವ ಮತ್ತು ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಗಳು ಐವತ್ತಾರರಿಂದ ಅರವತ್ತು ವರ್ಷ ವಯಸ್ಸಿನವರಾಗಿರುತ್ತಾರೆ. ಗ್ರಾಮ ಪಂಚಾಯತ್‌ನ ಐವರು ಮತ್ತು ಇಬ್ಬರು ಮಹಿಳಾ ಪ್ರತಿನಿಧಿಗಳು ಅನುಕ್ರಮವಾಗಿ ಅರವತ್ತಕ್ಕಿಂತ ಹೆಚ್ಚು ಮತ್ತು ಹದಿನೆಂಟರಿಂದ ಇಪ್ಪತ್ತೈದರ ನಡುವಿನ ವಯೋಮಾನದವರಾಗಿರುತ್ತಾರೆ.

ಈ ಅಂಶವನ್ನು ಗಮನಿಸಿದಾಗ 1992ರ ಪ ʻಂಚಾಯತ್‌ರಾಜ್ ಕಾಯ್ದೆ ಯುವಜನರನ್ನು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುವುದಕ್ಕೆ ಸ್ಪರ್ಧಿಸುವ ವಯೋಮಿತಿಯನ್ನು 21 ವರ್ಷಕ್ಕೆ ಇಳಿಸಿದರೂ ಈ ವಯೋಮಾನದ ಮಹಿಳೆಯರು ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸಲು ಆಸಕ್ತಿಯನ್ನು ತೋರಿಸದೆ ಇರುವುದು ಗಮನಿಸಬೇಕಾದ ಅಂಶವಾಗಿದೆ. ಹೆಚ್ಚಾಗಿ 36ರಿಂದ 45ರವರೆಗಿನ ಮಧ್ಯವಯಸ್ಕ ಮಹಿಳೆಯರೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪ್ರತಿನಿಧಿಯಾಗಿ ಸ್ಪರ್ಧಿಸುವಲ್ಲಿ ಆಸಕ್ತಿ ತೋರಿಸುತ್ತಿರುವುದು ಉಡುಪಿ ಜಿಲ್ಲೆಯಲ್ಲಿ ಮಾತ್ರವಲ್ಲದೇ ಒರಿಸ್ಸಾದ ಸ್ಥಳೀಯ ಸಂಸ್ಥೆಗಳ ಅಧ್ಯಯನದಲ್ಲೂ ಕಂಡುಬಂದಿರುವ ಉಲ್ಲೇಖವಾಗಿರುತ್ತದೆ[28].

ಮಾಹಿತಿದಾರರ ವೈವಾಹಿಕ ಸ್ಥಿತಿ

ಮಹಿಳಾ ಜನಪ್ರತಿನಿಧಿಗಳ ವೈವಾಹಿಕ ಸ್ಥಿತಿ ಮತ್ತು ಕೌಟುಂಬಿಕ ಹಿನ್ನೆಲೆ ಸಾಮಾನ್ಯವಾಗಿ ಅವರ ದೈನಂದಿನ ಚಟುವಟಿಕೆಗಳ ಮೇಲೆ ಪ್ರಭಾವ ಬೀರುವುದು ಎಲ್ಲಾ ರಾಷ್ಟ್ರಗಳಲ್ಲಿಯೂ ಕಂಡುಬರುವಂತಹ ವಿದ್ಯಾಮಾನವಾಗಿರುತ್ತದೆ. ಭಾರತದಲ್ಲಿ ಮಹಿಳೆಯರ ಸ್ಥಿತಿಗತಿಗೆ ಸಂಬಂಧಪಟ್ಟ ಹೆಚ್ಚಿನ ಅಧ್ಯಯನಗಳು (ಸುಶೀಲ್ ಕೌಶಿಕ್, ನೀರಾ ದೇಸಾಯಿ) ಅವರ ಸಾಮಾಜಿಕ ಅಂತಸ್ತು ಮತ್ತು ಕೌಟುಂಬಿಕ ಕಟ್ಟುಪಾಡುಗಳು ಮಹಿಳೆಯರ ಜೀವನ ಶೈಲಿಯ ಮೇಲೆ ಗಾಢವಾದ ಪ್ರಭಾವವನ್ನು ಬೀರಿರುವುದನ್ನು ಕಂಡುಕೊಂಡಿರುತ್ತದೆ[29]. ರಾಜಕೀಯ ಪಕ್ಷಗಳು ಮಹಿಳೆಯರನ್ನು ಆಯ್ಕೆ ಮಾಡುವ ಮುನ್ನ ಯಾವ ವರ್ಗಗಳ ಮಹಿಳೆಯರಿಗೆ ಆದ್ಯತೆ ಕೊಡುತ್ತದೆ ಎಂಬುದನ್ನು ವೈಜ್ಞಾನಿಕವಾಗಿ

ವಿಮರ್ಶಿಸುವುದು ಅತ್ಯಂತ ಸಮಂಜಸವಾಗುತ್ತದೆ. ರಾಜಕೀಯ ಪಕ್ಷಗಳು ಆದ್ಯತೆಯ ಮೇರೆಗೆ ಮಹಿಳೆಯರನ್ನು ಆರಿಸಿದರೂ, ಅವರು ಪಂಚಾಯತ್‌ನ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಶಕ್ತರಾಗುತ್ತಾರೆಯೇ? ಎಂಬಿತ್ಯಾದಿ ವಿಷಯಗಳನ್ನು ಮಹಿಳಾ ಜನಪ್ರತಿನಿಧಿಗಳ ವೈವಾಹಿಕ ಸ್ಥಿತಿಗತಿಗಳನ್ನು ಅರ್ಥೈಸಿಕೊಂಡಾಗ ಮಾತ್ರ ತಿಳಿದುಕೊಳ್ಳಬಹುದು. ಈ ನಿಟ್ಟಿನಲ್ಲಿ ಮಹಿಳಾ ಜನಪ್ರತಿನಿಧಿಗಳು ಮತ್ತು ಅವರ ಕೌಟುಂಬಿಕ ಹಿನ್ನೆಲೆ ಮತ್ತು ಸ್ಥಿತಿಗತಿಗಳು ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತದೆ.

ಕೋಷ್ಟಕ – 4.7

ಮಾಹಿತಿದಾರರ ವೈವಾಹಿಕ ಸ್ಥಿತಿ

ವೈವಾಹಿಕ ಸ್ಥಿತಿ	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	ಶೇಕಡಾ
ವಿವಾಹಿತೆ	129	44	13	90.30
ಅವಿವಾಹಿತೆ	5	5	0	04.85
ವಿಧವೆ	8	2	0	04.85
ಒಟ್ಟು	**142**	**51**	**13**	**100**

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಕೋಷ್ಟಕ 4.7ರ ಪ್ರಕಾರ ಶೇಕಡಾ 90.3ರಷ್ಟು ಮಹಿಳೆಯರು ವಿವಾಹಿತರಾಗಿದ್ದು, ತಲಾ 4.85%ದಷ್ಟು ಮಹಿಳಾ ಜನಪ್ರತಿನಿಧಿಗಳು ಅವಿವಾಹಿತೆ ಮತ್ತು ವಿಧವೆಯರಾಗಿರುವುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿರುತ್ತದೆ. ಇದನ್ನು ಗಮನಿಸಿದಾಗ ಎಲ್ಲಾ ರಾಜಕೀಯ ಪಕ್ಷಗಳು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮಹಿಳಾ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ವಿವಾಹಿತ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡುವುದು ಸಾಮಾನ್ಯವಾಗಿ ಕಂಡುಬಂದಿರುತ್ತದೆ. ಪಂಚಾಯತ್‌ರಾಜ್ ವ್ಯವಸ್ಥೆಯ ಮೂರೂ ಸ್ತರಗಳಲ್ಲಿಯೂ ವಿವಾಹಿತ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ (90.3%) ಚುನಾಯಿತರಾಗಿರುವುದು ಕಂಡುಬಂದಿರುತ್ತದೆ. ಪತಿಯ ಅಸ್ತಿತ್ವವೇ ಅವರಿಗೆ ಜನಪ್ರತಿನಿಧಿಗಳಾಗಿ ಸಕ್ರಿಯವಾಗಿ ಭಾಗವಹಿಸುವುದಕ್ಕೆ ಇರುವ ಪ್ರೇರೇಪಣೆಯಾಗಿರುತ್ತದೆ. ವಿಧವೆಯರು (4.85%) ಹಾಗೂ ಅವಿವಾಹಿತೆಯರು (4.85%) ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಕಂಡುಬಂದಿರುವುದಿಲ್ಲ ಹಾಗೂ ವಿಚ್ಛೇದಿತ ಮಹಿಳೆಯರು ಜನಪ್ರತಿನಿಧಿಗಳಾಗಿ ಆಯ್ಕೆಯಾದ ಉದಾಹರಣೆಗಳು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿಲ್ಲದಿರುವುದು ರಾಜಕೀಯ ಪಕ್ಷಗಳು ವಿಚ್ಛೇದಿತರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ

ಅವಕಾಶ ನೀಡದಿರುವುದನ್ನು ಬೆಟ್ಟುಮಾಡಿ ತೋರಿಸುತ್ತದೆ. ಸಮಾಜದ ದೃಷ್ಟಿಯಲ್ಲಿ ಯಾವುದು ಸರಿ ಎಂದು ನಿಗದಿತವಾಗಿದೆಯೋ ಅದುವೇ ಸಾರ್ವಜನಿಕ ವಲಯದಲ್ಲೂ ಕಂಡುಬಂದಿರುತ್ತದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂದರ್ಶಿಸಲ್ಪಟ್ಟ ಒಟ್ಟು 206 ಮಹಿಳಾ ಪ್ರತಿನಿಧಿಗಳಲ್ಲಿ ಗ್ರಾಮ ಪಂಚಾಯತ್‌ನ್ನು ಪ್ರತಿನಿಧಿಸುವ 8 ಮತ್ತು ತಾಲೂಕು ಪಂಚಾಯತ್‌ನ್ನು ಪ್ರತಿನಿಧಿಸುವ ಇಬ್ಬರು ವಿಧವಾ ಪ್ರತಿನಿಧಿಗಳು ಜನಪ್ರತಿನಿಧಿಯಾಗಿ ಕಾರ್ಯನಿರ್ವಹಿಸುವುದಕ್ಕೆ ವಿಧವೆಯಾಗಿರುವುದು ದೊಡ್ಡ ಸಾಮಾಜಿಕ ಸಮಸ್ಯೆಯೆಂದು ಬಿಂಬಿಸಲಾಗುತ್ತದೆ ಎಂದು ತಮ್ಮ ಅಳಲನ್ನು ವ್ಯಕ್ತಪಡಿಸಿರುತ್ತಾರೆ. ಪತಿಯ ಮರಣದ ನಂತರ ಜನಪ್ರತಿನಿಧಿಗಳಾಗಿ ತಮ್ಮ ಕ್ಷೇತ್ರದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಅಧಿಕಾರಿಗಳನ್ನು ಮತ್ತು ಕ್ಷೇತ್ರಗಳಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ "ಪತಿಯ ಮರಣದ ನಂತರವೂ ಯಾವುದೇ ಬೇಸರವಿಲ್ಲದೆ, ಸಮಾಜ ವಿಧವೆಗೆ ವಿಧಿಸಿದ ಕಟ್ಟುಪಾಡುಗಳನ್ನು ಪಾಲಿಸದೆ ಐಷಾರಾಮಿಯಿಂದ ಜೀವನವನ್ನು ನಿರ್ವಹಿಸುತ್ತಿದ್ದಾಳೆ" ಎಂಬುದಾಗಿ ಸಮಾಜದ ಕುಹಕದ ಮಾತುಗಳನ್ನು ಕೇಳಿಕೊಳ್ಳಬೇಕಾದ ಪ್ರಸಂಗಗಳು ಅತ್ಯಂತ ಬೇಸರದ ವಿಷಯವಾಗಿರುತ್ತದೆ ಎಂಬುದಾಗಿ ವಿಧವಾ ಪ್ರತಿನಿಧಿಗಳು ತಮ್ಮ ದು:ಖವನ್ನು ಸಂಶೋಧಕರ ಜೊತೆಯಲ್ಲಿ ಹಂಚಿಕೊಂಡಿರುತ್ತಾರೆ. ಇಪ್ಪತ್ತೊಂದನೆಯ ಶತಮಾನದಲ್ಲಿಯೂ ವಿಧವೆಯರು ಸೀಮಿತ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬಾರದು ಎಂಬ ಸಮಾಜದ ಗ್ರಹಿಕೆಯು ಮಹಿಳಾ ಸದಸ್ಯರನ್ನು ಸಕ್ರಿಯವಾಗಿ ಕಾರ್ಯನಿರ್ವಹಿಸದಂತೆ ತಡೆಯುವ ಅಂಶ ಎಂಬುದಾಗಿ ಅಧ್ಯಯನದ ಸಂರ್ಭದಲ್ಲಿ ಕಂಡುಕೊಂಡ ನಗ್ನ ಸತ್ಯವಾಗಿರುತ್ತದೆ.

ಮಾಹಿತಿದಾರರ ಶೈಕ್ಷಣಿಕ ಹಿನ್ನೆಲೆ

ಅಭಿವೃದ್ಧಿಯ ಮಾನದಂಡಗಳನ್ನು ಗಮನಿಸಿದಾಗ ಶಿಕ್ಷಣವು ಪ್ರಮುಖವಾಗಿ ಪರಿಗಣಿಸಲ್ಪಡುವ ಮಾಪಕವಾಗಿರುತ್ತದೆ[30]. ವ್ಯಕ್ತಿ ಹೊಂದಿರುವ ಶಿಕ್ಷಣವು ಅವರ ಸಾಮಾಜಿಕ ಸ್ಥಾನ ಮಾನಗಳನ್ನು, ಪ್ರತಿಷ್ಠೆ, ಗೌರವಗಳನ್ನು ಸಾಮಾನ್ಯವಾಗಿ ನಿರ್ಧರಿಸುತ್ತದೆ. ಜಾಗತಿಕ ಮಟ್ಟದಲ್ಲಿಯೇ ಶಿಕ್ಷಣವು ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರಮುಖವಾಗಿ ಪರಿಗಣಿಸಲ್ಪಟ್ಟಿದ್ದು ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿಯೂ ಶಿಕ್ಷಣವು ಸರ್ವೇ ಸಾಮಾನ್ಯವಾಗಿ ಜನರ ಎಲ್ಲಾ ಚಟುವಟಿಕೆಗಳ ಮೇಲೆ ಪ್ರಭಾವವನ್ನು ಬೀರಿರುವುದನ್ನು ಗಮನಿಸಬಹುದು[31]. ಈ ಹಿನ್ನೆಲೆಯಲ್ಲಿ ಅಧ್ಯಯನಕ್ಕೊಳಪಡಿಸಿದ ಕ್ಷೇತ್ರದ ಮಹಿಳಾ ಜನಪ್ರತಿನಿಧಿಗಳ ಶೈಕ್ಷಣಿಕ ಮಟ್ಟ ಮತ್ತು ಅವರ ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ

ಅದು ಬೀರುವ ಪ್ರಭಾವವನ್ನು ಅರಿತುಕೊಳ್ಳುವುದಕ್ಕೆ ಅಧ್ಯಯನದಲ್ಲಿ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗಿರುತ್ತದೆ.

ಕೋಷ್ಟಕ – 4.8

ಮಾಹಿತಿದಾರರ ಶೈಕ್ಷಣಿಕ ಅರ್ಹತೆ

ವಿದ್ಯಾರ್ಹತೆ	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	ಶೇಕಡಾ
ಅನಕ್ಷರಸ್ಥರು	09	0	0	04.40
ಪ್ರಾಥಮಿಕ ಶಿಕ್ಷಣ	54	08	01	30.58
ಪ್ರೌಢ ಶಿಕ್ಷಣ	62	18	03	40.29
ಪದವಿಪೂರ್ವ	11	14	06	15.04
ಪದವಿ	06	09	01	07.76
ಸ್ನಾತಕೋತ್ತರ ಪದವಿ	0	01	02	01.45
ವೃತ್ತಿಪರ	0	01	0	00.48
ಒಟ್ಟು	**142**	**51**	**13**	**100**

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಕೋಷ್ಟಕ 4.8ರ ಪ್ರಕಾರ ಸಂದರ್ಶಿಸಿದ ಒಟ್ಟು ಗ್ರಾಮ ಪಂಚಾಯತ್‌ಗಳ 142 ಮಹಿಳಾ ಪ್ರತಿನಿಧಿಗಳ ಪೈಕಿ ಐವತ್ತನಾಲ್ಕು ಮಹಿಳೆಯರಿಗೆ ಪ್ರಾಥಮಿಕ ಶಿಕ್ಷಣವೂ ಮತ್ತು ಅರವತ್ತೆರಡು ಮಹಿಳಾ ಪ್ರತಿನಿಧಿಗಳು ಪ್ರೌಡ ಶಿಕ್ಷಣವನ್ನೂ ಹೊಂದಿದ್ದಾರೆ ಎಂದು ತಿಳಿದುಬಂದಿರುತ್ತದೆ. ಕುತೂಹಲಕಾರಿಯಾದ ಅಂಶವೆಂದರೆ ಆರು ಮಂದಿ ಪದವಿ ಹೊಂದಿದ ಮತ್ತು ಹನ್ನೊಂದು ಮಂದಿ ಪದವಿಪೂರ್ವ ಶಿಕ್ಷಣವನ್ನು ಪಡೆದವರು ಮತ್ತು ಒಂಬತ್ತು ಮಂದಿ ಅನಕ್ಷರಸ್ಥರಿರುವುದು ಕಂಡುಬಂದಿರುತ್ತದೆ. ಗ್ರಾಮ ಮಟ್ಟದ ಚುನಾಯಿತ ಮಹಿಳಾ ಪ್ರತಿನಿಧಿಗಳಿಗಿಂತ, ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಅವರ ಶೈಕ್ಷಣಿಕ ಸ್ಥಾನವು ಉತ್ತಮವಾಗಿರುತ್ತದೆ. ತಾಲೂಕು ಪಂಚಾಯತ್‌ನ ಓರ್ವ ಮಹಿಳೆ ವೃತ್ತಿಪರ, ಓರ್ವ ಸ್ನಾತಕೋತ್ತರ ಪದವಿ, ಒಂಬತ್ತು ಮಂದಿ ಪದವಿ ಶಿಕ್ಷಣ, ಹದಿನಾಲ್ಕು ಮಂದಿ ಪದವಿಪೂರ್ವ ಶಿಕ್ಷಣ, ಹದಿನೆಂಟು ಮಂದಿ ಪ್ರೌಢ ಶಿಕ್ಷಣ ಮತ್ತು ಎಂಟು ಮಂದಿ ಪ್ರಾಥಮಿಕ ಶಿಕ್ಷಣವನ್ನು ಪಡೆದ ಮಹಿಳಾ ಪ್ರತಿನಿಧಿಗಳಾಗಿರುತ್ತಾರೆ. ಜಿಲ್ಲಾ ಪಂಚಾಯತ್‌ನ ಇಬ್ಬರು ಸ್ನಾತಕೋತ್ತರ ಪದವಿ, ಓರ್ವ ಪದವಿ ಶಿಕ್ಷಣ, ಆರು ಮಂದಿ ಪದವಿಪೂರ್ವ ಶಿಕ್ಷಣ, ಮೂವರು ಪ್ರೌಢ ಶಿಕ್ಷಣ ಮತ್ತು ಒಬ್ಬರು

ಪ್ರಾಥಮಿಕ ಶಿಕ್ಷಣವನ್ನು ಪಡೆದ ಮಹಿಳಾ ಪ್ರತಿನಿಧಿಗಳಾಗಿರುತ್ತಾರೆ. ಇದನ್ನು ಗಮನಿಸಿದಾಗ ಉಡುಪಿ ಜಿಲ್ಲೆಯಲ್ಲಿ ಕಾಲೇಜು ಮತ್ತು ಉನ್ನತ ಶಿಕ್ಷಣವನ್ನು ಪಡೆದವರು ಸ್ಥಳೀಯ ಸಂಸ್ಥೆಗಳ ಉನ್ನತ ಸ್ತರಗಳ ಚುನಾವಣೆಯಲ್ಲಿ ಮಾತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸಲು ಹೆಚ್ಚು ಆಸಕ್ತಿಯನ್ನು ತೋರಿಸಿರುವುದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕಂಡುಬಂದಂತಹ ಕುತೂಹಲಕಾರಿಯಾದ ಅಂಶವಾಗಿರುತ್ತದೆ.

ಮನೆಯಲ್ಲಿ ಶಿಕ್ಷಣಕ್ಕೆ ಆದ್ಯತೆ

ಸದಸ್ಯರ ಮನೆಯಲ್ಲಿರುವ ಮಕ್ಕಳ ಮತ್ತು ಅವಲಂಬಿತರ ಶಿಕ್ಷಣಕ್ಕೆ ಆದ್ಯತೆಯನ್ನು ನೀಡಲಾಗುತ್ತಿದೆಯೇ ಎಂದು ಪ್ರಶ್ನಿಸಿದಾಗ ಶೇಕಡಾ 100 ಮಹಿಳಾ ಪ್ರತಿನಿಧಿಗಳು ಕುಟುಂಬದ ಸದಸ್ಯರಿಗೆ ಶಿಕ್ಷಣದ ಆದ್ಯತೆಯನ್ನು ನೀಡಲಾಗುತ್ತಿದೆ ಎಂದು ಉತ್ತರಿಸಿರುತ್ತಾರೆ. ಗ್ರಾಮ ಪಂಚಾಯತ್‌ನ 130, ತಾಲೂಕು ಪಂಚಾಯತ್‌ನ 44 ಮತ್ತು ಜಿಲ್ಲಾ ಪಂಚಾಯತ್‌ನ ಹತ್ತು ಮಹಿಳಾ ಪ್ರತಿನಿಧಿಗಳು ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರಿಗೂ ಸಮಾನವಾಗಿ ಶಿಕ್ಷಣವನ್ನು ನೀಡುತ್ತಿದ್ದೇವೆ, ಗ್ರಾಮ ಪಂಚಾಯತ್‌ನ ಎಂಟು, ತಾಲೂಕು ಪಂಚಾಯತ್‌ನ ಐದು ಮತ್ತು ಜಿಲ್ಲಾ ಪಂಚಾಯತ್‌ನ ಇಬ್ಬರು ಮಹಿಳಾ ಪ್ರತಿನಿಧಿಗಳು ಹೆಣ್ಣು ಮಕ್ಕಳಿಗೆ ಹೆಚ್ಚಿನ ಆದ್ಯತೆ ನೀಡುತ್ತೇವೆ ಎಂದಿದ್ದರೆ, ಗ್ರಾಮ ಪಂಚಾಯತ್‌ನ ನಾಲ್ಕು, ತಾಲೂಕು ಪಂಚಾಯತ್‌ನ ಮೂರು ಮತ್ತು ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿ ಗಂಡು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಇದನ್ನು ಅವಲೋಕಿಸಿದಾಗ ಪ್ರಸ್ತುತ ಕಾಲಘಟ್ಟದಲ್ಲಿ ಹೆಣ್ಣು ಮಕ್ಕಳಿಗೂ ಶಿಕ್ಷಣದ ಅಗತ್ಯವಿದೆಯೆಂದು ಹೆಚ್ಚು ಶಿಕ್ಷಣ ಪಡೆದಿರದ ಪ್ರತಿನಿಧಿಗಳು ಅರಿತಿರುವುದು ಒಂದು ಗಮನಾರ್ಹ ಅಂಶವಾಗಿದೆ.

ಅವಿದ್ಯಾವಂತರು ಹಾಗೂ ನಿರಕ್ಷರಸ್ಥರು ಒತ್ತಡಗಳಿಗೆ ಒಳಗಾಗಿ ಪಂಚಾಯತ್‌ಗಳಿಗೆ ಸ್ಪರ್ಧಿಸಿ ಚುನಾಯಿತರಾಗಿ ಬರುತ್ತಿದ್ದುದು 1990ರ ದಶಕದ ಹಿಂದೆ ರಾಷ್ಟ್ರಾದ್ಯಂತ ಕಂಡುಬರುತ್ತಿದ್ದಂತಹ ಸಾಮಾನ್ಯ ಅಂಶವಾಗಿತ್ತು. ಈ ಪರಿಸ್ಥಿತಿ 1992ರ ಪಂಚಾಯತ್‌ರಾಜ್ ತಿದ್ದುಪಡಿ ಕಾಯ್ದೆ ಜಾರಿಗೆ ಬಂದ ನಂತರದಲ್ಲಿ ಬದಲಾವಣೆಯಾಗಿರುವುದನ್ನು ಹೆಚ್ಚಿನ ಸಂಶೋಧಕರು (ದೇವಕಿ ಜೈನ್, 1994; ಕೆ. ಎಸ್. ಸಕ್ಸೇನಾ, 2006) ವಿಶ್ಲೇಷಿಸಿರುತ್ತಾರೆ. ಈ ಕಂಡುಕೊಳ್ಳುವಿಕೆಯನ್ನು ತುಲನಾತ್ಮಕವಾಗಿ ಉಡುಪಿ ಜಿಲ್ಲೆಗೆ ಹೋಲಿಸಿ ನೋಡಿರುವುದು ಹಾಗೂ ಇಲ್ಲಿನ ಫಲಿತಗಳನ್ನು ಹಿಂದಿನ ಅಧ್ಯಾಯನದ ಫಲಿತಗಳಿಗೆ ಮುಖಾಮುಖಿಯಾಗಿಸಿ ಚರ್ಚಿಸಿರುವುದು ಸಂಶೋಧನೆಯ ಇನ್ನೊಂದು ಆದ್ಯತೆಯಾಗಿರುತ್ತದೆ.

ಮಾಹಿತಿದಾರರ ಕುಟುಂಬದ ಆದಾಯ ಮತ್ತು ರಾಜಕೀಯ ಪಾಲ್ಗೊಳ್ಳುವಿಕೆ

ಕುಟುಂಬದ ಆದಾಯವು ಯಾವುದೇ ಸ್ತ್ರೀ ಪುರುಷರ ಜೀವನವನ್ನು ಸಾಗಿಸುವ, ನಿರ್ದೇಶಿಸುವ, ತೀರ್ಮಾನಿಸುವ ಪ್ರಮುಖ ಅಂಶವಾಗಿರುತ್ತದೆ. ಔಪಚಾರಿಕವಾದ ಉದ್ಯೋಗವಿಲ್ಲದೆ, ಮನೆವಾರ್ತೆಯನ್ನು ನಿರ್ವಹಿಸುವ ಅಥವಾ ದಿನಗೂಲಿ ಕಾರ್ಮಿಕರಾಗಿ ದುಡಿಯುವ ಮಹಿಳೆಗೆ ಆಕೆಯ ಸ್ಥಾನಮಾನಗಳು ಕುಟುಂಬಕ್ಕೆ ಆಕೆಯು ನೀಡುತ್ತಿರುವ ಆರ್ಥಿಕ ಕೊಡುಗೆಯ ಮೇಲೆ ನಿರ್ಧಾರವಾಗಿರುತ್ತದೆ.

ಕೋಷ್ಟಕ – 4.9

ಮಾಹಿತಿದಾರರ ಮಾಸಿಕ ವರಮಾನ

ಮಾಸಿಕ ವರಮಾನ	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	ಶೇಕಡಾ
ರೂ.5000ಕ್ಕೂ ಕಡಿಮೆ	67	15	01	40.29
ರೂ.5001–10000	37	22	05	31.07
ರೂ.10001–15000	16	08	02	12.63
ರೂ.15001–20000	12	01	02	07.28
ರೂ.20000ಕ್ಕೂ ಹೆಚ್ಚು	10	05	03	08.73
ಒಟ್ಟು	**142**	**51**	**13**	**100**

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಕೋಷ್ಟಕ 4.9ರ ವಿಶ್ಲೇಷಣೆಯ ಪ್ರಕಾರ ಗ್ರಾಮ ಪಂಚಾಯತ್‌ನ 142 ಮಹಿಳಾ ಪ್ರತಿನಿಧಿಗಳಲ್ಲಿ ಅರವತ್ತೇಳು, ತಾಲೂಕು ಪಂಚಾಯತ್‌ನ ಹದಿನೈದು ಮತ್ತು ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಯ ಮಾಸಿಕ ವರಮಾನ ರೂ. 5000ಕ್ಕಿಂತಲೂ ಕಡಿಮೆ ಇರುವುದು ಕಂಡುಬಂದಿರುತ್ತದೆ. ಗ್ರಾಮ ಪಂಚಾಯತ್‌ನ ಮೂವತ್ತೇಳು, ತಾಲೂಕು ಪಂಚಾಯತ್‌ನ ಇಪ್ಪತ್ತೆರಡು ಮತ್ತು ಜಿಲ್ಲಾ ಪಂಚಾಯತ್‌ನ ಐವರು ಮಹಿಳಾ ಪ್ರತಿನಿಧಿಗಳ ವರಮಾನ ರೂ.5001 ರಿಂದ 10000ದವರೆಗೆ ಇದೆ. ರೂ.10001ರಿಂದ 15000ದವರೆಗಿನ ಮಾಸಿಕ ವರಮಾನವನ್ನು ಗ್ರಾಮ ಪಂಚಾಯತ್‌ನ ಹದಿನಾರು, ತಾಲೂಕು ಪಂಚಾಯತ್‌ನ ಎಂಟು ಮತ್ತು ಜಿಲ್ಲಾ ಪಂಚಾಯತ್‌ನ ಇಬ್ಬರು ಮಹಿಳಾ ಪ್ರತಿನಿಧಿಗಳು ಪಡೆಯುತ್ತಿದ್ದಾರೆ. ಗ್ರಾಮ ಪಂಚಾಯತ್‌ನ ಹನ್ನೆರಡು, ತಾಲೂಕು ಪಂಚಾಯತ್‌ನ ಓರ್ವ ಮತ್ತು ಜಿಲ್ಲಾ ಪಂಚಾಯತ್‌ನ ಇಬ್ಬರು ರೂ.15001 ರಿಂದ 20000ದವರೆಗಿನ ವೇತನವನ್ನು

ಪಡೆಯುತ್ತಿದ್ದು, ರೂ.20000ಕ್ಕಿಂತ ಮೇಲ್ಪಟ್ಟ ವರಮಾನವನ್ನು ಗ್ರಾಮ ಪಂಚಾಯತ್‌ನ ಹತ್ತು, ತಾಲೂಕು ಪಂಚಾಯತ್‌ನ ಐದು ಮತ್ತು ಜಿಲ್ಲಾ ಪಂಚಾಯತ್‌ನ ಮೂವರು ಮಹಿಳಾ ಪ್ರತಿನಿಧಿಗಳು ಹೊಂದಿರುತ್ತಾರೆ. ಇದನ್ನು ಅವಲೋಕಿಸಿದಾಗ ಅಧಿಕವಾದ ಆದಾಯವನ್ನು ಹೊಂದಿದವರು ಬಹಳ ಕನಿಷ್ಠ ಸಂಖ್ಯೆಯಲ್ಲಿರುವುದು ಕಂಡುಬಂದಿರುತ್ತದೆ.

ಆಹಾರ ಸುರಕ್ಷತೆ ಕುಟುಂಬದ ಆರ್ಥಿಕ ಪರಿಸ್ಥಿತಿಗೆ ಸಹಕಾರಿಯಾಗಿರುತ್ತದೆ. ಅದನ್ನು ಒದಗಿಸಲೆಂದೇ ಸರ್ಕಾರವು ಬಡತನ ರೇಖೆಯ ಕುಟುಂಬಗಳಿಗೆ ಆಹಾರ ಧಾನ್ಯವನ್ನು ಪಡಿತರ ಚೀಟಿಯ ಮೂಲಕ ಒದಗಿಸುತ್ತದೆ. ಅಧ್ಯಯನಕ್ಕೆ ಒಳ ಪಟ್ಟ ಮಹಿಳಾ ಪ್ರತಿನಿಧಿಗಳಲ್ಲಿ ಪಡಿತರ ಚೀಟಿ ಹೊಂದಿರುವ ಬಗ್ಗೆ ವಿಚಾರಿಸಿದಾಗ ಗ್ರಾಮ ಪಂಚಾಯತ್‌ನ ಒಂದುನೂರ ನಲವತ್ತೊಂದು, ತಾಲೂಕು ಪಂಚಾಯತ್‌ನ ಐವತ್ತೊಂದು ಮತ್ತು ಜಿಲ್ಲಾ ಪಂಚಾಯತ್‌ನ ಹನ್ನೆರಡು ಮಹಿಳಾ ಪ್ರತಿನಿಧಿಗಳು ಪಡಿತರ ಚೀಟಿಯನ್ನು ಹೊಂದಿದವರಾಗಿದ್ದಾರೆ. ಇವುಗಳಲ್ಲಿ ಮುಂದಿನ ಭಾಗವಾಗಿ ಪಡಿತರ ಚೀಟಿ ಹೊಂದಿದದವರ ವಿವರವನ್ನು ವಿಶ್ಲೇಷಿಸಿದಾಗ ಗ್ರಾಮ ಪಂಚಾಯತ್‌ನ ತೊಂಬತ್ತೊಂದು, ತಾಲೂಕು ಪಂಚಾಯತ್‌ನ ಇಪ್ಪತ್ತಾರು ಮತ್ತು ಜಿಲ್ಲಾ ಪಂಚಾಯತ್‌ನ ಇಬ್ಬರು ಮಹಿಳಾ ಪ್ರತಿನಿಧಿಗಳು ಬಿಪಿಎಲ್ ಕಾರ್ಡ್‌ನ್ನು (57.76%), ಗ್ರಾಮ ಪಂಚಾಯತ್‌ನ ಐವತ್ತು, ತಾಲೂಕು ಪಂಚಾಯತ್‌ನ ಇಪ್ಪತ್ತೈದು ಮತ್ತು ಜಿಲ್ಲಾ ಪಂಚಾಯತ್‌ನ ಹತ್ತು ಮಹಿಳಾ ಪ್ರತಿನಿಧಿಗಳು ಎಪಿಎಲ್ ಕಾರ್ಡ್‌ನು (41.26%), ಗ್ರಾಮ ಪಂಚಾಯತ್‌ನ ಓರ್ವ ಮತ್ತು ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಗಳು ಯಾವುದೂ ಇಲ್ಲವೆಂದು ಉತ್ತರಿಸಿರುತ್ತಾರೆ. ಇದನ್ನು ಅವಲೋಕಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳ ಆರ್ಥಿಕ ಸ್ಥಿತಿಯು ಅನುಕೂಲವಾಗಿಲ್ಲದಿರುವುದು ಹಾಗೂ ಸ್ಥಳೀಯ ಸರ್ಕಾರದ ಆಡಳಿತದಲ್ಲಿ ಹೆಚ್ಚಿನ ಆರ್ಥಿಕ ಸ್ಥಿತಿಯನ್ನು ಹೊಂದಿರುವವರು ಸ್ಪರ್ಧಿಸಲು ಇಚ್ಚಿಸದಿರುವುದು ಎಂಬ ಇತರ ಅಧ್ಯಯನಗಳ[32] ಫಲಿತವು ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲೂ ಕಂಡುಬಂದಿರುತ್ತದೆ.

ಕುಟುಂಬದ ಆರ್ಥಿಕ ವ್ಯವಸ್ಥೆ ಸದೃಢವಾದಂತಹ ಸಂದರ್ಭದಲ್ಲಿ ಮಹಿಳೆಯರು ಸಕ್ರಿಯವಾಗಿ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಸಾಧ್ಯವಾಗುತ್ತದೆ. ಭಾರತೀಯ ಕೌಟುಂಬಿಕ ವ್ಯವಸ್ಥೆಯನ್ನು ಅವಲೋಕಿಸಿದಾಗ ಆರ್ಥಿಕ ಅಂಶಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿರುವುದು ಬಹುತೇಕ ಅಧ್ಯಯನಗಳು[33] ಸಾಬೀತುಪಡಿಸಿರುತ್ತದೆ. ಆರ್ಥಿಕ ಭದ್ರತೆಯು ಕುಟುಂಬದ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಅವಶ್ಯಕವಾಗಿರುತ್ತದೆ. ಈ ಅಂಶಗಳನ್ನು ಪ್ರಸ್ತುತ ಅಧ್ಯಯನ ಕ್ಷೇತ್ರದ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಜನಪ್ರತಿನಿಧಿಗಳೊಂದಿಗೆ

ತಾಳೆ ಹಾಕಿದಾಗ ವೈರುದ್ಧ್ಯವಿರುವುದು ಕಂಡುಬರುತ್ತದೆ. ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಆರ್ಥಿಕವಾಗಿ ಉಡುಪಿ ಜಿಲ್ಲೆಯು ಎಲ್ಲಾ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿ ಹೊಂದುತ್ತಿರುವ ಜಿಲ್ಲೆಯೆಂದು ಪರಿಗಣಿಸಲ್ಪಟ್ಟಿದ್ದರೂ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಆರ್ಥಿಕ ಹಿನ್ನೆಲೆ ಸುಸ್ಥಿರವಾಗಿರದೆ ತಮ್ಮ ಜೀವನದ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದಕ್ಕೂ ಪರದಾಡುವ ಪರಿಸ್ಥಿತಿ ಎದ್ದು ಕಾಣುತ್ತದೆ. ತಮ್ಮ ಮನೆಯ ಆರ್ಥಿಕ ವ್ಯವಸ್ಥೆಯನ್ನು ಪೂರೈಸುವುದರ ಜೊತೆಗೆ ಜನರ ಬೇಕು ಬೇಡಗಳಿಗೆ ಸ್ಪಂದಿಸುವ ಏಕ ಕಾಲದಲ್ಲಿ ಎರಡು ಪಾತ್ರವನ್ನು ನಿರ್ವಹಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ ಎನ್ನುವ ಭಿನ್ನ ಫಲಿತಾಂಶವು ಉಡುಪಿಯ ಸ್ಥಳೀಯ ಸಂಸ್ಥೆಗಳ ಮಹಿಳಾ ಜನಪ್ರತಿನಿಧಿಗಳಲ್ಲಿ ಕಂಡುಬಂದಿರುತ್ತದೆ.

ಮಾಹಿತಿದಾರರ ಉದ್ಯೋಗ

ಶಿಕ್ಷಣದಂತೆಯೇ ಮಹಿಳೆಯರು ಹೊಂದಿರುವ ಉದ್ಯೋಗವು ಅವರ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುವಲ್ಲಿ ನಿರ್ಣಯಕ ಪಾತ್ರಗಳನ್ನು ವಹಿಸುತ್ತದೆ. 1970 ದಶಕದ ವರೆಗೆ ಮಹಿಳೆ ಉದ್ಯೋಗಕ್ಕೋಸ್ಕರ ಮನೆಯ ಚೌಕಟ್ಟನಿಂದ ಹೊರಗೆ ಬರುವುದನ್ನು ತಿರಸ್ಕಾರ ಮತ್ತು ಅವಹೇಳನದ ಭಾವನೆಯಲ್ಲಿ ನೋಡಲಾಗುತ್ತಿತ್ತು. ನಂತರದಲ್ಲಿ ಮಹಿಳೆಯರ ಉದ್ಯೋಗಕ್ಕೆ ಸಂಬಂಧಪಟ್ಟಂತೆ ಕ್ರಾಂತಿಕಾರಿ ಬದಲಾವಣೆಯಾಗಿರುವುದನ್ನು ಹಾಗೂ ಉದ್ಯೋಗವನ್ನು ಹೊಂದಿದ ಮಹಿಳೆಯರು ಸಾಮಾಜಿಕವಾಗಿ ಹೆಚ್ಚು ಗೌರವವನ್ನು ಹೊಂದಿರುವುದನ್ನು ಸಾಮಾಜ ಶಾಸ್ತ್ರಕ್ಕೆ ಸಂಬಂಧಪಟ್ಟ ಹಲವಾರು ಅಧ್ಯಯನಗಳು (ಗಾಯತ್ರಿ ದೇವಿ 2013, ಶಂಕರ್ ರಾವ್ 2005) ವಿವರಿಸಿರುತ್ತವೆ. ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀ ಪುರುಷರಿಬ್ಬರು ಕೌಟುಂಬಿಕ ವ್ಯವಸ್ಥೆಯಲ್ಲಿ ಸಾಮಾನ ಹೊಣೆಗಾರಿಕೆಯನ್ನು ನಿಭಾಯಿಸುತ್ತಿರುವುದನ್ನು ಎಲ್ಲಾ ಸಾಮಾಜಿಕ ವ್ಯವಸ್ಥೆಯಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕಂಡು ಬರುವಂತಹ ಸರ್ವೇ ಸಾಮಾನ್ಯವಾದ ಅಂಶವಾಗಿರುತ್ತದೆ[34]. ಈ ನಿಟ್ಟಿನಲ್ಲಿ ಮಹಿಳಾ ಜನಪ್ರತಿನಿಧಿಗಳು ಮತ್ತು ಅವರು ಹೊಂದಿರುವ ಉದ್ಯೋಗವನ್ನು ತಾಳೆ ಹಾಕಿ ಗಮನಿಸಿದಾಗ ಗ್ರಾಮ ಪಂಚಾಯತಿನ ಹೆಚ್ಚಿನ ಮಹಿಳಾ ಸದಸ್ಯರು ತಮ್ಮ ಮನೆವಾರ್ತೆ ಜವಾಬ್ದಾರಿಯನ್ನು ನಿಭಾಯಿಸುವುದರ ಜೊತೆಗೆ ಕೃಷಿಕಾರ್ಮಿಕರಾಗಿ ಹಾಗೂ ಇತರ ಕೂಲಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಉಡುಪಿ ಜಿಲ್ಲೆಯ ಗ್ರಾಮ ಪಂಚಾಯತ್ ಸದಸ್ಯರ ಮಹಿಳಾ ಸದಸ್ಯರ ಜೀವನ ಕ್ರಮವನ್ನು ಅವಲೋಕಿಸಿದಾಗ ಕಂಡುಕೊಂಡಿರುವಂತಹ ಅಂಶವಾಗಿರುತ್ತದೆ.

ಕೋಷ್ಟಕ – 4.10

ಮಾಹಿತಿದಾರರ ಉದ್ಯೋಗ

ಉದ್ಯೋಗ	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	ಶೇಕಡಾ
ಕೃಷಿ	26	14	06	22.33
ಕೂಲಿ	41	05	01	22.81
ಖಾಸಗಿ	18	14	03	16.99
ಬೀಡಿ ಕಟ್ಟುವುದು	30	15	01	22.33
ವ್ಯಾಪಾರ	12	06	02	09.70
ಗೋಡಂಬಿ ಕಾರ್ಖಾನೆ	22	11	02	16.99
ಮನೆವಾರ್ತೆ	62	39	11	54.36

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 4.10ರಲ್ಲಿ ವಿವರಿಸಿರುವಂತೆ, ಗ್ರಾಮ ಪಂಚಾಯತ್‌ನ ಇಪ್ಪತ್ತಾರು, ತಾಲೂಕು ಪಂಚಾಯತ್‌ನ ಹದಿನಾಲ್ಕು ಮಂದಿ ಮತ್ತು ಜಿಲ್ಲಾ ಪಂಚಾಯತ್‌ನ ಆರು ಮಂದಿ ಮಹಿಳಾ ಪ್ರತಿನಿಧಿಗಳು ಕೃಷಿ ಮತ್ತು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದು, ಕೂಲಿ ಕೆಲಸಗಳಲ್ಲಿ ಗ್ರಾಮ ಪಂಚಾಯತ್‌ನ ನಲುವತ್ತೊಂದು ಮಂದಿ, ತಾಲೂಕು ಪಂಚಾಯತ್‌ನ ಐವರು ಮತ್ತು ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮ ಪಂಚಾಯತ್‌ನ ಅರುವತ್ತೆರಡು ಮಂದಿ, ತಾಲೂಕು ಪಂಚಾಯತ್‌ನ ಮೂವತ್ತೊಂಬತ್ತು ಮಂದಿ ಮತ್ತು ಜಿಲ್ಲಾ ಪಂಚಾಯತ್‌ನ ಹನ್ನೊಂದು ಮಂದಿ ಮಹಿಳಾ ಪ್ರತಿನಿಧಿಗಳು ಮನೆವಾರ್ತೆಗಳನ್ನು ನೋಡಿಕೊಳ್ಳುತ್ತಿದ್ದರೆ, ಖಾಸಗಿ ವೃತ್ತಿಗಳಲ್ಲಿ ಗ್ರಾಮ ಪಂಚಾಯತ್‌ನ ಹದಿನೆಂಟು, ತಾಲೂಕು ಪಂಚಾಯತ್‌ನ ಹದಿನಾಲ್ಕು ಮತ್ತು ಜಿಲ್ಲಾ ಪಂಚಾಯತ್‌ನ ಮೂವರು ಮಹಿಳಾ ಪ್ರತಿನಿಧಿಗಳು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಗ್ರಾಮ ಪಂಚಾಯತ್‌ನ ಮೂವತ್ತು, ತಾಲೂಕು ಪಂಚಾಯತ್‌ನ ಹದಿನೈದು ಮತ್ತು ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಗಳು ಬೀಡಿ ಕಟ್ಟುವುದರಲ್ಲಿ ನಿರತರಾಗಿದ್ದಾರೆ. ಗ್ರಾಮ ಪಂಚಾಯತ್‌ನ ಹನ್ನೆರಡು, ತಾಲೂಕು ಪಂಚಾಯತ್‌ನ ಆರು ಮತ್ತು ಜಿಲ್ಲಾ ಪಂಚಾಯತ್‌ನ ಇಬ್ಬರು ಪ್ರತಿನಿಧಿಗಳು ವ್ಯಾಪಾರದಲ್ಲಿ ಹಾಗೂ ಗ್ರಾಮ ಪಂಚಾಯತ್‌ನ ಇಪ್ಪತ್ತೆರಡು, ತಾಲೂಕು ಪಂಚಾಯತ್‌ನ ಹನ್ನೊಂದು ಮತ್ತು ಜಿಲ್ಲಾ ಪಂಚಾಯತ್‌ನ ಇಬ್ಬರು ಮಹಿಳಾ ಪ್ರತಿನಿಧಿಗಳು ಗೋಡಂಬಿ ಕಾರ್ಖಾನೆಗಳಲ್ಲಿ ದುಡಿಯುತ್ತಿರುವುದು ಕಂಡುಬಂದಿರುತ್ತದೆ.

ಉಡುಪಿ ಜಿಲ್ಲೆಗೆ ಸಂಬಂಧಪಟ್ಟಂತೆ ಸದಸ್ಯರನ್ನು ಸಂದರ್ಶಿಸಿದಾಗ ಜನಪ್ರತಿನಿಧಿಗಳ ಉದ್ಯೋಗವನ್ನು ವಿಶ್ಲೇಷಣೆಗೊಳಪಡಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಸೇವಾ ಭದ್ರತೆ ಇಲ್ಲದ ಹಾಗೂ ಕಡಿಮೆ ಆದಾಯವನ್ನು ತರುವಂತಹ ಖಾಸಗಿ ಕ್ಷೇತ್ರಗಳಲ್ಲಿ ಜೀವನ ನಿರ್ವಹಣೆಗಾಗಿ ಉದ್ಯೋಗವನ್ನು ನಿಭಾಯಿಸುತ್ತಿರುವುದು ಕಂಡು ಬರುತ್ತದೆ. ಜನಪ್ರತಿನಿಧಿಗಳಾಗಿ ಆಯ್ಕೆಯಾದ ನಂತರವೂ ಅವರುಗಳ ಆರ್ಥಿಕ ಮಟ್ಟದಲ್ಲಿ ಮತ್ತು ಜೀವನಕ್ರಮದಲ್ಲಿ ಹೆಚ್ಚಿನ ಬದಲಾವಣೆಗಳು ಕಂಡುಬಂದಿರುವುದಿಲ್ಲ.

ಮಹಿಳೆ ತನ್ನ ಕೌಟುಂಬಿಕ ನಿರ್ವಹಣಾ ಕಾರ್ಯವನ್ನು ನಿರ್ವಹಿಸುವ ಜೊತೆಯಲ್ಲಿ ಕುಟುಂಬದ ಆರ್ಥಿಕ ಅವಶ್ಯಕತೆಯನ್ನು ಪೂರೈಸಲು ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದರೂ ಸಹ ಕೌಟುಂಬಿಕ ನಿರ್ವಹಣೆಯಲ್ಲಿ ಅವಳ ಪಾಲನ್ನು ಗಣನೀಯವೆಂದು ಎಲ್ಲಿಯೂ ಪರಿಗಣಿಸಲ್ಪಡುವುದಿಲ್ಲ. ಇದಕ್ಕೆ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆ ಮಹಿಳೆ ಉನ್ನತ ಉದ್ಯೋಗವನ್ನು ಹೊಂದಿದ್ದರೂ ಅವರನ್ನು ಸಮಾನವಾಗಿ ಪರಿಗಣಿಸದಿರುವುದರಿಂದ ಹಾಗೂ ಎಲ್ಲದರಲ್ಲೂ ಹೊರಗಿರಿಸಿರುವುದೇ ಮೂಲ ಕಾರಣವಾಗಿರುತ್ತದೆ. ಮಹಿಳೆಯ ಯಶಸ್ಸನ್ನು ಸಮಾಜ ಗಣನೀಯ ಸಾಧನೆ ಎಂಬುದಾಗಿ ಇಂದಿಗೂ ಪರಿಗಣಿಸದೇ ಇರುವುದು ವಿಪರ್ಯಾಸವೇ ಸರಿ ಎಂಬುದಾಗಿ ರಾಕೇಶ್ ಕೆ. ಸಿಂಗ್‌ರವರು ತಮ್ಮ ಅಧ್ಯಯನದಲ್ಲಿ ಕಂಡುಕೊಂಡ ಫಲಿತವು ಪ್ರಸಕ್ತ ಅಧ್ಯಯನದಲ್ಲಿಯೂ ಕಾಣಸಿಗುತ್ತದೆ[35].

ನಿವೇಶನದ ವಿವರ

ಮಹಿಳಾ ಪ್ರತಿನಿಧಿಗಳ ಹೆಸರಲ್ಲಿ ನಿವೇಶನ ಇದೆಯೇ ಎಂದು ಪ್ರಶ್ನಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಗ್ರಾಮ ಪಂಚಾಯತ್‌ನ ತೊಂಬತ್ತಾರು, ತಾಲೂಕು ಪಂಚಾಯತ್‌ನ ನಲುವತ್ತು ಮತ್ತು ಜಿಲ್ಲಾ ಪಂಚಾಯತ್‌ನ ಎಂಟು ಮಹಿಳಾ ಪ್ರತಿನಿಧಿಗಳು ಇಲ್ಲವೆಂದು ಉತ್ತರಿಸಿರುತ್ತಾರೆ. ಗ್ರಾಮ ಪಂಚಾಯತ್‌ನ ನಲುವತ್ತಾರು, ತಾಲೂಕು ಪಂಚಾಯತ್‌ನ ಹನ್ನೊಂದು ಮತ್ತು ಜಿಲ್ಲಾ ಪಂಚಾಯತ್‌ನ ಐದು ಮಹಿಳಾ ಪ್ರತಿನಿಧಿಗಳು ಇದೆ ಎಂದು ಉತ್ತರಿಸಿರುತ್ತಾರೆ.

ಕೋಷ್ಟಕ – 4.11

ನಿವೇಶನದ ವಿವರ

ನಿವೇಶನದ ವಿವರ	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು
ನಿವೇಶನ ಇದೆ	46	11	05
ನಿವೇಶನ ಇಲ್ಲ	96	40	08
ಒಟ್ಟು	**142**	**51**	**13**
ನಿವೇಶನದ ವಿಸ್ತೀರ್ಣ			
5 ಸೆಂಟ್ಸ್ ಗಿಂತ ಕಡಿಮೆ	13	03	0
6 ರಿಂದ 10 ಸೆಂಟ್ಸ್	10	02	0
11 ರಿಂದ 15 ಸೆಂಟ್ಸ್	04	0	0
16 ರಿಂದ 20 ಸೆಂಟ್ಸ್	03	01	0
21 ರಿಂದ 25 ಸೆಂಟ್ಸ್	0	01	02
26 ಸೆಂಟ್ಸ್‌ಗಿಂತ ಹೆಚ್ಚು	16	04	03
ಒಟ್ಟು	**46**	**11**	**05**

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಇದರ ಮುಂದಿನ ವಿಶ್ಲೇಷಣೆಯ ಪ್ರಕಾರ ಹೌದಾದರೆ, ನಿಮ್ಮ ಹೆಸರಿನಲ್ಲಿ ಇರುವ ನಿವೇಶನದ ವಿಸ್ತೀರ್ಣ ಎಷ್ಟು? ಎಂದು ಪ್ರಶ್ನಿಸಿದಾಗ ಗ್ರಾಮ ಪಂಚಾಯತ್‌ನ ಹದಿನಾರು, ತಾಲೂಕು ಪಂಚಾಯತ್‌ನ ನಾಲ್ಕು ಮತ್ತು ಜಿಲ್ಲಾ ಪಂಚಾಯತ್‌ನ ಮೂರು ಮಹಿಳಾ ಪ್ರತಿನಿಧಿಗಳ ಬಳಿ 26 ಸೆಂಟ್ಸ್‌ಗಿಂತ ಹೆಚ್ಚು ನಿವೇಶನವಿದೆ. ಗ್ರಾಮ ಪಂಚಾಯತ್‌ನ ಹದಿಮೂರು, ತಾಲೂಕು ಪಂಚಾಯತ್‌ನ ಮೂರು ಮಹಿಳಾ ಪ್ರತಿನಿಧಿಗಳ ಬಳಿ 5 ಸೆಂಟ್ಸ್‌ಗಿಂತ ಕಡಿಮೆ ನಿವೇಶನವಿದ್ದು, ಗ್ರಾಮ ಪಂಚಾಯತ್‌ನ ಹತ್ತು, ತಾಲೂಕು ಪಂಚಾಯತ್‌ನ ಇಬ್ಬರು ಮಹಿಳಾ ಪ್ರತಿನಿಧಿಗಳು 6ರಿಂದ 10 ಸೆಂಟ್ಸ್ ವಿಸ್ತೀರ್ಣದ ಭೂಮಿಯನ್ನು ಹೊಂದಿದ್ದಾರೆ. ಗ್ರಾಮ ಪಂಚಾಯತ್‌ನ ನಾಲ್ಕು ಮಹಿಳಾ ಪ್ರತಿನಿಧಿಗಳ ಬಳಿ 11ರಿಂದ 15 ಸೆಂಟ್ಸ್ ಜಾಗವಿದ್ದು, 16ರಿಂದ 20 ಸೆಂಟ್ಸ್ ವಿಸ್ತೀರ್ಣದ ಪ್ರದೇಶವನ್ನು ಹೊಂದಿರುವ ಗ್ರಾಮ ಪಂಚಾಯತ್‌ನ ಮೂರು ಮತ್ತು ತಾಲೂಕು ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಯಿದ್ದಾರೆ. ಜಿಲ್ಲಾ ಪಂಚಾಯತ್‌ನ ಇಬ್ಬರು ಮತ್ತು ತಾಲೂಕು ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಗಳು 21ರಿಂದ 25 ಸೆಂಟ್ಸ್ ನಿವೇಶನವನ್ನು ಹೊಂದಿರುವುದು ಕಂಡುಬಂದಿರುತ್ತದೆ. (ಕೋಷ್ಟಕ 4.11)

ಮಾಹಿತಿದಾರರ ಮನೆಯ ಒಡೆತನ ಮತ್ತು ಸ್ವರೂಪ

ವ್ಯಕ್ತಿ ಹೊಂದಿರುವ ಮನೆ ಮತ್ತು ಅಲ್ಲಿರುವ ಸೌಲಭ್ಯಗಳು ಅವರ ಆರ್ಥಿಕ ಸ್ಥಿತಿಗತಿಗಳನ್ನು ಸೂಚಿಸುತ್ತವೆ ಮತ್ತು ಸಾಮಾಜಿಕ ಪ್ರತಿಷ್ಠೆಯೊಂದಿಗೆ ನೇರ ಸಂಪರ್ಕವನ್ನು ಹೊಂದಿರುತ್ತದೆ. ಈ ಚೌಕಟ್ಟಿನಲ್ಲಿ ಮಹಿಳಾ ಪ್ರತಿನಿಧಿಗಳು ಹೊಂದಿರುವ ಸ್ಥಿರ ಮತ್ತು ಚರಾಸ್ತಿಗಳ ಬಗ್ಗೆ ಕೂಲಂಕುಷವಾಗಿ ವಿಮರ್ಶಿಸಿ ಮಾಹಿತಿಗಳನ್ನು ಕಲೆ ಹಾಕಲಾಗಿರುತ್ತದೆ. ಸಂದರ್ಶನದ ಸಂದರ್ಭದಲ್ಲಿ ಮಹಿಳಾ ಜನಪ್ರತಿನಿಧಿಗಳು ಸ್ವಂತ ಮನೆಯನ್ನು ಹೊಂದಿದ್ದಾರೆಯೇ ಎಂಬ ಪ್ರಶ್ನೆಗೆ ಆದ್ಯತೆಯನ್ನು ನೀಡಲಾಗಿತ್ತು.

ಕೋಷ್ಟಕ – 4.12

ಮಾಹಿತಿದಾರರ ಮನೆಯ ಒಡೆತನ ಮತ್ತು ಸ್ವರೂಪ

ಮನೆಯ ಒಡೆತನ	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು
ಸ್ವಂತ ಮನೆ	120	32	11
ಸ್ವಂತ ಮನೆ ಇಲ್ಲ	22	19	02
ಒಟ್ಟು	**142**	**51**	**13**
ಮನೆಯ ಸ್ವರೂಪ			
ಹೆಂಚಿನ ಮನೆ	77	18	04
ಮಾಳಿಗೆ ಮನೆ	08	02	0
ಆರ್.ಸಿ.ಸಿ	35	12	07
ಒಟ್ಟು	**120**	**32**	**11**

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಕೋಷ್ಟಕ 4.12ರ ಪ್ರಕಾರ ಮನೆಯ ಸ್ವರೂಪವನ್ನು ವಿಶ್ಲೇಷಿಸಿದಾಗ ಗ್ರಾಮ ಪಂಚಾಯತ್‌ನ ಎಪ್ಪತ್ತೇಳು, ತಾಲೂಕು ಪಂಚಾಯತ್‌ನ ಹದಿನೆಂಟು ಮತ್ತು ಜಿಲ್ಲಾ ಪಂಚಾಯತ್‌ನ ನಾಲ್ವರು ಮಹಿಳಾ ಪ್ರತಿನಿಧಿಗಳು ಹೆಂಚಿನ ಮನೆಯನ್ನು, ಗ್ರಾಮ ಪಂಚಾಯತ್‌ನ ಮೂವತ್ತೈದು, ತಾಲೂಕು ಪಂಚಾಯತ್‌ನ ಹನ್ನೆರಡು ಮತ್ತು ಜಿಲ್ಲಾ ಪಂಚಾಯತ್‌ನ ಏಳು ಮಹಿಳಾ ಪ್ರತಿನಿಧಿಗಳು ಆರ್.ಸಿ.ಸಿ ಮನೆಯನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಇದನ್ನು ಅವಲೋಕಿಸಿದಾಗ ಯಾವೊಬ್ಬ ಮಹಿಳಾ ಪ್ರತಿನಿಧಿಯು ಇಂದು ಮಣ್ಣಿನ ಮನೆಯನ್ನು ಹೊಂದಿಲ್ಲದಿರುವುದು ಹಾಗೂ ಹೆಚ್ಚಿನವರು ಹೆಂಚಿನ ಕಚ್ಚಾ ಮನೆಯನ್ನು ಹೊಂದಿರುವುದು ಕಂಡುಬಂದಿರುತ್ತದೆ. ಇನ್ನೂ ಸಹ ಮನೆಯ ಮಾಲಕತ್ವವನ್ನು ಮಹಿಳಾ ಪ್ರತಿನಿಧಿಗಳು ಹೊಂದಿರದೆ(98%), ಆಕೆಯ ಪೋಷಕರು, ಗಂಡ ಅಥವಾ ಹಿರಿಯ ಸದಸ್ಯರ ಹೆಸರಿನಲ್ಲಿ ನೋಂದಾಯಿಸಿರುವುದನ್ನು ಗಮನಿಸಬಹುದು. ಮನೆ ಮತ್ತು ಸ್ಥಿರಾಸ್ತಿ ಕೆಲವೇ ಮಹಿಳಾ ಪ್ರತಿನಿಧಿಯ(2%) ಹೆಸರಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪರಿಶೀಲಿಸಿದಾಗ ಕಂಡುಬಂದಿದ್ದು, ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ಪುರುಷ ಪ್ರಧಾನ ವ್ಯವಸ್ಥೆಯು ಉಡುಪಿ ಜಿಲ್ಲೆಯಲ್ಲಿಯೂ ಗೋಚರಿಸಿರುವುದು ಒಂದು ಗಮನಾರ್ಹ ಅಂಶವಾಗಿರುತ್ತದೆ[36].

ಸರಕಾರಿ ಯೋಜನೆಗಳಿಂದ ವಸತಿ ವ್ಯವಸ್ಥೆ

ಸರಕಾರದ ವಸತಿ ಯೋಜನೆಗಳನ್ನು ಗ್ರಾಮ ಪಂಚಾಯತ್‌ನ ಮೂವತ್ತೈದು, ತಾಲೂಕು ಪಂಚಾಯತ್‌ನ ಐವರು ಮತ್ತು ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಗಳು ಪಡೆದಿರುತ್ತಾರೆ ಹಾಗೂ ಗ್ರಾಮ ಪಂಚಾಯತ್‌ನ ಒಂದು ನೂರ ಏಳು, ತಾಲೂಕು ಪಂಚಾಯತ್‌ನ ನಲುವತ್ತಾರು ಮತ್ತು ಜಿಲ್ಲಾ ಪಂಚಾಯತ್‌ನ ಹನ್ನೆರಡು ಮಹಿಳಾ ಪ್ರತಿನಿಧಿಗಳು ಸರಕಾರದ ಯಾವುದೇ ಯೋಜನೆಗಳಿಂದ ವಸತಿ ಸೌಲಭ್ಯಗಳನ್ನು ಹೊಂದಿರುವುದಿಲ್ಲ.

ಕೋಷ್ಟಕ – 4.13

ಸರಕಾರಿ ಯೋಜನೆಗಳಿಂದ ವಸತಿ ವ್ಯವಸ್ಥೆ

ಸರಕಾರಿ ಯೋಜನೆ	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು
ಸರಕಾರಿ ಯೋಜನೆಗಳ ಫಲಾನುಭವಿಗಳು	35	05	01
ಸರಕಾರಿ ಯೋಜನೆಗಳ ಫಲಾನುಭವಿಗಳಲ್ಲ	107	46	12
ಒಟ್ಟು	**142**	**51**	**13**
ಫಲಾನುಭವಿಗಳು			
ಇಂದಿರಾ ಆವಾಸ್	07	0	0
ಆಶ್ರಯ ಯೋಜನೆ	17	02	0
ಬಸವ ವಸತಿ ಯೋಜನೆ	11	03	01

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಇದರ ಮುಂದಿನ ಭಾಗವಾಗಿ ಈ ವಸತಿ ಯೋಜನೆಯ ಫಲಾನುಭಾವಿಗಳು ಯಾವ ಯೋಜನೆಗಳನ್ನು ಪಡೆದಿದ್ದೀರಿ ಎಂದು ಪ್ರಶ್ನಿಸಿದಾಗ ಕೋಷ್ಟಕ 4.13ರ ಪ್ರಕಾರ ಗ್ರಾಮ ಪಂಚಾಯತ್‌ನ ಹದಿನೇಳು ಮತ್ತು ತಾಲೂಕು ಪಂಚಾಯತ್‌ನ ಇಬ್ಬರು ಮಹಿಳಾ ಪ್ರತಿನಿಧಿಗಳು ಆಶ್ರಯ ಯೋಜನೆ, ಗ್ರಾಮ ಪಂಚಾಯತ್‌ನ ಹನ್ನೊಂದು, ತಾಲೂಕು ಪಂಚಾಯತ್‌ನ ಮೂವರು ಮತ್ತು ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿ ಬಸವ ವಸತಿ ಯೋಜನೆ, ಗ್ರಾಮ ಪಂಚಾಯತ್‌ನ ಏಳು ಮಹಿಳಾ ಪ್ರತಿನಿಧಿಗಳು ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಾಗಿರುತ್ತಾರೆ.

ಮಾಹಿತಿದಾರರ ಮನೆಯಲ್ಲಿರುವ ಸೌಕರ್ಯಗಳು

ಮಹಿಳಾ ಪ್ರತಿನಿಧಿಗಳ ಪರಿಣಾಮಕಾರಿ ರಾಜಕೀಯ ಸಹಭಾಗಿತ್ವದಲ್ಲಿ ಕೌಟುಂಬಿಕ ಸ್ಥಿತಿಗತಿಗಳು ಹಾಗೂ ಮನೆಯಲ್ಲಿರುವ ಸೌಕರ್ಯಗಳು ಪ್ರಭಾವ ಬೀರಿರುವ ಬಗ್ಗೆ ಪ್ರಶ್ನಿಸಿದಾಗ ಕೋಷ್ಟಕ 4.14ರ ವಿಶ್ಲೇಷಣೆಯ ಪ್ರಕಾರ ಗ್ರಾಮ ಪಂಚಾಯತ್‌ನ 122, ತಾಲೂಕು ಪಂಚಾಯತ್‌ನ 49 ಮತ್ತು ಜಿಲ್ಲಾ ಪಂಚಾಯತ್‌ನ 13, ಮಹಿಳಾ ಪ್ರತಿನಿಧಿಗಳು ದೂರದರ್ಶನವನ್ನು, ಗ್ರಾಮ ಪಂಚಾಯತ್‌ನ 116, ತಾಲೂಕು ಪಂಚಾಯತ್‌ನ 46 ಮತ್ತು ಜಿಲ್ಲಾ ಪಂಚಾಯತ್‌ನ 12, ಮಹಿಳಾ ಪ್ರತಿನಿಧಿಗಳು ಗ್ರೈಂಡರ್/ಮಿಕ್ಸಿಯನ್ನು, ಗ್ರಾಮ ಪಂಚಾಯತ್‌ನ 42, ತಾಲೂಕು ಪಂಚಾಯತ್‌ನ 32, ಮತ್ತು ಜಿಲ್ಲಾ ಪಂಚಾಯತ್‌ನ ಹತ್ತು ಮಹಿಳಾ ಪ್ರತಿನಿಧಿಗಳು ರೆಫ್ರಿಡ್ಜರೇಟರ್‌ನ್ನು, ಗ್ರಾಮ ಪಂಚಾಯತ್‌ನ 16, ತಾಲೂಕು ಪಂಚಾಯತ್‌ನ 38 ಮತ್ತು ಜಿಲ್ಲಾ ಪಂಚಾಯತ್‌ನ ಎಂಟು ಮಹಿಳಾ ಪ್ರತಿನಿಧಿಗಳು ಕಂಪ್ಯೂಟರನ್ನು, ಗ್ರಾಮ ಪಂಚಾಯತ್‌ನ 14, ತಾಲೂಕು ಪಂಚಾಯತ್‌ನ 36 ಮತ್ತು ಜಿಲ್ಲಾ ಪಂಚಾಯತ್‌ನ ಒಂಬತ್ತು ಮಹಿಳಾ ಪ್ರತಿನಿಧಿಗಳು ವಾಷಿಂಗ್ ಮೆಷಿನ್, ಗ್ರಾಮ ಪಂಚಾಯತ್‌ನ 13, ತಾಲೂಕು ಪಂಚಾಯತ್‌ನ 27, ಮತ್ತು ಜಿಲ್ಲಾ ಪಂಚಾಯತ್‌ನ ಏಳು ಮಹಿಳಾ ಪ್ರತಿನಿಧಿಗಳು ಇನ್‌ವರ್ಟರ್ ಹೊಂದಿರುವುದನ್ನು ಅಧ್ಯಯನ ಕ್ಷೇತ್ರವನ್ನು ಸಂದರ್ಶಿಸಿದಾಗ ಕಂಡು ಬಂದಿರುತ್ತದೆ.

ಕೋಷ್ಟಕ – 4.14

ಮನೆಯಲ್ಲಿರುವ ಸೌಕರ್ಯಗಳು

ಮನೆಯಲ್ಲಿ ಇರುವ ಸೌಕರ್ಯ	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು
ವಾಷಿಂಗ್ ಮೆಷೀನ್	14	36	09
ಗ್ರೈಂಡರ್/ಮಿಕ್ಸಿ	116	47	12
ಇನ್‌ವರ್ಟರ್	13	27	07
ರೆಫ್ರಿಡ್ಜರೇಟರ್	42	32	10
ಕಂಪ್ಯೂಟರ್	16	38	08
ದೂರದರ್ಶನ	122	49	13
ದೂರವಾಣಿ	105	41	13

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಆಧುನಿಕ ವಿದ್ಯುನ್ಮಾನ ಸಾಧನಗಳಾದ ದೂರದರ್ಶನವನ್ನು ಹೆಚ್ಚಿನವರು ಹೊಂದಿದ್ದು, ಸಾಮಾನ್ಯ ಜನಜೀವನವನ್ನು ನಡೆಸಲು ಸಾಧ್ಯವಾಗುವಂತಹ ಸೌಕರ್ಯಗಳು ಹೆಚ್ಚಿನ ಮಹಿಳಾ ಪ್ರತಿನಿಧಿಗಳ ಮನೆಯಲ್ಲಿ ಕಂಡುಬಂದಿವೆ. ಆಧುನಿಕ ಸಂವಹನ ಮಾಧ್ಯಮಗಳಾದ ಗಣಕಯಂತ್ರ ಹಾಗೂ ಅಂತರ್ಜಾಲ ವ್ಯವಸ್ಥೆಯನ್ನು ಗ್ರಾಮಪಂಚಾಯತ್‌ನ 16 ಮಹಿಳಾ ಸದಸ್ಯರು ಹೊಂದಿರುವುದು ಜನಪ್ರತಿನಿಧಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಆಧುನಿಕ ತಂತ್ರಜ್ಞಾನದ ಉಪಯೋಗದ ಬಗ್ಗೆ ಒಲವನ್ನು ತೋರುವ ಪ್ರಕ್ರಿಯೆ ನಿಧನವಾಗಿ ಗ್ರಾಮೀಣ ಮಟ್ಟದಲ್ಲಿ ಜಾಗೃತಿಯನ್ನು ಮೂಡಿಸುವುದು ಸೂಚಿಸುತ್ತದೆ. ಇತರ ಸದಸ್ಯರಲ್ಲಿ ಮಾತನಾಡಿದಾಗ ಅವರುಗಳು ಕೂಡಾ ಗಣಕಯಂತ್ರದ ಉಪಯೋಗವನ್ನು ಮುಂದೆ ಬಳಸಿಕೊಳ್ಳಲು ಇಚ್ಛಿಸುತ್ತೇವೆ ಎಂಬ ಅಭಿಪ್ರಾಯವು ಗ್ರಾಮಾಂತರ ಪ್ರದೇಶಗಳಲ್ಲಿಯೂ ಆಧುನಿಕ ತಂತ್ರಜ್ಞಾನದ ಬಳಕೆಯ ಬಗೆಗೆ ಜನರಲ್ಲಿ ಹೆಚ್ಚು ಜಾಗೃತಿ ಮೂಡಿಸಿರುವುದನ್ನು ಸೂಚಿಸುತ್ತದೆ. ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ನ ಹೆಚ್ಚಿನ ಸದಸ್ಯರು ಸುಶಿಕ್ಷಿತರಾಗಿದ್ದು ಮಧ್ಯಮ ವರ್ಗದ ಕುಟುಂಬಗಳಿಗೆ ಸೇರಿದವರಾಗಿದ್ದು ಅವರುಗಳ ಮನೆಯಲ್ಲಿನ ಮಕ್ಕಳು ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದು ತಮ್ಮ ಮನೆಗಳಲ್ಲಿ ಹೊಂದಿರುವ ಗಣಕಯಂತ್ರ ಮತ್ತು ಅಂತರ್ಜಾಲ ವ್ಯವಸ್ಥೆಯನ್ನು ಜನಪ್ರತಿನಿಧಿಯಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಬಳಸುವುದರಲ್ಲಿ ಸಫಲರಾಗಿರುತ್ತಾರೆ. ಈ ಅಂಶವು ಭಾರತೀಯ ಮಹಿಳೆಯರು ಅದರಲ್ಲಿಯೂ ಗ್ರಾಮೀಣ ಪ್ರದೇಶದಲ್ಲಿ ವಾಸಿಸುರುವಂತಹ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಮಹಿಳಾ ಪ್ರತಿನಿಧಿಗಳು ಆಧುನಿಕೀಕರಣ ಪ್ರಕ್ರಿಯೆಗೆ ತಮ್ಮನ್ನು ಒಡ್ಡಿಕೊಂಡಿರುವ ಅಂಶವನ್ನು ಪುಷ್ಟೀಕರಿಸುತ್ತದೆ. ಇದರ ಮುಂದಿನ ಭಾಗವಾಗಿ ಯಾವುದಾದರೂ ವಾಹನವನ್ನು ಹೊಂದಿದ್ದೀರಾ ಎಂದು ಕೇಳಿದಾಗ ಗ್ರಾಮ ಪಂಚಾಯತ್‌ನ 60, ತಾಲೂಕು ಪಂಚಾಯತ್‌ನ 28 ಮತ್ತು ಜಿಲ್ಲಾ ಪಂಚಾಯತ್‌ನ 11 ಮಹಿಳಾ ಪ್ರತಿನಿಧಿಗಳು ಹೌದು ಎಂದು, ಗ್ರಾಮ ಪಂಚಾಯತ್‌ನ 82, ತಾಲೂಕು ಪಂಚಾಯತ್‌ನ 23 ಮತ್ತು ಜಿಲ್ಲಾ ಪಂಚಾಯತ್‌ನ ಇಬ್ಬರು ಮಹಿಳಾ ಪ್ರತಿನಿಧಿಗಳು ಇಲ್ಲವೆಂದು ಉತ್ತರಿಸಿರುತ್ತಾರೆ. ಇದನ್ನು ವಿಶ್ಲೇಷಿಸಿದಾಗ ಗ್ರಾಮ ಪಂಚಾಯತ್‌ನ 41, ತಾಲೂಕು ಪಂಚಾಯತ್‌ನ 23 ಮತ್ತು ಜಿಲ್ಲಾ ಪಂಚಾಯತ್‌ನ ಆರು ಮಹಿಳಾ ಪ್ರತಿನಿಧಿಗಳು ದ್ವಿಚಕ್ರ ವಾಹನವನ್ನು ಹೊಂದಿರುವುದು ಕಂಡು ಬಂದಿರುತ್ತದೆ. ಗ್ರಾಮ ಪಂಚಾಯತ್‌ನ 16, ತಾಲೂಕು ಪಂಚಾಯತ್‌ನ ಹತ್ತು ಮತ್ತು ಜಿಲ್ಲಾ ಪಂಚಾಯತ್‌ನ ಏಳು ಮಹಿಳಾ ಪ್ರತಿನಿಧಿಗಳು ಕಾರನ್ನು ಮತ್ತು ಗ್ರಾಮ ಪಂಚಾಯತ್‌ನ ಮೂರು ಮಹಿಳಾ ಪ್ರತಿನಿಧಿಗಳು ತ್ರಿಚಕ್ರ ವಾಹನವನ್ನು ಹೊಂದಿರುತ್ತಾರೆ. ಗ್ರಾಮ ಪಂಚಾಯತ್‌ನ ಸದಸ್ಯರನ್ನು ಅವಲೋಕಿಸಿದಾಗ ಕೇವಲ ಮೂವರು ಮಹಿಳಾ ಪ್ರತಿನಿಧಿಗಳು ಮಾತ್ರ ಸ್ವಂತ ವಾಹನವನ್ನು ಹೊಂದಿದ್ದು; ಸ್ವತಂತ್ರವಾಗಿ ಉಪಯೋಗಿಸುವುದು ಕಂಡುಬಂದಿರುತ್ತದೆ. ಉಳಿದವರು ತಮ್ಮ ಮನೆಯ ಪುರುಷ ಸದಸ್ಯರ ಸಹಕಾರವಿಲ್ಲದೆ ಕ್ಷೇತ್ರದ ದೂರದ ಪ್ರದೇಶಗಳಿಗೆ ಸಂದರ್ಶಿಸಲು ಅವಕಾಶವಾಗುತ್ತಿರಲಿಲ್ಲ.

ಇದಕ್ಕಾಗಿ ಅವರು ಖಾಸಗಿ ಸಾರಿಗೆ ಸಂಪರ್ಕವನ್ನು ಅವಲಂಬಿಸುತ್ತಿರುವುದು ಕಂಡುಬಂದಿರುತ್ತದೆ. ಸ್ವಂತ ವಾಹನ ಇಲ್ಲದೇ ಇರುವುದು ಅವರುಗಳು ಜನಪ್ರತಿನಿಧಿಗಳಾಗಿ ಸಮರ್ಪಕವಾಗಿ ಕಾರ್ಯನಿರ್ವಹಿಸಲು ದೊಡ್ಡ ತಡೆಯಾಗಿರುವುದು ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳಲ್ಲಿ ಒಂದಾಗಿರುತ್ತದೆ. ತಾಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್‌ನ ಹೆಚ್ಚಿನ ಸದಸ್ಯರು ದ್ವಿಚಕ್ರ ಅಥವಾ ಸ್ವಂತ ಕಾರುಗಳನ್ನು ಹೊಂದಿದ್ದು ಕ್ಷೇತ್ರವನ್ನು ಸಂದರ್ಶಿಸಲು ಮತ್ತು ಮತದಾರರ ಸಮಸ್ಯೆಗಳಿಗೆ ಪೂರಕವಾಗಿ ಸ್ಪಂದಿಸಲು ಅವಕಾಶ ಮಾಡಿಕೊಟ್ಟಿರುವುದು ಎದ್ದು ಕಂಡುಬಂದ ಅಂಶವಾಗಿರುತ್ತದೆ. ಆರ್ಥಿಕ ಸುಸ್ಥಿತಿ ಹೊಂದಿದ ಕುಟುಂಬಕ್ಕೆ ಸೇರಿದ ಮಹಿಳೆಯರು ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ ಎಂಬ ಇತರ ಅಧ್ಯಯನಗಳ ಫಲಿತವು ಉಡುಪಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಪಂಚಾಯತ್‌ನ ಮೇಲ್‌ಸ್ತರದ ಆಡಳಿತದಲ್ಲಿರುವ ಮಹಿಳಾ ಪ್ರತಿನಿಧಿಗಳೊಂದಿಗೆ ತುಲನೆಯಾಗಿರುವುದು ಕಂಡುಬರುತ್ತದೆ[37].

ಮಾಹಿತಿದಾರರಿಗೆ ಸಿಕ್ಕಿರುವ ಸರಕಾರಿ ಸೌಲಭ್ಯಗಳ ವಿವರ

ಸರಕಾರದ ಯೋಜನೆಗಳ ಫಲಾನುಭವಿಗಳು ಹೆಚ್ಚಾಗಿ ದೊರಕಿರುವುದಿಲ್ಲ. ಗ್ರಾಮ ಪಂಚಾಯತ್‌ನ 45, ತಾಲೂಕು ಪಂಚಾಯತ್‌ನ 6 ಮತ್ತು ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಗಳು ಸರ್ಕಾರದ ಯೋಜನೆಯ ಫಲಾನುಭವಿಗಳಾಗಿರುತ್ತಾರೆ. ಗ್ರಾಮ ಪಂಚಾಯತ್‌ನ 97, ತಾಲೂಕು ಪಂಚಾಯತ್‌ನ 45 ಮತ್ತು ಜಿಲ್ಲಾ ಪಂಚಾಯತ್‌ನ 12 ಮಹಿಳಾ ಪ್ರತಿನಿಧಿಗಳು ಸರ್ಕಾರದ ಯಾವುದೇ ಯೋಜನೆಯ ಫಲಾನುಭವಿಗಳಲ್ಲ.

ಕೋಷ್ಟಕ – 4.15

ಸರಕಾರಿ ಸೌಲಭ್ಯಗಳ ವಿವರ

ಸರಕಾರಿ ಸೌಲಭ್ಯಗಳ	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು
ಫಲಾನುಭವಿಗಳು	45	06	01
ಫಲಾನುಭವಿಗಳಲ್ಲ	97	45	12
ಒಟ್ಟು	**142**	**51**	**13**
ಯೋಜನೆಗಳ ಹೆಸರು			
ವಸತಿ ಯೋಜನೆ	37	05	01
ಆರೋಗ್ಯ ಯೋಜನೆ	03	0	0
ಪಿಂಚಣಿ ಯೋಜನೆ	05	0	0
ವಿಧವಾ ವೇತನ	02	01	0
ಇನ್ನಿತರ ಯೋಜನೆ	02	0	0

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಇದರ ಮುಂದಿನ ವಿಶ್ಲೇಷಣೆಯ ಪ್ರಕಾರ ಸರ್ಕಾರದ ಯಾವ ಯೋಜನೆಯ ಫಲಾನುಭವಿಗಳು? ಎಂದು ಪ್ರಶ್ನಿಸಿದಾಗ ಕೋಷ್ಟಕ 4.15ರ ಪ್ರಕಾರ ಗ್ರಾಮ ಪಂಚಾಯತ್‌ನ 37, ತಾಲೂಕು ಪಂಚಾಯತ್‌ನ ಐವರು ಮತ್ತು ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಗಳು ವಸತಿ ಯೋಜನೆ, ಗ್ರಾಮ ಪಂಚಾಯತ್‌ನ ಐವರು ಮಹಿಳಾ ಪ್ರತಿನಿಧಿಗಳು ಪಿಂಚಣಿ ಯೋಜನೆ, ಗ್ರಾಮ ಪಂಚಾಯತ್‌ನ ಮೂವರು ಮಹಿಳಾ ಪ್ರತಿನಿಧಿಗಳು ಆರೋಗ್ಯ ಯೋಜನೆ ಎಂದೂ, ಗ್ರಾಮ ಪಂಚಾಯತ್‌ನ ಇಬ್ಬರು ಮತ್ತು ತಾಲೂಕು ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಗಳು ವಿಧವಾ ವೇತನವೆಂದೂ, ಗ್ರಾಮ ಪಂಚಾಯತ್‌ನ ಇಬ್ಬರು ಮಹಿಳಾ ಪ್ರತಿನಿಧಿಗಳು ಇನ್ನಿತರ ಯೋಜನೆಗಳನ್ನು ಪಡೆದವರೆಂದೂ ತಿಳಿಸಿರುತ್ತಾರೆ. ಇದನ್ನು ಅವಲೋಕಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಸರ್ಕಾರದ ಯೋಜನೆಗಳ ಫಲಾನುಭವಿಗಳಾಗಿರುವುದಿಲ್ಲ ಎಂದು ಕಂಡುಬಂದಿರುತ್ತದೆ.

ಮಹಿಳೆಯರ ರಾಜಕೀಯ ಸಹಭಾಗಿತ್ವ

ವಿಕೇಂದ್ರೀಕರಣ ವ್ಯವಸ್ಥೆಯು ಪ್ರಜಾಪ್ರಭುತ್ವದ ತಳಹದಿಯಲ್ಲಿ ಪ್ರಮುಖವಾದ ಒಂದು ರಾಜಕೀಯ ಭಾಗವಹಿಸುವಿಕೆಯನ್ನು ವ್ಯಕ್ತಪಡಿಸುತ್ತದೆ. ಸಂವಿಧಾನದ 73 ಮತ್ತು 74ನೇ ತಿದ್ದುಪಡಿ ಕಾಯ್ದೆಯ ಪ್ರಕಾರ ಮಹಿಳೆಯರಿಗೆ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಮೀಸಲಾತಿ ಸ್ಥಾನಗಳನ್ನು ನೀಡಿ ಈಗಾಗಲೇ 2 ದಶಕಗಳು ಕಳೆದಿವೆ. ಇದರ ಮೂಲ ಉದ್ದೇಶವೇ ಮಹಿಳೆಯರಿಗೆ ಸಮಾಜದ ಎಲ್ಲಾ ವಲಯಗಳಲ್ಲಿಯೂ ಪುರುಷರ ಜೊತೆ ಸಮಾನತೆ ಮತ್ತು ಸಹಭಾಗಿತ್ವದ ಸಾಮಾಜಿಕ ನ್ಯಾಯವನ್ನು ನೀಡಿ ಅವರನ್ನು ಸಾಂಪ್ರದಾಯಿಕವಾದ, ಪಿತೃಪ್ರಧಾನವಾದ ಸಂಕೋಲೆಗಳಿಂದ ಮುಕ್ತರನ್ನಾಗಿ ಮಾಡಿ, ಸಮಾಜದ ಮುಖ್ಯ ವಾಹಿನಿಗೆ ತರುವುದಾಗಿತ್ತು[38]. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯವು ರಾಷ್ಟ್ರದಲ್ಲಿಯೇ ಮೊದಲೆನಿಸಿದ ರಾಜ್ಯವಾಗಿದೆ. 1993ರಲ್ಲಿ ಜಾರಿಗೆ ಬಂದ ಸಂವಿಧಾನದ 73ನೇ ತಿದ್ದುಪಡಿ ಕಾಯ್ದೆಗಿಂತ ಮೊದಲು 1983ರ ಕಾಯ್ದೆಯನ್ನು ಜಾರಿಗೊಳಿಸಿದಾಗ ಈ ಸಂಸ್ಥೆಗಳಿಗೆ ಚುನಾವಣೆ ನಡೆಸಿ ಅವುಗಳನ್ನು ಪುನರ್ ಸ್ಥಾಪಿಸಿದ ರಾಜ್ಯಗಳಲ್ಲಿ ಕರ್ನಾಟಕವೇ ಪ್ರಥಮ ರಾಜ್ಯವಾಗಿದೆ[39]. ಈ ಕಾಯ್ದೆಯ ಪ್ರಕಾರ ಶೇಕಡಾ 25ರಂತೆ ಮಹಿಳೆಯರಿಗೆ ಪಂಚಾಯತಿಗಳ ಎರಡೂ ಹಂತಗಳಲ್ಲಿ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಸ್ಥಾನಗಳನ್ನು ಕಾಯ್ದಿರಿಸಿದ ಮೊದಲ ರಾಜ್ಯ ಕರ್ನಾಟಕ[40]. ಇಲ್ಲಿ ಮಹಿಳೆಯರು ಗ್ರಾಮ, ತಾಲೂಕು ಮತ್ತು ಜಿಲ್ಲೆಗಳೆಂಬ ಭೇದವಿಲ್ಲದೆ ಪಂಚಾಯತ್‌ಗಳ ಎಲ್ಲಾ ಸ್ತರಗಳಲ್ಲಿ ಚುನಾಯಿತ ಪ್ರತಿನಿಧಿಗಳಾಗಿ ಅನೇಕ ವರುಷಗಳೇ ಆಗಿವೆ. ಈ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಪ್ರತಿನಿಧಿಗಳ ಪರಿಣಾಮಕಾರಿ ರಾಜಕೀಯ ಸಹಭಾಗಿತ್ವವಿದೆಯೇ ಎಂದು ಅವಲೋಕಿಸುವುದು ಅಗತ್ಯವಾಗಿದೆ.

ಸಂವಿಧಾನದ 73ನೆಯ ತಿದ್ದುಪಡಿಯನ್ವಯ ಮಹಿಳೆಯರಿಗೆ ಸ್ಥಳೀಯ ಸರ್ಕಾರಗಳಲ್ಲಿ ಹೆಚ್ಚಿನ ಪಾತಿನಿಧ್ಯ ದೊರಕಿರುತ್ತದೆ. ಮಹಿಳಾ ಪ್ರತಿನಿಧಿಗಳಾಗಿ ಚುನಾವಣೆಯಲ್ಲಿ ಗೆದ್ದು ಪಂಚಾಯತ್‌ನ ಚಟುವಟಿಕೆಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದರೆ ರಾಜಕೀಯವಾಗಿ ಸಬಲೀಕರಣ ಸಾಧಿಸಬಹುದು ಎಂದು ಹಲವಾರು ಅಧ್ಯಯನಗಳು (ನಿವೇದಿತ 2005, ಪಾರ್ವತಿ ಅಪ್ಪಯ್ಯ 2008) ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತವೆ. ಕ್ಷೇತ್ರದ ಪ್ರತಿನಿಧಿಗಳಾಗಿ, ಪಂಚಾಯತ್‌ನ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ, ಸ್ಥಾಯಿ ಸಮಿತಿಯ ಸದಸ್ಯರಾಗಿ ಆರಿಸಿ ಬಂದ ಮೇಲೆ ವಾರ್ಡ್ ಅಭಿವೃದ್ಧಿ, ಜನಪರ ಯೋಜನೆ ಮತ್ತು ಕಾರ್ಯಗಳ ಅನುಷ್ಠಾನ, ಕ್ಷೇತ್ರದ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ನೀಡುವುದು ಇತ್ಯಾದಿ ಮಹಿಳಾ ಪ್ರತಿನಿಧಿಗಳ ಸಕ್ರಿಯ ಭಾಗವಹಿಸುವಿಕೆಯಾಗಿರುತ್ತದೆ. ಪ್ರಸ್ತುತ ಭಾಗದಲ್ಲಿ ಮಹಿಳಾ ಪ್ರತಿನಿಧಿಗಳ ರಾಜಕೀಯ ಭಾಗವಹಿಸುವಿಕೆಯನ್ನು ಅರ್ಥೈಸಿಕೊಳ್ಳಲು ಹಲವಾರು ಸೂಚ್ಯಾಂಕಗಳನ್ನು ಬಳಸಲಾಗಿರುತ್ತದೆ.

ಮಾಹಿತಿದಾರರು ರಾಜಕೀಯಕ್ಕೆ ಬಂದಿರುವ ಉದ್ದೇಶ

ಪಂಚಾಯತಿ ಸಭೆಗಳಲ್ಲಿ, ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳಲ್ಲಿ, ಸ್ಥಾಯಿ ಸಮಿತಿ ಸಭೆಗಳಲ್ಲಿ ಹಾಗೂ ಇತರ ಸಾರ್ವಜನಿಕ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ನೀತಿ ನಿರ್ಧಾರಗಳನ್ನು ತೀರ್ಮಾನಿಸುವುದು ಇತ್ಯಾದಿ ಪ್ರಮುಖ ರಾಜಕೀಯ ಭಾಗವಹಿಸುವಿಕೆಯ ಸೂಚ್ಯಾಂಕಗಳಾಗಿರುತ್ತದೆ. ಪಂಚಾಯತ್ ಸದಸ್ಯತ್ವ ಹೊಂದಿರುವ ಉದ್ದೇಶಗಳ ಬಗ್ಗೆ ಮಹಿಳಾ ಪ್ರತಿನಿಧಿಗಳಲ್ಲಿ ಪ್ರಶ್ನಿಸಿದಾಗ ಕೋಷ್ಟಕ 4.16ರ ವಿಶ್ಲೇಷಣೆಯ ಪ್ರಕಾರ ಗ್ರಾಮ ಪಂಚಾಯತ್‌ನ 116 ಮಹಿಳಾ ಪ್ರತಿನಿಧಿಗಳು ವಾರ್ಡ್ ಅಭಿವೃದ್ಧಿಗೆ, 101 ಮಹಿಳಾ ಪ್ರತಿನಿಧಿಗಳು ಸ್ವ ಅಭಿವೃದ್ಧಿಗೆ, 36 ಮಹಿಳಾ ಪ್ರತಿನಿಧಿಗಳು ಸಮಾನತೆ ಪಡೆಯಲು ಮತ್ತು 24 ಮಹಿಳಾ ಪ್ರತಿನಿಧಿಗಳು ಸಾಮಾಜಿಕ ಸ್ಥಾನಮಾನ ಗಳಿಸಲು, 5 ಮಹಿಳಾ ಪ್ರತಿನಿಧಿಗಳು ಹೆಸರು ಗಳಿಸಲು ಎಂದು ಉತ್ತರಿಸಿರುತ್ತಾರೆ.

ಕೋಷ್ಟಕ – 4.16

ರಾಜಕೀಯಕ್ಕೆ ಬಂದಿರುವ ಉದ್ದೇಶ

ಉದ್ದೇಶ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಸಮಾನತೆಗಾಗಿ	36	25.35	15	29.41	10	76.92
ಸ್ವ-ಅಭಿವೃದ್ಧಿ	101	71.12	11	21.56	05	38.46
ವಾರ್ಡ್ ಅಭಿವೃದ್ಧಿ	116	81.69	35	68.62	13	100
ಸಮಾಜದಲ್ಲಿ ಗುರುತಿಸಿಕೊಳ್ಳಲು	05	3.52	14	27.45	04	30.76
ಗ್ರಾಮದ ಅಭಿವೃದ್ಧಿಗೆ	101	71.12	45	88.23	13	100
ಸಾಮಾಜಿಕ ಸ್ಥಾನಮಾನ	24	16.90	18	35.29	10	76.92

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಇದೇ ತರಹದ ಅಭಿಪ್ರಾಯವನ್ನು ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ನ ಮಹಿಳಾ ಪ್ರತಿನಿಧಿಗಳೂ ವ್ಯಕ್ತಪಡಿಸಿರುತ್ತಾರೆ. ಮಹಿಳಾ ಜನಪ್ರತಿನಿಧಿಗಳು ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿರುತ್ತಾರೆ ಹಾಗೂ ಲಿಂಗ ಸಮಾನತೆಯನ್ನು ಸಾಧಿಸುವ ಉದ್ದೇಶ ಹೊಂದಿರುವುದು ಪ್ರಮುಖ ಅಂಶವಾಗಿ ಗೋಚರಿಸುತ್ತದೆ.

ರಾಜಕೀಯ ಪ್ರವೇಶಕ್ಕೆ ಪ್ರೇರಣೆ

ನಿರ್ದಿಷ್ಟವಾದ ಪ್ರೇರಣೆಯಿದ್ದಾಗ ಮಾತ್ರ ತಮ್ಮನ್ನು ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ರಾಜಕೀಯ ಪ್ರವೇಶಕ್ಕೆ ಯಾರದ್ದಾದರೂ ಬೆಂಬಲವಿದೆಯೇ ಎಂದು ಪ್ರಶ್ನಿಸಿದಾಗ ಮಹಿಳಾ ಪ್ರತಿನಿಧಿಗಳ ಹಿಂದೆ ಪ್ರೇರಣೆಯಾಗಿ ಅವರ ಕುಟುಂಬಕ್ಕಿಂತಲೂ ಹೆಚ್ಚಾಗಿ ರಾಜಕೀಯ ಪಕ್ಷಗಳು ಮತ್ತು ನಾಯಕರು ಅವರಿಗೆ ಬೆಂಬಲವನ್ನು ನೀಡಿ ರಾಜಕೀಯ ಪ್ರವೇಶಕ್ಕೆ ಕಾರಣಕರ್ತರಾಗಿರುತ್ತಾರೆ ಎಂದು ತಿಳಿಸಿರುತ್ತಾರೆ.

ಕೋಷ್ಟಕ – 4.17

ರಾಜಕೀಯ ಪ್ರವೇಶಕ್ಕೆ ಪ್ರೇರಣೆ

ಪ್ರೇರಣೆ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಕುಟುಂಬ	28	19.71	08	15.68	03	23.07
ಪತಿ	57	40.14	14	27.45	07	53.84
ರಾಜಕೀಯ ಪಕ್ಷ	68	47.88	26	50.98	08	61.53
ಸ್ಥಳೀಯ ನಾಯಕರು	86	60.56	28	54.90	09	69.23
ಸ್ವಂತ ಇಚ್ಛೆ	36	25.35	16	31.37	08	61.53

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 4.17ರ ವಿಶ್ಲೇಷಣೆಯ ಪ್ರಕಾರ ಗ್ರಾಮ ಪಂಚಾಯತ್ ಸದಸ್ಯರಲ್ಲಿ 86 ಮಹಿಳಾ ಪ್ರತಿನಿಧಿಗಳು ಸ್ಥಳೀಯ ನಾಯಕರು ಕಾರಣವೆಂದು, 68 ಮಹಿಳಾ ಪ್ರತಿನಿಧಿಗಳು ರಾಜಕೀಯ ಪಕ್ಷದ ಪ್ರೇರಣೆ ಎಂದು, 57 ಮಹಿಳಾ ಪ್ರತಿನಿಧಿಗಳು ತಮ್ಮ ಪತಿಯ ಬೆಂಬಲವೆಂದು, 36 ಮಹಿಳಾ ಪ್ರತಿನಿಧಿಗಳು ಸ್ವಂತ ಇಚ್ಛೆಯಿಂದ ಮತ್ತು 28 ಮಹಿಳಾ ಪ್ರತಿನಿಧಿಗಳು ಕುಟುಂಬದ ಬೆಂಬಲವು ರಾಜಕೀಯ ಪ್ರವೇಶಕ್ಕೆ ಕಾರಣವೆಂದು ತಿಳಿಸಿರುತ್ತಾರೆ. ಈ ರೀತಿಯ ಪ್ರಕ್ರಿಯೆಯು ಕೇವಲ ಗ್ರಾಮ ಪಂಚಾಯತ್‌ಗಳಲ್ಲಿ ಮಾತ್ರವಲ್ಲದೆ ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲೂ ಕಂಡುಬರುತ್ತದೆ.

ಇದನ್ನು ಅವಲೋಕಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಮೀಸಲಾತಿ ಸ್ಥಾನದಿಂದ ಅವಕಾಶವನ್ನು ಪಡೆದುಕೊಂಡು ಒತ್ತಾಯಪೂರ್ವಕವಾಗಿ ರಾಜಕೀಯಕ್ಕೆ ಪ್ರವೇಶಿಸಿದ್ದಾರೆಯೇ ಹೊರತು ತಾವು ಸ್ವಆಸಕ್ತಿಯಿಂದ ರಾಜಕೀಯ ಪ್ರವೇಶಿಸಿ ಸಾರ್ವಜನಿಕ ಬದುಕಿಗೆ ತಮ್ಮನ್ನು ತೆರೆದಿಟ್ಟಿರುವುದು ಕಂಡುಬಂದಿರುವುದಿಲ್ಲ. ಗ್ರಾಮ ಪಂಚಾಯತ್ ಸದಸ್ಯರನ್ನು ಅವಲೋಕಿಸಿದಾಗ ಹೆಚ್ಚಿನ ಸದಸ್ಯರ ಕ್ಷೇತ್ರ ಮೀಸಲಾತಿಗೆ ಒಳಪಟ್ಟಿದ್ದು ಎಂಬ ಕಾರಣದಿಂದ ರಾಜಕೀಯ ಪಕ್ಷದ ಒತ್ತಾಸೆಗೆ ಅನುಗುಣವಾಗಿ ಚುನಾವಣೆಗೆ ಸ್ಪರ್ಧಿಸಿದ್ದೇವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಜನಪ್ರತಿನಿಧಿಗಳನ್ನು ಅವಲೋಕಿಸಿದಾಗ ಹೆಚ್ಚಿನ ಪ್ರತಿನಿಧಿಗಳು ಕುಟುಂಬದ ಸದಸ್ಯರ ಪ್ರೇರಣೆಯಿಂದ ಚುನಾವಣೆಯಲ್ಲಿ ಸ್ಪರ್ಧಿಸಿದ್ದೇವೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಭ್ಯರ್ಥಿಗಳ ಆಯ್ಕೆಯಲ್ಲಿ ಕುಟುಂಬದ ಸದಸ್ಯರು ಮಹತ್ವದ ಪಾತ್ರವನ್ನು ನಿರ್ವಹಿಸಿರುವುದು ಗಮನಿಸಬೇಕಾದ ಅಂಶವಾಗಿರುತ್ತದೆ. ಇದರ ಜೊತೆಯಲ್ಲಿ ರಾಜಕೀಯ ಪಕ್ಷಗಳು ಅಭ್ಯರ್ಥಿಗಳ ಸಾಮರ್ಥ್ಯವನ್ನು ಪರಿಗಣಿಸಿ ಮಣೆಹಾಕುವ ಸಂಸ್ಕೃತಿಯು ಪ್ರಭಾವ ಬೀರುವುದನ್ನು ಪ್ರತಿನಿಧಿಗಳ ಜೊತೆ ಚರ್ಚಿಸಿದಾಗ ತಿಳಿದುಬರುವ ಅಂಶವಾಗಿರುತ್ತದೆ.

ಪಂಚಾಯತ್ ಸಭೆಗಳಲ್ಲಿ ಭಾಗವಹಿಸುವಿಕೆಯ ವಿವರ

ಮಹಿಳಾ ಪ್ರತಿನಿಧಿಗಳ ಪರಿಣಾಮಕಾರಿ ರಾಜಕೀಯ ಸಹಭಾಗಿತ್ವದ ಬಗ್ಗೆ ಚಿಂತನೆಯನ್ನು ನಡೆಸುವ ಸೂಚ್ಯಾಂಕವಾದ ಪಂಚಾಯತ್‌ನ ಸಭೆಗಳಲ್ಲಿ ನಿರಂತರವಾಗಿ ಭಾಗವಹಿಸುತ್ತಿದ್ದೀರಾ? ಎಂದು ಪ್ರಶ್ನಿಸಿದಾಗ ಶೇಕಡಾ 84 ಮಹಿಳಾ ಪ್ರತಿನಿಧಿಗಳು ಸಭೆಗಳಲ್ಲಿ ನಿರಂತರವಾಗಿ ಭಾಗಮಹಿಸುತ್ತಿದ್ದೇವೆ ಎಂದು ಉತ್ತರಿಸಿರುತ್ತಾರೆ. ಇದರ ಮುಂದಿನ ಭಾಗವಾಗಿ ಪಂಚಾಯತ್‌ನ ಸಾಮಾನ್ಯ ಸಭೆಗಳಲ್ಲಿ ಭಾಗವಹಿಸುವಿಕೆಯ ಕುರಿತು ಪ್ರಶ್ನಿಸಿದಾಗ

ಕೋಷ್ಟಕ – 4.18

ಪಂಚಾಯತ್ ಸಭೆಗಳಲ್ಲಿ ಭಾಗವಹಿಸುವಿಕೆಯ ವಿವರ

	ಸಾಮಾನ್ಯ ಸಭೆ			ಗ್ರಾಮ ಸಭೆ		ಸ್ಥಾಯಿ ಸಮಿತಿ ಸಭೆ	
ವಾರ್ಷಿಕ ಸಭೆಗಳು	6 ರಿಂದ 8	9 ರಿಂದ 10	11 ರಿಂದ 12	ಒಂದು ಸಭೆ	ಎರಡು ಸಭೆ	2 ರಿಂದ 6	7 ರಿಂದ 12
ಗ್ರಾಮ ಪಂಚಾಯತ್ ಪ್ರತಿನಿಧಿಗಳು	15	18	109	44	98	18	32
ತಾಲೂಕು ಪಂಚಾಯತ್ ಪ್ರತಿನಿಧಿಗಳು	51	0	0	05	46	51	0
ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	13	0	0	03	10	13	0

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಕೋಷ್ಟಕ 4.18ರ ಪ್ರಕಾರ ಪಂಚಾಯತ್‌ನ ಶೇಕಡಾ 76 ಮಹಿಳಾ ಪ್ರತಿನಿಧಿಗಳು 11 ರಿಂದ 12 ಸಭೆಗಳಲ್ಲಿ ಭಾಗವಹಿಸಿರುತ್ತೇವೆ ಎಂದು ತಿಳಿಸಿರುತ್ತಾರೆ. ಶೇಕಡಾ 16 ಮಹಿಳಾ ಪ್ರತಿನಿಧಿಗಳು 9 ರಿಂದ 10 ಸಾಮಾನ್ಯ ಸಭೆಗಳಲ್ಲಿ ಭಾಗವಹಿಸಿರುತ್ತಾರೆ. ಶೇಕಡಾ 8 ಮಹಿಳಾ ಪ್ರತಿನಿಧಿಗಳು 6 ರಿಂದ 8 ಸಾಮಾನ್ಯ ಸಭೆಗಳಿಗೆ ಹಾಜರಾಗಿರುತ್ತಾರೆ. ಇದನ್ನು ಅವಲೋಕಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಸಭೆಗಳಲ್ಲಿ ಭಾಗವಹಿಸಿದ್ದೇವೆ ಎಂದು ತಿಳಿಸಿದರೂ ಕಛೇರಿಯಿಂದ ಪಡೆದ ಅಂಕಿ ಅಂಶಗಳನ್ನು ಗಮನಿಸಿದಾಗ ಅವರುಗಳು ಸಭೆಗಳಲ್ಲಿ ಹೆಚ್ಚು ಭಾಗವಹಿಸದಿರುವುದು ಹಾಗೂ ಸಭೆಯ ಆರಂಭದಲ್ಲಿಯೇ ಎದ್ದು ಹೋಗಿರುವುದು ಮತ್ತು ಸುಳ್ಳು ಮಾಹಿತಿಯನ್ನು ನೀಡಿರುವುದು ಕಂಡುಬರುತ್ತದೆ. ಗ್ರಾಮ ಪಂಚಾಯತ್‌ನ ಮಹಿಳಾ ಪ್ರತಿನಿಧಿಗಳು ಕೂಡಾ ಹೆಚ್ಚಿನ ವಾರ್ಡ್ ಸಭೆಗಳಲ್ಲಿ ಭಾಗವಹಿಸಿರುತ್ತೇವೆ ಎಂದು ತಿಳಿಸಿರುತ್ತಾರೆ. ಆದರೆ ಕಛೇರಿಯ ಹಾಜರಾತಿಗಳನ್ನು ಗಮನಿಸಿದಾಗ ಸುಳ್ಳು ಮಾಹಿತಿಯನ್ನು ನೀಡಿರುವುದು ಕಂಡುಬಂದಿರುತ್ತದೆ.

ಗ್ರಾಮ ಸಭೆಗಳಲ್ಲಿನ ಮಹಿಳಾ ಪ್ರತಿನಿಧಿಗಳ ಭಾಗವಹಿಸುವಿಕೆಯ ವಿಶ್ಲೇಷಣೆ ಮಾಹಿತಿಯ ಪ್ರಕಾರ ಒಟ್ಟು ಗ್ರಾಮ ಸಭೆಗಳಲ್ಲಿ ಗ್ರಾಮ ಪಂಚಾಯತ್‌ನ 98, ತಾಲೂಕು ಪಂಚಾಯತ್‌ನ 46, ಜಿಲ್ಲಾ ಪಂಚಾಯತ್‌ನ 10 ಮಹಿಳಾ ಪ್ರತಿನಿಧಿಗಳು ಎಲ್ಲಾ ಗ್ರಾಮ ಸಭೆಗಳಲ್ಲಿ ಭಾಗವಹಿಸಿರುತ್ತೇವೆ ಎಂದು ತಿಳಿಸಿರುತ್ತಾರೆ. ಗ್ರಾಮ ಪಂಚಾಯತ್‌ನ 44, ತಾಲೂಕು ಪಂಚಾಯತ್‌ನ 5, ಜಿಲ್ಲಾ ಪಂಚಾಯತ್‌ನ 3 ಮಹಿಳಾ ಪ್ರತಿನಿಧಿಗಳು ವಾರ್ಷಿಕವಾಗಿ ಒಂದು ಗ್ರಾಮ ಸಭೆಯಲ್ಲಿ ಭಾಗವಹಿಸಿರುತ್ತೇವೆ ಎಂದು ತಿಳಿಸಿರುತ್ತಾರೆ. ಆದರೆ ಅವರುಗಳು ಗ್ರಾಮ ಸಭೆಯ ಕಲಾಪಗಳಲ್ಲಿ ಭಾಗವಹಿಸುತ್ತಾರೆಯೇ? ಎಂಬ ಪ್ರಶ್ನೆಗೆ ನಿಖರವಾದ ಉತ್ತರ ಕೊಡುವಲ್ಲಿ ವಿಫಲರಾಗಿರುವುದು ಹಾಗೂ ಹಾರಿಕೆಯ ಉತ್ತರ ನೀಡಿರುವುದು ಜನಪ್ರತಿನಿಧಿಗಳು ಗ್ರಾಮ ಸಭೆಯ ಮಹತ್ವವನ್ನು ನಿರ್ಲಕ್ಷಿಸಿರುವುದನ್ನು ಸ್ಪಷ್ಟಪಡಿಸಿರುತ್ತದೆ. ಸ್ಥಾಯಿ ಸಮಿತಿಗಳ ಸಭೆಗಳಲ್ಲಿ ಸದಸ್ಯರ ಭಾಗವಹಿಸುವಿಕೆಯ ಬಗ್ಗೆ ಗಮನಿಸಿದಾಗ ಗ್ರಾಮ ಪಂಚಾಯತ್ ಸದಸ್ಯರು ಹೆಚ್ಚು ಭಾಗವಹಿಸಿರುವುದು, ಇದಕ್ಕೆ ಸ್ಥಾಯಿ ಸಮಿತಿಯ ಸಭೆಗಳು ಆಯಾ ಗ್ರಾಮದಲ್ಲಿಯೇ ನಡೆಯುವುದು ಅದಕ್ಕಾಗಿ ತಾಲೂಕು ಅಥವಾ ಜಿಲ್ಲಾ ಕೇಂದ್ರಗಳಿಗೆ ಹೋಗದಿರುವುದು ಮೂಲ ಕಾರಣವಾಗಿರುತ್ತದೆ. ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರ ಹಾಜರಾತಿಯನ್ನು ಗಮನಿಸಿದಾಗ ನಿರೀಕ್ಷಿಸಿದಷ್ಟು ಸದಸ್ಯರು (32%) ಭಾಗವಹಿಸದೆ ಇರುವುದು, ಎದ್ದು ಬಂದಿರುವುದು ತಾಲೂಕು ಪಂಚಾಯತ್‌ನಲ್ಲಿ ಹಾಜರಾತಿ ಕಡಿಮೆ ಇರುವುದಕ್ಕೆ ನಿರ್ದಿಷ್ಟ ಕಾರಣಗಳನ್ನು ಅವಲೋಕಿಸಿದಾಗ ಸದಸ್ಯರಿಗೆ ಆಸಕ್ತಿ ಇಲ್ಲದಿರುವುದು ನಾಮಕಾವಸ್ತೆಗಾಗಿ ಮಾತ್ರ ಸಭೆಯಲ್ಲಿ ಭಾಗವಹಿಸಬೇಕೇ ಹೊರತು ಎಲ್ಲಾ ಪ್ರಮುಖ ನಿರ್ಧಾರಗಳನ್ನು ಪುರುಷ ಸದಸ್ಯರೇ ತೆಗೆದುಕೊಳ್ಳುವ ಕಾರಣ ಯಾಕಾಗಿ ಭಾಗವಹಿಸಬೇಕೆಂಬ ಪ್ರಮುಖ ಅಂಶ ಅನೌಪಚಾರಿಕವಾಗಿ ಚರ್ಚಿಸಿದಾಗ ಕಂಡುಬಂದಿರುತ್ತದೆ.

ಪಂಚಾಯತ್ ಸಭೆಗಳಲ್ಲಿ ವಾರ್ಡ್ ಅಭಿವೃದ್ಧಿ ಕುರಿತು ಚರ್ಚೆ

ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳ ಚುನಾಯಿತ ಮಹಿಳಾ ಪ್ರತಿನಿಧಿಗಳು ವಾರ್ಡ್ ಸಮಸ್ಯೆ ಮತ್ತು ಅಭಿವೃದ್ಧಿಯ ಕುರಿತು ಪಂಚಾಯತ್‌ಗಳಲ್ಲಿ ಚರ್ಚಿಸಿದ್ದೀರಾ? ಎಂದು ಪ್ರಶ್ನಿಸಿದಾಗ ಶೇಕಡಾ 90 ಮಹಿಳಾ ಪ್ರತಿನಿಧಿಗಳು ತಮ್ಮ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಪಂಚಾಯತ್‌ಗಳಲ್ಲಿ ಚರ್ಚಿಸಿ ಪಂಚಾಯತ್‌ನ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಕ್ಷೇತ್ರದ ಅಭಿವೃದ್ಧಿಯನ್ನು ಮಾಡಿರುತ್ತೇವೆ ಎಂದು ತಿಳಿಸಿರುತ್ತಾರೆ.

ಕೋಷ್ಟಕ – 4.19

ಪಂಚಾಯತ್ ಸಭೆಗಳಲ್ಲಿ ವಾರ್ಡ್ ಅಭಿವೃದ್ಧಿ ಕುರಿತು ಚರ್ಚೆ

ಸಭೆಗಳಲ್ಲಿ ಚರ್ಚೆ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ನಡೆಸಿರುತ್ತೇವೆ	122	85.91	48	94.11	13	100
ನಡೆಸಿರುವುದಿಲ್ಲ	20	14.09	03	5.89	0	–
ಒಟ್ಟು	**142**	**100**	**51**	**100**	**13**	**100**
ಚರ್ಚಿಸಿರುವ ವಿಷಯಗಳು						
ರಸ್ತೆ	104	73.23	43	84.31	11	84.61
ಚರಂಡಿ	74	52.11	47	92.15	10	76.92
ನೈರ್ಮಲ್ಯ	71	50.00	43	84.31	11	84.61
ನೀರಿನ ವ್ಯವಸ್ಥೆ	108	76.05	47	92.15	13	100
ಶೌಚಾಲಯ	84	59.15	48	94.11	12	92.30
ಪ್ರಾಥಮಿಕ ಶಿಕ್ಷಣ	51	35.91	39	76.47	13	100
ಆರೋಗ್ಯ	46	32.39	31	60.78	13	100
ಉದ್ಯೋಗ	36	25.35	26	50.98	11	84.61
ಕೃಷಿ	45	31.69	34	66.66	13	100
ಹೈನುಗಾರಿಕೆ	37	26.05	18	35.29	09	69.23
ವಸತಿ	21	14.78	15	29.41	07	53.84
ಇತರ	20	10.56	21	41.17	10	76.92

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 4.19ರ ವಿಶ್ಲೇಷಣೆಯ ಪ್ರಕಾರ ಪಂಚಾಯತ್ ಸಭೆಗಳಲ್ಲಿ ಭಾಗವಹಿಸಿ ಮಾತನಾಡಿ ಅಭಿವೃದ್ಧಿಯ ಬಗ್ಗೆ ಚರ್ಚಿಸಿದವರನ್ನು ಯಾವ ವಿಷಯದ ಬಗ್ಗೆ ಚರ್ಚಿಸಿದ್ದೀರಿ? ಎಂದು ಪ್ರಶ್ನಿಸಿದಾಗ ವಾರ್ಡ್ ಅಭಿವೃದ್ಧಿ ಕುರಿತು ಚರ್ಚಿಸಿರುವ ವಿಷಯಗಳ ಬಗ್ಗೆ ಬಹು ಆಯ್ಕೆಯ ಉತ್ತರ ಬಂದಿರುತ್ತದೆ. ಗ್ರಾಮ ಪಂಚಾಯತ್‌ನ 108 ಮಹಿಳಾ ಪ್ರತಿನಿಧಿಗಳು, ತಾಲೂಕು ಪಂಚಾಯತ್‌ನ 47 ಮಹಿಳಾ ಪ್ರತಿನಿಧಿಗಳು ಮತ್ತು ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಕುಡಿಯುವ ನೀರಿನ ವ್ಯವಸ್ಥೆಯ ಬಗೆಗೆ, ಗ್ರಾಮ ಪಂಚಾಯತ್‌ನ 104 ಪ್ರತಿನಿಧಿಗಳು, ತಾಲೂಕು ಪಂಚಾಯತ್‌ನ 43 ಪ್ರತಿನಿಧಿಗಳು, ಜಿಲ್ಲಾ ಪಂಚಾಯತ್‌ನ 11 ಪ್ರತಿನಿಧಿಗಳು ರಸ್ತೆ ದುರಸ್ಥಿಯ ಬಗ್ಗೆ ತಾವು ಸಕ್ರಿಯವಾಗಿ ವಾರ್ಡ್ ಸಭೆಗಳಲ್ಲಿ ಮಾತನಾಡಿರುವುದಾಗಿ ಹೇಳಿರುತ್ತಾರೆ. ಚರಂಡಿ, ನೈರ್ಮಲ್ಯ, ಶೌಚಾಲಯ, ಪ್ರಾಥಮಿಕ ಶಿಕ್ಷಣ, ಆರೋಗ್ಯ, ಉದ್ಯೋಗ, ಕೃಷಿ, ಹೈನುಗಾರಿಕೆ, ವಸತಿ, ಇತ್ಯಾದಿ ವಿಷಯಗಳ ಬಗ್ಗೆ ಪ್ರಶ್ನಿಸಿದಾಗ, ಈ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿ ವಿಷಯದ ಬಗ್ಗೆ ಹೆಚ್ಚೂ ಕಡಿಮೆ ಎಲ್ಲರಿಗೂ ಸಹ ಅರಿವಿದ್ದು ಕೆಲವು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಹೆಚ್ಚಿನ ಮಹತ್ವವನ್ನು ನೀಡಿರುವುದು ಕಂಡುಬಂದಿರುತ್ತದೆ. ಕಾಮಗಾರಿ ಕೆಲಸಗಳ ಕುರಿತು ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಚರ್ಚಿಸಿರುತ್ತಾರೆ. ರಸ್ತೆ ಮತ್ತು ಕುಡಿಯುವ ನೀರಿನ ವ್ಯವಸ್ಥೆಗೆ ಹೆಚ್ಚಿನ ಗಮನವನ್ನು ನೀಡಿರುವುದು ಇಲ್ಲಿ ಕಂಡುಬರುತ್ತದೆ. ಗ್ರಾಮ ಮತ್ತು ತಾಲೂಕು ಪಂಚಾಯತ್‌ನ ಮಹಿಳಾ ಪ್ರತಿನಿಧಿಗಳು ಶೌಚಾಲಯ, ಚರಂಡಿ, ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಹೆಚ್ಚಾಗಿ ಚರ್ಚಿಸಿದ್ದೇವೆ ಎಂದು ತಿಳಿಸಿರುತ್ತಾರೆ. ಜಿಲ್ಲಾ ಪಂಚಾಯತ್‌ನ ಮಹಿಳಾ ಪ್ರತಿನಿಧಿಗಳು ಹೆಚ್ಚಾಗಿ ಪ್ರಾಥಮಿಕ ಶಿಕ್ಷಣ, ಆರೋಗ್ಯ, ಕೃಷಿ ಮತ್ತು ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಮಹಿಳಾ ಪ್ರತಿನಿಧಿಗಳು ವಾರ್ಡ್ ಸಭೆಗಳಲ್ಲಿ ತಿಳಿಸಿರುತ್ತಾರೆ ಹಾಗೂ ಅವುಗಳ ಸುಧಾರಣೆಗೆ ಆದ್ಯತೆಯನ್ನು ನೀಡಿರುವುದು ಕಂಡುಬಂದಿರುತ್ತದೆ. ಇದನ್ನು ಅವಲೋಕಿಸಿದಾಗ ಮಹಿಳಾ ಪ್ರತಿನಿಧಿಗಳು ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಸಮರ್ಥವಾಗಿ ಪ್ರತಿನಿಧಿಸುವುದರಲ್ಲಿ ಮತ್ತು ಪರಿಹರಿಸುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ಆತ್ಮವಿಶ್ವಾಸವನ್ನು ತೋರ್ಪಡಿಸಿರುತ್ತಾರೆ. ಅಧಿಕಾರಗಳನ್ನು ನೀಡಿ ಯಾವುದೇ ರೀತಿಯ ಹಸ್ತಕ್ಷೇಪವನ್ನು ನಡೆಸದೇ ಇದ್ದ ಸಂದರ್ಭದಲ್ಲಿ ಪುರುಷರಷ್ಟೇ ಸಮರ್ಥವಾಗಿ ಅಧಿಕಾರ ಚಲಾಯಿಸುತ್ತಾರೆ ಮತ್ತು ಅಸಮಾನತೆಗಳಿಲ್ಲದೆ ಕಾರ್ಯನಿರ್ವಹಿಸುತ್ತಾರೆ ಎಂಬ ಫಲಿತ ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲೂ ಕಂಡುಬಂದಿರುತ್ತದೆ[41].

ಪಂಚಾಯತ್ ಸಭೆಗಳಲ್ಲಿ ನಿರ್ಧಾರ ಕೈಗೊಳ್ಳುವಲ್ಲಿನ ಸ್ವಾತಂತ್ರ್ಯ

ಪಂಚಾಯತ್‌ನಲ್ಲಿ ನಡೆಯುವ ಚರ್ಚೆಗಳಲ್ಲಿ ಮಹಿಳಾ ಪ್ರತಿನಿಧಿಗಳಿಗೂ ನಿರ್ಧಾರ ಕೈಗೊಳ್ಳುವಲ್ಲಿ ಸ್ವಾತಂತ್ರ್ಯವಿದೆಯೆ? ಅಂದರೆ ಪಂಚಾಯತ್‌ಯಲ್ಲಿ ಅಭಿವೃದ್ಧಿ ಕಾರ್ಯಗಳ ಬಗ್ಗೆ, ಸಭೆಯಲ್ಲಿ ಮಾತನಾಡುವಾಗ, ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಸ್ವತಂತ್ರವಾಗಿ ವ್ಯವಹರಿಸುತ್ತೀರೋ? ಎಂದು ಪ್ರಶ್ನಿಸಿದಾಗ

ಕೋಷ್ಟಕ – 4.20

ನಿರ್ಧಾರ ಕೈಗೊಳ್ಳುವಲ್ಲಿನ ಸ್ವಾತಂತ್ರ್ಯ

ಸ್ವಾತಂತ್ರ್ಯ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಇದೆ	108	76.05	43	84.32	13	100
ಇಲ್ಲ	25	17.60	06	11.76	0	–
ಪ್ರತಿಕ್ರಿಯಿಸಿಲ್ಲ	09	6.35	02	3.92	0	–
ಒಟ್ಟು	**142**	**100**	**51**	**100**	**13**	**100**

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಕೋಷ್ಟಕ 4.20ರ ವಿಶ್ಲೇಷಣೆಯ ಪ್ರಕಾರ ಗ್ರಾಮ ಪಂಚಾಯತ್‌ನ 108 ಮಹಿಳಾ ಪ್ರತಿನಿಧಿಗಳು, ತಾಲೂಕು ಪಂಚಾಯತ್‌ನ 43 ಮಹಿಳಾ ಪ್ರತಿನಿಧಿಗಳು, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು, ಪಂಚಾಯತ್‌ನ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ನಿರ್ಧಾರ ಕೈಗೊಳ್ಳುತ್ತೇವೆ ಎಂದಿರುತ್ತಾರೆ. ಗ್ರಾಮ ಪಂಚಾಯತ್‌ನ 25 ಮತ್ತು ತಾಲೂಕು ಪಂಚಾಯತ್‌ನ 6 ಮಹಿಳಾ ಪ್ರತಿನಿಧಿಗಳು ನಾವು ಪಂಚಾಯತ್‌ನಲ್ಲಿ ಅಧಿಕಾರಿಗಳನ್ನು ಮತ್ತು ಪಂಚಾಯತ್‌ನ ಇತರ ಸದಸ್ಯರನ್ನು ಅವಲಂಬಿಸುತ್ತೇವೆಯೇ ಹೊರತು ಕುಟುಂಬದ ಸದಸ್ಯರು ಅಥವ ಪತಿ ಇವರನ್ನು ಅವಲಂಬಿಸುವುದಿಲ್ಲ ಎಂದಿರುತ್ತಾರೆ.

ಅಭಿವೃದ್ಧಿ ಕಾರ್ಯಗಳ ಬಗ್ಗೆ ತೃಪ್ತಿ

ಪುರುಷ ಸದಸ್ಯರೊಂದಿಗೆ ಹೋಲಿಸಿದಾಗ ಮಹಿಳಾ ಪ್ರತಿನಿಧಿಗಳು ವಾರ್ಡ್ ಅಭಿವೃದ್ಧಿ ಕೆಲಸಗಳಲ್ಲಿ ತೊಡಗಿಕೊಂಡಿರುವ ಬಗ್ಗೆ ತೃಪ್ತಿ ಇದೆಯೇ ಎಂದು ಪ್ರಶ್ನಿಸಿದಾಗ ಶೇಕಡಾ 92 ಮಹಿಳಾ ಪ್ರತಿನಿಧಿಗಳು ಹೌದೆಂದು ಉತ್ತರಿಸಿರುತ್ತಾರೆ.

ಕೋಷ್ಟಕ – 4.21

ಅಭಿವೃದ್ಧಿ ಕಾರ್ಯಗಳಲ್ಲಿ ತೃಪ್ತಿ

ತೃಪ್ತಿ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಇದೆ	129	90.84	48	94.12	13	100
ಇಲ್ಲ	09	06.33	03	05.88	0	–
ಪ್ರತಿಕ್ರಿಯಿಸಿಲ್ಲ	04	02.83	0	–	0	–
ಒಟ್ಟು	**142**	**100**	**51**	**100**	**13**	**100**
ಕಾರಣಗಳು						
ಹಣಕಾಸಿನ ಹಂಚಿಕೆ	22	15.51	18	35.29	10	76.92
ವಾರ್ಡ್ ಸಮಸ್ಯೆಗಳ						
ಚರ್ಚೆ	113	79.57	37	72.54	13	100
ತೀರ್ಮಾನ						
ತೆಗೆದುಕೊಳ್ಳುವಿಕೆ	69	48.59	20	39.21	13	100
ಅಭಿವೃದ್ಧಿ ಕಾಮಗಾರಿ	115	80.98	46	90.19	13	100
ಇತರ (ಸಾಮಾಜಿಕ, ಆರ್ಥಿಕ)	64	45.07	47	92.15	13	100

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 4.21ರ ವಿಶ್ಲೇಷಣೆಯ ಪ್ರಕಾರ ಗ್ರಾಮ ಪಂಚಾಯತ್‌ನ 129, ತಾಲೂಕು ಪಂಚಾಯತ್‌ನ 48, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ತೃಪ್ತಿಯಿದೆ ಎಂದು ಉತ್ತರಿಸಿರುತ್ತಾರೆ. ಇದರ ಮುಂದಿನ ಭಾಗವಾಗಿ ಯಾವೆಲ್ಲಾ ಅಭಿವೃದ್ಧಿ ಕೆಲಸಗಳಲ್ಲಿ ತೃಪ್ತಿಯಿದೆ ಮತ್ತು ಅಭಿವೃದ್ಧಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತೀರಾ? ಎಂದು ಪ್ರಶ್ನಿಸಿದಾಗ ಗ್ರಾಮ ಪಂಚಾಯತ್‌ನ 115, ತಾಲೂಕು ಪಂಚಾಯತ್‌ನ 46, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ನಾವು ಪುರುಷರ ಹಾಗೆಯೇ ಕಾಳಜಿಯನ್ನು ವಹಿಸಿ ಮಾಡಿರುತ್ತೇವೆ ಎಂದು ತಿಳಿಸಿರುತ್ತಾರೆ. ಗ್ರಾಮ ಪಂಚಾಯತ್‌ನ 113, ತಾಲೂಕು ಪಂಚಾಯತ್‌ನ 37, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ವಾರ್ಡ್ ಸಮಸ್ಯೆಗಳ ಬಗ್ಗೆ ಪಂಚಾಯತಿಗಳಲ್ಲಿ ಚರ್ಚಿಸಿ ಕ್ಷೇತ್ರದ ಅಭಿವೃದ್ಧಿಯನ್ನು ಮಾಡಿರುತ್ತೇವೆ ಎಂದು ಹಾಗೂ ಗ್ರಾಮ ಪಂಚಾಯತ್‌ನ 69, ತಾಲೂಕು ಪಂಚಾಯತ್‌ನ 20, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಸ್ವತಂತ್ರವಾಗಿ ತೀರ್ಮಾನವನ್ನು ತೆಗೆದುಕೊಂಡು ಕ್ಷೇತ್ರದ ಅಭಿವೃದ್ಧಿ ಕೆಲಸಗಳಾದ ರಸ್ತೆ, ನೀರಿನ ಸೌಕರ್ಯ, ಚರಂಡಿ, ಮಾರುಕಟ್ಟೆ ವ್ಯವಸ್ಥೆ ಇತ್ಯಾದಿಗಳನ್ನು

ಮಾಡಿರುವುದಾಗಿ ತಿಳಿಸಿರುತ್ತಾರೆ. ಹಣಕಾಸಿನ ಹಂಚಿಕೆಯ ಬಗ್ಗೆ ಗ್ರಾಮ ಪಂಚಾಯತ್‌ನ 22, ತಾಲೂಕು ಪಂಚಾಯತ್‌ನ 18, ಜಿಲ್ಲಾ ಪಂಚಾಯತ್‌ನ 10 ಮಹಿಳಾ ಪ್ರತಿನಿಧಿಗಳು ಸ್ವತಂತ್ರವಾಗಿ ನಿರ್ವಹಿಸಿರುತ್ತೇವೆ ಎನ್ನುವ ತೃಪ್ತಿಯನ್ನು ವ್ಯಕ್ತಪಡಿಸಿರುತ್ತಾರೆ. ಇತರ ಸಾಮಾಜಿಕ, ಆರ್ಥಿಕ, ಧಾರ್ಮಿಕ ಕಾರ್ಯಗಳು ಅಲ್ಲದೆ ಗ್ರಾಮ ಪಂಚಾಯತ್‌ನ 64, ತಾಲೂಕು ಪಂಚಾಯತ್‌ನ 47, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಕ್ಷೇತ್ರದಲ್ಲಿ ಕೃಷಿ, ಹೈನುಗಾರಿಕೆ, ಚರಂಡಿ, ರಸ್ತೆ ಇತ್ಯಾದಿಗಳನ್ನು ನಿರ್ವಹಿಸಿರುತ್ತೇವೆ ಎಂದಿರುತ್ತಾರೆ. ಇದನ್ನು ಅವಲೋಕಿಸಿದಾಗ ಮಹಿಳಾ ಪ್ರತಿನಿಧಿಗಳಿಗೆ ತಮ್ಮ ಕ್ಷೇತ್ರದ ಅಭಿವೃದ್ಧಿ ಕೆಲಸಗಳಲ್ಲಿ ತೊಡಗಿಕೊಂಡಿರುವ ಬಗ್ಗೆ ತೃಪ್ತಿಯಿದೆ ಎಂದು ಕಂಡುಬಂದಿರುತ್ತದೆ.

ಮಹಿಳಾ ಅಭಿವೃದ್ಧಿಯ ಬಗ್ಗೆ ಕಾಳಜಿ

ಮಹಿಳಾ ಪ್ರತಿನಿಧಿಯಾಗಿ ಮಹಿಳಾ ಅಭಿವೃದ್ಧಿಯ ಬಗ್ಗೆ ಕಾಳಜಿ ವಹಿಸುತ್ತೀರಾ? ಎಂದು ಪ್ರಶ್ನಿಸಿದಾಗ ಮೂರು ಸ್ತರಗಳ ಶೇಕಡಾ 86 ಮಹಿಳಾ ಪ್ರತಿನಿಧಿಗಳು ಹೌದೆಂದು ಮತ್ತು ಗ್ರಾಮ ಪಂಚಾಯತ್‌ನ 28 ಮಹಿಳಾ ಪ್ರತಿನಿಧಿಗಳು ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ.

ಕೋಷ್ಟಕ – 4.22

ಮಹಿಳಾ ಅಭಿವೃದ್ಧಿಯ ಬಗ್ಗೆ ಕಾಳಜಿ

ಮಹಿಳಾ ಅಭಿವೃದ್ಧಿಯ ಕಾಳಜಿ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಇದೆ	114	80.28	51	100	13	100
ಪ್ರತಿಕ್ರಿಯಿಸಿಲ್ಲ	28	19.72	0	–	0	–
ಒಟ್ಟು	**142**	**100**	**51**	**100**	**13**	**100**
ಕಾಳಜಿ ವಹಿಸುವ ವಿಷಯಗಳು						
ಉನ್ನತ ಶಿಕ್ಷಣ	72	50.70	32	62.74	08	61.53
ಆರೋಗ್ಯ	77	54.22	31	60.78	11	84.61
ತರಬೇತಿ	50	35.21	36	70.58	10	76.92
ಸಶಕ್ತೀಕರಣ						
ಯೋಜನೆ	39	27.46	39	76.47	10	76.92
ಸ್ವಸಹಾಯ	79	55.63	33	64.70	12	92.30

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಇದರ ಮುಂದಿನ ಭಾಗವಾಗಿ ಮಹಿಳೆಯಾಗಿ ಮಹಿಳಾ ಅಭಿವೃದ್ಧಿಯ ಯಾವ ವಿಷಯಗಳ ಬಗ್ಗೆ ಕಾಳಜಿ ವಹಿಸುತ್ತೀರಿ? ಎಂದು ಕೇಳಿದಾಗ ಮಹಿಳಾ ಆರೋಗ್ಯದ ಯೋಜನೆಗಳನ್ನು ಮತ್ತು ಆರೋಗ್ಯದ ಸವಲತ್ತುಗಳ ಬಗ್ಗೆ ಪಂಚಾಯತ್‌ನಲ್ಲಿ ಚರ್ಚಿಸಿ ಸೂಕ್ತ ಫಲಾನುಭವಿಗಳಿಗೆ ದೊರಕುವ ಹಾಗೆ ಮಾಡಿದ್ದೇವೆ ಎಂದು ಗ್ರಾಮ ಪಂಚಾಯತ್‌ನ 77, ತಾಲೂಕು ಪಂಚಾಯತ್‌ನ 31, ಜಿಲ್ಲಾ ಪಂಚಾಯತ್‌ನ 11 ಮಹಿಳಾ ಪ್ರತಿನಿಧಿಗಳು ತಿಳಿಸಿರುತ್ತಾರೆ. ಗ್ರಾಮ ಪಂಚಾಯತ್‌ನ 79, ತಾಲೂಕು ಪಂಚಾಯತ್‌ನ 33, ಜಿಲ್ಲಾ ಪಂಚಾಯತ್‌ನ 12 ಮಹಿಳಾ ಪ್ರತಿನಿಧಿಗಳು ಸ್ವ–ಸಹಾಯದ ಮೂಲಕವೆಂದು, ಮಹಿಳೆಯರಿಗೆ ಶಿಕ್ಷಣದ ಬಗ್ಗೆ ಅರಿವನ್ನು ಮೂಡಿಸಿ ಮಹಿಳೆಯರು ಉನ್ನತ ಶಿಕ್ಷಣವನ್ನು ಪಡೆಯುವಲ್ಲಿ ಪ್ರೋತ್ಸಾಹವನ್ನು ನೀಡಿರುತ್ತೇವೆ ಎಂದು ಗ್ರಾಮ ಪಂಚಾಯತ್‌ನ 72, ತಾಲೂಕು ಪಂಚಾಯತ್‌ನ 32, ಜಿಲ್ಲಾ ಪಂಚಾಯತ್‌ನ 8 ಮಹಿಳಾ ಪ್ರತಿನಿಧಿಗಳು ತಿಳಿಸಿರುತ್ತಾರೆ. ಮಹಿಳೆಯರಿಗೆ ತರಬೇತಿ ಕಾರ್ಯಕ್ರಮ ಆಯೋಜಿಸಿ ಅದರಲ್ಲಿ ಪಾಲ್ಗೊಳ್ಳುವ ಹಾಗೆ ಮಾಡಿರುತ್ತೇವೆ ಎಂದು ಗ್ರಾಮ ಪಂಚಾಯತ್‌ನ 50, ತಾಲೂಕು ಪಂಚಾಯತ್‌ನ 36, ಜಿಲ್ಲಾ ಪಂಚಾಯತ್‌ನ 10 ಮಹಿಳಾ ಪ್ರತಿನಿಧಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಮಹಿಳಾ ಸಶಕ್ತೀಕರಣಕ್ಕೆ ಸಂಬಂಧಪಟ್ಟ ಯೋಜನೆಯನ್ನು ಮಹಿಳೆಯರಿಗೆ ದೊರಕುವ ಹಾಗೆ ಮಾಡಿರುತ್ತೇವೆ ಎಂದು ಗ್ರಾಮ ಪಂಚಾಯತ್‌ನ 39, ತಾಲೂಕು ಪಂಚಾಯತ್‌ನ 39, ಜಿಲ್ಲಾ ಪಂಚಾಯತ್‌ನ 10 ಮಹಿಳಾ ಪ್ರತಿನಿಧಿಗಳು ತಿಳಿಸಿರುತ್ತಾರೆ. ಈ ರೀತಿ ಮಹಿಳೆಯರ ಅಗತ್ಯಗಳಿಗೆ ಸ್ಪಂದಿಸಿದ್ದೇವೆ ಎಂದು ಹೆಚ್ಚಿನ ಮಹಿಳಾ ಪ್ರತಿನಿಧಿಗಳ ಅಭಿಪ್ರಾಯವಾಗಿರುತ್ತದೆ. ಇದನ್ನು ಅವಲೋಕಿಸಿದಾಗ ಫಲಾನುಭವಿ ಮಹಿಳೆಯು ತನ್ನ ಸಮಸ್ಯೆಗಳನ್ನು ಹೆಚ್ಚಿನ ಮಹಿಳಾ ಸದಸ್ಯರಲ್ಲಿ ತಿಳಿಸಿರುವುದು ಮತ್ತು ಮಹಿಳಾ ಪ್ರತಿನಿಧಿಗಳು ಮಹಿಳೆಯರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬಹುದೆಂಬುದು ಹಲವು ಅಧ್ಯಯನಗಳ ವಾದವಾಗಿರುವುದು ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ಫಲಿತವಾಗಿರುತ್ತದೆ[42].

ಪಂಚಾಯತ್ ಸಭೆಗಳಲ್ಲಿ ಮಹಿಳಾ ಸಹಸದಸ್ಯರಿಗೆ ಬೆಂಬಲ

ಮಹಿಳಾ ಪ್ರತಿನಿಧಿಗಳು ಪಂಚಾಯತ್ ಸಭೆಗಳಲ್ಲಿ ಮಹಿಳಾ ಸಹೋದ್ಯೋಗಿಗಳಿಗೆ ಬೆಂಬಲವನ್ನು ನೀಡುತ್ತೀರಾ ಎಂದು ಪ್ರಶ್ನಿಸಿದಾಗ ಗ್ರಾಮ ಪಂಚಾಯತ್‌ನ 107, ತಾಲೂಕು ಪಂಚಾಯತ್‌ನ 35, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಹೌದೆಂದು ಉತ್ತರಿಸಿರುತ್ತಾರೆ. ಇದರ ಮುಂದಿನ ಭಾಗವಾಗಿ ಯಾವ ರೀತಿಯಲ್ಲಿ ಮಹಿಳಾ ಸಹಸದಸ್ಯರಿಗೆ ಬೆಂಬಲ ನೀಡುತ್ತೀರಿ ಎಂದು ಪ್ರಶ್ನಿಸಿದಾಗ ಗ್ರಾಮ ಪಂಚಾಯತ್‌ನ 107, ತಾಲೂಕು ಪಂಚಾಯತ್‌ನ 44, ಜಿಲ್ಲಾ ಪಂಚಾಯತ್ 13 ಮಹಿಳಾ

ಪ್ರತಿನಿಧಿಗಳು ವಾರ್ಡ್‌ನ ಸಮಸ್ಯೆಗಳನ್ನು ಚರ್ಚಿಸುವಾಗ, ಗ್ರಾಮ ಪಂಚಾಯತ್‌ನ 69, ತಾಲೂಕು ಪಂಚಾಯತ್‌ನ 25, ಜಿಲ್ಲಾ ಪಂಚಾಯತ್ 11 ಮಹಿಳಾ ಪ್ರತಿನಿಧಿಗಳು ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ, ಗ್ರಾಮ ಪಂಚಾಯತ್‌ನ 47, ತಾಲೂಕು ಪಂಚಾಯತ್‌ನ 18, ಜಿಲ್ಲಾ ಪಂಚಾಯತ್‌ನ 11 ಮಹಿಳಾ ಪ್ರತಿನಿಧಿಗಳು ಹಣಕಾಸಿನ ಹಂಚಿಕೆ ಸಂದರ್ಭದಲ್ಲಿ ಮತ್ತು ಗ್ರಾಮ ಪಂಚಾಯತ್‌ನ 11, ತಾಲೂಕು ಪಂಚಾಯತ್‌ನ 13, ಜಿಲ್ಲಾ ಪಂಚಾಯತ್‌ನ 10 ಮಹಿಳಾ ಪ್ರತಿನಿಧಿಗಳು ಚರ್ಚೆಗಳು ನಡೆಯುವಾಗ ಎಂದು ತಿಳಿಸಿರುತ್ತಾರೆ. (ಕೋಷ್ಟಕ 4.23)

ಕೋಷ್ಟಕ 4.23

ಮಹಿಳಾ ಸಹಸದಸ್ಯರಿಗೆ ಬೆಂಬಲ

ಬೆಂಬಲ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಬೆಂಬಲ ನೀಡುತ್ತೇವೆ	107	75.35	35	68.63	13	100
ಬೆಂಬಲ ನೀಡುವುದಿಲ್ಲ	10	07.05	02	03.92	0	–
ಕೆಲವೊಮ್ಮೆ ಬೆಂಬಲ ನೀಡುತ್ತೇವೆ	25	17.60	14	27.45	0	–
ಒಟ್ಟು	**142**	**100**	**51**	**100**	**13**	**100**
ಯಾವ ರೀತಿಯ ಬೆಂಬಲ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ವಾರ್ಡ್‌ನ ಸಮಸ್ಯೆಗಳನ್ನು ಚರ್ಚಿಸುವಾಗ	107	75.35	44	86.27	13	100
ಯೋಜನೆಗಳ ಅನುಷ್ಠಾನ	69	48.59	25	49.01	11	84.61
ಹಣಕಾಸಿನ ಹಂಚಿಕೆ ಸಂದರ್ಭ	47	33.09	18	35.29	11	84.61
ಚರ್ಚೆಗಳು ನಡೆಯುವಾಗ	11	07.74	13	25.49	10	76.92

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಇದನ್ನು ಅವಲೋಕಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಪಂಚಾಯತ್‌ನ ಕಾರ್ಯಕಲಾಪಗಳಲ್ಲಿ ಮತ್ತು ಪಂಚಾಯತ್‌ನ ಸಭೆಗಳಲ್ಲಿ ಪಕ್ಷಭೇಧ ಮರೆತು ಮಹಿಳಾ ಸದಸ್ಯರು ಮಾತನಾಡುವಾಗ ಅದನ್ನು ಪುರುಷ ಸದಸ್ಯರು ನಿರ್ಲಕ್ಷಿಸಿದರೆ ಸಾಮೂಹಿಕವಾಗಿ ಧ್ವನಿಯೆತ್ತಿ ಮಹಿಳಾ ಸದಸ್ಯರಿಗೆ ಬೆಂಬಲವನ್ನು ನೀಡಿರುವುದು ಕಂಡುಬಂದಿರುತ್ತದೆ.

ಕುಟುಂಬದ ಸಹಕಾರ

ರಾಜಕೀಯದಲ್ಲಿರಲು ಕುಟುಂಬದ ಬೆಂಬಲವಿದೆಯೇ ಎಂದು ಕೇಳಿದಾಗ ಬಹುತೇಕ ಮಹಿಳಾ ಪ್ರತಿನಿಧಿಗಳು ರಾಜಕೀಯದಲ್ಲಿ ಮುಂದುವರಿಯಲು ಕುಟುಂಬದ ಸಹಕಾರವೇ ಮುಖ್ಯ ಎಂದು ತಿಳಿಸಿರುತ್ತಾರೆ. ಈ ಸಹಕಾರ ಯಾವ ರೀತಿಯಲ್ಲಿ ಎಂದು ಕೇಳಿದಾಗ

ಕೋಷ್ಟಕ 4.24

ಕುಟುಂಬದ ಸಹಕಾರ

ಕುಟುಂಬದ ಸಹಕಾರ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಚುನಾವಣಾ ಪ್ರಚಾರ	94	66.19	30	58.82	13	100
ಕಾರ್ಯನಿರ್ವಹಿಸುವಾಗ	114	80.28	40	78.43	13	100
ಆರ್ಥಿಕ ಬೆಂಬಲ	19	13.38	09	17.64	06	46.15
ಒಪ್ಪಿಗೆ	91	64.08	37	72.54	11	84.61
ವಾರ್ಡಿಗೆ ಭೇಟಿ ನೀಡುವಾಗ	72	50.70	31	60.78	13	100

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 4.24 ವಿವರಿಸುವಂತೆ, ಚುನಾವಣೆಯಲ್ಲಿ ಪ್ರಚಾರ ಕೈಗೊಳ್ಳುವಾಗ ಎಂದು ಗ್ರಾಮ ಪಂಚಾಯತ್‌ನ 94, ತಾಲೂಕು ಪಂಚಾಯತ್‌ನ 30 ಹಾಗೂ ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಉತ್ತರಿಸಿರುತ್ತಾರೆ. ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸುವಾಗ ಎಂದು ಗ್ರಾಮ ಪಂಚಾಯತ್‌ನ 114, ತಾಲೂಕು ಪಂಚಾಯತ್‌ನ 40 ಮತ್ತು ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ತಿಳಿಸಿದ್ದು, ಮನೆಯಿಂದ ಹೊರಗೆ ಹೋಗಿ ಸಾರ್ವಜನಿಕವಾಗಿ ಭಾಗವಹಿಸುವಂತೆ ಒಪ್ಪಿಗೆ ಸಿಕ್ಕಿರುವುದೇ ಒಂದು ದೊಡ್ಡ ಸಹಕಾರವೆಂದು ಗ್ರಾಮ ಪಂಚಾಯತ್‌ನ 91, ತಾಲೂಕು ಪಂಚಾಯತ್‌ನ 37 ಮತ್ತು ಜಿಲ್ಲಾ ಪಂಚಾಯತ್‌ನ 11 ಮಹಿಳಾ ಪ್ರತಿನಿಧಿಗಳು ತಿಳಿಸಿರುತ್ತಾರೆ. ಗ್ರಾಮ ಪಂಚಾಯತ್‌ನ 72, ತಾಲೂಕು ಪಂಚಾಯತ್‌ನ 31 ಮತ್ತು ಜಿಲ್ಲಾ ಪಂಚಾಯತ್‌ನ 13 ಮಂದಿ ವಾರ್ಡಿಗೆ ಭೇಟಿನೀಡುವಾಗ ಎಂದರೆ, ಆರ್ಥಿಕ ಬೆಂಬಲವೆಂದು ಗ್ರಾಮ ಪಂಚಾಯತ್‌ನ 19, ತಾಲೂಕು ಪಂಚಾಯತ್‌ನ 09 ಮತ್ತು ಜಿಲ್ಲಾ ಪಂಚಾಯತ್‌ನ ಆರು ಮಹಿಳಾ ಪ್ರತಿನಿಧಿಗಳು ಹಾಗೂ ಕೆಲವು ಮಹಿಳಾ ಪ್ರತಿನಿಧಿಗಳು ಸಭೆ ಸಮಾರಂಭ, ಸಂಘಟನೆ ಇತ್ಯಾದಿಗಳಲ್ಲಿ ಭಾಗವಹಿಸಲು

ಎಂದು ತಿಳಿಸಿರುತ್ತಾರೆ. ಹೆಚ್ಚು ಶಿಕ್ಷಣ ಮತ್ತು ಆರ್ಥಿಕತೆಯನ್ನು ಹೊಂದಿದ ಮಹಿಳಾ ಪ್ರತಿನಿಧಿಗಳಿಗೆ ಕುಟುಂಬದ ಬೆಂಬಲ ದೊರಕಿದರೆ ಅವರು ರಾಜಕೀಯದ ಮುಖ್ಯವಾಹಿನಿಯಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡು ತಮ್ಮ ಕೊಡುಗೆಯನ್ನು ರಾಜಕೀಯಕ್ಕೆ ನೀಡುತ್ತಾರೆ ಎಂದು ಕರೀನಾ ಕೆ ಕಪಾಡಿಯಾ(1997)[43] ತನ್ನ ಅಧ್ಯಯನ ಪ್ರದೇಶದಲ್ಲಿ ಕಂಡುಕೊಂಡ ಫಲಿತವು ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿಯೂ ಕಂಡುಬಂದಿರುತ್ತದೆ.

ಮೀಸಲಾತಿ ಮಸೂದೆಯ ಬಗ್ಗೆ ಅರಿವು ಮತ್ತು ಭಾಗವಹಿಸುವಿಕೆ

73ನೇ ಸಾಂವಿಧಾನಿಕ ತಿದ್ದುಪಡಿಯು ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡಾ 33% ಮೀಸಲಾತಿಯನ್ನು ನೀಡಿರುವುದು ಅವರುಗಳ ಸಬಲೀಕರಣಕ್ಕೆ ಮತ್ತು ಸಮಾಜದ ಮುಖ್ಯ ವಾಹಿನಿಗೆ ತರುವಲ್ಲಿ ಸರಕಾರ ತೆಗೆದುಕೊಂಡ ಒಂದು ಕ್ರಾಂತಿಕಾರಿ ಕ್ರಮವಾಗಿರುತ್ತದೆ. ಈ ಮೀಸಲಾತಿ ಮಸೂದೆಯ ಬಗ್ಗೆ ಅರಿವು ಮತ್ತು ಭಾಗವಹಿಸುವಿಕೆಯನ್ನು ವಿಶ್ಲೇಷಿಸಿದಾಗ

ಕೋಷ್ಟಕ – 4.25

ಮಹಿಳಾ ಮೀಸಲಾತಿ ಮಸೂದೆಯ ಅರಿವು

ಮಸೂದೆಯ ಅರಿವು	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ
ಇದೆ	121	85.21	51	100	13	100
ಇಲ್ಲ	21	14.79	0	–	0	–
ಒಟ್ಟು	**142**	**100**	**51**	**100**	**13**	**100**
ಮೀಸಲಾತಿಯ ಫಲಾನುಭವಿಗಳು						
ಹೌದು	89	62.67	38	74.50	09	69.23
ಅಲ್ಲ	53	37.33	13	25.50	04	30.77
ಒಟ್ಟು	**142**	**100**	**51**	**100**	**13**	**100**

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಕೋಷ್ಟಕ 4.25ರ ಪ್ರಕಾರ ಶೇಕಡಾ 90ರಷ್ಟು ಮಹಿಳಾ ಪ್ರತಿನಿಧಿಗಳಿಗೆ ಮಹಿಳಾ ಮೀಸಲಾತಿ ಮಸೂದೆಯ ಬಗ್ಗೆ ಅರಿವಿದೆ. ಗ್ರಾಮ ಪಂಚಾಯತ್‌ನ ಶೇಕಡಾ 10 ಮಹಿಳಾ ಪ್ರತಿನಿಧಿಗಳು ಮಾತ್ರ ಮೀಸಲಾತಿ ಮಸೂದೆಯ ಬಗ್ಗೆ ಅರಿವನ್ನು ಹೊಂದಿರುವುದಿಲ್ಲ. ಇದನ್ನು ವಿಶ್ಲೇಷಿಸಿದಾಗ ಈ ಮಹಿಳಾ ಪ್ರತಿನಿಧಿಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿದ್ದು ಶಿಕ್ಷಣವನ್ನು ಪಡೆಯದವರಾಗಿರುತ್ತಾರೆ. ಮಹಿಳಾ ಮೀಸಲಾತಿ ಮಸೂದೆಯ ಫಲಾನುಭವಿಗಳ ಬಗ್ಗೆ ವಿಶ್ಲೇಷಿಸಿದಾಗ ಪಂಚಾಯತ್‌ನ ಶೇಕಡಾ 66 ಮಹಿಳಾ ಪ್ರತಿನಿಧಿಗಳು ಮೀಸಲಾತಿ ಸ್ಥಾನದಿಂದ ಗೆದ್ದು ಬಂದವರೆಂದು ತಿಳಿಸಿರುತ್ತಾರೆ. ಇದನ್ನು ಅವಲೋಕಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಮೀಸಲಾತಿಯ ಫಲಾನುಭವಿಗಳಾಗಿರುತ್ತಾರೆ ಹಾಗೂ ಶೇಕಡಾ 33 ಮಹಿಳಾ ಮೀಸಲಾತಿ ಸ್ಥಾನಕ್ಕಿಂತಲೂ ಹೆಚ್ಚು

ಮಹಿಳಾ ಪ್ರತಿನಿಧಿಗಳು(ಶೇ.52) ಅಧ್ಯಯನ ಕ್ಷೇತ್ರದ ಸ್ಥಳೀಯ ಸರ್ಕಾರಗಳನ್ನು ಪ್ರತಿನಿಧಿಸಿರುವುದು ಕಂಡುಬಂದಿರುತ್ತದೆ. ಇದನ್ನು ಅವಲೋಕಿಸಿದಾಗ ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲೂ ಪುರುಷರಿಗಿಂತ ಸಂಖ್ಯಾತ್ಮಕವಾಗಿ ಹೆಚ್ಚಿನ ಸ್ಥಾನವನ್ನು ಮಹಿಳೆಯರು ಪಡೆದಿರುವುದು ಕಂಡುಬರುತ್ತದೆ.

ಮಹಿಳಾ ಹಕ್ಕುಗಳ ಅರಿವು

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಕ್ಕು ಮತ್ತು ಬಾಧ್ಯತೆಗಳ ಬಗ್ಗೆ ಗ್ರಾಮ ಪಂಚಾಯತ್‌ನ ಹೆಚ್ಚಿನ ಮಹಿಳಾ ಪ್ರತಿನಿಧಿಗಳಿಗೆ ಅರಿವಿದೆ ಎಂದು ತಿಳಿದು ಬಂದಿರುತ್ತದೆ. ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ನ ಶೇಕಡಾ 100 ಮಹಿಳಾ ಪ್ರತಿನಿಧಿಗಳು ಹಕ್ಕುಗಳ ಬಗ್ಗೆ ಅರಿವಿದೆ ಎಂದು ತಿಳಿಸಿರುತ್ತಾರೆ. ಗ್ರಾಮ ಪಂಚಾಯತ್‌ನ ಶೇಕಡಾ 86 ಮಹಿಳಾ ಪ್ರತಿನಿಧಿಗಳು ತಮಗೆ ಮಹಿಳಾ ಹಕ್ಕುಗಳ ಬಗ್ಗೆ ಅರಿವಿದೆ ಎಂದು ತಿಳಿಸಿರುತ್ತಾರೆ.

ಕೋಷ್ಟಕ – 4.26

ಮಹಿಳಾ ಹಕ್ಕುಗಳ ಅರಿವು

ಹಕ್ಕುಗಳ ಅರಿವು	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಇದೆ	122	85.91	51	100	13	100
ಇಲ್ಲ	20	14.09	0	–	0	–
ಒಟ್ಟು	**142**	**100**	**51**	**100**	**13**	**100**
ಯಾವೆಲ್ಲಾ ಹಕ್ಕುಗಳು						
ಜನನಿ ಸುರಕ್ಷಾ ಯೋಜನೆ	48	33.80	46	90.19	13	100
ಮಾಹಿತಿ ಹಕ್ಕು ಕಾಯ್ದೆ	60	42.25	45	88.23	13	100
ವಿಧವಾ ವೇತನ	94	66.19	47	92.15	13	100
ಉದ್ಯೋಗಿನಿ ಯೋಜನೆ	44	30.98	33	64.70	11	84.61
ಮಹಿಳಾ ತರಬೇತಿ	31	21.83	33	64.70	11	84.61
ಸ್ತ್ರೀ ಶಕ್ತಿ ಯೋಜನೆ	68	47.88	45	88.23	10	76.92
ಸಕಾಲ	50	35.21	41	80.39	13	100
ಹೆಣ್ಣು ಮಕ್ಕಳ ವೃತ್ತಿ ತರಬೇತಿ ಯೋಜನೆ	30	21.12	29	56.86	09	69.23
ಇಂದಿರಾ ಮಹಿಳಾ ಯೋಜನೆ	22	15.49	26	50.98	09	69.23
ವರದಕ್ಷಿಣೆ ನಿಷೇದ ಕಾಯ್ದೆ	103	72.53	43	84.31	13	100
ಭ್ರೂಣ ಹತ್ಯೆ ನಿಷೇದ ಕಾಯ್ದೆ	76	53.52	40	78.43	13	100
ಸಮಾನ ಕೆಲಸಕ್ಕೆ ಸಮಾನ ವೇತನ ಕಾಯ್ದೆ	79	55.63	37	72.54	11	84.61

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಅರಿವಿದ್ದರೇ, ಯಾವ ಮಹಿಳಾ ಹಕ್ಕುಗಳ ಬಗ್ಗೆ ಅರಿವಿದೆ? ಎಂದು ಕೇಳಿದಾಗ ಕೋಷ್ಟಕ 4.26ರಲ್ಲಿ ವಿವರಿಸಿದ ಹಾಗೆ ವರದಕ್ಷಿಣೆ ನಿಷೇಧ ಕಾಯ್ದೆಯ ಬಗ್ಗೆ ಗ್ರಾಮ ಪಂಚಾಯತ್‌ನ 103, ತಾಲೂಕು ಪಂಚಾಯತ್‌ನ 43 ಮತ್ತು ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳಿಗೆ ಅರಿವಿದೆ ಎಂದು ತಿಳಿದು ಬಂದಿರುತ್ತದೆ. ಮೂರೂ ಸ್ತರಗಳ ಒಟ್ಟು 206 ಮಹಿಳಾ ಪ್ರತಿನಿಧಿಗಳಲ್ಲಿ ವಿಧವಾ ವೇತನ ಯೋಜನೆಯ ಬಗ್ಗೆ 154 ಮಂದಿಗೆ ಅರಿವಿದ್ದು ತಮ್ಮ ಕ್ಷೇತ್ರದ ಮತದಾರ ವಿಧವೆಯರಿಗೆ ನೀಡುತ್ತಿದ್ದೇವೆಂದು ಉತ್ತರಿಸಿದ್ದಾರೆ. 129 ಮಹಿಳಾ ಪ್ರತಿನಿಧಿಗಳಿಗೆ ಭ್ರೂಣ ಹತ್ಯೆ ನಿಷೇಧ ಕಾಯ್ದೆ, 127 ಮಹಿಳಾ ಪ್ರತಿನಿಧಿಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, 123 ಮಹಿಳಾ ಪ್ರತಿನಿಧಿಗಳಿಗೆ ಸ್ತ್ರೀ ಶಕ್ತಿ ಯೋಜನೆ, 118 ಮಹಿಳಾ ಪ್ರತಿನಿಧಿಗಳಿಗೆ ಮಾಹಿತಿ ಹಕ್ಕು, 107 ಮಹಿಳಾ ಪ್ರತಿನಿಧಿಗಳಿಗೆ ಜನನಿ ಸುರಕ್ಷಾ ಯೋಜನೆ, 104 ಮಹಿಳಾ ಪ್ರತಿನಿಧಿಗಳಿಗೆ ಸಕಾಲ, 88 ಮಹಿಳಾ ಪ್ರತಿನಿಧಿಗಳಿಗೆ ಉದ್ಯೋಗಿನಿ ಯೋಜನೆ, 75 ಮಹಿಳಾ ಪ್ರತಿನಿಧಿಗಳಿಗೆ ಮಹಿಳಾ ತರಬೇತಿ ಯೋಜನೆ, 68 ಮಹಿಳಾ ಪ್ರತಿನಿಧಿಗಳಿಗೆ ಹೆಣ್ಣು ಮಕ್ಕಳ ವೃತ್ತಿ ತರಬೇತಿ ಯೋಜನೆ ಮತ್ತು 57 ಮಹಿಳಾ ಪ್ರತಿನಿಧಿಗಳಿಗೆ ಇಂದಿರಾ ಮಹಿಳಾ ಯೋಜನೆಗಳ ಬಗ್ಗೆ ಅರಿವಿರುವುದನ್ನು ತಿಳಿಸಿರುತ್ತಾರೆ. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಭಾಗವಹಿಸುವ ಮಹಿಳಾ ಪ್ರತಿನಿಧಿಗಳಿಗೆ ರಾಜ್ಯ ತೆಗೆದುಕೊಂಡ ಕ್ರಮಗಳ ಬಗ್ಗೆ ಅರಿವಿದ್ದು ಇದು ಅವರ ಭಾಗವಹಿಸುವಿಕೆಯ ಮೇಲೆ ಪರಿಣಾಮ ಬೀರುತ್ತದೆಯೇ ಎಂದು ವಿಶ್ಲೇಷಿಸಲಾಗಿರುತ್ತದೆ. ಆದರೆ ಇದನ್ನು ಅವಲೋಕಿಸಿದಾಗ ರಾಜಕೀಯ ಸಹಭಾಗಿತ್ವದ ಮೇಲೆ ಇದು ಪರಿಣಾಮವನ್ನು ಬೀರಿದ್ದು ಕಂಡುಬರುವುದಿಲ್ಲ.

ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಮಹಿಳಾ ಕಾಯ್ದೆಗಳ ಅರಿವು

ಜನಪ್ರತಿನಿಧಿಗಳಾಗಿ ಸಾರ್ವಜನಿಕ ಸೇವೆಯಲ್ಲಿ ನಿರತರಾಗಿರುವ ಮಹಿಳಾ ಪ್ರತಿನಿಧಿಗಳಿಗೆ ಕೌಟುಂಬಿಕ ದೌರ್ಜನ್ಯ ತಡೆಗಟ್ಟುವ ಕಾಯ್ದೆಗಳ ಅರಿವು ಇದೆಯೇ ಎಂದು ಪ್ರಶ್ನಿಸಿದಾಗ ಶೇ. 96 ಮಹಿಳಾ ಪ್ರತಿನಿಧಿಗಳು ಹೆಚ್ಚಿನ ಕಾಯಿದೆಗಳ ಬಗ್ಗೆ ಅರಿವಿಲ್ಲದಿದ್ದರೂ ಆಯ್ಕೆ ಮಾಡಿದ ಕಾಯಿದೆಗಳ ಬಗ್ಗೆ ಅರಿವಿರುವುದನ್ನು ತಿಳಿಸಿರುತ್ತಾರೆ.

ಕೋಷ್ಟಕ – 4.27

ಮಹಿಳಾ ಕಾಯ್ದೆಗಳ ಅರಿವು

ಕಾಯ್ದೆಗಳ ಅರಿವು	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಇದೆ	134	94.36	50	98.03	13	100
ಇಲ್ಲ	08	05.64	01	01.97	0	–
ಒಟ್ಟು	**142**	**100**	**51**	**100**	**13**	**100**
ಯಾವೆಲ್ಲ ಕಾಯ್ದೆಗಳ ಅರಿವು						
ಬಾಲ್ಯವಿವಾಹ ನಿಷೇದ	130	91.54	49	96.07	13	100
ವರದಕ್ಷಿಣೆ ನಿಷೇದ	134	94.36	50	98.03	13	100
ಅನೈತಿಕ ವ್ಯವಹಾರ ನಿಗ್ರಹ	62	43.66	42	82.35	10	76.92
ಭ್ರೂಣ ಪತ್ತೆ ಮತ್ತು ಗರ್ಭಪಾತ ನಿಷೇದ	87	61.26	44	80.39	13	100
ಗೃಹದಲ್ಲಿ ಹಿಂಸಾ ತಡೆ	47	33.09	38	74.50	09	69.13
ಲೈಂಗಿಕ ದೌರ್ಜನ್ಯದ ವಿರುದ್ಧದ ತಡೆ	71	50.00	38	74.50	13	100
ಇತರ	38	26.76	36	70.58	13	100

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 4.27ರ ಪ್ರಕಾರ ಅರಿವಿದ್ದರೇ, ಯಾವೆಲ್ಲಾ ಕಾಯ್ದೆಗಳ ಬಗ್ಗೆ ಎಂದು ವಿಶ್ಲೇಷಿಸಿದಾಗ, ಗ್ರಾಮ ಪಂಚಾಯತ್‌ನ 134, ತಾಲೂಕು ಪಂಚಾಯತ್‌ನ 50 ಮತ್ತು ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ವರದಕ್ಷಿಣೆ ನಿಷೇಧ ಕಾಯ್ದೆ ಎಂದು, ಗ್ರಾಮ ಪಂಚಾಯತ್‌ನ 130, ತಾಲೂಕು ಪಂಚಾಯತ್‌ನ 49 ಮತ್ತು ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಬಾಲ್ಯ ವಿವಾಹ ನಿಷೇಧ ಕಾಯ್ದೆ ಕುರಿತು ತಿಳಿದಿದೆಯೆಂದು, ಗ್ರಾಮ ಪಂಚಾಯತ್‌ನ 87, ತಾಲೂಕು ಪಂಚಾಯತ್‌ನ 44 ಮತ್ತು ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಭ್ರೂಣ ಪತ್ತೆ ಮತ್ತು ಗರ್ಭಪಾತ ನಿಷೇಧ ಕಾಯಿದೆಯೆಂದೂ, ಗ್ರಾಮ ಪಂಚಾಯತ್‌ನ 47, ತಾಲೂಕು ಪಂಚಾಯತ್‌ನ 38 ಮತ್ತು ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಗೃಹದೊಳಗಿನ ಹಿಂಸಾ ತಡೆ ಕಾಯ್ದೆ, ಗ್ರಾಮ ಪಂಚಾಯತ್‌ನ 71, ತಾಲೂಕು ಪಂಚಾಯತ್‌ನ 38 ಮತ್ತು ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಲೈಂಗಿಕ ದೌರ್ಜನ್ಯದ ವಿರುದ್ಧದ ಕಾಯ್ದೆ, ಇತರ ಕಾಯ್ದೆಗಳಾದ ಹಿಂದೂ ದತ್ತು

ಮತ್ತು ಜೀವನಾಂಶ ಕಾಯ್ದೆ, ಉತ್ತರಾಧಿಕಾರ ಕಾಯ್ದೆ, ಸತಿ ಆಚರಣೆಯ ಪ್ರತಿಬಂಧಕ ಕಾಯ್ದೆ, ರಾಷ್ಟ್ರೀಯ ಮಹಿಳಾ ಆಯೋಗ ಕಾಯ್ದೆ, ಇತ್ಯಾದಿಗಳ ಬಗ್ಗೆ ಅರಿವಿರುವುದನ್ನು ತಿಳಿಸಿರುತ್ತಾರೆ ಹಾಗೂ ಇದರ ಬಗ್ಗೆ ಜನಜಾಗೃತಿಯನ್ನು ಮೂಡಿಸುತ್ತಿದ್ದೇವೆ ಎಂಬ ಉತ್ತರವನ್ನು ನೀಡಿರುತ್ತಾರೆ.

ರಾಜಕೀಯ ಪ್ರವೇಶಕ್ಕೂ ಮುನ್ನ ನಿರ್ಧಾರ ಕೈಗೊಳ್ಳುವಲ್ಲಿನ ಪಾತ್ರ

ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಕುಟುಂಬದ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಇಬ್ಬರೂ ಸೇರಿ ನಿರ್ಣಯಿಸುವುದೆಂದು ಕಂಡು ಬಂದಿರುತ್ತದೆ. ಮನೆ ವಾರ್ತೆಯ ನಿರ್ಣಯಗಳನ್ನು ವಿಶ್ಲೇಷಿಸಿದಾಗ ಮೇಲ್‌ಸ್ತರದ ಪಂಚಾಯತ್‌ಗಳಲ್ಲಿ ಮಹಿಳಾ ಪ್ರತಿನಿಧಿಗಳು ನಿರ್ಧರಿಸುವುದೆಂದು ಹಾಗೂ ಭೂ ವ್ಯವಹಾರ ಮತ್ತು ಹಣಕಾಸಿನ ಬಗ್ಗೆ ಮೂರು ಸ್ತರದ ಪಂಚಾಯತುಗಳಲ್ಲೂ ಹೆಚ್ಚಾಗಿ ಪುರುಷರೇ ತೀರ್ಮಾನಿಸುವುದೆಂದು ಕಂಡು ಬಂದಿರುತ್ತದೆ. ಈ ಎಲ್ಲಾ ವಿಷಯಗಳನ್ನು ಅವಲೋಕಿಸಿದಾಗ ಮೂರು ಸ್ತರಗಳ ಪಂಚಾಯತಿನ ಮಹಿಳಾ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆಯಲ್ಲಿ ಹೆಚ್ಚಿನ ವ್ಯತ್ಯಾಸಗಳು ಕಂಡು ಬಂದಿರುವುದಿಲ್ಲ. ಇದನ್ನು ಅವಲೋಕಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಕೌಟುಂಬಿಕ ನಿರ್ಧಾರಗಳನ್ನು ತೆಗೆದುಕೊಳ್ಳುವುದರಲ್ಲಿ ತಾವೇ ಪ್ರಮುಖವಾದ ಪಾತ್ರವನ್ನು ನಿರ್ವಹಿಸದಿರುವುದಕ್ಕೆ ಪುರುಷಾಧಿಪತ್ಯವೇ ಪ್ರಮುಖ ಕಾರಣವಾಗಿರುತ್ತದೆ[44].

ಕೋಷ್ಟಕ – 4.28

ನಿರ್ಧಾರ ಕೈಗೊಳ್ಳುವಲ್ಲಿನ ಪಾತ್ರ

ರಾಜಕೀಯ ಪ್ರವೇಶದ ಹಿಂದಿನ ಪಾತ್ರ	ಗ್ರಾಮ ಪಂಚಾಯತ್ ಪ್ರತಿನಿಧಿಗಳು			ತಾಲೂಕು ಪಂಚಾಯತ್ ಪ್ರತಿನಿಧಿಗಳು			ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು		
	ಪತಿ	ಪತ್ನಿ	ಇಬ್ಬರೂ	ಪತಿ	ಪತ್ನಿ	ಇಬ್ಬರೂ	ಪತಿ	ಪತ್ನಿ	ಇಬ್ಬರೂ
ಮಕ್ಕಳ ಶಿಕ್ಷಣ	16	13	113	01	04	46	03	01	09
ಮನೆವಾರ್ತೆ	11	37	94	0	13	38	0	12	01
ಆರೋಗ್ಯ	20	13	109	01	07	43	02	02	09
ಆರ್ಥಿಕ ನಿರ್ಧಾರ	30	10	90	10	01	40	06	01	06
ಭೂವ್ಯವಹಾರ	35	10	97	10	01	40	04	0	09
ಗೃಹ ನಿರ್ವಹಣೆ	10	33	99	0	12	39	0	08	05
ರಾಜಕೀಯ ಪ್ರವೇಶಿಸಿದ ನಂತರದ ಪಾತ್ರ									
ಮಕ್ಕಳ ಶಿಕ್ಷಣ	10	16	116	02	07	42	01	0	12
ಮನೆವಾರ್ತೆ	07	31	104	0	14	37	0	13	0
ಆರೋಗ್ಯ	08	19	115	03	06	42	0	07	06
ಆರ್ಥಿಕ ನಿರ್ಧಾರ	34	14	94	07	02	42	07	0	06
ಭೂವ್ಯವಹಾರ	35	16	91	07	02	42	07	0	06
ಗೃಹ ನಿರ್ವಹಣೆ	06	29	107	0	10	41	0	07	06

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಇದರ ಮುಂದಿನ ಭಾಗದಲ್ಲೂ ಪಂಚಾಯತ್ ಸದಸ್ಯರಾದ ನಂತರವೂ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಮೇಲಿನ ಕೋಷ್ಟಕದ ಅಂಶಗಳೇ ಹೆಚ್ಚಾಗಿ ಕಂಡುಬಂದಿದ್ದು ಪುರುಷರ ತೀರ್ಮಾನವೇ ಅಂತಿಮ ಎಂದು ಕಂಡುಬಂದಿರುತ್ತದೆ. ಈ ಎಲ್ಲಾ ವಿಷಯಗಳನ್ನು ಅವಲೋಕಿಸಿದಾಗ ಇಂದು ಪುರುಷರ ನಿರ್ಧಾರಗಳು ಅಂತಿಮವಾಗಿದ್ದರೂ ಪತ್ನಿಯರ ಜೊತೆ ಸಮಾಲೋಚನೆ ನಡೆಸಿರುವುದು ಮೂರೂ ಸ್ತರಗಳ ಪಂಚಾಯತ್‌ಗಳಲ್ಲೂ ಕಂಡುಬಂದಿರುತ್ತದೆ. ಈ ಕೋಷ್ಟಕಗಳನ್ನು ಗಮನಿಸಿದಾಗ ಲಿಂಗಾಧಾರಿತ ತೀರ್ಮಾನಗಳೇ ಪ್ರಮುಖವಾಗಿದ್ದು ಇದೇ ಫಲಿತವು ಕೇರಳ (ಮನು ಭಾಸ್ಕರ್, 1997) ಮತ್ತು ಮಹಾರಾಷ್ಟ್ರದ (ಮೈತ್ರೇಯಿ ಕೃಷ್ಣರಾಜ್, 1988) ಸ್ಥಳೀಯ ಸಂಸ್ಥೆಗಳ ಅಧ್ಯಯನದಲ್ಲೂ ಕಂಡುಬಂದಿರುತ್ತದೆ[45].

ಮಾಹಿತಿದಾರರ ಸ್ಥಾನಮಾನ

ಪಂಚಾಯತ್‌ಗಳಲ್ಲಿ ಚುನಾವಣೆಗೆ ನಿಂತು, ಸ್ಥಾನಮಾನಗಳನ್ನು ಪಡೆದು ನಾಯಕರಾಗುವ ಮೊದಲು ಅವರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಾನಮಾನಗಳು ಹೇಗಿತ್ತು ಎಂದು ಪ್ರಶ್ನಿಸಿದಾಗ, ಗ್ರಾಮ ಪಂಚಾಯತ್‌ನ 72, ತಾಲೂಕು ಪಂಚಾಯತ್‌ನ 46 ಮತ್ತು ಜಿಲ್ಲಾ ಪಂಚಾಯತ್ 10 ಮಹಿಳಾ ಪ್ರತಿನಿಧಿಗಳು ಸಾಮಾಜಿಕವಾಗಿ, ಗ್ರಾಮ ಪಂಚಾಯತ್‌ನ 43, ತಾಲೂಕು ಪಂಚಾಯತ್‌ನ 36 ಮತ್ತು ಜಿಲ್ಲಾ ಪಂಚಾಯತ್ 9 ಮಹಿಳಾ ಪ್ರತಿನಿಧಿಗಳು, ರಾಜಕೀಯವಾಗಿ ಗ್ರಾಮ ಪಂಚಾಯತ್‌ನ 16, ತಾಲೂಕು ಪಂಚಾಯತ್‌ನ 9 ಮತ್ತು ಜಿಲ್ಲಾ ಪಂಚಾಯತ್ 4 ಮಹಿಳಾ ಪ್ರತಿನಿಧಿಗಳು ಉತ್ತಮ ಸ್ಥಾನವನ್ನು ಪಡೆದಿರುತ್ತೇವೆ ಹಾಗೂ ಗ್ರಾಮ ಪಂಚಾಯತ್‌ನ 70, ತಾಲೂಕು ಪಂಚಾಯತ್‌ನ 5 ಮತ್ತು ಜಿಲ್ಲಾ ಪಂಚಾಯತ್ 3 ಮಹಿಳಾ ಪ್ರತಿನಿಧಿಗಳು ಸಾಮಾಜಿಕವಾಗಿ, ಗ್ರಾಮ ಪಂಚಾಯತ್‌ನ 99, ತಾಲೂಕು ಪಂಚಾಯತ್‌ನ 15 ಮತ್ತು ಜಿಲ್ಲಾ ಪಂಚಾಯತ್‌ನ 4 ಮಹಿಳಾ ಪ್ರತಿನಿಧಿಗಳು ಆರ್ಥಿಕವಾಗಿ, ಗ್ರಾಮ ಪಂಚಾಯತ್‌ನ 126, ತಾಲೂಕು ಪಂಚಾಯತ್‌ನ 42 ಮತ್ತು ಜಿಲ್ಲಾ ಪಂಚಾಯತ್‌ನ 9 ಮಹಿಳಾ ಪ್ರತಿನಿಧಿಗಳು ಸಾಧಾರಣವಾದ ಸ್ಥಾನಮಾನ ದೊರೆತಿತ್ತೆಂದು ತಿಳಿಸಿರುತ್ತಾರೆ.

ಕೋಷ್ಟಕ – 4.29

ಮಾಹಿತಿದಾರರ ಸ್ಥಾನಮಾನ

ಮೊದಲಿನ ಸ್ಥಾನಮಾನ	ಸ್ಥಿತಿ	ಸಾಮಾಜಿಕ	ಆರ್ಥಿಕ	ರಾಜಕೀಯ
ಗ್ರಾಮ ಪಂಚಾಯತ್ ಪ್ರತಿನಿಧಿಗಳು	ಉತ್ತಮ	72	43	16
	ಸಾಧಾರಣ	70	99	126
ತಾಲೂಕು ಪಂಚಾಯತ್ ಪ್ರತಿನಿಧಿಗಳು	ಉತ್ತಮ	46	36	9
	ಸಾಧಾರಣ	5	15	42
ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	ಉತ್ತಮ	10	9	4
	ಸಾಧಾರಣ	3	4	9
ನಂತರದ ಸ್ಥಾನಮಾನ				
ಗ್ರಾಮ ಪಂಚಾಯತ್ ಪ್ರತಿನಿಧಿಗಳು	ಉತ್ತಮ	135	56	134
	ಸಾಧಾರಣ	7	86	8
ತಾಲೂಕು ಪಂಚಾಯತ್ ಪ್ರತಿನಿಧಿಗಳು	ಉತ್ತಮ	51	45	46
	ಸಾಧಾರಣ	0	06	05
ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	ಉತ್ತಮ	13	10	12
	ಸಾಧಾರಣ	0	03	01

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 4.29ರ ಪ್ರಕಾರ ಪಂಚಾಯತ್‌ಗಳಲ್ಲಿ ಮಹಿಳೆಯರು ಚುನಾವಣೆಯಲ್ಲಿ ಗೆದ್ದು ಪ್ರತಿನಿಧಿಗಳಾದ ಮೇಲೆ ಅವರ ಸ್ಥಾನಮಾನಗಳಲ್ಲಿ ಮಹತ್ತರ ಬದಲಾವಣೆ ಆಗಿದೆ ಎಂದು ಅವರಲ್ಲಿ ಅನೇಕರು ತಿಳಿಸಿರುತ್ತಾರೆ. ಮಹಿಳಾ ಪ್ರತಿನಿಧಿಗಳಾದ ನಂತರ ಸ್ಥಾನಮಾನಗಳು ಉತ್ತಮವಾಗಿದೆಯೇ ಎಂದು ಕೇಳಿದಾಗ ರಾಜಕೀಯವಾಗಿ ಬಹಳಷ್ಟು ಉತ್ತಮವಾಗಿದೆ ಎಂದು ಮೂರು ಸ್ತರದಲ್ಲಿ ಶೇ. 97 ಮಹಿಳಾ ಪ್ರತಿನಿಧಿಗಳು ತಿಳಿಸಿರುತ್ತಾರೆ. ರಾಜಕೀಯ ಪ್ರವೇಶದ ಮೊದಲು ಹಾಗೂ ನಂತರ ಆರ್ಥಿಕವಾಗಿ ಸ್ಥಾನಮಾನದಲ್ಲಿ ಹೆಚ್ಚಿನ ಬದಲಾವಣೆಗಳಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸಾಮಾಜಿಕವಾಗಿಯೂ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ರಾಜಕೀಯದಲ್ಲಿ ಸದಸ್ಯತ್ವವನ್ನು ಹೊಂದುವುದಕ್ಕಿಂತ ಮೊದಲು ಉತ್ತಮ ಸ್ಥಾನವನ್ನು ಹೊಂದಿರುವುದು ಕಂಡುಬಂದಿರುತ್ತದೆ. ಇದನ್ನು ಅವಲೋಕಿಸಿದಾಗ ಮಹಿಳಾ ಪ್ರತಿನಿಧಿಗಳು ಸ್ಥಳೀಯ ಸಂಸ್ಥೆಗಳ ರಾಜಕೀಯ ಪ್ರವೇಶದಿಂದ ಸ್ಥಾನಮಾನ ಮತ್ತು ಗೌರವಗಳು ಹೆಚ್ಚಾಗಿದ್ದರೂ ಲಿಂಗ ತಾರತಮ್ಯಕ್ಕೆ ಒಳಗಾಗುತ್ತಾರೆ ಎಂಬ ಇತರ ಅಧ್ಯಯನಗಳ ಫಲಿತಗಳು ಪ್ರಸ್ತುತ ಅಧ್ಯಯನದಲ್ಲೂ ಕಂಡುಬಂದಿರುತ್ತದೆ[46].

ರಾಜಕೀಯ ಸಹಭಾಗಿತ್ವದಿಂದ ಆತ್ಮವಿಶ್ವಾಸದ ವೃದ್ಧಿ

ಸ್ಥಳೀಯ ಸಂಸ್ಥೆಗಳ ರಾಜಕೀಯ ಸಹಭಾಗಿತ್ವದಿಂದ ನಿಮ್ಮಲ್ಲಿ ಆತ್ಮವಿಶ್ವಾಸ ಹೆಚ್ಚಿದೆಯೇ ಎಂದು ಪ್ರಶ್ನಿಸಿದಾಗ ಶೇ. 98 ಮಹಿಳಾ ಪ್ರತಿನಿಧಿಗಳು ಹೌದೆಂದು ಉತ್ತರಿಸಿರುತ್ತಾರೆ. ಇದರ ಮುಂದಿನ ಭಾಗವಾಗಿ ಸ್ಥಳೀಯ ಸಂಸ್ಥೆಗಳ ರಾಜಕೀಯ ಸಹಭಾಗಿತ್ವದಿಂದ ಹೆಚ್ಚಾದ ಆತ್ಮವಿಶ್ವಾಸದ ಅಂಶಗಳು ಯಾವುವು ಎಂದು ಪ್ರಶ್ನಿಸಿದಾಗ

ಕೋಷ್ಟಕ – 4.30

ರಾಜಕೀಯ ಸಹಭಾಗಿತ್ವದಿಂದ ಆತ್ಮವಿಶ್ವಾಸದ ವೃದ್ಧಿ

ಆತ್ಮವಿಶ್ವಾಸ ವೃದ್ಧಿ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಹೆಚ್ಚಾಗಿದೆ	132	92.95	51	100	13	100
ಹೆಚ್ಚಾಗಿಲ್ಲ	10	07.05	0	–	0	–
ಒಟ್ಟು	**142**	**100**	**51**	**100**	**13**	**100**
ಕಾರಣಗಳು						
ಸಭೆಗಳಲ್ಲಿ ಮುಂದೆ ಕುಳಿತುಕೊಳ್ಳುವುದು	108	76.05	46	90.19	13	100
ವ್ಯವಹಾರ ನಡೆಸುವುದು	48	33.80	31	60.78	11	84.61
ವಾರ್ಡ್ ಸಮಸ್ಯೆ ನಿವಾರಣೆ	110	77.46	45	88.23	13	100
ವಾರ್ಡ್‌ಗೆ ಒಬ್ಬಂಟಿ ಭೇಟಿ	57	40.14	38	74.50	13	100
ಸ್ಥಳೀಯ ಅಭಿವೃದ್ಧಿ ಚಟುವಟಿಕೆ	116	81.69	50	98.03	13	100

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 4.30ರ ಪ್ರಕಾರ ಗ್ರಾಮ ಪಂಚಾಯತ್‌ನ 116, ತಾಲೂಕು ಪಂಚಾಯತ್‌ನ 50, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಸ್ಥಳೀಯ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿರುವುದು, ಗ್ರಾಮ ಪಂಚಾಯತ್‌ನ 110, ತಾಲೂಕು ಪಂಚಾಯತ್‌ನ 45, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ವಾರ್ಡ್ ಸಮಸ್ಯೆಯನ್ನು ನಿವಾರಿಸಿರುವುದು, ಗ್ರಾಮ ಪಂಚಾಯತ್‌ನ 108, ತಾಲೂಕು ಪಂಚಾಯತ್‌ನ 46, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಸಭೆಗಳಲ್ಲಿ ಮುಂದೆ ಕುಳಿತುಕೊಳ್ಳುವುದು, ಗ್ರಾಮ ಪಂಚಾಯತ್‌ನ 57, ತಾಲೂಕು ಪಂಚಾಯತ್‌ನ 38, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ವಾರ್ಡಿಗೆ ಒಬ್ಬಂಟಿಯಾಗಿ ಆಗಾಗ ಭೇಟಿ ನೀಡುವುದು, ಗ್ರಾಮ ಪಂಚಾಯತ್‌ನ 48, ತಾಲೂಕು ಪಂಚಾಯತ್‌ನ 31, ಜಿಲ್ಲಾ ಪಂಚಾಯತ್‌ನ 11 ಮಹಿಳಾ ಪ್ರತಿನಿಧಿಗಳು ವ್ಯವಹಾರಗಳನ್ನು ನಡೆಸಿರುವುದು ಎಂದು ಉತ್ತರವನ್ನು ನೀಡಿರುತ್ತಾರೆ. ಇದನ್ನು ಗಮನಿಸಿದಾಗ ಸ್ಥಳೀಯ ಸಂಸ್ಥೆಗಳ ರಾಜಕೀಯ ಸಹಭಾಗಿತ್ವದಿಂದ ಸ್ವಲ್ಪಮಟ್ಟದ ಆತ್ಮವಿಶ್ವಾಸವು ಹೆಚ್ಚಾಗಿರುವುದು ಎಂಬ ಫಲಿತವು ಇತರ ಪ್ರದೇಶಗಳ ಅಧ್ಯಯನದ ಫಲಿತಗಲ್ಲಿಯೂ ಗಮನಿಸಲಾಗಿರುತ್ತದೆ[47].

ಸ್ಥಳೀಯ ಸಂಸ್ಥೆಗಳ ರಾಜಕೀಯ ಸಹಭಾಗಿತ್ವದಿಂದಾದ ಪ್ರಭಾವ

ಸ್ಥಳೀಯ ಸಂಸ್ಥೆಗಳಲ್ಲಿ ಪ್ರತಿನಿಧಿತ್ವ ದೊರಕಿದ ನಂತರ ಬದುಕಿನ ಮೇಲೆ ಏನಾದರೂ ಪರಿಣಾಮವಾಗಿದೆಯೇ ಎಂದು ಪ್ರಶ್ನಿಸಿದಾಗ ಗ್ರಾಮ ಪಂಚಾಯತ್‌ನ 135, ತಾಲೂಕು ಪಂಚಾಯತ್‌ನ 19 ಮತ್ತು ಜಿಲ್ಲಾ ಪಂಚಾಯತ್‌ನ 2 ಮಹಿಳಾ ಪ್ರತಿನಿಧಿಗಳು ಪ್ರಭಾವ ಬೀರಿದೆ ಎಂದೂ ಗ್ರಾಮ ಪಂಚಾಯತ್‌ನ 7, ತಾಲೂಕು ಪಂಚಾಯತ್‌ನ 32 ಮತ್ತು ಜಿಲ್ಲಾ ಪಂಚಾಯತ್ 11 ಮಹಿಳಾ ಪ್ರತಿನಿಧಿಗಳು ಪ್ರಭಾವ ಬೀರಿಲ್ಲವೆಂದೂ ತಿಳಿಸಿರುತ್ತಾರೆ.

ಕೋಷ್ಟಕ – 4.31

ರಾಜಕೀಯ ಸಹಭಾಗಿತ್ವದ ಪ್ರಭಾವ

ಪ್ರಭಾವ ಬೀರಿದ ಅಂಶಗಳು	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಘನತೆ, ಗೌರವ ಹೆಚ್ಚಿದೆ	77	54.22	37	72.54	11	98.03
ಮನೆ ಜವಾಬ್ದಾರಿ ಕಡಿಮೆಯಾಗಿದೆ	25	17.60	14	27.45	9	69.23
ಶೋಷಣೆಗೆ ಗುರಿ	03	02.11	14	27.45	0	–
ಆರೋಗ್ಯ	15	10.56	16	31.37	01	07.69
ಆರ್ಥಿಕ ಸಬಲೀಕರಣ	31	21.83	18	35.29	12	92.30
ಸದಸ್ಯರಾದ ನಂತರ						
ಘನತೆ, ಗೌರವ ಹೆಚ್ಚಿದೆ	135	95.07	45	88.23	13	100
ಮನೆ ಜವಾಬ್ದಾರಿ ಕಡಿಮೆಯಾಗಿದೆ	32	22.53	19	37.25	11	98.03
ಶೋಷಣೆಗೆ ಗುರಿ	09	06.33	14	27.45	0	–
ಆರೋಗ್ಯ	24	16.90	20	39.21	02	15.38
ಆರ್ಥಿಕ ಸಬಲೀಕರಣ	38	26.76	18	35.29	12	92.30

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಇದರ ಮುಂದಿನ ಭಾಗವಾಗಿ ಸದಸ್ಯರಾಗುವ ಮೊದಲು ಸಮಾಜದಲ್ಲಿ ಘನತೆ ಗೌರವಗಳಿತ್ತೆಂದು ಕೋಷ್ಟಕ 4.31ರ ವಿಶ್ಲೇಷಣೆ ಪ್ರಕಾರ ಗ್ರಾಮ ಪಂಚಾಯತ್‌ನ 77, ತಾಲೂಕು ಪಂಚಾಯತ್‌ನ 37 ಮತ್ತು ಜಿಲ್ಲಾ ಪಂಚಾಯತ್‌ನ 11 ಮಹಿಳಾ ಪ್ರತಿನಿಧಿಗಳು ಘನತೆ ಗೌರವಗಳು ಹೆಚ್ಚಾಗಿತ್ತೆಂದು ಎಂದಿದ್ದಾರೆ. ಗ್ರಾಮ ಪಂಚಾಯತ್‌ನ 31, ತಾಲೂಕು ಪಂಚಾಯತ್‌ನ 18 ಮತ್ತು ಜಿಲ್ಲಾ ಪಂಚಾಯತ್‌ನ 12 ಮಹಿಳಾ ಪ್ರತಿನಿಧಿಗಳು ಆರ್ಥಿಕ ಸಬಲೀಕರಣ, ಗ್ರಾಮ ಪಂಚಾಯತ್‌ನ 25, ತಾಲೂಕು ಪಂಚಾಯತ್‌ನ 14 ಮತ್ತು ಜಿಲ್ಲಾ ಪಂಚಾಯತ್‌ನ 9 ಮಹಿಳಾ ಪ್ರತಿನಿಧಿಗಳು ಮನೆ ಜವಾಬ್ದಾರಿಗಳು ಕಡಿಮೆ ಆಗಿರುವುದು, ಗ್ರಾಮ ಪಂಚಾಯತ್‌ನ 15, ತಾಲೂಕು ಪಂಚಾಯತ್‌ನ 16 ಮತ್ತು ಜಿಲ್ಲಾ ಪಂಚಾಯತ್‌ನ 1 ಮಹಿಳಾ ಪ್ರತಿನಿಧಿಗಳು ಆರೋಗ್ಯದ ಸಮಸ್ಯೆ, ಗ್ರಾಮ ಪಂಚಾಯತ್‌ನ 3 ಮತ್ತು ತಾಲೂಕು ಪಂಚಾಯತ್‌ನ 14 ಮಹಿಳಾ ಪ್ರತಿನಿಧಿಗಳು ಶೋಷಣೆಗೆ ಗುರಿಯಾಗಿರುವುದು ಎಂದು ತಿಳಿಸಿರುತ್ತಾರೆ. ಸದಸ್ಯರಾದ ನಂತರ ಇದರಲ್ಲಿ ಏನದಾರೂ ಬದಲಾವಣೆ ಆಗಿದೆಯೇ ಎಂದು ಪ್ರಶ್ನಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳ ಘನತೆ ಗೌರವ ಹೆಚ್ಚಾಗಿರುವುದನ್ನು ತಿಳಿಸಿರುತ್ತಾರೆ. ಉಳಿದಂತೆ ಹೆಚ್ಚಿನ ಬದಲಾವಣೆಗಳು ಕಂಡುಬಂದಿರುವುದಿಲ್ಲ.

ಸಂಘ ಸಂಸ್ಥೆಗಳ ಸದಸ್ಯತ್ವ

ಮಹಿಳಾ ಪ್ರತಿನಿಧಿಗಳಲ್ಲಿ ಯಾವುದಾದರೂ ಜಾತಿ ಆಧಾರಿತ, ಧರ್ಮ ಆಧಾರಿತ, ಯುವಕ ಮತ್ತು ಯುವತಿ ಮಂಡಲ ಇತ್ಯಾದಿಗಳಲ್ಲಿ ಸದಸ್ಯತ್ವದ ಬಗ್ಗೆ ವಿಚಾರಿಸಿದಾಗ ಮಹಿಳಾ ಮಂಡಳಿಗಳು ಮತ್ತು ಸ್ವಸಹಾಯ ಸಂಘಗಳಲ್ಲಿ ಗ್ರಾಮ ಪಂಚಾಯತ್‌ಗಳ ಸದಸ್ಯೆಯರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಕಂಡು ಬರುತ್ತದೆ.

ಕೋಷ್ಟಕ – 4.32

ಸಂಘ ಸಂಸ್ಥೆಗಳ ಸದಸ್ಯತ್ವ

ಸಂಘ ಸಂಸ್ಥೆಗಳ ಸದಸ್ಯತ್ವ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಮಹಿಳಾ ಮಂಡಳಿ	111	78.16	16	31.37	03	23.07
ಸ್ವಸಹಾಯ ಸಂಘ	100	70.42	29	56.86	04	30.76
ಶಾಲಾಭಿವೃದ್ಧಿ ಸಮಿತಿ	27	19.01	26	50.98	07	53.84
ಯುವತಿ ಮಂಡಲ	07	04.92	09	17.64	01	07.69
ಹಾಲು ಉತ್ಪಾದಕರ ಸಂಘ	10	07.04	13	25.49	01	07.69
ಇತರ(ಜಾತಿ ಆಧಾರಿತ)	88	61.97	37	72.54	12	92.30

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 4.32ರ ಪ್ರಕಾರ ಗ್ರಾಮ ಪಂಚಾಯತ್‌ನ 111, ತಾಲೂಕು ಪಂಚಾಯತ್‌ನ 16 ಮತ್ತು ಜಿಲ್ಲಾ ಪಂಚಾಯತ್‌ನ 3 ಮಹಿಳಾ ಪ್ರತಿನಿಧಿಗಳು ಮಹಿಳಾ ಮಂಡಳಿ, ಗ್ರಾಮ ಪಂಚಾಯತ್‌ನ 100, ತಾಲೂಕು ಪಂಚಾಯತ್‌ನ 29 ಮತ್ತು ಜಿಲ್ಲಾ ಪಂಚಾಯತ್ 4 ಮಹಿಳಾ ಪ್ರತಿನಿಧಿಗಳು ಸ್ವಸಹಾಯ ಸಂಘ, ಗ್ರಾಮ ಪಂಚಾಯತ್‌ನ 27, ತಾಲೂಕು ಪಂಚಾಯತ್‌ನ 26 ಮತ್ತು ಜಿಲ್ಲಾ ಪಂಚಾಯತ್ 7 ಮಹಿಳಾ ಪ್ರತಿನಿಧಿಗಳು ಶಾಲಾಭಿವೃದ್ಧಿ ಸಮಿತಿ, ಗ್ರಾಮ ಪಂಚಾಯತ್‌ನ 17, ತಾಲೂಕು ಪಂಚಾಯತ್‌ನ 11 ಮತ್ತು ಜಿಲ್ಲಾ ಪಂಚಾಯತ್‌ನ 4 ಮಹಿಳಾ ಪ್ರತಿನಿಧಿಗಳು ಯುವತಿ ಮಂಡಲ, ಗ್ರಾಮ ಪಂಚಾಯತ್‌ನ 10, ತಾಲೂಕು ಪಂಚಾಯತ್‌ನ 13 ಮತ್ತು ಜಿಲ್ಲಾ ಪಂಚಾಯತ್‌ನ 5 ಮಹಿಳಾ ಪ್ರತಿನಿಧಿಗಳು ಮಹಿಳಾ ಹಾಲು ಉತ್ಪಾದಕರ ಸಂಘದ ಸದಸ್ಯತ್ವವನ್ನು ಹೊಂದಿರುತ್ತಾರೆ. ಗ್ರಾಮ ಪಂಚಾಯತ್‌ನ 88, ತಾಲೂಕು ಪಂಚಾಯತ್‌ನ 37 ಮತ್ತು ಜಿಲ್ಲಾ ಪಂಚಾಯತ್‌ನ 12 ಮಹಿಳಾ ಪ್ರತಿನಿಧಿಗಳು ಜಾತಿ ಆಧಾರಿತ ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಹೊಂದಿರುವುದು ಕಂಡುಬಂದಿರುತ್ತದೆ. ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಸ್ತ್ರೀ ಶಕ್ತಿ ಸಂಘಗಳ ಸದಸ್ಯತ್ವವನ್ನು ಪಡೆದಿರುವುದು

ಮಾತ್ರವಲ್ಲದೇ ಪ್ರಾಂತೀಯ ಸಂಘಗಳಾದ, ಕನ್ನಡ ಸಂಘ, ತುಳು ಸಂಘ, ಕೊಂಕಣಿ ಸಂಘ ಇತ್ಯಾದಿ ಸಮುದಾಯಾಧಾರಿತ ಸಂಘಗಳ ಸದಸ್ಯತ್ವವನ್ನು ಪಡೆದಿರುವುದು ಕಂಡುಬಂದಿರುತ್ತದೆ. ಸಂಘಸಂಸ್ಥೆಗಳಲ್ಲಿ ಸದಸ್ಯತ್ವ ಹೊಂದಿರುವ ಮಹಿಳಾ ಪ್ರತಿನಿಧಿಗಳು ಸಾರ್ವಜನಿಕ ಕೆಲಸಗಳಲ್ಲಿ ತೊಡಗಿದ್ದು, ಸಂಘದ ಸಭೆಗಳಲ್ಲಿ ಭಾಗವಹಿಸಿ, ಉಳಿತಾಯವನ್ನು ಮಾಡಿ, ಆ ಮೂಲಕ ಸಾಮಾಜಿಕವಾಗಿ ಮಾತ್ರವಲ್ಲದೆ ಮುಖ್ಯವಾಗಿ ಆರ್ಥಿಕವಾಗಿ ತಮ್ಮನ್ನು ತಾವು ಬದಲಾಯಿಸಿಕೊಂಡಿದ್ದು, ಸ್ವಲ್ಪಮಟ್ಟಿನ ಆರ್ಥಿಕ ಸ್ವಾವಲಂಬನೆ ಮತ್ತು ಸಾಮರ್ಥ್ಯ ಅವರನ್ನು ಮನೆಯ ಹೊರಗಿನ ಕೆಲಸ ಕಾರ್ಯಗಳಲ್ಲಿ ಭಾಗವಹಿಸುವಂತೆ ಮಾಡಿರುವುದು ಹಾಗೂ ತೀರ್ಮಾನ ತೆಗೆದುಕೊಂಡಿರುವುದು, ತಮ್ಮ ಕ್ಷೇತ್ರಕ್ಕೆ ಬರಬೇಕಾಗಿರುವ ಸರಕಾರಿ ಯೋಜನೆಗಳನ್ನು ಪ್ರಯತ್ನ ಪೂರ್ವಕವಾಗಿ ತಮಗೇ ದಕ್ಕುವಂತೆ ಮಾಡಿರುವುದು ಕಂಡುಬಂದಿರುತ್ತದೆ. ಈ ರೀತಿ ವಿವಿಧ ಸಂಘಸಂಸ್ಥೆಗಳ ಸದಸ್ಯತ್ವವನ್ನು ಹೊಂದಿರುವ ಮಹಿಳಾ ಪ್ರತಿನಿಧಿಗಳು ಹೆಚ್ಚು ಶಿಕ್ಷಣವನ್ನು ಪಡೆದವರಾಗಿದ್ದವರು (24.75%) ರಾಜಕೀಯವಾಗಿಯೂ ಸಕ್ರಿಯವಾಗಿರುವುದನ್ನು ಗಮನಿಸಿದಾಗ ಸಂಘಸಂಸ್ಥೆಗಳಲ್ಲಿ ದೊರಕಿದ ತರಬೇತಿ ಅನುಭವಗಳು ಇತ್ಯಾದಿಗಳು ಅವರ ರಾಜಕೀಯ ಸಹಭಾಗಿತ್ವದ ಮೇಲೆ ಪರಿಣಾಮ ಬೀರಿರುವುದನ್ನು ತೋರಿಸುತ್ತದೆ. ಹೆಚ್ಚಿನ ಅಧ್ಯಯನಗಳು ಸೂಚಿಸುವ ಪ್ರಕಾರ ಜಾತಿ, ಧರ್ಮ ಮತ್ತು ಲಿಂಗತ್ವ ಪೂರ್ವಗ್ರಹಗಳಿಂದ ಪ್ರಭಾವಿತವಾದ ಸಾಮಾಜಿಕ ಮತ್ತು ರಾಜಕೀಯ ಪರಿಸರಗಳಲ್ಲಿ ಮಹಿಳೆಯರನ್ನು ಅವಹೇಳನಕ್ಕೆ ಗುರಿಪಡಿಸಲಾಗುತ್ತಿದೆ. ಆದರೆ ಎಲ್ಲಿ ಮಹಿಳೆಯರಿಗೆ ಸಂಘ ಸಂಸ್ಥೆಗಳ ಬಲವಾದ ಬೆಂಬಲ ದೊರಕಿದೆಯೋ, ಅಂತಹ ಮಹಿಳಾ ಪ್ರತಿನಿಧಿಗಳು ಪಂಚಾಯತ್ ಸದಸ್ಯರಾಗಿಯೂ ಸಕ್ರಿಯರಾಗಿದ್ದಾರೆ ಎಂದು ಇತರ ಅಧ್ಯಯನದಲ್ಲಿ ಕಂಡುಕೊಂಡ ಫಲಿತವು, ಪ್ರಸ್ತುತ ಅಧ್ಯಯನ ಕ್ಷೇತ್ರದ ಪಂಚಾಯತ್‌ನಲ್ಲೂ ಮಹಿಳಾ ಪ್ರತಿನಿಧಿಗಳು ಹೆಚ್ಚು ಶಿಕ್ಷಿತರಾಗಿದ್ದು, ಸಂಘ ಸಂಸ್ಥೆಗಳಲ್ಲಿ ದೊರಕಿದ ತರಬೇತಿ ಮತ್ತು ಬೆಂಬಲದಿಂದ ಸಕ್ರಿಯವಾಗಿ ರಾಜಕೀಯದಲ್ಲಿ ಪಾಲ್ಗೊಂಡಿದ್ದು ಕಂಡುಬಂದಿರುತ್ತದೆ[48].

ಉಪಸಂಹಾರ

1992ರ 73ನೇ ಪಂಚಾಯತ್ ತಿದ್ದುಪಡಿ ಕಾಯ್ದೆಯ ಪೂರ್ವದಲ್ಲಿ ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ಕೆಲವು ಮಹಿಳೆಯರು ಸ್ವಹಿತಾಸಕ್ತಿಯಿಂದ ಮತ್ತು ಕೆಲವರು ಒತ್ತಡಕ್ಕೊಳಗಾಗಿ ಭಾಗವಹಿಸುತ್ತಿದ್ದರು. ಪಂಚಾಯತ್ ತಿದ್ದುಪಡಿ ಕಾಯ್ದೆಯು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ಸ್ಥಳೀಯ ರಂಗದ ಭಾಗವಹಿಸುವಿಕೆ ಮತ್ತು ಬದುಕನ್ನು ಕ್ರಾಂತಿಕಾರಿಯಾಗಿ ಬದಲಾಯಿಸಿದ ಒಂದು ಚಾರಿತ್ರಿಕ ಘಟನೆ. ಈ ತಿದ್ದುಪಡಿಗಳು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿಯ ಬಗ್ಗೆ ಪ್ರತಿಪಾದಿಸಿತು. ಇದು ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಮತ್ತು ಸಹಭಾಗಿತ್ವದಲ್ಲಿ

[illegible]

[illegible]

ಮಹತ್ವದ ಬದಲಾವಣೆ ತರುವುದರಲ್ಲಿ ಯಶಸ್ವಿಯಾಗಬಹುದು ಎಂಬುದಾಗಿ ಭಾವಿಸಿಕೊಳ್ಳಲಾಗಿತ್ತು. ಆದರೆ ರಾಷ್ಟ್ರಾದ್ಯಂತ ನಡೆದ ಹೆಚ್ಚಿನ ಅಧ್ಯಯನಗಳ ಫಲಿತಗಳು ಈ ಕಾಯ್ದೆಯು ಮಹಿಳೆಯರ ಸಬಲೀಕರಣಗೊಳಿಸದೇ, ಪುರುಷ ಪ್ರಧಾನ ಸಮಾಜವು ಅವರನ್ನು ಶೋಷಣೆಗೊಳಪಡಿಸಲು ಅವಕಾಶ ಮಾಡಿಕೊಟ್ಟಿತು ಎಂಬುದಾಗಿ ಪ್ರತಿಪಾದಿಸುತ್ತದೆ. ಉಡುಪಿ ಜಿಲ್ಲೆಗೆ ಸಂಬಂಧಿಸಿದ ಪ್ರಸ್ತುತ ಅಧ್ಯಯನವು ಇತರ ಪ್ರದೇಶಗಳ ಅಧ್ಯಯನಗಳಿಂದ ಭಿನ್ನವಾದ ಫಲಿತಗಳನ್ನು ನೀಡಬಹುದು ಎಂಬುದಾಗಿ ಭಾವಿಸಿಕೊಂಡಿದ್ದರೂ ಭಿನ್ನವಾದ ಫಲಿತಗಳು ದೊರಕಿರುವುದಿಲ್ಲ.

ಉಡುಪಿಯ ಸಾಮಾಜಿಕ ವ್ಯವಸ್ಥೆಯಲ್ಲಿ ಹಿಂದೂ ಧರ್ಮಕ್ಕೆ ಸೇರಿದ ಜನಸಂಖ್ಯೆ ಹೆಚ್ಚಾಗಿದ್ದು ಸಹಜವಾಗಿಯೇ ಹೆಚ್ಚಾಗಿ(89%) ಪಾಲ್ಗೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿರುತ್ತದೆ. ಮುಸ್ಲಿಮ್ ಸಮುದಾಯ ತನ್ನದೇ ಆದ ಸಾಂಪ್ರದಾಯಿಕ ಚೌಕಟ್ಟನ್ನು ಒಳಗೊಂಡಿದ್ದು ಮಹಿಳೆಯರನ್ನು ಸಾರ್ವಜನಿಕ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಕರ್ನಾಟಕ ರಾಜ್ಯದ ಇತರ ಜಿಲ್ಲೆಗೆ ಹೋಲಿಸಿದಾಗ ಉಡುಪಿಯ ಮುಸ್ಲಿಮ್ ಸಮುದಾಯವು ಹೆಚ್ಚಿನ ವಿದ್ಯಾಭ್ಯಾಸವನ್ನು ಹೊಂದಿರುವುದನ್ನು 2011ರ ಜನಗಣತಿ ವರದಿ ಮತ್ತು ಜಿಲ್ಲೆಗೆ ಸಂಬಂಧಪಟ್ಟ 2008ರ ಮಾನವ ಅಭಿವೃದ್ಧಿ ವರದಿ ಉಲ್ಲೇಖಿಸಿದರೂ ಜನಪ್ರತಿನಿಧಿಗಳಾಗಿ ಆಯ್ಕೆಯಾಗುವುದಕ್ಕೆ ಮುಸ್ಲಿಮ್ ಮಹಿಳೆಯರು(99%) ಆಸಕ್ತಿ ತೋರಿಸದಿರುವುದನ್ನು ಎತ್ತಿ ತೋರಿಸುತ್ತದೆ. ಹೆಚ್ಚಿನ ವಿದ್ಯಾಭ್ಯಾಸ ಹೊಂದಿದ ಕ್ರಿಶ್ಚಿಯನ್(9%) ಮತ್ತು ಜೈನ(1%) ಸಮುದಾಯಕ್ಕೆ ಸೇರಿದ ಕೆಲವು ಮಹಿಳೆಯರು ಆಸಕ್ತಿಯನ್ನು ಹೊಂದಿರುತ್ತಾರೆ. ಆದರೆ ಈ ಧರ್ಮಕ್ಕೆ ಸೇರಿದ ಹೆಚ್ಚಿನ ಮಹಿಳೆಯರು ವೃತ್ತಿಪರ ಶಿಕ್ಷಣ ಪಡೆದು ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಉನ್ನತ ಹುದ್ದೆ ಪಡೆಯುವುದಕ್ಕೆ ಪ್ರಾಶಸ್ತ್ಯ ನೀಡಿರುವುದು ಕ್ಷೇತ್ರಕಾರ್ಯದಲ್ಲಿ ಗಮನಿಸಿದ ಅಂಶವಾಗಿದೆ. ಮೀಸಲಾತಿ ನೀತಿಯ ಪರಿಣಾಮಕಾರಿ ಅನುಷ್ಠಾನದಿಂದಾಗಿ ಎಲ್ಲಾ ಜಾತಿ ಮತ್ತು ಉಪಜಾತಿಗಳಿಗೆ ಸೇರಿದ ಮಹಿಳೆಯರಿಗೆ ಜನಪ್ರತಿನಿಧಿಗಳಾಗಿ ಆಯ್ಕೆಯಾಗಿರುವುದಕ್ಕೆ ಅವಕಾಶ ದೊರಕಿರುತ್ತದೆ. ದುರ್ಬಲ ವರ್ಗಕ್ಕೆ ಸೇರಿದ ಜನ ಪ್ರತಿನಿಧಿಗಳಿಗಿಂತ ಮೇಲ್ಜಾತಿಗೆ ಸೇರಿದ ಮಹಿಳಾ ಪ್ರತಿನಿಧಿಗಳು ಪರಿಣಾಮಕಾರಿಯಾಗಿ ಅಧಿಕಾರ ಚಲಾಯಿಸುತ್ತಿರುವುದು ಮತ್ತು ತಮ್ಮ ನಿರ್ಣಯಗಳನ್ನು ಬಲವಂತದಿಂದ ಮತ್ತು ಆಮಿಷಗಳನ್ನು ಒಡ್ಡುವುದರ ಮೂಲಕ ಆರ್ಥಿಕವಾಗಿ ಹಿಂದುಳಿದ ಕೆಳಜಾತಿಗೆ ಸೇರಿದ ಪ್ರತಿನಿಧಿಗಳ ಮೇಲೆ ಹೇರಿ ತಮ್ಮ ನಿಯಂತ್ರಣದಲ್ಲಿರಿಸಿರುವುದು ತಮ್ಮ ಹಿತಾಸಕ್ತಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವಂತೆ ಮಾಡುವುದರಲ್ಲಿ ಯಶಸ್ವಿಯಾಗಿರುತ್ತಾರೆ. ಗ್ರಾಮ ಪಂಚಾಯತ್‌ನಲ್ಲಿ ಮೇಲ್ಜಾತಿಯ ಮಹಿಳೆಯರಿಗಿಂತ ಕೆಳಜಾತಿಯ ಮಹಿಳೆಯರು. ಶೈಕ್ಷಣಿಕ

ಮತ್ತು ಆರ್ಥಿಕವಾಗಿ ಹಿಂದುಳಿದವರು ಚುನಾವಣೆಯಲ್ಲಿ ಆಸಕ್ತಿ ತೋರಿರುವುದು ಅತ್ಯಂತ ಕುತೂಹಲಕಾರಿ ಅಂಶವಾಗಿರುತ್ತದೆ. ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳ ಮಹಿಳಾ ಪ್ರತಿನಿಧಿಗಳನ್ನು ಗಮನಿಸಿದಾಗ ರಾಜಕೀಯ ಪಕ್ಷಗಳು ಮೇಲ್ಜಾತಿಗೆ ಸೇರಿದ ಅಥವಾ ಸಂಬಂಧಪಟ್ಟ ಕ್ಷೇತ್ರ ಮೀಸಲಾತಿಗೆ ಒಳಪಟ್ಟಿದ್ದರೆ ಶಿಕ್ಷಿತ ಮತ್ತು ಶ್ರೀಮಂತ ಮಹಿಳೆಯರಿಗೆ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟಿರುತ್ತವೆ. ಅವಿವಾಹಿತರಿಗಿಂತ ವಿವಾಹಿತ ಮಹಿಳೆಯರೇ ಸದಸ್ಯರಾಗಿ ಚುನಾಯಿತರಾಗಿರುತ್ತಾರೆ. ವಿಧವೆಯರು ಜನಪ್ರತಿನಿಧಿಗಳಾಗಿ ಚುನಾಯಿತರಾದಾಗ ಅವರ ಕಾರ್ಯಪ್ರವೃತ್ತಿಯ ಬಗ್ಗೆ ಸಂಶಯಪಟ್ಟು ಅವಹೇಳನ ಮಾಡಿರುವುದು ಬುದ್ಧಿಜೀವಿಗಳ ಊರೆಂದು ಪರಿಗಣಿಸಿದ ಉಡುಪಿಯಲ್ಲೂ ಕಂಡುಬಂದಿರುತ್ತದೆ. ವಿಧವೆಯರು ತಮ್ಮ ಕುಟುಂಬದ ಪುರುಷ ಸದಸ್ಯರ ಹೇಳಿಕೆ, ಬೆಂಬಲ, ಸಹಕಾರ ಮತ್ತು ಆಣತಿಯೊಂದಿಗೆ ಮಾತ್ರ ತಮ್ಮ ಸದಸ್ಯತ್ವವನ್ನು ನಿಭಾಯಿಸಿಕೊಂಡು ಬಂದಿರುತ್ತಾರೆ.

ಮಧ್ಯಮ ವಯಸ್ಸಿನ ಮಹಿಳೆಯರು ವಿಶೇಷವಾಗಿ 36 ರಿಂದ 45 ವಯಸ್ಸಿನವರು ಚುನಾವಣೆಯಲ್ಲಿ ಸ್ಪರ್ಧಿಸಲು ಒಲವು ತೋರಿಸಿರುವುದು ಎಲ್ಲಾ ಸ್ತರಗಳಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದಿರುತ್ತದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಹೊಂದಿದವರೇ ಹೆಚ್ಚಾಗಿ ಸದಸ್ಯರಾಗಿರುವುದು ಕಂಡುಬಂದಿದ್ದು, ಉನ್ನತ ಶಿಕ್ಷಣವನ್ನು ಪಡೆದವರು ಸ್ಥಳೀಯ ಸಂಸ್ಥೆಗಳ ಉನ್ನತ ಸ್ತರಗಳ ಚುನಾವಣೆಯಲ್ಲಿ ಅಭ್ಯರ್ಥಿಗಳಾಗಿ ಸ್ಪರ್ಧಿಸಲು ಹೆಚ್ಚು ಆಸಕ್ತಿಯನ್ನು ತೋರಿಸಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬರುವ ಒಂದು ಕುತೂಹಲಕಾರಿ ಅಂಶವಾಗಿರುತ್ತದೆ. ಮನೆಯಲ್ಲಿ ಮೂಲಭೂತ ಸೌಲಭ್ಯಗಳಿವೆಯೇ ಎಂದು ಪ್ರಶ್ನಿಸಿದಾಗ ಶೇ. 100ರಷ್ಟು ಮಹಿಳಾ ಪ್ರತಿನಿಧಿಗಳು ಪ್ರತ್ಯೇಕವಾದ ಶೌಚಾಲಯವಿದೆ ಎಂದು ತಿಳಿಸಿರುತ್ತಾರೆ. ಇದು ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳ ಎಲ್ಲಾ ಮಹಿಳಾ ಪ್ರತಿನಿಧಿಗಳ ಮನೆಯಲ್ಲಿ ಕಂಡುಬಂದಿರುತ್ತದೆ. ಕರ್ನಾಟಕದ ಇತರ ಜಿಲ್ಲೆಗಳಿಗಿಂತ ಉಡುಪಿ ಜಿಲ್ಲೆಯು ಅಭಿವೃದ್ಧಿಯ ಎಲ್ಲಾ ಮಾಪಕಗಳನ್ನು ಹೊಂದಿದ್ದು, ಕುಡಿಯುವ ನೀರು ಮತ್ತು ವಸತಿ ಸೌಲಭ್ಯವನ್ನು ತಕ್ಕಮಟ್ಟಿಗೆ ಹೊಂದಿರುವುದು ಕಂಡುಬಂದಿರುತ್ತದೆ. ಬಡತನ ರೇಖೆಗಿಂತ ಕೆಳಗಿದ್ದ ಸದಸ್ಯರೇ ಜನಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುತ್ತಿರುವುದು ಹಾಗೂ ಅವರ ಸಾಮಾಜಿಕ ಹಿನ್ನೆಲೆಯು ರಾಜಕೀಯ ಸಹಭಾಗಿತ್ವಕ್ಕೆ ಪರಿಣಾಮ ಬೀರಿರುವುದು ಕಂಡುಬಂದಿರುತ್ತದೆ. ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಆರ್ಥಿಕವಾಗಿ ಉಡುಪಿ ಜಿಲ್ಲೆಯನ್ನು ಗಮನಿಸಿದಾಗ ಎಲ್ಲಾ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿ ಹೊಂದುತ್ತಿರುವ ಜಿಲ್ಲೆಯೆಂಬುದಾಗಿ ಪರಿಗಣಿಸಲ್ಪಟ್ಟಿರುತ್ತದೆ. ಮುಂದುವರಿದ ಜಿಲ್ಲೆಯಾದರೂ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಆರ್ಥಿಕ ಹಿನ್ನೆಲೆ ಸುಸ್ಥಿರವಾಗಿಲ್ಲ. ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಹೆಂಚಿನ

ಕಚ್ಚಾಮನೆಯನ್ನು ಹೊಂದಿದ್ದು, ಇನ್ನೂ ಸಹ ಮನೆಯ ಮಾಲಕತ್ವವನ್ನು ಮಹಿಳಾ ಪ್ರತಿನಿಧಿಗಳು ಹೊಂದಿರದೆ, ಆಕೆಯು ಪೋಷಕರು, ಗಂಡ ಅಥವಾ ಹಿರಿಯು ಸದಸ್ಯರ ಹೆಸರಿನಲ್ಲಿ ನೋಂದಾಯಿಸಿರುವುದು ಕಂಡುಬರುತ್ತದೆ. ಉಡುಪಿ ಜಿಲ್ಲೆಗೆ ಸಂಬಂಧಪಟ್ಟಂತೆ ಸದಸ್ಯರನ್ನು ಸಂದರ್ಶಿಸಿದಾಗ ಜನಪ್ರತಿನಿಧಿಗಳ ಉದ್ಯೋಗವನ್ನು ವಿಶ್ಲೇಷಣೆಗೊಳಪಡಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಸೇವಾ ಭದ್ರತೆ ಇಲ್ಲದ ಹಾಗೂ ಕಡಿಮೆ ಆದಾಯವನ್ನು ತರುವಂತಹ ಖಾಸಗಿ ಕ್ಷೇತ್ರಗಳಲ್ಲಿ ಜೀವನ ನಿರ್ವಹಣೆಗಾಗಿ ಉದ್ಯೋಗವನ್ನು ನಿಭಾಯಿಸುತ್ತಿರುವುದು ಕಂಡುಬರುತ್ತದೆ. ಜನಪ್ರತಿನಿಧಿಗಳಾಗಿ ಆಯ್ಕೆಯಾದ ನಂತರವೂ ಅವರುಗಳ ಆರ್ಥಿಕ ಮಟ್ಟದಲ್ಲಿ ಮತ್ತು ಜೀವನಕ್ರಮದಲ್ಲಿ ಹೆಚ್ಚಿನ ಬದಲಾವಣೆಗಳಾಗಿರುವುದನ್ನು ಗಮನಿಸಲಾಗಿರುವುದಿಲ್ಲ. ಮಹಿಳೆ ತನ್ನ ಕೌಟುಂಬಿಕ ನಿರ್ವಹಣ ಕಾರ್ಯವನ್ನು ನಿರ್ವಹಿಸುವ ಜೊತೆಯಲ್ಲಿ ಕುಟುಂಬದ ಆರ್ಥಿಕ ಅವಶ್ಯಕತೆಯನ್ನು ಪೂರೈಸಲು ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗದಲ್ಲಿ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಹೆಚ್ಚಿನ ಮಹಿಳಾ ಸದಸ್ಯರ ಮಾಸಿಕ ವರಮಾನ ರೂಪಾಯಿ ಐದು ಸಾವಿರಕ್ಕಿಂತ ಕಡಿಮೆ ಇದ್ದು ತಮ್ಮ ದೈನಂದಿನ ಖರ್ಚುವೆಚ್ಚಗಳನ್ನು ಸರಿದೂಗಿಸುವುದರ ಜೊತೆಗೆ ಜನಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುವ ಒತ್ತಡಕ್ಕೆ ಸಿಲುಕಿರುತ್ತಾರೆ. ಮಹಿಳಾ ಪ್ರತಿನಿಧಿಗಳಿಗೆ ತಮ್ಮ ಚುನಾವಣಾ ಖರ್ಚು ವೆಚ್ಚಗಳಿಗೆ ಹಣದ ಅವಶ್ಯಕತೆಯು ಇರುತ್ತದೆ. ಆರ್ಥಿಕವಾಗಿ ಬಲಿಷ್ಠರಾದವರಿಗೆ ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸಲು ರಾಜಕೀಯ ಪಕ್ಷಗಳು ಅವಕಾಶ ನೀಡುತ್ತವೆ. ಚುನಾವಣಾ ಖರ್ಚಿಗೆ ರಾಜಕೀಯ ಪಕ್ಷಗಳು ಹೆಸರಿಗೆ ಮಾತ್ರ ಸಹಾಯವನ್ನು ಮಾಡಿದರೂ ದೊಡ್ಡ ಮೊತ್ತದ ಹಣವನ್ನು ಅಭ್ಯರ್ಥಿಗಳೇ ಖರ್ಚು ಮಾಡುವುದು ಅನಿವಾರ್ಯವಾಗುತ್ತದೆ. ಚುನಾವಣೆಗೆ ಸ್ಪರ್ಧಿಸಿದ ಮೇಲೆ ಆಯ್ಕೆಯಾಗುವುದು ಅವರ ಪ್ರತಿಷ್ಠೆಯ ಪ್ರಶ್ನೆಯಾಗುತ್ತದೆ. ಇದಕ್ಕಾಗಿ ಲಭ್ಯವಿರುವ ಎಲ್ಲಾ ಮೂಲಗಳಿಂದ ಹಣವನ್ನು ಸಂಗ್ರಹಿಸಲು ಆದ್ಯತೆಯನ್ನು ನೀಡುತ್ತಾರೆ. ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರು ಕಾರ್ಯನಿರ್ವಹಣೆಗೆ ಸ್ವಂತ ವಾಹನದ ವ್ಯವಸ್ಥೆಯನ್ನು ಹೊಂದಿದ್ದರೂ, ಗ್ರಾಮ ಪಂಚಾಯತ್ ಸದಸ್ಯರು ತಮ್ಮ ಚುನಾವಣಾ ಕ್ಷೇತ್ರದ ಭೇಟಿಗೆ ಮನೆಯ ಸದಸ್ಯರನ್ನೇ ಅವಲಂಬಿಸಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಜಿಜ್ಞಾಸೆಗೊಳಪಡಿಸಿದಾಗ ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜನಪ್ರತಿನಿಧಿಗಳ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಮಟ್ಟವು ಸ್ವಲ್ಪ ಮಟ್ಟಿಗೆ ಉತ್ತಮಗೊಂಡಿದ್ದರೂ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಿಲ್ಲ ಎಂಬುದಾಗಿ ಕಂಡುಕೊಳ್ಳಲಾಗಿರುತ್ತದೆ. ಆಧುನಿಕ ವಿದ್ಯುನ್ಮಾನ ವಸ್ತುಗಳು ಹಾಗೂ ಸಾಮಾನ್ಯ ಜನಜೀವನವನ್ನು ನಡೆಸಲು ಬೇಕಾಗುವ ಸೌಕರ್ಯಗಳನ್ನು

ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಹೊಂದಿದ್ದಾರೆ. ಆಧುನಿಕ ಸಂವಹನ ಮಾಧ್ಯಮಗಳಾದ ಗಣಕಯಂತ್ರ ಹಾಗೂ ಅಂತರ್ಜಾಲ ವ್ಯವಸ್ಥೆಯನ್ನು ಗ್ರಾಮಪಂಚಾಯತ್‌ನ ಕೆಲವು ಮಹಿಳಾ ಸದಸ್ಯರು ಹೊಂದಿರುವುದು ಜನಪ್ರತಿನಿಧಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಆಧುನಿಕ ತಂತ್ರಜ್ಞಾನದ ಉಪಯೋಗದ ಬಗ್ಗೆ ಒಲವನ್ನು ತೋರುವ ಪ್ರಕ್ರಿಯೆ ನಿಧಾನವಾಗಿ ಗ್ರಾಮೀಣ ಮಟ್ಟದಲ್ಲಿ ಜಾಗೃತಿಯನ್ನು ಮೂಡಿಸುವುದು ಸೂಚಿಸುತ್ತದೆ. ಈ ಅಂಶವು ಭಾರತೀಯ ಮಹಿಳೆಯರು ಅದರಲ್ಲಿಯೂ ಗ್ರಾಮೀಣ ಪ್ರದೇಶದಲ್ಲಿ ವಾಸಿಸಿರುವಂತಹ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಮಹಿಳಾ ಪ್ರತಿನಿಧಿಗಳು ಆಧುನೀಕರಣ ಪ್ರಕ್ರಿಯೆಗೆ ತಮ್ಮನ್ನು ಒಡ್ಡಿಕೊಂಡಿರುವ ಅಂಶವನ್ನು ಪುಷ್ಠೀಕರಿಸುತ್ತದೆ. ಈ ಎಲ್ಲಾ ಅಂಶಗಳನ್ನು ಅವಲೋಕಿಸಿದಾಗ, ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಬಡ ಮತ್ತು ಮಧ್ಯಮ ವರ್ಗಗಳ ಕುಟುಂಬಗಳಿಂದ ಬಂದವರಾಗಿದ್ದು, ಅವರ ರಾಜಕೀಯ ಸಹಭಾಗಿತ್ವಕ್ಕೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಪರಿಸ್ಥಿತಿಯು ಪರಿಣಾಮ ಬೀರಿರುವುದು ಕಂಡುಬಂದಿರುತ್ತದೆ.

ಗ್ರಾಮ ಪಂಚಾಯತ್‌ನ ಹೆಚ್ಚಿನ ಸದಸ್ಯರು ಮನೆಯವರ ಮತ್ತು ರಾಜಕೀಯ ಪಕ್ಷದವರ ಒತ್ತಡದಿಂದ ರಾಜಕೀಯಕ್ಕೆ ಬಂದಿರುವುದು ಕಂಡುಬರುತ್ತದೆ. ಗ್ರಾಮ ಪಂಚಾಯತ್ ಸದಸ್ಯರನ್ನು ಅವಲೋಕಿಸಿದಾಗ ಹೆಚ್ಚಿನ ಸದಸ್ಯರ ಕ್ಷೇತ್ರ ಮೀಸಲಾತಿಗೆ ಒಳಪಟ್ಟಿದ್ದು ಎಂಬ ಕಾರಣದಿಂದ ರಾಜಕೀಯ ಪಕ್ಷದ ಮತ್ತು ನಾಯಕರ ಒತ್ತಾಸೆಗೆ ಅನುಗುಣವಾಗಿ ಚುನಾವಣೆಗೆ ಸ್ಪರ್ಧಿಸಿದ್ದೇವೆ ಎಂದಿರುತ್ತಾರೆ. ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಜನಪ್ರತಿನಿಧಿಗಳನ್ನು ಅವಲೋಕಿಸಿದಾಗ ಹೆಚ್ಚಿನ ಪ್ರತಿನಿಧಿಗಳು ಕುಟುಂಬದ ಸದಸ್ಯರ ಪ್ರೇರಣೆಯಿಂದ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ ಎಂದು ತಿಳಿಸಿರುತ್ತಾರೆ. ಅಲ್ಲದೇ, ರಾಜಕೀಯ ಪಕ್ಷಗಳು ಅಭ್ಯರ್ಥಿಗಳ ಗೆಲ್ಲುವ ಸಾಮರ್ಥ್ಯವನ್ನು ಪರಿಗಣಿಸಿ ಮಣೆಹಾಕುವ ಸಂಸ್ಕೃತಿಯು ಪ್ರಭಾವ ಬೀರುವುದನ್ನು ಪ್ರತಿನಿಧಿಗಳ ಜೊತೆಗೆ ಚರ್ಚಿಸಿದಾಗ ತಿಳಿದುಬರುವ ಅಂಶವಾಗಿದೆ. ಗ್ರಾಮ ಪಂಚಾಯತ್ ಚುನಾವಣೆಗಳು ಪಕ್ಷಾತೀತ ನೆಲೆಯಲ್ಲಿ ನಡೆಯಲ್ಪಟ್ಟರೂ, ರಾಜಕೀಯ ಪಕ್ಷಗಳು ಅಭ್ಯರ್ಥಿಗಳ ಆಯ್ಕೆಯಲ್ಲಿ ಪ್ರಭಾವ ಬೀರುತ್ತವೆ. ತಮ್ಮ ಪಕ್ಷದ ಗೆಲ್ಲುವ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಲೆಕ್ಕಾಚಾರ ಗ್ರಾಮಾಂತರ ಪ್ರದೇಶದಲ್ಲಿರುತ್ತದೆ. ಒಟ್ಟಿನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಆರ್ಥಿಕವಾಗಿ ಸದೃಢರಲ್ಲದವರಿಗೆ ಮೀಸಲಾತಿಯಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ದೊರಕುತ್ತದೆ ಎಂಬ ವಾದವು ವಾಸ್ತವಿಕತೆಯಿಂದ ಹೊರತಾಗಿರುತ್ತದೆ. ಹೆಚ್ಚಿನ ಮಹಿಳಾ ಪ್ರತಿನಿಧಿಗಳ ರಾಜಕೀಯ ಹಿನ್ನೆಲೆಯನ್ನು ಅವಲೋಕಿಸಿದಾಗ ಮೊದಲ ಬಾರಿಗೆ ಆಯ್ಕೆಯಾಗಿ ರಾಜಕೀಯಕ್ಕೆ ಬಂದವರೇ ಹೆಚ್ಚಿರುವುದು ಕಂಡುಬಂದಿರುತ್ತದೆ. ಸಂಘಸಂಸ್ಥೆಗಳಲ್ಲಿ ಸದಸ್ಯತ್ವ ಹೊಂದಿರುವ

ಮಹಿಳಾ ಪ್ರತಿನಿಧಿಗಳು ಸಾರ್ವಜನಿಕ ಕೆಲಸಗಳಲ್ಲಿ ತೊಡಗಿದ್ದು, ಸಂಘದ ಸಭೆಗಳಲ್ಲಿ ಭಾಗವಹಿಸಿ, ಉಳಿತಾಯವನ್ನು ಮಾಡಿ, ಆ ಮೂಲಕ ಸಾಮಾಜಿಕವಾಗಿ ಮಾತ್ರವಲ್ಲದೆ ಮುಖ್ಯವಾಗಿ ಆರ್ಥಿಕವಾಗಿ ತಮ್ಮನ್ನು ತಾವು ಬದಲಾಯಿಸಿಕೊಂಡಿದ್ದು, ಸ್ವಲ್ಪಮಟ್ಟಿನ ಆರ್ಥಿಕ ಸ್ವಾವಲಂಬನೆ ಮತ್ತು ಸಾಮರ್ಥ್ಯ ಅವರನ್ನು ಮನೆಯ ಹೊರಗಿನ ಕೆಲಸ ಕಾರ್ಯಗಳಲ್ಲಿ ಭಾಗವಹಿಸುವಂತೆ ಮಾಡಿರುವುದು ಹಾಗೂ ತೀರ್ಮಾನ ತೆಗೆದುಕೊಂಡಿರುವುದು, ತಮಗೆ ಬರಬೇಕಾಗಿರುವ ಸರಕಾರಿ ಯೋಜನೆಗಳನ್ನು ಪ್ರಯತ್ನ ಪೂರ್ವಕವಾಗಿ ತಮಗೇ ದಕ್ಕುವಂತೆ ಮಾಡಿರುವುದು ಕಂಡುಬಂದಿರುತ್ತದೆ. ಈ ರೀತಿ ವಿವಿಧ ಸಂಘಸಂಸ್ಥೆಗಳ ಸದಸ್ಯತ್ವವನ್ನು ಹೊಂದಿರುವ ಮಹಿಳಾ ಪ್ರತಿನಿಧಿಗಳು ರಾಜಕೀಯವಾಗಿಯೂ ಸಕ್ರಿಯವಾಗಿರುವುದನ್ನು ಗಮನಿಸಿದಾಗ ಸಂಘಸಂಸ್ಥೆಗಳಲ್ಲಿ ದೊರಕಿದ ತರಬೇತಿ ಅನುಭವಗಳು ಇತ್ಯಾದಿಗಳು ಅವರ ರಾಜಕೀಯ ಸಹಭಾಗಿತ್ವದ ಮೇಲೆ ಪರಿಣಾಮ ಬೀರಿರುವುದನ್ನು ತೋರಿಸುತ್ತದ್ದೆ. ಮೀಸಲಾತಿ ಸ್ಥಾನದಿಂದ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯು ಸಂಖ್ಯಾತ್ಮಕವಾಗಿ ಪುರುಷ ಪ್ರತಿನಿಧಿಗಳಿಗಿಂತ ಹೆಚ್ಚಾಗಿರುವುದು ಕಂಡುಬಂದರೂ ಧನಾತ್ಮಕ ಬದಲಾವಣೆಗಳಾಗಿರುವುದು ಕಂಡುಬಂದಿರುವುದಿಲ್ಲ. ಹೆಚ್ಚಿನ ಮಹಿಳಾ ಪ್ರತಿನಿಧಿಗಳಿಗೆ ರಾಷ್ಟ್ರ ತೆಗೆದುಕೊಂಡ ಕ್ರಮಗಳ ಬಗ್ಗೆ ಅರಿವಿದ್ದು, ಇದು ಅವರ ಭಾಗವಹಿಸುವಿಕೆಯ ಮೇಲೆ ಪರಿಣಾಮ ಬೀರುತ್ತದೆಯೇ ಎಂದು ವಿಶ್ಲೇಷಿಸಿದಾಗ ಯಾವುದೇ ಪರಿಣಾಮವನ್ನು ಬೀರಿರುವುದು ಕಂಡುಬಂದಿರುವುದಿಲ್ಲ.

ಕುಂದಾಪುರ ತಾಲೂಕಿನ ಕೋಟತಟ್ಟು ಗ್ರಾಮ ಪಂಚಾಯತ್‌ನ ಪರಿಶಿಷ್ಟ ಜಾತಿಗೆ ಸೇರಿದ ಮೀಸಲಾತಿ ಕ್ಷೇತ್ರದಿಂದ ನಿರಂತರವಾಗಿ ಎರಡನೇ ಬಾರಿ ಆಯ್ಕೆಯಾದ ಶ್ರೀಮತಿ ಅಪ್ಪಿರವರನ್ನು (ಹೆಸರು ಬದಲಾಯಿಸಲಾಗಿದೆ) ಸಂದರ್ಶನದ ಸಂದರ್ಭದಲ್ಲಿ ಮಾತಿಗೆಳೆದಾಗ ಸಮಾಜದಲ್ಲಿ ತಾವು ಅನುಭವಿಸಿದ ಕಷ್ಟಕಾರ್ಪಣ್ಯಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ನನ್ನನ್ನು ಪತ್ರಿಕೆಯ ವರದಿಗಾರ್ತಿಯೆಂದು ಭಾವಿಸಿಕೊಂಡು ಕಣ್ಣೀರು ಹಾಕುತ್ತಾ, 'ನನ್ನ ಹೆಸರು ಮತ್ತು ಊರನ್ನು ನಮೂದಿಸಬಾರದು' ಎಂಬ ಷರತ್ತಿನ ಮೇರೆಗೆ ತಮ್ಮ ಅನುಭವವನ್ನು ಬಿಚ್ಚಿಟ್ಟರು. 'ನಾನು ದಲಿತ ಕುಟುಂಬದಲ್ಲಿ ಹುಟ್ಟಿದವಳು. ಎಳವೆಯಿಂದಲೂ ಬಡತನದಲ್ಲೇ ಜೀವನ ನಡೆಸಿಕೊಂಡು ಬಂದವಳು. ಮದುವೆಯಾದ ನಂತರವೂ ಯಾವುದೇ ರೀತಿಯ ಸಂತೋಷದ ಜೀವನವನ್ನು ನಡೆಸಿದವಳಲ್ಲ. ನನ್ನ ಗಂಡ ದುಡಿದ ಹಣವನ್ನು ಕುಡಿತಕ್ಕಾಗಿಯೇ ಖರ್ಚು ಮಾಡುತ್ತಿದ್ದರು. ಹಾಗಾಗಿ ನನ್ನ ಮಕ್ಕಳನ್ನು ಸಾಕಲು ಇತರರ ಮನೆಯಲ್ಲಿ ಜೀತದಾಳಿನಂತೆ ದುಡಿಯುತ್ತಿದ್ದೆ. ಕುಡಿತ ಅಧಿಕವಾಗಿ ನನ್ನ ಗಂಡ ಕಾಲಾಂತರದಲ್ಲಿ ಅಸೌಖ್ಯದಿಂದ

ನಿಧನ ಹೊಂದಿದರು. ಇದರಿಂದಾಗಿ ಕುಡಿತದ ಕೆಟ್ಟ ಪರಿಣಾಮಗಳ ಬಗೆಗೆ ನನಗೆ ಚೆನ್ನಾಗಿ ಅರಿವಿದೆ. ಗ್ರಾಮ ಪಂಚಾಯತ್‌ಗಳಲ್ಲಿ ಮೀಸಲಾತಿ ನೀತಿಯಿಂದಾಗಿ ನಾನು ಪ್ರತಿನಿಧಿಸುವ ರಾಜಕೀಯ ಪಕ್ಷಕ್ಕೆ ಅಭ್ಯರ್ಥಿಯೇ ಸಿಕ್ಕದ ಸಂದರ್ಭದಲ್ಲಿ ನನ್ನನ್ನು ಅನಿವಾರ್ಯವಾಗಿ ಸ್ಪರ್ಧಿಸುವಂತೆ ಒತ್ತಾಯಿಸಿದರು. ಇದಕ್ಕೆ ಹಣದ ಆಮಿಷವನ್ನು ಒಡ್ಡಿದ್ದರು. ಪ್ರಥಮ ಅವಧಿಯಲ್ಲಿ ಅವರು ಹೇಳಿದ ಹಾಗೆ ಕೇಳಿದೆ. ಆದರೆ, ದ್ವಿತೀಯ ಅವಧಿಯಲ್ಲಿ ನನ್ನ ಪಕ್ಷದ ಸ್ಥಳೀಯ ಪ್ರಮುಖ ನಾಯಕರೊಬ್ಬರು ನಮ್ಮ ಗ್ರಾಮದಲ್ಲಿ ಮದ್ಯ ಮಾರಾಟ ಕೇಂದ್ರವನ್ನು ತೆರೆಯಲು ಯತ್ನಿಸಿದಾಗ, ಅಲ್ಲಿಯವರೆಗೆ ಸುಮ್ಮನಿದ್ದ ನಾನು ಊರಿನ ಮಹಿಳೆಯರನ್ನು ಒಗ್ಗೂಡಿಸಿ, ಪ್ರತಿಭಟಿಸಿದೆ. ನನ್ನ ಒತ್ತಡಕ್ಕೆ ಸರಕಾರವು ಒಪ್ಪುವ ಪರಿಸ್ಥಿತಿ ನಿರ್ಮಾಣವಾಯಿತು. ಈ ಸಂದರ್ಭದಲ್ಲಿ ಸ್ವಪಕ್ಷೀಯರೇ ನನಗೆ ಅವಮಾನ ಮಾಡಿರುವುದಲ್ಲದೇ, ಅವಾಚ್ಯ ಶಬ್ದಗಳಿಂದ ಜಾತಿ ನಿಂದನೆ ಮಾಡಿ ಜೀವ ಬೆದರಿಕೆಯೊಡ್ಡಿ ನನ್ನ ಬದುಕನ್ನು ಅಸಹನೀಯವನ್ನಾಗಿಸಿದ್ದರು. ಆದರೂ ನಾನು ನನ್ನ ಪಟ್ಟನ್ನು ಬಿಡದೇ ಹೋರಾಟ ಮಾಡಿದ್ದರಿಂದ ಮದ್ಯ ಮಾರಾಟ ಕೇಂದ್ರವು ನನ್ನ ಕ್ಷೇತ್ರ ವ್ಯಾಪ್ತಿಯಿಂದ ಸ್ಥಳಾಂತರಗೊಂಡಿತು. ಇಂದಿಗೂ ನಮ್ಮ ಪಕ್ಷದ ನಾಯಕರು ನನ್ನನ್ನು ನಿಕೃಷ್ಟವಾಗಿ ನೋಡುವುದು ಮುಂದುವರಿದಿದೆ' ಎಂದಿರುತ್ತಾರೆ. ಶ್ರೀಮತಿ ಅಪ್ಪಿರವರ ಈ ಅಭಿಪ್ರಾಯವನ್ನು ಪರಿಗಣಿಸಿದಾಗ ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಜನಪ್ರತಿನಿಧಿಯಾಗಿ ಆಯ್ಕೆಯಾಗಲು ಅವಕಾಶ ಮಾಡಿಕೊಟ್ಟರೂ, ಮೇಲ್ಜಾತಿ ಮತ್ತು ಶ್ರೀಮಂತ ವರ್ಗದವರು ಯಾವ ರೀತಿಯಲ್ಲಿ ದಲಿತರ ಧ್ವನಿಯನ್ನು ಅಡಗಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂಬುದನ್ನು ತೋರಿಸುತ್ತದೆ. ಇದೇ ರೀತಿಯಲ್ಲಿ ಓರ್ವ ಶೋಷಿತ ದಲಿತ ಮಹಿಳೆ ಯಾವ ರೀತಿಯಲ್ಲಿ ತನ್ನ ಉದ್ದೇಶವನ್ನು ಈಡೇರಿಸುವುದಕ್ಕೆ ಹೋರಾಟ ಮಾಡುತ್ತಾಳೆ ಹಾಗೂ ಜನಪ್ರತಿನಿಧಿಯಾಗಿ ತನಗೆ ಸಿಕ್ಕ ಅಧಿಕಾರವನ್ನು ಸಮರ್ಥವಾಗಿ ಚಲಾಯಿಸುವಲ್ಲಿ ಯಶಸ್ವಿಯಾಗುತ್ತಾಳೆ ಎಂಬುದನ್ನು ತೋರಿಸುತ್ತದೆ. ಸ್ಥಳೀಯ ಸಂಸ್ಥೆಗಳಲ್ಲಿ ಎಲ್ಲಾ ಸ್ತರಗಳ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಅವಕಾಶ ಮಾಡಿಕೊಡುವುದು ಅವರ ಸಬಲೀಕರಣಕ್ಕೆ ಕಾರಣವಾಗುತ್ತದೆ ಎಂಬುದನ್ನು ಇದು ಧೃಡೀಕರಿಸುತ್ತದೆ. ಕೇವಲ ಮನೆಯ ನಾಲ್ಕು ಗೋಡೆಯೊಳಗಿನ ಬದುಕಿಗೆ ಸೀಮಿತವಾಗಿ ಎಲ್ಲಿಯೂ ತನ್ನ ಅಸ್ತಿತ್ವವನ್ನು ತೋರಿಸಲಾಗದ ಅಸಹಾಯಕತೆಯನ್ನು ಹೊಂದಿದ್ದ ಮಹಿಳೆಯರು, ಇಂದು ತಮ್ಮ ಧ್ವನಿಯನ್ನು ಮತ್ತು ಅಭಿಪ್ರಾಯವನ್ನು ವ್ಯಕ್ತಪಡಿಸುವುದರಲ್ಲಿ ಗ್ರಾಮ ಪಂಚಾಯತ್‌ಗಳಲ್ಲಿ ಒದಗಿ ಬಂದಿರುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ ಎಂಬುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಾಣಸಿಗುವ ಅಂಶವಾಗಿರುತ್ತದೆ.

ಕೊನೆಟಿಪ್ಪಣಿಗಳು

1. ಆರ್. ಪಿ. ವರ್ಮಾ, ಪೀಪಲ್ಸ್ ಪಾರ್ಟಿಸಿಪೇಷನ್ ಇನ್ ಇಂಡಿಯನ್ ಪಾಲಿಟಿಕ್ಸ್, ರಜತ್ ಪಬ್ಲಿಕೇಷನ್ಸ್‌ಮ್, ನ್ಯೂಡೆಲ್ಲಿ, 2002. ಪುಟ 197–223.
2. ಕುಮಾರ್ ಎ., ಇಂಡಿಯನ್ ವುಮೆನ್ ಇನ್ ಪೊಲಿಟಿಕ್ಸ್, ಅನ್ಮೋಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2006. ಪುಟ 29–37.
3. ಮಣಿಶಂಕರ್ ಅಯ್ಯರ್, "ಸ್ಟಡಿ ಆನ್ ಎಲೆಕ್ಟೆಡ್ ವುಮೆನ್ ರೆಪ್ರೆಸೆಂಟೇಟಿವ್ಸ್ ಇನ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್", ಮೈನ್ ಸ್ಟ್ರೀಮ್, ವಾಲ್ಯೂಮ್ 37, ನಂ.6, ನ್ಯೂಡೆಲ್ಲಿ, 2009. ಪುಟ 11–15.
4. ಶಮೀಮ್ ಅಸ್ಮತ್ ಮತ್ತು ಚಂದಾದೇವಿ, ವುಮೆನ್ ಇನ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್, ಮಿತ್ತಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2012. ಪುಟ 347–356.
5. ಕರ್ನಾಟಕ ರಾಜ್ಯದ ಮಾನವ ಅಭಿವೃದ್ಧಿ ವರದಿ, 2005, ಸರಕಾರಿ ಮುದ್ರಣಾಲಯ, ಕರ್ನಾಟಕ ಸರಕಾರ, 2005. ಪುಟ 11–19.
6. ಉಡುಪಿ ಜಿಲ್ಲೆ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ. ಪುಟ 155–160.
7. ಕೃಷ್ಣ ಕೊಥಾಯ್, "ಉಡುಪಿ ಜಿಲ್ಲೆಯ ಶತಮಾನದ ದೃಷ್ಟಿಕೋನ", ಡಿಪಾರ್ಟ್‌ಮೆಂಟ್ ಆಫ್ ಪಂಚಾಯತ್‌ರಾಜ್, ಮಿನಿಸ್ಟ್ರಿ ಆಫ್ ರೂರಲ್ ಡೆವಲಪ್‌ಮೆಂಟ್, ಭಾರತ ಸರಕಾರ, 2002. ಪುಟ 21–28.
8. ಗವರ್ನ್‌ಮೆಂಟ್ ಆಫ್ ಇಂಡಿಯಾ, ಸೆನ್ಸಸ್ ಆಫ್ ಇಂಡಿಯಾ, 1991, ಗವರ್ನ್‌ಮೆಂಟ್ ಪ್ರೆಸ್, 1991. ಪುಟ 87–102
9. ಗವರ್ನ್‌ಮೆಂಟ್ ಆಫ್ ಇಂಡಿಯಾ, ಸೆನ್ಸಸ್ ಆಫ್ ಇಂಡಿಯಾ, 2001, ಗವರ್ನ್‌ಮೆಂಟ್ ಪ್ರೆಸ್, 2001 ಪುಟ 87–102
10. ಗವರ್ನ್‌ಮೆಂಟ್ ಆಫ್ ಇಂಡಿಯಾ, ಸೆನ್ಸಸ್ ಆಫ್ ಇಂಡಿಯಾ, 2011, ಗವರ್ನ್‌ಮೆಂಟ್ ಪ್ರೆಸ್, 2011 ಪುಟ 87–102
11. ಅದೇ ಪುಟ 36–54
12. ಉಡುಪಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ, 2014, ಉಡುಪಿ ಜಿಲ್ಲಾ ಪಂಚಾಯತ್, ಕರ್ನಾಟಕ ಸರಕಾರ, 2014. ಪುಟ 291–293.
13. ಅದೇ ಪುಟ ಸಂಖ್ಯೆ 291–293.

14. ಅದೇ ಪುಟ ಸಂಖ್ಯೆ 291–293.
15. ಉಡುಪಿ ಡಿಸ್ಟ್ರಿಕ್ಟ್ ಅಟ್ ಗ್ಲ್ಯಾನ್ಸ್, ಡಿಸ್ಟ್ರಿಕ್ಟ್ ಸ್ಟ್ಯಾಟಿಸ್ಟಿಕ್ಸ್ ಆಫೀಸರ್ಸ್, ಉಡುಪಿ, 2013–14. ಪುಟ 16–19.
16. ಅದೇ ಪುಟ ಸಂಖ್ಯೆ 16–19.
17. ಅದೇ ಪುಟ ಸಂಖ್ಯೆ 16–19.
18. ಉಡುಪಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ, 2014, ಉಡುಪಿ ಜಿಲ್ಲಾ ಪಂಚಾಯತ್, ಕರ್ನಾಟಕ ಸರಕಾರ, 2014. ಪುಟ 371–373.
19. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಮೀಸಲಾತಿಯ ಅವಕಾಶ ಪುರುಷರಿಗಿಂತ ಹೆಚ್ಚಾಗಿ ದೊರಕಿದ್ದರೂ, 73ನೇ ತಿದ್ದುಪಡಿ ಕಾಯ್ದೆಯ ಪ್ರಕಾರದ ಮೀಸಲಾತಿಯ ಸ್ಥಾನ ದೊರೆತಿಲ್ಲ. ಇದನ್ನು ಅವಲೋಕಿಸಿದಾಗ ಇಂದಿಗೂ ಉಡುಪಿ ಜಿಲ್ಲೆಯಲ್ಲಿ ಪ್ರಬಲ ವರ್ಗವು ದುರ್ಬಲ ವರ್ಗದವರ ಮೇಲೆ ಅಧಿಪತ್ಯ ಸಾಧಿಸಿರುವುದು ಕಂಡುಬಂದಿರುತ್ತದೆ. (ಹೆಚ್ಚಿನ ವಿವರಣೆಗಾಗಿ ಪುಟ 371–373.)
20. ರುಮಾ ಬ್ಯಾನರ್ಜಿ, *ವುಮೆನ್ ಇನ್ ಪಂಚಾಯತ್‌ರಾಜ್: ಎ ಸ್ಟಡಿ ಇನ್ ವೆಸ್ಟ್ ಬೆಂಗಲ್*, ಡೆವಲಪ್‌ಮೆಂಟ್ ಡೈಲಾಗ್ಸ್, ಕೋಲ್ಕತ್ತಾ, 1995. ಪುಟ 88–106.
21. ಗವರ್ನ್‌ಮೆಂಟ್ ಆಫ್ ಇಂಡಿಯಾ, ಸೆನ್ಸಸ್ ಆಫ್ ಇಂಡಿಯಾ, 2011, ಗವರ್ನ್‌ಮೆಂಟ್ ಪ್ರೆಸ್, 2011 ಪುಟ 54–58
22. ಉಡುಪಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ, 2014, ಉಡುಪಿ ಜಿಲ್ಲಾ ಪಂಚಾಯತ್, ಕರ್ನಾಟಕ ಸರಕಾರ, 2014. ಪುಟ 101–145.
23. ನೀರಾ ದೇಸಾಯಿ, *ವುಮೆನ್ ಇನ್ ಇಂಡಿಯನ್ ಸೊಸೈಟಿ*, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2006. ಪುಟ 60–84.
24. ಘನಶ್ಯಾಮ್ ಶಾ, *ಕಾಸ್ಟ್ ಆ್ಯಂಡ್ ಡೆಮಾಕ್ರಟಿಕ್ ಪೊಲಿಟಿಕ್ಸ್ ಇನ್ ಇಂಡಿಯಾ*, ರಜತ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2006. ಪುಟ 68–74.
25. ಅದೇ. ಪುಟ 68–74.
26. ಜೆ. ಪಿ. ರಾಘವೇಂದ್ರ ರಾವ್, ಪಂಚಾಯತ್‌ರಾಜ್, ವುಮೆನ್ ಆ್ಯಂಡ್ ಎಂಪವರ್‌ಮೆಂಟ್. ಆರ್. ಇಂದಿರಾ(ಸಂ.), *ಜೆಂಡರ್ ಆ್ಯಂಡ್ ಸೊಸೈಟಿ ಇನ್ ಇಂಡಿಯಾ*. ಮಾನಕ್ ಪಬ್ಲಿಕೇಷನ್ಸ್ ಪ್ರೈ. ಲಿ., ನ್ಯೂಡೆಲ್ಲಿ, 1999. ಪುಟ 88–103.
27. ರಾಜೇಶ್ವರಿ ದೇಶ್‌ಪಾಂಡೆ, "ಹೌ ಜೆಂಡರ್‌ಡ್ ವಾಸ್ ವುಮೆನ್ಸ್ ಪಾರ್ಟಿಸಿಪೇಷನ್ ಇನ್ ಪೊಲಿಟಿಕ್ಸ್". ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ. ವಾಲ್ಯೂಮ್ 39. ಸಂ. 15. ಡಿಸೆಂಬರ್ 18, 2004. ಪುಟ 18–22.
28. ಅದೇ ಪುಟ ಸಂಖ್ಯೆ 18–22.

29. ವಿಪುಲ್ ಪಾಂಡೆ, ರೋಲ್ ಆಫ್ ವುಮೆನ್ ಇನ್ ಇಂಡಿಯನ್ ಪೊಲಿಟಿಕ್ಸ್, ಗ್ಯಾನ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 2002. ಪುಟ 165–178.
30. ಉಡುಪಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ. ಪುಟ 19–41.
31. ಯು.ಎನ್.ಡಿ.ಪಿ. ವರದಿ, ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್ 2010: ದ ರಿಯಲ್ ವೆಲ್ತ್ ಆಫ್ ನೇಷನ್ಸ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್, 2010. ಪುಟ 28–65.
32. ಸೀಮಾ ಪಿ. ಸಾಲ್ಗಾಂವ್ಕರ್, ವುಮೆನ್, ಪೊಲಿಟಿಕಲ್ ಪವರ್ ಎಂಡ್ ದ ಸ್ಟೇಟ್, ಅಭಿಜಿತ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2006. ಪುಟ 28–64.
33. ಅದೇ ಪುಟ ಸಂಖ್ಯೆ 28–64.
34. ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀ–ಪುರುಷರಿಬ್ಬರೂ ಕೌಟುಂಬಿಕ ವ್ಯವಸ್ಥೆಯಲ್ಲಿ ಸಮಾನ ಹೊಣೆಗಾರಿಕೆಯನ್ನು ನಿಭಾಯಿಸುತ್ತಿರುವುದನ್ನು ಪಾಶ್ಚಿಮಾತ್ಯ ರಾಷ್ಟ್ರಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ಸರ್ವೇಸಾಮಾನ್ಯ ಅಂಶವಾಗಿದೆಯೆಂದು ಹಲವಾರು ಅಧ್ಯಯನಗಳು ಪ್ರಸ್ತುತಪಡಿಸಿವೆ. (ಹೆಚ್ಚಿನ ವಿವರಣೆಗಾಗಿ ಸಿ. ಎನ್. ಶಂಕರ್ ರಾವ್, ಭಾರತೀಯ ಸಮಾಜದ ಪರಿಚಯ, ಜೈ ಭಾರತ ಪ್ರಕಾಶನ, 2001, ಪುಟ 42–86.)
35. ರಾಕೇಶ್ ಕೆ. ಸಿಂಗ್, "ಎಲೆಕ್ಟೆಡ್ ವುಮೆನ್ ರೆಪ್ರೆಸೆಂಟೇಟಿವ್ಸ್ ಇನ್ ಪಂಚಾಯತ್‌ರಾಜ್ ಇನ್‌ಸ್ಟಿಟ್ಯೂಷನ್ಸ್", ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 62, ಮಾರ್ಚ್ 2012. ಪುಟ 8–12.
36. ಅದೇ ಪುಟ ಸಂಖ್ಯೆ 8–12.
37. ಬಿ. ಎಸ್. ಖನ್ನಾ, ರೂರಲ್ ಲೋಕಲ್ ಸೆಲ್ಫ್ ಗವರ್ನಮೆಂಟ್: ನ್ಯಾಷನಲ್ ಪರ್ಸ್‌ಪೆಕ್ಟಿವ್ ಆ್ಯಂಡ್ ಸ್ಟೇಟ್ ಸ್ಟಡೀಸ್, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1994. ಪುಟ 64–97.
38. ಅದೇ ಪುಟ ಸಂಖ್ಯೆ 64–97.
39. 1983ರ ಪಂಚಾಯತ್‌ರಾಜ್ ಕಾಯ್ದೆಯನ್ನು ಜಾರಿಗೆ ತಂದ ರಾಜ್ಯಗಳಲ್ಲಿ ಕರ್ನಾಟಕವೇ ಪ್ರಥಮ. ಈ ಕಾಯ್ದೆಯು ಜಿಲ್ಲೆಗೆ ಮತ್ತು ಗ್ರಾಮಗಳಿಗೆ ಅಧಿಕಾರ ಹಸ್ತಾಂತರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ ಶೇ.25 ಮೀಸಲಾತಿಯನ್ನು ನೀಡಿತು. (ಹೆಚ್ಚಿನ ವಿವರಣೆಗಾಗಿ ಕರ್ನಾಟಕ ಸರಕಾರ–ಕರ್ನಾಟಕದಲ್ಲಿ ಗ್ರಾಮ ಸ್ವರಾಜ್ಯದ ಪಥ: ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ ತಿದ್ದುಪಡಿ ಸಮಿತಿಯ ವರದಿ, ನವೆಂಬರ್ 2014. ಪುಟ 14–21.)
40. ಅದೇ ಪುಟ ಸಂಖ್ಯೆ 14–21.

41. ಮಧು ಕಿಶ್ವರ್, "ವುಮೆನ್ ಇನ್ ಪೊಲಿಟಿಕ್ಸ್ ಬಿಯಾಂಡ್ ಕೋಟಾಸ್", ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ವಾಲ್ಯೂಮ್ 31, ನಂ. 48, 1996. ಪುಟ 2871–2873.

42. ಅದೇ. ಪುಟ 2871–2873.

43. ಕರೀನಾ ಕೆ. ಕಪಾಡಿಯಾ, *ಜೆಂಡರ್ ರಿಲೇಷನ್ಸ್, ಪೇಪರ್ಸ್ ಸೀರೀಸ್ ಫೌಂಡೇಷನ್ ಫಾರ್* ಎಡ್ವಾನ್ಸ್‌ಡ್ ಸ್ಟಡಿ, ಟೋಕಿಯೋ, 1997. ಪುಟ 264–282.

44. ಎಸ್. ಕೆ. ಝಾ, *ಸೋಷಿಯಲ್ ಟ್ರಾನ್ಸ್‌ಫಾರ್ಮೇಷನ್ಸ್ ಆ್ಯಂಡ್ ರೂರಲ್ ಡೆವಲಪ್‌ಮೆಂಟ್ ಥ್ರೂ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್*, ಮಾನಕ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1998. ಪುಟ 33–37.

45. ಸ್ನೇಹಲತಾ ಪಾಂಡಾ, "ಪೊಲಿಟಿಕಲ್ ಎಂಪವರ್‌ಮೆಂಟ್ ಆಫ್ ವುಮೆನ್: ದ ಕೇಸ್ ಸ್ಟಡಿ ಆಫ್ ಒರಿಸ್ಸಾ", *ಜರ್ನಲ್ ಆಫ್ ರೂರಲ್ ಡೆವಲಪ್‌ಮೆಂಟ್*, 22(4), 1997. ಪುಟ 665–667.

46. ಭಗತ್ ಎನ್., ವುಮೆನ್ ಇನ್ *ಗ್ರಾಸ್‌ರೂಟ್ ಡೆಮಾಕ್ರಸಿ*, ಗ್ಯಾನ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 2004. ಪುಟ 182–204.

47. ರುಮಾ ಬ್ಯಾನರ್ಜಿ, ವುಮೆನ್ ಇನ್ *ಪಂಚಾಯತ್‌ರಾಜ್: ಎ ಸ್ಟಡಿ ಇನ್ ವೆಸ್ಟ್ ಬೆಂಗಲ್*, ಡೆವಲಪ್‌ಮೆಂಟ್ ಡೈಲಾಗ್ಸ್, ಕೋಲ್ಕತ್ತಾ, 1995. ಪುಟ 22–64.

48. ಮಮತಾ ಜೈಸ್ವಾಲ್, ವುಮೆನ್ ಇನ್ *ಪಂಚಾಯತ್‌ರಾಜ್*, ಅನ್ಮೋಲ್ ಪಬ್ಲಿಕೇಷನ್ಸ್ ಪ್ರೈ. ಲಿ., ನ್ಯೂಡೆಲ್ಲಿ, 2003. ಪುಟ 129–138.

ಅಧ್ಯಾಯ – 5

ರಾಜಕೀಯದಲ್ಲಿ ಮಹಿಳೆಯರ ಸಹಭಾಗಿತ್ವ ಮತ್ತು ಅಡೆತಡೆಗಳು

ಅಧ್ಯಾಯ 5

ರಾಜಕೀಯದಲ್ಲಿ ಮಹಿಳೆಯರ ಸಹಭಾಗಿತ್ವ ಮತ್ತು ಅಡೆತಡೆಗಳು

ಪೀಠಿಕೆ

ಪ್ರಸ್ತುತ ಅಧ್ಯಯನ ಭಾಗದಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿದಾರರಿಂದ ಅವರುಗಳು ಜನಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುವ ಮತ್ತು ಅವರು ಕಾರ್ಯ ನಿರ್ವಹಿಸುವಾಗ ಇರುವ ಅಡೆತಡೆಗಳ ಬಗ್ಗೆ ವಿಶ್ಲೇಷಿಸಿದಾಗ ಕಂಡುಕೊಂಡ ಮಾಹಿತಿಗಳ ಆಧಾರದ ಮೇಲೆ ವಿವರಿಸಲಾಗಿರುತ್ತದೆ. ಮಹಿಳೆಯರ ರಾಜಕೀಯ ಸಹಭಾಗಿತ್ವ ಮತ್ತು ಸಬಲೀಕರಣದ ಮಟ್ಟವನ್ನು ಅಳೆಯುವುದು ಅತ್ಯಂತ ಕ್ಲಿಷ್ಟಕರ ಮತ್ತು ಸಂಕೀರ್ಣವಾದ ಅಂಶವಾಗಿರುವುದಲ್ಲದೆ ಒಂದು ಗುಣಾತ್ಮಕವಾದ ಪ್ರಕ್ರಿಯೆಯಾಗಿರುತ್ತದೆ. ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಅಂಕಿ ಅಂಶಗಳ ಮೂಲಕ ಸಾಮಾಜಿಕ ವಿಜ್ಞಾನದ ಸಂಶೋಧನೆಗಳಲ್ಲಿ ಬಳಸುವ ನಿರ್ಧಿಷ್ಟ ಮಾಪನಗಳನ್ನು ಆಧಾರವಾಗಿರಿಸಿ ಅಳೆಯುವ ಪ್ರಯತ್ನವನ್ನು ಮಾಡಲಾಗಿರುತ್ತದೆ. ಮಹಿಳೆಯರು ಸಮಾಜದ ಅವಿಭಾಜ್ಯ ಅಂಗವಾಗಿದ್ದು, ಅವರು ಸಮಾಜದ ಸಾಮಾಜಿಕ ಮತ್ತು ಆರ್ಥಿಕ ಜೀವನದ ಭಾಗವಾಗಿದ್ದು ರಾಷ್ಟ್ರೀಯ ಅಭಿವೃದ್ಧಿಗೆ ಪುರುಷರಿಗಿಂತಲೂ ಹೆಚ್ಚಾಗಿಯೇ ಕೊಡುಗೆಯನ್ನು ನೀಡುತ್ತಿದ್ದಾರೆ ಆದರೆ, ಅಸಮಾನ ಅಧಿಕಾರ ಮತ್ತು ಸಂಪನ್ಮೂಲಗಳ ಹಂಚುವಿಕೆಯಿಂದಾಗಿ ಮತ್ತು ಸಾಂಸ್ಕೃತಿಕ ಕಾರಣಗಳಾದ ಜಾತಿ ಮತ್ತು ಲಿಂಗಾಧಾರಿತ ಸಮಸ್ಯೆಗಳಿಂದ ಮತ್ತು ಕಟ್ಟುಪಾಡುಗಳಿಂದ ಬಂಧಿಸಲ್ಪಟ್ಟಿದ್ದಾರೆ ಎಂದು ಹೆಚ್ಚಿನ ಅಧ್ಯಯನಗಳ ಫಲಿತಗಳು ವಿವರಿಸಿರುತ್ತದೆ[1].

ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆಗೆ ಇರುವ ಅಡೆತಡೆಗಳು

ಮಹಿಳಾ ಸಬಲೀಕರಣಕ್ಕೆ ಸಂಬಂಧಪಟ್ಟಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದರೂ ಅವರ ಸಬಲೀಕರಣವನ್ನು ಸಾಧಿಸುವುದರಲ್ಲಿ ವಿಫಲವಾಗಿರುತ್ತದೆ. ಸಾಂಪ್ರದಾಯಿಕವಾದ ಸಮಾಜವು ಅವರ ಮೇಲೆ ಅನೇಕ ನಿರ್ಬಂಧಗಳನ್ನು ವಿಧಿಸಿ ಅವರನ್ನು ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದರಿಂದ ವಂಚಿತರನ್ನಾಗಿರಿಸಿರುತ್ತದೆ[2]. ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ತಳಮಟ್ಟದವರೆಗೂ ಯಾವುದೇ ರೀತಿಯ ತಾರತಮ್ಯವಿರದೆ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಹಕ್ಕನ್ನು ಸಂವಿಧಾನಾತ್ಮಕವಾಗಿ ಪಡೆದಿರುತ್ತಾರೆ. ಇದು ಸಮಾನತೆಯ ಪರಿಕಲ್ಪನೆಯನ್ನು ಬೆಂಬಲಿಸುವುದರ ಜೊತೆಗೆ ಜನರ ವ್ಯಕ್ತಿತ್ವ ಮತ್ತು ಸರ್ವತೋಮುಖ ಬೆಳವಣಿಗೆಗೆ

ಅವಕಾಶವನ್ನು ಮಾಡಿಕೊಡುತ್ತದೆ[3]. ಸಮಾನ ರಾಜಕೀಯ ಭಾಗವಹಿಸುವಿಕೆಗೆ ಅವಕಾಶವನ್ನು ನೀಡಿದ್ದರೂ ಮಹಿಳೆಯರು ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಲ್ಪಡದಿರುವುದಕ್ಕೆ ಜಾತಿ, ವರ್ಗ, ಮತ, ಧರ್ಮ, ಕುಟುಂಬ ಮುಂತಾದ ಅಂಶಗಳು ತಡೆಗೋಡೆಗಳಾಗಿದ್ದು ಅವರುಗಳಿಗೆ ಸಿಗಬೇಕಾದಷ್ಟು ಪ್ರಮಾಣದಲ್ಲಿ ಅವಕಾಶಗಳು ದೊರಕದಿರುವುದಕ್ಕೆ ಪ್ರಮುಖ ಕಾರಣವಾಗಿರುತ್ತದೆ[4]. ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಚರಿತ್ರೆಯನ್ನು ಅವಲೋಕಿಸಿದಾಗ ಅವರನ್ನು ರಾಜಕೀಯವಾಗಿ ಪ್ರಬಲ ಶಕ್ತಿಯನ್ನಾಗಿ ಬೆಳೆಸುವುದರಲ್ಲಿ ಯಾವುದೇ ವ್ಯವಸ್ಥಿತ ಪ್ರಯತ್ನವನ್ನು ಮಾಡಲಾಗಿಲ್ಲದಿರುವುದು ಮತ್ತು ಅವರನ್ನು ರಾಜಕೀಯದಿಂದ ಹೊರಗಿಟ್ಟಿರುವುದು ತಿಳಿದುಬರುತ್ತದೆ. ಅಲ್ಲದೆ ಮಹಿಳೆಯರನ್ನು ಒಂದು ರಾಜಕೀಯ ಶಕ್ತಿ ಎಂದು ಪರಿಗಣಿಸಿರುವುದನ್ನು ಯಾವ ರಾಜಕೀಯ ವ್ಯವಸ್ಥೆಯು ಗಂಭೀರವಾಗಿ ಪರಿಗಣಿಸಿರುವುದಿಲ್ಲ[5]. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯದಲ್ಲಿ ರಾಜಕೀಯದಲ್ಲಿ ಮಹಿಳೆಯರ ಸಹಭಾಗಿತ್ವಕ್ಕೆ ತಡೆಯೊಡ್ಡುವ ಸಾಮಾಜಿಕ ಮತ್ತು ಆರ್ಥಿಕ ಅಡೆತಡೆಗಳನ್ನು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿಯೊಂದಿಗೆ ಮುಖಾಮುಖಿಯಾಗಿ ವಿಶ್ಲೇಷಿಸಲಾಗಿರುತ್ತದೆ.

ಕೌಟುಂಬಿಕ ದೌರ್ಜನ್ಯ

ಹೆಚ್ಚಿನ ಮಹಿಳಾ ಪ್ರತಿನಿಧಿಗಳು ತಮ್ಮ ಕುಟುಂಬದಲ್ಲಿ ಕೌಟುಂಬಿಕ ದೌರ್ಜನ್ಯ ಇಲ್ಲವೆಂದು ತಿಳಿಸಿರುತ್ತಾರೆ. ಆದರೆ ಅವರ ಜೊತೆ ಅನೌಪಚಾರಿಕವಾಗಿ ಮಾತುಕತೆಯಾಡಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಕೌಟುಂಬಿಕ ದೌರ್ಜನ್ಯಕ್ಕೊಳಗಾದದ್ದು ಕಂಡು ಬಂದಿರುತ್ತದೆ.

ಕೋಷ್ಟಕ – 5.1

ಕೌಟುಂಬಿಕ ದೌರ್ಜನ್ಯ ಮತ್ತು ದೌರ್ಜನ್ಯಕ್ಕೊಳಗಾದ ಬಗೆ

ಕೌಟುಂಬಿಕ ದೌರ್ಜನ್ಯ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಹೌದು	68	47.88	32	62.74	10	76.92
ಇಲ್ಲ	74	52.12	19	37.26	03	23.08
ಒಟ್ಟು	**142**	**100**	**51**	**100**	**13**	**100**
ದೌರ್ಜನ್ಯಕ್ಕೊಳಗಾದ ಬಗೆ						
ಬೈಗುಳ	67	47.18	31	60.78	10	76.92
ಜಗಳ	25	17.60	22	43.13	02	15.38
ದೈಹಿಕ ಹಿಂಸೆ	13	09.15	10	19.60	0	–
ಇತರ (ಮಾನಸಿಕ ಕಿರುಕುಳ)	11	07.74	05	9.80	02	15.38

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 5.1ರ ವಿಶ್ಲೇಷಣೆಯ ಪ್ರಕಾರ ಗ್ರಾಮ ಪಂಚಾಯತ್‌ನ 68, ತಾಲೂಕು ಪಂಚಾಯತ್‌ನ 32, ಜಿಲ್ಲಾ ಪಂಚಾಯತ್‌ನ 10 ಮಹಿಳಾ ಪ್ರತಿನಿಧಿಗಳು ಕೌಟುಂಬಿಕ ದೌರ್ಜನ್ಯ ಇದೆಯೆಂದು ಉತ್ತರಿಸಿರುತ್ತಾರೆ. ಇದರ ಮುಂದಿನ ಭಾಗವಾಗಿ ಅವು ಯಾವುವು ಎಂದು ಪ್ರಶ್ನಿಸಿದಾಗ ಗ್ರಾಮ ಪಂಚಾಯತ್‌ನ 67, ತಾಲೂಕು ಪಂಚಾಯತ್‌ನ 31, ಜಿಲ್ಲಾ ಪಂಚಾಯತ್‌ನ 10 ಮಹಿಳಾ ಪ್ರತಿನಿಧಿಗಳು ಬೈಗುಳ ಎಂದು, ಗ್ರಾಮ ಪಂಚಾಯತ್‌ನ 25, ತಾಲೂಕು ಪಂಚಾಯತ್‌ನ 22, ಜಿಲ್ಲಾ ಪಂಚಾಯತ್‌ನ 2 ಮಹಿಳಾ ಪ್ರತಿನಿಧಿಗಳು ಜಗಳವೆಂದೂ, ಗ್ರಾಮ ಪಂಚಾಯತ್‌ನ 13 ಮತ್ತು ತಾಲೂಕು ಪಂಚಾಯತ್‌ನ 10 ಮಹಿಳಾ ಪ್ರತಿನಿಧಿಗಳು ದೈಹಿಕ ಹಿಂಸೆಯೆಂದು, ಅಲ್ಲದೇ ಇತರ ದೌರ್ಜನ್ಯಗಳಾದ ಮನೆಯಿಂದ ಹೊರಗೆ ಹಾಕುವಂತಹ ಸನ್ನಿವೇಶವನ್ನು ಕೂಡಾ ಗ್ರಾಮ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿ ಎದುರಿಸಿರುತ್ತಾರೆ. ಇದನ್ನು ಅವಲೋಕಿಸಿದಾಗ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷಾಧಿಪತ್ಯವಿರುವುಧು ಇದರಿಂದ ಸಮಾಜದ ಅಂಚಿನಲ್ಲಿರುವ ದುರ್ಬಲ ವರ್ಗದ ಮಹಿಳೆ ನಿರಂತರವಾಗಿ ಶೋಷಣೆ ಮತ್ತು ದೌರ್ಜನ್ಯಕ್ಕೊಳಗಾಗುತ್ತಿರುತ್ತಾಳೆ ಎಂಬ ಕಂಡುಕೊಳ್ಳುವಿಕೆಯಲ್ಲಿ ಯಾವುದೇ ಭಿನ್ನತೆ ಇಲ್ಲದಿರುವುದು ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲೂ ಕಂಡುಬಂದಿರುತ್ತದೆ[6].

ಆರೋಗ್ಯದ ಸಮಸ್ಯೆ

ಮಹಿಳೆಯಾಗಿದ್ದು, ಮನೆ ಜವಾಬ್ದಾರಿ, ಮಕ್ಕಳ ಲಾಲನೆ ಪಾಲನೆ ಮುಂತಾದುವುಗಳಿಂದ ಆಗುವ ಶ್ರಮವಲ್ಲದೆ, ಈಗ ಪಂಚಾಯತಿಯ ಕೆಲಸವನ್ನೂ ಸಹ ನಿಭಾಯಿಸುವ ಹೊಣೆ ಹೊತ್ತಿರುವ ಸದಸ್ಯೆಯರು ಯಾವುದಾದರೂ ಆರೋಗ್ಯದ ಸಮಸ್ಯೆಯನ್ನು ಎದುರಿಸುತ್ತಿರುವಿರಾ? ಎಂದು ಪ್ರಶ್ನಿಸಿದಾಗ ಹೆಚ್ಚಿನ ಮಹಿಳಾ ಸದಸ್ಯೆಯರು ಸಾಮಾನ್ಯವಾದ ಆರೋಗ್ಯದ ಸಮಸ್ಯೆಯನ್ನು ಎದುರಿಸುತ್ತಿದ್ದೇವೆಯೇ ಹೊರತು ಹೆಚ್ಚಿನ ಆರೋಗ್ಯದ ಸಮಸ್ಯೆಗಳಾವುವು ಇಲ್ಲವೆಂದು ಉತ್ತರಿಸಿರುತ್ತಾರೆ.

ಕೋಷ್ಟಕ – 5.2

ರಾಜಕೀಯದಲ್ಲಿರುವುದರಿಂದ ಆರೋಗ್ಯದ ಸಮಸ್ಯೆ

ಆರೋಗ್ಯದ ಸಮಸ್ಯೆ	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು
ಇದೆ	32	10	2
ಇಲ್ಲ	110	41	11
ಒಟ್ಟು	**142**	**51**	**13**
ಕಾರಣ			
ಮಾನಸಿಕ ಒತ್ತಡ	24	14	2
ಹೊಸ ಜವಾಬ್ದಾರಿ	22	04	1
ಮನೆಕೆಲಸದೊತ್ತಡ	14	12	0
ಪುರುಷ ಸದಸ್ಯರ ಮತ್ತು ಅಧಿಕಾರಿಗಳ ಅಸಹಕಾರ	12	05	1

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 5.2ರ ವಿಶ್ಲೇಷಣೆಯ ಪ್ರಕಾರ ರಾಜಕೀಯದಲ್ಲಿರುವುದರಿಂದ ಆರೋಗ್ಯದ ಮೇಲೆ ಏನಾದರೂ ಪರಿಣಾಮವಾಗಿದೆಯೇ ಎಂದು ಕೇಳಿದಾಗ ಗ್ರಾಮ ಪಂಚಾಯತ್‌ನ 32, ತಾಲೂಕು ಪಂಚಾಯತ್‌ನ 10, ಜಿಲ್ಲಾ ಪಂಚಾಯತ್‌ನ 02 ಮಹಿಳಾ ಪ್ರತಿನಿಧಿಗಳು ಹೌದೆಂದು ಉತ್ತರಿಸಿರುತ್ತಾರೆ. ಇದರ ಮುಂದಿನ ಭಾಗವಾಗಿ ಯಾವೆಲ್ಲಾ ಕಾರಣಗಳಿಂದ ಆರೋಗ್ಯದ ಮೇಲೆ ಪರಿಣಾಮಗಳಾದವು ಎಂದು ಪ್ರಶ್ನಿಸಿದಾಗ ಮಾನಸಿಕ ಒತ್ತಡವೆಂದು ಗ್ರಾಮ ಪಂಚಾಯತ್‌ನ 24, ತಾಲೂಕು ಪಂಚಾಯತ್‌ನ 14, ಜಿಲ್ಲಾ ಪಂಚಾಯತ್‌ನ ಇಬ್ಬರು ಮಹಿಳಾ ಪ್ರತಿನಿಧಿಗಳು, ಹೊಸ ಜವಾಬ್ದಾರಿಗಳ ಹೇರಿಕೆಯಿಂದಾಗಿ ಎಂದು ಗ್ರಾಮ ಪಂಚಾಯತ್‌ನ 22, ತಾಲೂಕು ಪಂಚಾಯತ್‌ನ 4, ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಗಳು, ವಿವಿಧ ಮನೆಕೆಲಸಗಳ ಒತ್ತಡದಿಂದ ಎಂದು ಗ್ರಾಮ ಪಂಚಾಯತ್‌ನ 14, ತಾಲೂಕು ಪಂಚಾಯತ್‌ನ 12 ಮಹಿಳಾ ಪ್ರತಿನಿಧಿಗಳು, ಪುರುಷ ಸದಸ್ಯರ ಸಹಕಾರದ ಕೊರತೆ ಎಂದು ಗ್ರಾಮ ಪಂಚಾಯತ್‌ನ 12, ತಾಲೂಕು ಪಂಚಾಯತಿನ ಐವರು ಮತ್ತು ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಸಹಕಾರದ ಕೊರತೆ ಎಂದು ತಲಾ ಒಬ್ಬೊಬ್ಬ ಪ್ರತಿನಿಧಿಗಳು ತಿಳಿಸಿರುತ್ತಾರೆ. ಒಟ್ಟಾರೆಯಾಗಿ ಇದನ್ನು ಅವಲೋಕಿಸಿದಾಗ ರಾಜಕೀಯ ಪಾಲ್ಗೊಳ್ಳುವಿಕೆಯಿಂದ ಅವರ ಆರೋಗ್ಯದ ಮೇಲೆ ಹೆಚ್ಚಿನ ಪರಿಣಾಮ ಬೀರಿರುವುದಿಲ್ಲ. ಆದರೆ ಮನೆ ವಾರ್ತೆ ಮತ್ತು ರಾಜಕೀಯದ ಬದುಕಿನ ನಡುವೆ ಹೊಂದಾಣಿಕೆಯನ್ನು ತರುವಾಗ ಮಾನಸಿಕವಾಗಿ ಒತ್ತಡಕ್ಕೊಳಗಾಗಿ ಆರೋಗ್ಯದ ಸಮಸ್ಯೆಯನ್ನು ಎದುರಿಸಿರುವುದು ಕಂಡುಬಂದಿರುತ್ತದೆ.

ರಾಜಕೀಯದಲ್ಲಿ ಜಾತಿ ಪ್ರಾಬಲ್ಯ

ಜಾತಿ ಪದ್ಧತಿಯು ದೇಶದ ಒಂದು ಪ್ರಮುಖ ಸಂಪ್ರದಾಯ, ಅದರಲ್ಲೂ ಮಹಿಳಾ ಪ್ರತಿನಿಧಿಗಳ ವಿಷಯದಲ್ಲಿ ಭೇದಭಾವಕ್ಕೆ ಕಾರಣವಾಗಿದೆ. ಲಿಂಗ ಅಸಮಾನತೆಯನ್ನು ಸೃಷ್ಟಿಸುವಲ್ಲಿ ಜಾತಿ ವ್ಯವಸ್ಥೆಯು ಪ್ರಮುಖವಾಗಿದೆ ಎಂದು ಹಲವಾರು ಅಧ್ಯಯನಗಳು ವ್ಯಕ್ತಪಡಿಸುತ್ತದೆ[7]. ಅದಕ್ಕಾಗಿಯೇ ಮಹಿಳಾ ಮೀಸಲಾತಿಯ ಜೊತೆಗೆ ಮಹಿಳಾ ಪ್ರತಿನಿಧಿಗಳಿಗೆ ಅವರವರ ಜಾತಿಸ್ಥಾನಗಳ ಆಧಾರದ ಮೇಲೆ ಪಂಚಾಯತ್‌ಗಳ ಎಲ್ಲಾ ಹಂತಗಳಲ್ಲಿ ಮೀಸಲಾತಿ ಸ್ಥಾನವನ್ನು ನೀಡಲಾಗಿದೆ. ಜಾತಿ ಪದ್ಧತಿ ಹೇಗೆ ಚುನಾಯಿತ ಮಹಿಳಾ ಪ್ರತಿನಿಧಿಗಳಿಗೆ ರಾಜಕೀಯದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಅಡ್ಡಿಯನ್ನುಂಟುಮಾಡಿದೆಯೇ? ಎಂದು ಅವಲೋಕಿಸಿದಾಗ ಜಾತಿ ಪ್ರಭಾವ ಕಡಿಮೆಯಾಗಿದೆ ಮತ್ತು ರಾಜಕೀಯ ಭಾಗವಹಿಸುವಿಕೆಯಲ್ಲಿ ಅಡ್ಡಿಯಾಗಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಅವರಜೊತೆ ಅನೌಪಚಾರಿಕವಾಗಿ ಚರ್ಚಿಸಿದಾಗ ಜಾತಿ ಪ್ರಾಬಲ್ಯವಿರುವುದು ಕಂಡುಬಂದಿರುತ್ತದೆ.

ಕೋಷ್ಟಕ – 5.3

ರಾಜಕೀಯದಲ್ಲಿ ಜಾತಿ ಪ್ರಾಬಲ್ಯ

ಜಾತಿ ಪ್ರಾಬಲ್ಯ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಇದೆ	110	77.46	40	78.43	08	61.53
ಇಲ್ಲ	32	22.54	11	21.57	05	38.47
ಒಟ್ಟು	**142**	**100**	**51**	**100**	**13**	**100**

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಠಕ 5.3ರ ವಿಶ್ಲೇಷಣೆಯ ಪ್ರಕಾರ ಗ್ರಾಮ ಪಂಚಾಯತ್‌ನ 110, ತಾಲೂಕು ಪಂಚಾಯತ್‌ನ 40, ಜಿಲ್ಲಾ ಪಂಚಾಯತ್‌ನ 08 ಮಹಿಳಾ ಪ್ರತಿನಿಧಿಗಳು ಪಂಚಾಯತ್‌ನ ಎಲ್ಲಾ ಕಾರ್ಯಗಳಲ್ಲಿ, ಚಟುವಟಿಕೆಗಳಲ್ಲಿ, ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಜಾತಿ ಪ್ರಾಬಲ್ಯವಿದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಗ್ರಾಮ ಪಂಚಾಯತ್‌ನ 32, ತಾಲೂಕು ಪಂಚಾಯತ್‌ನ 11, ಜಿಲ್ಲಾ ಪಂಚಾಯತ್‌ನ 5 ಮಹಿಳಾ ಪ್ರತಿನಿಧಿಗಳು ಮೇಲ್ಜಾತಿ ಪ್ರಾಬಲ್ಯವಿಲ್ಲ ಎಂದಿದ್ದಾರೆ. ಇದನ್ನು ಅವಲೋಕಿಸಿದಾಗ ಅಧ್ಯಯನದ ಪ್ರದೇಶದಲ್ಲಿ ಸ್ಥಳೀಯ ಸರ್ಕಾರಗಳಲ್ಲಿ ಮೇಲ್ಜಾತಿಯ ಪ್ರಾಬಲ್ಯ ಕಂಡುಬಂದಿರುತ್ತದೆ. ಆದರೆ ಕಾನೂನು, ಕಾಯ್ದೆಗಳ, ಪಂಚಾಯತಿನ ಯೋಜನೆಗಳ ಬಗ್ಗೆ ಅರಿವು ಮತ್ತು ಶಿಕ್ಷಣವನ್ನು ಹೊಂದಿದವರ ಮೇಲೆ ಜಾತಿ ಶೋಷಣೆಯು ಕಂಡುಬಂದಿರುವುದಿಲ್ಲ. ಆದರೆ ದುರ್ಬಲ ವರ್ಗದವರಾಗಿದ್ದು ಹೆಚ್ಚಿನ ಅರಿವಿನ ಮತ್ತು ಶಿಕ್ಷಣದ ಕೊರತೆಯನ್ನು ಹೊಂದಿದವರು ಜಾತಿ ಪ್ರಾಬಲ್ಯಕ್ಕೆ ಒಳಗಾಗುತ್ತಾರೆ ಎಂಬ ಹೆಚ್ಚಿನ ಅಧ್ಯಯನಗಳ ಫಲಿತಗಳು ಪ್ರಸ್ತುತ ಅಧ್ಯಯನದಲ್ಲೂ ಕಂಡುಬಂದಿರುತ್ತದೆ[8].

ಆರ್ಥಿಕ ಸ್ಥಿತಿಯ ಪ್ರಭಾವ

ಆರ್ಥಿಕವಾಗಿ ಬಲಿಷ್ಠರಾದವರಿಗೆ ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸಲು ರಾಜಕೀಯ ಪಕ್ಷಗಳು ಅವಕಾಶ ನೀಡುತ್ತವೆ. ಚುನಾವಣಾ ಖರ್ಚಿಗೆ ರಾಜಕೀಯ ಪಕ್ಷಗಳು ಹೆಸರಿಗೆ ಮಾತ್ರ ಸಹಾಯವನ್ನು ಮಾಡಿದರೂ ದೊಡ್ಡ ಮೊತ್ತದ ಹಣವನ್ನು ಅಭ್ಯರ್ಥಿಗಳೇ ಖರ್ಚು ಮಾಡುವುದು ಅನಿವಾರ್ಯವಾಗುತ್ತದೆ. ಚುನಾವಣೆಗೆ ಸ್ಪರ್ಧಿಸಿದ ಮೇಲೆ ಆಯ್ಕೆಯಾಗುವುದು ಅವರ ಪ್ರತಿಷ್ಠೆ ಪ್ರಶ್ನೆಯಾಗುತ್ತದೆ. ಇದಕ್ಕಾಗಿ ಲಭ್ಯವಿರುವ ಎಲ್ಲಾ ಮೂಲಗಳಿಂದ ಹಣವನ್ನು ಸಂಗ್ರಹಿಸಲು ಆದ್ಯತೆಯನ್ನು ನೀಡುತ್ತಾರೆ.

ಕೋಷ್ಟಕ – 5.4

ಆರ್ಥಿಕ ಸ್ಥಿತಿಯ ಪ್ರಭಾವ

ಆರ್ಥಿಕ ಸ್ಥಿತಿಯ ಪ್ರಭಾವ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಟಿಕೆಟ್ ಪಡೆಯಲು	05	03.52	04	07.84	03	23.08
ಚುನಾವಣಾ ಪ್ರಚಾರಕ್ಕೆ	71	50.00	30	58.82	11	84.61
ಪ್ರತಿಷ್ಠೆಗಾಗಿ	11	07.74	08	15.68	02	15.38
ಮತಗಳಿಕೆಗಾಗಿ	03	02.11	01	01.96	05	38.47
ಅಭಿವೃದ್ಧಿ ಕಾಮಗಾರಿಗೆ	109	76.76	43	84.31	13	100

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಆರ್ಥಿಕ ಪರಿಸ್ಥಿತಿಯು ನಿಮ್ಮ ರಾಜಕೀಯ ಜೀವನದ ಮೇಲೆ ಯಾವ ರೀತಿ ಪರಿಣಾಮವನ್ನು ಬೀರಿದೆ ಎಂದು ಕೇಳಿದಾಗ ಕೋಷ್ಟಕ 5.4ರಲ್ಲಿ ವಿವರಿಸಿರುವಂತೆ ಬಹು ಆಯ್ಕೆಯ ಉತ್ತರವನ್ನು ನೀಡಿರುತ್ತಾರೆ. ಗ್ರಾಮ ಪಂಚಾಯತ್‌ನ 109 ಮಹಿಳಾ ಪ್ರತಿನಿಧಿಗಳು, ತಾಲೂಕು ಪಂಚಾಯತ್‌ನ 43 ಮಹಿಳಾ ಪ್ರತಿನಿಧಿಗಳು, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳಿಗಾಗಿ ಆರ್ಥಿಕ ಸ್ಥಿತಿ ಬಹಳ ಅಗತ್ಯ ಎಂದು ತಿಳಿಸಿರುತ್ತಾರೆ. ಗ್ರಾಮ ಪಂಚಾಯತ್‌ನ 71 ಮಹಿಳಾ ಸದಸ್ಯೆಯರು, ತಾಲೂಕು ಪಂಚಾಯತ್‌ನ 30 ಮಹಿಳಾ ಸದಸ್ಯೆಯರು, ಜಿಲ್ಲಾ ಪಂಚಾಯತ್‌ನ 11 ಮಹಿಳಾ ಸದಸ್ಯೆಯರು ಚುನಾವಣಾ ಸಮಯದಲ್ಲಿ ಪ್ರಚಾರಕ್ಕಾಗಿ ತಮಗೆ ಹಣಕಾಸಿನ ವ್ಯವಸ್ಥೆ ಮಾಡಿಕೊಳ್ಳಲು ಕಷ್ಟವಾಯಿತು ಎಂದು ತಿಳಿಸಿರುತ್ತಾರೆ. ಇದನ್ನು ವಿಶ್ಲೇಷಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಮಧ್ಯಮ ಮತ್ತು ಬಡ ಕುಟುಂಬಗಳಷ್ಟೇ ಅಲ್ಲದೆ ದಲಿತ, ಆದಿವಾಸಿ ಮತ್ತು ಕೆಳಜಾತಿಗಳಿಂದ ಬಂದಿದ್ದು, ಅವರ ಕೌಟುಂಬಿಕ ಪರಿಸ್ಥಿತಿ ಉತ್ತಮವಾಗಿರಲಿಲ್ಲವೆಂಬುದನ್ನು ಹಿಂದಿನ ಅಧ್ಯಾಯದಲ್ಲಿ ಈಗಾಗಲೇ ಚರ್ಚಿಸಲಾಗಿರುತ್ತದೆ. ಪಂಚಾಯತ್ ಚುನಾವಣೆಗಳು ಪಕ್ಷಾತೀತ ನೆಲೆಯಲ್ಲಿ ನಡೆಯಲ್ಪಟ್ಟರೂ ರಾಜಕೀಯ ಪಕ್ಷಗಳು ಅಭ್ಯರ್ಥಿಗಳ ಆಯ್ಕೆಯಲ್ಲಿ ಪ್ರಭಾವ ಬೀರುತ್ತವೆ. ತಮ್ಮ ಪಕ್ಷದ ಗೆಲ್ಲುವ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಲೆಕ್ಕಾಚಾರ ಗ್ರಾಮಾಂತರ ಪ್ರದೇಶದಲ್ಲಿರುತ್ತದೆ. ಹೀಗಾಗಿ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಆರ್ಥಿಕವಾಗಿ ಸದೃಢವಲ್ಲದವರಿಗೆ ಮೀಸಲಾತಿಯಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ದೊರಕಿದರೂ ಚುನಾವಣಾ ಖರ್ಚು ವೆಚ್ಚಗಳಿಗೆ ಹಣದ ಆವಶ್ಯಕತೆಯಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಅಧ್ಯಯನಕ್ಕೆ ಆರಿಸಿಕೊಂಡ ಸ್ಥಳೀಯ ಸರ್ಕಾರದ ಮಹಿಳಾ ಪ್ರತಿನಿಧಿಗಳ ಆರ್ಥಿಕ ಸುಧಾರಣೆಯ ಬಗ್ಗೆ ಪ್ರಶ್ನಿಸಿದಾಗ ಮಹಿಳಾ ಪ್ರತಿನಿಧಿ ರಾಜಕೀಯದಿಂದ ಜೀವನದಲ್ಲಿ ಆರ್ಥಿಕವಾಗಿ ಸುಧಾರಣೆಯಾಗಿದೆ ಎಂದು ಯಾರೊಬ್ಬರೂ ತಿಳಿಸಿರುವುದಿಲ್ಲ. ಜನಪ್ರತಿನಿಧಿಯಾಗಿ ಆಯ್ಕೆಯಾದನಂತರ ಆದಾಯದಲ್ಲಿ ಹೆಚ್ಚಳವಾಗಿರುತ್ತದೆಯೇ ಭೂಮಿ ಮತ್ತು ಐಷಾರಾಮಿ ವಸ್ತುಗಳನ್ನು ಖರೀದಿಸಿದ್ದೀರಾ ಎಂಬ ಪ್ರಶ್ನೆಗೆ ಮೂರು ಸ್ತರದ ಸದಸ್ಯರುಗಳು ಸಕಾರಾತ್ಮಕವಾಗಿ ಸ್ಪಂದಿಸಿರುವುದಿಲ್ಲ. ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಸರ್ಕಾರದಿಂದ ಸರಿಯಾದ ಆರ್ಥಿಕ ಸಹಕಾರ ದೊರೆತಿದ್ದರೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬಹುದು ಎಂಬುದಾಗಿ ಸಂದರ್ಶಿತ ಅಭ್ಯರ್ಥಿಗಳು ವ್ಯಕ್ತಪಡಿಸಿರುತ್ತಾರೆ. ಸ್ಥಳೀಯ ಆಡಳಿತ ಸಂಸ್ಥೆಗಳು ಯಶಸ್ವಿ ಆಗಬೇಕಾದರೆ ಜನರು ಎದುರಿಸುತ್ತಿರುವ ಸಮಸ್ಯೆಗಳಿಗೆ ಶೀಘ್ರ ಸ್ಪಂದನ ಅಗತ್ಯವಾಗಿರುತ್ತದೆ. ಸ್ಥಳೀಯ ಸಂಸ್ಥೆಗಳ ಆಡಳಿತದ ವಿಳಂಬ ನೀತಿ ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಇತ್ಯಾದಿಗಳು ತ್ವರಿತ ಕಾಮಗಾರಿಗಳಿಗೆ ಶೀಘ್ರವಾಗಿ ಅನುದಾನವನ್ನು ಒದಗಿಸದೇ ಇರುವುದು ಕ್ಷೇತ್ರದ ಅಭಿವೃದ್ಧಿಗೆ ಮಾತ್ರವಲ್ಲದೆ ಜನಪ್ರತಿನಿಧಿಯಾಗಿ ತಮಗೂ ಕೆಟ್ಟ ಹೆಸರನ್ನು ತರುತ್ತದೆ ಎಂಬ ಅಸಮಧಾನವನ್ನು ಮೂರು ಸ್ತರದ ಪ್ರತಿನಿಧಿಗಳು ವ್ಯಕ್ತಪಡಿಸಿರುತ್ತಾರೆ. ಹಳ್ಳಿಗಳ ಅಧಿಕಾರಶಾಹಿಗಳು ಕಾನೂನಿಗೆ ಯಾವ ಗೌರವವನ್ನೂ ನೀಡುವುದಿಲ್ಲ. ಅವರೇ ಸರ್ಕಾರದಂತೆ ವರ್ತಿಸುತ್ತಾರೆ. ದುರ್ಬಲರು ಪ್ರಬಲರನ್ನು ಅನುಕರಿಸುತ್ತಾರೆ. ಈ ಪ್ರಕ್ರಿಯೆಯಿಂದ ಸಂಸ್ಥೆಗಳು ಸಾರ್ವಜನಿಕ ಸಂಪನ್ಮೂಲವಾಗದೆ ಎಲ್ಲರೂ ನಿರ್ಭಯವಾಗಿ ಅವರವರ ಶಕ್ತಿಗೆ ತಕ್ಕಂತೆ ಲೂಟಿಮಾಡುವ ತಾಣವಾಗಿದೆ[9]. ಎಂಬ ಅಧ್ಯಯನದ ಫಲಿತವು ಪ್ರಸ್ತುತ ಅಧ್ಯಯನದಲ್ಲೂ ಕಂಡುಬಂದಿರುತ್ತದೆ.

ಪಂಚಾಯತ್ ಸಭೆಗಳಲ್ಲಿ ಭಾಗವಹಿಸದಿರುವುದು

ಮಹಿಳಾ ಪ್ರತಿನಿಧಿಗಳು ಮನೆಕೆಲಸದ ಹೊರೆಗಳಿಂದ ಅವರು ಪಂಚಾಯತ್‌ಗಳಿಗೆ ಚುನಾಯಿತರಾದರೂ ಸಭೆಗಳಲ್ಲಿ ಭಾಗವಹಿಸದಿರುವುದಕ್ಕೆ ಕಾರಣವಾಗಿರುತ್ತದೆ ಎಂದು ಅನೇಕ ಅಧ್ಯಯನಗಳು ಲಿಂಗ ತಾರತಮ್ಯತೆಯಿಂದ ಅವರ ಸಬಲೀಕರಣಕ್ಕೆ, ಅಭಿವೃದ್ಧಿಗೆ ತೊಡಕು ಎಂದೆಲ್ಲಾ ವರ್ಣಿಸಿದೆ[10]. ಆದರೆ ವಾಸ್ತವಿಕವಾಗಿ ಮಹಿಳಾ ಪ್ರತಿನಿಧಿಗಳು ಮನೆವಾರ್ತೆಯ ಜವಾಬ್ದಾರಿಗಳಿದ್ದರೂ ಎಲ್ಲೂ ಕೂಡಾ ಅದನ್ನು ವ್ಯಕ್ತಪಡಿಸಿರುವುದಿಲ್ಲ.

ಕೋಷ್ಟಕ – 5.5

ಪಂಚಾಯತ್ ಸಭೆಗಳಲ್ಲಿ ಭಾಗವಹಿಸದಿರುವುದು

ಕಾರಣಗಳು	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಮನೆಕೆಲಸದ ಹೊರೆ	92	64.78	29	56.86	4	30.76
ಅರಿವಿನ ಕೊರತೆ	37	20.05	16	31.37	2	15.38
ಆಸಕ್ತಿ ಇಲ್ಲ	22	15.49	10	19.60	0	–
ಕುಟುಂಬದ ಬೆಂಬಲದ ಕೊರತೆ	21	14.78	12	23.52	2	15.38
ಪುರುಷ ಸದಸ್ಯರ ಅಧಿಪತ್ಯ	12	8.45	08	15.68	3	23.07

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 5.5ರ ಪ್ರಕಾರ ಗ್ರಾಮ ಪಂಚಾಯತ್‌ನ 92 ಮಹಿಳಾ ಪ್ರತಿನಿಧಿಗಳು, ತಾಲೂಕು ಪಂಚಾಯತ್‌ನ 29 ಮಹಿಳಾ ಪ್ರತಿನಿಧಿಗಳು, ಜಿಲ್ಲಾ ಪಂಚಾಯತ್‌ನ ನಾಲ್ಕು ಮಹಿಳಾ ಪ್ರತಿನಿಧಿಗಳು ಮನೆಕೆಲಸದ ಹೊರೆಗಳಿಂದ, ಗ್ರಾಮ ಪಂಚಾಯತ್‌ನ 37 ಮಹಿಳಾ ಪ್ರತಿನಿಧಿಗಳು, ತಾಲೂಕು ಪಂಚಾಯತ್‌ನ 16 ಮಹಿಳಾ ಪ್ರತಿನಿಧಿಗಳು, ಜಿಲ್ಲಾ ಪಂಚಾಯತ್‌ನ ಇಬ್ಬರು ಮಹಿಳಾ ಪ್ರತಿನಿಧಿಗಳು ಅರಿವಿನ ಕೊರತೆಯೆಂದು, ಗ್ರಾಮ ಪಂಚಾಯತ್‌ನ 22 ಮಹಿಳಾ ಪ್ರತಿನಿಧಿಗಳು, ತಾಲೂಕು ಪಂಚಾಯತ್‌ನ 10 ಮಹಿಳಾ ಪ್ರತಿನಿಧಿಗಳು ಆಸಕ್ತಿಯಿಲ್ಲವೆಂದು, ಗ್ರಾಮ ಪಂಚಾಯತ್‌ನ 21 ಮಹಿಳಾ ಪ್ರತಿನಿಧಿಗಳು, ತಾಲೂಕು ಪಂಚಾಯತ್‌ನ 12 ಮಹಿಳಾ ಪ್ರತಿನಿಧಿಗಳು, ಜಿಲ್ಲಾ ಪಂಚಾಯತ್‌ನ ಇಬ್ಬರು ಮಹಿಳಾ ಪ್ರತಿನಿಧಿಗಳು ಕುಟುಂಬದ ಬೆಂಬಲದ ಕೊರತೆಯೆಂದು, ಗ್ರಾಮ ಪಂಚಾಯತ್‌ನ 12 ಮಹಿಳಾ ಪ್ರತಿನಿಧಿಗಳು, ತಾಲೂಕು ಪಂಚಾಯತ್‌ನ ಎಂಟು ಮಹಿಳಾ ಪ್ರತಿನಿಧಿಗಳು, ಜಿಲ್ಲಾ ಪಂಚಾಯತ್‌ನ ಮೂವರು ಮಹಿಳಾ ಪ್ರತಿನಿಧಿಗಳು ಪುರುಷರ ಅಧಿಪತ್ಯವೆಂದು ತಿಳಿಸಿರುತ್ತಾರೆ. ಆದರೆ ಸಭೆಗಳಲ್ಲಿ ಯಾಕೆ ಅವರು ಭಾಗವಹಿಸುವುದಿಲ್ಲವೆಂದು ಅವಲೋಕನವನ್ನು ಮಾಡಿದಾಗ ಮೂರೂ ಸ್ತರದ ಪಂಚಾಯತ್‌ನ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ತಮ್ಮ ಪ್ರಥಮ ಆದ್ಯತೆಯನ್ನು ತಮ್ಮ ಕುಟುಂಬದ ಶ್ರೇಯೋಭಿವೃದ್ಧಿಗೆ ನೀಡಿರುವುದು ಕಂಡುಬಂದಿರುತ್ತದೆ. ಆದುದರಿಂದ ಮನೆ ವಾರ್ತೆಯ ಹೊರೆಗಳು ಅವರಿಗೆ ಸಾಮಾನ್ಯವೆಂದೆನಿಸಿ ಸಾರ್ವಜನಿಕ ಸೇವೆಗೆ ಅದರಿಂದ ಯಾವುದೇ ತೊಡಕಾಗುವುದಿಲ್ಲವೆಂದು ಅವರ ಅನಿಸಿಕೆ. ಆದರೆ ಪುರುಷ ಸದಸ್ಯರನ್ನು ಮತ್ತು ಕ್ಷೇತ್ರದ ಜನತೆಯನ್ನು

ಸಂಪರ್ಕಿಸಿದಾಗ ಮಹಿಳಾ ಪ್ರತಿನಿಧಿಗಳು ಸಾರ್ವಜನಿಕ ಸೇವೆಗೆ ಹೆಚ್ಚಿನ ಮಹತ್ವವನ್ನು ನೀಡುವುದಿಲ್ಲವೆಂದು ತಿಳಿಸಿರುತ್ತಾರೆ. ಇದನ್ನು ಗಮನಿಸಿದಾಗ ಮಹಿಳಾ ಪ್ರತಿನಿಧಿಗಳಿಗೆ ರಾಜಕೀಯದಲ್ಲಿ ಆಸಕ್ತಿಯಿದ್ದರೂ ತನ್ನ ಕುಟುಂಬಕ್ಕೆ ತೊಂದರೆಯಾದಾಗ ರಾಜಕೀಯವನ್ನು ತೊರೆಯುತ್ತಾರೆ ಎಂದು ಕಂಡುಬಂದಿರುತ್ತದೆ.

ಲಿಂಗ ಅಸಮಾನತೆಗೆ ಕಾರಣ

ಮಹಿಳಾ ಪ್ರತಿನಿಧಿಗಳಾದ ನಂತರ ನಿಮ್ಮ ರಾಜಕೀಯ ಸಹಭಾಗಿತ್ವದಲ್ಲಿ ಯಾವ ಅಂಶಗಳಲ್ಲಿ ಮಹಿಳೆ ಮತ್ತು ಪುರುಷರ ನಡುವೆ ಅಸಮಾನತೆ ಇದೆಯೆಂದು ನಿಮಗನ್ನಿಸುತ್ತದೆ ಎಂದು ಪ್ರಶ್ನಿಸಿದಾಗ ಗ್ರಾಮ ಪಂಚಾಯತ್‌ನ 89, ತಾಲೂಕು ಪಂಚಾಯತ್‌ನ 21, ಜಿಲ್ಲಾ ಪಂಚಾಯತ್‌ನ ಆರು ಮಹಿಳಾ ಪ್ರತಿನಿಧಿಗಳು ಸಮಾಜದಲ್ಲಿರುವ ಸಂಪ್ರದಾಯ, ಗ್ರಾಮ ಪಂಚಾಯತ್‌ನ 70, ತಾಲೂಕು ಪಂಚಾಯತ್‌ನ 19, ಜಿಲ್ಲಾ ಪಂಚಾಯತ್‌ನ ಆರು ಮಹಿಳಾ ಪ್ರತಿನಿಧಿಗಳು ಸಮಾಜ ಒಡ್ಡುವ ಕಟ್ಟುಪಾಡುಗಳು, ಗ್ರಾಮ ಪಂಚಾಯತ್‌ನ 59, ತಾಲೂಕು ಪಂಚಾಯತ್‌ನ 28, ಜಿಲ್ಲಾ ಪಂಚಾಯತ್‌ನ 11 ಮಹಿಳಾ ಪ್ರತಿನಿಧಿಗಳು ಸಂಪನ್ಮೂಲದ ಒಡೆತನದ ಕೊರತೆಯೆಂದು, ಶೇಕಡಾ 21 ಮಹಿಳಾ ಪ್ರತಿನಿಧಿಗಳು ಪಿತೃ ಪ್ರಧಾನ ವ್ಯವಸ್ಥೆ ಮತ್ತು ಶೇಕಡಾ 17 ಮಹಿಳಾ ಪ್ರತಿನಿಧಿಗಳು ಪೂರ್ವಾಗ್ರಹ ಪೀಡಿತರಾಗಿ ನಮ್ಮಲ್ಲಿ ಲಿಂಗ ಅಸಮಾನತೆ ಇದೆ ಎಂದು ಕೋಷ್ಟಕ 5.6ರ ಪ್ರಕಾರ ತಿಳಿಸಿರುತ್ತಾರೆ.

ಕೋಷ್ಟಕ – 5.6

ಲಿಂಗ ಅಸಮಾನತೆಗೆ ಕಾರಣ

ಲಿಂಗ ಅಸಮಾನತೆಗೆ ಕಾರಣಗಳು	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಸಮಾಜದ ಕಟ್ಟುಪಾಡು	70	49.29	19	37.25	06	46.15
ಸಂಪ್ರದಾಯ	89	62.67	21	41.17	06	46.15
ಪಿತೃ ಪ್ರಧಾನ ವ್ಯವಸ್ಥೆ	48	33.80	27	52.94	08	61.53
ಪೂರ್ವಾಗ್ರಹ ಪೀಡಿತ	47	33.09	18	35.29	10	76.92
ಸಂಪನ್ಮೂಲದ ಒಡೆತನದ ಕೊರತೆ	59	41.54	28	54.90	11	84.61

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಇದನ್ನು ಅವಲೋಕಿಸಿದಾಗ ರಾಜಕೀಯದಲ್ಲಿ ಮಹಿಳೆಯ ಸಹಭಾಗಿತ್ವಕ್ಕೆ ಹಲವಾರು ಅಡೆತಡೆಗಳಿವೆ ಎಂದು ಗುರುತಿಸಲಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಎಷ್ಟೇ ಸಂವಿಧಾನಾತ್ಮಕ

ಕಾಯ್ದೆ, ಹಕ್ಕು ಮತ್ತು ಬಾಧ್ಯತೆಗಳನ್ನು ನೀಡಿ ಸಶಕ್ತೀಕರಣಗೊಳಿಸಲು ಪ್ರಯತ್ನಿಸಿದರೂ ಸಮಾಜದ ಸಾಂಪ್ರದಾಯಿಕ ಸಂಘ ಸಂಸ್ಥೆಗಳಲ್ಲಿ, 'ರಚನಾತ್ಮಕ ವ್ಯವಸ್ಥೆಗಳಲ್ಲಿ'[11] ಹಾಗೂ ಅದರ ವ್ಯವಸ್ಥೆ ಮತ್ತು ಆಚರಣೆಗಳಲ್ಲಿ ಪೂರ್ವಾಗ್ರಹ ಪೀಡಿತವಾಗಿರುವುದು ಕಂಡುಬರುತ್ತದೆ[12].

ರಾಜಕೀಯ ಸಹಭಾಗಿತ್ವಕ್ಕೆ ಎದುರಾಗುವ ಅಡೆತಡೆಗಳು

ಸ್ಥಳೀಯ ಸಂಸ್ಥೆಗಳಲ್ಲಿ ಪರಿಣಾಮಕಾರಿ ರಾಜಕೀಯ ಸಹಭಾಗಿತ್ವಕ್ಕೆ ಎದುರಾಗುವ ತಡೆಗಳ ಬಗ್ಗೆ ಕೋಷ್ಟಕ 5.7ರ ವಿಶ್ಲೇಷಣೆಯ ಪ್ರಕಾರ ಗ್ರಾಮ ಪಂಚಾಯತ್‌ನ 103, ತಾಲೂಕು ಪಂಚಾಯತ್‌ನ 35, ಜಿಲ್ಲಾ ಪಂಚಾಯತ್‌ನ 11 ಮಹಿಳಾ ಪ್ರತಿನಿಧಿಗಳು ಶಾಸನ ಮತ್ತು ನೀತಿಗಳ ಅರಿವಿಲ್ಲದಿರುವುದು, ರಾಜಕೀಯದಲ್ಲಿ ತರಬೇತಿ ಕೊರತೆ ಎಂದು ಗ್ರಾಮ ಪಂಚಾಯತ್‌ನ 99, ತಾಲೂಕು ಪಂಚಾಯತ್‌ನ 26, ಜಿಲ್ಲಾ ಪಂಚಾಯತ್‌ನ 8 ಮಹಿಳಾ ಪ್ರತಿನಿಧಿಗಳು, ಆತ್ಮಸ್ಥೈರ್ಯದ ಕೊರತೆಯ ಬಗ್ಗೆ ಗ್ರಾಮ ಪಂಚಾಯತ್‌ನ 79, ತಾಲೂಕು ಪಂಚಾಯತ್‌ನ 17, ಜಿಲ್ಲಾ ಪಂಚಾಯತ್‌ನ 8 ಮಹಿಳಾ ಪ್ರತಿನಿಧಿಗಳು, ಗ್ರಾಮ ಪಂಚಾಯತ್‌ನ 86, ತಾಲೂಕು ಪಂಚಾಯತ್‌ನ 21, ಜಿಲ್ಲಾ ಪಂಚಾಯತ್‌ನ 7 ಮಹಿಳಾ ಪ್ರತಿನಿಧಿಗಳು ಹೆಚ್ಚಿನ ಶಿಕ್ಷಣದ ಕೊರತೆಯೆಂದು, ಮಹಿಳೆಯಾಗಿರುವ ಕಾರಣವು ಪ್ರಮುಖವಾಗಿದೆ ಎಂದು ಗ್ರಾಮ ಪಂಚಾಯತ್‌ನ 24, ತಾಲೂಕು ಪಂಚಾಯತ್‌ನ 14, ಜಿಲ್ಲಾ ಪಂಚಾಯತ್‌ನ 4 ಮಹಿಳಾ ಪ್ರತಿನಿಧಿಗಳು, ಅಧಿಕಾರಿಗಳ ಸಹಕಾರದ ಕೊರತೆ ಮತ್ತು ಉದಾಸೀನತೆಯಿಂದ ಎಂದು ಗ್ರಾಮ ಪಂಚಾಯತ್‌ನ 12, ತಾಲೂಕು ಪಂಚಾಯತ್‌ನ 21, ಜಿಲ್ಲಾ ಪಂಚಾಯತ್‌ನ 6 ಮಹಿಳಾ ಪ್ರತಿನಿಧಿಗಳು, ಪುರುಷಾಧಿಪತ್ಯವೆಂದು ಗ್ರಾಮ ಪಂಚಾಯತ್‌ನ 30, ತಾಲೂಕು ಪಂಚಾಯತ್‌ನ 16, ಜಿಲ್ಲಾ ಪಂಚಾಯತ್‌ನ 9 ಮಹಿಳಾ ಪ್ರತಿನಿಧಿಗಳು ತಿಳಿಸಿರುತ್ತಾರೆ.

ಕೋಷ್ಟಕ – 5.7

ರಾಜಕೀಯ ಸಹಭಾಗಿತ್ವಕ್ಕೆ ಎದುರಾಗುವ ಅಡೆತಡೆಗಳು

ಅಡೆತಡೆಗಳು	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಶಿಕ್ಷಣ	86	60.56	21	41.17	07	53.84
ರಾಜಕೀಯ ತರಬೇತಿ	99	69.71	26	50.98	08	61.53
ಶಾಸನಗಳ ಅರಿವಿಲ್ಲದಿರುವುದು	103	72.53	35	24.64	11	84.61
ಪುರುಷ ಅಧಿಪತ್ಯ	30	21.12	16	31.37	09	69.23
ಆತ್ಮಸ್ಥೈರ್ಯದ ಕೊರತೆ	79	55.63	17	33.33	08	61.53
ಮಹಿಳೆಯಾದ ಕಾರಣ	24	16.90	14	27.45	04	30.76
ಅಧಿಕಾರಿಗಳ ನಿರ್ಲಕ್ಷ್ಯ	12	08.45	21	41.17	06	46.15

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಇದನ್ನು ಅವಲೋಕಿಸಿದಾಗ ಈ ಎಲ್ಲಾ ಅಡೆತಡೆಗಳು ರಾಜಕೀಯ ಸಹಭಾಗಿತ್ವಕ್ಕೆ ತಡೆಯನ್ನುಂಟುಮಾಡುತ್ತದೆ ಎಂದು ತಿಳಿಸಿರುತ್ತಾರೆ. ಪಂಚಾಯತ್‌ನ ಯೋಜನೆ, ಕಾರ್ಯ ಚಟುವಟಿಕೆ ಇತ್ಯಾದಿಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಅಸಾಧ್ಯವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಇದನ್ನು ಅವಲೋಕಿಸಿದಾಗ ಬಡತನ, ಶಿಕ್ಷಣದ ಕೊರತೆ, ಅರಿವಿನ ಕೊರತೆ, ಅಸಹಾಯಕತೆ, ಪುರುಷಾಧಿಪತ್ಯ ಇತ್ಯಾದಿ ಪ್ರಮುಖ ಅಡೆತಡೆಗಳೆಂದು ಹೆಚ್ಚಿನ ಅಧ್ಯಯನಗಳು ಗುರುತಿಸಿರುವುದು ಪ್ರಸ್ತುತ ಅಧ್ಯಯನದಲ್ಲೂ ಕಂಡುಬಂದಿರುತ್ತದೆ[13].

ಸಮಸ್ಯೆ ಎದುರಿಸುತ್ತಿರುವುದು

ರಾಜಕೀಯ ಪ್ರಕ್ರಿಯೆಯಲ್ಲಿ ಕಾನೂನು ಕಾಯ್ದೆಗಳಿದ್ದರೂ ರಾಜಕೀಯದಲ್ಲಿ ಹೆಚ್ಚುತ್ತಿರುವ ಕಲಹ, ಅಪರಾಧಗಳು, ಮೋಸ, ವಂಚನೆ ಇತ್ಯಾದಿಗಳು ಮಹಿಳೆಯರು ರಾಜಕೀಯದಲ್ಲಿ ಹಿನ್ನಡೆ ಅನುಭವಿಸುವ ಹಾಗೆ ಮಾಡಿದೆ

ಕೋಷ್ಟಕ – 5.8

ಪಂಚಾಯತ್ ಸದಸ್ಯರಾಗಿ ಯಾರಿಂದ ಸಮಸ್ಯೆ

ಸಮಸ್ಯೆಗೆ ಕಾರಣರು	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಪತಿ	10	07.04	10	19.60	01	07.69
ಪುರುಷ ಸಹಸದಸ್ಯರು	12	08.45	11	21.56	02	15.38
ಕುಟುಂಬದ ಸದಸ್ಯರು	33	23.23	16	31.37	04	30.76
ಅಧಿಕಾರಿಗಳು	28	19.71	12	23.52	03	23.08
ಸಮಾಜ	12	08.45	06	11.76	02	15.38
ಯಾರಿಂದಲೂ ಇಲ್ಲ	106	74.64	36	70.58	08	61.53

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 5.8ರ ವಿಶ್ಲೇಷಣೆಯ ಪ್ರಕಾರ ಪಂಚಾಯತ್‌ನ ಸದಸ್ಯರಾಗಿ ಯಾರಿಂದ ತೊಂದರೆ ಎದುರಿಸುತ್ತಿದ್ದೀರಿ? ಎಂದು ಕೇಳಿದಾಗ ಗ್ರಾಮ ಪಂಚಾಯತ್‌ನ 106, ತಾಲೂಕು ಪಂಚಾಯತ್‌ನ 36, ಜಿಲ್ಲಾ ಪಂಚಾಯತ್‌ನ 8 ಮಹಿಳಾ ಪ್ರತಿನಿಧಿಗಳು ತೊಂದರೆಯನ್ನು ಯಾರಿಂದಲೂ ಎದುರಿಸುತ್ತಿಲ್ಲವೆಂದು ತಿಳಿಸಿರುತ್ತಾರೆ. ಗ್ರಾಮ ಪಂಚಾಯತ್‌ನ 28, ತಾಲೂಕು ಪಂಚಾಯತ್‌ನ 12, ಜಿಲ್ಲಾ ಪಂಚಾಯತ್‌ನ ಮೂವರು ಮಹಿಳಾ ಪ್ರತಿನಿಧಿಗಳು ಪಂಚಾಯತಿನ ಅಧಿಕಾರಿಗಳಿಂದ ತೊಂದರೆಗಳನ್ನು ಎದುರಿಸುತ್ತಿದ್ದೇವೆ ಎಂದು, ಗ್ರಾಮ ಪಂಚಾಯತ್‌ನ 33, ತಾಲೂಕು ಪಂಚಾಯತ್‌ನ

16, ಜಿಲ್ಲಾ ಪಂಚಾಯತ್‌ನ 4 ಮಹಿಳಾ ಪ್ರನಿಧಿಗಳು ಕುಟುಂಬದ ಸದಸ್ಯರಿಂದ. ಗ್ರಾಮ ಪಂಚಾಯತ್‌ನ 12, ತಾಲೂಕು ಪಂಚಾಯತ್‌ನ 11, ಜಿಲ್ಲಾ ಪಂಚಾಯತ್‌ನ 2 ಮಹಿಳಾ ಪ್ರತಿನಿಧಿಗಳು ಪುರುಷ ಸದಸ್ಯರಿಂದ ಎಂದು, ಗ್ರಾಮ ಪಂಚಾಯತ್‌ನ 12, ತಾಲೂಕು ಪಂಚಾಯತ್‌ನ 6, ಜಿಲ್ಲಾ ಪಂಚಾಯತ್‌ನ 2, ಮಹಿಳಾ ಪ್ರತಿನಿಧಿಗಳು ಸಮಾಜದಿಂದ ಎಂದು ಮತ್ತು ಗ್ರಾಮ ಪಂಚಾಯತ್‌ನ 10, ತಾಲೂಕು ಪಂಚಾಯತ್‌ನ 10, ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಪ್ರತಿನಿಧಿಗಳು ಪತಿಯಿಂದ ಎಂದು ಉತ್ತರಿಸಿರುತ್ತಾರೆ. ಈ ವಿಶ್ಲೇಷಣೆಯನ್ನು ಅವಲೋಕಿಸಿದಾಗ ಪಂಚಾಯತ್‌ನ ಸದಸ್ಯರಾಗಿ ಸಮಸ್ಯೆಗಳನ್ನು ಎದುರಿಸಿದರೂ ಅದನ್ನು ವ್ಯಕ್ತಪಡಿಸುವಲ್ಲಿ ಹಿಂಜರಿಕೆಯಿರುವುದು ಕಂಡುಬಂದಿರುತ್ತದೆ. ಇದನ್ನು ಅವಲೋಕಿಸಿದಾಗ ಎಂಬ ಇತರ ಅಧ್ಯಯನದ ಫಲಿತವು ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲೂ ಕಂಡುಬಂದಿರುತ್ತದೆ[14].

ಕುಟುಂಬ ಮತ್ತು ರಾಜಕೀಯವನ್ನು ಸರಿದೂಗಿಸುವಲ್ಲಿ ಸಮಸ್ಯೆಗಳು

ಕೌಟುಂಬಿಕ ನಿರ್ವಹಣೆಯಲ್ಲಿ ಪುರುಷರು ಸಹಾಯ ಮಾಡದಿರುವುದು ಮಹಿಳೆಯರೇ ಎಲ್ಲಾ ಕೆಲಸಗಳನ್ನು ಮಾಡಬೇಕಾಗಿರುವುದರಿಂದ ಮಹಿಳಾ ಪ್ರತಿನಿಧಿಯಾದರೂ ಜವಾಬ್ದಾರಿಗಳಿಂದ ಮುಕ್ತರಾಗಿ ಇರುವುದಿಲ್ಲ. ಪಂಚಾಯತಿನ ಮೂರು ಸ್ತರಗಳನ್ನು ಅವಲೋಕಿಸಿದಾಗ ಮನೆ ವಾರ್ತೆಯ ಸಂಪೂರ್ಣ ಕೆಲಸ ಮಹಿಳೆಯರೇ ನಿರ್ವಹಿಸಬೇಕಾಗಿರುವುದು ಕಂಡುಬಂದಿರುತ್ತದೆ. ಹೆಚ್ಚಿನ ಮಹಿಳೆಯರು ಕೌಟುಂಬಿಕ ನಿರ್ವಹಣೆಗಾಗಿ ಮನೆಯಿಂದ ಹೊರಗೆಬಂದು ದುಡಿಯುವುದು ಅನಿವಾರ್ಯವಾಗಿರುತ್ತದೆ.

ಕೋಷ್ಟಕ – 5.9
ಕುಟುಂಬ ಮತ್ತು ರಾಜಕೀಯವನ್ನು ಸರಿದೂಗಿಸುವಲ್ಲಿ ಸಮಸ್ಯೆಗಳು

ಸಮಸ್ಯೆ	ಗ್ರಾಮ ಪಂಚಾಯತ್ ಪ್ರತಿನಿಧಿಗಳು	ತಾಲೂಕು ಪಂಚಾಯತ್ ಪ್ರತಿನಿಧಿಗಳು	ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು
ಆಗುತ್ತದೆ	138	49	13
ಆಗುವುದಿಲ್ಲ	04	02	0
ಒಟ್ಟು	**142**	**51**	**13**
ಕಾರಣಗಳು			
ಅಡುಗೆ ಮಾಡುವುದು	135	49	13
ಮನೆ ಸ್ವಚ್ಛತೆ	121	49	11
ಬಟ್ಟೆ ಒಗೆಯುವುದು	109	46	09
ನೀರು ತರುವುದು	80	39	05
ಪಾತ್ರೆ ತೊಳೆಯುವುದು	108	42	08
ಮಾರುಕಟ್ಟೆಗೆ ಹೋಗುವುದು	29	28	10
ಮಕ್ಕಳ ಜವಾಬ್ದಾರಿ	118	43	11
ಪತಿಯ ಜವಾಬ್ದಾರಿ	66	32	10
ಇತರ	34	16	02

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 5.9ರ ಪ್ರಕಾರ ಗ್ರಾಮ ಪಂಚಾಯತ್‌ನ 138, ತಾಲೂಕು ಪಂಚಾಯತ್‌ನ 49, ಜಿಲ್ಲಾ ಪಂಚಾಯತ್‌ನ 13, ಮಹಿಳಾ ಪ್ರತಿನಿಧಿಗಳು ಹೌದೆಂದು ಉತ್ತರಿಸಿರುತ್ತಾರೆ. ಇದರ ಮುಂದಿನ ಭಾಗವಾಗಿ ಸಮಸ್ಯೆಗಳು ಯಾವುವು? ಎಂದು ಪ್ರಶ್ನಿಸಿದಾಗ ಗ್ರಾಮ ಪಂಚಾಯತ್‌ನ 135, ತಾಲೂಕು ಪಂಚಾಯತ್‌ನ 49, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಅಡುಗೆ ಮಾಡುವುದೆಂದು, ಗ್ರಾಮ ಪಂಚಾಯತ್‌ನ 121, ತಾಲೂಕು ಪಂಚಾಯತ್‌ನ 49, ಜಿಲ್ಲಾ ಪಂಚಾಯತ್‌ನ 11 ಮಹಿಳಾ ಪ್ರತಿನಿಧಿಗಳು ಮನೆ ಸ್ವಚ್ಛತೆ ಎಂದು, ಗ್ರಾಮ ಪಂಚಾಯತ್‌ನ 118, ತಾಲೂಕು ಪಂಚಾಯತ್‌ನ 43, ಜಿಲ್ಲಾ ಪಂಚಾಯತ್‌ನ 11 ಮಹಿಳಾ ಪ್ರತಿನಿಧಿಗಳು ಮಕ್ಕಳ ಜವಾಬ್ದಾರಿ ಎಂದು; ಗ್ರಾಮ ಪಂಚಾಯತ್‌ನ 108, ತಾಲೂಕು ಪಂಚಾಯತ್‌ನ 42, ಜಿಲ್ಲಾ ಪಂಚಾಯತ್‌ನ 8 ಮಹಿಳಾ ಪ್ರತಿನಿಧಿಗಳು ಪಾತ್ರೆ ತೊಳೆಯುವುದೆಂದು, ಗ್ರಾಮ ಪಂಚಾಯತ್‌ನ 80, ತಾಲೂಕು ಪಂಚಾಯತ್‌ನ 39, ಜಿಲ್ಲಾ ಪಂಚಾಯತ್‌ನ 5 ,ಮಹಿಳಾ ಪ್ರತಿನಿಧಿಗಳು ನೀರು ತರಲಿರುವುದೆಂದು, ಗ್ರಾಮ ಪಂಚಾಯತ್‌ನ 66, ತಾಲೂಕು ಪಂಚಾಯತ್‌ನ 32, ಜಿಲ್ಲಾ ಪಂಚಾಯತ್‌ನ 10 ಮತ್ತು ಮಹಿಳಾ ಪ್ರತಿನಿಧಿಗಳು ಪತಿಯ ಜವಾಬ್ದಾರಿ ಎಂದು, ಗ್ರಾಮಪಂಚಾಯತ್‌ನ 29, ತಾಲೂಕು ಪಂಚಾಯತ್‌ನ 28, ಜಿಲ್ಲಾ ಪಂಚಾಯತ್‌ನ 10 ಮಹಿಳಾ ಪ್ರತಿನಿಧಿಗಳು ಮಕ್ಕಳ ಜವಾಬ್ದಾರಿ ಎಂದು ಉತ್ತರಿಸಿರುತ್ತಾರೆ. ಇತರ ಚಟುವಟಿಕೆಗಳಾದ ಕೃಷಿ, ಬೀಡಿ ಕಟ್ಟುವುದು, ಪಶುಸಂಗೋಪನೆ, ಕೂಲಿ ಕೆಲಸ, ಇತ್ಯಾದಿಗಳ ಬಗ್ಗೆಯೂ ತಿಳಿಸಿರುತ್ತಾರೆ. ಗ್ರಾಮಗಳಲ್ಲಿ ಹೆಚ್ಚಾಗಿ ಕೃಷಿ ಕುಟುಂಬಗಳಿದ್ದು ಗ್ರಾಮ ಪಂಚಾಯತ್‌ನ 34, ತಾಲೂಕು ಪಂಚಾಯತ್‌ನ 16 ಮತ್ತು ಜಿಲ್ಲಾ ಪಂಚಾಯತ್‌ನ ಎರಡು ಮಹಿಳಾ ಪ್ರತಿನಿಧಿಗಳು ಕುಟುಂಬಕ್ಕೆ ಸಂಬಂಧಪಟ್ಟ ಕೃಷಿ ಭೂಮಿಯಲ್ಲಿ ಕಾರ್ಯನಿರ್ವಹಿಸುವುದು ಅನಿವಾರ್ಯವಾಗುತ್ತದೆ ಎಂಬ ಅಭಿಪ್ರಾಯವನ್ನು ನೀಡಿರುತ್ತಾರೆ. ಇದನ್ನು ಅವಲೋಕಿಸಿದಾಗ ಮಹಿಳೆಯ ವಿವಿಧ ಕರ್ತವ್ಯಗಳನ್ನು ಕೌಟುಂಬಿಕ ಮತ್ತು ಬಾಹ್ಯ ಕೆಲಸಗಳೆಂದು ವಿಂಗಡಿಸಿ ಎರಡನ್ನೂ ನಿಭಾಯಿಸುವಾಗ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ರೀತಿ ಸಮಾಜದಲ್ಲಿ ಇಂದಿಗೂ ಲಿಂಗ ಶ್ರಮ ವಿಭಜನೆ ಇದೆ ಎಂದು ಹೆಚ್ಚಿನ ಅಧ್ಯಯನಗಳ ಫಲಿತಗಳಲ್ಲಿ ಕಂಡುಬಂದಿರುವುದು ಪ್ರಸ್ತುತ ಅಧ್ಯಯನದಲ್ಲೂ ಕಂಡು ಬಂದಿರುತ್ತದೆ[15].

ಸಭೆಗಳಲ್ಲಿ ವಾರ್ಡ್‌ಗಳ ಕುರಿತು ಚರ್ಚಿಸುವುದು

ಪಂಚಾಯತ್ ಸಭೆಗಳಲ್ಲಿ ಭಾಗವಹಿಸಿ ವಾರ್ಡ್ ಅಭಿವೃದ್ಧಿಯ ಬಗ್ಗೆ ಮಾತನಾಡುವುದು, ವಾದ ವಿವಾದ ಮಾಡಿ ಸರಕಾರಿ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ತಮ್ಮ ಕ್ಷೇತ್ರಕ್ಕೆ ಸಿಗುವಂತೆ ಮಾಡುವುದು ಪ್ರತಿಯೋರ್ವ ಪ್ರತಿನಿಧಿಯ ಕರ್ತವ್ಯವಾಗಿರುತ್ತದೆ.

ಕೋಷ್ಟಕ – 5.10

ಪಂಚಾಯತ್ ಸಭೆಗಳಲ್ಲಿ ವಾರ್ಡ್‌ಗಳ ಕುರಿತು ಚರ್ಚಿಸುವುದು

ಸಭೆಗಳಲ್ಲಿ ಚರ್ಚಿಸುವುದು	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಪುರುಷರು	93	65.50	40	78.43	03	23.08
ಮಹಿಳೆಯರು	30	21.12	04	07.84	04	30.76
ಇಬ್ಬರೂ	19	13.38	07	13.73	06	46.16
ಒಟ್ಟು	**142**	**100**	**51**	**100**	**13**	**100**
ಪುರುಷರೇ ಹೆಚ್ಚು ಚರ್ಚಿಸಲು ಕಾರಣಗಳು						
ವಾರ್ಡ್‌ನ ಸಮಸ್ಯೆಯ ಅರಿವು	41	28.87	20	39.21	02	15.38
ಕಾನೂನಿನ ಅರಿವು	37	26.05	16	31.37	08	61.53
ಹೆಚ್ಚಿನ ಆತ್ಮವಿಶ್ವಾಸ	34	23.94	10	19.60	02	15.38
ಪುರುಷರ ಅಧಿಪತ್ಯ	30	21.12	13	25.49	03	23.08

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಕೋಷ್ಟಕ 5.10ರಲ್ಲಿ ವಿಶ್ಲೇಷಿಸಿರುವಂತೆ ಪುರುಷ ಪ್ರತಿನಿಧಿ ಮತ್ತು ಮಹಿಳಾ ಪ್ರತಿನಿಧಿಗಳ ನಡುವೆ ತುಲನೆ ಮಾಡಿ ಪಂಚಾಯತ್‌ನ ಸಭೆಗಳಲ್ಲಿ ಯಾರು ಹೆಚ್ಚು ಮಾತನಾಡುತ್ತಾರೆ? ಎಂದು ಮಹಿಳಾ ಪ್ರತಿನಿಧಿಗಳನ್ನು ಪ್ರಶ್ನಿಸಿದಾಗ ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳೆಂಬ ಭೇದವಿಲ್ಲದೆ, ಮಹಿಳಾ ಪ್ರತಿನಿಧಿಗಳು ಸಭೆಗಳಲ್ಲಿ ಪುರುಷ ಪ್ರತಿನಿಧಿಗಳೇ ಹೆಚ್ಚಾಗಿ ಮಾತನಾಡುವುದು ಎಂದು ತಿಳಿಸಿರುತ್ತಾರೆ. ಗ್ರಾಮ ಪಂಚಾಯತ್‌ಗಳ 93 ಮಹಿಳಾ ಪ್ರತಿನಿಧಿಗಳು, ತಾಲೂಕು ಪಂಚಾಯತ್‌ನ 40 ಮಹಿಳಾ ಪ್ರತಿನಿಧಿಗಳು, ಜಿಲ್ಲಾ ಪಂಚಾಯತ್‌ನ 3 ಮಹಿಳಾ ಪ್ರತಿನಿಧಿಗಳು ಪುರುಷ ಪ್ರತಿನಿಧಿಗಳೇ ಹೆಚ್ಚು ಮಾತನಾಡುತ್ತಾರೆ ಎಂದು ಹೇಳಿರುತ್ತಾರೆ. ಗ್ರಾಮ ಪಂಚಾಯತ್‌ನ 30 ಮಹಿಳಾ ಪ್ರತಿನಿಧಿಗಳು,

ತಾಲೂಕು ಪಂಚಾಯತ್‌ನ 4 ಮಹಿಳಾ ಪ್ರತಿನಿಧಿಗಳು, ಜಿಲ್ಲಾ ಪಂಚಾಯತ್‌ನ 4 ಮಹಿಳಾ ಪ್ರತಿನಿಧಿಗಳು ಪಂಚಾಯತ್‌ನ ಸಭೆಗಳಲ್ಲಿ ಮಹಿಳಾ ಪ್ರತಿನಿಧಿಗಳೇ ಹೆಚ್ಚಾಗಿ ಮಾತನಾಡುತ್ತಾರೆ ಎಂದು ತಿಳಿಸಿರುತ್ತಾರೆ. ಗ್ರಾಮ ಪಂಚಾಯತ್‌ನ 19 ಮಹಿಳಾ ಪ್ರತಿನಿಧಿಗಳು, ತಾಲೂಕು ಪಂಚಾಯತ್‌ನ 7 ಮಹಿಳಾ ಪ್ರತಿನಿಧಿಗಳು, ಜಿಲ್ಲಾ ಪಂಚಾಯತ್‌ನ 6 ಮಹಿಳಾ ಪ್ರತಿನಿಧಿ ಪಂಚಾಯತ್ ಸಭೆಗಳಲ್ಲಿ ಪುರುಷ ಮತ್ತು ಮಹಿಳಾ ಪ್ರತಿನಿಧಿಗಳಿಬ್ಬರೂ ಮಾತನಾಡುತ್ತಾರೆ ಎಂದು ತಿಳಿಸಿರುತ್ತಾರೆ. ಇದನ್ನು ಅವಲೋಕಿಸಿದಾಗ ಪುರುಷ ಪ್ರತಿನಿಧಿಗಳೇ ಹೆಚ್ಚು ಸಕ್ರಿಯವಾಗಿ ಸಭೆಗಳಲ್ಲಿ ಭಾಗವಹಿಸುವುದು ಕಂಡುಬಂದಿರುತ್ತದೆ. ಪಂಚಾಯತ್ ಸಭೆಗಳಲ್ಲಿ ಯಾಕೆ ಪುರುಷರೇ ಹೆಚ್ಚಾಗಿ ಮಾತನಾಡುತ್ತಾರೆ? ಎಂದು ಕೇಳಿದಾಗ, ಗ್ರಾಮ ಪಂಚಾಯತ್‌ನ 41, ತಾಲೂಕು ಪಂಚಾಯತ್‌ನ 20, ಜಿಲ್ಲಾ ಪಂಚಾಯತ್‌ನ 2 ಮಹಿಳಾ ಪ್ರತಿನಿಧಿಗಳು ಪುರುಷರಿಗೆ ಗ್ರಾಮದ ಸಮಸ್ಯೆಯ ಸಂಪೂರ್ಣ ಮಾಹಿತಿ ಇರುತ್ತದೆ, ಗ್ರಾಮ ಪಂಚಾಯತ್‌ನ 37, ತಾಲೂಕು ಪಂಚಾಯತ್‌ನ 16, ಜಿಲ್ಲಾ ಪಂಚಾಯತ್‌ನ 8 ಮಹಿಳಾ ಪ್ರತಿನಿಧಿಗಳು ಗ್ರಾಮೀಣ ಸಮಸ್ಯೆ ಮತ್ತು ಕಾನೂನಿನ ಬಗ್ಗೆ ಪುರುಷರಿಗೆ ಹೆಚ್ಚು ಅರಿವಿರುತ್ತದೆ ಎಂದು, ಗ್ರಾಮ ಪಂಚಾಯತ್‌ನ 34, ತಾಲೂಕು ಪಂಚಾಯತ್‌ನ 10, ಜಿಲ್ಲಾ ಪಂಚಾಯತ್‌ನ 2 ಮಹಿಳಾ ಪ್ರತಿನಿಧಿಗಳು ವಾರ್ಡಿನ ಯಾವುದೇ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಪುರುಷರೇ ಮುಂದುವರಿಯುತ್ತಾರೆ ಎಂದು, ಗ್ರಾಮ ಪಂಚಾಯತ್‌ನ 30, ತಾಲೂಕು ಪಂಚಾಯತ್‌ನ 13, ಜಿಲ್ಲಾ ಪಂಚಾಯತ್‌ನ 3 ಮಹಿಳಾ ಪ್ರತಿನಿಧಿಗಳು ಪುರುಷ ಸದಸ್ಯರ ಸಂಖ್ಯೆ ಅಧಿಕವಿರುವುದರಿಂದ ಪುರುಷರ ಅಧಿಪತ್ಯವೇ ಹೆಚ್ಚು ಆದುದರಿಂದ ಅವರೇ ಹೆಚ್ಚು ಮಾತನಾಡುತ್ತಾರೆ ಎಂದಿರುತ್ತಾರೆ.

ತರಬೇತಿಯ ಅಗತ್ಯ

ತರಬೇತಿಯು ಮಹಿಳಾ ಪ್ರತಿನಿಧಿಗಳ ರಾಜಕೀಯ ಸಹಭಾಗಿತ್ವಕ್ಕೆ ಅತ್ಯಂತ ಅವಶ್ಯವಾಗಿರುತ್ತದೆ. ಇಂದು ತರಬೇತಿ ಸಂಸ್ಥೆಗಳು ಅಭಿವೃದ್ಧಿ ಕಾರ್ಯದಲ್ಲಿ ಸರಕಾರದೊಂದಿಗೆ ಸಹಕರಿಸುತ್ತವೆ. ಅನೇಕ ಅಭಿವೃದ್ಧಿ-ಪರ ರಾಷ್ಟ್ರಗಳಲ್ಲಿ ಸರಕಾರ ಮತ್ತು ಸರಕಾರೇತರ ಸಂಸ್ಥೆಗಳು ಮಹಿಳಾ ಪ್ರತಿನಿಧಿಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಭಿವೃದ್ಧಿಯನ್ನು ಸಾಧಿಸಲು ತರಬೇತಿಯನ್ನು ನೀಡುತ್ತವೆ. ವಿಶ್ವ ಸಂಸ್ಥೆಯ ಪ್ರಯತ್ನಗಳು, ಕೇಂದ್ರೀಯ ಮತ್ತು ರಾಜ್ಯ ಸರಕಾರದ ಪ್ರಯತ್ನಗಳು, ಯೋಜನೆಗಳ ಫಲವಾಗಿ ಅನೇಕ ಸಂಸ್ಥೆಗಳಿಂದ, ಹಾಗೂ ಸರಕಾರವೇ ಸ್ಥಾಪಿಸಿರುವ ತರಬೇತಿ ಸಂಸ್ಥೆಗಳಿಂದ ಸಾಮರ್ಥ್ಯ ಬಲವರ್ಧನಾ ಅಥವಾ ತರಬೇತಿ ಕಾರ್ಯಕ್ರಮಗಳು ಮಹಿಳೆಯರಿಗೆ ಮತ್ತು ಶೋಷಿತ ವರ್ಗದ[16] ಜನರಿಗೆ ತರಬೇತಿಯನ್ನು ನೀಡುತ್ತಿರುತ್ತವೆ.

ಕೋಷ್ಟಕ – 5.11

ರಾಜಕೀಯ ತರಬೇತಿಯ ಅಗತ್ಯ

ತರಬೇತಿ	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಅಗತ್ಯ ಇದೆ	139	97.88	51	100	13	100
ಪ್ರತಿಕ್ರಿಯಿಸಿಲ್ಲ	03	02.12	0	–	0	–
ಒಟ್ಟು	**142**	**100**	**51**	**100**	**13**	**100**
ಅಗತ್ಯ ಯಾಕಾಗಿ?						
ಕಾರ್ಯಕ್ರಮದ ಅರಿವು	106	74.64	49	96.07	13	100
ಸಕ್ರಿಯ ಭಾಗವಹಿಸುವಿಕೆ	92	64.78	47	92.15	13	100
ಆತ್ಮವಿಶ್ವಾಸ ವೃದ್ಧಿ	103	72.53	47	92.15	13	100
ಕರ್ತವ್ಯಗಳ ಅರಿವು	112	78.87	49	96.07	13	100

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಅಧ್ಯಯನ ಕ್ಷೇತ್ರದ ಮಹಿಳಾ ಪ್ರತಿನಿಧಿಗಳಿಗೆ ತರಬೇತಿಯ ಅಗತ್ಯ ಇದೆಯೇ ಎಂದು ಪ್ರಶ್ನಿಸಿದಾಗ ಎಲ್ಲಾ ಹಂತದ ಪಂಚಾಯತ್‌ನ ಸದಸ್ಯೆಯರೂ ಸಹ ತಮಗೆ ಅಗತ್ಯ ಇದೆ ಎಂದು ಹೇಳಿರುತ್ತಾರೆ. ಇದರ ಮುಂದಿನ ಭಾಗವಾಗಿ ತರಬೇತಿ ಅಗತ್ಯ ಇದೆಯಾದರೆ ಯಾಕಾಗಿ? ಎಂದು ಪ್ರಶ್ನಿಸಿದಾಗ ಗ್ರಾಮ ಪಂಚಾಯತ್‌ನ 112, ತಾಲೂಕು ಪಂಚಾಯತ್‌ನ 49, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಕರ್ತವ್ಯದ ಬಗ್ಗೆ ತಿಳಿದುಕೊಳ್ಳಲು, ಗ್ರಾಮ ಪಂಚಾಯತ್‌ನ 106, ತಾಲೂಕು ಪಂಚಾಯತ್‌ನ 49, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಕಾರ್ಯಕ್ರಮದ ಅರಿವು ಗಳಿಸಲು, ಗ್ರಾಮ ಪಂಚಾಯತ್‌ನ 103, ತಾಲೂಕು ಪಂಚಾಯತ್‌ನ 47, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಆತ್ಮವಿಶ್ವಾಸ ಹೆಚ್ಚಿಸಲು, ಗ್ರಾಮ ಪಂಚಾಯತ್‌ನ 92, ತಾಲೂಕು ಪಂಚಾಯತ್‌ನ 47, ಜಿಲ್ಲಾ ಪಂಚಾಯತ್‌ನ 13 ಮಹಿಳಾ ಪ್ರತಿನಿಧಿಗಳು ಸಕ್ರಿಯವಾಗಿ ಭಾಗವಹಿಸಲು ತರಬೇತಿ ಅತೀ ಅಗತ್ಯವಾಗಿದೆಯೆಂದು ಉತ್ತರಿಸಿರುತ್ತಾರೆ. ಇದನ್ನು ಅವಲೋಕಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಸಾರ್ವಜನಿಕ ಬದುಕಿಗೆ ತರಬೇತಿಯ ಅಗತ್ಯತೆಯನ್ನು ಕಂಡುಕೊಂಡಿರುವುದು ತಿಳಿದುಬಂದಿರುತ್ತದೆ[17].

ಮುಂದಿನ ಚುನಾವಣೆಗಳಲ್ಲಿ ಸ್ಪರ್ಧಿಸುತ್ತೀರಾ?

ಅನೌಪಚಾರಿಕವಾಗಿ ಮಾಹಿತಿದಾರರ ಜೊತೆ ಚರ್ಚಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಪಂಚಾಯತ್‌ಗಳಲ್ಲಿ ಮೀಸಲಾತಿ ಸ್ಥಾನದಿಂದ ಅವಕಾಶ ದೊರಕಿದರೂ ಮಹಿಳೆಯರ ಬಗ್ಗೆ ನಿರ್ಲಕ್ಷ್ಯ ತುಂಬಾ ಇದೆ ಅಲ್ಲದೆ ಕುಟುಂಬದ ಕಡೆಯಿಂದ ಬೆಂಬಲದ ಕೊರತೆ, ಅಧಿಕಾರಿಗಳ ಮತ್ತು ಪುರುಷ

ಸದಸ್ಯರ ದಬ್ಬಾಳಿಕೆ ಇವೆರಡರ ನಡುವೆ ಶೋಷಣೆಗೆ ಒಳಗಾಗುತ್ತೇವೆ ಎಂದಿರುತ್ತಾರೆ. ಒಟ್ಟಿನಲ್ಲಿ ಮಹಿಳಾ ಪ್ರತಿನಿಧಿಗಳಿಗೆ ಪಂಚಾಯತ್‌ಗಳಲ್ಲಿ ಸದಸ್ಯತ್ವ ಸಿಕ್ಕಿರುವುದು ಅವರ ಸಶಕ್ತೀಕರಣಕ್ಕೆ ಮತ್ತು ರಾಜಕೀಯ ಭವಿಷ್ಯಕ್ಕೆ ಮುಖ್ಯವಾದ ವಿಷಯವಲ್ಲ ಎಂಬ ಇತರ ಅಧ್ಯಯನದ ಫಲಿತವು ಪ್ರಸ್ತುತ ಅಧ್ಯಯನದಲ್ಲೂ ಕಂಡುಬಂದಿರುತ್ತದೆ[18].

ಕೋಷ್ಟಕ – 5.12

ಮುಂಬರುವ ಚುನಾವಣೆಗಳಲ್ಲಿ ಸ್ಪರ್ಧಿಸುತ್ತೀರಾ?

ಮುಂದೆ ಸ್ಪರ್ಧಿಸುತ್ತೀರಾ?	ಗ್ರಾಮ ಪಂಚಾಯತ್ ಪ್ರತಿನಿಧಿಗಳು		ತಾಲೂಕು ಪಂಚಾಯತ್ ಪ್ರತಿನಿಧಿಗಳು		ಜಿಲ್ಲಾ ಪಂಚಾಯತ್ ಪ್ರತಿನಿಧಿಗಳು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಸ್ಪರ್ಧಿಸುತ್ತೇವೆ	69	48.59	21	41.17	05	38.46
ಸ್ಪರ್ಧಿಸುವುದಿಲ್ಲ	73	51.41	30	58.83	08	61.54
ಒಟ್ಟು	**142**	**100**	**51**	**100**	**13**	**100**
ಕಾರಣಗಳು						
ಪುರುಷರ ದಬ್ಬಾಳಿಕೆ	13	09.15	06	11.76	03	23.07
ಅಧಿಕಾರಿಗಳ ದಬ್ಬಳಿಕೆ	12	08.45	04	07.84	03	23.07
ಮಹಿಳೆಯರ ನಿರ್ಲಕ್ಷ್ಯ	22	15.49	15	29.41	05	38.46
ಕುಟುಂಬದ ಅಸಹಕಾರ	20	14.08	15	29.41	02	15.38
ರಾಜಕೀಯ ಅಪರಾಧೀಕರಣ	15	10.56	13	25.49	04	30.76
ಅಭದ್ರತೆ	15	10.56	12	23.52	02	15.38
ಆರೋಗ್ಯದ ಸಮಸ್ಯೆ	16	11.26	07	13.72	02	15.38
ಅನಾಸಕ್ತಿ	36	25.35	10	19.60	05	38.46

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಮುಂದಿನ ಚುನಾವಣೆಗೆ ಸ್ಪರ್ಧಿಸುತ್ತೀರ ಎಂದು ಕೋಷ್ಠಕ 5.12ರ ಪ್ರಕಾರ ಪ್ರಶ್ನಿಸಿದಾಗ, ಗ್ರಾಮ ಪಂಚಾಯತ್‌ನ 69, ತಾಲೂಕು ಪಂಚಾಯತ್‌ನ 21, ಜಿಲ್ಲಾ ಪಂಚಾಯತ್‌ನ 05 ಮಹಿಳಾ ಪ್ರತಿನಿಧಿಗಳು ಹೌದೆಂದು, ಗ್ರಾಮ ಪಂಚಾಯತ್‌ನ 73, ತಾಲೂಕು ಪಂಚಾಯತ್‌ನ 30, ಜಿಲ್ಲಾ ಪಂಚಾಯತ್‌ನ 08 ಮಹಿಳಾ ಪ್ರತಿನಿಧಿಗಳು ಇಲ್ಲವೆಂದು ಉತ್ತರಿಸಿರುತ್ತಾರೆ. ಇದರ ಮುಂದಿನ ಭಾಗವಾಗಿ ಮುಂದಿನ ಚುನಾವಣೆಯಲ್ಲಿ ಯಾಕೆ ಸ್ಪರ್ಧಿಸುತ್ತಿಲ್ಲವೆಂದು ಕೇಳಿದಾಗ, ಗ್ರಾಮ ಪಂಚಾಯತ್‌ನ 36, ತಾಲೂಕು ಪಂಚಾಯತ್‌ನ 10, ಜಿಲ್ಲಾ ಪಂಚಾಯತ್‌ನ 08 ಮಹಿಳಾ ಪ್ರತಿನಿಧಿಗಳು

ಆಸಕ್ತಿಯಿಲ್ಲವೆಂದು ಉತ್ತರಿಸಿರುತ್ತಾರೆ. ಗ್ರಾಮ ಪಂಚಾಯತ್‌ನ 22, ತಾಲೂಕು ಪಂಚಾಯತ್‌ನ 15, ಜಿಲ್ಲಾ ಪಂಚಾಯತ್‌ನ 5 ಮಹಿಳಾ ಪ್ರತಿನಿಧಿಗಳು ಮಹಿಳೆಯರ ಬಗ್ಗೆ ನಿರ್ಲಕ್ಷ್ಯ, ಗ್ರಾಮ ಪಂಚಾಯತ್‌ನ 20, ತಾಲೂಕು ಪಂಚಾಯತ್‌ನ 15, ಜಿಲ್ಲಾ ಪಂಚಾಯತ್‌ನ 2 ಮಹಿಳಾ ಪ್ರತಿನಿಧಿಗಳು ಕುಟುಂಬದ ಬೆಂಬಲದ ಕೊರತೆ, ಗ್ರಾಮ ಪಂಚಾಯತ್‌ನ 13, ತಾಲೂಕು ಪಂಚಾಯತ್‌ನ 6, ಜಿಲ್ಲಾ ಪಂಚಾಯತ್‌ನ 3 ಮಹಿಳಾ ಪ್ರತಿನಿಧಿಗಳು ಪುರುಷರ ದಬ್ಬಾಳಿಕೆ, ಗ್ರಾಮ ಪಂಚಾಯತ್‌ನ 12, ತಾಲೂಕು ಪಂಚಾಯತ್‌ನ 4, ಜಿಲ್ಲಾ ಪಂಚಾಯತ್‌ನ 3 ಮಹಿಳಾ ಪ್ರತಿನಿಧಿಗಳು ಅಧಿಕಾರಿಗಳ ದಬ್ಬಾಳಿಕೆ, ಗ್ರಾಮ ಪಂಚಾಯತ್‌ನ 15, ತಾಲೂಕು ಪಂಚಾಯತ್‌ನ 13, ಜಿಲ್ಲಾ ಪಂಚಾಯತ್‌ನ 4 ಮಹಿಳಾ ಪ್ರತಿನಿಧಿಗಳು ರಾಜಕೀಯ ಅಪರಾಧೀಕರಣ, ಗ್ರಾಮ ಪಂಚಾಯತ್‌ನ 15, ತಾಲೂಕು ಪಂಚಾಯತ್‌ನ 12, ಜಿಲ್ಲಾ ಪಂಚಾಯತ್‌ನ 2 ಮಹಿಳಾ ಪ್ರತಿನಿಧಿಗಳು ಅಭದ್ರತೆ ಇತ್ಯಾದಿ ಕಾರಣಗಳನ್ನು ನೀಡಿ ಸಾರ್ವಜನಿಕ ಬದುಕಿನಲ್ಲಿ ಆಸಕ್ತಿಯಿಲ್ಲವೆಂದು ತೋರ್ಪಡಿಸಿರುತ್ತಾರೆ.

ಪುರುಷ ಪ್ರತಿನಿಧಿಗಳ ಅಭಿಪ್ರಾಯ

ಚುನಾಯಿತ ಪ್ರತಿನಿಧಿಗಳಾದ ಮಹಿಳೆಯರನ್ನು ಮಾತನಾಡಿಸಿ, ಅವರಿಂದ ಅವರ ಹಿನ್ನೆಲೆ, ಅನುಭವ ಮತ್ತು ಅಭಿಪ್ರಾಯಗಳನ್ನು ಕಲೆಹಾಕಿದರೆ ಮಾತ್ರ ಸಾಲದು. ಅವರ ಜೊತೆಯಲ್ಲಿಯೇ ಸ್ಪರ್ಧಿಸಿ, ಅದೇ ಪಂಚಾಯತ್‌ಗಳಲ್ಲಿ ಸದಸ್ಯರಾಗಿ ಅಧ್ಯಕ್ಷರಾಗಿ ಮತ್ತು ಉಪಾಧ್ಯಕ್ಷರಾಗಿರುವ ಪುರುಷಸದಸ್ಯರನ್ನು ಹಾಗೂ ಪಂಚಾಯತ್‌ನ ಅಧಿಕಾರಿ ಮತ್ತು ಕಾರ್ಯದರ್ಶಿಯವರನ್ನು ಸಂದರ್ಶಿಸಿ ಅವರ ಅಭಿಪ್ರಾಯವನ್ನು ಮಹಿಳಾ ಪ್ರತಿನಿಧಿಗಳ ಭಾಗವಹಿಸುವಿಕೆಯ ಬಗ್ಗೆ ಕೇಳಿದಾಗ ಮಹಿಳಾ ಪ್ರತಿನಿಧಿಗಳ ಅಭಿಪ್ರಾಯಕ್ಕಿಂತ ವ್ಯತಿರಕ್ತವಾದದ್ದನ್ನು ತಿಳಿಸಿರುತ್ತಾರೆ.

ಪುರುಷ ಪ್ರತಿನಿಧಿಗಳ ಸ್ಥಾನಮಾನ

ಪುರುಷ ಸದಸ್ಯರನ್ನು ಅಧ್ಯಯನ ಪ್ರದೇಶಗಳಾದ ಮೂರು ತಾಲೂಕುಗಳಿಂದ ಮಹಿಳಾ ಚುನಾಯಿತ ಪ್ರತಿನಿಧಿಗಳನ್ನು ಆರಿಸಿಕೊಂಡ ಪಂಚಾಯತ್‌ಗಳಿಂದ ಆರಿಸಿಕೊಳ್ಳಲಾಯಿತು. ಮಹಿಳಾ ಪ್ರತಿನಿಧಿಗಳು ಪಂಚಾಯತ್‌ನ ಆಡಳಿತದಲ್ಲಿ ಯಾವ ರೀತಿ ಭಾಗವಹಿಸುತ್ತಾರೆ ಎಂಬುದನ್ನು ಅರಿತುಕೊಳ್ಳಲು ಅಧ್ಯಯನ ಪ್ರದೇಶಗಳಾದ ಉಡುಪಿ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳ ಒಟ್ಟು 50 ಪುರುಷ ಪ್ರತಿನಿಧಿಗಳನ್ನು ಆರಿಸಿ, ಸಂದರ್ಶನವನ್ನು ನಡೆಸಿ ಅವರ ಅಭಿಪ್ರಾಯವನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಕೋಷ್ಟಕ – 5.13

ಪುರುಷ ಪ್ರತಿನಿಧಿಗಳ ಸ್ಥಾನಮಾನ

ಸ್ಥಾನಮಾನ	ಪ್ರತಿನಿಧಿಗಳು
ಜಿಲ್ಲಾ ಮತ್ತು ತಾಲೂಕು ಕಾರ್ಯನಿರ್ವಹಣಾಧಿಕಾರಿಗಳು	02
ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು	06
ಗ್ರಾಮ ಪಂಚಾಯತ್ ಕಾರ್ಯದರ್ಶಿಗಳು	06
ಪಂಚಾಯತ್‌ನ ಅಧ್ಯಕ್ಷರುಗಳು	04
ಪಂಚಾಯತ್‌ನ ಉಪಾಧ್ಯಕ್ಷರುಗಳು	05
ಪಂಚಾಯತ್‌ನ ಸದಸ್ಯರು	27
ಒಟ್ಟು	**50**

ಪುರುಷ ಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಮೂರುಸ್ತರಗಳ 50 ಪುರುಷ ಚುನಾಯಿತ ಪ್ರತಿನಿಧಿಗಳನ್ನು ಆರಿಸಿಕೊಳ್ಳಲಾಯಿತು. ಕೋಷ್ಠಕ 5.13ರ ಪ್ರಕಾರ ಜಿಲ್ಲಾ ಪಂಚಾಯತಿನ ಒಬ್ಬರು ಅಧ್ಯಕ್ಷರು ಮತ್ತು ಒಬ್ಬ ಸದಸ್ಯ, ತಾಲೂಕು ಪಂಚಾಯತ್‌ನ 4 ಸದಸ್ಯರು ಮತ್ತು 2 ಕಾರ್ಯ ನಿರ್ವಹಣಾಧಿಕಾರಿಗಳು, ಗ್ರಾಮ ಪಂಚಾಯತ್‌ನ 8 ಅಭಿವೃದ್ಧಿ ಅಧಿಕಾರಿ, ಪಂಚಾಯತ್ ಕಾರ್ಯದರ್ಶಿ 5, ಅಧ್ಯಕ್ಷರು 4, ಉಪಾಧ್ಯಕ್ಷರು 5 ಹಾಗೂ 20 ಸದಸ್ಯರನ್ನು ಆಯ್ದುಕೊಳ್ಳಲಾಗಿರುತ್ತದೆ.

ಪಂಚಾಯತ್ ಸಭೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ

ಪಂಚಾಯತ್‌ನಲ್ಲಿ ನಡೆಯುವ ಸಭೆಗಳಲ್ಲಿ ಮಹಿಳಾ ಪ್ರತಿನಿಧಿಗಳು ಭಾಗವಹಿಸುತ್ತಾರೆ ಎಂದು 50 ಪುರುಷ ಪ್ರತಿನಿಧಿಗಳು ತಿಳಿಸಿರುತ್ತಾರೆ. ಸಭೆಗಳಲ್ಲಿ ಭಾಗವಹಿಸದೇ ಇರುವ ಮಹಿಳಾ ಪ್ರತಿನಿಧಿಗಳಿಲ್ಲವೆಂದಿರುತ್ತಾರೆ.

ಕೋಷ್ಟಕ 5.14

ಸಭೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ

ವಿವಿಧ ಸಭೆಗಳು	ಹೆಚ್ಚಾಗಿ		ಸಾಧಾರಣವಾಗಿ		ಒಟ್ಟು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಗ್ರಾಮ ಸಭೆ	43	86	07	14	50	100
ಸಾಮಾನ್ಯ ಸಭೆ	45	90	05	10	50	100
ವಾರ್ಡ್ ಸಭೆ	42	84	08	16	50	100
ಸ್ಥಾಯಿ ಸಮಿತಿ ಸಭೆ	31	62	19	38	50	100

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಇದರ ಮುಂದಿನ ಭಾಗವಾಗಿ ಯಾವ್ಯಾವ ಸಭೆಗಳಲ್ಲಿ ಎಂದು ಅವಲೋಕಿಸಿದಾಗ ಕೋಷ್ಠಕ 5.14ರ ಪ್ರಕಾರ ಸಾಮಾನ್ಯ ಸಭೆಗಳಲ್ಲಿ ಹೆಚ್ಚಾಗಿ ಭಾಗವಹಿಸುತ್ತಾರೆಂದು 45 ಪುರುಷ ಸದಸ್ಯರು ಮತ್ತು ಸಧಾರಣವಾಗಿಯೆಂದು 5 ಪುರುಷ ಸದಸ್ಯರು, ಗ್ರಾಮ ಸಭೆಗಳಲ್ಲಿ ಹೆಚ್ಚಾಗಿಯೆಂದು 43 ಪುರುಷ ಸದಸ್ಯರು, ಸಾಧಾರಣವಾಗಿಯೆಂದು 7 ಸದಸ್ಯರು, ವಾರ್ಡ್‌ಸಭೆಗಳಲ್ಲಿ ಹೆಚ್ಚಾಗಿಯೆಂದು 42 ಸದಸ್ಯರು, ಸಾಧಾರಣವಾಗಿಯೆಂದು 8 ಸದಸ್ಯರು ಮತ್ತು ಸ್ಥಾಯಿ ಸಮಿತಿ ಸಭೆಗಳಲ್ಲಿ ಹೆಚ್ಚಾಗಿಯೆಂದು 31 ಸದಸ್ಯರು ಹಾಗೂ ಸಾಧಾರಣವಾಗಿಯೆಂದು 19 ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಇದನ್ನು ಗಮನಿಸಿದಾಗ ಮಹಿಳಾ ಪ್ರತಿನಿಧಿಗಳು ಸಭೆಗಳಲ್ಲಿ ನಾಮಕಾವಸ್ಥೆಗಾಗಿ ಭಾಗವಹಿಸುತ್ತಾರೆಯೇ ಹೊರತು ಆಡಳಿತಾತ್ಮಕವಾಗಿ ಸಕ್ರಿಯವಾಗಿರುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ[19]. ಮಹಿಳಾ ಸದಸ್ಯರು ಪಂಚಾಯತ್ ಸಭೆಗಳಲ್ಲಿ ವಾರ್ಡ್ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಾರೆಂದು 27 ಪುರುಷ ಪ್ರತಿನಿಧಿಗಳು ಹಾಗೂ 23 ಪುರುಷ ಪ್ರತಿನಿಧಿಗಳು ಪಂಚಾಯತ್ ಸಭೆಯಲ್ಲಿ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸುವುದಿಲ್ಲವೆಂದಿರುತ್ತಾರೆ. ಇದರ ಮುಂದಿನ ಭಾಗವಾಗಿ ಅಭಿವೃದ್ಧಿಯ ಯಾವ ವಿಷಯಗಳ ಬಗ್ಗೆ ಚರ್ಚಿಸುತ್ತಾರೆ ಎಂದು ಕೇಳಿದಾಗ ಅತೀ ಹೆಚ್ಚಾಗಿ ಎತ್ತಿರುವ ವಿಷಯಗಳೆಂದರೆ ಕುಡಿಯುವ ನೀರಿನ ವ್ಯವಸ್ಥೆಯೆಂದು, ರಸ್ತೆಯೆಂದು, ಶೌಚಾಲಯವೆಂದು, ಬೀದಿ ದೀಪವೆಂದು ತಿಳಿಸಿರುತ್ತಾರೆ.

ಪಂಚಾಯತ್‌ನಲ್ಲಿ ಮಹಿಳೆಯರು ನಿರ್ವಹಿಸುತ್ತಿರುವ ಜವಾಬ್ದಾರಿಗಳು

ಪುರುಷ ಸದಸ್ಯರ ಅಭಿಪ್ರಾಯದ ಪ್ರಕಾರ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಾರೆಂದು 25 ಸದಸ್ಯರು, ವಾರ್ಡಿಗೆ ಭೇಟಿನೀಡುತ್ತಾರೆಂದು 21 ಸದಸ್ಯರು, ವಾರ್ಡ್ ಸಮಸ್ಯೆಗಳನ್ನು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತಾರೆಂದು 20 ಸದಸ್ಯರು, ಅಭಿವೃದ್ಧಿ ಕಾಮಗಾರಿಯೆಂದು 19 ಸದಸ್ಯರು ಹಾಗೂ ಹಣಕಾಸಿನ ಹಂಚಿಕೆಯ ಬಗ್ಗೆ ಎಂದು 6 ಸದಸ್ಯರು ತಿಳಿಸಿರುತ್ತಾರೆ.

ಕೋಷ್ಟಕ – 5.15

ಪಂಚಾಯತ್‌ನಲ್ಲಿ ಮಹಿಳೆಯರು ನಿರ್ವಹಿಸುತ್ತಿರುವ ಜವಾಬ್ದಾರಿಗಳು

ನಿರ್ವಹಿಸುತ್ತಿರುವ ಜವಾಬ್ದಾರಿಗಳು	ಪುರುಷ ಪ್ರತಿನಿಧಿಗಳ ಅಭಿಪ್ರಾಯ	
	ಸಂಖ್ಯೆ	ಶೇಕಡಾ
ಅಭಿವೃದ್ಧಿ ಕಾಮಗಾರಿ	19	38
ಹಣಕಾಸಿನ ಹಂಚಿಕೆ	06	12
ವಾರ್ಡ್ ಸಮಸ್ಯೆಗಳ ಚರ್ಚೆ	25	50
ತೀರ್ಮಾನ ತೆಗೆದುಕೊಳ್ಳುವುದು	20	40
ವಾರ್ಡ್‌ಗೆ ಭೇಟಿ	21	42

ಮೂಲ : ಕ್ಷೇತ್ರ ಕಾರ್ಯ ಆಧಾರಿತ

ಇದನ್ನು ಅವಲೋಕಿಸಿದಾಗ ಕೋಷ್ಟಕ 5.15ರ ಪ್ರಕಾರ ಯಾವೆಲ್ಲ ಜವಾಬ್ದಾರಿಗಳೆಂದು ವಿಶ್ಲೇಷಿಸಿದಾಗ ಕೆಲವು ಮಹಿಳಾ ಪ್ರತಿನಿಧಿಗಳು ರಾಜಕೀಯದಲ್ಲಿ ಸಕ್ರಿಯವಾಗಿದ್ದು ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಿ, ತೀರ್ಮಾನ ತೆಗೆದುಕೊಂಡು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಿರುತ್ತಾರೆ. ಅಲ್ಲದೆ ಸರ್ಕಾರಿ ಯೋಜನೆಗಳ ಬಗ್ಗೆ ತಿಳಿದುಕೊಂಡು ಸೂಕ್ತ ಫಲಾನುಭವಿಗಳಿಗೆ ಹಂಚುವ ಜವಾಬ್ದಾರಿಯನ್ನು ಸಮರ್ಪಕವಾಗಿ ಮಾಡಿರುತ್ತಾರೆ ಎಂದಿರುತ್ತಾರೆ. ಪುರುಷ ಸದಸ್ಯರು ಮಹಿಳೆಯರು ನಿರ್ವಹಿಸುತ್ತಿರುವ ಜವಾಬ್ದಾರಿಗಳ ಬಗ್ಗೆ ಹೆಚ್ಚು ತೃಪ್ತಿಯನ್ನು ಹೊಂದಿರುವುದು ಕಂಡುಬಂದಿರುವುದಿಲ್ಲ.

ವಾರ್ಡ್ ಸಮಸ್ಯೆಗಳ ನಿವಾರಣೆಗೆ ಇತರರ ಅವಲಂಬನೆ

ಮಹಿಳಾ ಪ್ರತಿನಿಧಿಗಳು ವಾರ್ಡ್ ಸಮಸ್ಯೆಗಳನ್ನು ನಿವಾರಿಸುವಲ್ಲಿ ಯಾರನ್ನಾದರೂ ಅವಲಂಬಿಸುತ್ತಾರೆಯೇ ಎಂದು ಪುರುಷ ಪ್ರತಿನಿಧಿಗಳಲ್ಲಿ ಪ್ರಶ್ನಿಸಿದಾಗ ಕೋಷ್ಟಕ 5.44ರ ಪ್ರಕಾರ 45 ಪುರುಷ ಸದಸ್ಯರು ಹೌದೆಂದು ಹಾಗೂ 5 ಪುರುಷ ಸದಸ್ಯರು ಇಲ್ಲವೆಂದೂ ಉತ್ತರಿಸಿರುತ್ತಾರೆ.

ಕೋಷ್ಟಕ – 5.16

ವಾರ್ಡ್ ಸಮಸ್ಯೆಗಳ ನಿವಾರಣೆಗೆ ಇತರರನ್ನು ಅವಲಂಬಿಸಿರುವುದು

ಸದಸ್ಯರ ಅವಲಂಬನೆ	ಸಂಖ್ಯೆ	ಶೇಕಡಾ
ಅವಲಂಬಿತರಾಗಿದ್ದಾರೆ	45	90
ಅವಲಂಬಿತರಾಗಿಲ್ಲ	05	10
ಒಟ್ಟು	**50**	**100**
ಅವಲಂಬಿತರು		
ಪುರುಷ ಸಹಸದಸ್ಯರು	38	76
ಪತಿ	11	22
ಕುಟುಂಬ	05	10
ಅಧಿಕಾರಿಗಳು	27	54

ಮೂಲ : ಕ್ಷೇತ್ರ ಕಾರ್ಯ ಆಧಾರಿತ, ಬಹು ಆಯ್ಕೆಯ ಉತ್ತರ

ಮಹಿಳಾ ಪ್ರತಿನಿಧಿಗಳು ವಾರ್ಡ್ ಸಮಸ್ಯೆಗಳನ್ನು ನಿವಾರಿಸುವಾಗ ಯಾರನ್ನು ಹೆಚ್ಚಾಗಿ ಅವಲಂಬಿಸುತ್ತಾರೆಂದು ಪ್ರಶ್ನಿಸಿದಾಗ ಕೋಷ್ಟಕ 5.16ರ ಪ್ರಕಾರ 38 ಪುರುಷ ಸದಸ್ಯರು ಪಂಚಾಯತಿನ ಪುರುಷ ಪ್ರತಿನಿಧಿಗಳನ್ನು, 27 ಸದಸ್ಯರು ಪಂಚಾಯತ್‌ನ ಅಧಿಕಾರಿಗಳನ್ನು, 11 ಸದಸ್ಯರು ಪತಿಯನ್ನು ಹಾಗೂ 5 ಸದಸ್ಯೆಯರು ತಮ್ಮ ಕುಟುಂಬದ ಸದಸ್ಯರ ಬೆಂಬಲವನ್ನು ಪಡೆಯುತ್ತಾರೆಂದು ತಿಳಿಸಿರುತ್ತಾರೆ. ಇದನ್ನು ಅವಲೋಕಿಸಿದಾಗ ಪಂಚಾಯತ್‌ನ ಕಾಯ್ದೆ, ಯೋಜನೆ, ಕಾರ್ಯಕ್ರಮಗಳ ಅರಿವಿನ ಕೊರತೆಯಿಂದಾಗಿ ಮಹಿಳಾ ಪ್ರತಿನಿಧಿಗಳು ಆತ್ಮಸ್ಥೈರ್ಯವನ್ನು ಹೊಂದಿರುವುದಿಲ್ಲ ಹಾಗೂ ವಾರ್ಡಿಗೆ ಸಂಬಧಿಸಿದ ಯಾವುದೇ ಚಿಕ್ಕಮಟ್ಟ ಸಮಸ್ಯೆಗಳಾದರೂ ಮಹಿಳಾ ಪ್ರತಿನಿಧಿಯೊಬ್ಬಳೇ ಸಮರ್ಥವಾಗಿ ನಿಭಾಯಿಸುವುದಿಲ್ಲವೆಂಬುದು ಪುರುಷ ಸದಸ್ಯರ ಅಭಿಪ್ರಾಯವಾಗಿದೆ[20].

ಪಂಚಾಯತ್‌ಗಳಲ್ಲಿ ಮಹಿಳಾ ಮೀಸಲಾತಿಯನ್ನು ಶೇಕಡಾ 33ರಿಂದ ಶೇಕಡಾ 50ಕ್ಕೆ ಹೆಚ್ಚಿಸಬೇಕೇ? ಎಂದು ಪುರುಷ ಪ್ರತಿನಿಧಿಗಳಲ್ಲಿ ಕೇಳಿದಾಗ 34 ಪುರುಷ ಪ್ರತಿನಿಧಿಗಳು ಉತ್ತಮವೆಂದು, 16 ಪುರುಷ ಪ್ರತಿನಿಧಿಗಳು ಬೇಡವೆಂದು ತಿಳಿಸಿರುತ್ತಾರೆ. ಉತ್ತಮ ಯಾಕೆ ಎಂದು ಪ್ರಶ್ನಿಸಿದಾಗ ಮಹಿಳಾ ಸಮಾನತೆಗಾಗಿ, ಸಬಲೀಕರಣಕ್ಕಾಗಿ, ಸಾಮಾಜಿಕ ಸ್ಥಾನ ಪಡೆಯಲು ಹಾಗೂ ಮಹಿಳಾ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಅಗತ್ಯವೆಂದಿದ್ದಾರೆ. ಬೇಡ ಯಾಕೆ ಎಂದು ಪ್ರಶ್ನಿಸಿದಾಗ ಪಂಚಾಯತ್‌ನ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಿಲ್ಲ, ಅನುಭವದ ಕೊರತೆ, ಗೃಹಕೃತ್ಯದ ಹೊರೆ, ವಾರ್ಡಿನ ಅಭಿವೃದ್ಧಿಯ ಬಗ್ಗೆ ಕಾಳಜಿ ವಹಿಸುವುದಿಲ್ಲ, ಕಾನೂನು, ಯೋಜನೆ ಮತ್ತು ಅರಿವಿನ ಕೊರತೆ ಇತ್ಯಾದಿಗಳಿಂದ ವಾರ್ಡಿನ ಜನರ ಸಮಸ್ಯೆಗಳಿಗೆ ಸ್ಪಂದಿಸುವುದಿಲ್ಲವೆಂದು ಇತರ ಅಧ್ಯಯನಗಳಲ್ಲಿ ಕಂಡುಬರುವ ಅಂಶವನ್ನೇ ಇಲ್ಲಿಯೂ ವ್ಯಕ್ತಪಡಿಸಿರುತ್ತಾರೆ[21]. ಇದನ್ನು ಅವಲೋಕಿಸಿದಾಗ ಇಂದಿಗೂ ಸಮಾಜದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯಿದ್ದು ಮಹಿಳೆಯ ಸಮಾನತೆಗೆ ಮತ್ತು ಸಕ್ರಿಯ ರಾಜಕೀಯ ಸಹಭಾಗಿತ್ವಕ್ಕೆ ತಡೆಗಳಿವೆ ಎಂದು ಕಂಡುಬಂದಿರುತ್ತದೆ. ಪಂಚಾಯತ್‌ನಲ್ಲಿ ಮಹಿಳಾ ಮತ್ತು ಪುರುಷ ಪ್ರತಿನಿಧಿಗಳ ನಡುವೆ ತಾರತಮ್ಯವಿದೆಯೇ? ಎಂದು ಪ್ರಶ್ನಿಸಿದಾಗ ಶೇಕಡಾ 66 ಪುರುಷ ಪ್ರತಿನಿಧಿಗಳು ಇಲ್ಲವೆಂದು ಮತ್ತು ಶೇಕಡಾ 34 ಪುರುಷ ಪ್ರತಿನಿಧಿಗಳು ತಾರತಮ್ಯವಿದೆ ಎಂದು ಉತ್ತರಿಸಿರುತ್ತಾರೆ. ಯಾವ ಎಲ್ಲ ವಿಷಯಗಳಲ್ಲಿ ತಾರತಮ್ಯವಿದೆ ಎಂದು ಪ್ರಶ್ನಿಸಿದಾಗ ಹಣಕಾಸಿನ ಹಂಚಿಕೆ, ಅಭಿವೃದ್ಧಿ ಕಾಮಗಾರಿಗಳ ಹಂಚಿಕೆ, ನಿರ್ಧಾರ ಕೈಗೊಳ್ಳುವಲ್ಲಿ ತಾರತಮ್ಯವಿದೆ ಎಂದಿರುತ್ತಾರೆ.

ಮಹಿಳಾ ಸದಸ್ಯರ ಕಾರ್ಯನಿರ್ವಹಣೆಯ ಬಗ್ಗೆ ಪುರುಷ ಪ್ರತಿನಿಧಿಗಳ ಅಭಿಪ್ರಾಯವನ್ನು ಅವಲೋಕಿಸಿದಾಗ ಶೇಕಡಾ 70 ಪುರುಷ ಪ್ರತಿನಿಧಿಗಳು ಸಾಧಾರಣವೆಂದು, ಶೇಕಡಾ 30 ಪುರುಷ

ಪ್ರತಿನಿಧಿಗಳು ತೃಪ್ತಿಕರವೆಂದು ತಿಳಿಸಿರುತ್ತಾರೆ. ಯಾವೊಬ್ಬ ಪ್ರತಿನಿಧಿಯು ಉತ್ತಮ ಮತ್ತು ಅತ್ಯುತ್ತಮವಾಗಿ ಕಾರ್ಯನಿರ್ವಹಣೆ ಮಾಡುತ್ತಾರೆಂದು ತಿಳಿಸಿರುವುದಿಲ್ಲ. ಇದು ಲಿಂಗ ಅಸಮಾನತೆಯನ್ನು ಸೂಚಿಸುವ ಒಂದು ಅಂಶವಾಗಿದೆ.

ಉಪಸಂಹಾರ

ಈ ಅಧ್ಯಯನವು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮೀಸಲಾತಿಯ ಸ್ಥಾನದಿಂದ ಚುನಾಯಿತರಾಗಿ ಬಂದರೂ ಅವರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿನ್ನೆಲೆಗಳು ಅವರ ಪರಿಣಾಮಕಾರಿ ಸಹಭಾಗಿತ್ವಕ್ಕೆ ತಡೆಯೊಡ್ಡುತ್ತದೆ. ರಾಜಕೀಯದ ವಿವಿಧ ಆಯಾಮಗಳಲ್ಲಿ ಎದುರಿಸುತ್ತಿರುವ ಸವಾಲುಗಳು, ಅಡೆತಡೆಗಳು ಸಕ್ರಿಯ ರಾಜಕಾರಣದ ಮೇಲೆ ಪ್ರಭಾವವನ್ನು ಬೀರಿದೆ. ಇದರಿಂದಾಗಿ ಮಹಿಳಾ ಪ್ರತಿನಿಧಿಗಳು ರಾಜಕೀಯದಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಿರುವುದು ಕಂಡುಬಂದಿರುತ್ತದೆ. ಉಡುಪಿಯ ಸಾಮಾಜಿಕ ವ್ಯವಸ್ಥೆಯಲ್ಲಿ ಹಿಂದೂ ಧರ್ಮಕ್ಕೆ ಸೇರಿದ ಜನಸಂಖ್ಯೆ ಹೆಚ್ಚಾಗಿದ್ದು ಸಹಜವಾಗಿಯೇ ಹೆಚ್ಚಾಗಿ(89%) ಪಾಲ್ಗೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿರುತ್ತದೆ. ಮುಸ್ಲಿಮ್ ಸಮುದಾಯ ತನ್ನದೇ ಆದ ಸಾಂಪ್ರದಾಯಿಕ ಚೌಕಟ್ಟನ್ನು ಒಳಗೊಂಡಿದ್ದು ಮಹಿಳೆಯರನ್ನು ಸಾರ್ವಜನಿಕ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಕ್ರಿಶ್ಚಿಯನ್ ಮತ್ತು ಜೈನ ಧರ್ಮದ ಮಹಿಳೆಯರು ರಾಜಕೀಯದಲ್ಲಿ ಆಸಕ್ತಿ ಹೊಂದಿದ್ದರೂ ರಾಜಕೀಯ ಪಕ್ಷಗಳಿಂದ ನಿರ್ಲಕ್ಷ್ಯಕ್ಕೊಳಗಾಗುತ್ತಾರೆ. ಮೀಸಲಾತಿ ನೀತಿಯಿಂದಾಗಿ ಕೆಳಜಾತಿಗೆ ಸೇರಿದ ಜನಪ್ರತಿನಿಧಿಗಳು ಹೆಚ್ಚು ಸಕ್ರಿಯವಾಗಿ ರಾಜಕಾರಣದಲ್ಲಿ ಭಾಗವಹಿಸುತ್ತಾರೆ ಮತ್ತು ಅವರ ಸಬಲೀಕರಣಕ್ಕೆ ಕಾರಣವಾಗುತ್ತದೆ ಎಂಬ ಪ್ರಾಕಲ್ಪನೆಯು ವಾಸ್ತವಿಕವಾಗಿ ಉಡುಪಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಕಂಡುಬರುವುದಿಲ್ಲ. ಮಹಿಳಾ ಸಬಲೀಕರಣದ ಬಗೆಗೆ ನಡೆದಂತಹ ಹೆಚ್ಚಿನ ಅಧ್ಯಯನಗಳು ಜಾತಿ, ಧರ್ಮದ ಪ್ರಾಬಲ್ಯದ ವಿಷಯವನ್ನು ಸ್ಪಷ್ಟಪಡಿಸಿದರೂ ಅಭಿವೃದ್ಧಿ ಹೊಂದಿದ ಮತ್ತು ಹೆಚ್ಚು ಸುಶಿಕ್ಷಿತರನ್ನು ಹೊಂದಿದ ಜಿಲ್ಲೆಯಾದ ಉಡುಪಿಯಲ್ಲಿ ಇದಕ್ಕೆ ವ್ಯತಿರಿಕ್ತವಾದ ಫಲಿತಗಳು ದೊರಕಿರುವುದಿಲ್ಲ. ಸಂವಿಧಾನಾತ್ಮಕವಾಗಿ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮೀಸಲಾತಿ ಅಸ್ತಿತ್ವದಲ್ಲಿದ್ದರೂ, ಗ್ರಾಮಾಂತರ ಪ್ರದೇಶದಲ್ಲಿ ತಲತಲಾಂತರದಿಂದ ಮುಂದುವರಿದುಕೊಂಡು ಬಂದಿರುವ ಸಾಂಪ್ರದಾಯಿಕ ನಾಯಕತ್ವ ಪ್ರಭಾವ ಬೀರಿರುವುದು ದೊಡ್ಡ ತಡೆಯಾಗಿರುತ್ತದೆ. ಪ್ರಬಲ ಜಾತಿ, ವರ್ಗ ಮತ್ತು ಧಾರ್ಮಿಕ ನಾಯಕರು ಅಲ್ಲದೇ ಉಡುಪಿ ಜಿಲ್ಲೆಯಲ್ಲಿ ವಿಶೇಷವಾಗಿ ಬಂಟ ಮತ್ತು ಬಿಲ್ಲವ ಜಾತಿಗೆ ಸೇರಿದ ಗುತ್ತಿನ ಮನೆಯವರು ಪರ್ಯಾಯ ಆಡಳಿತವನ್ನು ನಡೆಸುವುದು ಸಾಮಾನ್ಯವಾಗಿರುತ್ತದೆ. ರಾಜಕೀಯ ಪಕ್ಷಗಳು ಮತನಿರಾಪೇಕ್ಷ

ಸಾಮಾಜಿಕ ವ್ಯವಸ್ಥೆಯನ್ನು ಪ್ರತಿಪಾದಿಸಿದರೂ ಜಾತಿ ವ್ಯವಸ್ಥೆಯ ಕಟ್ಟು ಕಟ್ಟಳೆಗಳನ್ನು ಬಿಟ್ಟು ಹೊರಬರುವುದಕ್ಕೆ ಮನಸ್ಸು ಮಾಡದೆ ಇರುವುದನ್ನು ಗಮನಿಸಬಹುದು. ಮೇಲ್ಜಾತಿಯ ಮಹಿಳೆಯರಿಗೆ ಮನೆಯಿಂದ ಹೊರಗೆ ಹೋಗಲು ಅನುಮತಿಯ ಕೊರತೆಯಿರುವುದು ಆರ್ಥಿಕವಾಗಿ ಸಧೃಡವಾದ ಕುಟುಂಬದಿಂದ ಬಂದಿರುವವರಿಗೆ ಪಂಚಾಯತಿನ ಪ್ರತಿನಿಧಿಗಳಾಗುವುದಕ್ಕೆ ಕುಟುಂಬದ ಸದಸ್ಯರು ಅವಕಾಶ ನೀಡದಿರುವುದು ಇವರುಗಳಿಗೆ ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸುವುದಕ್ಕೆ ನಿರ್ಬಂಧವಾಗಿರುತ್ತದೆ. ಹೆಚ್ಚಿನ ಪ್ರತಿನಿಧಿಗಳಿಗೆ ಗೃಹಕೃತ್ಯಗಳ ಹೊರೆಹೆಚ್ಚಾಗಿದ್ದು ಅವರು ಸಕ್ರಿಯವಾಗಿ ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸುವುದಕ್ಕೆ ಸಮಯಾವಕಾಶವಿರುವುದಿಲ್ಲ.

ಮಹಿಳಾ ಪ್ರತಿನಿಧಿಗಳ ಆರೋಗ್ಯದ ಕುರಿತು ವಿಮರ್ಶಿಸಿದಾಗ ಮನೆವಾರ್ತೆ ಮತ್ತು ರಾಜಕೀಯ ಬದುಕಿನ ನಡುವೆ ಹೊಂದಾಣಿಕೆಯನ್ನು ತರುವಾಗ ಮಾನಸಿಕವಾಗಿ ಒತ್ತಡಕ್ಕೊಳಗಾಗಿದ್ದು ಕಂಡುಬರುತ್ತದೆ. ವಿಧವಾ ಮಹಿಳಾ ಪ್ರತಿನಿಧಿಗಳು ತಮ್ಮ ಕ್ಷೇತ್ರದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಅಧಿಕಾರಿಗಳ ಮತ್ತು ಪುರುಷ ಸದಸ್ಯರ ಜೊತೆ ಕ್ಷೇತ್ರಗಳಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಹಿಂದಿನಿಂದ ಸಮಾಜದ ಕುಹಕದ ಮಾತುಗಳನ್ನು ಕೇಳಬೇಕಾದ ಪ್ರಸಂಗಗಳು ಅವರ ಆತ್ಮಸ್ಥೈರ್ಯವನ್ನು ಕುಗ್ಗಿಸುತ್ತದೆ ಮಾತ್ರವಲ್ಲದೇ, ಇಂತಹ ಗ್ರಹಿಕೆಗಳು ಮಹಿಳಾ ಸದಸ್ಯರನ್ನು ಸಕ್ರಿಯವಾಗಿ ಕಾರ್ಯನಿರ್ವಹಿಸದಂತೆ ತಡೆಯುತ್ತವೆ ಎಂಬ ಅಂಶವು ಮುಂದುವರಿದ ಜಿಲ್ಲೆಯಾದ ಉಡುಪಿಯಲ್ಲಿಯೂ ಕಾಣಸಿಗುವುದು ವಿಶೇಷವಾಗಿರುತ್ತದೆ. ನಿರಕ್ಷರಸ್ಥ ಪ್ರತಿನಿಧಿಗಳು ಪ್ರಸ್ತುತ ಅಧ್ಯಯನದಲ್ಲಿ ಹೆಚ್ಚು ಕಂಡುಬಂದಿಲ್ಲದಿದ್ದರೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಹೊಂದಿದ ಪ್ರತಿನಿಧಿಗಳು ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ತಮ್ಮ ಮನೆಯ ಪುರುಷರ ಮತ್ತು ಪಕ್ಷದ ಸ್ಥಳೀಯ ನಾಯಕರ ತೀರ್ಮಾನವನ್ನು ಅವಲಂಬಿಸಿರುತ್ತಾರೆ. ವ್ಯಕ್ತಿ ಹೊಂದಿರುವ ಮನೆ ಮತ್ತು ಅಲ್ಲಿರುವ ಸೌಲಭ್ಯಗಳು ಅವರ ಆರ್ಥಿಕ ಸ್ಥಿತಿಗತಿಗಳನ್ನು ಸೂಚಿಸುತ್ತವೆ ಮತ್ತು ಸಾಮಾಜಿಕ ಪ್ರತಿಷ್ಠೆಯೊಂದಿಗೆ ನೇರ ಸಂಪರ್ಕವನ್ನು ಹೊಂದಿರುತ್ತದೆ. ಬಡತನದ ಕಾರಣದಿಂದ ಮಹಿಳೆಯು ಮನೆಯ ಹೊರಗೆ ಬಂದು ದುಡಿಯುವುದು ಅನಿವಾರ್ಯ. ಮಹಿಳೆಯ ವಿವಿಧ ಕರ್ತವ್ಯಗಳನ್ನು ಕೌಟುಂಬಿಕ ಮತ್ತು ಬಾಹ್ಯ ಕೆಲಸಗಳೆಂದು ವಿಂಗಡಿಸಿ ಎರಡನ್ನು ನಿಭಾಯಿಸುವಾಗ ಸಮಸ್ಯೆಗಳನ್ನು ಎದುರಿಸಿರುವುದು ಗೋಚರಿಸಿರುತ್ತದೆ. ಮನೆಕೆಲಸ. ಮಕ್ಕಳ ಆರೈಕೆ. ದನಕರುಗಳ ಪಾಲನೆ. ಕೂಲಿ ಕೆಲಸ ಇತ್ಯಾದಿಗಳೆಲ್ಲ ಸಾಂಪ್ರದಾಯಿಕವಾದ ಕೆಲಸಗಳಾಗಿದ್ದು. ಹೆಚ್ಚಿನ ಮಹಿಳಾ ಸದಸ್ಯರ ಆರ್ಥಿಕ ಹಿನ್ನೆಲೆ ಸುಸ್ಥಿರವಾಗಿರದೆ ತಮ್ಮ ದೈನಂದಿನ ಖರ್ಚುವೆಚ್ಚಗಳನ್ನು ಸರಿದೂಗಿಸುವುದರ ಜೊತೆಗೆ ಜನರ ಬೇಕು ಬೇಡಗಳಿಗೆ ಏಕಕಾಲದಲ್ಲಿ ಸ್ಪಂದಿಸುವ ಎರಡು ಪಾತ್ರವನ್ನು ನಿರ್ವಹಿಸುವ ಹೊಣೆಗಾರಿಕೆಯಿರುತ್ತದೆ. ಈ ರೀತಿಯ ಆರ್ಥಿಕ ದುಸ್ಥಿತಿಯನ್ನು ಹೊಂದಿದ ಮಹಿಳಾ

ಪ್ರತಿನಿಧಿಗಳು ಕ್ರಿಯಾತ್ಮಕವಾಗಿ ರಾಜಕೀಯದಲ್ಲಿ ಭಾಗವಹಿಸಲು ಸಾಧ್ಯವಾಗಿಲ್ಲದಿರುವುದು ಕಂಡುಬಂದಿರುತ್ತದೆ.

ಗ್ರಾಮಪಂಚಾಯತ್‌ನ ಹೆಚ್ಚಿನ ಸದಸ್ಯರು ಮನೆಯವರ ಮತ್ತು ರಾಜಕೀಯ ಪಕ್ಷದವರ ಒತ್ತಡದಿಂದಾಗಿ ರಾಜಕೀಯಕ್ಕೆ ಬಂದಿರುವುದು ಕಂಡುಬರುತ್ತದೆ. ಅವರಿಗೆ ತಮ್ಮ ಕರ್ತವ್ಯಗಳ ಅರಿವಿರುವುದಿಲ್ಲ. ಅರಿವಿದ್ದರೂ, ಒಂಟಿಯಾಗಿ ಆ ಬಗ್ಗೆ ಮಾತನಾಡುವುದಾಗಲೀ, ಕ್ಷೇತ್ರದಲ್ಲಿ ಒಬ್ಬಂಟಿಯಾಗಿ ಅಡ್ಡಾಡುವುದಾಗಲೀ ಮಾಡದೆ, ತಮ್ಮ ಕುಟುಂಬದ, ಪಕ್ಷದ ಮತ್ತು ಕ್ಷೇತ್ರದ ಪುರುಷರು ಹೇಳಿದ ಹಾಗೆ ಕೇಳಿಕೊಂಡು ರಾಜಕೀಯ ಚಟುವಟಿಕೆಗಳನ್ನು ನಿಭಾಯಿಸುತ್ತಿರುವುದು ಪ್ರಮುಖವಾಗಿ ಕಂಡುಬರುವಂತಹ ಅಂಶವಾಗಿರುತ್ತದೆ. ಕಾರ್ಕಳ ತಾಲೂಕು ಪಂಚಾಯತ್‌ಗೆ ಹಿಂದುಳಿದ ಜಾತಿಯ ಮಹಿಳಾ ಕ್ಷೇತ್ರದಿಂದ ಅಯ್ಕೆಯಾದ ಶ್ರೀಮತಿ ವಾರಿಜರವರು (ಹೆಸರು ಬದಲಾಯಿಸಲಾಗಿದೆ) 'ಜನಪ್ರತಿನಿಧಿಯಾಗಿ ಆಯ್ಕೆಯಾದ ನಂತರವೂ ನನ್ನ ಸ್ಥಿತಿಗತಿಗಳಲ್ಲಿ ಯಾವುದೇ ರೀತಿಯ ಬದಲಾವಣೆಗಳಾಗಲಿಲ್ಲವೆಂದು ತಮ್ಮ ಅಸಮಾಧಾನ ಮತ್ತು ಅತೃಪ್ತಿಯನ್ನು ವ್ಯಕ್ತಪಡಿಸಿರುತ್ತಾರೆ. ಇವರ ಪ್ರಕಾರ ತಾವು ಪ್ರತಿನಿಧಿಸುವ ತಾಲೂಕು ಪಂಚಾಯತ್ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಪಟ್ಟ ಎಲ್ಲಾ ನಿರ್ಣಯಗಳನ್ನು ನನ್ನ ಗಂಡ ಮತ್ತು ಮಾವನವರೇ ತೆಗೆದುಕೊಳ್ಳುತ್ತಾರೆ. ನಾನು ಪ್ರತಿನಿಧಿಸುವ ಕ್ಷೇತ್ರವು ಮಹಿಳಾ ಮೀಸಲಾತಿಗೆ ಒಳಪಟ್ಟಿದ್ದು, ನನ್ನ ಗಂಡ ಮತ್ತು ಮಾವನಿಗೆ ಸ್ಪರ್ಧಿಸುವುದಕ್ಕೆ ಅವಕಾಶ ಇಲ್ಲವಾದುದರಿಂದ ನನ್ನನ್ನು ಅಭ್ಯರ್ಥಿಯನ್ನಾಗಿಸಿ ಚುನಾವಣಾ ಪ್ರಚಾರ ಕಾರ್ಯವನ್ನು ಅವರೇ ನಿರ್ವಹಿಸಿದರು. ಆಯ್ಕೆಯಾದ ನಂತರವೂ ತಾಲುಕು ಪಂಚಾಯತ್ ಸಭೆಗೆ ಭಾಗವಹಿಸುವುದಕ್ಕೆ ಅವರೇ ಕರೆದುಕೊಂಡು ಹೋಗುತ್ತಿದ್ದರು ಮತ್ತು ಅಧಿಕಾರಿಗಳ ಜೊತೆ ಮಾತುಕತೆಯನ್ನು ನಿರ್ವಹಿಸುತ್ತಿದ್ದರು. ನನ್ನ ಕೆಲಸವೇನಿದ್ದರೂ ಕೇವಲ ಸಹಿ ಹಾಕುವುದಕ್ಕೆ ಮಾತ್ರ ಸೀಮಿತವಾಗಿತ್ತು. ಕ್ಷೇತ್ರದ ಮತದಾರರು ಅವರ ಬೇಡಿಕೆ ಮತ್ತು ಸಮಸ್ಯೆಗಳ ಬಗ್ಗೆ ಹೇಳಿಕೊಳ್ಳಲು ಮನೆಗೆ ಬಂದಾಗ ಅವರನ್ನು ನಿಭಾಯಿಸುವ ಕೆಲಸವನ್ನು ಕೂಡಾ ಅವರೇ ಮಾಡುತ್ತಿದ್ದರು. ಸ್ವತಂತ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ನನಗೆ ಅವಕಾಶವನ್ನೇ ನೀಡುತ್ತಿರಲಿಲ್ಲ' ಎಂದಿರುತ್ತಾರೆ. ಈ ಅಭಿಪ್ರಾಯವು ಜನಪ್ರತಿನಿಧಿಯಾಗಿ ಆಯ್ಕೆಯಾದ ಮಹಿಳೆಯರ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಲು ಸಂಬಂಧಿಕರು, ವಿಶೇಷವಾಗಿ ಪತಿ ಅಥವಾ ಅವರ ಮನೆಯವರು ಹೇಗೆಲ್ಲಾ ಪ್ರಯತ್ನಪಡುತ್ತಿದ್ದರು ಎಂಬುದನ್ನು ಸಾಬೀತುಪಡಿಸುತ್ತದೆ.

ಹೆಚ್ಚಿನ ಮಹಿಳಾ ಪ್ರತಿನಿಧಿಗಳಿಗೆ ವೈಯಕ್ತಿಕವಾಗಿ ಹುದ್ದೆಯಲ್ಲಿ ಆಸಕ್ತಿ ಇಲ್ಲ, ಕುಟುಂಬ ಮತ್ತು ಪಕ್ಷದ ಒತ್ತಾಯದ ಮೇರೆಗೆ ರಾಜಕೀಯದಲ್ಲಿರುವುದು ಬೆಳಕಿಗೆ ಬಂದಿರುತ್ತದೆ. ಪ್ರತಿನಿತ್ಯದ ಪಂಚಾಯತ್ ಸಭೆಗಳು, ಕ್ಷೇತ್ರದ ಜನರ ಭೇಟಿ, ಕುಂದುಕೊರತೆಗಳ ಪರಿಶೀಲನೆ, ಅಧಿಕಾರಿಗಳೊಡನೆ ಭೇಟಿ,

ಚರ್ಚೆ, ಹಣಕಾಸಿನ ಉಸ್ತುವಾರಿ, ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಅರಿವು ಮತ್ತು ಕಾಲಕಾಲಕ್ಕೆ ಅವುಗಳ ನಿರ್ವಹಣೆ, ಲೆಕ್ಕ ಪತ್ರಗಳ ಪರಿಶೀಲನೆ ಇತ್ಯಾದಿ ಅನೇಕ ಚಟುವಟಿಕೆಗಳನ್ನು ಪುರುಷರ ಮಾರ್ಗದರ್ಶನ ಮತ್ತು ಸಹಯೋಗದಿಂದಲೇ ಮಾಡುತ್ತಿರುವುದು ಎಂದು ಒಪ್ಪಿಕೊಂಡಿರುತ್ತಾರೆ. ಇನ್ನೂ ಕೆಲವು ಮಹಿಳಾ ಪ್ರತಿನಿಧಿಗಳು ಗ್ರಾಮ ಸಭೆಗಳಲ್ಲಿ ಭಾಗವಹಿಸುತ್ತಿದ್ದರೂ, ಪುರುಷ ಸದಸ್ಯರ ಮತ್ತು ಪಕ್ಷದ ನಾಯಕರ ಒತ್ತಡದಿಂದ ನಿರ್ಭೀತಿಯಿಂದ ಕಾರ್ಯನಿರ್ವಹಿಸಲು ತೊಡಕಾಗುತ್ತದೆ. ಫಲಾನುಭವಿಗಳನ್ನು ಆಯ್ಕೆ ಮಾಡಿದ ಸಂದರ್ಭದಲ್ಲಿ ಬೆದರಿಕೆಯೊಡ್ಡಿ ಬದಲಾವಣೆಯನ್ನು ಮಾಡುವಂತೆ ಒತ್ತಾಯ ಮಾಡಿರುವುದು ನಾವುಗಳು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಲು ತಡೆಯಾಗಿದೆಯೆಂದು ಅನೌಪಚಾರಿಕ ಮಾತುಕತೆಯಲ್ಲಿ ತೊಡಗಿದ್ದಾಗ ಕಂಡುಬಂದಿರುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಎಷ್ಟೇ ಸಂವಿಧಾನಾತ್ಮಕ ಕಾಯ್ದೆ, ಹಕ್ಕು ಮತ್ತು ಬಾಧ್ಯತೆಗಳನ್ನು ನೀಡಿ ಸಶಕ್ತೀಕರಣಗೊಳಿಸಲು ಪ್ರಯತ್ನಿಸಿದರೂ ಸಮಾಜದ ಸಾಂಪ್ರದಾಯಿಕ ಸಂಘ ಸಂಸ್ಥೆಗಳಲ್ಲಿ, ರಚನಾತ್ಮಕ ವ್ಯವಸ್ಥೆಗಳು ಹಾಗೂ ಅದರ ಆಚರಣೆಗಳು ಪೂರ್ವಗ್ರಹ ಪೀಡಿತವಾಗಿರುವುದು ಕಂಡುಬರುತ್ತದೆ. ರಾಜಕೀಯದಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳಲು ಪಂಚಾಯತ್‌ನ ಕಾಯ್ದೆ, ಕಾರ್ಯಕ್ರಮ, ಯೋಜನೆ ಇತ್ಯಾದಿಗಳ ಬಗ್ಗೆ ಹೆಚ್ಚಿನ ಅರಿವಿನ ಕೊರತೆಯು ಅಸಮಾನತೆಯನ್ನು ಸೃಷ್ಟಿಸುತ್ತದೆ ಮತ್ತು ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಹೊಂದಿದವರಾಗಿದ್ದು, ಶೈಕ್ಷಣಿಕ ಕೊರತೆ ಲಿಂಗ ಅಸಮಾನತೆಗೆ ಒಂದು ಕಾರಣವಾಗಿದೆ. ಪುರುಷ ಪ್ರಧಾನ ಸಮಾಜವು ಮಹಿಳೆಯರಿಗೆ ಎಷ್ಟೇ ಸಂವಿಧಾನಾತ್ಮಕ ಹಕ್ಕು ಭಾದ್ಯತೆಗಳನ್ನು ನೀಡಿ ಅವರನ್ನು ಸಬಲೀಕೃತಗೊಳಿಸಲು ಪ್ರಯತ್ನಿಸಿದರೂ ಸಮಾಜದ ಸಾಂಪ್ರದಾಯಿಕ ಸಂಘಸಂಸ್ಥೆಗಳು ಅವರಿಗೆ ಮಾನ್ಯತೆ ಕೊಡದಿದ್ದರೆ, ಮಹಿಳಾ ಸಶಕ್ತೀಕರಣ ಮತ್ತು ಸಮಾನತೆಯನ್ನು ನೀಡುವ ಹಕ್ಕು ಕಾಯ್ದೆಗಳು ಯಶಸ್ವಿಯಾಗಲು ಸಾಧ್ಯವಿಲ್ಲವೆಂದು ಕಂಡುಬಂದಿರುತ್ತದೆ. ಸರಕಾರದ ಉತ್ತೇಜಕ ಕ್ರಮಗಳು ರಾಜಕೀಯದಲ್ಲಿ ಮಹಿಳೆ ಪರಿಣಾಮಕಾರಿಯಾಗಿ ಭಾಗವಹಿಸಲು ಉತ್ತೇಜಿಸಿದರೂ ಜಾತಿ, ಬಡತನ, ಕೌಟುಂಬಿಕ ಹೊರೆ, ಹೊಣೆ, ರಾಜಕೀಯದಲ್ಲಿ ಅನನುಭವ, ಕೆಲಸದ ಹೊರೆ, ಪಿತೃಪ್ರಧಾನ ಕುಟುಂಬ ವ್ಯವಸ್ಥೆ, ರಾಜಕೀಯ ಪಕ್ಷಗಳ ಪ್ರಭಾವ, ರಾಜಕೀಯ ಅಪರಾಧೀಕರಣ ಇತ್ಯಾದಿ ಕಾರಣಗಳಿಂದ ಮಹಿಳಾ ಪ್ರತಿನಿಧಿಗಳ ರಾಜಕೀಯ ಸಹಭಾಗಿತ್ವ ಪರಿಣಾಮಕಾರಿಯಾಗಿಲ್ಲವೆಂದು ಕಂಡುಬರುತ್ತದೆ. ಪುರುಷ ಪ್ರಧಾನ ಸಮಾಜದ ಪರಿಧಿಯಲ್ಲೇ ಅವರು ತಮ್ಮ ಕಾರ್ಯವ್ಯಾಪ್ತಿಯನ್ನು ಹೊಂದಿರಬೇಕು. ಆದುದರಿಂದ, ಮಹಿಳೆಯರಿಗೆ ಪಂಚಾಯತ್‌ಗಳಲ್ಲಿ ಸದಸ್ಯತ್ವ ಸಿಕ್ಕಿದರೂ ಅದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸದೇ, ತನ್ನ ಕುಟುಂಬಕ್ಕೆ ತೊಂದರೆಯಾದಾಗ ತಮ್ಮ ರಾಜಕೀಯ ಬದುಕನ್ನು ತೊರೆಯುತ್ತಾರೆ ಎಂಬುದು ತಿಳಿದುಬಂದಿರುತ್ತದೆ.

ಕೊನೆಟಿಪ್ಪಣಿಗಳು

1. ಪ್ರಿಯಾ ರಂಜನ್, ಪೆಸೆಟ್ಸ್ ಆಫ್ ಇಂಡಿಯನ್ ವುಮೆನ್‌ಹುಡ್, ಇಂಡಿಯನ್ ಪಬ್ಲಿಷರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್, ನ್ಯೂಡೆಲ್ಲಿ, 2000. ಪುಟ 10–49.
2. ವೀರಭಾರತಿ, "ಮೀಸಲಾತಿ ಮತ್ತು ಸಮಾನತೆ", ಸ್ಪರ್ಧಾಸ್ಫೂರ್ತಿ, 2009. ಪುಟ 2–6.
3. ಎಸ್. ಎನ್. ಅಂಬೇಡ್ಕರ್, "ಪಂಚಾಯತ್‌ರಾಜ್ ಆ್ಯಂಡ್ ಗ್ರಾಸ್‌ರೂಟ್ ಪೊಲಿಟಿಕ್ಸ್: ಇಷ್ಯೂಸ್ ಆ್ಯಂಡ್ ಪರ್ಸ್‌ಪೆಕ್ಟಿವ್ಸ್", ಜರ್ನಲ್ ಆಫ್ ಸೋಷಿಯಲ್ ಡೆವಲಪ್‌ಮೆಂಟ್ ಆ್ಯಂಡ್ ಜಸ್ಟಿಸ್, 6(3). ಪುಟ 72–76.
4. ಅರ್ಶಿ ಪರ್ವೀನ್, ಸೋಷಿಯಲ್ ಜಸ್ಟೀಸ್ ಆ್ಯಂಡ್ ಇಂಡಿಯನ್ ವುಮೆನ್, ಇಂಡಿಯನ್ ಪಬ್ಲಿಷರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್, ನ್ಯೂಡೆಲ್ಲಿ, 2008. ಪುಟ 260–294.
5. ಮೀನಾಕ್ಷಿ ಮಲ್ಹೋತ್ರಾ, ಸ್ಟೇಟಸ್ ಆಫ್ ವುಮೆನ್ ಇನ್ ಪಂಚಾಯತ್‌ರಾಜ್, ಕಾನ್‌ಸೆಪ್ಟ್ಸ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. ಪುಟ 164–168.
6. ಎಸ್. ನಾಗೇಂದ್ರ, ರೋಲ್ ಆಫ್ ವುಮೆನ್ ಇನ್ ಪಂಚಾಯತ್‌ರಾಜ್, ಎಬಿಡಿ ಪಬ್ಲಿಷರ್ಸ್, ಜೈಪುರ, 2006. ಪುಟ 218–243.
7. ಜಯಲ್ ನೀರಜಾ ಗೋಪಾಲ್, ಎನ್‌ಜೆಂಡರಿಂಗ್ ಲೋಕಲ್ ಡೆಮಾಕ್ರಸಿ: ದ ಇಂಪ್ಯಾಕ್ಟ್ ಆಫ್ ಕೋಟಾಸ್ ಆಫ್ ವುಮೆನ್ ಇನ್ ಇಂಡಿಯಾಸ್ ಪಂಚಾಯತ್ಸ್, ಎನ್.ಐ.ಆರ್.ಡಿ, ನ್ಯೂಡೆಲ್ಲಿ. ಪುಟ 58–69.
8. ಅದೇ ಪುಟ ಸಂಖ್ಯೆ 58–69.
9. ಎಂ. ಚಂದ್ರ ಪೂಜಾರಿ, ಇನ್ಸ್‌ಟಿಟ್ಯೂಷನ್ಸ್ ಡಿಸೆಂಟ್ರಲೈಶೇಷನ್ ಆ್ಯಂಡ್ ಡೆವಲಪ್‌ಮೆಂಟ್, ಪ್ರಸಾರಾಂಗ, ಕನ್ನಡ ಯುನಿವರ್ಸಿಟಿ, ಹಂಪಿ. ಪುಟ 25–58.
10. ಕುಮಾರ್ ಎ., ಇಂಡಿಯನ್ ವುಮೆನ್ ಇನ್ ಪೊಲಿಟಿಕ್ಸ್, ಅನ್ಮೋಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2006. ಪುಟ 29–37.
11. ರಚನಾತ್ಮಕ ಎಂದರೆ ಆಡಳಿತದ ವಿಕೇಂದ್ರೀಕರಣ, ಹಣಕಾಸಿನ ಒಡೆತನ, ಭೂಒಡೆತನ, ಇತ್ಯಾದಿಗಳಲ್ಲಿ ಮಹಿಳೆಯರಿಗೆ ಸಮಾನತೆ ದೊರಕಬೇಕು ಎನ್ನುವ ವ್ಯವಸ್ಥೆ.
12. ಮೈತ್ರೇಯಿ ಕೃಷ್ಣರಾಜ್, ಬಿಟ್ವೀನ್ ಪಬ್ಲಿಕ್ ಆ್ಯಂಡ್ ಪ್ರೈವೇಟ್ ಮೊರ್ಟ್ಯಾಲಿಟಿ, ಶುಭದಾ ಸರಸ್ವತ್ಸ್ ಪ್ರಕಾಶನ, ಪುಣೆ, 1988. ಪುಟ 1–63.

13. ನಿರ್ಮಲ್ ಬುಚ್, "ಪಂಚಾಯತ್‌ಗಳು ಮತ್ತು ಮಹಿಳೆಯರು", ಯೋಜನಾ, ಅಭಿವೃದ್ಧಿ ಮಾಸಪತ್ರಿಕೆ, ಜೂನ್ 2013. ಪುಟ 26–29.

14. ಸೂರತ್ ಸಿಂಗ್, "ಎಂಪವರ್‌ಮೆಂಟ್ ಆಫ್ ವುಮೆನ್ ಮೆಂಬರ್ಸ್ ಇನ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್", ಕುರುಕ್ಷೇತ್ರ, ಮಾಸಪತ್ರಿಕೆ, ಆಗೋಸ್ಟ್ 2004. ಪುಟ 32–37.

15. ಅದೇ ಪುಟ ಸಂಖ್ಯೆ 32–37.

16. ಎಸ್. ಮಲಿಕ್, *ಪಂಚಾಯತ್‌ರಾಜ್: ದ ರೂರಲ್ ಟ್ರಾನ್ಸ್‌ಫಾರ್ಮೇಷನ್ ಇನ್ ದ ಸ್ಟೇಟ್ ಆಫ್ ಹರಿಯಾಣ*, ಅಲೆಕ್ ಪಬ್ಲಿಷರ್ಸ್, ಜೈಪುರ, 2002. ಪುಟ 62–84.

17. ಜ್ಯೋತ್ಸ್ನಾ ಮಹೇಶ್, 'ಪೊಲಿಟಿಕಲ್ ಎಂಪವರ್‌ಮೆಂಟ್ ಆಫ್ ವುಮೆನ್ ವಿಥ್ ರೆಫರೆನ್ಸ್ ಟು ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್: ಎ ಕೇಸ್ ಸ್ಟಡಿ ಆಫ್ ಉಡುಪಿ ಡಿಸ್ಟ್ರಿಕ್ಟ್' ಆ್ಯನ್ ಅನ್‌ಪಬ್ಲಿಷ್‌ಡ್ ಥೀಸಿಸ್ ಸಬ್‌ಮಿಟೆಡ್ ಟು ಮಾಹೆ ಯೂನಿವರ್ಸಿಟಿ ಫಾರ್ ದ ಅವಾರ್ಡ್ ಆಫ್ ಪಿಹೆಚ್.ಡಿ ಡಿಗ್ರಿ, 2011. ಪುಟ 86–91.

18. ಶೌರೀಶ್ ಕುದ್ಕಳಿ, 'ಪಾರ್ಟಿಸಿಪೇಷನ್ ಆಫ್ ದಲಿತ್ ವುಮೆನ್ ಇನ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್: ಎ ಕೇಸ್ ಸ್ಟಡಿ ಆಫ್ ಉಡುಪಿ ಡಿಸ್ಟ್ರಿಕ್ಟ್' ಆ್ಯನ್ ಅನ್‌ಪಬ್ಲಿಷ್‌ಡ್ ಥೀಸಿಸ್ ಸಬ್‌ಮಿಟ್ಟೆಡ್ ಟು ಮಂಗಳೂರು ಯೂನಿವರ್ಸಿಟಿ ಫಾರ್ ದ ಅವಾರ್ಡ್ ಆಫ್ ಪಿಹೆಚ್.ಡಿ ಡಿಗ್ರಿ, 2010. ಪುಟ 158–165.

19. ದೇಬರಾ ಜೆ. ಸ್ಮಿತ್, 'ಜೆಂಡರ್ ಆ್ಯಂಡ್ ವುಮೆನ್ಸ್ ಪೊಲಿಟಿಕಲ್ ಪಾರ್ಟಿಸಿಪೇಷನ್ ಇನ್ ರಾಜಸ್ಥಾನ್', ಥೀಸಿಸ್ ಸಬ್ಮಿಟ್ಟೆಡ್ ಫಾರ್ ದ ಡಿಗ್ರಿ ಆಫ್ ಡಾಕ್ಟರ್ ಫಿಲಾಸಫಿ, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಆ್ಯಂಡ್ ಪೊಲಿಟಿಕಲ್ ಸಯನ್ಸ್, ಯುನಿವರ್ಸಿಟಿ ಆಫ್ ಲಂಡನ್, 2005. ಪಬ್ಲಿಷ್‌ಡ್ ಬೈ ಪ್ರೋಕ್ವೆಸ್ಟ್, ಲಂಡನ್, 2014. ಪುಟ 224–235.

20. ಸೂರತ್ ಸಿಂಗ್, "ಎಂಪವರ್‌ಮೆಂಟ್ ಆಫ್ ವುಮೆನ್ ಮೆಂಬರ್ಸ್ ಇನ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್", ಕುರುಕ್ಷೇತ್ರ, ಮಾಸಪತ್ರಿಕೆ, ಆಗೋಸ್ಟ್ 2004. ಪುಟ 22–26.

21. ವನಿತಾ ಕೌಲ್, *ವುಮೆನ್ ಆ್ಯಂಡ್ ದ ವಿಂಡ್ ಆಫ್ ಚೇಂಜ್*, ಗ್ಯಾನ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 2000. ಪುಟ 142–168.

ಸಮಾರೋಪ

ಸಮಾರೋಪ

ಪ್ರಸ್ತುತ ಅಧ್ಯಯನವು ಉಡುಪಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಪ್ರತಿನಿಧಿಗಳ ರಾಜಕೀಯ ಭಾಗವಹಿಸುವಿಕೆ ಮತ್ತು ಲಿಂಗ ತಾರತಮ್ಯವಿಲ್ಲದೇ ಅವರುಗಳು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರಲ್ಲಿ ಯಶಸ್ವಿಯಾಗುತ್ತಾರೆಯೇ ಎಂಬ ಜಿಜ್ಞಾಸೆಗೆ ಆದ್ಯತೆಯನ್ನು ನೀಡಿ ಕೆಳಗೆ ವಿವರಿಸಿದ ಉದ್ದೇಶಗಳಿಗೆ ಅನುಗುಣವಾಗಿ ಸಂಶೋಧನೆಯನ್ನು ನಡೆಸಲಾಗಿರುತ್ತದೆ.

ರಾಜಕೀಯದಲ್ಲಿ ಮಹಿಳೆಯರ ಸಹಭಾಗಿತ್ವವನ್ನು ಉತ್ತೇಜಿಸಲು ರಾಜ್ಯ ಕೈಗೊಂಡ ಕ್ರಮಗಳನ್ನು ವಿಶ್ಲೇಷಿಸುವುದು. ಈ ಕ್ರಮಗಳು ಮತ್ತು ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ನಡುವಿನ ಸಂಬಂಧವನ್ನು ಅಧ್ಯಯನ ಮಾಡುವುದು. ರಾಜಕೀಯದಲ್ಲಿ ಮಹಿಳೆಯರ ಪರಿಣಾಮಕಾರಿ ಸಹಭಾಗಿತ್ವಕ್ಕೆ ಇರುವ ಸಾಮಾಜಿಕ ಮತ್ತು ಆರ್ಥಿಕ ಅಡೆತಡೆಗಳನ್ನು ಅರ್ಥೈಸಿಕೊಳ್ಳುವುದು. ಮೇಲಿನ ಅಧ್ಯಯನದ ಹಿನ್ನೆಲೆಯಲ್ಲಿ ಮಹಿಳೆಯರ ಸಹಭಾಗಿತ್ವವನ್ನು ಸುಧಾರಿಸುವ ಕೆಲವೊಂದು ಕ್ರಮಗಳನ್ನು, ಶಿಫಾರಸ್ಸುಗಳನ್ನು ನೀಡುವುದು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಿಖರವಾದ ಸಂರಚಿತ ಪ್ರಶ್ನಾವಳಿಗಳ ಮೂಲಕ ಸ್ಥಳೀಯ ಸಂಸ್ಥೆಗಳ ಎಲ್ಲಾ ಮೂರು ಸ್ತರಗಳ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಪ್ರತಿನಿಧಿಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಿದಾಗ ಕಂಡುಬಂದ ಫಲಿತಗಳು ಈ ಕೆಳಗಿನಂತಿವೆ:

ರಾಜಕೀಯದಲ್ಲಿ ಮಹಿಳೆಯರ ಸಹಭಾಗಿತ್ವವನ್ನು ಉತ್ತೇಜಿಸಲು ರಾಜ್ಯ ಕೈಗೊಂಡ ಕ್ರಮಗಳನ್ನು ಅರಿಯುವುದೇ ಅಧ್ಯಯನದ ಮೊದಲನೇ ಉದ್ದೇಶದ ಫಲಿತವಾಗಿದೆ. ರಾಷ್ಟ್ರವು ಮಹಿಳೆಯರ ಸಾಮಾನ್ಯ ಸಬಲೀಕರಣಕ್ಕೆ ಸಂಬಂಧಪಟ್ಟಂತೆ ಹಲವಾರು ಕ್ರಮಗಳನ್ನು ತೆಗೆದುಕೊಂಡಿರುತ್ತದೆ. ಅವುಗಳೆಂದರೆ, ಸ್ತ್ರೀ ಸಂಬಂಧಿತ ಸಾಂವಿಧಾನಿಕ ಹಕ್ಕುಗಳನ್ನು, ಶಾಸನಾತ್ಮಕ ಕ್ರಮಗಳನ್ನು ಅಲ್ಲದೇ, ಸಂವಿಧಾನದ ರಾಜ್ಯ ನಿರ್ದೇಶಿತ ತತ್ವಗಳಲ್ಲಿ ಮಹಿಳೆಯರಿಗೆ ಸಾಮಾಜಿಕ ಮತ್ತು ಆರ್ಥಿಕ ಕಲ್ಯಾಣವನ್ನು ಪ್ರಸ್ತಾಪಿಸಿದೆ ಮತ್ತು ಇಲ್ಲಿಯವರೆಗೆ ಜಾರಿಗೆ ಬಂದ ಪಂಚವಾರ್ಷಿಕ ಯೋಜನೆಗಳಲ್ಲಿ ಮಹಿಳಾ ಪರ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಗಿರುತ್ತದೆ. ಮಹಿಳೆಯರ ರಾಜಕೀಯ ಸಬಲೀಕರಣಕ್ಕೆ ಸಂಬಂಧಪಟ್ಟಂತೆ ಸ್ತ್ರೀಸಂಬಂಧಿತ ಕಾನೂನುಗಳು, 1983ರ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ, 1992ರಲ್ಲಿ ಸಂವಿಧಾನಕ್ಕೆ ತಂದ 73 ಮತ್ತು 74ನೇ ಸಂವಿಧಾನ ತಿದ್ದುಪಡಿ ಕಾಯ್ದೆ ಹಾಗೂ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಮಹಿಳಾ ಆಯೋಗಗಳ ಕಾರ್ಯಕ್ರಮಗಳು ಸ್ಥಳೀಯ ಸಂಸ್ಥೆಗಳಲ್ಲಿ ಅವರ ಸಕ್ರಿಯ ಸಹಭಾಗಿತ್ವ

ಮತ್ತು ಸಬಲೀಕರಣದ ಬಗೆಗೆ ಚರ್ಚಿಸುತ್ತದೆ. ಈ ಎಲ್ಲಾ ಸಂವಿಧಾನಾತ್ಮಕ ಉಪಕ್ರಮಗಳು ಉಡುಪಿ ಜಿಲ್ಲೆಗೆ ಸಂಬಂಧಪಟ್ಟಂತೆ ಅವಲೋಕಿಸಿದಾಗ ಶೇ.90ರಷ್ಟು ಮಹಿಳಾ ಜನಪ್ರತಿನಿಧಿಗಳಿಗೆ ತಮ್ಮ ಸಬಲೀಕರಣದ ಬಗೆಗಿರುವ ಹಕ್ಕುಗಳು, ಯೋಜನೆಗಳು ಮತ್ತು ಕಾರ್ಯಗಳ ಬಗ್ಗೆ ಅರಿವಿದ್ದರೂ ಅದನ್ನು ಪರಿಣಾಮಕಾರಿಯಾಗಿ ಬಳಸುವುದರಲ್ಲಿ ವಿಫಲರಾಗಿರುತ್ತಾರೆ(80%). ಸ್ಥಳೀಯ ಸಂಸ್ಥೆಗಳ ಮತ್ತು ಸ್ಥಾಯಿ ಸಮಿತಿಗಳ ಸದಸ್ಯರು ಅಥವಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಸರ್ಕಾರದ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವಲ್ಲಿ (ಶೇ.10) ಮಹಿಳಾ ಜನಪ್ರತಿನಿಧಿಗಳು ಯಶಸ್ವಿಯಾಗಿರುತ್ತಾರೆ.

ಪರಿಶಿಷ್ಟ ಜಾತಿ ಮತ್ತು ಪಂಗಡ ಮಹಿಳೆಯರಿಗೆ 1/3ನೇ ಸ್ಥಾನ ಮೀಸಲಿಡಬೇಕು ಹಾಗೂ ಅಧ್ಯಕ್ಷ, ಉಪಾಧ್ಯಕ್ಷ ಹುದ್ದೆಯಲ್ಲೂ ಮೀಸಲಾತಿ ನೀಡಬೇಕು ಎಂದು ಸಂವಿಧಾನಾತ್ಮಕ ಉಪಕ್ರಮಗಳು ವಿವರಿಸಿದೆ. ಈ ಉಪಕ್ರಮಗಳು ಜಾರಿಯಲ್ಲಿದ್ದರೂ ಗ್ರಾಮದ ಪ್ರಬಲ ಜಾತಿಯ(52%) ನಾಯಕರುಗಳು ತಮ್ಮ ಅಧೀನವಾಗಿ ಇವರುಗಳನ್ನು ಕಾರ್ಯನಿರ್ವಹಿಸುವಂತೆ ಮಾಡಿರುವುದು ಸಂವಿಧಾನಾತ್ಮಕ ಉಪಕ್ರಮಗಳು ತುಳಿತಕ್ಕೊಳಗಾದ ಪರಿಶಿಷ್ಟ ಜಾತಿ ಮತ್ತು ಪಂಗಡದ ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿಯನ್ನು ನೀಡಿದರೆ ಅದು ಅವರ ಸಬಲೀಕರಣಕ್ಕೆ ಅವಕಾಶ ನೀಡುತ್ತದೆ ಎಂಬುದು ಬುದ್ಧಿವಂತರ ಜಿಲ್ಲೆ ಎಂದು ಪರಿಗಣಿಸಲ್ಪಟ್ಟಿರುವ ಉಡುಪಿ ಜಿಲ್ಲೆಯಲ್ಲಿಯೂ ಕಂಡುಬಂದಿರುವುದು ವಿಶೇಷವಾಗಿರುತ್ತದೆ.

ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು 20.02% ಇದ್ದರೆ, ಮಹಿಳೆಯರ ಪ್ರತಿನಿಧಿತ್ವ 13.09%ರಷ್ಟಿದೆ. ಇತರರು ಅಂದರೆ ಸಾಮಾನ್ಯ ವರ್ಗದ ಪ್ರತಿನಿಧಿಗಳನ್ನು ಪರಿಗಣಿಸಿದಾಗ ಅಲ್ಲಿಯೂ ಪುರುಷ ಪ್ರತಿನಿಧಿಗಳು ಮೇಲುಗೈಯನ್ನು ಸಾಧಿಸಿರುವುದು ಅವರುಗಳ ಸಂಖ್ಯೆ 32.86%ರಷ್ಟಿದ್ದರೆ, 19.14%ರಷ್ಟು ಮಾತ್ರ ಮಹಿಳಾ ಪ್ರತಿನಿಧಿಗಳು ಸ್ಥಳೀಯ ಸಂಸ್ಥೆಗಳಲ್ಲಿ ಪ್ರತಿನಿಧಿಸಲ್ಪಟ್ಟಿರುತ್ತಾರೆ. ಹಿಂದುಳಿದ ಮತ್ತು ಇತರ ಸಮುದಾಯದ ಪುರುಷ ಪ್ರತಿನಿಧಿಗಳ ಸಂಖ್ಯೆಯು ಮಹಿಳಾ ಪ್ರತಿನಿಧಿಗಿಂತ ಅಧಿಕವಿರುತ್ತದೆ. ಇದಕ್ಕೆ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗ ಮತ್ತು ಸಮುದಾಯಕ್ಕೆ ಸೇರಿದ ಮಹಿಳೆಯರಿಗೆ ಜಾತಿ ಆಧಾರಿತ ಮೀಸಲಾತಿ ಅವಕಾಶಗಳನ್ನು ಕಲ್ಪಿಸದಿರುವುದು ಕಾರಣವಾಗಿರುತ್ತದೆ. ಅವರಲ್ಲಿ ಪರಿಶಿಷ್ಟ ಜಾತಿ(22%) ಮತ್ತು ಪಂಗಡಕ್ಕೆ(11%) ಸೇರಿದ ಮಹಿಳೆಯರು ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪ್ರತಿನಿಧಿಗಳಲ್ಲಿ ಮಹಿಳೆಯರ ಸಂಖ್ಯೆ ಪುರುಷರ ಸಂಖ್ಯೆಗಿಂತ ಹೆಚ್ಚಾಗಿರುತ್ತದೆ. ಇದರಿಂದಾಗಿ ಸಂವಿಧಾನಾತ್ಮಕ ಉಪಕ್ರಮಗಳಿಂದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮಹಿಳೆಯರ ಪ್ರತಿನಿಧಿತ್ವಕ್ಕೆ ನೀಡಿದ ಅವಕಾಶವು

ಪರಿಣಾಮಕಾರಿಯಾಗಿ ಉಡುಪಿ ಜಿಲ್ಲೆಯಲ್ಲಿ ಜಾರಿಯಾಗಿರುವುದು ಕಂಡುಬರುತ್ತದೆ. ಅಧ್ಯಯನ ಕ್ಷೇತ್ರದಲ್ಲಿ ಮಹಿಳಾ ಜನಪ್ರತಿನಿಧಿಗಳಾಗಿ ಆಯ್ಕೆ ಆದವರಲ್ಲಿ ಹಿಂದೂ ಧರ್ಮಕ್ಕೆ ಸೇರಿದ (89%) ಮಹಿಳೆಯರೇ ಹೆಚ್ಚಾಗಿರುತ್ತಾರೆ. ಆದರೆ, ಮುಸ್ಲಿಂ(1%), ಕ್ರಿಶ್ಚಿಯನ್(9%) ಮತ್ತು ಜೈನ(1%) ಧರ್ಮದ ಮಹಿಳೆಯರ ಪಾಲ್ಗೊಳ್ಳುವಿಕೆಯು ಕಡಿಮೆಯಿರುವುದು ಕಂಡುಬಂದಿರುತ್ತದೆ. ಸಂವಿಧಾನಾತ್ಮಕ ಉಪಕ್ರಮಗಳಿಂದ ಸ್ಥಳೀಯ ಸಂಸ್ಥೆಗಳಲ್ಲಿ ಹೆಚ್ಚು ಮಹಿಳೆಯರು ಚುನಾಯಿತರಾಗುತ್ತಿದ್ದರೂ ಉನ್ನತ ವಿದ್ಯಾಭ್ಯಾಸವನ್ನು ಹೊಂದಿದ ಮಹಿಳೆಯರು ರಾಜಕೀಯ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಇಲ್ಲದೆ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಪ್ರತಿನಿಧಿಗಳಾಗಿ ಆಯ್ಕೆಯಾಗಲು ಹೆಚ್ಚು ಆಸಕ್ತಿಯನ್ನು ತೋರಿಸುವುದಿಲ್ಲ. ಪ್ರಾಥಮಿಕ (30%) ಪ್ರೌಢ ಶಿಕ್ಷಣ (40%) ಹೊಂದಿದವರೇ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾಗಲು ಆಸಕ್ತಿ ತೋರಿಸಿರುತ್ತಾರೆ. ಪಂಚಾಯತ್‌ರಾಜ್ ವ್ಯವಸ್ಥೆಯ ಮೂರು ಸ್ತರಗಳಲ್ಲಿಯೂ ವಿವಾಹಿತ ಮಹಿಳೆಯರೇ(90%) ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಿರುವುದು, ವಿಧವೆಯರು(5%) ಹಾಗೂ ಅವಿವಾಹಿತೆಯರು(5%) ಆಯ್ಕೆಯಾಗಿರುತ್ತಾರೆ. ಆದರೆ ವಿಚ್ಛೇದಿತ ಮಹಿಳೆಯರು ಜನಪ್ರತಿನಿಧಿಗಳಾಗಿ ಆಯ್ಕೆಯಾದ ಉದಾಹರಣೆಗಳು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿರುವುದಿಲ್ಲ.

ಹೆಚ್ಚಿನ ಜನಪ್ರತಿನಿಧಿಗಳು 36 ರಿಂದ 45ರ ನಡುವಿನ ಮಧ್ಯವಯಸ್ಕರಾಗಿದ್ದು, ಮಹಿಳಾ ಜನಪ್ರತಿನಿಧಿಗಳ ಉದ್ಯೋಗವನ್ನು ವಿಶ್ಲೇಷಣೆಗೊಳಪಡಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು (60%) ಸೇವಾ ಭದ್ರತೆಯಿಲ್ಲದ ಹಾಗೂ ಕಡಿಮೆ ಆದಾಯವನ್ನು ತರುವಂತಹ ಕ್ಷೇತ್ರಗಳಲ್ಲಿ ಅನಿವಾರ್ಯವಾಗಿ ಜೀವನ ನಿರ್ವಹಣೆಗೋಸ್ಕರ ಉದ್ಯೋಗದಲ್ಲಿ ತೊಡಗಿಸಿಕೊಂಡಿರುವುದು ಹಾಗೂ ಮಾಸಿಕ ವರಮಾನ ಐದು ಸಾವಿರಕ್ಕಿಂತ ಕಡಿಮೆಯಿದ್ದು ತಮ್ಮ ದೈನಂದಿನ ಖರ್ಚುವೆಚ್ಚಗಳನ್ನು ಸರಿದೂಗಿಸುವುದರ ಜೊತೆಗೆ ಜನಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುವ ಒತ್ತಡಕ್ಕೆ ಸಿಲುಕಿರುತ್ತಾರೆ. ಇವರುಗಳ ಆರ್ಥಿಕ ಮಟ್ಟದಲ್ಲಿ ಮತ್ತು ಜೀವನ ಕ್ರಮದಲ್ಲಿ ಜನಪ್ರತಿನಿಧಿಗಳಾಗಿ ಆಯ್ಕೆಯಾದ ನಂತರವೂ ಹೆಚ್ಚಿನ ಬದಲಾವಣೆಗಳಾಗಿರುವುದಿಲ್ಲ. ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಮನೆಯ ಮಾಲಕತ್ವವನ್ನು(99%) ಹೊಂದಿಲ್ಲದಿದ್ದು ಆಕೆಯ ಪೋಷಕರು, ಗಂಡ ಅಥವಾ ಕುಟುಂಬದ ಹಿರಿಯ ಸದಸ್ಯರ ಹೆಸರಿನಲ್ಲಿ ನೋಂದಾಯಿಸಿರುವುದು ಕಂಡುಬಂದಿರುತ್ತದೆ. ರಾಷ್ಟ್ರದ ಇತರ ಪ್ರದೇಶಗಳಲ್ಲಿ ನಡೆಸಿದ ಅಧ್ಯಯನಕ್ಕಿಂತ ಪ್ರಸ್ತುತ ಅಧ್ಯಯನವು ಭಿನ್ನವಾದ ಫಲಿತವನ್ನು ನೀಡಿಲ್ಲದಿರುವುದು ರಾಷ್ಟ್ರಾದ್ಯಂತ ಒಂದೇ ರೀತಿಯ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ ಅಸ್ತಿತ್ವದಲ್ಲಿರುವುದನ್ನು ಪೆಟ್ಟು ಮಾಡಿ ತೋರಿಸುತ್ತದೆ. ಇದರ ಹೊರತಾಗಿಯೂ ಸಂವಿಧಾನಾತ್ಮಕ ಉಪಕ್ರಮಗಳಲ್ಲಿ ವಿವರಿಸಲ್ಪಟ್ಟ ಮೀಸಲಾತಿಗಳು ಇವರುಗಳಿಗೆ

ಸ್ಥಳೀಯ ಸಂಸ್ಥೆಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟಿರುತ್ತದೆ ಹಾಗೂ ರಾಜಕೀಯದಲ್ಲಿ ಆಸಕ್ತಿ ಬೆಳೆಯುವಂತೆ ಮಾಡುವುದರಲ್ಲಿ ಯಶಸ್ವಿಯಾಗಿರುವುದು ಕಂಡುಬರುತ್ತದೆ. ಸ್ಥಳೀಯ ಸಂಸ್ಥೆಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಇವರುಗಳು ಪ್ರಾಮಾಣಿಕವಾಗಿ ಪ್ರಯತ್ನಿಸಿರುತ್ತಾರೆ. ಆದರೆ, ಸರಕಾರದಿಂದ ಕೊಡಮಾಡಿರುವ ಅನುದಾನಗಳು ಸ್ಥಳೀಯರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ಒದಗಿಸಲು ವಿಫಲವಾಗಿರುವುದು ಕಾರಣವೆಂದು ಕಂಡುಬಂದಿರುತ್ತದೆ.

ಅಧ್ಯಯನದ ಎರಡನೆಯ ಉದ್ದೇಶವು ರಾಜ್ಯ ಕೈಗೊಂಡ ಕ್ರಮಗಳು ಮತ್ತು ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಅರಿತುಕೊಳ್ಳುವುದಾಗಿರುತ್ತದೆ. ಅಧ್ಯಯನ ಸಂದರ್ಭದಲ್ಲಿ ಉಡುಪಿ ಜಿಲ್ಲೆಯ ಒಟ್ಟು 146 ಗ್ರಾಮ ಪಂಚಾಯತ್‌ಗಳ ಜನಪ್ರತಿನಿಧಿಗಳ ಅಂಕಿಅಂಶವನ್ನು ಗಮನಿಸಿದಾಗ 1332(55.55%) ಪುರುಷ ಪ್ರತಿನಿಧಿಗಳು ಹಾಗೂ 1066(44.45%) ಮಹಿಳಾ ಪ್ರತಿನಿಧಿಗಳು ಆಯ್ಕೆಯಾಗಿರುತ್ತಾರೆ. ಅಧ್ಯಯನ ಕ್ಷೇತ್ರದ ಗ್ರಾಮ ಪಂಚಾಯತ್‌ಗಳ ಜನಪ್ರತಿನಿಧಿಗಳ ಅಂಕಿಅಂಶವನ್ನು ಗಮನಿಸಿದಾಗ 147(50.86%) ಪುರುಷ ಪ್ರತಿನಿಧಿಗಳು ಹಾಗೂ 142(49.13%) ಮಹಿಳಾ ಪ್ರತಿನಿಧಿಗಳು, ತಾಲೂಕು ಪಂಚಾಯತ್‌ನಲ್ಲಿ 44(46.32%) ಪುರುಷ ಪ್ರತಿನಿಧಿಗಳು ಹಾಗೂ 51(53.68%) ಮಹಿಳಾ ಪ್ರತಿನಿಧಿಗಳು, ಜಿಲ್ಲಾ ಪಂಚಾಯತ್‌ನಲ್ಲಿ 12(48%) ಪುರುಷ ಪ್ರತಿನಿಧಿಗಳು ಹಾಗೂ 13(52%) ಮಹಿಳಾ ಪ್ರತಿನಿಧಿಗಳು ಆಯ್ಕೆಯಾಗಿರುತ್ತಾರೆ. ರಾಜ್ಯದ ಒಟ್ಟು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಗೆ ತುಲನಾತ್ಮಕವಾಗಿ ಹೋಲಿಕೆ ಮಾಡಿದಾಗ ಉಡುಪಿ ಜಿಲ್ಲೆಯಲ್ಲಿ ಮಹಿಳೆಯರು ಜನಪ್ರತಿನಿಧಿಗಳಾಗಿ ಹೆಚ್ಚು ಚುನಾಯಿಸಲ್ಪಟ್ಟಿರುತ್ತಾರೆ ಎಂಬ ಅಂಶ ಅರಿವಿಗೆ ಬರುತ್ತದೆ.

ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿ ಅವಕಾಶವಿದ್ದರೂ ಉಡುಪಿ ಜಿಲ್ಲೆಯಲ್ಲಿ ಇದಕ್ಕಿಂತ ಹೆಚ್ಚಾಗಿ (44.45%) ಆಯ್ಕೆಯಾಗಿರುವುದು ಕಂಡುಬರುತ್ತದೆ. ಹೆಚ್ಚಿನ ಮಹಿಳಾ ಪ್ರತಿನಿಧಿಗಳು (81.06%) ಯಾವುದೇ ರಾಜಕೀಯ ಹಿನ್ನೆಲೆಯ ಕುಟುಂಬದಿಂದ ಬಂದಿರುವುದಿಲ್ಲ. ಮಹಿಳಾ ಪ್ರತಿನಿಧಿಗಳಲ್ಲಿ 79%ರಷ್ಟು ಜನ ಪ್ರಥಮ ಬಾರಿಗೆ ಚುನಾವಣೆಯಲ್ಲಿ ಸ್ಪರ್ಧಿಸಿರುವುದು ಮತ್ತು ಅಧ್ಯಯನಕ್ಕೆ ಒಳಪಡಿಸಿದ ಮಹಿಳಾ ಪ್ರತಿನಿಧಿಗಳಲ್ಲಿ ಮೂರಕ್ಕಿಂತ ಹೆಚ್ಚು ಬಾರಿ ಚುನಾವಣೆಗೆ ಸ್ಪರ್ಧಿಸಿ ಆಯ್ಕೆಯಾದ ಜನಪ್ರತಿನಿಧಿಗಳು ಕಂಡುಬಂದಿರುವುದಿಲ್ಲ. ಆದರೆ ಕೇವಲ ಎರಡು ಮಹಿಳೆಯರು ಗ್ರಾಮ ಪಂಚಾಯತ್‌ನಿಂದ ಜಿಲ್ಲಾ ಪಂಚಾಯತ್ ಚುನಾವಣೆಗೆ ಸ್ಪರ್ಧಿಸಿ ಆಯ್ಕೆಯಾಗಿರುವುದನ್ನು ಅಧ್ಯಯನವು ಕಂಡುಕೊಂಡಿರುತ್ತದೆ. ಕ್ಷೇತ್ರದ ಪ್ರತಿನಿಧಿಗಳಾಗಿ ಪಂಚಾಯತ್‌ನ ಅಧ್ಯಕ್ಷರಾಗಿ(13), ಉಪಾಧ್ಯಕ್ಷರಾಗಿ(15),

ಸ್ಥಾಯಿ ಸಮಿತಿ ಸದಸ್ಯರಾಗಿ(75) ಮಹಿಳಾ ಪ್ರತಿನಿಧಿಗಳು ಕಾರ್ಯನಿರ್ವಹಿಸಿರುವುದು, ಹೆಚ್ಚಿನ ಮಹಿಳಾ ಪ್ರತಿನಿಧಿಗಳು ರಾಜಕೀಯ ಹಿನ್ನೆಲೆಯನ್ನು ಹೊಂದಿರದೇ, ಮೀಸಲಾತಿಯ ಅವಕಾಶವನ್ನು ಪಡೆದುಕೊಂಡು ಒತ್ತಾಯಪೂರ್ವಕವಾಗಿ ರಾಜಕೀಯಕ್ಕೆ ಬಂದವರಾಗಿರುತ್ತಾರೆ. ರಾಜಕೀಯಕ್ಕೆ ಬರಲು ಪ್ರೇರಣೆ ಮೀಸಲಾತಿಯ ಅನುಕೂಲ(52%), ಸ್ಥಳೀಯ ನಾಯಕರು(60%), ರಾಜಕೀಯ ಪಕ್ಷ(50%), ಕುಟುಂಬ ಅಥವಾ ಪತಿ(38%) ಕಾರಣವೆಂದು ತಿಳಿಸಿರುತ್ತಾರೆ ಹಾಗೂ ಇದು ರಾಜಕೀಯ ಪಾಲ್ಗೊಳ್ಳುವಿಕೆಯ ಮೊದಲ ಅನುಭವವೆಂದು ಮಹಿಳಾ ಪ್ರತಿನಿಧಿಗಳು(73%) ತಿಳಿಸಿರುತ್ತಾರೆ. ಪಂಚಾಯತ್ ಸಭೆಗಳಲ್ಲಿ ನಿರಂತರವಾಗಿ ಭಾಗವಹಿಸಿರುವ ಮಹಿಳಾ ಪ್ರತಿನಿಧಿಗಳು(84%) ಕ್ಷೇತ್ರದ ಜನತೆಯ ಅವಶ್ಯಕತೆಗಳಾದ ನೀರಿನ ವ್ಯವಸ್ಥೆ(82%), ರಸ್ತೆ ಸೌಲಭ್ಯ(77%), ಶೌಚಾಲಯ(70%), ವಸತಿ(21%), ಆರೋಗ್ಯ(26%), ಪಡಿತರ ಚೀಟಿ(25%), ಇತ್ಯಾದಿ ತಮ್ಮ ಕ್ಷೇತ್ರದ ಜನತೆಯ ಅಗತ್ಯಗಳಿಗೆ ಸ್ಪಂದಿಸಿ ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸಿರುವುದು ಕಂಡುಬಂದಿರುತ್ತದೆ.

ಸಭೆಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯವಿದೆ ಎಂದು ಹೆಚ್ಚಿನ(79%) ಮಹಿಳಾ ಪ್ರತಿನಿಧಿಗಳು ತಿಳಿಸಿರುತ್ತಾರೆ. ಸಭೆಗಳಲ್ಲಿ ನಿರ್ಣಯಗಳನ್ನು ಕೈಗೊಳ್ಳುವಾಗ ಪಂಚಾಯತ್‌ನ ಪುರುಷ ಸದಸ್ಯರ ಜೊತೆ ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಂಡಿರುತ್ತೇವೆ ಎಂದು ಶೇ.81 ಮಹಿಳಾ ಪ್ರತಿನಿಧಿಗಳು ತಿಳಿಸಿರುತ್ತಾರೆ. ಸಭೆಗಳಲ್ಲಿ ಪುರುಷರೇ ಹೆಚ್ಚು ಮಾತನಾಡುತ್ತಾರೆ, ಯಾಕೆಂದರೆ ಅವರುಗಳಿಗೆ ವಾರ್ಡ್‌ನ ಸಮಸ್ಯೆಗಳ ಅರಿವು(31%), ಕಾನೂನಿನ ಅರಿವು(22%), ರಾಜಕೀಯ ಅರಿವು(20%), ಪುರುಷಾಧಿಪತ್ಯ(19%) ಎಂದು ತಿಳಿಸಿರುತ್ತಾರೆ ಮಾತ್ರವಲ್ಲದೇ, ಮಹಿಳಾ ಪ್ರತಿನಿಧಿಗಳಾಗಿ ಮಹಿಳಾ ಸಹಸದಸ್ಯೆಯರಿಗೆ ಬೆಂಬಲ ನೀಡಿರುತ್ತೇವೆ(ಶೇ.75). ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳಾದ ಉನ್ನತ ಶಿಕ್ಷಣ, ತರಬೇತಿ, ಆರೋಗ್ಯ, ಮಹಿಳಾ ಸಶಕ್ತೀಕರಣ ಯೋಜನೆ, ಇತ್ಯಾದಿಗಳಿಗೆ ಮಹತ್ವ ನೀಡಿದ್ದೇವೆ ಎಂದು ಶೇ.70 ಮಹಿಳಾ ಪ್ರತಿನಿಧಿಗಳು ತಿಳಿಸಿರುತ್ತಾರೆ.

ರಾಜಕೀಯ ಸಹಭಾಗಿತ್ವಕ್ಕೆ ಕುಟುಂಬದ ಸಹಕಾರವೇ ಪ್ರಮುಖವೆಂದು(66.5%), ಮೀಸಲಾತಿ ಮಸೂದೆಯ ಅರಿವು(89.8%), ಮಹಿಳಾ ಹಕ್ಕುಗಳ ಅರಿವು(90.29%), ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಕಾಯ್ದೆಗಳ ಅರಿವು(95.63%), ಇತ್ಯಾದಿ ಕಾನೂನು, ಕಾಯ್ದೆ ಹಾಗೂ ಹಕ್ಕಿನ ಕುರಿತಾಗಿ ತಿಳಿಸಿರುತ್ತಾರೆ. ನಿರ್ಧಾರ ಕೈಗೊಳ್ಳುವಲ್ಲಿನ ಪಾತ್ರಗಳಲ್ಲಿ ಭೂವ್ಯವಹಾರ ಮತ್ತು ಆರ್ಥಿಕ ವಿಷಯಗಳ ಕುರಿತು ಪತಿಯೇ ನಿರ್ಣಯವನ್ನು ಕೈಗೊಳ್ಳುವುದೆಂದು(24%), ಮಕ್ಕಳ ಶಿಕ್ಷಣ(81%), ಮನೆವಾರ್ತೆ(64.56%), ಗೃಹನಿರ್ವಹಣೆ(69.41%), ಇತ್ಯಾದಿಗಳಲ್ಲಿ ಪುರುಷ ಮತ್ತು ಮಹಿಳೆಯರಿಬ್ಬರೂ

ಒಟ್ಟಾಗಿ ನಿರ್ಧಾರ ಕೈಗೊಂಡಿರುವುದು ಕಂಡುಬಂದಿರುತ್ತದೆ. ಮಹಿಳಾ ಪ್ರತಿನಿಧಿಗಳ ಸ್ಥಾನಮಾನವನ್ನು ಅವಲೋಕಿಸಿದಾಗ ರಾಜಕೀಯವಾಗಿ ಉತ್ತಮ ಸ್ಥಾನಮಾನವನ್ನು ಪ್ರತಿನಿಧಿಗಳಾದ ನಂತರ ಹೆಚ್ಚಿನವರು(93.20%) ಪಡೆದಿದ್ದು, ಆದರೆ ಸಾಮಾಜಿಕ ಮತ್ತು ಆರ್ಥಿಕ ಸ್ಥಾನದಲ್ಲಿ ಬದಲಾವಣೆಯಾಗಿರುವುದು ಕಂಡುಬಂದಿರುವುದಿಲ್ಲ. ಆತ್ಮವಿಶ್ವಾಸದ ವೃದ್ಧಿಯಾಗಿದೆ ಎಂದು ಶೇ.81.06 ಮಹಿಳಾ ಪ್ರತಿನಿಧಿಗಳು ತಿಳಿಸಿರುತ್ತಾರೆ. ಸಂಘ ಸಂಸ್ಥೆಗಳ ಸದಸ್ಯತ್ವದಿಂದ ಪರಿಣಾಮಕಾರಿ ರಾಜಕೀಯ ಸಹಭಾಗಿತ್ವಕ್ಕೆ ಕಾರಣವಾಗಿದೆಯೆಂದು ಶೇ.63.10 ಪ್ರತಿನಿಧಿಗಳು ತಿಳಿಸಿರುತ್ತಾರೆ. ಒಟ್ಟಿನಲ್ಲಿ ಸರಕಾರ ಕೈಗೊಂಡ ಉಪಕ್ರಮಗಳು ಮಹಿಳಾ ಪ್ರತಿನಿಧಿಗಳಲ್ಲಿ ರಾಜಕೀಯ ಜಾಗೃತಿಯನ್ನು ಮೂಡಿಸಿರುತ್ತದೆ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿರುತ್ತದೆ. ಈ ಅವಕಾಶಗಳು ಅವರಲ್ಲಿ ಆತ್ಮವಿಶ್ವಾಸ ಮತ್ತು ರಾಜಕೀಯದಲ್ಲಿ ನಂಬಿಕೆ ಹುಟ್ಟುವುದಕ್ಕೆ ಕಾರಣವಾಗಿರುತ್ತದೆ.

ಇಲ್ಲಿಯವರೆಗೆ ಸ್ಥಳೀಯ ಮಟ್ಟದಲ್ಲಿ ಮನೆವಾರ್ತೆ ಮತ್ತು ಇತರ ಸಣ್ಣಪುಟ್ಟ ಕಾರ್ಯಗಳಿಗೆ ಸೀಮಿತವಾದ ಮಹಿಳೆಯರು ರಾಜಕೀಯ ಪ್ರಜ್ಞೆಗಳನ್ನು ಬೆಳೆಸಿಕೊಂಡು ತಮ್ಮನ್ನು ರಾಜಕೀಯ ಪಕ್ಷಗಳ ಹಾಗೂ ನಾಯಕರ ಜೊತೆಯಲ್ಲಿ ಗುರುತಿಸುವಂತೆ ಮಾಡಿರುವುದು ರಾಜ್ಯ ತೆಗೆದುಕೊಂಡ ಉಪಕ್ರಮಗಳು ಅವರನ್ನು ಸಬಲರನ್ನಾಗಿಸುವಲ್ಲಿ ಯಶಸ್ವಿಯಾಗಿರುತ್ತದೆ. ಸ್ಥಳೀಯ ಮಟ್ಟದಲ್ಲಿ ಸಾಮಾಜಿಕ ಸ್ವಾಸ್ಥ್ಯಕ್ಕೆ ಧಕ್ಕೆ ತರುವಂತಹ ಹೊಸ ಸಾರಾಯಿ ಅಂಗಡಿಗಳ ಸ್ಥಾಪನೆ, ವರದಕ್ಷಿಣೆಗೆ ಸಂಬಂಧಪಟ್ಟ ದೌರ್ಜನ್ಯಗಳು, ಅತ್ಯಾಚಾರಗಳು, ಬಾಲಕಿಯರ ಮಾರಾಟ, ಇತ್ಯಾದಿಗಳ ವಿರುದ್ಧ ಧ್ವನಿಯೆತ್ತಿ ಅಪ್ರಜಾಸತ್ತಾತ್ಮಕ ಹಾಗೂ ಅನೈತಿಕ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವ ಗುಣವನ್ನು ಮಹಿಳೆಯರಲ್ಲಿ ಬೆಳೆಸಿರುವುದು, ಪುರುಷರಷ್ಟೇ ನಾವು ಸಮಾನರು, ಪುರುಷ ಪ್ರಧಾನ ರಾಜಕೀಯ ವ್ಯವಸ್ಥೆ ನಮಗೆ ಸಿಗುವ ಅವಕಾಶವನ್ನು ಹತ್ತಿಕ್ಕುತ್ತದೆ ಎಂಬುದಾಗಿ ಸಾಮಾಜಿಕ ಮತ್ತು ರಾಜಕೀಯ ನ್ಯಾಯದ ಬಗ್ಗೆ ಮಾತನಾಡಲಾರಂಭಿಸಿರುವುದು ಎಲ್ಲಾ ಹಿನ್ನೆಡೆಗಳ ನಡುವೆಯೂ ಸರಕಾರ ತೆಗೆದುಕೊಂಡ ಉಪಕ್ರಮಗಳು ಮುಂದೊಂದು ದಿನ ಯಶಸ್ವಿಯಾಗುತ್ತದೆ ಎಂಬ ಅಂಶವನ್ನು ಪ್ರಸ್ತುತ ಅಧ್ಯಯನವು ವ್ಯಕ್ತಪಡಿಸುತ್ತದೆ.

ರಾಜಕೀಯದಲ್ಲಿ ಮಹಿಳೆಯರ ಪರಿಣಾಮಕಾರಿ ಸಹಭಾಗಿತ್ವಕ್ಕೆ ಇರುವ ಸಾಮಾಜಿಕ ಮತ್ತು ಆರ್ಥಿಕ ಅಡೆತಡೆಗಳನ್ನು ವಿಶ್ಲೇಷಿಸುವುದು ಅಧ್ಯಯನದ ಮೂರನೇ ಮುಖ್ಯ ಉದ್ದೇಶವಾಗಿರುತ್ತದೆ. ಜಾತಿಯ ಪ್ರಾಬಲ್ಯವು ರಾಜಕೀಯ ಪಾಲ್ಗೊಳ್ಳುವಿಕೆಗೆ ಪ್ರಮುಖವಾದ ತಡೆಯಾಗಿರುತ್ತದೆ. ಬಲಾಢ್ಯ ಜಾತಿಗಳಿಗೆ(50%) ಸೇರಿದ ಜನರು ಕೆಳಜಾತಿಯವರನ್ನು, ಅದರಲ್ಲೂ ಪರಿಶಿಷ್ಟ ಜಾತಿ(22%) ಮತ್ತು ಪಂಗಡಗಳಿಗೆ(11%) ಸೇರಿದ ಮಹಿಳೆಯರ ವಿರುದ್ಧ ಅಸಮಾನ ಧೋರಣೆ ತೋರಿ ಅವರ ಪ್ರಜಾಸತ್ತಾತ್ಮಕ

ಅವಕಾಶಗಳಿಗೂ ಅಡ್ಡಿಯನ್ನುಂಟು ಮಾಡುತ್ತಾರೆ. ಮೀಸಲಾತಿಯ ಆಧಾರದ ಮೇಲೆ ಸ್ಥಾನಗಳನ್ನು ಪಡೆದಿದ್ದರೂ ಈ ಜಾತಿಗಳಿಗೆ ಸೇರಿದ ಮಹಿಳೆಯರು ಅವಕಾಶವಂಚಿತರಾಗಿದ್ದು, ರಾಜಕೀಯ ವ್ಯವಸ್ಥೆಯಲ್ಲಿ ಪ್ರವೇಶ ಮಾಡಿಯೂ ರಾಜಕೀಯವಾಗಿ ಅಸ್ಪೃಶ್ಯರಾಗಿ ಮುಂದುವರಿಯುತ್ತಿರುವುದನ್ನು ಅಧ್ಯಯನವು ಕಂಡುಕೊಂಡಿರುತ್ತದೆ. ಮೇಲ್ಜಾತಿಗೆ ಸೇರಿದ ಊರ ಮುಖ್ಯಸ್ಥರು ಮತ್ತು ರಾಜಕೀಯ ಪಕ್ಷದ ಸ್ಥಳೀಯ ನೇತಾರರು ಬಲವಂತದಿಂದ ಮತ್ತು ಆಮಿಷಗಳನ್ನು ಒಡ್ಡುವುದರ ಮೂಲಕ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಉಡುಪಿ ಜಿಲ್ಲೆಯಲ್ಲಿ ಪ್ರಮುಖ ಮತ್ತು ಪ್ರಬಲ ಜಾತಿಗಳ ಯಜಮಾನಿಕೆಯನ್ನು ದುರ್ಬಲ ವರ್ಗದ ಮೇಲೆ ಹೇರಿ ನಿಯಂತ್ರಣದಲ್ಲಿರಿಸಿರುವುದು ಹಾಗೂ ತಮ್ಮ ಹಿತಾಸಕ್ತಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸುವಂತೆ ಮಾಡುವುದರಲ್ಲಿ ಯಶಸ್ವಿಯಾಗಿರುತ್ತಾರೆ. ಮೀಸಲಾತಿ ನೀತಿಯಿಂದಾಗಿ ಕೆಳಜಾತಿಗೆ ಸೇರಿದ ಮಹಿಳಾ ಪ್ರತಿನಿಧಿಗಳು ಹೆಚ್ಚು ಸಕ್ರಿಯವಾಗಿ ರಾಜಕೀಯದಲ್ಲಿ ಭಾಗವಹಿಸುತ್ತಾರೆ ಮತ್ತು ಅದು ಸಬಲೀಕರಣಕ್ಕೆ ಕಾರಣವಾಗುತ್ತದೆ ಎಂಬ ಗ್ರಹಿಕೆಯು ಅಭಿವೃದ್ಧಿಗೊಂಡು ಹೆಚ್ಚು ಸುಶಿಕ್ಷಿತರನ್ನು ಹೊಂದಿದ ಜಿಲ್ಲೆಯಾದ ಉಡುಪಿಯಲ್ಲಿ ಇದಕ್ಕೆ ವ್ಯತಿರಿಕ್ತವಾದ ಫಲಿತಗಳು ಅಧ್ಯಯನದ ಮೂಲಕ ಕಂಡುಕೊಳ್ಳಬಹುದು ಎಂಬ ಪ್ರಸ್ತುತ ಸಂಶೋಧಕರ ಅಭಿಪ್ರಾಯವು ಸಂಪೂರ್ಣವಾಗಿ ಸುಳ್ಳಾಗಿರುವುದು ಜನ ಪ್ರತಿನಿಧಿಗಳ ಲಿಂಗ, ಜಾತಿ, ವರ್ಗ ಮತ್ತು ಧರ್ಮದ ಅಂಶಗಳನ್ನು ಕೂಲಂಕುಷವಾಗಿ ವಿಮರ್ಶೆಗೊಳಪಡಿಸಿದಾಗ ಎದ್ದು ಕಂಡುಬರುವಂತಹದ್ದಾಗಿದೆ.

ಪಂಚಾಯತ್‌ರಾಜ್ ವ್ಯವಸ್ಥೆಯ ಮೂರೂ ಸ್ತರಗಳಲ್ಲಿಯೂ ಅವಿವಾಹಿತರು ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಆಸಕ್ತಿ ತೋರಿಸಿರುವುದಿಲ್ಲ. ವಿಧವೆಯರು ಮತ್ತು ವಿಚ್ಛೇದಿತರಿಗೆ ಅವರ ಸಬಲೀಕರಣಕ್ಕೆ ಪೂರಕ ಕಾನೂನುಗಳು ರಚಿಸಲ್ಪಟ್ಟಿದ್ದರೂ ಸಮಾಜ ಮತ್ತು ರಾಜಕೀಯ ಪಕ್ಷಗಳು ವಿಧವೆ ಮತ್ತು ವಿಚ್ಛೇದಿತರನ್ನು ಸಾಮಾಜಿಕವಾಗಿ ಅಸ್ಪೃಶ್ಯರು ಎಂಬುದಾಗಿ ಪರಿಗಣಿಸಿ ಸರಿಯಾದ ಪ್ರಮಾಣದಲ್ಲಿ ಅವರಿಗೆ ಅವಕಾಶಗಳನ್ನು ನೀಡದಿರುವುದು ಹಾಗೂ ಚುನಾಯಿತ ಕ್ಷೇತ್ರಕ್ಕೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಹಿಂದಿನಿಂದ ಕುಹಕದ ಮಾತುಗಳನ್ನು ಕೇಳಿರುವುದು ಅವರಲ್ಲಿನ ಆತ್ಮಸ್ಥೈರ್ಯವನ್ನು ಕುಂದುವಂತೆ ಮಾಡಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಹಿಂದೂಗಳೇ(89%) ಹೆಚ್ಚಾಗಿರುವ ಪ್ರದೇಶಗಳಲ್ಲಿ ಸಹಜವಾಗಿಯೇ ಅವರ ಪ್ರಾಬಲ್ಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಎದ್ದು ಕಾಣುತ್ತದೆ. ಮುಸ್ಲಿಂ(1%), ಕ್ರಿಶ್ಚಿಯನ್(9%) ಮತ್ತು ಜೈನ(1%) ಧರ್ಮದವರ ಪ್ರಾಬಲ್ಯವು ಸಾಮಾಜಿಕ ರಚನೆಯಲ್ಲಿ ಹಿಂದೂಗಳಿಗಿಂತ ಮಿಗಿಲಾಗಿ ಇರುವುದಿಲ್ಲ. ಅವರ ಜನಸಂಖ್ಯೆಯೂ ಕಡಿಮೆ ಇದ್ದು, ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಸಾರ್ವಜನಿಕ ಸ್ಥಾನಮಾನಗಳನ್ನು

ಹೊಂದುವುದರಲ್ಲಿ ಇಂದಿಗೂ ಹಿಂದುಳಿದಿರುವುದು ಎದ್ದು ಕಾಣುತ್ತದೆ. ಉಡುಪಿ ಜಿಲ್ಲೆಯ ಪ್ರಬಲ ಜಾತಿಗಳ ಯಜಮಾನಿಕೆಯನ್ನು ಕುಟುಂಬದ ಹಿರಿಯ ಮಹಿಳಾ ಸದಸ್ಯೆ ನಿರ್ವಹಿಸುತ್ತಾಳೆ ಎಂಬುದಾಗಿ ಸಮಾಜಶಾಸ್ತ್ರೀಯ ಅಧ್ಯಯನಗಳು ಮತ್ತು ರೂಢಿ ಸಂಪ್ರದಾಯಗಳು ವಿವರಿಸುತ್ತಿದ್ದರೂ, ಪ್ರಸ್ತುತ ಕಾಲಘಟ್ಟದಲ್ಲಿ ಕುಟುಂಬದ ಯಜಮಾನಿಕೆಯು ಮಹಿಳೆಯಿಂದ ಪುರುಷರಿಗೆ ಹಸ್ತಾಂತರವಾಗುವ ಪ್ರಕ್ರಿಯೆಯು ಈ ಅಧ್ಯಯನವು ಕಂಡುಕೊಂಡ ಪ್ರಮುಖ ಫಲಿತಗಳಲ್ಲಿ ಒಂದಾಗಿರುತ್ತದೆ. ಹಣಕಾಸಿನ ತೊಂದರೆ(64%), ತರಬೇತಿಯ ಕೊರತೆ(62%), ಶಿಕ್ಷಣದ ಕೊರತೆ(61%), ಪಂಚಾಯತ್ ಕಾಯ್ದೆ ಮತ್ತು ಕಾನೂನುಗಳ ಅರಿವಿನ ಕೊರತೆ(68%), ಬಡತನ(48%), ಆರೋಗ್ಯದ ಸಮಸ್ಯೆ(18%) ಇವೆಲ್ಲಾ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಲು ತಮಗಿರುವ ಅಡ್ಡಿ ಆತಂಕಗಳು ಎಂದು ತಿಳಿಸಿರುತ್ತಾರೆ. ಪಿತೃಪ್ರಾಧಾನ್ಯತೆ ಮತ್ತು ಲಿಂಗಾಧಾರಿತ ಶ್ರಮ ವಿಭಜನೆಯಿಂದಾಗಿ ಮನೆಯ ಗೃಹಕೃತ್ಯಗಳಲ್ಲಿ ಸಹಕಾರ ಸಿಗುವುದಿಲ್ಲ. ಅಡುಗೆ(97%), ಮನೆವಾರ್ತೆ(95%), ಮಕ್ಕಳ ಲಾಲನೆ ಪಾಲನೆ(83%) ಮುಂತಾದ ಕೆಲಸಗಳಲ್ಲಿ ತೊಡಗಿರುವುದರಿಂದಾಗಿ ವಾರ್ಡಿನ ಕೆಲಸಗಳಿಗೆ ಸಮಯವೇ ಇಲ್ಲವಾಗುತ್ತದೆ ಎಂಬ ಅಂಶವನ್ನು ಸೂಕ್ಷ್ಮವಾಗಿ ಗಮನಿಸಲಾಗಿರುತ್ತದೆ.

ಮಹಿಳಾ ಪ್ರತಿನಿಧಿಗಳು ಮುಖ್ಯವಾಗಿ ಮಹಿಳೆಯರ ಬಗ್ಗೆ ಇರುವ ಅಲಕ್ಷ್ಯ(31%), ಕುಟುಂಬದ ಸದಸ್ಯರ ಬೆಂಬಲದ ಕೊರತೆ(28%), ರಾಜಕೀಯ ಅಪರಾಧೀಕರಣ(25%), ಅಭದ್ರತೆ(20%), ಇತ್ಯಾದಿ ಅಡೆತಡೆಗಳನ್ನು ಎದುರಿಸುತ್ತಾರೆ. ತಲತಲಾಂತರಗಳಿಂದ ಬದಲಾಗದೇ ಬಂದಿರುವಂತಹ ಸಾಂಸ್ಕೃತಿಕ ಚೌಕಟ್ಟು, ಸಮಯದ ಮಿತಿ ಹಾಗೂ ಮಹಿಳಾ ಪ್ರತಿನಿಧಿಗಳು ತಮ್ಮ ವಾರ್ಡ್‌ಗಳಿಗೆ ಒಬ್ಬಂಟಿಗಳಾಗಿ ಹೋಗಬಾರದು ಎಂಬ ಸಾಂಪ್ರದಾಯಿಕ ನಿಲುವುಗಳು, ಸುತ್ತಲಿನ ಪರಿಸರದ ವರ್ತನೆ ವಿಶೇಷವಾಗಿ ನೆರೆಹೊರೆಯುವರು, ಕುಟುಂಬದ ಸದಸ್ಯರು ಮಹಿಳೆಯರು ಮನೆಯ ಚೌಕಟ್ಟಿನೊಳಗೆ ಸೀಮಿತವಾಗಬೇಕೆಂಬ ಸಂಪ್ರದಾಯಶೀಲತೆ ಮಹಿಳೆಯರನ್ನು ಜನಪ್ರತಿನಿಧಿಯಾಗಿ ಯಶಸ್ವಿಯಾಗುವುದಕ್ಕೆ ಪ್ರಮುಖ ಅಡೆತಡೆಯಾಗಿದೆ ಎಂಬ ಅಂಶದ ಮೇಲೆ ಅಧ್ಯಯನವು ಬೆಳಕು ಚೆಲ್ಲುತ್ತದೆ. ಪಂಚಾಯತ್ ಸಭೆಗಳಲ್ಲಿ ಮಹಿಳಾ ಪ್ರತಿನಿಧಿಗಳು ಪ್ರಮುಖವಾದ ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದರೂ, ಅದನ್ನು ಕುಹಕದಿಂದ ಪುರುಷ ಸದಸ್ಯರು ಸಂಪೂರ್ಣವಾಗಿ ನಿರ್ಲಕ್ಷಿಸಿ ಯಾವುದೇ ರೀತಿಯ ಪ್ರೋತ್ಸಾಹವನ್ನು ನೀಡದಿರುವುದು ಮಹಿಳಾ ಪ್ರತಿನಿಧಿಗಳ ರಾಜಕೀಯ ಭವಿಷ್ಯ ಮಸುಕಾಗುವುದಕ್ಕೆ ಕಾರಣವಾಗಿರುತ್ತದೆ. ಇದೇ ರೀತಿಯಲ್ಲಿ ಮಹಿಳಾ ಪ್ರತಿನಿಧಿಗಳು ಸ್ಥಾಯಿ ಸಮಿತಿಗಳ ಅಥವಾ ಪಂಚಾಯತ್‌ನ ಅಧ್ಯಕ್ಷರಾಗಿದ್ದರೂ ಕೂಡಾ ಆಡಳಿತಶಾಹಿ ವ್ಯವಸ್ಥೆ ಹೊಂದಿರುವ ನಿರ್ಲಕ್ಷ್ಯ ಮತ್ತು ತಾರತಮ್ಯದ ಧೋರಣೆ ಇವರನ್ನು

ಯಶಸ್ವಿಯಾಗಿ ಕಾರ್ಯನಿರ್ವಹಿಸುವಲ್ಲಿ ತಡೆಯನ್ನುಂಟು ಮಾಡಿರುತ್ತದೆ. ಯಶಸ್ವಿಯಾಗಿ ಕಾರ್ಯನಿರ್ವಹಿಸಿದರೂ ಸಮೂಹ ಮಾಧ್ಯಮಗಳು ಮತ್ತು ಸಮಾಜ ಅವರ ಸಾಧನೆಗೆ ಹೆಚ್ಚು ಮಹತ್ವವನ್ನು ನೀಡದಿರುವುದು ಇವರುಗಳ ರಾಜಕೀಯ ಸಹಭಾಗಿತ್ವಕ್ಕೆ ಇರುವ ಪ್ರಮುಖ ಅಡೆತಡೆಗಳು ಎಂಬುದಾಗಿ ಅಧ್ಯಯನವು ಕಂಡುಕೊಂಡಿರುತ್ತದೆ. ಪುರುಷ ಪ್ರಧಾನ ಸಮಾಜದ ದಬ್ಬಾಳಿಕೆ ಮತ್ತು ಸಾಮಾಜಿಕ ಅಡೆತಡೆಯಿಂದಾಗಿ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಆಸಕ್ತಿ ತೋರಿಸದಿರುವುದು ಕ್ಷೇತ್ರಕಾರ್ಯದಲ್ಲಿ ಗಮನಿಸಿದ ಅಂಶವಾಗಿದೆ. ಸಂದರ್ಶಿತ ಪುರುಷ ಪ್ರತಿನಿಧಿಗಳು ವಾರ್ಡ್ ಸಮಸ್ಯೆಗಳನ್ನು ಪ್ರತಿನಿಧಿಸುವುದರಲ್ಲಿ ಮಹಿಳಾ ಪ್ರತಿನಿಧಿಗಳು ವಿಫಲರಾಗಿರುತ್ತಾರೆ ಹಾಗೂ ಸದಸ್ಯರಾಗಿ ಸಕ್ರಿಯವಾಗಿ ಕಾರ್ಯನಿರ್ವಹಿಸುವುದಕ್ಕೆ ಅವರಿಂದ ಸಾಧ್ಯವಾಗುತ್ತಿಲ್ಲ. ಇದಕ್ಕೆ ಅವರ ಕೌಟುಂಬಿಕ ಹಿನ್ನೆಲೆ, ಆರ್ಥಿಕ ಸ್ಥಿತಿಗತಿ ಮತ್ತು ರಾಜಕೀಯ ಇಚ್ಛಾಶಕ್ತಿಯ ಕೊರತೆ ಪ್ರಮುಖ ಕಾರಣವಾಗಿರುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಮಹಿಳೆಯರ ಸಹಭಾಗಿತ್ವವನ್ನು ಸುಧಾರಿಸುವ ಕೆಲವೊಂದು ಕ್ರಮಗಳು ಮತ್ತು ಶಿಫಾರಸ್ಸುಗಳನ್ನು ನೀಡುವುದು ನಾಲ್ಕನೆಯ ಉದ್ದೇಶದ ಫಲಿತವಾಗಿದೆ. ಮಹಿಳಾ ಪ್ರತಿನಿಧಿಗಳಿಗೆ ರಾಜಕೀಯವಾಗಿ ಸಮಾನ ಅವಕಾಶವನ್ನು ಒದಗಿಸುವುದರ ಜೊತೆಯಲ್ಲಿ ಕಾರ್ಯನಿರ್ವಹಿಸುವುದಕ್ಕೆ ಬೇಕಾದ ಪೂರಕ ವಾತಾವರಣವನ್ನು ಸೃಷ್ಟಿಸುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. 73ನೇ ಸಾಂವಿಧಾನಿಕ ತಿದ್ದುಪಡಿಯು ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ 33% ಮೀಸಲಾತಿಯನ್ನು ನೀಡಿರುವುದು ಅವರುಗಳ ಸಬಲೀಕರಣಕ್ಕೆ ಮತ್ತು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಸರಕಾರ ತೆಗೆದುಕೊಂಡ ಒಂದು ಕ್ರಾಂತಿಕಾರಿ ಕ್ರಮವಾಗಿರುತ್ತದೆ. ಮೀಸಲಾತಿ ಅವಕಾಶವನ್ನು ಸಮಾಜದ ತಳಸ್ತರದ ಜನರು ಸರಿಯಾಗಿ ಬಳಸುವಂತೆ ಸರಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಮಹಿಳೆಯರಿಗೆ ರಾಜಕೀಯ ಸಹಭಾಗಿತ್ವಕ್ಕೆ ಸಮಾನ ಅವಕಾಶಗಳನ್ನು ಕಲ್ಪಿಸುವ ಜೊತೆಗೆ ಮುಕ್ತವಾಗಿ ಮತ್ತು ನಿರ್ಭೀತಿಯಿಂದ ಕಾರ್ಯನಿರ್ವಹಿಸುವ ವಾತಾವರಣ ಸೃಷ್ಟಿಸಬೇಕು. ಅನಕ್ಷರಸ್ಥರು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಹೊಂದಿದವರು ಪ್ರಸ್ತುತ ಸ್ಥಳೀಯ ಸಂಸ್ಥೆಗಳಲ್ಲಿ ಆಯ್ಕೆಯಾಗುವುದರಿಂದ ಅವರುಗಳು ಸಮರ್ಥವಾಗಿ ಕಾರ್ಯನಿರ್ವಹಿಸುವುದಕ್ಕೆ ತರಬೇತಿ ಮತ್ತು ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಬೇಕು. ಮಹಿಳೆಯರಿಗೆ ರಾಜಕೀಯ ಸಹಭಾಗಿತ್ವದಲ್ಲಿ ಶಿಕ್ಷಣ, ರಾಜಕೀಯ ಅರಿವು, ಕೌಶಲ್ಯ, ಚಲನಶೀಲತೆ ಇತ್ಯಾದಿಗಳನ್ನು ಒದಗಿಸಿದರೆ ಅವರುಗಳು ತಮ್ಮ ಪಾತ್ರ ಮತ್ತು ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಬಹುದು. ವಾಸ್ತವಿಕವಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಪ್ರಭಾವವನ್ನು ಬೀರುತ್ತವೆ.

ಆದುದರಿಂದ ತಳಮಟ್ಟದ ಚುನಾವಣೆ ಪಕ್ಷಾತೀತವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಸ್ಥಳೀಯ ಸಂಸ್ಥೆಗಳನ್ನು ರಚನಾತ್ಮಕವಾಗಿ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ಬಲಪಡಿಸಬೇಕು. ಮಹಿಳಾ ಪ್ರತಿನಿಧಿಗಳು ಸಂವಿಧಾನದತ್ತವಾಗಿ ಪಡೆದ ಅಧಿಕಾರಗಳನ್ನು ಯಾವುದೇ ಹಸ್ತಕ್ಷೇಪವಿಲ್ಲದೆ ಚಲಾಯಿಸುವಂತಹ ಪೂರಕವಾದ ವಾತಾವರಣವನ್ನು ಸೃಷ್ಟಿಸಿದಾಗ ಮಾತ್ರ ಪಂಚಾಯತ್‌ರಾಜ್ ವ್ಯವಸ್ಥೆ ಯಶಸ್ವಿಯಾಗಲು ಸಾಧ್ಯವಾಗುತ್ತದೆ.

73ನೇ ಪಂಚಾಯತ್‌ರಾಜ್ ತಿದ್ದುಪಡಿ ಕಾಯ್ದೆಯ ಪೂರ್ವದಲ್ಲಿ ಕೆಲವೇ ಮಹಿಳೆಯರು ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ಸ್ವಹಿತಾಸಕ್ತಿಯಿಂದ ಮತ್ತು ಒತ್ತಡಕ್ಕೊಳಗಾಗಿ ಭಾಗವಹಿಸುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಪಂಚಾಯತ್‌ರಾಜ್ ತಿದ್ದುಪಡಿ ಕಾಯ್ದೆಯು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಮತ್ತು ಬದುಕನ್ನು ಕ್ರಾಂತಿಕಾರಿಯಾಗಿ ಬದಲಾಯಿಸಿದ ಚಾರಿತ್ರಿಕ ಘಟನೆ ಎಂದು ಹೇಳಬಹುದು. ಈ ತಿದ್ದುಪಡಿಗಳು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿಯ ಬಗ್ಗೆ ಪ್ರತಿಪಾದಿಸಿತು. ಇದು ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಮತ್ತು ಸಹಭಾಗಿತ್ವದಲ್ಲಿ ಮಹತ್ವದ ಬದಲಾವಣೆ ತರುವುದರಲ್ಲಿ ಯಶಸ್ವಿ ಆಗಬಹುದು ಎಂಬುದಾಗಿ ನಿರೀಕ್ಷಿಸಲಾಗಿತ್ತು. ಸಾಹಿತ್ಯ ಪರಾಮರ್ಶನದಲ್ಲಿ ಚರ್ಚಿಸಿದ ಹೆಚ್ಚಿನ ಅಧ್ಯಯನಗಳ ಫಲಿತಗಳು ಈ ಕಾಯ್ದೆಯು ಮಹಿಳೆಯರ ಸಬಲೀಕರಣಗೊಳಿಸದೆ ಪುರುಷ ಪ್ರಧಾನ ಸಮಾಜವು ಅವರ ಮೇಲೆ ಮತ್ತಷ್ಟು ಶೋಷಣೆ ನಡೆಸಲು ಅವಕಾಶ ಮಾಡಿಕೊಟ್ಟಿತು ಎಂಬುದಾಗಿ ಪ್ರತಿಪಾದಿಸುತ್ತದೆ. ಉಡುಪಿ ಜಿಲ್ಲೆಗೆ ಸಂಬಂಧಿಸಿದ ಪ್ರಸ್ತುತ ಅಧ್ಯಯನವು ಇತರ ಅಧ್ಯಯನಗಳಿಗಿಂತ ಭಿನ್ನವಾದ ಫಲಿತಗಳನ್ನು ನೀಡಬಹುದು ಎಂಬುದಾಗಿ ಭಾವಿಸಿಕೊಂಡಿದ್ದರೂ ಭಿನ್ನವಾದ ಫಲಿತಗಳು ದೊರಕಿರುವುದಿಲ್ಲ.

ಭಾರತ ಪ್ರತಿನಿಧಿ ಪ್ರಜಾಪ್ರಭುತ್ವವಿರುವ ರಾಷ್ಟ್ರ. ಇಲ್ಲಿ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದರೂ ಕೇಂದ್ರ ಮತ್ತು ರಾಜ್ಯದ ಶಾಸನಸಭೆಗಳಲ್ಲಿ ಶೇಕಡಾ 10ರಷ್ಟು ಮಹಿಳಾ ಪ್ರತಿನಿಧಿಗಳಿಲ್ಲ. ಇದಕ್ಕೆ ರಾಜಕೀಯ ಪಕ್ಷ ಮಹಿಳೆಯರು ಗೆಲ್ಲುವ ಸಾಧ್ಯತೆ ಕಡಿಮೆ ಎಂದು ಮಹಿಳೆಯರಿಗೆ ಟಿಕೇಟು ನೀಡದೇ ಇರುವುದು ಮತ್ತು ಮಹಿಳೆ ಚುನಾಯಿತರಾದಲ್ಲಿ ಪುರುಷ ಪ್ರಧಾನ ವ್ಯವಸ್ಥೆಗೆ ಧಕ್ಕೆ ಬರಬಹುದೆಂಬ ಆತಂಕ ಪ್ರಮುಖ ಕಾರಣವಾಗಿರುತ್ತದೆ. ಆದರೆ, ಇದೇ ರಾಜಕೀಯ ಪಕ್ಷಗಳು ಸ್ಥಳೀಯ ಸರ್ಕಾರಗಳಲ್ಲಿ ಶೇ.50ರಷ್ಟು ಮೀಸಲಾತಿ ನೀಡಲು ಹಿಂಜರಿಯಲಿಲ್ಲ. ಯಾಕೆಂದರೆ ಬಲಹೀನ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯಿಂದ ಪುರುಷ ಪ್ರಧಾನ ವ್ಯವಸ್ಥೆಗೆ ಅಡ್ಡಿಯಾಗುವುದಿಲ್ಲ. ಅಲ್ಲದೇ ಸ್ಥಳೀಯ ಸರಕಾರಗಳು ಇಂದು ಮೇಲ್‌ಸ್ತರದಲ್ಲಿ ರೂಪಿತವಾದ ಯೋಜನೆಗಳನ್ನು ಜನರಿಗೆ ತಲುಪಿಸುವ ಒಂದು ತಳಸ್ತರದ

ಸಂಸ್ಥೆಯಾಗಿರುತ್ತದೆ. ಅವುಗಳಲ್ಲಿ ಹಣಕಾಸಿನ ವಿಕೇಂದ್ರೀಕರಣ, ಆಡಳಿತ ವಿಕೇಂದ್ರೀಕರಣ ಮತ್ತು ಸಾಂಸ್ಥಿಕ ವಿಕೇಂದ್ರೀಕರಣಗಳಿಲ್ಲ. ಇಲ್ಲಿ ಮಹಿಳಾ ಮೀಸಲಾತಿ ಇದ್ದರೂ ಸಂಸ್ಥೆಗಳು ಬಲಯುತವಾಗಿಲ್ಲ. ಇಂತಹ ರಾಜಕೀಯ ವ್ಯವಸ್ಥೆ ಮಹಿಳೆಯ ಬದುಕಿನ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಅವರ ಪರಿಣಾಮಕಾರಿ ರಾಜಕೀಯ ಸಹಭಾಗಿತ್ವಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಅವಕಾಶವಿಲ್ಲದಿದ್ದಾಗ ಮಹಿಳೆಯರ ಆಸಕ್ತಿಗಳನ್ನು ಪ್ರತಿನಿಧಿಸುವ ಕಾನೂನುಗಳು ಜಾರಿಗೊಳ್ಳುವುದಿಲ್ಲ ಹಾಗೂ ಜಾರಿಗೊಂಡರೂ ಮಹಿಳೆಯರು ಪುರುಷರಿಗೆ ಸರಿಸಮಾನರು ಎಂದು ಯಾವ ಸಮಾಜವೂ ಒಪ್ಪುವುದಿಲ್ಲ ಆದ್ದರಿಂದ ಲಿಂಗ ಅಸಮಾನತೆಯಿದೆ. ಹಾಗಾಗಿ ಮೊಟ್ಟಮೊದಲು ಮಹಿಳೆಯರನ್ನು ಉತ್ತೇಜಿಸುವ ಸರ್ಕಾರದ ಕ್ರಮಗಳಿಗೆ ಸಮಾಜದ ಒಪ್ಪಿಗೆ ಸಿಗಬೇಕು. ಅಲ್ಲದೆ ಸಮಾಜದ ಎಲ್ಲಾ ವಲಯಗಳಲ್ಲೂ ಮಹಿಳೆ ಮತ್ತು ಪುರುಷರೀರ್ವರಲ್ಲಿ ಲಿಂಗಸಂವೇದನೆಯನ್ನು ಬೆಳೆಸಬೇಕು. ಇನ್ನು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ಪರಿಣಾಮಕಾರಿ ರಾಜಕೀಯ ಸಹಭಾಗಿತ್ವಕ್ಕೆ ಸ್ಥಳೀಯ ಸರ್ಕಾರಗಳಲ್ಲಿ ಹಣಕಾಸಿನ ಆಡಳಿತ, ಆಡಳಿತದ ವಿಕೇಂದ್ರೀಕರಣ ಮತ್ತು ಸಾಂಸ್ಥಿಕ ವಿಕೇಂದ್ರೀಕರಣ ಇತ್ಯಾದಿಗಳು ಸಮರ್ಪಕವಾಗಿರಬೇಕು ಮತ್ತು ಈ ಸಂಸ್ಥೆಗಳನ್ನು ಸಮರ್ಥವಾಗಿ, ಪರಿಣಾಮಕಾರಿಯಾಗಿ ಮತ್ತು ಜನಪರ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ರೂಪಿಸಬೇಕು. ರಾಜಕೀಯ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಪ್ರಮಾಣಾತ್ಮಕವಾಗಿ ಹೆಚ್ಚಾದಾಗ ಮಹಿಳಾ ಪಾಲ್ಗೊಳ್ಳುವಿಕೆಯು ಗುಣಾತ್ಮಕವಾಗಿ ಬದಲಾಗಿ ಅವರುಗಳ ರಾಜಕೀಯ ಸಬಲೀಕರಣಕ್ಕೆ ಅವಕಾಶವನ್ನು ನೀಡಿ ಒಂದು ಆರೋಗ್ಯಪೂರ್ಣ ವ್ಯವಸ್ಥೆ ನಿರ್ಮಾಣವಾಗುವ ಸಾಧ್ಯತೆ ಇದೆ ಎಂಬುದು ಅಧ್ಯಯನ ಕ್ಷೇತ್ರದಲ್ಲಿ ಕಂಡುಕೊಂಡ ಅಂಶವಾಗಿರುತ್ತದೆ.

ಪರಾಮರ್ಶನ ಬರಹಗಳು

ಪರಾಮರ್ಶನ ಬರಹಗಳು

1. ಅಜಿತ್ ಪಾಲ್, "ವುಮೆನ್ಸ್ ಪಾರ್ಟಿಸಿಪೇಷನ್ ಎಟ್ ಗ್ರಾಸ್ ರೂಟ್ ಲೆವೆಲ್", ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ, ವಾಲ್ಯೂಮ್ 47, ನಂ. 12, 2009.
2. ಅಬ್ದುಲ್ ಅಜೀಜ್ ಮತ್ತು ಡೇವಿಡ್ ಆರ್ನಾಲ್ಡ್(ಸಂ.), 'ಡೀಸೆಂಟ್ರಲೈಜಡ್ ಗವರ್ನೆನ್ಸ್ ಇನ್ ಏಶಿಯನ್ ಕಂಟ್ರೀಸ್', ಸೇಜ್ ಪಬ್ಲಿಕೇಶನ್ಸ್, ನ್ಯೂಡೆಲ್ಲಿ, 1996.
3. ಅಮರ್ತ್ಯಸೇನ್, ದ ಎಕನಾಮಿಕ್ಸ್ ಆಫ್ ಹ್ಯಾಪಿನೆಸ್ ಎಂಡ್ ಕೆಪೆಬಿಲಿಟಿ. ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 2008.
4. ಅಮರ್ತ್ಯಸೇನ್, ಜೆಂಡರ್ ಆ್ಯಂಡ್ ಕೋ-ಆಪರೇಟಿವ್ ಕಾನ್‌ಫ್ಲಿಕ್ಟ್ಸ್, ಐರನಿ ಟಿಂಕರ್ (ಸಂ.), ಪರ್‌ಸಿಸ್ಟಿಂಗ್ ಇನ್‌ಇಕ್ವಾಲಿಟೀಸ್,, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.
5. ಅಮೃತಾ ಬಿ. ಎಸ್., "ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ", ಕರ್ನಾಟಕ ಜರ್ನಲ್ ಆಫ್ ಪೊಲಿಟಿಕ್ಸ್, 2012.
6. ಆರ್.ಕೆ. ಶರ್ಮಾ, ಎಂಪವರಿಂಗ್ ವುಮೆನ್ ತ್ರೂ ಸೆಲ್ಫ್‌ಹೆಲ್ಪ್ ಗ್ರೂಪ್, ಎಂ.ಪಿ. ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2004.
7. ಆರ್.ಪಿ. ವರ್ಮಾ, ಪೀಪಲ್ಸ್ ಪಾರ್ಟಿಸಿಪೇಷನ್ ಇನ್ ಇಂಡಿಯನ್ ಪಾಲಿಟಿಕ್ಸ್, ರಜತ್ ಪಬ್ಲಿಕೇಷನ್ಸ್‌ಮ್, ನ್ಯೂಡೆಲ್ಲಿ, 2002.
8. ಆರ್. ಸೆಯಾನ್, ಇನ್ ಲೆಜಿಸ್ಲೇಷನ್ ಎಂಡ್ ಜುಡಿಷಿಯಲ್ ಇನಿಷಿಯೇಟಿವ್ಸ್ ಟುವಾರ್ಡ್ಸ್ ವುಮೆನ್ ಎಂಪವರ್‌ಮೆಂಟ್, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2002.
9. ಆರುನಿಮ ಬಸು, ವುಮೆನ್ ಎಂಪವರ್‌ಮೆಂಟ್ ಇನ್ ಇಂಡಿಯಾ, ಅನ್‌ಮೋಲ್ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ನ್ಯೂಡೆಲ್ಲಿ, 2003.
10. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಉಡುಪಿ – ಆಧಾರ: ಡಿಸ್ಟ್ರಿಕ್ಟ್ ಹೆಲ್ತ್ ಆರ್ಗನೈಸೇಷನ್, 2011–2012.
11. ಆಶಾ ರಮೇಶ್ ಮತ್ತು ಭಾರತಿ ಆಲಿ, ಟುವರ್ಡ್ಸ್ ಪೊಲಿಟಿಕಲ್ ಎಂಪವರ್‌ಮೆಂಟ್–ಪ್ರೊಫೈಲಿಂಗ್ ಎಲೆಕ್ಟೆಡ್ ವುಮೆನ್ ಮೆಂಬರ್ಸ್ ಇನ್ ಕರ್ನಾಟಕ ಎಂಡ್ ಗುಜರಾತ್, ಬುಕ್ಸ್ ಫಾರ್ ಚೇಂಜ್, ನ್ಯೂಡೆಲ್ಲಿ 2001.
12. ಅರ್ಶಿ ಪರ್ವೀನ್. ಸೋಷಿಯಲ್ ಜಸ್ಟೀಸ್ ಆ್ಯಂಡ್ ಇಂಡಿಯನ್ ವುಮೆನ್. ಇಂಡಿಯನ್ ಪಬ್ಲಿಷರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್, ನ್ಯೂಡೆಲ್ಲಿ, 2008.
13. ಆರ್. ಕೆ. ಮಂಗಳಾ. 'ನಾಯಕತ್ವದ ಹೊಸ್ತಿಲಲ್ಲಿ ಮಹಿಳೆ', ಪ್ರಜಾವಾಣಿ. ಸಾಪ್ತಾಹಿಕ ಪುರವಣಿ. 5ನೇ ಮಾರ್ಚ್, 2000.
14. ಆರ್. ಸೆಯಾನ್. 'ಲೆಜಿಸ್ಲೇಟಿವ್ ಎಂಡ್ ಜ್ಯುಡಿಷಿಯಲ್ ಇನಿಷಿಯೇಟಿವ್ಸ್ ಟುವರ್ಡ್ಸ್ ವುಮೆನ್ ಎಂಪವರ್‌ಮೆಂಟ್'. ಎಚ್‌ಟಿಟಿಪಿ//:ಡಬ್ಲ್ಯು.ಡಬ್ಲ್ಯು.ಡಬ್ಲ್ಯು.ಜೆಸ್ಟೋರ್.ಓಆರ್‌ಜಿ. ಅಕ್ಟೋಬರ್ 6, 2013.
15. ಆರ್. ಸಿ. ಅಗರ್‌ವಾಲ್. ಪೊಲಿಟಿಕಲ್ ಥಿಯರಿ. ಪ್ರಿನ್ಸಿಪಲ್ಸ್ ಆಫ್ ಪೊಲಿಟಿಕಲ್ ಸಯನ್ಸ್. ಎಸ್. ಚಂದ್ ಆ್ಯಂಡ್ ಕಂಪೆನಿ, ನ್ಯೂಡೆಲ್ಲಿ, 2005.

16. ಆರ್. ಇಂದಿರಾ, "ಪ್ರಜಾಸತ್ತಾತ್ಮಕ ಅಧಿಕಾರ ವಿಕೇಂದ್ರೀಕರಣ ಮತ್ತು ಮಹಿಳಾ ಸಬಲೀಕರಣ". ಯೋಜನಾ, ಅಭಿವೃದ್ಧಿ ಮಾಸಪತ್ರಿಕೆ, ಆಗೋಸ್ಟ್, 2012.
17. ಆಶೀನ್ ರಾಯ್, ವುಮೆನ್ ಇನ್ ಪವರ್ ಆ್ಯಂಡ್ ಡಿಸಿಷನ್ ಮೇಕಿಂಗ್, ರಜತ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2003.
18. ಆಶಾ ರಮೇಶ್ ಮತ್ತು ಭಾರ್ತಿ ಅಲಿ, ರಿಸರ್ವೇಷನ್ ಟುವಾರ್ಡ್ಸ್ ಪೊಲಿಟಿಕಲ್ ಎಂಪವರ್‌ಮೆಂಟ್, ಕಾನ್ಸೆಪ್ಟ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2002.
19. ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸಯನ್ಸಸ್ – ವರದಿ 2000, ನ್ಯೂಡೆಲ್ಲಿ, 2000.
20. ಉಡುಪಿ ಜಿಲ್ಲಾ ಪಂಚಾಯತ್, ಉಡುಪಿ ಜಿಲ್ಲಾ ಅಂಕಿ ಅಂಶಗಳು 2011–2012, ಉಡುಪಿ, 2012.
21. ಉಡುಪಿ ಜಿಲ್ಲಾ ಅಂಕಿ ಅಂಶಗಳ ನೋಟ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ಉಡುಪಿ, 2014.
22. ಉಡುಪಿ ಜಿಲ್ಲಾ ಪಂಚಾಯತ್‌ನ ದಾಖಲೆಗಳಿಂದ ಪಡೆದ ಅಂಕಿಅಂಶಗಳು, 2014.
23. ಉಡುಪಿ ಜಿಲ್ಲೆ–ಒಂದು ಅವಲೋಕನ, 2013–2014, ಡಿ.ಎಚ್.ಓ., 2014.
24. ಉಡುಪಿ ಡಿಸ್ಟ್ರಿಕ್ಟ್ ಅಟ್ ಗ್ಲ್ಯಾನ್ಸ್, ಡಿಸ್ಟ್ರಿಕ್ಟ್ ಸ್ಟ್ಯಾಟಿಸ್ಟಿಕ್ಸ್ ಆಫೀಸರ್, ಉಡುಪಿ, 2013–14.
25. ಉಪ್ಪೂರು ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13.
26. ಎ. ಸಿ. ಕಪೂರ್, ಇಂಡಿಯನ್ ಗವರ್ನಮೆಂಟ್ ಆ್ಯಂಡ್ ಪೊಲಿಟಿಕ್ಸ್, 13ನೇ ಎಡಿಷನ್, ಎಸ್. ಚಂದ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1997.
27. ಎ. ಶ್ರೀಧರ, ಪಂಚಾಯತ್ ಸಂಸ್ಥೆಯ ಸಾಮಾಜಿಕ ಆಯಾಮಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.
28. ಎನ್. ದೇಶಪಾಂಡೆ, ಪಾರ್ಟಿಸಿಪೇಷನ್ ಆಫ್ ವುಮೆನ್ ಇನ್ ಪೊಲಿಟಿಕ್ಸ್, ಇಂಟರ್–ಇಂಡಿಯಾ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1995.
29. ಎನ್. ಬಿರಾದಾರ್, 'ವರ್ಕಿಂಗ್ ಆಫ್ ಜಿಲ್ಲಾ ಪಂಚಾಯತ್ ಇನ್ ಕರ್ನಾಟಕ–ಎ ಕೇಸ್ ಸ್ಟಡಿ ಆಫ್ ಬಿಜಾಪುರ', ಅಪ್ರಕಟಿತ ಪಿಎಚ್. ಡಿ ಗ್ರಂಥ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 2005.
30. ಎಂ. ಉಷಾ, ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004.
31. ಎಂ. ಚಂದ್ರ ಪೂಜಾರಿ, ದೇಶೀಯತೆಯ ನೆರಳಿನಲ್ಲಿ ವಿಕೇಂದ್ರೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2001.
32. ಎಂ. ಚಂದ್ರ ಪೂಜಾರಿ, ಇನ್‌ಸ್ಟಿಟ್ಯೂಷನ್ಸ್ ಡಿಸೆಂಟ್ರಲೈಸೇಷನ್ ಆ್ಯಂಡ್ ಡೆವಲಪ್‌ಮೆಂಟ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.
33. ಎಂ. ಚಂದ್ರ ಪೂಜಾರಿ, ಅಭಿವೃದ್ಧಿ ಮತ್ತು ರಾಜಕೀಯ, ಪಲ್ಲವ ಪ್ರಕಾಶನ, ಚನ್ನಪಟ್ಟಣ, 2014.
34. ಎಂ. ಚಂದ್ರ ಪೂಜಾರಿ, 'ಆರ್ಥಿಕ ಬಲದ ಕಲ್ಪನೆ ಮತ್ತು ಸಾಮಾಜಿಕ ಅಸಾಮಾನ್ಯ', ವಿಜಯ ಕರ್ನಾಟಕ, ಸೆಪ್ಟೆಂಬರ್ 21, 2012.

35. ಎಂ. ಚಂದ್ರ ಪೂಜಾರಿ, *ಸಂಶೋಧನೆ: ಏನು? ಏಕೆ? ಹೇಗೆ?*, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009.
36. ಎಂ. ಚಂದ್ರ ಪೂಜಾರಿ, "ಪ್ರಗತಿಗಾಗಿ ಬಲಾಢ್ಯರ ಗುರುತಿನ ರಾಜಕೀಯ". ಕನ್ನಡಪ್ರಭ ದಿನಪತ್ರಿಕೆ, 5ನೇ ಅಕ್ಟೋಬರ್, 2016.
37. ಎಂ. ಚಂದ್ರ ಪೂಜಾರಿ, *ಮಹಿಳೆ ಮತ್ತು ಸಂಸ್ಕೃತಿ–ಅಭಿವೃದ್ಧಿ ಮತ್ತು ರಾಜಕೀಯ*, ಪಲ್ಲವ ಪ್ರಕಾಶನ, ಚನ್ನಪಟ್ಟಣ, 2014.
38. ಎಂ. ಚಂದ್ರ ಪೂಜಾರಿ, *ಮಹಿಳೆ ಮತ್ತು ಅಭಿವೃದ್ಧಿ ಇನ್ ಅಭಿವೃದ್ಧಿ ಮತ್ತು ರಾಜಕೀಯ*, ಪಲ್ಲವ ಪ್ರಕಾಶನ, ಚನ್ನಪಟ್ಟಣ, 2014.
39. ಎಂ ಚಂದ್ರ ಪೂಜಾರಿ, 'ಟ್ರೆಂಡ್ಸ್ ಇನ್ ಎಂಟರ್‌ಪ್ರಿನ್ಯೂರ್‌ಷಿಪ್ ಎಂಡ್ ರೀಜನಲ್ ಡೆವಲಪ್‌ಮೆಂಟ್–ಎ ಸ್ಟಡೀ ವಿದ್ ರೆಫರೆನ್ಸ್ ಟು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್', ಆ್ಯನ್ ಅನ್‌ಪಬ್ಲಿಷ್‌ಡ್ ಥೀಸಿಸ್ ಸಬ್‌ಮಿಟೆಡ್ ಟು ಮಂಗಳೂರ್ ಯುನಿವರ್ಸಿಟಿ ಫಾರ್ ದ ಅವಾರ್ಡ್ ಆಫ್ ಪಿ.ಎಚ್.ಡಿ. ಡಿಗ್ರಿ, 1995.
40. ಎಂ. ಚಂದ್ರ ಪೂಜಾರಿ, *ಸಮಾಜ ಸಂಶೋಧನೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2011.
41. ಎಂ. ಚಂದ್ರ ಪೂಜಾರಿ, ಸಮುದಾಯ ಮತ್ತು ಸಹಭಾಗಿತ್ವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.
42. ಎಂ. ಚಂದ್ರ ಪೂಜಾರಿ, *ಸಂಶೋಧಕರು ಮತ್ತು ಕ್ಷೇತ್ರ ಕಾರ್ಯ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005.
43. ಎಂ. ಚಂದ್ರ ಪೂಜಾರಿ, *ರಾಜಕೀಯ ಬಡತನ*, ಸಿದ್ಧಾರ್ಥ ಪ್ರಕಾಶನ, ಹೊಸ್ಪೇಟ್, 2008.
44. ಎಂ. ದಿನೇಶ್ ಹೆಗ್ಡೆ, 'ಹಿಂದುಳಿದ ವರ್ಗಗಳಲ್ಲಿ ರಾಜಕೀಯ ಅನನ್ಯತೆಯ ಹುಡುಕಾಟ: ದಕ್ಷಿಣ ಕನ್ನಡ ಬಿಲ್ಲವರ ಒಂದು ಅಧ್ಯಯನ', ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಅಪ್ರಕಟಿತ ಸಂಶೋಧನಾ ಗ್ರಂಥ, 2002.
45. ಎಂ. ದಿನೇಶ್ ಹೆಗ್ಡೆ, "ಅಭಿವೃದ್ಧಿ ಅಂಚಿನ ಸಮುದಾಯಗಳು: ಹಿಂದುಳಿದ ವರ್ಗಗಳ ಒಂದು ಅಧ್ಯಯನ", ಅಭಿವೃದ್ಧಿ ಅಧ್ಯಯನ, ಎಂ. ಚಂದ್ರ ಪೂಜಾರಿ (ಸಂ.), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007.
46. ಎಮ್. ಎನ್. ಶ್ರೀನಿವಾಸ್, *ಸೋಶಿಯಲ್ ಚೇಂಜ್ ಇನ್ ಮಾಡರ್ನ್ ಇಂಡಿಯಾ*, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಆಕ್ಸ್‌ಫರ್ಡ್, 1996.
47. ಎಮ್‌ಡಿ. ಮಸ್ತಾನ್‌ವಾಲಿ, ವುಮೆನ್ ಆ್ಯಂಡ್ ಪೊಲಿಟಿಕ್ಸ್, ಅನ್ಮೋಲ್ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ನ್ಯೂಡೆಲ್ಲಿ, 2002.
48. ಎಸ್. ಅನಂತ್, "ಮಹಿಳಾ ಸಬಲೀಕರಣ ಮತ್ತು ಭಾರತ ಸಂವಿಧಾನ", ಶೈಲಜಾ ಹಿರೇಮಠ (ಸಂ.), ಮಹಿಳಾ ಅಧ್ಯಯನ, ಸಂಪುಟ 9, ಸಂಚಿಕೆ 1, ಜನವರಿ–ಜೂನ್ 2007, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007.
49. ಎಸ್. ಎಸ್. ಅಂಜೇಡ್ಕರ್, "ಪಂಚಾಯತ್‌ರಾಜ್ ಆ್ಯಂಡ್ ಗ್ರಾಸ್‌ರೂಟ್ ಪೊಲಿಟಿಕ್ಸ್: ಇಷ್ಯೂಸ್ ಆ್ಯಂಡ್ ಪರ್ಸ್‌ಪೆಕ್ಟಿವ್ಸ್", *ಜರ್ನಲ್ ಆಫ್ ಸೋಷಿಯಲ್ ಡೆವಲಪ್‌ಮೆಂಟ್ ಆ್ಯಂಡ್ ಜಸ್ಟಿಸ್*, ವಾಲ್ಯೂಮ್ 6(3), 2004.

50. ಎಸ್. ಕೆ. ಝಾ, "ಸೋಷಿಯಲ್ ಟ್ರಾನ್ಸ್‌ಫಾರ್ಮೇಷನ್ ಆ್ಯಂಡ್ ರೂರಲ್ ಡೆವಲಪ್‌ಮೆಂಟ್ ಥ್ರೂ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್" – ಪ್ರೊಸೀಡಿಂಗ್ಸ್ ಆಫ್ ದ ಸೆಮಿನಾರ್ ಆನ್ ಫಿಫ್ಟಿ ಇಯರ್ಸ್ ಆಫ್ ಪಂಚಾಯತ್‌ರಾಜ್ ಆ್ಯಂಡ್ ರೂರಲ್ ಡೆವಲಪ್‌ಮೆಂಟ್, ಜೆ.ಪಿ.ಸಿಂಗ್ (ಸಂ.), ಮಾನಕ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1998.

51. ಎಸ್. ಗೋವಿಂದೇ ಗೌಡ ಹಾಗೂ ಇತರರು, "ಡೆವಲಪ್‌ಮೆಂಟಲ್ ರೋಲ್ ಆಫ್ ವುಮೆನ್ ಮೆಂಬರ್ಸ್ ಆಫ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್: ಎ ಸ್ಟಡಿ ಇನ್ ಕರ್ನಾಟಕ", ಜರ್ನಲ್ ಆಫ್ ರೂರಲ್ ಡೆವಲಪ್‌ಮೆಂಟ್, ವಾಲ್ಯೂಮ್ 15, ನಂ. 2, ಎನ್.ಐ.ಡಿ, 1996.

52. ಎಸ್. ನಾಗೇಂದ್ರ, ರೋಲ್ ಆಫ್ ವುಮೆನ್ ಇನ್ ಪಂಚಾಯತ್‌ರಾಜ್, ಎಬಿಡಿ ಪಬ್ಲಿಷರ್ಸ್, ಜೈಪುರ, 2006.

53. ಎಸ್. ಬಿ. ವರ್ಮಾ, ಸ್ಟೇಟಸ್ ಆಫ್ ವುಮೆನ್ ಇನ್ ಇಂಡಿಯಾ, ಸ್ಟರ್ಲಿಂಗ್ ಪಬ್ಲಿಷರ್ಸ್, ನ್ಯೂಡೆಲ್ಲಿ, 1999.

54. ಎಸ್. ಬಿ. ವರ್ಮಾ, ಸ್ಟೇಟಸ್ ಆಫ್ ವುಮೆನ್ ಇನ್ ಇಂಡಿಯಾ, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2005.

55. ಎಸ್.ಬಿ. ವರ್ಮಾ ಮತ್ತು ವೈ.ಟಿ. ಪವಾರ್, ರೂರಲ್ ಎಂಪವರ್‌ಮೆಂಟ್, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2009.

56. ಎಸ್. ಮಲಿಕ್, ಪಂಚಾಯತ್‌ರಾಜ್: ದ ರೂರಲ್ ಟ್ರಾನ್ಸ್‌ಫಾರ್ಮೇಷನ್ ಇನ್ ದ ಸ್ಟೇಟ್ ಆಫ್ ಹರಿಯಾಣ, ಅಲೆಕ್ ಪಬ್ಲಿಷರ್ಸ್, ಜೈಪುರ, 2002.

57. ಎಸ್. ವಾಲಿ, ಬಿ.ಕೆ. ಅನಿತ, ಅನಿತ ಗುರುಮೂರ್ತಿ, ಸ್ಟೇಟಸ್ ಆಫ್ ರೂರಲ್ ವುಮೆನ್ ಇನ್ ಕರ್ನಾಟಕ, ಎನ್.ಐ.ಎ.ಸಿ, ಬೆಂಗಳೂರು, 1998.

58. ಎಸ್. ವಿ. ಶಿಂಧೆ, ವುಮೆನ್ ಇನ್ ಇಂಡಿಯನ್ ಪೊಲಿಟಿಕ್ಸ್, ಅನ್ಮೋಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1994.

59. ಎಸ್. ನರಸಿಂಹನ್, ವುಮೆನ್ಸ್ ರೋಲ್ ಇನ್ ಗ್ರಾಮಸಭಾ, ರಾಮ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1997.

60. ಒಡೆಯರ್ ಡಿ. ಹೆಗ್ಗಡೆ, ಭಾರತದಲ್ಲಿ ಮಹಿಳಾ ರಾಜಕೀಯ ಪ್ರಾತಿನಿಧ್ಯ, ಅರ್ಜುನ್ ಪಬ್ಲಿಷಿಂಗ್ ಹೌಸ್, ಮೈಸೂರು, 2007.

61. ಕರ್ನಾಟಕದಲ್ಲಿ ಗ್ರಾಮ ಸ್ವರಾಜ್ಯದ ಪಥ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ ತಿದ್ದುಪಡಿ ಸಮಿತಿಯ ವರದಿ, ಕರ್ನಾಟಕ ಸರಕಾರ, ನವಂಬರ್ 2014.

62. ಕರ್ನಾಟಕ ರಾಜ್ಯದ ಮಾನವ ಅಭಿವೃದ್ಧಿ ವರದಿ, 2005, ಸರಕಾರಿ ಮುದ್ರಣಾಲಯ, ಕರ್ನಾಟಕ ಸರಕಾರ, 2005.

63. ಕರ್ನಾಟಕ ಸರಕಾರ, ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2008, ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, 2008.

64. ಕರ್ನಾಟಕ ಸರಕಾರ, ಉಡುಪಿ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, 2014, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, 2014.

65. ಕರ್ನಾಟಕ ಸರಕಾರ, ಉಡುಪಿ ಜಿಲ್ಲಾ ಪಂಚಾಯತ್ ವರದಿ – ಆಧಾರ 2001 ಮತ್ತು 2011ರ ಜನಗಣತಿ, ಜಿಲ್ಲಾ ಪಂಚಾಯತ್, ಉಡುಪಿ, 2012.
66. ಕರೀನಾ ಕೆ. ಕಪಾಡಿಯಾ, ಜೆಂಡರ್ ರಿಲೇಷನ್ಸ್, ಪೇಪರ್ಸ್ ಸೀರೀಸ್ ಫೌಂಡೇಷನ್ ಫಾರ್ ಎಡ್ವಾನ್ಸಡ್ ಸ್ಟಡಿ, ಟೋಕಿಯೋ, 1997.
67. ಕಿರಣ್ ದೇವೇಂದ್ರ, ಸ್ಟೇಟಸ್ ಆ್ಯಂಡ್ ಪೊಸಿಶನ್ ಆಫ್ ವುಮೆನ್ ಇನ್ ಇಂಡಿಯಾ, ವಿಕಾಸ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 1990.
68. ಕುಮಾರ್ ಎ., ಇಂಡಿಯನ್ ವುಮೆನ್ ಇನ್ ಪೊಲಿಟಿಕ್ಸ್, ಅನ್ಮೋಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2006.
69. ಕೃಷ್ಣ ಕೊಥಾಯ್, 'ರಿಪೋರ್ಟ್ ಆಫ್ ದ ಆ್ಯಕ್ಷನ್ ರಿಸರ್ಚ್ ಆನ್ ದಿ ಮ್ಯಾನೇಜ್‌ಮೆಂಟ್ ಆಫ್ ಪಂಚಾಯತ್ಸ್ ಇನ್ ಉಡುಪಿ ಡಿಸ್ಟ್ರಿಕ್ಟ್, ಮಿನಿಸ್ಟ್ರಿ ಆಫ್ ರೂರಲ್ ಡೆವಲಪ್‌ಮೆಂಟ್', ಗವರ್ನ್‌ಮೆಂಟ್ ಆಫ್ ಇಂಡಿಯಾ, ನ್ಯೂಡೆಲ್ಲಿ, 2002.
70. ಕೃಷ್ಣ ಕೊಥಾಯ್, ಉಡುಪಿ ಜಿಲ್ಲೆಯ ಶತಮಾನದ ದೃಷ್ಟಿಕೋನ, ಡಿಪಾರ್ಟ್‌ಮೆಂಟ್ ಆಫ್ ಪಂಚಾಯತ್‌ರಾಜ್, ಮಿನಿಸ್ಟ್ರ ಆಫ್ ರೂರಲ್ ಡೆವಲಪ್‌ಮೆಂಟ್, ಭಾರತ ಸರಕಾರ, 2002.
71. ಕೆ. ಜಯಲಕ್ಷ್ಮೀ, "ವುಮೆನ್ ಆ್ಯಂಡ್ ಪೊಲಿಟಿಕಲ್ ಪಾರ್ಟಿಸಿಪೇಷನ್ ಇನ್ ಇಂಡಿಯಾ", ಜರ್ನಲ್ ಆಫ್ ರೂರಲ್ ಡೆವಲಪ್‌ಮೆಂಟ್, ವಾಲ್ಯೂಮ್ 19, ನಂ. 4, ಡಿವಿಷನ್ ಮಿನಿಸ್ಟ್ರಿ ಆಫ್ ಐ & ಟಿ, 1999.
72. ಕೆ. ಎಸ್. ಸಕ್ಸೇನಾ, ವುಮೆನ್ಸ್ ಪೊಲಿಟಿಕಲ್ ಪಾರ್ಟಿಸಿಪೇಷನ್ ಇನ್ ಇಂಡಿಯಾ, ಸಬ್‌ಲೈಮ್ ಪಬ್ಲಿಕೇಷನ್ಸ್, ಜೈಪುರ, 1999.
73. ಕೆ. ಜಿ. ಶಿವರಾಮ ಕೃಷ್ಣನ್, "ಜ್ಯುಡೀಶಿಯಲ್ ಸೆಟ್‌ಬ್ಯಾಕ್ ಫಾರ್ ಲೋಕಲ್ ಬಾಡೀಸ್", ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, 45, ನಂ. 32, ಆಗಸ್ಟ್ 7, 2010.
74. ಕೆ. ಮಾನಿಕ್ಯಂಬಾ, ವುಮೆನ್ ಇನ್ ಪಂಚಾಯತ್‌ರಾಜ್ ಸ್ಟ್ರಕ್ಚರ್, ಗ್ಯಾನ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1998.
75. ಗವರ್ನ್‌ಮೆಂಟ್ ಆಫ್ ಇಂಡಿಯಾ, ಸೆನ್ಸಸ್ ಆಫ್ ಇಂಡಿಯಾ–2001, ಗವರ್ನ್‌ಮೆಂಟ್ ಪ್ರೆಸ್, 2001.
76. ಗವರ್ನ್‌ಮೆಂಟ್ ಆಫ್ ಇಂಡಿಯಾ, ಸೆನ್ಸಸ್ ಆಫ್ ಇಂಡಿಯಾ–2011, ಗವರ್ನ್‌ಮೆಂಟ್ ಪ್ರೆಸ್, 2011.
77. ಗವರ್ನ್‌ಮೆಂಟ್ ಆಫ್ ಕರ್ನಾಟಕ, ಎಜ್ಯುಕೇಷನ್ ಇನ್ ಕರ್ನಾಟಕ: ಆ್ಯನ್ ಎನಾಲಿಟಿಕಲ್ ರಿಪೋರ್ಟ್, ಎಸ್.ಎಸ್.ಎ, ಬೆಂಗಳೂರು, ಕರ್ನಾಟಕ, 2012.
78. ಗವರ್ನ್‌ಮೆಂಟ್ ಆಫ್ ಕರ್ನಾಟಕ, 2005, ಕರ್ನಾಟಕ ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್–2005, ಪ್ಲ್ಯಾನಿಂಗ್ ಆ್ಯಂಡ್ ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟ್, 2006.
79. ಗವರ್ನ್‌ಮೆಂಟ್ ಆಫ್ ಕರ್ನಾಟಕ, 2001, ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್, ಪ್ಲಾನಿಂಗ್ ಆ್ಯಂಡ್ ಸ್ಟ್ಯಾಟಿಸ್‌ಟಿಕ್ಸ್ ಡಿಪಾರ್ಟ್‌ಮೆಂಟ್, ಬೆಂಗಳೂರು, 2001.
80. ಗಾಯತ್ರಿ ದೇವಿ, "ಗ್ರಾಮ ಪಂಚಾಯತ್ ಮಹಿಳಾ ಅಧ್ಯಕ್ಷರು ಮತ್ತು ಗ್ರಾಮೀಣ ಅಭಿವೃದ್ಧಿ", ಐಸ್ಯಾಕ್, ಕರ್ನಾಟಕ ಸರಕಾರ, ಬೆಂಗಳೂರು, 2005.

81. ಗಿರಿಜಾ ವ್ಯಾಸ್, "ಮಹಿಳಾ ಹಕ್ಕುಗಳ ಮೌಲ್ಯಮಪನ", *ಯೋಜನಾ*, ಅಭಿವೃದ್ಧಿ ಮಾಸಪತ್ರಿಕೆ, ಸಂಚಿಕೆ 9, ಎಪ್ರಿಲ್ 2011.
82. ಗಿರಿರಾಜ್ ಶಾ, ದ ಎನ್‌ಸೈಕ್ಲೋಪೀಡಿಯಾ ಆಫ್ ವುಮೆನ್ ಸ್ಟಡೀಸ್, ವಾಲ್ಯೂಮ್ 2, ಗ್ಯಾನ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 1995.
83. ಗೀತಾ ಕೃಷ್ಣಮೂರ್ತಿ, ಮಹಿಳಾ ಹಕ್ಕುಗಳು ಮಾನವ ಹಕ್ಕುಗಳ ನೆಲೆಯಲ್ಲಿ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009.
84. ಗುರುರಾಜ್ ಭಟ್, *ಸ್ಟಡೀಸ್ ಇನ್ ತುಳುವ ಹಿಸ್ಟರಿ ಆ್ಯಂಡ್ ಕಲ್ಚರ್*, ಪಬ್ಲಿಷ್‌ಡ್ ಬೈ ಗುರುರಾಜ್ ಭಟ್, ಮಣಿಪಾಲ್ ಪವರ್ ಪ್ರೆಸ್, ಮಣಿಪಾಲ 1980.
85. ಗುರುರಾಜ್ ಭಟ್, *ಸ್ಟಡೀಸ್ ಇನ್ ತುಳುವ ಹಿಸ್ಟರಿ ಆ್ಯಂಡ್ ಕಲ್ಚರ್ ಫ್ರಮ್ ಪ್ರೀ–ಹಿಸ್ಟಾರಿಕ್ ಟೈಮ್ಸ್ ಟು ಮಾಡರ್ನ್*, ಮಣಿಪಾಲ್ ಪವರ್ ಪ್ರೆಸ್, ಮಣಿಪಾಲ್, 1975.
86. ಗೈಲ್ ಓಮ್ವೆಡ್ಟ್, *ವಿ ಶಲ್ ಸ್ಮಾಶ್ ದ ಪ್ರಿಸನ್: ವುಮೆನ್ಸ್ ಪಾರ್ಟಿಸಿಪೇಷನ್ ಇನ್ ಪೀಪಲ್ಸ್* ಮೂವಮೆಂಟ್ಸ್, ಕಾಳಿ ಫಾರ್ ವುಮೆನ್, ನ್ಯೂಡೆಲ್ಲಿ, 1990.
87. ಘನಶ್ಯಾಮ್ ಶಾ, *ಕಾಸ್ಟ್ ಎಂಡ್ ಡೆಮಾಕ್ರಟಿಕ್ ಪೊಲಿಟಿಕ್ಸ್ ಇನ್ ಇಂಡಿಯಾ*, ಆಶೀಷ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 2008.
88. ಚ. ನ. ಶಂಕರ್ ರಾವ್, *ಮಾನವ ಹಕ್ಕುಗಳು ಮತ್ತು ಲಿಂಗ ಸಮಾನತೆ*, ಜೈ ಭಾರತ್ ಪ್ರಕಾಶನ, ಮಂಗಳೂರು, 2006.
89. ಜಯಲ್ ನೀರಜ ಗೋಪಾಲ್, *ಎಂಜೆಂಡರಿಂಗ್ ಲೋಕಲ್ ಡೆಮಾಕ್ರಸಿ: ದ ಇಂಪ್ಯಾಕ್ಟ್ ಆಫ್ ಕೋಟಾಸ್ ಆಫ್ ವುಮೆನ್ ಇನ್ ಇಂಡಿಯಾಸ್ ಪಂಚಾಯತ್ಸ್*, ಎನ್.ಐ.ಆರ್.ಡಿ, ನ್ಯೂಡೆಲ್ಲಿ, 2005.
90. ಜಯಲಕ್ಷ್ಮೀ, ಮಿಲೇನಿಯಂ ಡೆವಲಪ್‌ಮೆಂಟ್ ಗೋಲ್ಸ್, ಯು.ಎನ್.ಡಿ.ಪಿ. ವರದಿ, 2010.
91. ಜಾರ್ಜ್ ಮಾಥ್ಯೂ, *ಪಂಚಾಯತ್‌ರಾಜ್ ಫ್ರಂ ಲೆಜಿಸ್ಲೇಷನ್ ಟು ಮೂವ್‌ಮೆಂಟ್*, ಕಾನ್ಸೆಪ್ಟ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 1994.
92. ಜಾರ್ಜ್ ಮ್ಯಾಥ್ಯೂಸ್, *ಪಂಚಾಯತ್‌ರಾಜ್ ಇನ್ ಕರ್ನಾಟಕ ಟುಡೇ: ಇಟ್ಸ್ ನ್ಯಾಷನಲ್* ಡೈಮೆನ್ಷನ್ಸ್, ಕಾನ್ಸೆಪ್ಟ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1986.
93. ಜಿ. ಪಲಂತುರೈ, *ಸ್ಟಡಿ ಆನ್ ಎಲೆಕ್ಟೆಡ್ ವುಮೆನ್ ರೆಪ್ರೆಸೆಂಟೇಟಿವ್ಸ್ ಇನ್ ಪಂಚಾಯತ್‌ರಾಜ್* ಇನ್ಸ್‌ಟಿಟ್ಯೂಷನ್ಸ್, ಕಾನ್ಸೆಪ್ಟ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 2008.
94. ಜಿ. ಎಸ್. ಮೆಹ್ತಾ, *ಪಾರ್ಟಿಸಿಪೇಷನ್ ಆಫ್ ವುಮೆನ್ ಇನ್ ದ ಪಂಚಾಯತ್‌ರಾಜ್ ಸಿಸ್ಟಂ*, ಕನಿಷ್ಕ ಪಬ್ಲಿಷರ್ಸ್, ನ್ಯೂಡೆಲ್ಲಿ, 2002.
95. ಜಿಲ್ಲಾ ಪಂಚಾಯತ್ ಉಡುಪಿ, ಉಡುಪಿ ಡಿಸ್ಟ್ರಿಕ್ಟ್ ಅಟ್ ಗ್ಲ್ಯಾನ್ಸ್, ಜಿಲ್ಲಾ ಸಂಖ್ಯಾ *ಸಂಗ್ರಹಣಾಧಿಕಾರಿ*, 2013–14.
96. ಜೀನ್ ಡ್ರೆಜ್ ಆ್ಯಂಡ್ ಅಮರ್ತ್ಯಸೇನ್, *ಇಂಡಿಯಾ: ಎಕನಾಮಿಕ್ ಡೆವಲಪ್‌ಮೆಂಟ್ ಆ್ಯಂಡ್ ಸೋಶಿಯಲ್ ಆಪರ್ಚ್ಯುನಿಟಿ*, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂ ಯಾರ್ಕ್, 1995.
97. ಜೀವನ್ ದಾಸ್, ಮಹಿಳಾ ಅಧ್ಯಯನ, ಶ್ರುತಿ ಪ್ರಕಾಶನ, ಉಡುಪಿ, 2009.
98. ಜೆ. ಪಿ. ರಾಘವೇಂದ್ರ ರಾವ್, "ಪಂಚಾಯತ್‌ರಾಜ್, ವುಮೆನ್ ಆ್ಯಂಡ್ ಎಂಪವರ್‌ಮೆಂಟ್", ಆರ್. ಇಂದಿರಾ(ಸಂ.), *ಜೆಂಡರ್ ಆ್ಯಂಡ್ ಸೊಸೈಟಿ ಇನ್ ಇಂಡಿಯಾ*, ಮಾನಕ್ ಪಬ್ಲಿಕೇಷನ್ಸ್ ಪ್ರೈ. ಲಿ., ನ್ಯೂಡೆಲ್ಲಿ, 1999.

99. ಜೇಮ್ಸ್ ಫೋರ್ಡ್, ರೇಷನಲ್ ಫಾರ್ ಡೀಸೆಂಟ್ರಲೈಸೇಷನ್, ವರ್ಲ್ಡ್ ಬ್ಯಾಂಕ್ ನೋಟ್ಸ್, ವಾಷಿಂಗ್ಟನ್ ಡಿ. ಸಿ., 2003.

100. ಜೈಥಿ ಘೋಷ್, "ವುಮೆನ್ ಇನ್ ಇಂಡಿಯನ್ ಪೊಲಿಟಿಕ್ಸ್", ಫ್ರಂಟ್‌ಲೈನ್, ಅಕ್ಟೋಬರ್ 8, 1999.

101. ಜೋತ್ಸ್ನಾ ಮಹೇಶ್, 'ಪೊಲಿಟಿಕಲ್ ಎಂಪವರ್‌ಮೆಂಟ್ ಆಫ್ ವುಮೆನ್ ವಿದ್ ರೆಫರೆನ್ಸ್ ಟು ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್-ಎ ಕೇಸ್ ಸ್ಟಡಿ ಆಫ್ ಉಡುಪಿ ಡಿಸ್ಟ್ರಿಕ್ಟ್', ಪಿಎಚ್. ಡಿ ಪದವಿಗಾಗಿ ಮಾಹೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾದ ಅಪ್ರಕಟಿತ ಸಂಶೋಧನಾ ಗ್ರಂಥ, 2011.

102. ಟಿ. ಆರ್. ಚಂದ್ರಶೇಖರ್, ಜನರ ಯೋಜನೆ ಕರ್ನಾಟಕದ ಅನುಭವಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1998.

103. ಟಿ. ಎಮ್. ಜೋಸೆಫ್, ಲೋಕಲ್ ಗವರ್ನೆನ್ಸ್ ಇನ್ ಇಂಡಿಯಾ, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪೆನಿ, ನ್ಯೂಡೆಲ್ಲಿ, 2007.

104. ಓಂಕಾರ ಕಾಕಡೆ ಮತ್ತು ಬಸವಂತಿಕೋಟೂರು, "ಪಂಚಾಯತ್‌ರಾಜ್, ಮಹಿಳಾ ಸಬಲೀಕರಣ ಮತ್ತು ಮಾಧ್ಯಮ", ಕರ್ನಾಟಕ ಜರ್ನಲ್ ಆಫ್ ಪೊಲಿಟಿಕ್ಸ್, 2011.

105. ಎಂ. ವಿ. ಪೈಲಿ, ಇನ್‌ಟ್ರೊಡಕ್ಷನ್ ಟು ದ ಕಾನ್‌ಸ್ಟಿಟ್ಯೂಷನ್ ಆಫ್ ಇಂಡಿಯಾ, ವಿಕಾಸ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1998.

106. ದತ್ತ ಬಿಶಾಖ, ಹೂ ವಿಲ್ ಮೇಕ್‌ದಿ ಚಪಾತಿಸ್, -ಎ ಸ್ಟಡಿ ಆಫ್ ಆಲ್-ವುಮೆನ್ ಪಂಚಾಯತ್ ಇನ್ ಮಹಾರಾಷ್ಟ್ರ, ಸ್ತ್ರೀ ಪಬ್ಲಿಕೇಷನ್ಸ್, ಕೋಲ್ಕತ್ತಾ, 2008.

107. ದೇಬರಾ ಜೆ. ಸ್ಮಿತ್, ಜೆಂಡರ್ ಆ್ಯಂಡ್ ವುಮೆನ್ಸ್ ಪೊಲಿಟಿಕಲ್ ಪಾರ್ಟಿಸಿಪೇಷನ್ ಇನ್ ರಾಜಸ್ಥಾನ್, ಥೀಸಿಸ್ ಸಬ್ಮಿಟ್ಟೆಡ್ ಫಾರ್ ದ ಡಿಗ್ರಿ ಆಫ್ ಡಾಕ್ಟರ್ ಫಿಲಾಸಫಿ, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಆ್ಯಂಡ್ ಪೊಲಿಟಿಕಲ್ ಸಯನ್ಸ್, ಯುನಿವರ್ಸಿಟಿ ಆಫ್ ಲಂಡನ್, 2005. ಪಬ್ಲಿಷ್‌ಡ್ ಬೈ ಪ್ರೋಕ್ವೆಸ್ಟ್, ಲಂಡನ್, 2014.

108. ದೇವಕಿ ಜೈನ್, "ಟು ಬೀ ಆರ್ ನಾಟ್ ಟು ಬೀ: ಪ್ರಾಬ್ಲಂಸ್ ಇನ್ ಲೊಕೇಟಿಂಗ್ ವುಮೆನ್ ಇನ್ ಪಬ್ಲಿಕ್ ಪಾಲಿಸ್", ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ, ಫೆಬ್ರವರಿ-ಮಾರ್ಚ್, 2007.

109. ದೇವಕಿ ಜೈನ್, 'ಪಂಚಾಯತ್‌ರಾಜ್: ವುಮೆನ್ ಚೇಂಜಿಂಗ್ ಗವರ್‌ನೆನ್ಸ್' ಎಚ್‌ಟಿಟಿಪಿ// :ಡಬ್ಲ್ಯುಡಬ್ಲ್ಯುಡಬ್ಲ್ಯು.ಯುಎನ್‌ಡಿಪಿ.ಓಆರ್‌ಜಿ. ನವಂಬರ್ 13, 2014.

110. ನಿರ್ಮಲ್ ಬುಚ್, 'ಪಂಚಾಯತ್‌ಗಳು ಮತ್ತು ಮಹಿಳೆಯರು', ಯೋಜನಾ. ಅಭಿವೃದ್ಧಿ ಮಾಸಪತ್ರಿಕೆ, ಜೂನ್ 2013.

111. ನಿರ್ಮಲಾ ಬುಚ್, ಪಂಚಾಯತ್‌ಸ್ ಎಂಡ್ ವುಮೆನ್, ಸ್ಟೇಟಸ್ ಆಫ್ ಪಂಚಾಯತ್‌ರಾಜ್ ಇನ್ ದ ಸ್ಟೇಟ್ಸ್ ಆ್ಯಂಡ್ ಯೂನಿಯನ್ ಟೆರಿಟರೀಸ್ ಆಫ್ ಇಂಡಿಯಾ. ಇನ್ಸ್‌ಟಿಟ್ಯೂಟ್ ಆಫ್ ಸೋಷಿಯಲ್ ಸಯನ್ಸಸ್, 2000.

112. ನಿವೇದಿತಾ ಮೆನನ್, ಥೀಮ್ಸ್ ಇನ್ ಪೊಲಿಟಿಕ್ಸ್-ಜೆಂಡರ್ ಎಂಡ್ ಪೊಲಿಟಿಕ್ಸ್ ಇನ್ ಇಂಡಿಯಾ. ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ, 2001.

[illegible]

113. ನೀರಾ ದೇಸಾಯಿ ಮತ್ತು ವಿಭೂತಿ ಪಟೇಲ್, ಇಂಡಿಯನ್ ವುಮೆನ್-ಚೇಂಜ್ ಆ್ಯಂಡ್ ಚ್ಯಾಲೆಂಜಸ್, ಪಾಪ್ಯುಲರ್ ಪ್ರಕಾಶನ್ ಪ್ರೈವೇಟ್ ಲಿಮಿಟೆಡ್, ಬಾಂಬೆ, 1990.
114. ನೀರಾ ದೇಸಾಯಿ, ವುಮೆನ್ ಇನ್ ಇಂಡಿಯನ್ ಸೊಸೈಟಿ, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2006.
115. ನೂಪುರ್ ತಿವಾರಿ, "ವುಮೆನ್ ಆ್ಯಂಡ್ ಪಂಚಾಯತ್‌ರಾಜ್", ಯೋಜನಾ, ಜೂನ್ 2012.
116. ಪ್ರಾಗ್ಯಾ ರೇ, 'ಪೊಲಿಟಿಕಲ್ ರೆಪ್ರೆಸೆಂಟೇಷನ್ ಆ್ಯಂಡ್ ಎಂಪವರ್‌ಮೆಂಟ್: ವುಮೆನ್ ಇನ್ ಲೋಕಲ್ ಗವರ್ನ್‌ಮೆಂಟ್ ಇನ್‌ಸ್ಟಿಟ್ಯೂಷನ್ಸ್ ಇನ್ ಬಿಹಾರ್, ಇಂಡಿಯಾ', ಪಿಹೆಚ್.ಡಿ ಥೀಸಿಸ್ ಸಬ್‌ಮಿಟ್ಟೆಡ್ ಟು ದ ಡಿಪಾರ್ಟ್‌ಮೆಂಟ್ ಆಫ್ ಪೊಲಿಟಿಕಲ್ ಸಯನ್ಸ್, ಸ್ಟಾಕ್ ಹೋಮ್ ಯುನಿವರ್ಸಿಟಿ, ಸ್ವೀಡನ್, 2007.
117. ಪಿ.ಬಿ. ರಾಥೋಡ್, ಇಂಡಿಯನ್ ಕಾನ್ಸ್‌ಟಿಟ್ಯೂಷನ್, ಗವರ್ನ್‌ಮೆಂಟ್ ಆ್ಯಂಡ್ ಪೊಲಿಟಿಕಲ್ ಸಿಸ್ಟಮ್ಸ್, ಎ.ಬಿ.ಡಿ. ಪಬ್ಲಿಷರ್ಸ್, ಜೈಪುರ್, 2004.
118. ಪ್ರಿಯಾ ರಂಜನ್, ಪೆಸೆಟ್ಸ್ ಆಫ್ ಇಂಡಿಯನ್ ವುಮೆನ್‌ಹುಡ್, ಇಂಡಿಯನ್ ಪಬ್ಲಿಷರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್, ನ್ಯೂಡೆಲ್ಲಿ, 2000.
119. ಪ್ರೇಮಾ ಆರ್. ಜಿ ಅಪಚಂದ, ಲಿಂಗ ವ್ಯವಸ್ಥೆ ಸಂಕಥನ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, 2010.
120. ಪ್ರೊಮೀಲಾ ಕಪೂರ್, ಸ್ಟೆಪ್ಸ್ ಟು ಎನ್‌ಹ್ಯಾನ್ಸ್ ವುಮೆನ್ಸ್ ಪೊಲಿಟಿಕಲ್ ಪಾರ್ಟಿಸಿಪೇಷನ್, ಕಾಳೀ ಫಾರ್ ವುಮೆನ್ ಪ್ರೆಸ್, ನ್ಯೂಡೆಲ್ಲಿ, 2009.
121. ಪ್ರೊಮೀಲಾ ಕಪೂರ್, ಎಂಪವರಿಂಗ್ ದ ಇಂಡಿಯನ್ ವುಮೆನ್, ಪಬ್ಲಿಕೇಷನ್ಸ್ ಡಿವಿಜನ್, ಗವರ್ನ್‌ಮೆಂಟ್ ಆಫ್ ಇಂಡಿಯಾ, ಪಟಿಯಾಲ ಹೌಸ್, ನ್ಯೂಡೆಲ್ಲಿ, 2001.
122. ಭಾರ್ಗವ ಬಿ. ಎಸ್., ಪೊಸಿಷನ್ ಆಫ್ ವುಮೆನ್ ಇನ್ ಪೊಲಿಟಿಕಲ್ ಇನ್ಸ್‌ಟಿಟ್ಯೂಷನ್ಸ್, ಪ್ರಿಂಟ್‌ವೆಲ್ ಪಬ್ಲಿಷರ್ಸ್, ಜೈಪುರ, 1993.
123. ಭಾವನಾ ಝೂರ್ಥ, ವುಮೆನ್ ಆ್ಯಂಡ್ ಪೊಲಿಟಿಕ್ಸ್ ಇನ್ ಇಂಡಿಯಾ, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1998.
124. ಬಿ. ಎನ್. ಅಮೃತಾ, "ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ", ಕರ್ನಾಟಕ ಜರ್ನಲ್ ಆಫ್ ಪೊಲಿಟಿಕ್ಸ್, 2012.
125. ಬಿ. ಎಸ್. ಖನ್ನಾ, ರೂರಲ್ ಲೋಕಲ್ ಸೆಲ್ಫ್ ಗವರ್ನಮೆಂಟ್: ನ್ಯಾಷನಲ್ ಪರ್ಸ್‌ಪೆಕ್ಟಿವ್ ಆ್ಯಂಡ್ ಸ್ಟೇಟ್ ಸ್ಟಡೀಸ್, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1994.
126. ಬಿದಾಯತ್ ಮೊಹಂತಿ ಮತ್ತು ಗುಪ್ತಾ, ವುಮೆನ್ ಆ್ಯಂಡ್ ಪೊಲಿಟಿಕಲ್ ಎಂಪವರ್‌ಮೆಂಟ್, ಇನ್ಸ್‌ಟಿಟ್ಯೂಟ್ ಆಫ್ ಸೋಷಿಯಲ್ ಸಯನ್ಸಸ್, ನ್ಯೂಡೆಲ್ಲಿ, 1997.
127. ಬಿದಾಯತ್ ಮೊಹಾಂತಿ, ಪಂಚಾಯತ್‌ರಾಜ್, 73ರ್ಡ್ ಕಾನ್ಸ್‌ಟಿಟ್ಯೂಷನಲ್ ಅಮೆಂಡ್‌ಮೆಂಟ್ ಎಂಡ್ ವುಮೆನ್, ಇನ್ಸ್‌ಟಿಟ್ಯೂಟ್ ಆಫ್ ಸೋಷಿಯಲ್ ಸಯನ್ಸಸ್, ನ್ಯೂಡೆಲ್ಲಿ, 1995.
128. ಬೀನಾ ಅಗರ್ವಾಲ್, ದ ಜೆಂಡರ್ ಎಂಡ್ ಎನ್‌ವಿರಾನ್‌ಮೆಂಟ್, ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, 1994.
129. ಭಗತ್ ಎನ್., ವುಮೆನ್ ಇನ್ ಗ್ರಾಸ್‌ರೂಟ್ ಡೆಮಾಕ್ರಸಿ, ಗ್ಯಾನ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 2004.

130. ಮಣಿಶಂಕರ್ ಅಯ್ಯರ್, "ಸ್ಟಡಿ ಆನ್ ಎಲೆಕ್ಟೆಡ್ ವುಮೆನ್ ರೆಪ್ರೆಸೆಂಟೇಟಿವ್ಸ್ ಇನ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್", ಮೈನ್ ಸ್ಟ್ರೀಮ್, ವಾಲ್ಯೂಮ್ 37, ನಂ.6, ನ್ಯೂಡೆಲ್ಲಿ, 2009.

131. ಮಧು ಕಿಶ್ವರ್, "ವುಮೆನ್ ಆ್ಯಂಡ್ ಪೊಲಿಟಿಕ್ಸ್: ಬಿಯಾಂಡ್ ಕೋಟಾಸ್", ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ, ವಾಲ್ಯೂಮ್ 31, ನಂ. 43, 1996.

132. ಮಧುಶ್ರೀ ದಾಸ್‌ಗುಪ್ತಾ, ವುಮೆನ್ ಎಂಪವರ್‌ಮೆಂಟ್ ಇನ್ ಇಂಡಿಯಾ, ಡಿವಿಷನ್ ಮಿನಿಸ್ಟ್ರಿ ಆಫ್ ಐ ಆ್ಯಂಡ್ ಬಿ, ಗವರ್ನ್‌ಮೆಂಟ್ ಆಫ್ ಇಂಡಿಯಾ, 2013.

133. ಮನು ಭಾಸ್ಕರ್, "ವುಮೆನ್ ಪಂಚಾಯತ್ ಮೆಂಬರ್ಸ್ ಇನ್ ಕೇರಳ–ಎ ಪ್ರೊಫೈಲ್", ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ, 32(17), 1997.

134. ಮಮತಾ ಜೈಸ್ವಾಲ್, ವುಮೆನ್ ಇನ್ ಪಂಚಾಯತ್‌ರಾಜ್, ಅನ್ಮೋಲ್ ಪಬ್ಲಿಕೇಷನ್ಸ್ ಪ್ರೈ. ಲಿ., ನ್ಯೂಡೆಲ್ಲಿ, 2003.

135. ಮರಿಲೆ ಕಾರ್ಲ್, ವುಮೆನ್ ಆ್ಯಂಡ್ ಎಂಪವರ್‌ಮೆಂಟ್, ಝೆಡ್ ಬುಕ್ ಲಿಮಿಟೆಡ್, ಲಂಡನ್, 2005.

136. ಮರ್ಲಿನ್ ಮಾರ್ಟಿಸ್, "ಲಿಂಗತ್ವ ಸಮನ್ಯಾಯಕ್ಕಾಗಿ ರಾಜ್ಯದ ಉಪಕ್ರಮಗಳು", ಕಿಶೋರಿ ನಾಯಕ್ (ಸಂ.), ಲಿಂಗತ್ವ ಸಮನ್ಯಾಯ, ಮಹಿಳಾ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, 2007.

137. ಮಾರ್ಥನುಸ್‌ಬಾಮ್, ಜೆಂಡರ್ ಆ್ಯಂಡ್ ಗವರ್ನೆನ್ಸ್, ವುಮೆನ್ ಡೆವಲಪ್‌ಮೆಂಟ್ ರಿಸರ್ಚ್ ಸೆಂಟರ್ (ಯುಎನ್‌ಡಿಪಿ), ನ್ಯೂಡೆಲ್ಲಿ, 2003.

138. ಮಾಲತಿ ಸುಬ್ರಹ್ಮಣಿಯನ್, "ಪೊಲಿಟಿಕಲ್ ಪಾರ್ಟಿಸಿಪೇಷನ್ ಎಂಡ್ ರೆಪ್ರೆಸೆಂಟೇಷನ್ ಆಫ್ ವುಮೆನ್ ಇನ್ ಇಂಡಿಯನ್ ಪೊಲಿಟಿಕ್ಸ್", ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 65, ನಂ. 1, 2005.

139. ಮೀನಾಕ್ಷಿ ಮಲ್ಹೋತ್ರಾ, ಸ್ಟೇಟಸ್ ಆಫ್ ವುಮೆನ್ ಇನ್ ಪಂಚಾಯತ್‌ರಾಜ್, ಕಾನ್ಸೆಪ್ಟ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2004.

140. ಮೆಹಬೂಬ್–ಉಲ್–ಹಕ್, ರಿಫ್ಲೆಕ್ಷನ್ ಆನ್ ಹ್ಯೂಮನ್ ಡೆವಲಪ್‌ಮೆಂಟ್, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ, 1996.

141. ಮೈತ್ರೇಯಿ ಕೃಷ್ಣರಾಜ್, ವುಮೆನ್ ಎಂಡ್ ಡೆವಲಪ್‌ಮೆಂಟ್, ಶುಭದಾ ಸಾರಸ್ವತ್ಸ್ ಪ್ರಕಾಶನ್, ಪುಣೆ, 1998.

142. ಮೈತ್ರೇಯಿ ಕೃಷ್ಣರಾಜ್, ಬಿಟ್ವೀನ್ ಪಬ್ಲಿಕ್ ಆ್ಯಂಡ್ ಪ್ರೈವೇಟ್ ಮೊರ್ಟ್ಯಾಲಿಟಿ, ಶುಭದಾ ಸರಸ್ವತ್ಸ್ ಪ್ರಕಾಶನ, ಪುಣೆ, 1988.

143. ಯಂಗ್ ಕೆ., ಜೆಂಡರ್ ಎಂಡ್ ಡೆವಲಪ್‌ಮಂಟ್–ಎ ರೇಷನಲ್ ಅಪ್ರೋಚ್, ಅಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಆಕ್ಸ್‌ಫರ್ಡ್, 1998.

144. ಯು.ಎನ್.ಡಿ.ಪಿ. ವರದಿ, ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್ 2010: ದ ರಿಯಲ್ ವೆಲ್ತ್ ಆಫ್ ನೇಷನ್ಸ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್, 2010.

145. ರಾಕೇಶ್ ಕೆ. ಸಿಂಗ್, "ಎಲೆಕ್ಟೆಡ್ ವುಮೆನ್ ರೆಪ್ರೆಸೆಂಟೇಟಿವ್ಸ್ ಇನ್ ಪಂಚಾಯತ್‌ರಾಜ್", ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 62, ಜನವರಿ–ಮಾರ್ಚ್, 2012.

146. ರಾಕೇಶ್ ಚಂದ್ರ, "ವುಮೆನ್ ಎಂಪವರ್‌ಮೆಂಟ್ ಇನ್ ಇಂಡಿಯಾ", ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 62, ಮಾರ್ಚ್ 2012.
147. ರಾಜೇಶ್ವರಿ ದೇಶ್‌ಪಾಂಡೆ, "ಹೌ ಜೆಂಡರ್‌ಡ್ ವಾಸ್ ವುಮೆನ್ಸ್ ಪಾರ್ಟಿಸಿಪೇಷನ್ ಇನ್ ಪೊಲಿಟಿಕ್ಸ್", ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ, ವಾಲ್ಯೂಮ್ 39, ನಂ. 15, ಡಿಸೆಂಬರ್ 18, 2004.
148. ರಾಜ್ಯಸಭಾ ಸೆಕ್ರೇಟರಿಯೇಟ್ ರಿಪೋರ್ಟ್-2008, ರಿಸರ್ವೇಷನ್ ಆಫ್ ಸೀಟ್ಸ್ ಫಾರ್ ವುಮೆನ್ ಇನ್ ಲೆಜಿಸ್ಲೇಚರ್ ಪ್ರಾಸ್ಪೆಕ್ಟಸ್, ಗವರ್ನ್‌ಮೆಂಟ್ ಆಫ್ ಇಂಡಿಯಾ, 2008.
149. ರಾಮ್ ಅಹುಜಾ, ರೈಟ್ ಆಫ್ ವುಮೆನ್: ಎ ಫೆಮಿನಿಸ್ಟ್ ಪರ್ಸ್ಪೆಕ್ಟಿವ್, ರಾವತ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1992.
150. ರಿಪೋರ್ಟ್ ಆಫ್ ದ ಕಮಿಟಿ ಆನ್ ದ ಸ್ಟೇಟಸ್ ಆಫ್ ವುಮೆನ್ ಇನ್ ಇಂಡಿಯಾ ವರದಿ, ಗವರ್ನ್‌ಮೆಂಟ್ ಆಫ್ ಇಂಡಿಯಾ, 2009.
151. ರೀಚಾ ಉಪಾಧ್ಯಾಯ, ವುಮೆನ್ ಎಂಫವರ್‌ಮೆಂಟ್ ಇನ್ ಇಂಡಿಯಾ, ದ ಏಷ್ಯಾ ಫೌಂಡೇಷನ್, ಇಂಡಿಯಾ, 2010.
152. ರುಮಾ ಬ್ಯಾನರ್ಜಿ, ವುಮೆನ್ ಇನ್ ಪಂಚಾಯತ್‌ರಾಜ್: ಎ ಸ್ಟಡಿ ಇನ್ ವೆಸ್ಟ್ ಬೆಂಗಲ್, ಡೆವಲಪ್‌ಮೆಂಟ್ ಡೈಲಾಗ್ಸ್, ಕೋಲ್ಕತ್ತಾ, 1995.
153. ರೂಪಾ ಹಾಸನ, ಮಹಿಳೆ ಮತ್ತು ಆಧುನಿಕತೆಯ ಸವಾಲುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.
154. ರೇವತಿ ನಾರಾಯಣನ್, ಗ್ರಾಸ್‌ರೂಟ್ಸ್ ಜೆಂಡರ್ ಎಂಡ್ ಗವರ್‌ನೆನ್ಸ್: ಪಂಚಾಯತ್‌ರಾಜ್ ಎಕ್ಸ್‌ಪೀರಿಯನ್ಸಸ್ ಫ್ರಂ ಮಹಿಳಾ ಸಮಕ್ಯ ಕರ್ನಾಟಕ, ಅಜಂತಾ ಪಬ್ಲಿಕೇಶನ್ಸ್, ನ್ಯೂಡೆಲ್ಲಿ, 2002.
155. ರೋಚನಾ ಮಜುಮ್ದಾರ್, "ಹಿಸ್ಟರಿ ಆಫ್ ವುಮೆನ್ಸ್ ರೈಟ್", ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ, ಮೇ 31, 2003.
156. ಲೀನಾ ಗೋನ್‌ಸಲಾಯ್, ವುಮೆನ್ ಆ್ಯಂಡ್ ಹ್ಯೂಮನ್ ರೈಟ್ಸ್ ಅಂಡರ್ ದ ಇಂಡಿಯನ್ ಕಾನ್ಸ್ಟಿಟ್ಯೂಷನ್, ಎ.ಪಿ.ಹೆಚ್ ಪಬ್ಲಿಷರ್ಸ್ ಕಾರ್ಪೊರೇಶನ್, ನ್ಯೂಡೆಲ್ಲಿ, 2001.
157. ಲೆನಿನ್ ವ್ಲಾದಿಮಿರ್, ಲೆನಿನ್ ಸೆಲೆಕ್ಟಡ್ ವರ್ಕ್ಸ್, ಪ್ರೋಗ್ರೆಸ್ ಪಬ್ಲಿಷರ್ಸ್, ಮಾಸ್ಕೋ, ಯು.ಎಸ್.ಎಸ್.ಆರ್., 1970.
158. ವನಿತಾ ಕೌಲ್, ವುಮೆನ್ ಆ್ಯಂಡ್ ದ ವಿಂಡ್ ಆಫ್ ಚೇಂಜ್, ಗ್ಯಾನ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 2000.
159. ವಂದನಾ ಶಿವಾ, ಕೊಲೋನಿಯಲಿಸಂ ಆ್ಯಂಡ್ ದ ಎವೊಲ್ಯೂಷನ್ ಆಫ್ ಮಸ್ಕ್ಯುಲಿನಿಷ್ಟ್, ಝುಡ್ ಬುಕ್ಸ್, ಅಟ್ಲಾಂಟಿಕ್ ಹೈವೇಸ್, ನ್ಯೂಜೆರ್ಸಿ, 1998.
160. ಪಿ. ಎಮ್. ರಾವ್, ಎಂಪವರಿಂಗ್ ರೂರಲ್ ವುಮೆನ್, ಅನ್ಮೋಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2004.
161. ಪಿ. ಕೆ. ಅಗ್ನಿಹೋತ್ರಿ, ರಿಸರ್ವೇಷನ್ ಆಫ್ ಸೀಟ್ಸ್ ಫಾರ್ ವುಮೆನ್ ಇನ್ ಲೆಜಿಸ್ಲೇಟಿವ್ ಬಾಡೀಸ್: ಪರ್ಸ್‌ಪೆಕ್ಟಿವ್ಸ್, ರಾಜ್ಯಸಭಾ ಸೆಕ್ರೆಟರಿಯೇಟ್ ರಿಪೋರ್ಟ್, ನ್ಯೂಡೆಲ್ಲಿ, 2008.
162. ಪಿ. ಡಿ. ಮಹಾಜನ್, ದ ಕಾನ್ಸ್‌ಟಿಟ್ಯೂಷನ್ ಆಫ್ ಇಂಡಿಯಾ, ಎಸ್. ಚಂದ್ ಆ್ಯಂಡ್ ಕಂ., ನ್ಯೂಡೆಲ್ಲಿ, 1982.

163. ವಿಪುಲ್ ಪಾಂಡೆ, ರೋಲ್ ಆಫ್ ವುಮೆನ್ ಇನ್ ಇಂಡಿಯನ್ ಪೊಲಿಟಿಕ್ಸ್, ಗ್ಯಾನ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ, 2002.
164. ವಿಪುಲ್ ಪಾಂಡೆ, 'ರೋಲ್ ಆಫ್ ವುಮೆನ್ ಇನ್ ಇಂಡಿಯನ್ ಪಾಲಿಟಿಕ್ಸ್', ಹೆಚ್‌ಟಿಟಿಪಿ/ /:ಡಬ್ಲ್ಯುಡಬ್ಲ್ಯುಡಬ್ಲ್ಯು.ಜೆಸ್ಟೋರ್.ಒಆರ್‌ಜಿ, 2013.
165. ವೀರಭಾರತಿ, "ಮೀಸಲಾತಿ ಮತ್ತು ಸಮಾನತೆ", ಸ್ಪರ್ಧಾಸ್ಫೂರ್ತಿ, 2009.
166. ವೈ. ಟಿ. ಪವಾರ್, ರೋಲ್ ಆಫ್ ವುಮೆನ್ ಇನ್ ಇಂಡಿಯನ್ ಪೊಲಿಟಿಕ್ಸ್, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2009.
167. ವೆಂಕಟೇಶ್ ಎ., ಮಹಿಳಾ ಮೀಸಲಾತಿ ಮತ್ತು ರಾಜಕೀಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.
168. ಶಮೀಮ್ ಅಲೀಮ್(ಸಂ.), "ವುಮೆನ್ಸ್ ಡೆವಲಪ್‌ಮೆಂಟ್", ವುಮೆನ್ ಪ್ರಾಬ್ಲಮ್ಸ್ ಆ್ಯಂಡ್ ಪ್ರೋಸ್ಪೆಕ್ಟ್, ರಾವತ್ ಪಬ್ಲಿಕೇಷನ್, ನ್ಯೂಡೆಲ್ಲಿ, 2004.
169. ಶಮೀಮ್ ಅಸ್ಮತ್ ಮತ್ತು ಚಂದಾದೇವಿ, ವುಮೆನ್ ಇನ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್, ಮಿತ್ತಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2012.
170. ಶಮಿಮ್ ಅಸ್ಮತ್ ಮತ್ತು ಚಂದಾ ದೇವಿ, ವುಮೆನ್ ಎಂಪವರ್‌ಮೆಂಟ್ ಇನ್ ಇಂಡಿಯಾ, ಮಿತ್ತಲ್ ಪಬ್ಲಿಷರ್ಸ್, ನ್ಯೂಡೆಲ್ಲಿ, 2012.
171. ಶಶಿ ಕೌಲ್ ಎಂಡ್ ಶ್ರದ್ಧಾ ಸಾಹ್ನಿ, ಸ್ಟಡಿ ಆನ್ ದ ಪಾರ್ಟಿಸಿಪೇಷನ್ ಆಫ್ ವುಮೆನ್ ಇನ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್, ಇನ್ಸ್‌ಟಿಟ್ಯೂಟ್ ಆಫ್ ಸೋಷಿಯಲ್ ಸಯನ್ಸ್, ನ್ಯೂಡೆಲ್ಲಿ, 2009.
172. ಶಿರಿನ್ ರೇ, ಕ್ಲಾಸ್, ಕಾಸ್ಟ್ ಎಂಡ್ ಜೆಂಡರ್–ವುಮೆನ್ ಇನ್ ಪಾರ್ಲಿಮೆಂಟ್ ಇನ್ ಇಂಡಿಯಾ, ಇಂಟರ್‌ನ್ಯಾಷನಲ್ ಐ.ಡಿ.ಇ.ಎ, 2002.
173. ಶಿರ್ವ ಗ್ರಾಮ ಪಂಚಾಯತ್‌ನ ದಾಖಲೆಗಳಿಂದ ಪಡೆದ ವಿವರ, 2012–13.
174. ಶ್ರೀಲತಾ ಬಾಟ್ಲಿವಾಲಾ, 'ಸ್ಟೇಟಸ್ ಆಫ್ ವುಮೆನ್ ಇನ್ ಕರ್ನಾಟಕ', ಎಚ್‌ಟಿಟಿಪಿ// :ಡಬ್ಲ್ಯುಡಬ್ಲ್ಯುಡಬ್ಲ್ಯು.ಜೆಸ್ಟೋರ್.ಓಆರ್‌ಜಿ, 2014.
175. ಶುಭ ಮತ್ತು ಭಾರ್ಗವ, "ಪಂಚಾಯತ್‌ರಾಜ್ ಸಿಸ್ಟಂ ಇನ್ ಕರ್ನಾಟಕ", ಜರ್ನಲ್ ಆಫ್ ಸೋಷಿಯಲ್ ಸಯನ್ಸಸ್, ವಾಲ್ಯೂಮ್ 5, ನಂ. 2, ಜುಲೈ–ಡಿಸೆಂಬರ್, 2000.
176. ಶುಭ ಕೆ., *ಕರ್ನಾಟಕ ಪಂಚಾಯತ್ ಎಲೆಕ್ಷನ್ 1995*, ಕಾನ್ಸೆಪ್ಟ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1997.
177. ಶುಭ ಕೆ. ಮತ್ತು ಭಾರ್ಗವ, "ಪಂಚಾಯತ್‌ರಾಜ್ ಸಿಸ್ಟಂ ಆ್ಯಂಡ್ ಪೊಲಿಟಿಕಲ್ ಎಂಪವರ್‌ಮೆಂಟ್ ಆಫ್ ವುಮೆನ್", ಮಧ್ಯಪ್ರದೇಶ, ಜರ್ನಲ್ ಆಫ್ ಸೋಷಿಯಲ್ ಸಯನ್ಸಸ್, ವಾಲ್ಯೂಮ್ 5, ನಂ. 2, ಜುಲೈ–ಡಿಸೆಂಬರ್, 2000.
178. ಶ್ರೀಶ್ ಕುದ್ಕಳಿ, 'ಪಾರ್ಟಿಸಿಪೇಷನ್ ಆಫ್ ದಲಿತ್ ವುಮೆನ್ ಇನ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್: ಎ ಕೇಸ್ ಸ್ಟಡಿ ಆಫ್ ಉಡುಪಿ ಡಿಸ್ಟ್ರಿಕ್ಟ್' ಆ್ಯನ್ ಅನ್‌ಪಬ್ಲಿಷ್ಡ್ ಥೀಸಿಸ್ ಸಬ್‌ಮಿಟ್ಟೆಡ್ ಟು ಮಂಗಳೂರು ಯೂನಿವರ್ಸಿಟಿ ಫಾರ್ ದ ಅವಾರ್ಡ್ ಆಫ್ ಪಿಹೆಚ್.ಡಿ ಡಿಗ್ರಿ, 2010.

179. ಸಚ್ಚಿದಾನಂದ ಸತ್ಪತಿ, 'ವುಮೆನ್ ಎಂಪವರ್‌ಮೆಂಟ್ ಆ್ಯಂಡ್ ಪಂಚಾಯತ್‌ರಾಜ್: ಎ ಕೇಸ್ ಸ್ಟಡಿ ಫ್ರಮ್ ಒರಿಸ್ಸಾ', ಎಚ್‌ಟಿಟಿಪಿ//:ಡಬ್ಲ್ಯುಡಬ್ಲ್ಯುಡಬ್ಲ್ಯು.ಆನ್‌ಲೈನ್ ವುಮೆನ್ ಇನ್ ಪೊಲಿಟಿಕ್ಸ್.ಓಆರ್‌ಜಿ/ಇಂಡಿಯಾ, 2002.

180. ಸರಿತಾ ಠಾಕೂರ್, *ವುಮೆನ್ ಎಂಪವರ್‌ಮೆಂಟ್: ಮಿಥ್ ಆ್ಯಂಡ್ ರಿಯಾಲಿಟಿ*, ಆಕಾಂಶ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2004.

181. ಸಾಧನಾ ಆರ್ಯ, ವುಮೆನ್, *ಜೆಂಡರ್ ಇಕ್ವಾಲಿಟಿ ಆ್ಯಂಡ್ ದ ಸ್ಟೇಟ್*, ಡೀಪ್ ಆ್ಯಂಡ್ ಡೀಪ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2006.

182. ಸಾಧನಾ ವೈ. ಮಥಾದ್, 'ದ ಪೊಲಿಟಿಕಲ್ ಮೊಬಿಲೈಸೇಷನ್ ಆಫ್ ವುಮೆನ್ ಇನ್ ಕರ್ನಾಟಕ – ಎ ಕೇಸ್ ಸ್ಟಡಿ ಆಫ್ ಧಾರವಾಡ ಡಿಸ್ಟ್ರಿಕ್ಟ್', ಪಿಎಚ್.ಡಿ ಪದವಿಗಾಗಿ ಕರ್ನಾಟಕ ಯುನಿವರ್ಸಿಟಿ ಧಾರವಾಡಕ್ಕೆ ಸಲ್ಲಿಸಿದ ಸಂಶೋಧನಾ ಪ್ರಬಂಧ, 2009.

183. ಸಿ. ಎನ್. ಶಂಕರ್ ರಾವ್, *ಮಾನವಹಕ್ಕುಗಳು ಮತ್ತು ಲಿಂಗ ಸಮಾನತೆ*, ಜೈಭಾರತ್ ಪ್ರಕಾಶನ, ಮಂಗಳೂರು, 2006.

184. ಸಿ. ಎನ್. ಶಂಕರ್ ರಾವ್, *ಭಾರತೀಯ ಸಮಾಜದ ಪರಿಚಯ*, ಜೈಭಾರತ್ ಪ್ರಕಾಶನ, ಮಂಗಳೂರು, 2006.

185. ಸಿವಲ್ ಜಿ. ಆರ್., "ಎಂಪವರ್‌ಮೆಂಟ್ ಆಫ್ ವುಮೆನ್", ವುಮೆನ್ಸ್ ಲಿಂಕ್, ವಾಲ್ಯೂಮ್ 8, ನಂ. 2, 2002.

186. ಸೀಮಾ ಪಿ. ಸಾಲ್ಗಾಂವ್ಕರ್, *ವುಮೆನ್ ಪೊಲಿಟಿಕಲ್ ಪವರ್ ಎಂಡ್ ದ ಸ್ಟೇಟ್*, ಅಭಿಜಿತ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 2006.

187. ಸೀಮಾ ಸಿಂಗ್, *ಪಂಚಾಯತ್‌ರಾಜ್ ಆ್ಯಂಡ್ ವುಮೆನ್ ಎಂಪವರ್‌ಮೆಂಟ್*, ಓಷಿಯನ್ ಬುಕ್ಸ್ ಪ್ರೈವೇಟ್ ಲಿಮಿಟೆಡ್, ನ್ಯೂಡೆಲ್ಲಿ, 2003.

188. ಸುಶೀಲ್ ಕೌಶಿಕ್, *ಪೊಲಿಟಿಕಲ್ ಪಾರ್ಟಿಸಿಪೇಷನ್ ಎಂಡ್ ವುಮೆನ್ ರೆಪ್ರೆಸೆಂಟೇಷನ್ ಇನ್ ಇಂಡಿಯಾ*, ಅನ್ಮೋಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 1998.

189. ಸೂರತ್ ಸಿಂಗ್, "ಎಂಪವರ್‌ಮೆಂಟ್ ಆಫ್ ವುಮೆನ್ ಮೆಂಬರ್ಸ್ ಇನ್ ಪಂಚಾಯತ್‌ರಾಜ್ ಇನ್ಸ್‌ಟಿಟ್ಯೂಷನ್ಸ್", ಕುರುಕ್ಷೇತ್ರ, ಮಾಸಪತ್ರಿಕೆ, ಅಗೋಸ್ಟ್ 2004.

190. ಸ್ಟೀಫನ್ ಎಫ್. ಎನ್. ಮತ್ತು ರಾಜಶೇಖರನ್, *ಎನ್ ಎಂಪೀರಿಕಲ್ ಸ್ಟಡಿ ಆಫ್ ವುಮೆನ್ ಇನ್ ಲೋಕಲ್ ಸೆಲ್ಫ್ ಗವರ್‌ನೆನ್ಸ್ ಇನ್ ಕರ್ನಾಟಕ*, ಸರ್ಚ್ ಪಬ್ಲಿಕೇಷನ್ಸ್, ಬೆಂಗಳೂರು, 2001.

191. ಸೆನ್ಸಸ್ ಆಫ್ ಕರ್ನಾಟಕ – 1991, ಗವರ್ನ್‌ಮೆಂಟ್ ಪ್ರೆಸ್, ಗವರ್ನ್‌ಮೆಂಟ್ ಆಫ್ ಕರ್ನಾಟಕ, 1991.

192. ಸೆನ್ಸಸ್ ಆಫ್ ಕರ್ನಾಟಕ – 2001, ಗವರ್ನ್‌ಮೆಂಟ್ ಪ್ರೆಸ್, ಗವರ್ನ್‌ಮೆಂಟ್ ಆಫ್ ಕರ್ನಾಟಕ, 2001.

193. ಸೆನ್ಸಸ್ ಆಫ್ ಕರ್ನಾಟಕ – 2011, ಗವರ್ನ್‌ಮೆಂಟ್ ಪ್ರೆಸ್, ಗವರ್ನ್‌ಮೆಂಟ್ ಆಫ್ ಕರ್ನಾಟಕ, 2011.

194. ಸ್ನೇಹಲತಾ ಪಾಂಡಾ, "ಪೊಲಿಟಿಕಲ್ ಎಂಪವರ್‌ಮೆಂಟ್ ಆಫ್ ವುಮೆನ್: ದ ಕೇಸ್ ಸ್ಟಡಿ ಆಫ್ ಒರಿಸ್ಸಾ", ಜರ್ನಲ್ ಆಫ್ ರೂರಲ್ ಡೆವಲಪ್‌ಮೆಂಟ್, 22(4), 1997.

195. ಸ್ನೇಹಲತಾ ಪಾಂಡಾ, "ಎಮರ್ಜಿಂಗ್ ಪ್ಯಾಟರ್ನ್ ಆಫ್ ಲೀಡರ್‌ಶಿಪ್ ಎಮಂಗ್ ರೂರಲ್ ವುಮೆನ್ ಇನ್ ಒಡಿಸ್ಸಾ", ಇಂಡಿಯನ್ ಜರ್ನಲ್ ಆಫ್ ಅಡ್ಮಿನಿಸ್ಟ್ರೇಷನ್, ವಾಲ್ಯೂಮ್ 42, 1997.

196. ಹೇಜೆಲ್ ಡಿ. ಲಿಮಾ, ವುಮೆನ್ ಇನ್ ಲೋಕಲ್ ಗವರ್ನ್‌ಮೆಂಟ್, ಕಾನ್ಸೆಪ್ಟ್ ಪಬ್ಲಿಷರ್ಸ್, ನ್ಯೂಡೆಲ್ಲಿ, 1993.

197. ಹೇಜೆಲ್ ಡಿ. ಲಿಮಾ, ವುಮೆನ್ ಇನ್ ಲೋಕಲ್ ಗವರ್ನ್‌ಮೆಂಟ್ ಇನ್ ಮಹಾರಾಷ್ಟ್ರ, ಕಾನ್ಸೆಪ್ಟ್ ಪಬ್ಲಿಷರ್ಸ್, ನ್ಯೂಡೆಲ್ಲಿ, 1993.

198. ಹೇಮಲತಾ ಎಚ್. ಎಂ., ರಾಜಕೀಯ ಮತ್ತು ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಮಹಿಳೆಯರು, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು, 2004.

199. ಹೇಮಲತಾ ಮಹಿಷಿ, ಮಹಿಳೆ ಮತ್ತು ಹಕ್ಕುಗಳು, ಕನ್ನಡ ಪ್ರಕಾಶನ ವಿಭಾಗ, ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರಕಾರ, ಜೂನ್ 2012.

ಅನುಬಂಧ

ಅನುಬಂಧ – 1

ಅನುಬಂಧ 2 – ಪ್ರಶ್ನಾವಳಿ

ಲಿಂಗ ಸಮಾನತೆ ಮತ್ತು ರಾಜಕೀಯ ಸಹಭಾಗಿತ್ವ–ಸ್ಥಳೀಯ ಸಂಸ್ಥೆಗಳ ಅಧ್ಯಯನ

(ಚುನಾಯಿತ ಪಂಚಾಯತಿ ಮಹಿಳಾ ಪ್ರತಿನಿಧಿಗಳಿಗೆ)

ಭಾಗ – 1 ಸಾಮಾನ್ಯ ವಿವರಗಳು – ಮಾಹಿತಿದಾರರ ಮತ್ತು ಕುಟುಂಬದ ವಿವರ

1	ಹೆಸರು						
2	ವಾಸ ಸ್ಥಳ						
3	ಲಿಂಗ	1. ಗಂಡು		2. ಹೆಣ್ಣು			
4	ವಯಸ್ಸು	1. 18–25	2. 26–35	3. 36–45	4. 46–55	56–60	60ಕ್ಕಿಂತ ಹೆಚ್ಚು
5	ಧರ್ಮ						
6	ಜಾತಿ						
7	ಉಪಜಾತಿ						
8	ವಿದ್ಯಾಭ್ಯಾಸ	1.ಅನಕ್ಷರಸ್ಥ	2. ಪ್ರಾಥಮಿಕ ಶಿಕ್ಷಣ	3. ಪ್ರೌಢ ಶಿಕ್ಷಣ	4. ಪದವಿ ಪೂರ್ವ	5.ಪದವಿ	6.ಸ್ನಾತಕೋತ್ತರ ಪದವಿ
		7. ವೃತ್ತಿಪರ					
9	ವೈವಾಹಿಕ ಸ್ಥಾನಮಾನ	1. ವಿವಾಹಿತೆ	2. ಅವಿವಾಹಿತೆ	3. ವಿಧವೆ	4. ವಿಚ್ಛೇದಿತೆ	5. ಇತರೆ	
10	ನಿಮ್ಮ ಉದ್ಯೋಗ	1. ಕೃಷಿ	2. ಕೂಲಿ	3. ಖಾಸಗಿ	4. ಸರಕಾರಿ	5. ಸ್ವ–ಉದ್ಯೋಗ	6.ವ್ಯಾಪಾರ
		7. ಕೈಗಾರಿಕೆ	8. ಇತರೆ				

ಭಾಗ–2 ಪಂಚಾಯತಿ ಸದಸ್ಯರ ಸಾಮಾಜಿಕ ಹಿನ್ನಲೆ ಮತ್ತು ಸ್ಥಾನಮಾನ

11	ನಿಮ್ಮ ಮನೆಯಲ್ಲಿ ಶಿಕ್ಷಣಕ್ಕೆ ಆದ್ಯತೆ ಇದೆಯೇ?	1. ಹೌದು	2. ಇಲ್ಲ	3. ಸ್ವಲ್ಪ ಮಟ್ಟಿಗೆ
12	ಹೌದಾದರೆ, ಯಾರಿಗೆ?	1. ಗಂಡು	2. ಹೆಣ್ಣು	3. ಇಬ್ಬರಿಗೂ
13	ನೀವು ಆರೋಗ್ಯದ ಸಮಸ್ಯೆಯನ್ನು ಆಗಾಗ ಎದುರಿಸುತ್ತೀರಾ?	1.ಹೌದು	2. ಇಲ್ಲ	
14	ಹೌದಾದರೆ, ಯಾವುದು?			
15	ರಾಜಕೀಯದಲ್ಲಿ ಇರುವುದರಿಂದ ನಿಮ್ಮ ಆರೋಗ್ಯದ ಮೇಲೆ ಈ ಕೆಳಗಿನ ಯಾವುದಾದರು ಪರಿಣಾಮ ಬೀರಿದೆಯೇ?	1. ಹೌದು	2. ಇಲ್ಲ	
16	ಹೌದಾದರೆ, ಕಾರಣಗಳು ಯಾವುವು?	1. ಮಾನಸಿಕ ಒತ್ತಡ ಹೇರಿಕೆ	2. ಹೊಸ ಜವಾಬ್ದಾರಿಗಳ ಒತ್ತಡ	3. ವಿವಿಧ ಮನೆಕೆಲಸಗಳ
		4. ಸದಸ್ಯರೊಂದಿಗೆ ಉತ್ತಮ ಸಂಬಂಧವಿಲ್ಲ	5. ಪುರುಷ ಸದಸ್ಯರ ಸಹಕಾರದ ಕೊರತೆ	6. ಅಧಿಕಾರಿಗಳ ಸಹಕಾರದ ಕೊರತೆ
		ಇತರೆ		
17	ಕುಟುಂಬ ಮತ್ತು ರಾಜಕೀಯವನ್ನು ಸರಿದೂಗಿಸುವಲ್ಲಿ ಈ ಕೆಳಗಿನ ಸಮಸ್ಯೆಯನ್ನು ಎದುರಿಸುತ್ತಿದ್ದೀರಾ?	1. ಹೌದು	2. ಇಲ್ಲ	
18	ಹೌದಾದರೆ, ಯಾವುದು?	1. ಅಡುಗೆ ಮಾಡುವುದು	2. ಮನೆ ಸ್ವಚ್ಛತೆ	3. ಬಟ್ಟೆ ಒಗೆಯುವುದು
		4. ನೀರು ತರುವುದು	5. ಪಾತ್ರೆ ತೊಳೆಯುವುದು	
		6. ಮಾರ್ಕೆಟ್‌ಗೆ ಹೋಗುವುದು	7. ಮಕ್ಕಳ ಜವಾಬ್ದಾರಿ	8. ಪತಿಯ ಜವಾಬ್ದಾರಿ
		9. ಇತರೆ		
19	ನಿಮ್ಮ ಕುಟುಂಬದಲ್ಲಿ ಈ ಕೆಳಗಿನ ಕೌಟುಂಬಿಕ ದೌರ್ಜನ್ಯ ಇದೆಯೇ?	1. ಹೌದು	2. ಇಲ್ಲ	
20	ಹೌದಾದರೆ, ಯಾವುದು?	1. ಬೈಗುಳ	2. ಜಗಳ	3. ದೈಹಿಕ ಹಿಂಸೆ 4. ಇತರೆ
21	ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಪಟ್ಟ ಮಹಿಳಾ ಕಾಯ್ದೆಗಳ ಬಗ್ಗೆ ಗೊತ್ತಿದೆಯಾ?	1. ಹೌದು	2. ಇಲ್ಲ	

22	ಹೌದಾದಾರೆ, ಯಾವುದು?	1.ಬಾಲ್ಯ ವಿವಾಹ ನಿಷೇಧ ಕಾಯ್ದೆ	2. ವರದಕ್ಷಿಣೆ ನಿಷೇಧ ಕಾಯ್ದೆ	3. ಅನೈತಿಕ ವ್ಯವಹಾರದ ನಿಗ್ರಹಣ ಕಾಯ್ದೆ	4.ಭ್ರೂಣ ಪತ್ತೆ ಮತ್ತು ಗರ್ಭಪಾತ ನಿಷೇಧ ಕಾಯ್ದೆ
		5. ಗೃಹದೊಳಗಿನ ಹಿಂಸಾ ತಡೆ ಕಾಯ್ದೆ	6. ಲೈಂಗಿಕ ದೌರ್ಜನ್ಯ ವಿರುದ್ಧದ ಹಕ್ಕು	7. ಇತರೆ	

23	ಈ ಕೆಳಗಿನ ನಿರ್ಧಾರಗಳನ್ನು ಯಾರು ಕೈಗೊಳ್ಳುತ್ತಾರೆ?	1. ಸದಸ್ಯರಾಗುವ ಮೊದಲು			2. ಸದಸ್ಯರಾದ ನಂತರ		
		ಪತಿ	ಪತ್ನಿ	ಇಬ್ಬರೂ	ಪತಿ	ಪತ್ನಿ	ಇಬ್ಬರೂ
	1. ಮಕ್ಕಳ ಶಿಕ್ಷಣದ ಬಗ್ಗೆ						
	2. ಮನೆವಾರ್ತೆಯ ಬಗ್ಗೆ						
	3. ಆರೋಗ್ಯದ ಬಗ್ಗೆ						
	4. ಹಣಕಾಸಿನ						
	ವ್ಯವಹಾರದ ಬಗ್ಗೆ						
	5. ಭೂ ವ್ಯವಹಾರದ ಬಗ್ಗೆ						
	6. ಗೃಹ ನಿರ್ವಹಣೆ						
24	ಸ್ಥಳೀಯ ಸಂಸ್ಥೆಗಳ ರಾಜಕೀಯ ಪ್ರವೇಶಕ್ಕಿಂತ ಮುಂಚೆ ಮತ್ತು ನಂತರ ನಿಮ್ಮ ಸ್ಥಾನಮಾನ ಹೇಗಿತ್ತು?	1. ರಾಜಕೀಯ ಪ್ರವೇಶದ ಮೊದಲು			2. ರಾಜಕೀಯ ಪ್ರವೇಶದ ನಂತರ		
		1. ಉತ್ತಮ	2. ಸಾಧಾರಣ	3. ಉತ್ತಮವಾಗಿರಲಿಲ್ಲ	1. ಉತ್ತಮ	2. ಸಾಧಾರಣ	3.ಉತ್ತಮವಾಗಿಲ್ಲ
	1. ಸಾಮಾಜಿಕವಾಗಿ						
	2. ಆರ್ಥಿಕವಾಗಿ						
	3. ರಾಜಕೀಯವಾಗಿ						

25	ನೀವು ಈ ಕೆಳಗಿನ ಯಾವುದಾದರೂ ಸಂಘ/ ಸಂಸ್ಥೆಗಳ ಸದಸ್ಯರಾಗಿದ್ದೀರಾ?	1. ಮಹಿಳಾಮಂಡಳಿ	2. ಸ್ವ ಸಹಾಯ ಸಂಘ	3. ಶಾಲಾಭಿವೃದ್ಧಿ ಸಮಿತಿ	
		4. ಯುವತಿ ಮಂಡಲ	5. ಮಹಿಳಾ ಹಾಲು ಉತ್ಪಾದಕರ ಸಂಘ	6 ಇತರ	
26	ನಿಮ್ಮ ಮನೆಯಲ್ಲಿ ಶೌಚಾಲಯ ಇದೆಯೇ?	1. ಹೌದು	2. ಇಲ್ಲ		
27	ಕುಡಿಯುವ ನೀರಿನ ವ್ಯವಸ್ಥೆ ಇದೆಯೇ?	1. ಹೌದು	2. ಇಲ್ಲ		
28	ಹೌದಾದರೆ, ಯಾವುದು?	1. ಬಾವಿ	2. ಪಂಚಾಯತ್ ನಳ್ಳಿ	3. ಕೆರೆ	4. ಕೊಳವೆ ಬಾವಿ
		5. ನದಿ	6. ಇತರೆ		
29	ನೀವು ಪಡಿತರ ಚೀಟಿ ಹೊಂದಿರುವಿರಾ?	1. ಹೌದು	2. ಇಲ್ಲ		
30	ಹೌದಾದರೆ, ಯಾವುದು?	1. ಬಿಪಿಎಲ್	2. ಎಪಿಎಲ್	3. ಯಾವುದೂ ಇಲ್ಲ	
31	ನೀವು ಸರಕಾರದ ಈ ಕೆಳಗಿನ ಯೋಜನೆಯ ಫಲಾನುಭಾವಿಯೇ?	1. ಹೌದು	2. ಇಲ್ಲ		
32	ಹೌದಾದರೆ, ಯಾವ ಯೋಜನೆ?	1. ವಸತಿ	2. ಆರೋಗ್ಯ	3. ಪಿಂಚಣಿ	4. ವಿಧವಾವೇತನ
		5. ಇನ್ನಿತರ, ಹೆಸರಿಸಿ			
	ಭಾಗ-3 ಪಂಚಾಯತಿ ಸದಸ್ಯರ ಆರ್ಥಿಕ ಹಿನ್ನಲೆ ಮತ್ತು ಸ್ಥಾನಮಾನ				
33	ನಿಮ್ಮ ಮಾಸಿಕ ವರಮಾನ	1. 5000ಕ್ಕಿಂತ ಕಡಿಮೆ	2. 5001-10000	3. 10001-15,000	4. 15001-20000
		5. 20001ಕ್ಕಿಂತ ಮೇಲ್ಪಟ್ಟು			
34	ನಿಮ್ಮ ಹೆಸರಿನಲ್ಲಿ ಜಾಗವಿದೆಯೇ?	1.ಹೌದು	2. ಇಲ್ಲ		
35	ಹೌದಾದರೆ, ಎಷ್ಟು ಸೆಂಟ್ಸ್	1. 0-5ಸೆ	2. 6-10ಸೆ	3. 11-15ಸೆ	4. 16-20ಸೆ
		5. 21-25ಸೆ	6. 26ಕ್ಕಿಂತ ಹೆಚ್ಚು		
36	ನಿಮಗೆ ಸ್ವಂತ ಮನೆ ಇದೆಯೇ?	1. ಹೌದು	2. ಇಲ್ಲ		
37	ಹೌದಾದರೆ, ಮನೆಯ ಸ್ವರೂಪ?	1. ಮಣ್ಣಿನ ಮನೆ	2. ಹೆಂಚಿನ ಮನೆ	3. ಮಾಳಿಗೆ ಮನೆ	4. ಆರ್ ಸಿ ಸಿ
		5. ಇತರೆ			
38	ನೀವು ಸರಕಾರದ ಮೂಲಗಳಿಂದ ಮನೆಯನ್ನು ಪಡೆದಿದ್ದೀರಾ?	1. ಹೌದು	2. ಇಲ್ಲ		
39	ಹೌದಾದರೆ, ಯಾವ ಮೂಲ ?	1. ಇಂದಿರಾ ಆವಾಸ್	2. ಆಶ್ರಯ ಯೋಜನೆ	3. ಜನತ ವಸತಿ	4. ನಿವೇಶನ
		5 ಇತರ			

40	ನಿಮ್ಮ ಮನೆಯಲ್ಲಿ ಈ ಕೆಳಗಿನ ಸೌಲಭ್ಯಗಳಿವೆಯೇ?	1. ವಾಷಿಂಗ್ ಮೆಷೀನ್	2. ಗ್ರೈಂಡರ್/ ಮಿಕ್ಸಿ	3. ಇನ್ವರ್ಟರ್	4. ಫ್ರಿಡ್ಜ್
		5. ಕಂಪ್ಯೂಟರ್	6. ಟಿ.ವಿ	7. ದೂರವಾಣಿ	8. ಇತರೆ, ಹೆಸರಿಸಿ
41	ನೀವು ಯಾವುದಾದರೂ ವಾಹನವನ್ನು ಹೊಂದಿರುವಿರಾ?	1. ದ್ವಿ ಚಕ್ರ	2. ತ್ರಿ ಚಕ್ರ	3. ಕಾರು	4. ಇತರೆ
42	ನಿಮ್ಮ ಆರ್ಥಿಕ ಸ್ಥಿತಿಗತಿ ಗ್ರಾಮದ ರಾಜಕೀಯದಲ್ಲಿ ಈ ಕೆಳಗಿನ ರೀತಿಯಲ್ಲಿ ಹೇಗೆ ಕೆಲಸ ಮಾಡುತ್ತದೆ?	1. ಟಿಕೇಟ್ ಪಡೆಯಲು	2.ಚುನಾವಣಾ ಪ್ರಚಾರಕ್ಕಾಗಿ	3. ಪ್ರತಿಷ್ಠೆ ಗಳಿಸಲು	4. ಮತ ಗಳಿಸಲು
		5. ಅಭಿವೃದ್ಧಿ ಕಾಮಗಾರಿಗಳಿಗಾಗಿ	6. ಇತರೆ		
43	ರಾಜಕೀಯದಿಂದ ನಿಮ್ಮ ಜೀವನದಲ್ಲಿ ಆರ್ಥಿಕವಾಗಿ ಈ ಕೆಳಗಿನ ಸುಧಾರಣೆಯಾಗಿದೆಯಾ?	1. ಮನೆ ಖರೀದಿ	2. ಭೂಮಿ ಖರೀದಿ	3. ಸಾಮಾಗ್ರಿಗಳ ಖರೀದಿ	4. ವಾಹನ ಖರೀದಿ
		5. ಆದಾಯದ ಹೆಚ್ಚಳ	6. ಇತರೆ		
44	ನಿಮ್ಮ ರಾಜಕೀಯ ಸಹಭಾಗಿತ್ವಕ್ಕೆ ಹಣದ ಕೊರತೆಯಿಂದ ತೊಂದರೆಯಾಗಿದೆಯೇ?	1. ಹೌದು	2. ಇಲ್ಲ		
45	ಹೌದಾದರೆ, ಯಾವ ರೀತಿ ವಿವರಿಸಿ?	1.ಟಿಕೆಟ್ ಪಡೆಯಲು	2.ಚುನಾವಣಾ ಪ್ರಚಾರಕ್ಕಾಗಿ	3. ಮತ ಗಳಿಸಲು	4. ಇತರೆ
	ಭಾಗ – 4 ಪಂಚಾಯತಿ ಸದಸ್ಯರ ರಾಜಕೀಯ ಹಿನ್ನಲೆ ಮತ್ತು ವಿವರಗಳು –				
	ರಾಜಕೀಯ ಸಹಭಾಗಿತ್ವದಿಂದ ಮಹಿಳೆಯರ ಸಬಲೀಕರಣವಾಗಿದೆಯೇ ಎಂದು ಅಧ್ಯಯನ ಮಾಡುವುದು				
46	ಪಂಚಾಯತ್ ರಾಜಕೀಯಕ್ಕೆ ಪ್ರವೇಶಿಸಿದ ವರ್ಷ				
47	ಪ್ರಸ್ತುತ ಸ್ಥಾನಮಾನ	1. ಅಧ್ಯಕ್ಷೆ	2. ಉಪಾಧ್ಯಕ್ಷೆ	3. ಸದಸ್ಯೆ	4. ಸ್ಥಾಯಿ ಸಮಿತಿ ಸದಸ್ಯೆ
48	ಎಷ್ಟು ಬಾರಿ ಪಂಚಾಯತ್ ಸದಸ್ಯರಾಗಿದ್ದೀರಾ?	1. ಒಂದು ಬಾರಿ	2. ಎರಡು ಬಾರಿ	3. ಮೂರಕ್ಕಿಂತ ಹೆಚ್ಚು	
49	ನಿಮ್ಮ ರಾಜಕೀಯ ಪ್ರವೇಶಕ್ಕೆ ಪ್ರೇರಣೆ?	1. ಕುಟುಂಬ	2. ಪತಿ	3. ರಾಜಕೀಯ ಪಕ್ಷ	4. ಸ್ಥಳೀಯ ನಾಯಕರು
		5. ಸ್ವಂತ ಇಚ್ಛೆ			
50	ನೀವು ಪಂಚಾಯತ್ ಸದಸ್ಯರಾಗಿರುವ ಉದ್ದೇಶ?	1. ಸಮಾನತೆ	2. ತನ್ನ ಅಭಿವೃದ್ಧಿಗಾಗಿ	3. ವಾರ್ಡ್ ನ ಅಭಿವೃದ್ಧಿ	4. ಹೆಸರುಪಡೆಯಲು
		5. ಗ್ರಾಮದ ಅಭಿವೃದ್ಧಿ	6. ಸಾಮಾಜಿಕ ಸ್ಥಾನಮಾನ ಗಳಿಸಲು	7. ಮಹಿಳಾ ಸಮಾನತೆಗಾಗಿ ಸ್ಥಾನಮಾನ ಪಡೆಯಲು	8. ಇತರೆ
51	ನೀವು ರಾಜಕೀಯ ಕುಟುಂಬದ ಹಿನ್ನಲೆಯಿಂದ ಆಯ್ಕೆಯಾಗಿದ್ದೀರಾ?	1. ಹೌದು	2. ಇಲ್ಲ		
52	ಹೌದಾದರೆ, ಯಾರು?	1. ತಂದೆ	2. ತಾಯಿ	3. ಪತಿ	4. ಮಾವ
		5. ಅತ್ತೆ	6. ಇತರೆ		
53	ನಿಮಗೆ ರಾಜಕೀಯದ ಬಗ್ಗೆ ಯಾವಾಗ ಆಸಕ್ತಿ ಬೆಳೆಯಿತು?	1. ಬಾಲ್ಯದಿಂದ	2. ಶಿಕ್ಷಣದಿಂದ	3. ಕುಟುಂಬದವರು ರಾಜಕೀಯದಲ್ಲಿದ್ದುದರಿಂದ	4. ಸಂಘಟನೆಯಿಂದ
		5. ಮದುವೆಯ ನಂತರ			
54	ನಿಮ್ಮ ಕುಟುಂಬದಲ್ಲಿ ನಿಮಗೆ ರಾಜಕೀಯದಲ್ಲಿ ಸಹಕಾರ ಇದೆಯೇ?	1. ಹೌದು	2. ಇಲ್ಲ		
55	ಹೌದಾದರೆ, ಹೇಗೆ?	1. ಚುನಾವಣಾ ಪ್ರಚಾರ ಕೈಗೊಳ್ಳುವಾಗ	2. ಕಾರ್ಯ ನಿರ್ವಹಿಸುವಾಗ	3. ಹಣದ ಬೆಂಬಲ	4. ಒಪ್ಪಿಗೆ
		5. ವಾರ್ಡಿಗೆ ಭೇಟಿ ನೀಡುವಾಗ	6. ಇತರೆ		
56	ಪಂಚಾಯಿತಿನಲ್ಲಿ ನಿಮ್ಮ ಆಯ್ಕೆಯ ವಿಧಾನ	1. ಚುನಾವಣೆ	2. ಅವಿರೋಧ		

	ಭಾಗ – 5 ಪಂಚಾಯತಿ ಸದಸ್ಯರ ಅರಿವು ಮತ್ತು ಭಾಗವಹಿಸುವಿಕೆ			
57	ಮಹಿಳಾ ಮೀಸಲಾತಿ ಮಸೂದೆಯ ಬಗ್ಗೆ ಗೊತ್ತಿದೆಯೇ?	1. ಹೌದು	2. ಇಲ್ಲ	
58	ನೀವು ಅದರ ಫಲಾನುಭವಿಯೇ?	1. ಹೌದು	2. ಇಲ್ಲ	
59	ಮಹಿಳಾ ಹಕ್ಕುಗಳ ಬಗ್ಗೆ ಗೊತ್ತಿದೆಯೇ?	1. ಹೌದು	2. ಇಲ್ಲ	
60	ಹೌದಾದರೆ,	1. ಜನನಿ ಸುರಕ್ಷಾ ಯೋಜನೆ	2. ಮಾಹಿತಿ ಹಕ್ಕು	3. ವಿಧವಾ ವೇತನ
		4. ಉದ್ಯೋಗಿನಿ ಯೋಜನೆ	5. ಮಹಿಳಾ ತರಬೇತಿ	6. ಸ್ತ್ರೀ ಶಕ್ತಿ ಯೋಜನೆ
			ಯೋಜನೆ	
		7. ಸಕಾಲ	8. ಹೆಣ್ಣು ಮಕ್ಕಳ ವೃತ್ತಿ	
			ತರಬೇತಿ ಯೋಜನೆ	
		9. ಇಂದಿರಾ ಮಹಿಳಾ	10. ವರದಕ್ಷಿಣೆ	11. ಭ್ರೂಣ ಪತ್ತೆ
		ಯೋಜನೆ	ನಿಷೇಧ ಕಾಯಿದೆ	ನಿಷೇಧ ಕಾಯಿದೆ
		12. ಸಮಾನ ಕೆಲಸಕ್ಕೆ		
		ಸಮಾನ ವೇತನ		
61	ಪಂಚಾಯತಿನಲ್ಲಿ ಮಹಿಳಾ ಮೀಸಲಾತಿಯನ್ನು 33% ರಿಂದ 50% ಹೆಚ್ಚಿಸಿರುವುದರ ಬಗ್ಗೆ ನಿಮ್ಮ ಅಭಿಪ್ರಾಯವೇನು?	1. ಬೇಕು	2. ಬೇಡ	3. ಗೊತ್ತಿಲ್ಲ
62	ಬೇಕಾದರೆ, ಯಾಕೆ	1. ಸಮಾನತೆ ಪಡೆಯಲು	2. ತನ್ನ ಅಭಿವೃದ್ಧಿಗಾಗಿ	3. ಮಹಿಳಾ ಸಬಲೀಕರಣಕ್ಕಾಗಿ
		4. ಹೆಸರು ಸ್ಥಾನಮಾನ ಗಳಿಸಲು		
		5. ಗ್ರಾಮದ ಅಭಿವೃದ್ಧಿ	6. ಸಾಮಾಜಿಕ	7. ಇತರ
			ಸ್ಥಾನಮಾನ ಪಡೆಯಲು	
63	ಬೇಡವಾದರೆ, ಯಾಕೆ?			
64	ನೀವು ವಾರ್ಡಿನ ಈ ಕೆಳಗಿನ ಅಭಿವೃದ್ಧಿ ಕುರಿತು ಪಂಚಾಯತಿನಲ್ಲಿ ಚರ್ಚಿಸಿದ್ದೀರಾ?	1. ಹೌದು	2. ಇಲ್ಲ	
65	ಹೌದಾದರೆ, ಯಾವುದು?	1. ರಸ್ತೆ	2. ಚರಂಡಿ	3. ನೈರ್ಮಲ್ಯ
		4. ನೀರಿನ ವ್ಯವಸ್ಥೆ		
		5. ಶೌಚಾಲಯ	6. ಪ್ರಾಥಮಿಕ ಶಿಕ್ಷಣ	7. ಆರೋಗ್ಯ 8. ಉದ್ಯೋಗ
		9. ಕೃಷಿ	10. ಹೈನುಗಾರಿಕೆ	11. ಇತರೆ
66	ಈ ಕೆಳಗಿನ ಸಭೆಗಳಲ್ಲಿ ತಮ್ಮ ಭಾಗವಹಿಸುವಿಕೆ	1. ಹೌದು	2. ಇಲ್ಲ	
67	ಹೌದಾದರೆ,	**1. ಒಟ್ಟು ಸಭೆ**	**2. ಹಾಜರಾದ ಸಭೆ**	
	1. ಸದಸ್ಯರ ಸಭೆ			
	2. ಗ್ರಾಮ ಸಭೆ			
	3. ವಾರ್ಡ್ ಸಭೆ			
	4. ಸ್ಥಾಯಿ ಸಮಿತಿ ಸಭೆ			
68	ಇಲ್ಲವಾದರೆ, ಯಾಕೆ	1. ಮನೆ ಕೆಲಸದ ಹೊರೆ	2. ಅರಿವಿನ ಕೊರತೆ	3. ಆಸಕ್ತಿ ಇಲ್ಲ
		4. ಕುಟುಂಬದ ಬೆಂಬಲದ ಕೊರತೆ		
		5. ಪುರುಷ ಸದಸ್ಯರ ಅಧಿಪತ್ಯ	6. ಇತರೆ	
69	ಪಂಚಾಯತಿನ ಸಭೆಗಳಲ್ಲಿ ಯಾರು ಹೆಚ್ಚು ಮಾತಾಡುತ್ತಾರೆ?	1. ಪುರುಷರು	2. ಮಹಿಳೆಯರು	
70	ಯಾಕೆ ಅವರೇ ಹೆಚ್ಚಾಗಿ ಮಾತಾಡುತ್ತಾರೆ?			
71	ಪಂಚಾಯತಿನಲ್ಲಿ ನಿರ್ಧಾರ ಮಂಡಿಸಲು ನೀವು ಸ್ವತಂತ್ರರಾ?	1. ಹೌದು	2. ಇಲ್ಲ	
72	ಇಲ್ಲವಾದರೆ, ನೀವು ಯಾರನ್ನು ಅವಲಂಬಿಸುತ್ತೀರಿ?	1. ಗಂಡ	2. ಕುಟುಂಬ ಸದಸ್ಯರು	3. ಪಂಚಾಯತಿ ಸದಸ್ಯರು
		4. ಅಧಿಕಾರಿಗಳು	5. ಇತರೆ	

73	ಪಂಚಾಯತ್‌ನಲ್ಲಿ ಈ ಕೆಳಗಿನ ಸಮಿತಿಗಳ ಸದಸ್ಯರಾಗಿದ್ದೀರಾ?	1. ಉತ್ಪಾದನಾ ಸಮಿತಿ	2. ಹಣಕಾಸು, ಲೆಕ್ಕ ಪತ್ರ		
		3. ಸಾಮಾಜಿಕ ನ್ಯಾಯ ಸಮಿತಿ	ಮತ್ತು ಯೋಜನಾ ಸಮಿತಿ		
		4. ಶಿಕ್ಷಣ ಮತ್ತು ಆರೋಗ್ಯ ಸಮಿತಿ	5. ಕೃಷಿ ಮತ್ತು ಕೈಗಾರಿಕಾ ಸಮಿತಿ		
		6. ನಾಗರಿಕ ಸೌಕರ್ಯ ಸಮಿತಿ	7. ಸೇವಾ ಸಮಿತಿ		
74	ಈ ಕೆಳಗಿನ ಯಾವ ಕಾರ್ಯಕ್ರಮ/ ಚಟುವಟಿಕೆಗಳಲ್ಲಿ ಭಾಗವಹಿಸುತ್ತೀರಾ?	**1. ಸದಸ್ಯರಾಗುವ ಮೊದಲು**	**2. ಸದಸ್ಯರಾದ ನಂತರ**		
	1. ಸಾಮಾಜಿಕ				
	2. ರಾಜಕೀಯ				
	3. ಅಭಿವೃದ್ಧಿ				
	4. ಧಾರ್ಮಿಕ				
	5. ಇತರೆ				
75	ಪುರುಷ ಸದಸ್ಯರೊಂದಿಗೆ ನಿಮ್ಮನ್ನು ಹೋಲಿಸಿದಾಗ ನಮ್ಮ ವಾರ್ಡಿನ ಈ ಕೆಳಗಿನ ಕರ್ತವ್ಯದ ಬಗ್ಗೆ ನಿಮಗೆ ತೃಪ್ತಿ ಇದೆಯೇ?	1. ಹೌದು	2. ಇಲ್ಲ		
76	ಹೌದಾದರೆ, ಯಾವುದು?	1. ಹಣಕಾಸಿನ ಹಂಚಿಕೆ	2. ವಾರ್ಡ್ ಸಮಸ್ಯೆಗಳ ಚರ್ಚೆ		
		3. ತೀರ್ಮಾನ ತೆಗೆದುಕೊಳ್ಳುವಲ್ಲಿ	4. ಅಭಿವೃದ್ಧಿ ಕಾರ್ಯ/ ಕಾಮಗಾರಿ		
		5. ಇತರೆ			
77	ರಾಜಕೀಯ ಸಹಭಾಗಿತ್ವದಲ್ಲಿ ಮಹಿಳೆ ಮತ್ತು ಪುರುಷರ ಮಧ್ಯೆ ಈ ಕೆಳಗಿನ ಯಾವ ಅಂಶದಿಂದ ಅಸಮಾನತೆ ಕಂಡುಬರುತ್ತದೆ?	1. ಕಟ್ಟುಪಾಡುಗಳು	2. ಸಂಪ್ರದಾಯ	3. ಪಿತೃಪ್ರಧಾನ ವ್ಯವಸ್ಥೆ	
		4.ಪೂರ್ವಗ್ರಹ ಪೀಡಿತ	5. ಶಿಕ್ಷಣದ ಕೊರತೆ	6. ತರಬೇತಿ ಕೊರತೆ	
		7. ಆರ್ಥಿಕತೆ	8. ಇತರೆ		
	ಭಾಗ - 6 ಪಂಚಾಯತಿ ಸದಸ್ಯರಾಗಿ ತಮ್ಮ ಅನುಭವ/ಅಡೆತಡೆಗಳು				
78	ಮಹಿಳಾ ಪ್ರತಿನಿಧಿಯಾಗಿ ಈ ಕೆಳಗಿನ ಮಹಿಳಾ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತೀರಾ?	1. ಮಹಿಳಾ ಉನ್ನತ ಶಿಕ್ಷಣ	2. ಮಹಿಳಾ ಆರೋಗ್ಯ	3. ಮಹಿಳಾ ತರಬೇತಿ	
		4. ಮಹಿಳಾ ಸಶಕ್ತೀಕರಣದ ಯೋಜನೆ	5. ಸ್ವ-ಸಹಾಯ	6 ಇತರ	
79	ಗ್ರಾಮದ ರಾಜಕೀಯದಲ್ಲಿ ಜಾತಿ ಪ್ರಾಬಲ್ಯವಿದೆಯೇ?	1. ಹೌದು	2. ಇಲ್ಲ		
80	ಹೌದಾದರೆ, ಯಾವ ಜಾತಿ?	1. ಮೇಲ್ಜಾತಿ	2. ಹಿಂದುಳಿದ	3. ಅಲ್ಪಸಂಖ್ಯಾತರು	
		4. ಪರಿಶಿಷ್ಟ ಜಾತಿ	5. ಪರಿಶಿಷ್ಟ ಪಂಗಡ	6. ಇತರೆ	
81	ಮಹಿಳಾ ಪಂಚಾಯತ್ ಸದಸ್ಯರಿಗೆ ತರಬೇತಿ ಅಗತ್ಯವಿದೆಯೇ?	1. ಹೌದು	2. ಇಲ್ಲ		
82	ಹೌದಾದರೆ, ಯಾಕೆ?	1. ಕಾರ್ಯಕ್ರಮಗಳ ಅರಿವು ಗಳಿಸಲು	2. ಸಕ್ರೀಯವಾಗಿ ಭಾಗವಹಿಸಲು		
		3. ಆತ್ಮ ವಿಶ್ವಾಸ ಹೆಚ್ಚಿಸಲು	4. ಕರ್ತವ್ಯಗಳ ಬಗ್ಗೆ ತಿಳಿದುಕೊಳ್ಳಲು		
83	ಸ್ಥಳೀಯ ಸಂಸ್ಥೆಯಲ್ಲಿ ನಿಮ್ಮ ಪರಿಣಾಮಕಾರಿ ರಾಜಕೀಯ ಸಹಭಾಗಿತ್ವಕ್ಕೆ ಎದುರಾಗುವ ಈ ಕೆಳಗಿನ ಅಡೆತಡೆಗಳಾವುವು?	1. ಶಿಕ್ಷಣದ ಕೊರತೆ	2. ರಾಜಕೀಯ ತರಬೇತಿ ಕೊರತೆ	3. ಶಾಸನ ಮತ್ತು ನೀತಿಗಳ ಅರಿವಿಲ್ಲದಿರುವುದು	
		4. ಪುರುಷಾಧಿಪತ್ಯ	5.ಆತ್ಮಸ್ಥೈರ್ಯದ ಕೊರತೆ		
		6. ಮಹಿಳೆಯಾಗಿರುವ ಕಾರಣ		7. ಅಧಿಕಾರಿಗಳ ಉದಾಸೀನತೆ	
84	ನಿಮ್ಮ ಬದುಕಿನ ಮೇಲೆ ಈ ಕೆಳಗಿನ ಅಂಶಗಳು ಪ್ರಭಾವ ಬೀರಿವೆಯೇ?	**1. ಸದಸ್ಯರಾಗುವ ಮೊದಲು**		**2. ಸದಸ್ಯರಾದ ನಂತರ**	
		1. ಹೌದು	2. ಇಲ್ಲ	1. ಹೌದು	2. ಇಲ್ಲ
	1. ಘನತೆ ಗೌರವ ಹೆಚ್ಚಾಗಿರುವುದು				
	2. ಮನೆ ಜವಾಬ್ದಾರಿಗಳು ಕಡಿಮೆಯಾಗಿರುವುದು				
	3. ಶೋಷಣೆಗೆ ಗುರಿಯಾಗಿರುವುದು				

	4. ಆರೋಗ್ಯದ ಸಮಸ್ಯೆ			
	5. ಆರ್ಥಿಕ ಸಬಲೀಕರಣ			
	6. ಇತರೆ			
85	ಪಂಚಾಯತ್ ಸಭೆಗಳಲ್ಲಿ ಮಹಿಳಾ ಸಹೋದ್ಯೋಗಿಗಳ ಬಗ್ಗೆ ಸಾಮೂಹಿಕವಾಗಿ ಧ್ವನಿ ಎತ್ತುತ್ತೀರಾ?	1. ಹೌದು	2. ಇಲ್ಲ	3. ಕೆಲವೊಮ್ಮೆ
86	ಪಂಚಾಯತ್ ಸಭೆಗಳಲ್ಲಿ ನಿಮ್ಮ ಅಭಿಪ್ರಾಯ ಮಂಡಿಸಲು ಸಾಮಾನ್ಯ ಬೆಂಬಲ ಯಾರಿಂದ ಸಿಗುತ್ತದೆ?	1. ಸಹ ಮಹಿಳಾ ಸದಸ್ಯರಿಂದ		2. ಪುರುಷ ಸದಸ್ಯರಿಂದ
		3. ಅಧ್ಯಕ್ಷರಿಂದ		4. ಕುಟುಂಬ ಸದಸ್ಯರಿಂದ
87	ನಿಮ್ಮ ರಾಜಕೀಯ ಸಹಭಾಗಿತ್ವದ ನಂತರ ಆತ್ಮ ವಿಶ್ವಾಸ ಹೆಚ್ಚಾಗಿದೆಯೇ?	1. ಹೌದು		2. ಇಲ್ಲ
88	ಹೌದಾದರೆ, ಹೇಗೆ?	1. ಸಭೆಗಳಲ್ಲಿ ಮುಂದೆ ಕುಳಿತುಕೊಳ್ಳುವುದು		2. ವ್ಯವಹಾರಗಳನ್ನು ನಡೆಸಿರುವುದು
		3. ವಾರ್ಡ್ ಸಮಸ್ಯೆಯನ್ನು ನಿವಾರಿಸಿರುವುದು		4. ವಾರ್ಡಿಗೆ ಒಬ್ಬಂಟಿಯಾಗಿ ಆಗಾಗ ಭೇಟಿ ನೀಡುವುದು
		5. ಸ್ಥಳೀಯ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿರುವುದು		
89	ಪಂಚಾಯತ್ ಸದಸ್ಯರಾಗಿ ನೀವು ಯಾರಿಂದ ತೊಂದರೆ ಎದುರಿಸುತಿದ್ದೀರಿ?	1. ಪತಿ	2. ಕುಟುಂಬ ಸದಸ್ಯರಿಂದ	3. ಪುರುಷ ಸದಸ್ಯರಿಂದ
		4. ಅಧಿಕಾರಿಗಳಿಂದ	5. ಸಮಾಜದಿಂದ	6. ಇತರ
90	ವಿಧಾನ ಸಭೆ ಮತ್ತು ಲೋಕಸಭೆ	1. ಮಹಿಳಾ ಮೀಸಲಾತಿ ಇಲ್ಲ	2. ಹಣದ ಕೊರತೆ	3. ಸ್ಥಳೀಯ ಅಭಿವೃದ್ಧಿ
		4. ಸ್ಥಳೀಯ ಆಡಳಿತದಲ್ಲಿ ಆಸಕ್ತಿ		5. ಹೆಚ್ಚಿನ ಶಾಸನಗಳ ಅರಿವಿನ ಕೊರತೆ
	ಚುನಾವಣೆಯಲ್ಲಿ ಯಾಕೆ ಸ್ಪರ್ಧಿಸುತ್ತಿಲ್ಲ?			
91	ಮುಂದಿನ ಚುನಾವಣೆಗೆ ಸ್ಪರ್ಧಿಸುತ್ತೀರಾ?	1. ಹೌದು	2. ಇಲ್ಲ	
92	ಹೌದಾದರೆ, ಯಾಕೆ? ವಿವರಿಸಿ			
93	ಇಲ್ಲವಾದರೆ, ಯಾಕೆ?	1. ಪುರುಷರ ದಬ್ಬಾಳಿಕೆ	2. ಅಧಿಕಾರಿಗಳ ದಬ್ಬಾಳಿಕೆ	3. ಮಹಿಳೆಯರ ಬಗ್ಗೆ ನಿರ್ಲಕ್ಷ್ಯ
		4. ಕುಟುಂಬದ ಬೆಂಬಲದ ಕೊರತೆ	5. ರಾಜಕೀಯ ಅಪರಾಧೀಕರಣ	6 ಅಭದ್ರತೆ
94	ಸ್ಥಳೀಯ ಆಡಳಿತದಲ್ಲಿ ಮಹಿಳೆಯರು ಇನ್ನೂ ಉತ್ತಮವಾಗಿ ಭಾಗವಹಿಸಲು ಈ ಕೆಳಗಿನ ನಿಮ್ಮ ಸಲಹೆಗಳೇನು?	1. ಕುಟುಂಬದ ಬೆಂಬಲ	2. ಉತ್ತಮ ಶಿಕ್ಷಣ	3. ಉತ್ತಮ ತರಬೇತಿ
		4. ಕಾನೂನಿನ ಅರಿವು	5. ಮಾಧ್ಯಮದ ಬೆಂಬಲ	6. ರಾಜಕೀಯ ಮುಖಂಡರ ಬೆಂಬಲ
		7. ಧಾರ್ಮಿಕ ಮುಖಂಡರ ಬೆಂಬಲ	8. ಲಿಂಗ ಸಂವೇಧನೆ	
95	ಸ್ಥಳೀಯ ಸಂಸ್ಥೆಗಳಲ್ಲಿ ನಿಮ್ಮ ಪರಿಣಾಮಕಾರಿ ರಾಜಕೀಯ ಸಹಭಾಗಿತ್ವದ ಬಗ್ಗೆ ಒಟ್ಟಾರೆ ಅಭಿಪ್ರಾಯ?			

ಪ್ರಶ್ನಾವಳಿ – ಪುರುಷ ಪ್ರತಿನಿಧಿಗಳಿಗೆ

1 ಮಹಿಳಾ ಸದಸ್ಯರು ತಮ್ಮ ವಾರ್ಡಿನ ಈ ಕೆಳಗಿನ ಅಭಿವೃದ್ಧಿ ಕುರಿತು ಪಂಚಾಯತಿನಲ್ಲಿ ಚರ್ಚಿಸುತ್ತಾರಾ?	1. ಹೌದು	2. ಇಲ್ಲ
ಹೌದಾದರೆ ಯಾವುದು	1. ರಸ್ತೆ	2. ನೀರಿನ ವ್ಯವಸ್ಥೆ
	3. ಶೌಚಾಲಯ	4. ಚರಂಡಿ
	5. ನೈರ್ಮಲ್ಯ	6. ಪ್ರಾಥಮಿಕ ಶಾಲೆ
	7. ಕೃಷಿ	8. ಆರೋಗ್ಯ
	9. ಬೀದಿ ದೀಪ	10. ಹೈನುಗಾರಿಕೆ
	11. ಇತರ	
2 ಮಹಿಳಾ ಸದಸ್ಯರು ಈ ಕೆಳಗಿನ ಸಭೆಯಲ್ಲಿ ಭಾಗವಹಿಸುತ್ತಾರೆಯೇ?	1. ಹೌದು	2. ಇಲ್ಲ
ಹೌದಾದರೆ	1. ಹೆಚ್ಚಾಗಿ	2. ಸಾಧಾರಣವಾಗಿ
	3. ಭಾಗವಹಿಸುವುದೇ ಇಲ್ಲ	
1. ಗ್ರಾಮ ಸಭೆ		
2. ಸದಸ್ಯರ ಸಭೆ		
3. ವಾರ್ಡ್ ಸಭೆ		
4. ಸ್ಥಾಯಿ ಸಮಿತಿ ಸಭೆ		
3 ಪಂಚಾಯತಿನಲ್ಲಿ ಮಹಿಳಾ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಬೇಕೇ?	1. ಬೇಕು	2. ಬೇಡ
ಬೇಕು ಯಾಕೆ?	1. ಮಹಿಳಾ ಸಮಾನತೆಗಾಗಿ	2. ವಾರ್ಡಿನ ಅಭಿವೃದ್ಧಿಗಾಗಿ
	3. ಮಹಿಳಾ ಪರ ಕಾಳಜಿ ವಹಿಸಲು	4. ಇತರ
ಬೇಡ ಯಾಕೆ?	1. ಕಾನೂನಿನ ಅರಿವಿನ ಕೊರತೆ	2. ಅಭಿವೃದ್ಧಿ ಕಾಮಗಾರಿಗಳ ಅರಿವಿನ ಕೊರತೆ
	3. ಆತ್ಮ ಸ್ಥೈರ್ಯದ ಕೊರತೆ	4. ಕೀಳರಿಮೆ
	6. ಇತರ	5. ಪುರುಷರು ಅವಕಾಶ ವಂಚಿತರಾಗುತ್ತಾರೆ
4 ಮಹಿಳಾ ಅಧ್ಯಕ್ಷರು/ಉಪಾಧ್ಯಕ್ಷರು/ ಸಮಿತಿ ಸದಸ್ಯರಾಗಿ ಈ ಕೆಳಗಿನ ಕಾರ್ಯ ನಿರ್ವಹಿಸುತ್ತಾರೆಯೇ?	1. ಹೌದು	2. ಇಲ್ಲ
ಹೌದಾದರೆ ಯಾವುದು	1. ಅಭಿವೃದ್ಧಿ ಕಾಮಗಾರಿ	2. ಹಣಕಾಸಿನ ಹಂಚಿಕೆ
	3. ವಾರ್ಡ್ ಸಮಸ್ಯೆಗಳ ಚರ್ಚೆ	4. ತೀರ್ಮಾನ ತೆಗೆದು ಕೊಳ್ಳುವುದು
	5. ವಾರ್ಡಿಗೆ ಭೇಟಿ	
5 ಮಹಿಳಾ ಸದಸ್ಯರು ತಮ್ಮ ವಾರ್ಡಿಗೆ ಭೇಟಿ ನೀಡುತ್ತಾರೆಯೇ?	1. ಹೆಚ್ಚಾಗಿ	2. ಸಾಧಾರಣವಾಗಿ
	3. ಅಪರೂಪವಾಗಿ	4. ಇಲ್ಲ
6 ಮಹಿಳಾ ಸದಸ್ಯರಿಗೆ ಈ ಕೆಳಗಿನ ತಮ್ಮ ವಾರ್ಡಿನ ಸಮಸ್ಯೆಯ ಬಗ್ಗೆ ಅರಿವಿದೆಯೇ?	1. ರಸ್ತೆ	2. ಚರಂಡಿ
	3. ದಾರಿದೀಪ	4. ನೈರ್ಮಲ್ಯ
	5. ಕೃಷಿ	6. ಇತರ
7 ತಮ್ಮ ವಾರ್ಡಿನ ಸಮಸ್ಯೆಗಳನ್ನು ನಿವಾರಿಸುವಾಗ ಯಾರನ್ನಾದರೂ ಅವಲಂಭಿಸುತ್ತಾರೆ?	1. ಹೌದು	2. ಇಲ್ಲ
ಹೌದಾದರೆ	1. ಪುರುಷ ಸದಸ್ಯರು	2. ಪತಿ
	3. ಕುಟುಂಬ	4. ಅಧಿಕಾರಿಗಳು
	5. ಇತರ	
8 ಪಂಚಾಯತಿನಲ್ಲಿ ಮಹಿಳೆಯಿರುವುದರಿಂದ ಏನಾದರೂ ಅನುಕೂಲವಿದೆಯೇ?	1. ಹೌದು	2. ಇಲ್ಲ
ಹೌದಾದರೆ	1. ಅಭಿವೃದ್ಧಿ ಕಾಳಜಿ	2. ತ್ವರಿತ ಕಾಮಗಾರಿ ಮಾಡಿಸುತ್ತಾರೆ
	3. ವಾರ್ಡಿನ ಸಮಸ್ಯೆಗೆ ತ್ವರಿತವಾಗಿ ಸ್ಪಂದಿಸುತ್ತಾರೆ	4. ಇತರ


ಇಲ್ಲವಾದರೆ	1. ವಾರ್ಡಿಗೆ ಭೇಟಿ ನೀಡುವುದಿಲ್ಲ	2. ಮನೆ ಕೆಲಸದ ಹೊರೆ
	3. ಸಭೆಗೆ ಹಾಜರಾಗುವುದಿಲ್ಲ.	4. ಶಾಸನದ ಕೊರತೆ
	5. ವಾರ್ಡಿನ ಕೆಲಸವನ್ನು ಸಮರ್ಥವಾಗಿ	6. ಇತರ
	ನಿರ್ವಹಿಸುವುದಿಲ್ಲ	
9 ಪಂಚಾಯತಿನಲ್ಲಿ ಮಹಿಳಾ ಮೀಸಲಾತಿಯನ್ನು 33% ರಿಂದ 50% ಹೆಚ್ಚಿಸಿರುವುದರ ಬಗ್ಗೆ ನಿಮ್ಮ ಅಭಿಪ್ರಾಯ		
	1. ಉತ್ತಮ	2. ಬೇಡ
	3. ಗೊತ್ತಿಲ್ಲ	
ಉತ್ತಮ ಯಾಕೆ?	1. ಮಹಿಳಾ ಸಮಾನತೆಗಾಗಿ	2. ಸಾಮಾಜಿಕ ಸ್ಥಾನಮಾನ ಪಡೆಯಲು
	3. ವಾರ್ಡಿನ ಅಭಿವೃದ್ಧಿಗಾಗಿ	4. ಇತರ
ಬೇಡ ಯಾಕೆ?		
10 ಮಹಿಳಾ ಮೀಸಲಾತಿಯಿಂದ ಪುರುಷರು ತಮ್ಮ ಸ್ಥಾನವನ್ನು ಕಳೆದು ಕೊಂಡಿದ್ದಾರೆಯೇ?	1. ಹೌದು	2. ಇಲ್ಲ
ಹೌದಾದರೆ	1. ಅಧ್ಯಕ್ಷ	2. ಉಪಾಧ್ಯಕ್ಷ
	3. ಸದಸ್ಯ	4. ಸ್ಥಾಯಿ ಸಮಿತಿ ಸದಸ್ಯ
11 ಪಂಚಾಯತಿನಲ್ಲಿ ಪುರುಷ ಮತ್ತು ಮಹಿಳಾ ಸದಸ್ಯರ ನಡುವೆ ತಾರತಮ್ಯತೆ ಇದೆಯೇ?		
	1. ಹೌದು	2. ಇಲ್ಲ
ಹೌದಾದರೆ	1. ಅಭಿವೃದ್ಧಿ ಕಾಮಗಾರಿಗಳನ್ನು ಹಂಚುವಾಗ	2. ಹಣಕಾಸಿನ ಹಂಚುವಿಕೆ
	3. ಪುರುಷರೇ ನಿರ್ಣಯ ಕೈಗೊಳ್ಳುತ್ತಾರೆ	5. ಇತರ
12 ಪಂಚಾಯತ್ ಸಭೆಗಳಲ್ಲಿ ಮಹಿಳೆಯರ ಸಲಹೆ ಸೂಚನೆಗಳನ್ನು ಪರಿಗಣಿಸುತ್ತೀರಾ?		
	1. ಹೆಚ್ಚಾಗಿ	2. ಸಾಧಾರಣವಾಗಿ
		3. ಇಲ್ಲ
13 ಪಂಚಾಯತ್‌ನ ಸಭೆಗಳಲ್ಲಿ ನಿರ್ಣಯವನ್ನು ತೆಗೆದು ಕೊಳ್ಳುವಾಗ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುತ್ತಾರೆಯೇ?	1. ಹೌದು	2. ಇಲ್ಲ
14 ಮಹಿಳಾ ಸದಸ್ಯರ ಕಾರ್ಯ ನಿರ್ವಹಣೆ ಬಗ್ಗೆ ನಿಮ್ಮ ಅಭಿಪ್ರಾಯ	1. ಅತ್ಯುತ್ತಮ	2. ಉತ್ತಮ
	3. ಸಾಧಾರಣ	4. ತೃಪ್ತಿಕರ
15 ಒಟ್ಟಾರೆ ಮಹಿಳಾ ಸದಸ್ಯರ ಬಗ್ಗೆ ನಿಮ್ಮ ಅಭಿಪ್ರಾಯವೇನು?		

ಅನುಬಂಧ – 3


ಅಧ್ಯಯನ ಕ್ಷೇತ್ರಕಾರ್ಯದ ನಕ್ಷೆ



ಕರ್ನಾಟಕ ನಕ್ಷೆ



ಉಡುಪಿ ತಾಲೂಕು ನಕ್ಷೆ



– ಅಧ್ಯಯನಕ್ಕೆ ಆಯ್ದುಕೊಂಡ ಗ್ರಾಮ ಪಂಚಾಯತ್‌ಗಳು.

ಅನುಬಂಧ – 4

ಸಂಕೇತ ಸೂಚಿ

ಸಿ.ಇ.ಡಿ.ಎ.ಡಬ್ಲ್ಯು	–	ಕನ್ವೇನ್ಸನ್ ಒನ್ ದಿ ಎಲಿಮಿನೇಷನ್ ಆಫ್ ಆಲ್ ಫಾರ್ಮ್ಸ್ ಆಫ್ ಡಿಸ್ಕ್ರಿಮಿನೇಶನ್ ಎಗೈನ್ಸ್ಟ್ ವುಮೆನ್
ಐ.ಆರ್.ಡಿ.ಪಿ.	–	ಇಂಟಿಗ್ರೇಟೆಡ್ ರೂರಲ್ ಡೆವೆಲಪ್‌ಮೆಂಟ್ ಪ್ರೋಗ್ರಾಮ್
ಜೆ.ಆರ್.ವೈ.	–	ಜವಹರ್ ರೋಜ್‌ಗಾರ್ ಯೋಜನಾ
ಟಿ.ಆರ್.ವೈ.ಎಸ್.ಇ.ಎಮ್.	–	ಟ್ರೈನಿಂಗ್ ಆಫ್ ರೂರಲ್ ಯೂತ್ ಇನ್ ಸೆಲ್ಫ್ ಎಂಪ್ಲಾಯ್‌ಮೆಂಟ್
ಐ.ಪಿ.ಸಿ.	–	ಇಂಡಿಯನ್ ಪೆನಲ್ ಕೋಡ್
ಎಂ.ಡಿ.ಜಿ.	–	ಮಿಲೆನಿಯಂ ಡೆವಲಪ್‌ಮೆಂಟ್ ಗೋಲ್
ಎ.ಪಿ.ಎಲ್.	–	ಎಬವ್ ಪವರ್ಟಿ ಲೈನ್
ಬಿ.ಪಿ.ಎಲ್.	–	ಬಿಲೊ ಪವರ್ಟಿ ಲೈನ್
ಡಬ್ಲ್ಯು.ಎಚ್.ಒ.	–	ವರ್ಲ್ಡ್ ಹೆಲ್ತ್ ಒರ್ಗನೈಶೆಷನ್
ಎಲ್.ಇ.ಬಿ.	–	ಲೈಫ್ ಎಕ್ಸ್‌ಪೆಕ್ಟೆನ್ಸಿ ಎಟ್ ಬರ್ತ್
ಯು.ಎನ್.ಡಿ.ಪಿ.	–	ಯುನೈಟೆಡ್ ನೇಶನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಮ್
ಆರ್.ಎಂ.ಸಿ.ಡಬ್ಲ್ಯು	–	ರೂರಲ್ ಮೆಟರ್ನಿಟಿ ಎಂಡ್ ಚೈಲ್ಡ್ ವೆಲ್‌ಪೆರ್
ಎಸ್.ಸಿ.	–	ಶೆಡ್ಯೂಲ್ಡ್ ಕಾಸ್ಟ್
ಎಸ್.ಟಿ.	–	ಶೆಡ್ಯೂಲ್ಡ್ ಟ್ರೈಬ್
ಜಿ.ಎಸ್.ಬಿ.	–	ಗೌಡ ಸಾರಸ್ವಾತ್ ಬ್ರಾಹ್ಮಿಣ್
ಯು.ಎನ್.ಐ.ಸಿ.ಇ.ಎಫ್.	–	ಯುನೈಟೆಡ್ ನೇಶನ್ಸ್ ಇಂಟರ್‌ನ್ಯಾಶನಲ್ ಚಿಲ್ಡ್ರನ್ಸ್ ಎಮರ್ಜೆನ್ಸಿ ಫಂಡ್
ಯು.ಎನ್.ಇ.ಎಸ್.ಸಿ.ಒ.	–	ಯುನೈಟೆಡ್ ನೇಶನ್ಸ್ ಎಜ್ಯುಕೇಶನಲ್, ಸೈಂಟಿಫಿಕ್ ಎಂಡ್ ಕಲ್ಚರಲ್ ಒರ್ಗನೈಶನ್ಸ್